ವಿಸ್ತೃತ ಜಾನಪದ ಗ್ರಂಥಸೂಚಿ

ಸಂಪುಟ ೧


ಪ್ರಧಾನ ಸಂಪಾದಕ

ಪ್ರೊ. ಅಂಬಳಿಕೆ ಹಿರಿಯಣ್ಣ

ಸಂಪಾದಕರು

ಕ್ಯಾತನಹಳ್ಳಿ ರಾಮಣ್ಣ

ಟಿ.ಎಸ್. ರಾಜಪ್ಪ



ಜಾನಪದ ಕಲಾವಿದರು

ವಿಸ್ತೃತ ಜಾನಪದ ಗ್ರಂಥಸೂಚಿ

ಸಂಪುಟ ೧

ವಿಸ್ತೃತ ಜಾನಪದ ಗ್ರಂಥಸೂಚಿ

ಸಂಪುಟ ೧

ಪ್ರಧಾನ ಸಂಪಾದಕರು

ಪ್ರೊ. ಅಂಬಳಿಕೆ ಹಿರಿಯಣ್ಣ

ಸಂಪಾದಕರು

ಕ್ಯಾತನಹಳ್ಳಿ ರಾಮಣ್ಣ
ಟಿ.ಎಸ್. ರಾಜಪ್ಪ

ಸಹಾಯಕರು

ಡಾ. ವೃಷಭಕುಮಾರ್
ಕುಮಾರಿ ಎಂ.ಬಿ. ಶ್ವೇತಾ

ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ, ರಾ.ಹೆ-೪, ಶಿಗ್ಗಾವಿ ತಾ. ಹಾವೇರಿ ಜಿಲ್ಲೆ

Vistruta Janapada Granthasoochi

(An Elaborated Bibliography of Folklore Books)

Volume One

Chief Editor
Prof. Ambalike Hiriyanna
Vice-Chancellor
Karantaka Jaanapada University
Gotagodi – 581 197

Editors
Kyatanahalli Ramanna
No. 463, Boogadi Village,
Mysore-570 023.

T.S. Rajappa
No. 1094, C&D Block,
Lalithadri Road, Kuvempu Nagara,
Mysore-570 023.

Published by
Prof. S.C. Ramesh
Director
Centre for Extension and Consultancy
Karantaka Jaanapada University
Gotagodi – 581 197
Shiggavi Taluk, Haveri Dist, Karnataka
Phone: 0836 - 2255180

Pages: xxii + 654 **Price: ₹** 700/-
www.janapadauni.in
First Impression : 2014
ISBN-978-93-83149-27-8

ಬೆಲೆ : ೭೦೦/-
ಮುಖಪುಟ: **ಕೆ.ಕೆ. ಮಕಾಳಿ**
ಅಕ್ಷರ ಸಂಯೋಜನೆ : ಬಿ.ಆರ್. ಸಂದೀಪ ಮತ್ತು ವಿಶ್ವ ಗುಜ್ಜರ್

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭,
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಮುದ್ರಣ
ರಾಜಾ ಪ್ರಿಂಟರ್ಸ್, ಬೆಂಗಳೂರು
ದೂರವಾಣಿ : 22234066

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ-ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೊಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯ ವಾಗಿದೆ. ಜಾನಪದವು ಭೂಮಿತೂಕದ್ದು,

ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು-ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ -ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ

ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾ ಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ನಮ್ಮ ನೆಲದಲ್ಲಿ ಶಿಷ್ಟ ಸಾಹಿತ್ಯ ಅಧ್ಯಯನಕ್ಕೆ ಇದ್ದ ಸೌಲಭ್ಯಗಳು ಜನಪದ ಸಾಹಿತ್ಯಕ್ಕೆ ಇರಲಿಲ್ಲ ಎಂಬ ವಿಚಾರವು ಒಂದು ಐತಿಹಾಸಿಕ ಸತ್ಯ. ಇದೇ ಮಾತನ್ನು ಬದುಕಿಗೂ ಅನ್ವಯಿಸಬಹುದು. ಅಕ್ಷರ ರೂಪವನ್ನು ಪಡೆದಿದ್ದ ಶಿಷ್ಟ ಸಾಹಿತ್ಯವು ಕಾಲಕಾಲಕ್ಕೆ ಹೇಗೆ ಯಾವ ಯಾವ ರೂಪಗಳನ್ನು ಯಾವ ಯಾವ ಕಾಲದಲ್ಲಿ ಪಡೆಯುತ್ತ ಬಂದಿತು ಎಂಬ ಅಂಶವನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು. ಆದರೆ ಅಂಥ ಸೌಲಭ್ಯ ಜನಪದ ಬದುಕಿಗಾಗಲಿ, ಜನಪದ ಸಾಹಿತ್ಯಕ್ಕಾಗಲಿ ಇರಲಿಲ್ಲ. ಈ ಕಾರಣದಿಂದ ಜನಪದ ಬದುಕಿನ ಯಾತ್ರೆಯನ್ನು ಸ್ಪಷ್ಟ ರೂಪದಲ್ಲಿ ಗುರುತಿಸಲು ಸಾಧ್ಯವಾಗಲಿಲ್ಲ. ಇತಿಹಾಸಕಾರರು ಕೂಡ ಜನಪದವನ್ನು ಯಾವತ್ತೂ ಗಂಭೀರವಾಗಿ ಪರಿಗಣಿಸಲಿಲ್ಲ. ಅವರು ಕೇವಲ ರಾಜಮಹಾರಾಜರ ಬದುಕನ್ನು, ಅವರ ಯುದ್ಧಗಳನ್ನು, ಅವರ ಸಾಮ್ರಾಜ್ಯ ವಿಸ್ತರಣೆಗಳನ್ನು ಕುರಿತು ಮಾತ್ರವೇ ದಾಖಲಿಸುತ್ತ ಬಂದರು. ಜನಪದ ಬದುಕನ್ನು ಕುರಿತು ಬರೆದ ಉದಾಹರಣೆ ಇಲ್ಲ. ಆದ್ದರಿಂದ ಜನಪದರು ನ್ಯಾಯ ವಂಚಿತರಾಗಿಯೇ ಬದುಕುತ್ತ ಬಂದರು. ಆದರೆ ಅವರು ತಮ್ಮ ಸ್ಥಿತಿಯ ಬಗ್ಗೆ ಚಿಂತಿಸಿದವರಲ್ಲ. ಶ್ರಮವೇ ಅವರ ಗಾಯತ್ರಿಯಾಗಿತ್ತು. ಬಿತ್ತಿ ಬೆಳೆಯುವ ಕಾಯಕದ ಶ್ರಮವನ್ನು ಮರೆಯಲು ಅವರು ತಮ್ಮ ನಾಲಗೆಯನ್ನು ಬಳಸಿಕೊಂಡರು. ನಾರಾಯಣಾ ನಿನ್ನ ನಾಮದ ಸ್ಮರಣೆಯ ನಾನೆಲ್ಲಿ ಬಿತ್ತಿ ಬೆಳೆದೇನು – ಎಂದು ಕೇಳುತ್ತಲೇ ತಮ್ಮ ಬದುಕನ್ನೆಲ್ಲ ನಾಲಗೆಯ ಮೇಲೆಯೇ ದಾಖಲಿಸುತ್ತ ಬಂದಂಥವರು ನಮ್ಮ ಜನಪದರು. ಇತಿಹಾಸಕಾರರ ಅವಜ್ಞೆಗೆ ಕನ್ನಡಿ ಹಿಡಿದಂತಿರುವ ನಮ್ಮ ಜನಪದರ ಇತಿಹಾಸವು ಅವರ ನಾಲಗೆಯ ಮೇಲೆಯೇ ರೂಪುಗೊಳ್ಳುತ್ತ ಬಂದಿತು.

ಮುಗ್ಧ ಮನಸ್ಸಿನಿಂದ ರೂಪುಗೊಂಡ ಆ ಇತಿಹಾಸವು ಅಕ್ಷರ ರೂಪ ಪಡೆದದ್ದು ಬಹುಶಃ ೧೯ನೆಯ ಶತಮಾನದಲ್ಲಿ. ಜನಪದ ಸಾಹಿತ್ಯವು ಗುರುತಿಸಲ್ಪಟ್ಟು ಗ್ರಂಥರೂಪ ಪಡೆದುಕೊಳ್ಳುತ್ತ ಬಂದುದೇ ಒಂದು ರೋಚಕ ಇತಿಹಾಸ. ನಮ್ಮ ಜನಪದರೇ ಇತಿಹಾಸಕಾರರಾಗಿಯೂ ಪಾತ್ರ ವಹಿಸುತ್ತ ಬಂದದ್ದು ಒಂದು ಸಹಜ ಪ್ರಕ್ರಿಯೆ.

ಕನ್ನಡ ಜಾನಪದವು ಜಾಗತಿಕ ಮಟ್ಟಕ್ಕೆ ಏರಿ ನಿಂತಿರುವ ಈ ಹೊತ್ತಿನಲ್ಲಿ ನಮ್ಮ ಜಾನಪದ ಗ್ರಂಥಗಳ ಪಯಣವನ್ನು, ಮಾರ್ಗವನ್ನು, ಗುರುತಿಸಿಕೊಳ್ಳಬೇಕಾದುದು ನಮ್ಮ ಕರ್ತವ್ಯವೂ ಹೌದು. ಇದಕ್ಕೆ ೧೯೭೪ ರಲ್ಲಿಯೇ ನಮಗೆ ಮಾರ್ಗ ಹಾಕಿಕೊಟ್ಟವರು ಡಾ. ಹಾ. ಮಾ. ನಾಯಕ ಅವರು. ಅವರ ಮಾರ್ಗದರ್ಶನದಂತೆ ಕನ್ನಡದಲ್ಲಿ ಇದುವರೆಗೆ ಪ್ರಕಟವಾಗಿರುವ ಜಾನಪದವನ್ನು ಕುರಿತ ಗ್ರಂಥಗಳು ಎಷ್ಟು, ಅವುಗಳ ಬೆಳವಣಿಗೆ ಹೇಗೆ, ವಿಷಯ ವೈವಿಧ್ಯ ಹೇಗೆ – ಮುಂತಾದ ನಿಟ್ಟಿನಲ್ಲಿ ಗ್ರಂಥಸೂಚಿಯೊಂದರ ಮರುಹುಟ್ಟಿನ ಅಗತ್ಯ ಕಂಡು ಬಂದದ್ದರ ಫಲವೇ ಈ ವಿಸ್ತೃತ ಜಾನಪದ ಗ್ರಂಥಸೂಚಿ. ಡಾ. ಹಾ. ಮಾ. ನಾಯಕ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಈಗಾಗಲೇ ಒಬ್ಬಿಬ್ಬರು ನಡೆದದ್ದಿದೆ. ಆದರೆ, ಹೆಚ್ಚು ವಿಸ್ತಾರವಾಗಿ, ಪ್ರಕಟಣೆಯನ್ನು ಕುರಿತ ಇತಿಹಾಸವನ್ನು ಒಳಗೊಂಡು, ಇದುವರೆಗೆ ಎಲ್ಲಿಯೂ ಕಾಣಸಿಗದಷ್ಟು ಹೇರಳ ಮಾಹಿತಿಗಳನ್ನು ಹೊತ್ತು ಈ ಗ್ರಂಥಸೂಚಿ ರೂಪುಗೊಂಡಿದೆ. ಅಲ್ಲಲ್ಲಿ ಸಣ್ಣಪುಟ್ಟ ಕೊರತೆಗಳು ಕಂಡು ಬಂದರೂ ತುಂಬಾ ಉಪಯುಕ್ತ ಗ್ರಂಥವಾಗಿ ಬೃಹತ್ ರೂಪದಲ್ಲಿ ಹೊರಬಂದಿದೆ.

ಇಂಥ ಒಂದು ಗ್ರಂಥಸೂಚಿಯನ್ನು ಸಿದ್ಧಪಡಿಸಿರುವವರು, ಕನ್ನಡ ಜಾನಪದ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿ ಪ್ರಸಿದ್ಧರಾಗಿರುವ ಶ್ರೀ ಕ್ಯಾತನಹಳ್ಳಿ ರಾಮಣ್ಣ ಅವರು. ರಾಮಣ್ಣ ಕ್ಷೇತ್ರಕಾರ್ಯದಲ್ಲಿ ಪಳಗಿದವರು. ನಲವತ್ತೈದು ವರ್ಷಗಳಿಗೂ ಹೆಚ್ಚು ಕಾಲವನ್ನು ಅವರು ಕ್ಷೇತ್ರಕಾರ್ಯಕ್ಕಾಗಿ ಬಳಸಿಕೊಂಡಿದ್ದಾರೆ. ಅವರ ಆ ಅನುಭವ ಹಾಗೂ ಡಾ. ಹಾ. ಮಾ. ನಾಯಕ ಅವರ ಮೇಲ್ಪಂಕ್ತಿ ಇವುಗಳಿಂದ ಈ ಗ್ರಂಥಸೂಚಿಯು ಸಾಕಷ್ಟು ಸಶಕ್ತವಾಗಿಯೇ ರೂಪುಗೊಂಡಿದೆ. ಅನುಬಂಧವನ್ನು ಸಿದ್ಧಪಡಿಸುವಲ್ಲಿ ಶ್ರೀ ಟಿ.ಎಸ್. ರಾಜಪ್ಪ ಅವರು ಸಹಕರಿಸಿದ್ದಾರೆ. ಈ ಈರ್ವರಿಗೂ ಜಾನಪದ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ದತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ-ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಜ್ಞಾನ ನಿರಂತರವಾಗಿ ಬೆಳೆಯುತ್ತಲೇ ಇರುತ್ತದೆ. ಜಾಗತಿಕ ಪೈಪೋಟಿಯನ್ನು ಎದುರಿಸಲಾರದೇ ಅಳಿದು ಹೋಗುತ್ತಿರುವ ದೇಸೀಜ್ಞಾನ ಪರಂಪರೆಯನ್ನು ಪುನರ್‌ಕಟ್ಟುವ

ಮತ್ತು ಪುನರುಜ್ಜೀವನಗೊಳಿಸುವ ಅಗತ್ಯತೆ ಹಿಂದೆಂದಿಗಿಂತಲೂ ಇಂದು ಹೆಚ್ಚಿದೆ. ಕನ್ನಡದ ನೆಲದಲ್ಲಿ ಶಿಷ್ಟ ಸಾಹಿತ್ಯ ಅಧ್ಯಯನಕ್ಕೆ ಇದ್ದ ಸೌಲಭ್ಯಗಳು ಜನಪದ ಸಾಹಿತ್ಯಕ್ಕೆ ಇರಲಿಲ್ಲ ಎಂಬುದು ಚಾರಿತ್ರಿಕ ಸತ್ಯ. ಅವಜ್ಞೆಗೆ ಒಳಗಾದ ಜಾನಪದ ಅಧ್ಯಯನವು, ಬಹುಶೀಸ್ತೀಯ ನೆಲೆಯಲ್ಲಿ ನಡೆಯಲು ಅದರದೇ ಆದ ಅನೇಕ ತೊಂದರೆಗಳನ್ನು ಎದುರಿಸುವಂತಾಯಿತು. ಜೊತೆಗೆ ವಿದ್ವಾಂಸರ ನಿರ್ಲಕ್ಷ್ಯವೂ ಅದರ ಹಿನ್ನೆಡೆಗೆ ಪರೋಕ್ಷವಾಗಿ ಕಾರಣವಾಯಿತೆನ್ನಬಹುದು. ಶಿಷ್ಟ ಸಾಹಿತ್ಯಕ್ಕೆ ಸಂಬಂಧಿಸಿದಂತೆ ನಡೆಯುತ್ತಿದ್ದ ಅಧ್ಯಯನಗಳು ಆನಂತರದಲ್ಲಿ ಜಾನಪದ ಸಾಹಿತ್ಯಕ್ಕೂ ಸಂಬಂಧಿಸಿದಂತೆ ಆರಂಭಗೊಂಡಿದ್ದು ಗಮನಾರ್ಹ ಸಂಗತಿ. ಜಾನಪದ ಅಧ್ಯಯನದ ಸ್ವರೂಪ ಸ್ಪಷ್ಟವಾದಂತೆಲ್ಲ, ವೈಜ್ಞಾನಿಕ ನೆಲೆಯ ಅಧ್ಯಯನಗಳು ಆರಂಭವಾದವು. ನಾಡಿನಲ್ಲಿ ಜಾನಪದದ ಬೆಳೆ ಹುಲುಸಾಗಿ ಬೆಳೆಯಿತು. ಈ ಹಿನ್ನೆಲೆಯಲ್ಲಿ ಜಾನಪದ ಸಂಬಂಧೀ ಕಾರ್ಯಗಳನ್ನು ಗಮನಿಸಲು ಗ್ರಂಥಸೂಚಿಯಂಥ ಮಾದರಿ ಕೃತಿಗಳು ಪ್ರತ್ಯೇಕವಾಗಿ ಬೆಳಕು ಕಂಡವು. ಅವು ಜಾನಪದ ಅಧ್ಯಯನದ ದಿಕ್ಕು ಮತ್ತು ದಾರಿಗಳನ್ನು ಸ್ಪಷ್ಟವಾಗಿ ತಿಳಿಯಲು ಸಹಾಯಕವಾದವು. ಈ ಪರಂಪರೆಯನ್ನು ಮುಂದುವರೆಸುವ ಕಾರ್ಯಗಳು ಕಾಲದಿಂದ ಕಾಲಕ್ಕೆ ನಡೆಯುತ್ತ ಬಂದಿವೆ. ಇದರ ಭಾಗವಾಗಿ 'ವಿಸ್ತೃತ ಜಾನಪದ ಗ್ರಂಥಸೂಚಿ' ಪ್ರಕಟಗೊಳ್ಳುತ್ತಿದೆ. ಗ್ರಂಥಸೂಚಿಯ ಇತಿಹಾಸದ ಬೆಳಕಿನಲ್ಲಿಯೇ ಹೊಸ ದಾರಿಗಳನ್ನೂ ಇಲ್ಲಿ ಕಂಡುಕೊಳ್ಳಲಾಗಿದೆ. ಕ್ಷೇತ್ರಕಾರ್ಯಾಧಾರಿತ ಈ ಮಹತ್ವದ ಕಾರ್ಯವನ್ನು ಆಗು ಮಾಡಿಕೊಟ್ಟವರು ಜಾನಪದ ಕ್ಷೇತ್ರದ ಹಿರಿಯ ವಿದ್ವಾಂಸರಾದ ಶ್ರೀ ಕ್ಯಾತನಹಳ್ಳಿ ರಾಮಣ್ಣ ಹಾಗೂ ಡಾ. ಟಿ.ಎಸ್. ರಾಜಪ್ಪ ಅವರು. ನಾಡಿನ ಜಾನಪದ ಕ್ಷೇತ್ರದಲ್ಲಾದ ಕಾರ್ಯವನ್ನು ಮನಗಾಣಲು ಪ್ರಕೃತ ಗ್ರಂಥಸೂಚಿ ಸಹಾಯಕವಾಗಲಿದೆ. ಇಂತಹ ಕೃತಿಯನ್ನು ಸಂಪಾದಿಸಿಕೊಟ್ಟಿರುವ ಶ್ರೀ ಕ್ಯಾತನಹಳ್ಳಿ ರಾಮಣ್ಣ ಮತ್ತು ಡಾ. ಟಿ.ಎಸ್. ರಾಜಪ್ಪ ಅವರಿಗೆ ಅಭಿನಂದನೆಗಳು ಸಲ್ಲುತ್ತವೆ. ಅಲ್ಲದೆ ಈ ಕಾರ್ಯದಲ್ಲಿ ಸಹಕರಿಸಿದ ಡಾ. ವೃಷಭಕುಮಾರ್ ಹಾಗೂ ಕುಮಾರಿ ಎಂ.ಬಿ. ಶ್ವೇತಾ ಅವರಿಗೆ ಕೃತಜ್ಞತೆಗಳು.

ಈ ಗ್ರಂಥಸೂಚಿಯು ಪ್ರಕಟಗೊಳ್ಳಲು ಸರ್ವ ರೀತಿಯಲ್ಲೂ ಸಹಕಾರ ನೀಡಿದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ, ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ, ನಿರ್ದೇಶಕ ಹಾಗೂ ಪ್ರಾಧ್ಯಾಪಕ ಡಾ. ಕೆ. ಪ್ರೇಮಕುಮಾರ, ಆನ್ವಯಿಕ ಜಾನಪದ ನಿಕಾಯದ ಡೀನ್ ಪ್ರೊ. ಎಂ. ಚಂದ್ರ ಪೂಜಾರಿ, ತಾಂತ್ರಿಕ ಪುಟಗಳ ಸಿದ್ಧತೆ ಹಾಗೂ ಮುದ್ರಣಪೂರ್ವ ಕೆಲಸದಲ್ಲಿ ಸಹಕರಿಸಿದ ಸಂಗಮೇಶ ಎಸ್. ಗಣಿ, ಅಕ್ಷರ ಸಂಯೋಜನೆ ಮಾಡಿಕೊಟ್ಟ ವಿಶ್ವ ಗುಜ್ಜರ್, ಸಂದೀಪ್. ಬಿ.ಆರ್., ಅಂದವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಕೆ.ಕೆ. ಮಕಾಳಿ, ಕಚೇರಿ ಸಹಾಯಕ ಕೆ.ಎಲ್. ಲಕ್ಷ್ಮಣ ಹಾಗೂ ಗ್ರಂಥವು ಪ್ರಕಟಗೊಳ್ಳುವಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

ಪ್ರೊ. ಸ.ಚಿ. ರಮೇಶ
ನಿರ್ದೇಶಕ
ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಪರಿವಿಡಿ

ಪ್ರಸ್ತಾವನೆ

ಬದುಕು ಎಂಬುದು ಒಂದು ಸಂಕೀರ್ಣ ಚಿತ್ರ. ಹುಟ್ಟಿನಿಂದ ಸಾವಿನವರೆಗೆ, ಸಾವಿನಿಂದ ಹುಟ್ಟಿನವರೆಗೆ, ಅರ್ಥಗರ್ಭಿತ ಹಾದಿಯಲ್ಲಿ ಸಾಗುವ ಬದುಕು ತನ್ನ ಅಂತರಂಗದಲ್ಲಿ ಏನೇನನ್ನು ಹುದುಗಿಸಿಕೊಂಡಿರುತ್ತದೆ ಎಂಬುದು ನಿಗೂಢ. ಸಕ್ರಮವಾಗಿ ಅಭ್ಯಾಸ ಮಾಡದೆ ಹೋದರೆ ಎಲ್ಲವೂ ಗೊಂದಲಮಯ ಎನ್ನಿಸುವುದುಂಟು. ಸಕ್ರಮವಾಗಿ ಅಭ್ಯಾಸ ಮಾಡುತ್ತ ಹೋದಹಾಗೆಲ್ಲ ಅದೊಂದು ಸಂಕೀರ್ಣ ರೂಪದ ವಿಸ್ಮಯ ಎಂಬ ಅಂಶವು ಗೋಚರಿಸುವುದೂ ಉಂಟು.

ಏನೊಂದನ್ನೂ ಅರಿಯದ, ಪ್ರಾಣಿಗೂ ಮಾನವನಿಗೂ ಏನೂ ವ್ಯತ್ಯಾಸವೇ ಇಲ್ಲದ, ರೀತಿಯಲ್ಲಿ, ಪ್ರಾಣಿಯಂತೆಯೇ ಒಂದು ಕಾಲದಲ್ಲಿ ಬದುಕುತ್ತಿದ್ದ ಮಾನವನು, ಬೀಜವು ಸಸಿಯಾಗುವುದನ್ನು, ಸಸಿಯು ಬೆಳೆಬೆಳೆದು ಫಲಭರಿತವಾಗಬಲ್ಲುದೆಂಬುದನ್ನು, ಅರಿತು, ಇತರ ಪ್ರಾಣಿಗಳಿಗಿಂತ ಭಿನ್ನ ಮಾರ್ಗದಲ್ಲಿ ನಡೆಯತೊಡಗಿದಾಗ, ತನ್ನದೇ ಒಂದು ಪ್ರಪಂಚವನ್ನು ಕಂಡುಕೊಂಡ.

ಹಣ್ಣನ್ನು ತಿಂದು ಎಲ್ಲೋ ಎಂದೋ ಎಸೆದ ಬೀಜವು ಸಸಿಯಾದುದನ್ನು ಕಂಡುಕೊಂಡ ಘಳಿಗೆಯಲ್ಲಿ ಸಂಸ್ಕೃತಿಯ ಉಗಮವಾಯಿತು. ಸಂಸ್ಕೃತಿಯು ನಾಗರಿಕತೆಗೆ ನಾಂದಿಯಾಯಿತು. Will Durant ಅವರು ತಮ್ಮ The story of Civilization ಎಂಬ ಗ್ರಂಥದಲ್ಲಿ The First form of culture is agriculture ಎಂಬುದಾಗಿ ಕರಾರುವಾಕ್ಕಾಗಿ ಊಹಿಸಿದ್ದಾರೆ.*

ಕೈಸನ್ನೆ ಕಣ್ಸನ್ನೆ ಹಾಗೂ ಇತರ ಸನ್ನೆಗಳ ರೂಪದಲ್ಲಿ, ಪ್ರಾಣಿಗಳಂತೆ ವಿವಿಧ ಹಂತಗಳ ಅರಚುವಿಕೆಗಳ ರೂಪದಲ್ಲಿ ಇದ್ದ ತನ್ನ ಭಾಷೆಯ ಬಳಕೆಗೆ ನಾಲಗೆಯನ್ನೂ ಹಲ್ಲುಗಳನ್ನೂ ಬಳಸತೊಡಗಿದಾಗ, ಅಸ್ಪಷ್ಟ ರೂಪದ ಭಾಷೆಯೊಂದರ ಹುಟ್ಟು ಸಾಧ್ಯವಾಯಿತು.

ಮಾತನ್ನು ಕಲಿತ ಮಾನವನು, ಬೇಸರ ಶಮನಕ್ಕಾಗಿ ಅಥವಾ ಶ್ರಮಶಮನಕ್ಕಾಗಿ, ಅಥವಾ ಮನೋರಂಜನೆಗಾಗಿ, ಅಥವಾ ಕಾವಲು ಕಾಯುವುದೇ ಮುಂತಾದ ಕಾಯಕದಲ್ಲಿರುವಾಗ ಕಾಲಯಾಪನೆಗಾಗಿ, ಇಚ್ಛೆ ಬಂದ ಸ್ವರಗಳನ್ನು ಎಳೆಯತೊಡಗಿದಾಗ

* ಹೀಗೆ ಬೇಸಾಯದೊಂದಿಗೇ ಉಗಮವಾದ ಸಂಸ್ಕೃತಿಯು ಅನೇಕ ಮುಖಗಳನ್ನು ಗಳಿಸಿಕೊಳ್ಳುತ್ತ ಬೆಳೆಯತೊಡಗಿತು. ಸನ್ಯಾಸಿಯೊಬ್ಬ ಸಂಸಾರಿಯಾದ ಕಥೆಯನ್ನು ಹೋಲುತ್ತದೆ ನಮ್ಮ ಸಂಸ್ಕೃತಿಯ ಬೆಳವಣಿಗೆ. ಸಂಸ್ಕೃತಿ ಲೋಕದಲ್ಲಿ ಯಾವುದೂ ಪ್ರತ್ಯೇಕವಲ್ಲ. ಎಲ್ಲವೂ ಒಂದಕ್ಕೊಂದು ಪೂರಕ. ಯಾವೊಂದು ಕ್ಷುಲಕ ಅಂಶವನ್ನೂ ಸಂಸ್ಕೃತಿಯ ಹೊರಗೆ ಇಡಲು ಸಾಧ್ಯವಿಲ್ಲ.

ತನಗರಿವಿಲ್ಲದೆಯೇ ಹಾಡಿನ ಧಾಟಿಯೊಂದರ ಉದ್ಭವಕ್ಕೆ ಕಾರಣನಾದ. ಬರೀ ದನಿಯೆಳೆತ ತಲೆಚಿಟ್ಟು ಹಿಡಿಸತೊಡಗಿದಾಗ ನಡುವೆ ಭಾಷೆಯನ್ನು ಬೆರೆಯಿಸಿ ಆನಂದಿಸತೊಡಗಿದ.

"ಕರ್ನಾಟಕ ಸಂಸ್ಕೃತಿ ಸಮೀಕ್ಷೆ" ಎಂಬ ತಮ್ಮ ಗ್ರಂಥದಲ್ಲಿ ಜನಪದ ಸಂಸ್ಕೃತಿಯನ್ನು ಕುರಿತು ಹೇಳುವಾಗ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಹೇಳಿರುವ ಒಂದು ಮಾತು ಮೇಲಿನ ನನ್ನ ಮಾತುಗಳಿಗೆ ಆಧಾರಸ್ತಂಭದಂತಿದೆ: "ಆದಿಮಾನವ ತನ್ನ ಭಾವನೆಗಳನ್ನು ಹೇಳಲು ಮೊಟ್ಟಮೊದಲು ಬಳಸಿಕೊಂಡ ನಾದರೂಪದ ಗೀತೆಗಳೇ ಜನಪದ ಸಾಹಿತ್ಯದ ಮೂಲರೂಪ ಎನ್ನಬಹುದು....... ಲಯಬದ್ಧವಾದ ಕ್ರಿಯೆಗೆ ಅನುಗುಣವಾಗಿ ನಾದವಿನ್ಯಾಸ ಮೊದಲು ರೂಪುಗೊಳ್ಳುತ್ತದೆ. ಆ ನಾದವಿನ್ಯಾಸವು ಒಳಗೊಂಡ ಭಾವವನ್ನು ಸ್ಪಷ್ಟಪಡಿಸುವುದಕ್ಕಾಗಿ ಅನಂತರ ಲಯಬದ್ಧವಾದ ಮಾತುಗಳು ಸೇರುತ್ತವೆ".

Violet Alford ಎಂಬುವರ Introduction to English Folklore ಎಂಬ ಗ್ರಂಥವನ್ನು ಪರಿಶೀಲಿಸುವಾಗ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಈ ಅಭಿಪ್ರಾಯಕ್ಕೆ ಬರುತ್ತಾರೆ: "೧೭೨೫ರಲ್ಲಿ ಹೆನ್ರಿ ಬೊರ್ನ್ (Henry Borne) ಎಂಬುವರು ಬರೆದ Antiquities of the Common People ಎಂಬ ಗ್ರಂಥವೇ ಈ ರಂಗದಲ್ಲಿ ಮೊಟ್ಟಮೊದಲನೆಯ ಕೃತಿಯೆನ್ನಬಹುದು". ಅಂದರೆ, ಸಾಮಾನ್ಯ ಜನಸಮೂಹದಿಂದ ಉದ್ಭವವಾದುದನ್ನು ಜಾನಪದವೆಂದು ಗುರುತಿಸುತ್ತ ಬಂದಿದ್ದೇವೆ. ಅದರಲ್ಲೂ ಹಳ್ಳಿಯ ಬದುಕು, ಹಾಗೂ ಆ ಬದುಕಿಗೆ ಆಧಾರಸ್ಥಂಭವಾಗಿ ನಿಂತ ನಮ್ಮ ಶ್ರಮಸಂಸ್ಕೃತಿ, ಜನಪದ ಸಾಹಿತ್ಯಕ್ಕೆ ಮೂಲಪ್ರೇರಣೆಯಾಗಿವೆ. ರಾಗಬದ್ಧವಾದ ಸಾಹಿತ್ಯವೇ ಜನಪದ ಸಾಹಿತ್ಯದ ಮೊದಲ ರೂಪ. ಅಂದರೆ, ಜನಪದ ಗೀತೆ ಎಂದು ನಾಮಕರಣಗೊಂಡ ಇಪ್ಪತ್ತನೆಯ ಶತಮಾನದ ರೂಪವೇ ನಮ್ಮ ಮೂಲ ಜನಪದ ಸಾಹಿತ್ಯ.

ನಮಗೆ ಲಭ್ಯವಾದ ಜನಪದ ಸಾಹಿತ್ಯದ ಮೊಟ್ಟಮೊದಲ ರೂಪವೇ ತ್ರಿಪದಿ. ಏಳನೆಯ ಶತಮಾನದ ಬಾದಾಮಿ ಶಾಸನದಲ್ಲಿ ಉಕ್ತವಾಗಿರುವ ತ್ರಿಪದಿಯನ್ನು ಅಕ್ಷರ ರೂಪದಲ್ಲಿರುವ ಮೊದಲ ತ್ರಿಪದಿ ಎಂದು ಭಾವಿಸಲಡ್ಡಿಯಿಲ್ಲ:

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯನ್
ಬಾಧಿಪ್ಪ ಕಲಿಗೆ ಕಲಿಯುಗವಿಪರೀತನ್
ಮಾಧವನೀತನ್ ಪೆಱನಲ್ಲ

ಬಹುಶಃ ಈ ಕಾರಣದಿಂದಲೋ ಏನೋ "ಗರತಿಯ ಹಾಡು" ಸಂಕಲನದ ಮುನ್ನುಡಿಯಲ್ಲಿ ಡಾ. ದ.ರಾ. ಬೇಂದ್ರೆ ಅವರು "ತ್ರಿಪದಿಯೇ ಕನ್ನಡದ ವೃತ್ತಗಳ ಗಾಯತ್ರಿ" ಎಂದದ್ದು.

ಹತ್ತನೆಯ ಶತಮಾನದಲ್ಲಿ ಈ ಸಾಹಿತ್ಯವನ್ನು ಮೆಚ್ಚಿಕೊಂಡವನು ದೊರೆ ನೃಪತುಂಗ. "ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್" ಎಂಬ ಅವನ ಪ್ರಶಂಸೆಯನ್ನು

ಲಕ್ಷಿಸಿದಾಗ ಆ ಕಾಲಕ್ಕಾಗಲೇ ಜನಪದ ಕಾವ್ಯವು ಜನಜೀವನದ ಮೇಲೆ ತನ್ನ ಪ್ರಭಾವವನ್ನು ಬೀರತೊಡಗಿತ್ತು ಎಂಬ ಅಂಶವು ಸ್ಪಷ್ಟವಾಗುತ್ತದೆ.

ಹೀಗೆ ಅದು ಅಗಾಧವಾಗಿ ಬೆಳೆಯುತ್ತ ಬೆಳೆಯುತ್ತ ಎಲ್ಲರ ಗಮನವನ್ನು ಸೆಳೆಯ ತೊಡಗಿದಾಗ, ಸಹಜವಾಗಿ ಶಿಷ್ಟ ಕವಿಗಳೂ ಅದರತ್ತ ಗಮನ ಹರಿಸುವುದು ಅನಿವಾರ್ಯವಾಗಿರಬಹುದು. ಕೆಲವು ಕವಿಗಳು ಅದನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ ಅದರ ಅಂತಃಸತ್ತ್ವವನ್ನು ತಮ್ಮ ಕಾವ್ಯಗಳಲ್ಲಿ ಬಳಸತೊಡಗಿದರೆ, ಇನ್ನು ಕೆಲವರು ಅದನ್ನು ಅಷ್ಟೇ ಅಸಡ್ಡೆಯಿಂದ ಕಂಡಿರುವ ಉದಾಹರಣೆಗಳಿವೆ.

ಆ ಅಪ್ಪಟ ಕಾವ್ಯದ ಪ್ರಭಾವೀ ಗುಣವನ್ನು ಕಂಡು ಕರುಬಿದ ಹಲವು ಶಿಷ್ಟ ಕವಿಗಳು ಇತಿಹಾಸದುದ್ದಕ್ಕೂ ಇದ್ದಿರಬಹುದು; ಅಲಕ್ಷಿಸಿದವರೂ ಇದ್ದಿರಬಹುದು. ಆದರೆ ತನ್ನ ಅಸಹನೆಯನ್ನು ಬಹಿರಂಗವಾಗಿ ಪ್ರಕಟಿಸಿದ ಕವಿಯೆಂದರೆ ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಮಧುರ ಒಬ್ಬನೆ:

ಪಂಡಿತರುಂ ವಿವಿಧ ಕಳಾ।
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್।
ಕಂಡರ್ ಕೇಳ್ವೊಡೆ ಗೊರವರ
ಡುಂಡುಚಿಯೆ ಬೀದಿವರೆಯೆ ಬೀರನ ಕತೆಯೇ॥

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವಸ್ತುಕ ಮತ್ತು ವರ್ಣಕ ಎಂಬ ಎರಡು ಪ್ರಭೇದಗಳು ಕಂಡುಬರುತ್ತವೆ. ವರ್ಣಕ ಎಂಬುದು ಜನಪದ ಸಾಹಿತ್ಯವನ್ನು ಕುರಿತ ಶಬ್ದವೇ ಆಗಿದೆ. ಆದ್ದರಿಂದಲೇ ಶಿಷ್ಟಕವಿಗಳು "ವರ್ಣಕಕಿಲ್ಲ ಲಕ್ಷಣಂ" ಎಂಬ ಹೀಯಾಳಿಕೆಯ ಮಾತುಗಳನ್ನಾಡಿದ್ದಾರೆ.

ಸಾಹಿತ್ಯಲೋಕದ ಪಂಡಿತರಿಂದ ಹೀಗೆ ನಿರಾಕರಿಸಲ್ಪಟ್ಟರೂ ಜನಪದ ಸಾಹಿತ್ಯ ತನ್ನ ಸೊಗಸಿನಿಂದ, ತನ್ನ ಗಟ್ಟಿತನದಿಂದ, ಬಾಯಿಯಿಂದ ಬಾಯಿಗೆ ಹರಿಯುತ್ತ, ವಿದ್ವತ್ ಕೃತಿಗಳನ್ನೂ ಮೀರಿಸುವಂತೆ ಪ್ರಚ್ಛನ್ನ ಶಕ್ತಿಯಾಗಿ ಬೆಳೆಯುತ್ತಲೇ ಬಂದಿತು. ಹಾಡುವ ತಲೆಗಳು ಉರುಳಿದರೂ ತನ್ನಷ್ಟಕ್ಕೆ ತಾನು, ತಾನೇ ತಾನಾಗಿ ಸಾರ್ವಭೌಮತ್ವವನ್ನು ಉಳಿಸಿಕೊಂಡದ್ದು ನಮ್ಮ ಜನಪದ ಸಾಹಿತ್ಯದ ದೈತ್ಯಶಕ್ತಿ ಎಂಥದೆಂಬುದನ್ನು ಸಾಬೀತುಪಡಿಸಿಬಿಟ್ಟಿತು. ಹತ್ತಾರು ನೂರು ವರ್ಷಗಳ ಕಾಲ ಜನಪದ ಸಾಹಿತ್ಯವು ವಿದ್ವಜ್ಜನರಿಂದ ಅಂಗೀಕಾರ ಮುದ್ರೆಯನ್ನು ಪಡೆಯದಿದ್ದರೂ ಗ್ರಂಥಸ್ಥವಾಗದೆ ಉಳಿದುಹೋದುದರಿಂದ, ಕಾಲದಿಂದ ಕಾಲಕ್ಕೆ ಉಂಟಾಗಿರಬಹುದಾದ ರೂಪಾಂತರಗಳನ್ನು ಗುರುತಿಸುವುದು ಸಾಧ್ಯವಾಗಿಲ್ಲ. ಹತ್ತೊಂಬತ್ತನೆಯ ಶತಮಾನದಲ್ಲಿ ಸಂಗ್ರಹ ಹಾಗೂ ಬಿಡಿ ಪ್ರಕಟಣೆಗಳು ಪ್ರಾರಂಭವಾದರೂ ಗ್ರಂಥಸ್ಥ ರೂಪದಲ್ಲಿ ನಮಗೆ ಕಾಣಸಿಗುವುದು ಇಪ್ಪತ್ತನೆಯ ಶತಮಾನದಲ್ಲೆ.

* * *

ಕನ್ನಡದಲ್ಲಿ ಜಾನಪದವನ್ನು ಕುರಿತ ಎಷ್ಟು ಗ್ರಂಥಗಳು ಪ್ರಕಟವಾಗಿವೆ? – ಈ ಕುತೂಹಲ ಮೊದಲು ಮೂಡಿದ್ದು ಡಾ.ಹಾ.ಮಾ. ನಾಯಕ ಅವರಲ್ಲಿ; ೧೯೭೨–೭೩ ರಲ್ಲಿ. ಕೂಡಲೇ ಅವರು ಗ್ರಂಥಗಳ ಮಾಹಿತಿಗಳನ್ನು ಸಂಗ್ರಹಿಸಲು ತೊಡಗಿದರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಬಿಡುವಿಲ್ಲದವರಾಗಿ ಕನ್ನಡದ ಕೆಲಸಗಳಲ್ಲಿ ತನ್ಮಯರಾಗಿದ್ದರೂ ಡಾ. ಹಾ.ಮಾ. ನಾಯಕ ಅವರು ಬಿಡುವಿನ ಕ್ಷಣಗಳನ್ನೆಲ್ಲ ಜಾನಪದ ಗ್ರಂಥಗಳ ಮಾಹಿತಿಗಳನ್ನು ಕಲೆಹಾಕಲು ಬಳಸತೊಡಗಿದರು. ಅವರ ಆ ಆಸಕ್ತಿಯ ಫಲವಾಗಿ ಅದುವರೆಗೆ ಪ್ರಕಟವಾಗಿದ್ದ ೫೩೨ ಗ್ರಂಥಗಳ ಮಾಹಿತಿಗಳನ್ನೊಳಗೊಂಡ "ಕನ್ನಡ ಜಾನಪದ ಗ್ರಂಥಸೂಚಿ" ಯು ೧೯೭೪ ರಲ್ಲಿ ಪ್ರಕಟವಾಯಿತು.

ಅದಾದ ಮೇಲೆ ೧೯೭೫ ರಿಂದ ೨೦೦೦ ವರೆಗಿನ ಗ್ರಂಥಗಳ ಮಾಹಿತಿಗಳನ್ನು ಸಂಗ್ರಹಿಸಿ ಡಾ.ಸಿ.ಟಿ.ಗುರುಪ್ರಸಾದ್ ಅವರು ಅದೇ ಶೀರ್ಷಿಕೆಯಲ್ಲಿ ೧೧೧೪ ಗ್ರಂಥಗಳ ಮಾಹಿತಿಗಳನ್ನು ೨೦೦೦ ಇಸವಿಯಲ್ಲಿ ಪ್ರಕಟಿಸಿದರು. ಅನಂತರ ಪ್ರಕಟವಾದ ಡಾ.ಎಚ್.ಎಂ. ಮಹೇಶ್ವರಯ್ಯ ಅವರ "ಸಂಕ್ಷಿಪ್ತ ವಿವರಣಾತ್ಮಕ ಕನ್ನಡ ಜಾನಪದ ಗ್ರಂಥಸೂಚಿ" ಯು ೨೦೦೪ ರಲ್ಲಿ ಪ್ರಕಟವಾಗಿ ೧೯೬೮ ಗ್ರಂಥಗಳ ಮಾಹಿತಿಗಳನ್ನು ಒಳಗೊಂಡಿತ್ತು. ಈ ಎರಡೂ ಸಂಕಲನಗಳಿಗಿಂತ ಮುಂಚೆ, ಡಾ.ಹಾ.ಮಾ.ನಾಯಕ ಅವರ ಗ್ರಂಥಸೂಚಿ ಪ್ರಕಟವಾದ ಮೇಲೆ, ೧೯೯೮ ರಲ್ಲಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಪ್ರಕಟಿಸಲು ತೊಡಗಿದ್ದ "ಕನ್ನಡ ಗ್ರಂಥಸೂಚಿ"ಯ ಎಂಟನೆಯ ಸಂಪುಟವು ಪ್ರಕಟವಾಯಿತು. ಆ ಸಂಪುಟದ ಒಂದು ಭಾಗವು ಜಾನಪದ ಗ್ರಂಥಗಳನ್ನು ಒಳಗೊಂಡಿತ್ತು. ಅದುವರೆಗೆ, ಹಾಗೂ ಆಮೇಲೂ, ಯಾರಿಗೂ ಲಭ್ಯವಾಗದಿದ್ದ ಹಲವು ಗ್ರಂಥಗಳ ವಿವರಗಳನ್ನು ಆ ಸಂಪುಟದ ಭಾಗವು ಒಳಗೊಂಡಿತ್ತು.

ನಮ್ಮ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಮಗೆ ದೊರಕದೆ ಹೋದ ಎಷ್ಟೋ ಗ್ರಂಥಗಳು ಮೇಲಿನ ನಾಲ್ಕೂ ಗ್ರಂಥಗಳಲ್ಲಿ ನಮಗೆ ಕಂಡುಬಂದುವು. ಸಮಗ್ರತೆಯ ದೃಷ್ಟಿಯಿಂದ ಆ ನಾಲ್ಕೂ ಗ್ರಂಥಸೂಚಿಗಳಲ್ಲಿರುವ ಅಂಥ ನಮೂದುಗಳನ್ನು ಪಡೆದಿರುವುದಲ್ಲದೆ ಇತರ ಮೂಲಗಳಿಂದಲೂ ಪಡೆದು ಅವೆಲ್ಲವನ್ನು ಅವರವರ ಹೆಸರಿನಲ್ಲೇ ಅನುಬಂಧದಲ್ಲಿ ನೀಡಿದ್ದೇವೆ. ಇತರ ಮೂಲಗಳೆಂದರೆ, ಡಾ. ಹಿ.ಚಿ. ಬೋರಲಿಂಗಯ್ಯ ಅವರ ಅಭಿನಂದನ ಗ್ರಂಥ "ಆದಿವಾಸಿ ಆಖ್ಯಾನ"ದಲ್ಲಿರುವ ಶ್ರೀ ಕೊಂತಮ್ ಸತೀಶ್ ಅವರ ಬುಡಕಟ್ಟುಗಳನ್ನು ಕುರಿತ ಗ್ರಂಥಗಳ ಪಟ್ಟಿ, ಹಾಗೂ "ಹೊನ್ನ ಬಿತ್ತೇವು ಹೊಲಕೆಲ್ಲ" ಎಂಬ ಸಂಸ್ಮರಣ ಗ್ರಂಥದಲ್ಲಿ ಪ್ರೊ. ಡಿ. ಲಿಂಗಯ್ಯ ಅವರು ನೀಡಿರುವ ಗ್ರಂಥಗಳ ಪಟ್ಟಿ. ಇದಕ್ಕಾಗಿ ಪೂರ್ವ ಸಂಪಾದಕರಿಗೆಲ್ಲ ಈ ಸೂಚಿಯು ಋಣಿಯಾಗಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇಷ್ಟಾಗಿಯೂ, ಇನ್ನೂ ಹಲವು ಗ್ರಂಥಗಳು ಸಿಗದೆ ಹೋಗಿರುವ ಸಂಗತಿಯು ಈ ಸೂಚಿಯನ್ನು ಒಳಹೊಕ್ಕಾಗ ತಮ್ಮ ಗಮನಕ್ಕೆ ಬಂದೀತು.

* * *

ಎರಡು ಹಂತಗಳಲ್ಲಿ ಗ್ರಂಥಗಳ ವಿವರಗಳನ್ನು ನೀಡುವ ಕ್ರಮವು ಡಾ. ಹಾ.ಮಾ.ನಾಯಕ ಅವರು ಹಾಕಿಕೊಟ್ಟ ಮೇಲ್ಪಂಕ್ತಿ. ಡಾ.ಸಿ.ಟಿ.ಗುರುಪ್ರಸಾದ್ ಕೂಡ ಅದೇ ಹಾದಿಯಲ್ಲಿ ನಡೆದಿದ್ದಾರೆ. ಆಮೇಲೆ ಬಂದ ಡಾ.ಎಚ್.ಎಂ.ಮಹೇಶ್ವರಯ್ಯ ಅವರು ಎರಡು ಭಾಗಗಳಲ್ಲೂ ತಮ್ಮದೇ ಹಾದಿಯನ್ನು ಕಂಡುಕೊಂಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಸೂಚಿಯ ನಮೂದುಗಳು ತಮ್ಮದೇ ಹಾದಿಯಲ್ಲಿವೆ.

ಆದರೆ, ನಾಯಕರ ಮೊದಲ ಅರ್ಧ ಭಾಗವು ಅತ್ಯುತ್ತಮ ರೀತಿಯಲ್ಲಿದೆ ಎಂಬ ಕಾರಣಕ್ಕಾಗಿ ನಾವು ಮಾತ್ರ ಅವರ ಮೊದಲ ಅರ್ಧ ಭಾಗದ ಕ್ರಮವನ್ನು ಯಥಾವತ್ತಾಗಿ ಸ್ವೀಕರಿಸಿದ್ದೇವೆ; ಮತ್ತು ಉತ್ತರಾರ್ಧದ ಭಾಗವನ್ನು ಸ್ವತಂತ್ರವಾಗಿ ನಿರ್ವಹಿಸಿದ್ದೇವೆ.

"ನಾನು ಸೂಚಿಶಾಸ್ತ್ರಜ್ಞನಲ್ಲ. ಆದುದರಿಂದ ಈ ಗ್ರಂಥಸೂಚಿಯಲ್ಲಿ ಆ ಶಾಸ್ತ್ರ ಸಂಬಂಧವಾದ ದೋಷಗಳಿರಬಹುದು. ಬಲ್ಲವರು ಮನ್ನಿಸಬೇಕು"– ಇದು ತಮ್ಮ ಗ್ರಂಥಸೂಚಿಯ ಮುನ್ನುಡಿಯಲ್ಲಿ ಡಾ.ಹಾ.ಮಾ.ನಾಯಕ ಅವರು ಆಡಿರುವ ವಿನಯದ ಮಾತು. ನಮ್ಮ ಸದ್ಯದ ಭಾವನೆಯೂ ಅದೇ ಆಗಿದೆ. ಸೂಚಿಶಾಸ್ತ್ರ ಅಥವಾ ಸೂಚಿವಿಜ್ಞಾನ ಎಂಬುದೊಂದು ಇದೆಯೋ ಇಲ್ಲವೋ ನಮಗೆ ತಿಳಿಯದು. ನಾಯಕರ ಆ ಮಾತಿನಿಂದ ಅಂಥ ಶಾಸ್ತ್ರವೊಂದು ಇದೆ ಎಂಬ ಸಂಗತಿಯು ಖಚಿತವಾಗುತ್ತದೆ. ನಮಗೆ ಗೊತ್ತಿದ್ದದ್ದು ಡಾ.ಹಾ.ಮಾ.ನಾಯಕ, ಡಾ.ಸಿ.ಟಿ. ಗುರುಪ್ರಸಾದ್, ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಪ್ರಕಟಿಸಿರುವ ಕನ್ನಡ ಗ್ರಂಥಸೂಚಿಯ ಸಂಪುಟಗಳು, ಹಾಗೂ ಡಾ.ಎಚ್.ಎಂ.ಮಹೇಶ್ವರಯ್ಯ ಅವರ ಸೂಚಿಗಳು ಮಾತ್ರ. ಆ ನಾಲ್ಕರಿಂದಲೂ ನಾವು ಎರಡು ಬಗೆಯಲ್ಲಿ ಮಾರ್ಗದರ್ಶನವನ್ನು ಪಡೆದಿದ್ದೇವೆ. ಒಂದು, ಹೇಗೆ ಮಾಡಬಹುದು ಎಂಬುದು; ಇನ್ನೊಂದು, ಹೇಗೆ ಮಾಡಬಾರದು ಎಂಬುದು. ಈ ಎರಡೂ ಮಾರ್ಗಗಳಿಗಿಂತ ಭಿನ್ನವಾದ ಮಾರ್ಗವೊಂದಕ್ಕೆ ಮೇಲಿನ ಎಲ್ಲ ಗ್ರಂಥಸೂಚಿಗಳು ನಮ್ಮನ್ನು ಪ್ರಚೋದಿಸಿವೆ. ಈ ಕಾರಣಕ್ಕಾಗಿ, ಹಾಗೂ ಅವೆಲ್ಲ ಹಿರೀಕರ ಸ್ಥಾನದಲ್ಲಿರುವ ಕಾರಣಕ್ಕಾಗಿ, ನಾವು ಅವಕ್ಕೆ ವಿನೀತರಾಗಿದ್ದೇವೆ.

ಇಲ್ಲೇ ಇನ್ನೂ ಒಂದು ಮಾತನ್ನು ಹೇಳಿಕೊಳ್ಳಬಹುದೆನಿಸುತ್ತಿದೆ. ಡಾ.ಹಾ.ಮಾ.ನಾಯಕ ಅವರ "ಕನ್ನಡ ಜಾನಪದ ಗ್ರಂಥಸೂಚಿ"ಯ ಬಗ್ಗೆ ಬರೆದಿರುವ ಲೇಖನದಲ್ಲಿ ಡಾ.ಸಿ.ಪಿ.ಕೃಷ್ಣಕುಮಾರ್ ಅವರು "ಇದು ನಿಲುಗಡೆಯಿಲ್ಲದ ಕೆಲಸ" ಎಂದಿದ್ದಾರೆ. ಸತತವಾಗಿ ಪ್ರಕಟವಾಗುತ್ತಿರುವ ಜಾನಪದ ಗ್ರಂಥಗಳ ವಾತಾವರಣದಲ್ಲಿ ಡಾ.ಸಿ.ಪಿ.ಕೆ. ಅವರ ಮಾತು ಅತ್ಯಂತ ಸಹಜ ಹಾಗೂ ಸಾರ್ವಕಾಲಿಕ ಸತ್ಯ.

"ಹೆಸರಿಲ್ಲದ, ಲೇಖಕರ ಹೆಸರಿಲ್ಲದ, ಪ್ರಕಟಣೆಯ ಊರು ವರ್ಷಗಳಿಲ್ಲದ ಕೆಲವು ಪುಸ್ತಕಗಳು ನನ್ನ ಗಮನಕ್ಕೆ ಬಂದಿದ್ದರೂ ಅವನ್ನು ಇಲ್ಲಿ ಸೇರಿಸಿಲ್ಲ" ಎಂಬುದಾಗಿ ಡಾ.ಹಾ.ಮಾ.ನಾಯಕ ಅವರು ತಮ್ಮ ಗ್ರಂಥಸೂಚಿಯ ಮುನ್ನುಡಿಯಲ್ಲಿ ಹೇಳಿದ್ದಾರೆ. ಈ ಮಾತಿಗೆ ಪ್ರತಿಕ್ರಿಯೆಯೋ ಎಂಬಂತೆ ಡಾ.ಸಿ.ಪಿ.ಕೆ. ಅವರು "ಲೇಖಕರ ಹೆಸರು

ಇತ್ಯಾದಿಗಳಿಲ್ಲದ ಪುಸ್ತಕಗಳ ಒಂದು ಪಟ್ಟಿಯನ್ನು ಅಕಾರಾದಿಯಾಗಿ ಕಡೆಯಲ್ಲಿ ಕೊಟ್ಟಿದ್ದರೆ ಚೆನ್ನಾಗಿತ್ತು ಎನಿಸುತ್ತದೆ" ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಹೆಸರುಗಳಿಲ್ಲದಿದ್ದರೂ ಗ್ರಂಥವೊಂದು ಇದೆ ಎಂಬ ಕಾರಣಕ್ಕಾಗಿ ನಾವು ಅಂಥ ಗ್ರಂಥಗಳನ್ನು ಈ ನಮ್ಮ ಗ್ರಂಥಸೂಚಿಯಲ್ಲಿ ಉಲ್ಲೇಖಿಸಿದ್ದೇವೆ. ಹೆಸರು ಇತ್ಯಾದಿ ಇಲ್ಲದ ಕಡೆ "ನಮೂದು ಇಲ್ಲ" ಎಂದು ಹೇಳಿದ್ದೇವೆ. ಆದ್ದರಿಂದ ನಾಯಕರು ಕೈಬಿಟ್ಟಿದ್ದ ಅಪೂರ್ಣ ರೂಪದ ಎಷ್ಟೋ ಗ್ರಂಥಗಳ ಉಲ್ಲೇಖಗಳನ್ನೂ ಇಲ್ಲಿ ಕಾಣಬಹುದು. ಅಂಥವನ್ನು ಪ್ರತ್ಯೇಕವಾಗಿ ಕಡೆಯಲ್ಲಿ ಕೊಡದೆ ಪಠ್ಯದೊಳಗೇ ಸೇರಿಸಲಾಗಿದೆ.

ಇಷ್ಟಾದರೂ, ನಾವು ಮಾಡಿರುವುದು ಶ್ರೇಷ್ಠ ಎಂಬ ಅಹಮಿಕೆಯೇನೂ ಇಲ್ಲ. ಯಾಕೆಂದರೆ, "ನಡೆವರೆಡಹುವ" ಸಾಧ್ಯತೆಗಳು ಇದ್ದೇ ಇರುತ್ತವೆ. ಒಂದು ಮಾತನ್ನು ಇಲ್ಲಿ ಹೇಳಲೇಬೇಕೆನಿಸುತ್ತಿದೆ: ಈ ಗ್ರಂಥಸೂಚಿಯ ಪಠ್ಯಭಾಗದಲ್ಲಿ ನಮೂದಾಗಿರುವ ಪ್ರತಿಯೊಂದು ಗ್ರಂಥವನ್ನೂ ಪ್ರತ್ಯಕ್ಷವಾಗಿ ಪರಿಶೀಲಿಸಿರುವುದರಿಂದ ಸೆಕೆಂಡ್ ಹ್ಯಾಂಡ್ ಮಾಹಿತಿಗೆ ಅವಕಾಶ ಸಿಕ್ಕಿಲ್ಲ. ಇಲ್ಲಿರುವ ವಿವರಗಳೆಲ್ಲ ಫಸ್ಟ್ ಹ್ಯಾಂಡ್ ಹಾಗೂ ಅತ್ಯಂತ ವಿಶ್ವಾಸಾರ್ಹ ಮಾಹಿತಿಗಳಾಗಿವೆ.

* * *

ಈ ನಮ್ಮ ಗ್ರಂಥಸೂಚಿಯಲ್ಲಿ ಕೆಲವು ವೈಶಿಷ್ಟ್ಯಗಳಿವೆ, ಕೆಲವು ಆಶ್ಚರ್ಯಗಳಿವೆ. ಅಂಥ ಒಂದೆರಡು ಸಂದರ್ಭಗಳನ್ನು ಇಲ್ಲಿ ನಮೂದಿಸಬಹುದೆನಿಸುತ್ತಿದೆ:

ಜನಪದ ಗಣಿತವನ್ನು ಕುರಿತ ಗ್ರಂಥಗಳು ಕನ್ನಡದಲ್ಲಿ ಹಲವು ಪ್ರಕಟವಾಗಿವೆ. ಈ ಪ್ರಕಾರದ ಮೊದಲಿಗರು ಡಾ.ಪಿ.ಕೆ. ರಾಜಶೇಖರ ಎಂಬುದು ನಮ್ಮ ತಿಳಿವಳಿಕೆ. ಅನಂತರ ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದವರು ಶ್ರೀ ಜೀನಹಳ್ಳಿ ಸಿದ್ಧಲಿಂಗಪ್ಪ. ಇವರುಗಳ ಗ್ರಂಥಗಳೆಲ್ಲ ಪ್ರಕಟವಾಗಿರುವುದು ೧೯೭೦ ರ ದಶಕದಿಂದೀಚೆಗೆ. ಇದುವರೆಗೆ ಯಾರೂ ಮಾಡದ ರೀತಿಯಲ್ಲಿ ೧೧೮ ವರ್ಷಗಳ ಹಿಂದೆಯೇ ಅಂಥದೊಂದು ಗ್ರಂಥವು ಪ್ರಕಟವಾಗಿರುವ ಅತ್ಯಾಶ್ಚರ್ಯಕರ ಸಂಗತಿಯೊಂದು ನಮ್ಮ ಈ ಗ್ರಂಥಸೂಚಿಯ ಮೂಲಕ ಘಟಿಸಿದೆ. ಅದು ೧೮೯೬ ರಲ್ಲಿ ಪ್ರಕಟವಾಗಿರುವ ಜನಪದ ಗಣಿತವನ್ನು ಒಳಗೊಂಡ ಕೃತಿ. ಬಹುಶಃ ಆ ಪ್ರಕಾರದಲ್ಲಿ ಅದು ಮೊಟ್ಟಮೊದಲ ಗ್ರಂಥ. ಅದನ್ನು ರೂಪಿಸಿದವರಿಗೆ ಅದು ಮೊದಲ ಗ್ರಂಥವೆಂಬ ಅರಿವು ಇತ್ತು ಎಂಬುದು ಗ್ರಂಥದ ಶೀರ್ಷಿಕೆಯಿಂದಲೇ ತಿಳಿದುಬಿಡುತ್ತದೆ: "ಬಾಯಲೆಕ್ಕದ ಮೊದಲನೆಯ ಪುಸ್ತಕ". ಆ ಗ್ರಂಥಕರ್ತರಿಗೆ ಅಷ್ಟರಮಟ್ಟಿಗೆ ಜಾನಪದ ಪ್ರಜ್ಞೆ ಅಥವಾ ಜಾನಪದ ಅರಿವು ಇತ್ತು ಎಂಬುದು ಆ ಶೀರ್ಷಿಕೆಯಿಂದ ತಿಳಿದುಬರುತ್ತದೆ. 'ಇದುವರೆಗೆ ಯಾರೂ ಮಾಡದ ರೀತಿಯಲ್ಲಿ' ಎಂಬ ಮಾತೊಂದು ಈ ಮೇಲೆ ನಮೂದಾಗಿದೆ. ಒಂದೆರಡು ಇತ್ತೀಚಿನ ಗ್ರಂಥಗಳಲ್ಲಿ ಆ ರೀತಿಯು ಸೂಕ್ಷ್ಮವಾಗಿ ಕಂಡು ಬಂದರೂ ಈ "ಮೊದಲನೆಯ ಪುಸ್ತಕ"ದ ಮುಂದೆ ಅವೆಲ್ಲ ಗೌಣವೆನಿಸಿಬಿಡುತ್ತವೆ.

ಯಾಕೆಂದರೆ, ಇಲ್ಲಿನ ವಿಭಾಗ ಕ್ರಮವೇ ಕೌತುಕಮಯವಾಗಿದೆ: ಬೇರೀಜು ವಜಾ ಬಾಕಿಯ ಗುಣಾಕಾರ ಭಾಗಾಕಾರ, ಬೆಲ್ಲ ಮುಂತಾದ ಕಿರಾಣಿ ಜೀನಸುಗಳನ್ನು ತೂಗುವ ಲೆಕ್ಕ, ಚಿನ್ನ ಬೆಳ್ಳಿ ಮುಂತಾದ ಬೆಲೆಯುಳ್ಳ ಒಡವೆಗಳ ಪರಿಮಾಣಗಳ ಲೆಕ್ಕ, ಅಳೆಯುವ ಪರಿಮಾಣಗಳ ಬಾಯಲೆಕ್ಕಗಳು, ಧಾರವಾಡ ವಿಜಾಪುರ ಬೆಳಗಾವಿ ಭಾಗಗಳಲ್ಲಿ ಬಳಕೆಯಲ್ಲಿದ್ದ ರೀತಿನೀತಿಗಳು, ಎಣ್ಣೆ ಮುಂತಾದ ದ್ರವಪದಾರ್ಥಗಳು (ಇದನ್ನು ಅವರು 'ರಸಪದಾರ್ಥಗಳು' ಎಂದಿದ್ದಾರೆ!), ಕಾಲದರ್ಶಕಗಳು, ಕಾಗದಗಳು, ಭೂಮಿ, ಅರಿವೆ, ಇಂಥವನ್ನು ಕುರಿತ ಲೆಕ್ಕಗಳು– ಹೀಗೆ ಕುತೂಹಲವನ್ನು ವೃದ್ಧಿಸುವ ಕ್ರಮವನ್ನು ಈ ಗ್ರಂಥದಲ್ಲಿ ಕಾಣಬಹುದು. ಈ ಗ್ರಂಥವನ್ನು ರೂಪಿಸಿದ ಶ್ರೀ ರಾಮಚಂದ್ರ ಹಣಮಂತ ದೇಶಪಾಂಡೆ ಅವರಿಗೆ ಮಾರ್ಗದರ್ಶಕವಾಗಿ ನಿಂತದ್ದು ಒಂದು ಮರಾಠಿ ಗ್ರಂಥ!

"ಪಿರಿಯಾಪಟ್ಟಣದ ಕಾಳಗ"ದ ಬಗ್ಗೆ ಕೆಲಸ ಮಾಡಿರುವ ಮೊದಲಿಗರೊಬ್ಬರು ಈ ಗ್ರಂಥದಲ್ಲಿ ಕಾಣಿಸಿಕೊಂಡಿದ್ದಾರೆ. ಪಿರಿಯಾಪಟ್ಟಣದವರೇ ಆದ ಶ್ರೀ ಪಿ.ಸಿ.ವೀರಯ್ಯ ಅವರು ೧೯೩೦ಕ್ಕೂ ಹಿಂದೆಯೇ ಈ ಕಾವ್ಯವನ್ನು ನೀಲಗಾರರಿಂದ ಸಂಗ್ರಹಿಸಿದ್ದ ಸಂಗತಿ ಇಲ್ಲಿ ಬೆಳಕಿಗೆ ಬಂದಿದೆ. ಆ ಮೂಲ ಸಂಗ್ರಹ ನಮಗೆ ಲಭ್ಯವಾಗಿಲ್ಲ. ಆದರೆ, ವೀರಯ್ಯನವರ ಮೂಲ ಸಂಗ್ರಹವನ್ನು ಶ್ರೀಮತಿ ಪಾರ್ವತಮ್ಮ ದೇವಲಿಂಗಯ್ಯ ಅವರು ಗದ್ಯಾನುವಾದ ಮಾಡಿ ಪ್ರಕಟಿಸಿರುವ ಪ್ರತಿಯ ವಿವರಗಳು ಮಾತ್ರ ಇಲ್ಲಿ ನಮೂದಾಗಿವೆ.

ಹಾಗೆಯೇ, ಡಾ. ಡಿ.ವಿ.ಜಿ., ಶ್ರೀ ಜಿ.ಪಿ.ರಾಜರತ್ನಂ, ಪ್ರೊ. ತೀ.ನಂ.ಶ್ರೀ., ಪ್ರೊ. ಎಂ.ರಾಮರಾವ್, ಶ್ರೀಮತಿ ಎಚ್.ವಿ.ಸಾವಿತ್ರಮ್ಮ ಅವರುಗಳಂಥ ಪ್ರಸಿದ್ಧರು ಕೂಡ ಜಾನಪದ ಕ್ಷೇತ್ರದಲ್ಲಿ ಕೈಯಾಡಿಸಿರುವ ದಾಖಲೆಗಳು ಇಲ್ಲಿವೆ.

ಒಗಟು ಎಂಬುದಕ್ಕೆ ಗಟ್ಟಿಪದ ಎಂಬ ಪರ್ಯಾಯ ನಾಮವೊಂದು ಪ್ರಾಚೀನ ಕಾವ್ಯ ಪ್ರಕಾರದಲ್ಲಿ ಇದ್ದುದಕ್ಕೆ "ವಾವೆ ಮತ್ತು ಗಟ್ಟಿಪದಗಳು" ಎಂಬ ಶ್ರೀ ಜಿ.ಜಿ. ಮಂಜುನಾಥನ್ ಸಂಪಾದಿತ ಕೃತಿಯು ಸಾಕ್ಷಿಯಾಗುತ್ತದೆ. "ಸಾಮಾನ್ಯವಾಗಿ ಪ್ರತಿಯೊಂದು ಪ್ರಾಚೀನ ಕಾವ್ಯದ ಪ್ರಾರಂಭದಲ್ಲಿ, ಅದರಲ್ಲೂ ಇಷ್ಟದೇವತಾ ಪ್ರಾರ್ಥನೆಯಲ್ಲಿ ಈ ತೆರನ ಪದ್ಯಗಳನ್ನು ಕಾಣಬಹುದಾಗಿದೆ" ಎಂಬುದಾಗಿ ವಿದ್ವಾಂಸರಾದ ಶ್ರೀ ಎನ್.ಬಸವಾರಾಧ್ಯ ಅವರು ಆ ಗ್ರಂಥದ ವಿಭಾಗ ಸಂಪಾದಕರ ಮಾತಿನಲ್ಲಿ ಹೇಳಿದ್ದಾರೆ.

ಮೊದಲ ಮಹಾಯುದ್ಧವನ್ನು ಹಾಗೂ ಸ್ವಾತಂತ್ರ್ಯ ಸಂಗ್ರಾಮಗಳನ್ನು ಕುರಿತು ರಚಿತವಾಗಿರುವ ಲಾವಣಿ ಸಂಗ್ರಹಗಳು ಈ ಗ್ರಂಥಸೂಚಿಯಲ್ಲಿ ಪ್ರವೇಶ ಪಡೆದಿವೆ. ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಹಾಗೂ ಮೈಸೂರಿನ ಕಾವ್ಯಾಲಯ, ಮುಂತಾದ ಖಾಸಗಿ ಪ್ರಕಾಶಕರು ಹಾಗೂ ಸಂಘ ಸಂಸ್ಥೆಗಳು ಕೂಡ ಜನಪದ ಸಾಹಿತ್ಯವನ್ನು ಪ್ರೋತ್ಸಾಹಿಸಿರುವ ವಿಚಾರ ಉಲ್ಲೇಖನೀಯ.

* * *

ಯಾವುದೇ ಒಂದು ಘಟನೆಗೆ ಐತಿಹಾಸಿಕ ಮಹತ್ವ ಪ್ರಾಪ್ತವಾಗಬೇಕಾದರೆ ಕಾಲದ ನಮೂದು ಅಗತ್ಯ. ಈ ದೃಷ್ಟಿಯಿಂದ ಪ್ರತಿಯೊಂದು ಗ್ರಂಥದ ಮೊದಲ ಮುದ್ರಣಕ್ಕೆ ಮಹತ್ವವಿದೆ. ಐತಿಹಾಸಿಕ ಮಹತ್ವವನ್ನು ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ನಾವು ಪ್ರತಿಯೊಂದು ಗ್ರಂಥದ ಮೊದಲ ಮುದ್ರಣದ ವರ್ಷವನ್ನು ತಪ್ಪದೆ ನಮೂದಿಸಿದ್ದೇವೆ. ಮರುಮುದ್ರಣಗಳೆಲ್ಲವನ್ನೂ ಜೊತೆಗೇ ಉಳಿಸಿಕೊಂಡಿದ್ದೇವೆ. ಯಾಕೆಂದರೆ, ಈ ಮರುಮುದ್ರಣಗಳು ಒಂದು ಗ್ರಂಥದ ಉಪಯುಕ್ತತೆಯನ್ನೋ ಜನಪ್ರಿಯತೆಯನ್ನೋ ಸೂಚಿಸುತ್ತವೆ. ನಮಗೆ ಲಭ್ಯವಾದ ಪ್ರತಿಯಲ್ಲಿ ಮೊದಲ ಮುದ್ರಣದ ನಮೂದು ಇಲ್ಲದಿದ್ದಾಗ ಮಾತ್ರ ಈ ನಮ್ಮ ಸೂಚಿಯಲ್ಲೂ ಸಹಜವಾಗಿಯೇ ಅದು ನಮೂದಿಸಲ್ಪಟ್ಟಿಲ್ಲ. ಅಂಥ ಗ್ರಂಥಗಳು ಹೆಚ್ಚು ಇಲ್ಲ.

ಎಷ್ಟೋ ಗ್ರಂಥಗಳ ಶೀರ್ಷಿಕೆಗಳೊಂದಿಗೆ ಸಂಕ್ಷಿಪ್ತ ವಿವರಣೆ ಇರುತ್ತದೆ. ಅಂಥ ವಿವರಣೆಗಳು ಕೆಲವು ಗ್ರಂಥಗಳಲ್ಲಿ ಶೀರ್ಷಿಕೆಯ ಕೆಳಗೂ, ಕೆಲವು ಗ್ರಂಥಗಳಲ್ಲಿ ಶೀರ್ಷಿಕೆಯ ಮೇಲೂ, ಇರುತ್ತವೆ. ನಾವು ಇಲ್ಲಿ ಒಟ್ಟಾರೆಯಾಗಿ ಅಂಥ ವಿವರಣೆಗಳನ್ನೆಲ್ಲ "ಅಡಿಬರಹ" ಎಂಬುದಾಗಿ ನಮೂದಿಸುತ್ತ ಹೋಗಿದ್ದೇವೆ.

ಲೇಖಕರ ಹೆಸರಿನೊಂದಿಗೆ ಇರುವ ಪದವಿ, ಹುದ್ದೆ, ಗೌರವಸೂಚಕ ಶಬ್ದ ಮುಂತಾದುವನ್ನೆಲ್ಲ ಏಕರೂಪವನ್ನು ಕಾಯ್ದುಕೊಳ್ಳುವ ಸಲುವಾಗಿ ಕೈಬಿಟ್ಟಿದ್ದೇವೆ. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಅಲ್ಲಲ್ಲಿ ಉಳಿದುಕೊಂಡಿವೆ.

ಈ ಗ್ರಂಥಸೂಚಿಯು, ಸಂಶೋಧಕರಿಗೆ ಒಂದು ಮಾರ್ಗದರ್ಶಿಯೂ ಜನಪದ ಸಾಹಿತ್ಯ ಚರಿತ್ರೆಯನ್ನು ಬರೆಯುವವರಿಗೆ ಒಂದು ಹೆದ್ದಾರಿಯೂ ಆಗಬಲ್ಲುದೆಂದು ನಾವು ನಂಬಿದ್ದೇವೆ.

* * *

ಡಾ.ಹಾ.ಮಾ.ನಾಯಕ ಅವರು ತಮ್ಮ ಗ್ರಂಥಸೂಚಿಯಲ್ಲಿ, ಗ್ರಂಥಗಳನ್ನು ವರ್ಗೀಕರಿಸಿ, ಪ್ರತಿಯೊಂದು ವರ್ಗಕ್ಕೂ ಪ್ರತ್ಯೇಕ ಅಕಾರಾದಿ ಮಾಡಿದ್ದಾರೆ. ಡಾ.ಸಿ.ಟಿ.ಗುರುಪ್ರಸಾದ್ ಅವರು ಕೂಡ ಹಾಗೇ ಮಾಡಿದ್ದಾರೆ. ಈ ವಿಧಾನದಲ್ಲಿ ಒಂದು ತೊಡಕು ಇದೆ ಎಂದು ನಮಗೆ ಅನ್ನಿಸಿದೆ. ಒಂದು ಗ್ರಂಥದ ಶೀರ್ಷಿಕೆಯಿಂದ ಅದು ಯಾವ ವಿಭಾಗಕ್ಕೆ ಸೇರುತ್ತದೆ ಎಂಬುದು ತಿಳಿಯದೆ ಹೋದಾಗ ಎಲ್ಲ ವರ್ಗೀಕೃತ ಅಕಾರಾದಿಗಳನ್ನು ಪರಿಶೀಲಿಸುತ್ತ ಹೋಗಬೇಕಾಗುತ್ತದೆ. ಇದೇ ಆ ತೊಡಕು. ಉದಾಹರಣೆಗೆ, ಕೆಲವು ಗ್ರಂಥಗಳ ಶೀರ್ಷಿಕೆಗಳು ಹೀಗಿವೆ: ದುಂಡಮಲ್ಲಿಗಿ ಹೂವ ಬುಟ್ಟೀಲಿ ಬಂದಾವ, ಪೊಳ್ಳಿನೊಳಗೆ ಪಕ್ಷಿ, ತನಿ ಎರೆದವರೆ, ನಾರಾಯಣದೇವ, ಮಂಥಾನ, ಸಿದ್ಧರ ಭಂಡಾರ, ರ್‍ವಾಣಗಳು, ಬೆಳ್ಳಕ್ಕಿ ಹಿಂಡು ಬೆದರ್‍ಯಾವೋ, ಸೋರೇ ಬುರುಡೆ, ಹಬ್ಬದ ದಿನವೂ ಹಳೆ ಗಂಡನೆ?, ಇತ್ಯಾದಿ.

ಇಂಥ ಶೀರ್ಷಿಕೆಗಳನ್ನುಳ್ಳ ನೂರಾರು ಗ್ರಂಥಗಳಿವೆ. ಈ ಗ್ರಂಥ ಏನು? ಕಥೆಯೆ?

ಗೀತೆಯೆ? ಗಾದೆಯೆ? ಒಗಟೆ? ವಿಚಾರ ವಿಮರ್ಶೆ ಆಚರಣೆ ಸಂಪ್ರದಾಯ ಯಾವ ವರ್ಗಕ್ಕೆ ಇದು ಸೇರುತ್ತದೆ? ಗ್ರಂಥಸೂಚಿಯ ಯಾವ ವಿಭಾಗದಲ್ಲಿ ಹುಡುಕೋಣ? ಇಂಥ ಯಾವ ಪ್ರಶ್ನೆಗೂ ಅವಕಾಶ ಇರಬಾರದೆಂಬುದು ಇಲ್ಲಿನ ನಮ್ಮ ಉದ್ದೇಶ. ಬರೀ ಗ್ರಂಥದ ಹೆಸರು ತಿಳಿದರೆ ಸಾಕು, ಸುಲಭವಾಗಿ ಕೂಡಲೆ ನಮಗೆ ಸಿಗಬೇಕು, ಇದು ನಮ್ಮ ಉದ್ದೇಶದ ಗುರಿ. ಈ ಗುರಿಯನ್ನು ನಾವು ಯಶಸ್ವಿಯಾಗಿ ತಲಪಿದ್ದೇವೆ ಎಂಬ ಸಮಾಧಾನ ನಮಗಿದೆ. ಇಡೀ ಗ್ರಂಥದಲ್ಲಿ ಒಂದೇ ಅಕಾರಾದಿ ಇರುವುದರಿಂದ, ಹುಡುಕುವ ಶ್ರಮವಿಲ್ಲದೆ, ನೇರವಾಗಿ ಗುರಿಯನ್ನು ತಲಪಬಹುದು.

ನಿಯತಕಾಲಿಕೆಗಳನ್ನು ಎರಡು ಕಾರಣಗಳಿಗಾಗಿ ಕೈಬಿಟ್ಟಿದ್ದೇವೆ: ಅವು, ನಮ್ಮ ಕಾರ್ಯಾವಧಿಯಲ್ಲಿ ಸಮಗ್ರವಾಗಿ ಸಂಗ್ರಹಿಸಲು ಸಾಧ್ಯವಿಲ್ಲವಾಗಿ, ಹಾಗೂ ಅಲ್ಲೊಂದು ಇಲ್ಲೊಂದು ಮಾಹಿತಿಯನ್ನು ಕೊಡುವುದು ಸಮಂಜಸವಲ್ಲ ಎಂಬ ಕಾರಣಕ್ಕಾಗಿ.

* * *

ಈ ಬಗೆಯ ಕಾರ್ಯಕ್ಕೆ ಕ್ಷೇತ್ರಕಾರ್ಯವು ಅನಿವಾರ್ಯ. ಕ್ಷೇತ್ರಕಾರ್ಯವೆಂದರೆ ಅದು ಗ್ರಂಥ ಸಂಗ್ರಹವಿರುವೆಡೆಯಲ್ಲೆ ನಡೆಯಬೇಕಾದ್ದು. ಮಾಹಿತಿ ಸಂಗ್ರಹಕ್ಕಾಗಿ ಹಲವಾರು ಗ್ರಂಥಾಲಯಗಳಿಗೆ ಹಾಗೂ ಖಾಸಗಿ ಸಂಗ್ರಹಗಳಿಗೆ ಹೋಗಬೇಕಾದ ಸಂದರ್ಭ ಬಂದಿತ್ತು. ಹಾಗೆ ಭೇಟಿ ಮಾಡಿದ ಗ್ರಂಥಾಲಯಗಳ ಹಾಗೂ ಖಾಸಗಿ ಸಂಗ್ರಹಗಳ ವಿವರ ಹೀಗಿದೆ:

ಗ್ರಂಥಾಲಯಗಳು: ೧.ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥಾಲಯ ೨.ಜಾನಪದ ವಿಭಾಗದ ಗ್ರಂಥಾಲಯ ೩.ಮಾನಸ ಗಂಗೋತ್ರಿಯ ಸ್ನಾತಕೋತ್ತರ ಗ್ರಂಥಾಲಯ ೪.ಮಹಾರಾಜಾ ಕಾಲೇಜು ಆವರಣದಲ್ಲಿರುವ ಪದವಿ ಗ್ರಂಥಾಲಯ ೫.ನಗರ ಕೇಂದ್ರ ಗ್ರಂಥಾಲಯ ೬.ಪಾಂಡವಪುರದ ಶ್ರೀ ಎಂ.ಅಂಕೇಗೌಡ ಜ್ಞಾನಪ್ರತಿಷ್ಠಾನ ಗ್ರಂಥಾಲಯ ೭.ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿರುವ ಕರ್ನಾಟಕ ರಾಜ್ಯ ಕೇಂದ್ರ ಗ್ರಂಥಾಲಯ ೮.ಜಯನಗರದ ಸೌತ್‌ಎಂಡ್ ಸರ್ಕಲ್ ಬಳಿ ಇರುವ ನಗರ ಕೇಂದ್ರ ಗ್ರಂಥಾಲಯ ೯.ವಿಜಯನಗರದ ನಗರಕೇಂದ್ರ ಗ್ರಂಥಾಲಯ ೧೧.ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಿರಿಗನ್ನಡ ಗ್ರಂಥಾಲಯ ೧೨.ಅಕ್ಷರ ಗ್ರಂಥಾಲಯ ೧೩.ಬುಡಕಟ್ಟು ಅಧ್ಯಯನ ವಿಭಾಗದ ಗ್ರಂಥಾಲಯ ೧೪.ಜಾನಪದ ಅಧ್ಯಯನ ವಿಭಾಗದ ಗ್ರಂಥಾಲಯ ೧೫.ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನದ ಗ್ರಂಥಾಲಯ ೧೬.ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಗ್ರಂಥಾಲಯ ೧೭.ಮತ್ತು ಆ ಗ್ರಂಥಾಲಯದೊಳಗೇ ಮೂರನೆಯ ಮಹಡಿಯಲ್ಲಿರುವ ಡಾ.ಹಾ.ಮಾ.ನಾಯಕ ಸಂಶೋಧನ ಕೇಂದ್ರದ ಗ್ರಂಥಾಲಯ ೧೮.ಬೆಂಗಳೂರಿನಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ೧೯.ಕರ್ನಾಟಕ ಸಾಹಿತ್ಯ ಅಕಾಡೆಮಿ ೨೦.ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗ್ರಂಥಾಲಯ ೨೧.ಕನ್ನಡ

ಪುಸ್ತಕ ಪ್ರಾಧಿಕಾರ ೨೨.ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥಾಲಯ. ೨೩.ಮೈಸೂರು ಮಾನಸ ಗಂಗೋತ್ರಿಯಲ್ಲಿರುವ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಗ್ರಂಥಾಲಯ.

ಖಾಸಗಿ ಸಂಗ್ರಹಗಳು: ೧.ನಮ್ಮಿಬ್ಬರ ಸ್ವಂತ ಸಂಗ್ರಹಗಳು ೨.ಧಾರವಾಡದ ಡಾ.ಎಂ.ಎಂ. ಕಲಬುರ್ಗಿ ಅವರ ಸಂಗ್ರಹ ೩.ಬೆಂಗಳೂರಿನ ಡಾ.ಚಕ್ಕೆರೆ ಶಿವಶಂಕರ್ ಅವರ ಸಂಗ್ರಹ ೪.ಪಾಂಡವಪುರದ ಡಾ.ಬೋರೇಗೌಡ ಚಿಕ್ಕಮರಳಿ ಅವರ ಸಂಗ್ರಹ.

– ಸಂಪಾದಕರು

ಸಂಪಾದಕರ ಅರಿಕೆ

ಈ ಗ್ರಂಥಸೂಚಿಯ ಪ್ರಸ್ತಾಪ ನಮ್ಮೆದುರು ಬಂದದ್ದು ಕರ್ನಾಟಕ ಜಾನಪದ ಅಕಾಡೆಮಿಯಲ್ಲಿ, ಆಚರಣೆಗೆ ಬಂದದ್ದು ಹಾಗೂ ಮುಕ್ತಾಯವಾದದ್ದು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ. ನಡೆದದ್ದು ಇಷ್ಟು: ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿದ್ದ ಶ್ರೀ ಗೊ.ರು.ಚನ್ನಬಸಪ್ಪ ಅವರ ಆಹ್ವಾನದ ಮೇರೆಗೆ ೨೦೧೧ ರಲ್ಲಿ ನಾವಿಬ್ಬರೂ ಕನ್ನಡ ಜಾನಪದ ನಿಘಂಟು ಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಒಮ್ಮೆ ಶ್ರೀ ಗೊ.ರು.ಚ. ಅವರು ನಮ್ಮನ್ನು ಕರೆದು ನಿಘಂಟುವಿನ ಕೆಲಸ ಮುಗಿದ ಮೇಲೆ "ಜಾನಪದ ಗ್ರಂಥಸೂಚಿ" ಯೊಂದನ್ನು ಸಿದ್ಧಪಡಿಸಿಕೊಡಬೇಕೆಂದು ಸೂಚಿಸಿದರು. ನಾವೇನೋ ಒಪ್ಪಿಕೊಂಡೆವು. ಆದರೆ, ನಿಘಂಟುವಿನ ಕೆಲಸ ಮುಗಿದು ಅದು ಬಿಡುಗಡೆಯಾಗುವ ವೇಳೆಗೆ ಸರಿಯಾಗಿ ಅವರ ಅಧ್ಯಕ್ಷಾವಧಿಯು ಮುಗಿದುಹೋಯಿತು. ಶ್ರೀ ಗೊ.ರು.ಚ. ನಿರಾಶರಾಗಲಿಲ್ಲ. ಆ ಅದೇ ಉತ್ಸಾಹದಲ್ಲಿ "ಅಕಾಡೆಮಿಯಲ್ಲಿ ಸಾಧ್ಯವಾಗದಿದ್ದರೇನು, ವಿಶ್ವವಿದ್ಯಾಲಯದಲ್ಲಿ ಮಾಡುವಿರಂತೆ" ಎಂದು ನಮ್ಮಲ್ಲಿ ಹುಮ್ಮಸ್ಸು ತುಂಬಿದರು. ಅವರ ಆಲೋಚನೆ ವ್ಯರ್ಥವಾಗಲಿಲ್ಲ. ಕೆಲವೇ ತಿಂಗಳುಗಳಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಿಂದ ನಮಗೆ ಆದೇಶ ಪತ್ರಗಳು ಬಂದುವು.

ಈ ಸೂಚಿಯ ಸಿದ್ಧತೆಗಾಗಿ ವಿಶ್ವವಿದ್ಯಾಲಯವು ನಮಗೆ ನೀಡಿದ ಕಾಲದ ಅವಧಿ ಹತ್ತು ತಿಂಗಳು ಮಾತ್ರ. ಯಾವ ಸಹಾಯಕರ ನೆರವು ಇಲ್ಲದಿದ್ದರೂ ಅವಧಿ ಪೂರ್ಣವಾಗುವುದರೊಳಗೆ ಈ ಸೂಚಿಯ ಕರಡು ಪ್ರತಿಯನ್ನು ನಾವು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದೆವು. ಮತ್ತು ಕ್ಷೇತ್ರಕಾರ್ಯವನ್ನು ಮುಂದುವರಿಸಿ ಹೆಚ್ಚಿನ ನೂರಾರು ಗ್ರಂಥಗಳನ್ನು ಪರಿಶೀಲಿಸಿ ಮಾಹಿತಿಗಳನ್ನು ಸಂಗ್ರಹಿಸಿದೆವು.

ಗ್ರಂಥದ ಶೀರ್ಷಿಕೆ ಕುರಿತು ಒಂದು ಮಾತನ್ನು ಹೇಳಬೇಕಾಗಿದೆ. ಇದುವರೆಗೆ ಪ್ರಕಟವಾಗಿರುವ ಗ್ರಂಥಸೂಚಿಗಳೆಲ್ಲ "ಕನ್ನಡ ಜಾನಪದ ಗ್ರಂಥಸೂಚಿ" ಎಂಬ ಶೀರ್ಷಿಕೆಯಲ್ಲೆ ಬಂದಿವೆ. ಅವುಗಳಲ್ಲಿ ಒಂದು ಮಾತ್ರ "ಸಂಕ್ಷಿಪ್ತ ವಿವರಣಾತ್ಮಕ" ಎಂಬ ವಿಶೇಷಣವನ್ನು ಹೊಂದಿದೆ. ನಮ್ಮ ಈ ಗ್ರಂಥಸೂಚಿಯಲ್ಲಿ ಕನ್ನಡ ಗ್ರಂಥಗಳು ಮಾತ್ರವಲ್ಲದೆ ಕರ್ನಾಟಕದ ಭಾಷೆಗಳೇ ಆಗಿರುವ ಕೊಡವ ತುಳು ಕೊಂಕಣಿ ಭಾಷಾಗ್ರಂಥಗಳ ನಮೂದುಗಳೂ ಇರುವುದರಿಂದ, ಹಾಗೂ ನಮ್ಮ ಕ್ಷೇತ್ರಕಾರ್ಯಗಳ ಸಂದರ್ಭಗಳಲ್ಲಿ ನಮಗೆ ಲಭ್ಯವಾಗದ ಗ್ರಂಥಗಳ ಮಾಹಿತಿಗಳನ್ನುಳ್ಳ ಇತರ ಗ್ರಂಥಗಳ ಭಾಗಗಳನ್ನೂ ಒಳಗೊಂಡಿರುವುದರಿಂದ, ಇದೊಂದು "ವಿಸ್ತರಿಸಲ್ಪಟ್ಟ" ಗ್ರಂಥಸೂಚಿ ಎನ್ನಿಸಿಕೊಳ್ಳುತ್ತದೆ. ಆದ್ದರಿಂದ ನಮ್ಮ ಗ್ರಂಥಸೂಚಿಯ ಶೀರ್ಷಿಕೆಯನ್ನು "ವಿಸ್ತೃತ ಜಾನಪದ ಗ್ರಂಥಸೂಚಿ" ಎಂಬುದಾಗಿ ಹೆಸರಿಸಿದ್ದೇವೆ. ಪ್ರಧಾನ ಸಂಪಾದಕರೂ ಆಗಿರುವ ಕುಲಪತಿ

ಪ್ರೊ. ಅಂಬಳಿಕೆ ಹಿರಿಯಣ್ಣ ಅವರು ಈ ನಮ್ಮ ಆಲೋಚನೆಯನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸಿದ್ದಾರೆ.

ಈ ನಮ್ಮ ಗ್ರಂಥಸೂಚಿಯಲ್ಲಿ ನಾವು ನೇರವಾಗಿ ಸಂಗ್ರಹಿಸಿರುವ ನಮೂದುಗಳ ಸಂಖ್ಯೆ ೨೨೮೫. ಇತರ ಮೂಲಗಳಿಂದ ಸಂಗ್ರಹಿಸಿರುವ ನಮೂದುಗಳ ಒಟ್ಟು ಸಂಖ್ಯೆ ೧೫೧೩. ಹೀಗೆ ಈ ಗ್ರಂಥಸೂಚಿಯಲ್ಲಿ ಒಟ್ಟು ೩೭೯೮ ಗ್ರಂಥಗಳ ನಮೂದುಗಳಿವೆ.

ಕನ್ನಡ ಜಾನಪದ ಗ್ರಂಥಸೂಚಿಯನ್ನು ಮೊಟ್ಟಮೊದಲು ರೂಪಿಸಿ ೧೯೭೪ ರಲ್ಲೆ ಪ್ರಕಟಿಸಿದವರು ಡಾ.ಹಾ.ಮಾ.ನಾಯಕ ಅವರು ಎಂಬ ವಿಚಾರ ಸರ್ವವಿದಿತ. ಈ ವಿಚಾರದಲ್ಲಿ ಅವರು ಆದ್ಯರು. ಅವರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಈ ನಮ್ಮ "ವಿಸ್ತೃತ ಜಾನಪದ ಗ್ರಂಥಸೂಚಿ"ಯನ್ನು ಅವರಿಗೆ ಅರ್ಪಿಸುತ್ತಿದ್ದೇವೆ.

ಕುಲಪತಿಗಳಾದ ಪ್ರೊ.ಅಂಬಳಿಕೆ ಹಿರಿಯಣ್ಣ ಅವರು ನಮ್ಮ ಮೇಲೆ ವಿಶ್ವಾಸವಿರಿಸಿ ಈ ಕೆಲಸವನ್ನು ನಮಗೆ ವಹಿಸಿದ್ದಲ್ಲದೆ, ಸತತವಾಗಿ ಪ್ರೋತ್ಸಾಹಿಸಿದ್ದಾರೆ. ಆಗ ಕುಲಸಚಿವರಾಗಿದ್ದ ಡಾ.ಸಿ.ಎ.ಸೋಮಶೇಖರಪ್ಪ ಅವರು, ಈಗ ಕುಲಸಚಿವರಾಗಿರುವ ಡಾ.ಡಿ.ಬಿ.ನಾಯಕ ಅವರು, ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ ಆಗಿರುವ ಮೌಲ್ಯಮಾಪನದ ಕುಲಸಚಿವರಾದ ಪ್ರೊ.ಸ.ಚಿ.ರಮೇಶ ಅವರು, ಯೋಜನಾ ನಿರ್ದೇಶಕರಾದ ಡಾ.ಕೆ.ಪ್ರೇಮಕುಮಾರ ಅವರು, ಇವರೆಲ್ಲರ ಸಹಕಾರ ನಮಗೆ ಸಿಕ್ಕಿತ್ತು.

ಪ್ರೊ.ಅಂಬಳಿಕೆ ಹಿರಿಯಣ್ಣ ಅವರು ನಮಗೆ ಎಷ್ಟರಮಟ್ಟಿಗೆ ನೆರವಾದರೆಂದರೆ, ಈ ಗ್ರಂಥಸೂಚಿಯು ಸಂಗ್ರಹೋತ್ತರ ಕೆಲಸಗಳಿಗೆ ಸಹಾಯವಾಗಲೆಂದು ಡಾ.ವೃಷಭಕುಮಾರ್ ಹಾಗೂ ಕುಮಾರಿ ಶ್ವೇತಾ.ಎಂ.ಬಿ. ಅವರುಗಳನ್ನು ನಮಗೆ ಅರಿವಿಲ್ಲದಂತೆ ನಿಯೋಜಿಸಿದ್ದುದು ನಮಗೆ ಆಶ್ಚರ್ಯವನ್ನೂ ಸಂತೋಷವನ್ನೂ ಉಂಟುಮಾಡಿತ್ತು. ಡಿ.ಟಿ.ಪಿ., ವಿನ್ಯಾಸ ಹಾಗೂ ಇನ್ನಿತರ ಪ್ರಗತಿಗಳ ಬಗ್ಗೆ ಡಾ.ವೃಷಭಕುಮಾರ್ ಅವರು ನಮಗೆ ಆಗಾಗ ಮಾಹಿತಿ ನೀಡಿ ಸಹಕರಿಸುತ್ತಿದ್ದರು. ಡಿ.ಟಿ.ಪಿ. ಕಾರ್ಯದಲ್ಲಿ ವಿಶ್ವ ಗುಜ್ಜರ್, ಸಂದೀಪ. ಬಿ.ಆರ್., ವಿಮೋಚನಾ ಹಳಿಂಗಳಿ ಮತ್ತು ಪುಟ್ಟಮ್ಮ ವೀರಯ್ಯ ಗೊಟಗೋಡಿಮಠ ಅವರು ನೆರವಾಗಿದ್ದಾರೆ.

ಈ ಎಲ್ಲ ಮಹನೀಯರನ್ನೂ ನಾವು ಕೃತಜ್ಞತೆಯಿಂದ ಸ್ಮರಿಸುತ್ತೇವೆ.

ಕ್ಯಾತನಹಳ್ಳಿ ರಾಮಣ್ಣ
ಟಿ.ಎಸ್. ರಾಜಪ್ಪ

ಅ

೧. ಅಂಚೆ ಜಾನಪದ

ಸಂ: ಎಂ.ಆರ್.ಪ್ರಭಾಕರ; ಪ್ರ: ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು; ಮೊ.ಮು: ೨೦೧೨; ಪು: ೮+೬೯=೭೭; ಕ್ರೌನ್ ೧/೪

ಜಾನಪದ ಸಂಬಂಧಿ ಅಂಚೆ ಚೀಟಿಗಳ ಸಂಗ್ರಹ ಎಂಬ ಅಡಿಬರಹ ಇದೆ. ೫೧ ವಿಷಯಗಳಿಗೆ ಸಂಬಂಧಿಸಿದ ಹಾಗೂ ೭೦ದೇಶಗಳ ಅಂಚೆ ಚೀಟಿಗಳ ಸಂಗ್ರಹ ಇದಾಗಿದೆ. ವಿಷಯಗಳು: ಜೀವರಾಶಿ, ಕ್ರಿಮಿ–ಕೀಟಗಳು, ಜಂತುಗಳು, ಕಡಲಚಿಪ್ಪು, ಜಲಚರಗಳು ಕಾಡುಪ್ರಾಣಿಗಳು, ಸಾಕುಪ್ರಾಣಿಗಳು, ಪ್ರಾಣಿಪಕ್ಷಿ, ಮುದ್ದು ಪಕ್ಷಿ ಪ್ರಾಣಿ, ಪಕ್ಷಿಗಳು, ಪುಷ್ಪಗಳು, ವನಸ್ಪತಿ, ಮೂಲನಿವಾಸಿಗಳು, ಗಿರಿಜನರು, ಜನಪದರು, ಜನಜೀವನ, ವ್ಯವಸಾಯ, ಸಾಂಬಾರು ಪದಾರ್ಥ, ಹಣ್ಣು–ತರಕಾರಿ, ಸಾಂಸ್ಕೃತಿಕ, ಕರಕುಶಲ ಕಲೆ, ಮಡಕೆ–ಕುಡಿಕೆ, ಚಿತ್ರಕಲೆ, ವಿನ್ಯಾಸಕಲೆ, ಭಿತ್ತಿಚಿತ್ರಗಳು, ಚದುರಂಗ, ರಂಗೋಲಿ, ಗ್ರಾಮೀಣ ಕಸಬುಗಳು, ಮಾದರಿಗಳ ಕಲೆ, ಗ್ರಾಮೀಣ ಕುಶಲಕಲೆ, ಪ್ರದರ್ಶನಕಲೆ, ಗೊಂಬೆಯಾಟ, ಮಕ್ಕಳ ಚಿತ್ರಕಲೆ, ಆಟಿಕೆಗಳು, ದೇಸಿ ಆಟಗಳು, ವಾದ್ಯಗಳು, ಜಾನಪದ ನೃತ್ಯ, ನೃತ್ಯಗಳು, ವೇಷ–ಭೂಷಣ, ಸ್ತ್ರೀವೇಷ–ಭೂಷಣ, ವಸ್ತ್ರಕಲೆ, ಮುಖವಾಡಗಳು, ಸಂಗ್ರಹಾಲಯ ವಸ್ತುಗಳು, ಪ್ರಾಚ್ಯವಸ್ತುಗಳು, ಪಂಚತಂತ್ರ ಕಥೆಗಳು, ಜನ್ಮರಾಶಿಗಳು, ದಶಾವತಾರಗಳು, ದೈವಾರಾಧನೆ, ಹಬ್ಬಗಳು, ಉತ್ಸವಗಳು, ಶಿರಶೃಂಗಾರ. **ದೇಶಗಳು:** ಇಂಡಿಯಾ, ಆಫ್ರಿಕಾ, ಮಾಲಿ, ಕ್ಯಾಮರೂನ್, ಕೊರಿಯ, ಹಂಗೇರಿ, ರೊಮಾನಿಯ, ಹಾಂಕ್‌ಕಾಂಗ್, ಗಿನಿಬಸು, ಸಿಂಗಾಪೂರ್, ಮಂಗೋಲಿಯ, ಅಂಗೋಲ, ರವಾಂಡ್ಬೈಸ್, ಶ್ರೀಲಂಕಾ, ಬ್ಲೀಜ್, ಮಾಲ್ಡೀವ್ಸ್, ದಕ್ಷಿಣ ಆಫ್ರಿಕ, ಸಿಲೋನ್, ಬುರಿಟಿಯ, ಆಫ್ಘಾನಿಸ್ಥಾನ, ದೊಹೋಮೆ, ಜಪಾನ್, ಪೋಲ್ಯಾಂಡ್, ಇಂಗ್ಲೆಂಡ್, ಬೆನಿನ್, ನಿಕರಾಗುವ, ಸ್ಪೈನ್, ಖಿರ್‌ಗಿಸ್ಥಾನ್, ಕೆನಡ, ನ್ಯೂಜಿಲ್ಯಾಂಡ್, ಕುವೈತ್, ಜರ್ಮನಿ, ಅಮೆರಿಕಾ, ಬೆಲರೂಸ್, ಟ್ಯಾಂಜಾನಿಯ, ಲೆಸತೊ, ಇರಾನ್, ಪಾಕೀಸ್ಥಾನ, ವಿಯೆಟ್ನಾಂ, ಜಾಂಬಿಯ, ಸೆನೆಗಾಲ್, ಬೆಲ್ಜಿಯಂ, ಐರ್‌ಲ್ಯಾಂಡ್, ಬಾಂಗ್ಲ, ಕ್ಯೂಬ, ಮೊಜಾಂಬಿಕ್, ನೇಪಾಳ, ಇಸ್ರೇಲ್, ಲೈಬೀರಿಯ, ಕಾಂಪೂಚಿಯ, ಭೂತಾನ್, ಆಂಟಿಗುವಾ, ಗಿನಿಯ, ಡೊಮಿನಿಕ, ಮಂಗೋಲಿಯ, ಆಸ್ಟ್ರಿಯ, ಈಕ್ವಟೋರಿಯಲ್. ಗೊ.ರು.ಚನ್ನಬಸಪ್ಪ ಅವರ ಅಧ್ಯಕ್ಷರ ನುಡಿ, ಅನುಬಂಧದಲ್ಲಿ ವಿಶ್ವದಾದ್ಯಂತ ವಿವಿಧ ರಾಷ್ಟ್ರಗಳು ತಮ್ಮ ಮೊದಲ ಅಂಚೆ ಚೀಟಿ ಹೊರತಂದ ವರ್ಷಗಳ ಪಟ್ಟಿ ಇವೆ.

೨. ಅಂಬಿಗರ ಗಂಗ

ಸಂ: ಕರಾಕೃ; ಪ್ರ: ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು–೫; ಮೊ.ಮು: ೧೯೫೮;

ಪು: ೮+೧೬೦=೧೬೮; ಕ್ರೌನ್ ೧/೮

ಜನಪದ ಗೀತೆಗಳು ಎಂಬ ಅಡಿಬರಹ ಇದೆ. ಇಲ್ಲಿ ಹಾಡುಗಳನ್ನು ಆರು ದಳಗಳಾಗಿ ವಿಂಗಡಿಸಲಾಗಿದೆ: ೧.ಪ್ರಾರ್ಥನೆ ೨.ಕುಟುಂಬ ೩.ಪ್ರೇಮ ಪೂಜೆ ೪.ಕೋಲು ಮಲ್ಲಿಗೆ ಕೋಲೆ ೫.ರಣ ಕಹಳೆ ೬.ಬಿಡಿ ಹೂ

೩. ಅಂಬಿಗರ ಸಮುದಾಯ ಮತ್ತು ಸಂಸ್ಕೃತಿ

ಲೇ: ಎಸ್.ಕೆ.ಮೇಲಕಾರ, ರಮಾ ಜಿ.ಗುಂಡುರಾವ್, ಮಂಜುನಾಥ್ ಎನ್.ಅಂಬಿಗ; ಪ್ರ: ಭಾರತ ಸಿಂಧು ರಶ್ಮಿ ಪ್ರಕಾಶನ, ಕಾಶಿಕೃಪಾ, ಧಾರವಾಡ; ಮೊ.ಮು: ೨೦೧೨; ಪು: ೧೧+೨೬೭=೨೭೮; ಡಿಮ್ಮೈ ೧/೮

ಕೋಲಿ–ಕಬ್ಬಲಿಗ–ಗಾಬೀತ್–ತಳವಾರ–ಬೆಸ್ತ–ಬೋವಿ–ಮೀನುಗಾರ–ಮೊಗವೀರ–ಹರಿಕಾಂತ ಎಂಬ ಅಡಿಬರಹ ಇದೆ. ಹನ್ನೊಂದು ಅಧ್ಯಾಯಗಳಿವೆ: ೧.ಅಂಬಿಗರು–ಬೆಸ್ತರ ಸಂಸ್ಕೃತಿ ೨.ಕೋಳಿ–ಟೋಕರೆ ಕೋಳಿ, ಕಬ್ಬಲಿಗರ–ಸಂಸ್ಕೃತಿ ೩.ಗಾಬಿಟ್(ತ್)–ಸಂಸ್ಕೃತಿ ೪.ತಳವಾರರ ಸಂಸ್ಕೃತಿ ೫.ಬೋವಿ ಅಥವಾ ಬೋಯಿಗಳ ಸಂಸ್ಕೃತಿ ೬.ಮೀನುಗಾರರ ಸಂಸ್ಕೃತಿ ೭.ಮೊಗವೀರರ ಸಂಸ್ಕೃತಿ ೮.ಹರಿಕಾಂತರ ಸಂಸ್ಕೃತಿ ೯.ಬುಂಡೆ ಬೆಸ್ತರ ಸಂಸ್ಕೃತಿ ೧೦.ಅಂಬಿಗರ ಸಮುದಾಯದ ವಿಶಿಷ್ಟ ಸಂಪ್ರದಾಯಗಳು, ನಂಬಿಕೆ ಹಾಗೂ ಆಚರಣೆಗಳು ೧೧.ಸಮಾರೋಪ

೪. ಅಂಬುಲಿಗೆ ಚನ್ನಮಲ್ಲೇಶನ ದೀಪದ ಕಲಿಯರ ಕಾವ್ಯ

ಸಂ: ಎಸ್.ವಿದ್ಯಾಶಂಕರ್; ಪ್ರ: ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು; ಮೊ.ಮು: ೧೯೭೪; ಪು: ೩೬+೨೧೮=೨೫೪; ಡಿಮ್ಮೈ ೧/೮

ಚನ್ನ ಮಲ್ಲೇಶ (ವೀರಭಕ್ತನ) ಕತೆಯನ್ನು ವಿಸ್ತಾರವಾದ ಒಂದು ಜಾನಪದ ಕಾವ್ಯವನ್ನಾಗಿ ಕಟ್ಟಿದ್ದಾನೆ" ಎಂಬುದಾಗಿ ಮುನ್ನುಡಿಯಲ್ಲಿ ಜಿ.ಎಸ್.ಶಿವರುದ್ರಪ್ಪ ಅವರು ಹೇಳಿದ್ದಾರೆ.

೫. ಅಕಾರಾದಿ ಗಾದೆಗಳು

ಲೇ: ವಿ.ಬಿ. ಅರ್ತಿಕಜೆ; ಪ್ರ: ಅಂಕಣ ಪ್ರಕಾಶನ, ೯/೧, ಗೋಪಾಲಕೃಷ್ಣ ಗೋಖಲೆ ರಸ್ತೆ, ಗವಿಪುರಂ, ಬೆಂಗಳೂರು–೧೯; ಮೊ.ಮು.೨೦೦೯; ಪುಟ ೪+೪೦೦=೪೦೪; ಡಿಮ್ಮೈ ೧/೮

ಚುಟುಕು ವ್ಯಾಖ್ಯಾನ ಎಂಬ ಅಡಿಬರಹ ರಕ್ಷಾಪುಟದಲ್ಲಿದೆ. 'ಅ' ದಿಂದ ಪ್ರಾರಂಭವಾಗುವ ೫೮೦ ಗಾದೆಗಳಿಗೆ ವಿವರಣೆ ನೀಡಲಾಗಿದೆ. ನುಡಿಗಟ್ಟುಗಳೂ ಗಾದೆಗಳದವೂ ಇಲ್ಲಿ ಪ್ರವೇಶ ಪಡೆದಿವೆ.

೬. ಅಕ್ಕಮ್ಮನ ಆಚರಣೆ

ಲೇ: ವಿರೂಪಾಕ್ಷಿ ಪೂಜಾರಹಳ್ಳಿ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು.೨೦೦೨; ಪುಟ ೪+೩೪=೩೮; ಡಿಮ್ಮೈ ೧/೮

ಅಕ್ಕಮ್ಮನ ಹೆಸರಿನ ಎರಡು ವಿಭಿನ್ನ ಆಚರಣೆಗಳು ಮುನೇಶ್ವರ ಅಥವಾ ಜಡೇಮುನಿ, ಸಪ್ತಮಾತೃಕೆಯರ ಆರಾಧನೆ, ಚಿತ್ರದುರ್ಗ ಪರಿಸರದ ಅಕ್ಕಮ್ಮನ ಆಚರಣೆ, ಓಬಳ ದೇವರ ಗುಡ್ಡ, ಅಕ್ಕಮ್ಮನ ಜನಪದ ಕತೆ, ಮ್ಯಾಸಬೇಡರ ಸಂಸ್ಕೃತಿಯಲ್ಲಿ ಅಕ್ಕಮ್ಮನ ಪರಂಪರೆ-ಎಂಬ ಒಳಶೀರ್ಷಿಕೆಗಳಿದ್ದು, ಸಂಬಂಧಪಟ್ಟ ನಂಬಿಕೆ ಆಚರಣೆಗಳ ವಿವರಗಳನ್ನು ಈ ಕೃತಿ ಒಳಗೊಂಡಿದೆ.

೭. ಅಕ್ಕ ಕುಂಕುಮದಕ್ಕ

ಸಂ: ವರಮಹಾಲಕ್ಷ್ಮೀ ಹೊಳ್ಳ; ಪ್ರ: ಕುಂದ ಅಧ್ಯಯನ ಕೇಂದ್ರ, ಶಂಕರ ಕಲಾಮಂದಿರ ರಸ್ತೆ, ಉಪ್ಪುಂದ-೫೭೬ ೨೩೨, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ,ಮೊ.ಮು: ೨೦೦೪; ಪು. ೧೨+೪೧+೧೬೪=೨೧೭; ಡಿಮ್ಮೈ೧/೮

ಕುಂದನಾಡಿನ ಜಾನಪದ ಹಾಡುಗಳು ಎಂಬ ಅಡಿಬರಹ ಇದೆ. ಒಟ್ಟು ೬೯ ಹಾಡುಗಳಿವೆ. ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. (ಮೊದಲ ಮೂರು ಹಾಡುಗಳನ್ನು ಬಿಟ್ಟು) **ಭಾಗ ಒಂದು: ಮದುವೆ ಹಾಡುಗಳು**: ಈ ಭಾಗದಲ್ಲಿ ಇತರ ಹಾಡುಗಳೂ ಇವೆ. **ಭಾಗ ಎರಡು: ಪೌರಾಣಿಕ ಹಾಡ್ಗತೆಗಳು**: ಮಹಾಭಾರತ: ೧.ಅಭಿಮನ್ಯು ಹುಟ್ಟಿದ್ದು ೨.ಕರ್ಣ ಹುಟ್ಟಿದ್ದು ೩.ಗಜಗೌರೀ ವ್ರತ. ಭಾಗವತ: ೪.ಶ್ರೀಕೃಷ್ಣ ರುಕ್ಮಿಣೀ ೫.ಕೃಷ್ಣ ಪಾರಿಜಾತ. ರಾಮಾಯಣ: ೬,ಸೀತಾ ಪರಿತ್ಯಾಗ. **ಧಾರ್ಮಿಕ ಕಥೆ**: ೭.ಮಾಶೇಷನ ಶಾಪದ ಹಾಡು **ಭಾಗ ಮೂರು: ಸಾಮಾಜಿಕ ಹಾಡ್ಗತೆಗಳು**: ೧ ಆರಂಭ ಅಡವೀಲೆ ೨.ಪಟ್ಟಣಶೆಟ್ಟಿ ಹೊನ್ನಮ್ಮ ೩.ಗಿರಿಜಾಬಾಲಿ ೪.ಕುಸುಮಾಲಿ ೫.ಕೆರೆಗೆ ನರಬಲಿ ೬.ಕಡ್ಲಿ ಹೊರ್ದು ಕಂದಯ್ನಿಗೆ ಕೊಟ್ಟು ೭.ನಿಂಬೀಯ ಹಣ್ಣು ಅಂಬರಕಿಟ್ಟಾಡಿ ೮.ಕಂಪಲು ರಾಯ ೯.ಹುಲಿದೇವರ ಹಾಡು ೧೦.ಈಸೂರಯ್ಯ ೧೧.ಕೊರತಿ ಕೊರಮ ೧೨.ಉತ್ತರದೇವಿ ೧೩.ಮಲ್ಲೀಗಿ ರಾಯ ೧೪.ಜೋಗಿ-ಜಂಗುಮಾ ೧೫.ಜಂಗಮದೇವಿ. ಕುಂಕುಮದಕ್ಕನಿಗೆ ಮುನ್ನುಡಿಯ ಕೈಬಟ್ಟಲು ಎಂಬ ಕೆ.ಚಿನ್ನಪ್ಪಗೌಡ ಅವರ ಮುನ್ನುಡಿ ಇದೆ. ೪೧.ಪುಗಳಷ್ಟು ವಿಸ್ತಾರವಾದ ಪೀಠಿಕೆ, ಶಬ್ದಾರ್ಥ ಸೂಚಿ ಇವೆ.

೮. ಅಕ್ಷತ

ಲೇ: ಕೃಷ್ಣಾನಂದ ಕಾಮತ; ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧; ಮೊ.ಮು: ೧೯೯೯; ಪು: ೧೨೦; ಕ್ರೌನ್೧/೮

ಹನ್ನೆರಡು ಲೇಖನಗಳ ಸಂಕಲನ: ೧.ನಾವು-ನಮ್ಮವರು ೨.ಗ್ರಾಮೀಣ ಗೌಳಿಗಳು:

ಸರಳ ಮನಸ್ಸು, ವಿಶಿಷ್ಟ ಬದುಕು ೩.ಉತ್ತರ ಕನ್ನಡದ ಮಾಪಿಳ್ಳೆಯವರು ೪.ಕರಾವಳಿ ತೀರದ ಸರಳಜೀವಿ ಹಾಲಕ್ಕಿಗೌಡರು ೫.ಬುದ್ಧಿ ಚಾತುರ್ಯಕ್ಕೆ ಹೆಸರಾದ ಸಾರಸ್ವತರು ೬.ಖಾರ್ವಿ ಜನಾಂಗ ೭.ಮಹಿಷಾಧಿಪತಿ ತೊದವ ೮.ಮುಂದುವರಿದ ಆದಿವಾಸಿಗಳಾದ ಸಂತಾಲರು ೯.ಕೊಂಕಣಿ ಭಾಷೆಯ ಉಗಮ, ಬೆಳವಣಿಗೆ ೧೦.ಶತಕಗಳಲ್ಲಿ ಕೊಂಕಣಿ–ಕನ್ನಡಿಗರ ಭಾಂಧವ್ಯ ೧೧.ಕರ್ನಾಟಕ, ಗೋವೆಗಳ ಮೈತ್ರಿ ೧೨.ಕರಾವಳಿಯ ಕ್ರೈಸ್ತರು

೯. ಅಗೇರರ ಸಂಸ್ಕೃತಿ

ಲೇ: ರಾಮಕೃಷ್ಣ ಗುಂದಿ; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು–೫೬೦ ೦೦೨; ಮೊ.ಮು: ೧೯೯೩; ಪು: ೪೮+೯೬=೧೪೪; ಕ್ರೌನ್ ೧/೮

ಏಳು ಆಧ್ಯಾಯಗಳಿವೆ: ೧.ಹಿನ್ನೆಲೆ ೨.ಸಾಮಾಜಿಕ ಬದುಕು ೩.ಸಂಸ್ಕಾರಗಳು–ಸಂಪ್ರದಾಯಗಳು ೪.ಭಾಷೆ–ಸಾಹಿತ್ಯ ೫.ಕಲೆ ಮತ್ತು ಸಾಂಸ್ಕೃತಿಕ ಬದುಕು ೬.ಅಗೇರರನ್ನು ಹೋಲುವ ಉತ್ತರ ಕನ್ನಡ ಜಿಲ್ಲೆಯ ಇತರ ಜನಾಂಗಗಳು ೭.ಉಪಸಂಹಾರ. ಅನುಬಂಧದಲ್ಲಿ ಕಥೆಗಳು, ಹಾಡುಗಳು ಇವೆ. ಕಥೆಗಳು: ೧.ಸಿವ–ಪಾರೂತಿ ೨.ಎಲ್ಲಾ ದ್ಯಾವ್ರೇಯ ೩.ಗೋವಳರು ೪.ಕಾಂಕಕ್ಕ–ಗುಬ್ಬಕ್ಕ ೫.ಪರಸಗಾರೂರ ಹಿರೇತಕ್ಕ ೬.ಮುಕ್ಕರತಿ ದೆವ್ವದ ಕತೆ ೭.ದೊಡ್ಡೋರಂಬೋರ ಯಾರ? ಆಯಾಕತೆಯ ಕೊನೆಯಲ್ಲಿ ಹೇಳಿದವರ ಹೆಸರು ಹಾಗೂ ಶಬ್ದಾರ್ಥಗಳಿವೆ.ಹಾಡುಗಳು: ೧.ಭತ್ತ ಕುಟ್ಟುವ ಹಾಡು ೨.ತವರು ಮನೆ–ತಾಯಿ ೩.ಮಕ್ಕಳ ಜೋಗುಳ ಹಾಡುಗಳು ೪.ಅಣ್ಣ–ಅತ್ತಿಗೆ, ಅಕ್ಕ–ತಂಗಿ ೫.ಇತರ ಹಾಡುಗಳು.

೧೦. ಅಚ್ಚಮಲ್ಲಿಗೆ ಹೂ

ಸಂ: ಎ.ಕೆ.ರಾಮೇಶ್ವರ; ಪ್ರ: ಕವಿರಾಜ ಮಾರ್ಗ ಪ್ರಕಾಶನ, ಮಾತೋಶ್ರೀ ಗೋದುತಾಯಿ ನಗರ, ಜೇವರ್ಗಿ ರೋಡ, ಗುಲಬರ್ಗ; ಮೊ.ಮು: ೧೯೯೬; ಪು: ೩೨+೧೨೦=೧೫೨; ಕ್ರೌನ್ ೧/೮

ಕಲಬುರ್ಗಿ ಜಿಲ್ಲೆಯ ಜಾನಪದ ತ್ರಿಪದಿಗಳು ಎಂಬ ಅಡಿಬರಹ ಇದೆ. ಎರಡು ಭಾಗಗಳಲ್ಲಿ ೪೧ ಹಾಡುಗಳಿವೆ. ಮ.ಗು.ಬಿರಾದಾರ ಅವರ ಮುನ್ನುಡಿ, ಹಾಡಿದ ಕಲಾವಿದರ ಪಟ್ಟಿ, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ, ಪುಸ್ತಕದಲ್ಲಿ ಬಂದಿರುವ ಗ್ರಾಮಗಳು ಅಕಾರಾದಿಯಲ್ಲಿ, ಗ್ರಾಮದೇವತೆಗಳು, ಪುಸ್ತಕದಲ್ಲಿ ಅಳವಡಿಸಿದ ಗ್ರಾಮಗಳ ಸಂಕ್ಷಿಪ್ತ ಪರಿಚಯ ಇವೆ.

೧೧. ಅಜ್ಜಿ ಹೇಳಿದ್ದು ಮೊಮ್ಮಕ್ಕಳು ಬರೆದದ್ದು

ಸಂ: ವಸಂತ ಕಷ್ಟಗಿ; ಪ್ರ: ವಿದ್ಯಾವಿಹಾರ ಪ್ರಕಾಶನ, ಕನ್ನಡ ಸಂಘ, ಎಸ್.ಎಸ್.ಮರಗೋಳ ಮಹಾವಿದ್ಯಾಲಯ, ಶಹಾಬಾದ, ಕಲಬುರಗಿ ಜಿಲ್ಲೆ; ಮೊ.ಮು.೧೯೭೫; ಪುಟ

೧೨+೭೨=೮೪; ಡಿಮ್ಮೆ ೧/೮

ಜಾನಪದ ಕಥಾ ಸಂಕಲನ ಎಂಬ ಅಡಿಬರಹ ಇದೆ. ೧೯ ಕಥೆಗಳಿವೆ: ೧.ದೈವ ಲಿಖಿತ ೨.ಗಿರ್ದಾರೊಟ್ಟಿಯ ಪುಣ್ಯ ೩.ಮೊದಲ ಗಂಡ ೪.ಕೋವಿದ ಪ್ರವಾಹ ದಾಟಿದ ೫.ದುಷ್ಟ ತ್ರಿಕೋನ ೬.ಮುದಿ ಕುದುರೆಯ ಸಾಹಸ ೭.ಋಣಾನುಬಂಧ ೮.ಅತ್ತೆ ತಂದದ್ದೆಲ್ಲ ಹಂಚು ೯.ಒಬ್ಬ ಜೋಯಿಸ ಹಾಗೂ ನಾಲ್ವರು ಕಳ್ಳರು ೧೦.ಮೂರು ಉಪದೇಶಗಳು ೧೧.ಕಾಲು ಮುರಿದುಕೊಂಡು ಬಿದ್ದಳು ಲಕ್ಷ್ಮಿ ೧೨.ಕೃಷ್ಣಾರ್ಜಿತ ಮಹಿಮೆ ೧೩.ಕಂಬಾರದ ಮಗಳು ೧೪.ಆಹುತಿಯಾದಳು ರಂಗವ್ವ ೧೫.ಮೃತ್ಯು ಪತ್ರ ೧೬.ಮೋಸದ ಅದೃಷ್ಟ ೧೭.ಕಾಮುನಗುಂಡ –ಭೀಮುನಗುಂಡ ೧೮.ಸೋಗಿನ ಸಿದ್ಧನ ಚಮತ್ಕಾರ ೧೯.ಅಂಗೈಯಲ್ಲಿ ಹುಟ್ಟಿದ ಕನ್ಯೆ. ಇವುಗಳಲ್ಲಿ ಬಂಗಾಳಿ ಗುಜರಾತಿ ಕಾಶ್ಮೀರಿ ರಾಜಸ್ಥಾನ ಈ ಭಾಷೆಗಳ ಒಂದೊಂದು ಕತೆ ಇವೆ. ಇಲ್ಲಿನ ಬಹುಪಾಲು ಕಥೆಗಳನ್ನು ಸಂಗ್ರಹಿಸಿದವರು ಹಾಗೂ ಭಾಷಾಂತರಿಸಿದವರು ವಿದ್ಯಾರ್ಥಿಗಳು ಎಂಬ ನಮೂದುಗಳು ಇವೆ.

೧೨. ಅತಿಯಾಸೆ ಗತಿಕೇಡು

ಲೇ: ಶಿವರಾಮು ಕಾಡನಕುಪ್ಪೆ; ಪ್ರ: ನಭಶ್ರೀ ಪ್ರಕಾಶನ, ಸರಸ್ವತಿಪುರ, ಮೈಸೂರು–೫೭೦ ೦೦೯; ಮೊ.ಮು: ೧೯೭೮; ಪು ೨೧; ಕ್ರೌನ್ ೧/೮

ಇಂಗ್ಲಿಷ್ ಕತೆಯೊಂದರ ರೂಪಾಂತರ.

೧೩. ಅಡವಿ ಚೆಂಚರ ಸಂಸ್ಕೃತಿ

ಲೇ: ಪ್ರಹ್ಲಾದ ಬೆಟಗೇರಿ; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು – ೫೬೦೦೦೨; ಮೊ.ಮು: ೧೯೯೩; ಪು: ೪೪+೧೭೬ = ೨೨೦; ಕ್ರೌನ್ ೧/೮

ಐದು ಅಧ್ಯಾಯಗಳಿವೆ: ೧.ಹಿನ್ನೆಲೆ ೨.ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ ೩.ಭಾಷೆ–ಸಾಹಿತ್ಯ ೪.ಆಚರಣೆಗಳು ೫.ಧಾರ್ಮಿಕ ಆಚರಣೆ ಮತ್ತು ಕಲೆ. ಅನುಬಂಧದಲ್ಲಿ ಅಡವಿ ಚೆಂಚರ ಸಾಹಿತ್ಯವನ್ನು ನೀಡಲಾಗಿದೆ: ೧.ಪಿಂಪಳಾದೇವಿ ಪುರಾಣ ೨.ಖೋಡಿಯಾರ್ ದೇವಿ ಪುರಾಣ ೩.ಇಕೋತಿ ದೇವಿ ಪುರಾಣ: ಇದು ಕಾವ್ಯರೂಪದಲ್ಲಿದೆ ೪.ಭುಜಿಂಗರಾವ್ ಪುರಾಣ ೫.ಕಾಣ್‌ಮೋಲ್ಯೊ ಪುರಾಣ ೬.ಕಥೆಗಳು: ಗೊಂಬಿ ಕಥೆ, ಬಡಿಗೇರವನ ಕಥೆ, ನರಿಬುದ್ಧಿ, ಫಕ್ಕೀರ್‌ಸಾಬ್. ಬರಗೂರು ರಾಮಚಂದ್ರಪ್ಪ ಅವರ ಸಂಸ್ಕೃತಿ–ಉಪಸಂಸ್ಕೃತಿ ಎಂಬ ಪ್ರಸ್ತಾವನೆ ಇದೆ. ಕೊನೆಯಲ್ಲಿ ಕೆಲವು ಫೋಟೋಗಳಿವೆ.

೧೪. ಅಡವಿಗುಮಾರ ಮತ್ತು ಇತರ ಜನಪದ ಕಥೆಗಳು

ಸಂ: ಮೈಲಹಳ್ಳಿ ರೇವಣ್ಣ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು: : ೧೯೮೫; ಪು: ೨೭+೨೮೬ = ೩೧೩; ಡಿಮ್ಮೆ ೧/೮

೫೩ ಕಥೆಗಳಿವೆ: ೧.ಅಡವಿ ಗುಮಾರ ೨.ನಾಯಿಮಕ್ಳು ೩.ರಾಮ್ಣ ಲಚ್ಮಣ್ಣ ೪.ಪಂಥ ಗೆದ್ದ ಮಡದಿ ೫.ಕಾಡುಸಿದ್ದೇಶ್ವರ ೬.ನಾಗೇಂದ್ರನ ಮಗಳು ೭.ತಳವಾರ್ನ ಮಗ್ಳು ೮.ಕುಲ್ಡು ಕುಂಬಾರ್ತಿ ೯.ದಿರ್ಭೆವು ಲಕ್ಷ್ಮಿ ೧೦.ಬರಗಾಲದ ಬಳ್ಳಾರಿ ೧೧.ಅಣ್ಣ ತಂಗಿ ೧೨.ಮಾತಾಡಿದ ಮಂಚ ೧೩.ಇಲಿಗಳು ತಂದ ಮಾಣಿಕ್ಯದ ಹರಳು ೧೪.ಸುರ್ಳಿ ಕತೆ ೧೫.ಕಥೆಗಳು ಹೇಳಿದ ಕತೆ ೧೬.ಹೇನವ್ವನ ಸಾವು ೧೭.ಕನಸು ತಂದ ಕುಮಾರ ೧೮.ಅಸ್ನಾವತಿ ಉಂಗ್ರ ೧೯.ಗೆದ್ದ ರಾಜ ೨೦.ಕಾಳಿಂಗರಾಜ ೨೧.ಹೊಂಬಾಳೆ ನಾಗಲೇತಿ ಕುಮಾರ ೨೨.ಮಳೆರಾಯನ ಮದುವೆ ೨೩.ಹುಲಿರಾಜನ ಕಥೆ ೨೬.ಕಳ್ಳರನ್ನು ಗೆದ್ದ ಜಾಣೆ ೨೭.ಅಕ್ತಂಗೇರಪಾನು ೧೮.ಸೌದೆ ತಿಮ್ಮ ೧೯.ಪಂಚಾತ್ಗೆ ಹಾಲಣ್ಣ ೩೦.ಮಾತಾಡಿದ ಗೊಂಬೆಗಳು ೩೧.ಬುದ್ಧಿವಂತ ಮಗ ೩೨.ಮಗ್ಳುಗಂಡ ೩೩.ಕೋಣರಸು ೩೪.ಸಾಲಗಾರ ಶೆಟ್ಟಿ ೩೫.ಕಿವುಡರ ಕಥೆ ೩೬.ಗುದ್ಲಿ ಗುರುಬಸವಣ್ಣ ೩೭.ಗಂಡ ಹೆಂಡತಿ ೩೮.ತಂದದ್ದು ತಿಂದದ್ದು ೩೯.ಹೊರೆದುವ್ವಿನ ಸೀರೆ ೪೦.ಅಯ್ಯದೊಣ್ಣೆ ೪೧.ಸೋಜಿಗದ ಮಾತು ೪೨.ವಿಭೂತಿ ಪುಣ್ಯ ೪೩.ಚೆನ್ನಿಗನಂಥ ಅಳಿಯ ೪೪.ದಾನ ಧರ್ಮ ೪೫.ಮಗುವನ್ನು ಕೊಂದ ತಾಯಿ ೪೬.ಕತ್ತೆ ಆದಳು ಅತ್ತೆ ೪೭.ಮಂಗಣ್ಣಗೆ ದಕ್ಕದ ಹೆಣ್ಣು ೪೮.ಮಂಗಣ್ಣ ಕೊಟ್ಟ ಹೆಣ್ಣು ೪೯.ಸಾಯದ ಗುಬ್ಬಿ ೫೦.ಕಾಗವ್ವ ಗುಬ್ಬವ್ವ ೫೧.ಕೋತಿ ಕಥೆ ೫೨.ಸರ್ಪನ ಸೂಳೆ ೫೩.ಕರಕಾಯೊ ಸಣ್ಣ. ಎಚ್.ತಿಪ್ಪೇರುದ್ರಸ್ವಾಮಿ ಅವರ ಮುನ್ನುಡಿ, ಜೀ.ಶಂ. ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಕೊನೆಯಲ್ಲಿ ಅರ್ಥಕೋಶ ಸಂಗ್ರಹವಿವರ ಇವೆ.

೧೫. ಅಡಿವೆಪ್ಪ ಒಡೆಯರು ಹಾಡಿದ ಮಾಳಿಂಗರಾಯನ ಕಾವ್ಯ

ಸಂ: ಗಂಗಾಧರ ದೈವಜ್ಞ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು: ೧೯೯೯; ಪು: ೧೨+೫೦+೨೦೪=೨೬೬; ಡಿಮ್ಮೈ ೧/೮

೫೩ ಕಥೆಗಳಿವೆ: ೧.ಅಡ ಸ್ತುತಿ ಪದ್ಯ, ಮಂಗಳಾರತಿಗಳನ್ನುಳಿದು ಐದು ಅಧ್ಯಾಯಗಳಿವೆ: ಮಾಳಿಂಗರಾಯ ಕಾವ್ಯ, ಐಕ್ಯದ ನಂತರದ ಪವಾಡಗಳು, ಮಾಳಪ್ಪನ ಮೊಮ್ಮಗ ಬರಗಾಲಿ ಸಿದ್ಧನ ಪವಾಡ, ಕಂಬಳಿ ಕುರಿತು, ಅರಿವು. ದೇಸಿಯೊಳ್ ಪುಗುವುದು ಎಂಬ ಎಂ.ಎಂ. ಕಲಬುರ್ಗಿ ಅವರ ಮುನ್ನುಡಿ, ಹಿ.ಚಿ.ಬೋರಲಿಂಗಯ್ಯ ಅವರ ಬುಡಕಟ್ಟು ಮಹಾಕಾವ್ಯ ಮಾಲೆಯನ್ನು ಕುರಿತು, ಪ್ರವೇಶ, ಮಾಳಿಂಗರಾಯನ ಕಥೆ, ಕೆಲವು ಫೋಟೋಗಳು, ಅನುಬಂಧದಲ್ಲಿ, ಅಡಿವೆಪ್ಪ ಒಡೆಯರೊಂದಿಗೆ ಗಂಗಾಧರ ದೈವಜ್ಞ ಅವರು ನಡೆಸಿದ ಸಂದರ್ಶನ, ಅರ್ಥಕೋಶ ಇವೆ.

೧೬. ಅಣ್ಣ ತಂಗಿ ಮತ್ತು ಇತರ ಜನಪದ ಕಥೆಗಳು

ಸಂ: ಎಂ.ಲೀಲಾ ರಾಮಣ್ಣ; ಪ್ರ: ದಖನ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ೭೪, ಜೆ.ಸಿ.ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು: ೧೯೮೨; ಪು: ೯೨; ಕ್ರೌನ್ ೧/೮

ಒಂಬತ್ತು ಕತೆಗಳಿವೆ: ೧.ದಿಬ್ಬಗನ್ನೇರು ೨.ಕತ್ತೆ ಚಿಕ್ಕ ೩.ಅಣ್ಣ ತಂಗಿ ಕಥೆ ೪.ಕಡಬಂದ

ಕಡಬಂದ ೫.ಕೊತ ಕೊತ ಕುಂಬಾತಿ ೬.ದೇಶದತ್ತ ತೇಜರಾಜ ೭.ದೇವೇಂದ್ರ ೮.ಆಲೋಚ್ನ ೯.ಮೀನು

೧೭. ಅಧಿಕಾರದ ಕುರುಡು

ಸಂ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧; ಮೊ.ಮು: ೨೦೦೯; ಪು: ೧೨೦; ಕ್ರೌನ್ ೧/೮

ಮಧ್ಯಕಾಲೀನ ಭಾರತದ ಜನಪದ ಕಥೆಗಳು ಎಂಬ ಅಡಿಬರಹ ಇದೆ. ೩೬ ಕಥೆಗಳಿವೆ: ೧.ಕಳ್ಳರ ಸಂಚಿನ ಬಲೆಗೆ ಬಿದ್ದ ಬ್ರಾಹ್ಮಣ ೨.ಮೋಸಕ್ಕೆ ತಕ್ಕ ಮೋಸ ೩.ಸುತ್ತುವರಿದವರೇ ನಿರ್ಧಾರಕರು ೪.ಸಾಮಂತನ ಫಲಿಸದ ಕುತಂತ್ರ ೫.ಆಪ್ತರ ಮಾತು ಕೇಳುವುದು ಸೂಕ್ತ ೬.ಮೋಸ ಹೋದ ಮೀನುಗಳು ೭.ಉಪಾಯದಿಂದ ಅಪಾಯ ನಿವಾರಣೆ ೮.ಮಗನನ್ನು ಬಲಿಕೊಡಲೂ ಹಿಂಜರಿಯದ ರಾಜನಿಷ್ಠೆ ೯.ಬುದ್ಧಿ ಇದ್ದವರು ಬದುಕುತ್ತಾರೆ ೧೦.ಶರಣಾಗತ ರಕ್ಷಕ ಶಿಬಿ ಚಕ್ರವರ್ತಿ ೧೧.ಸೀಮಿತವೇ ಸರ್ವಸ್ವವೆಂಬ ಭಾವನೆಯ ಬಕಪಕ್ಷಿ ೧೨.ಪ್ರಾಣ ರಕ್ಷಕ ದೈವ ಭಕ್ತಿ ೧೩.ಬಕನ ಸತ್ಕಾರ ಅದರ ಇರವಿಗೇ ಸಂಚಕಾರ ೧೪.ಆತ್ಮ ಸ್ಥೈರ್ಯವೇ ಜಯದ ಸೆಲೆ ೧೫.ಸಹವಾಸಕ್ಕೆ ತಕ್ಕಂತೆ ಚಾರಿತ್ರ್ಯವರ್ಧನೆ ೧೬.ಬುದ್ಧಿಶಕ್ತಿ ಇದ್ದರೆ ಬರಿಗೈಯಲ್ಲೂ ಬಂಗಾರ ತುಂಬುತ್ತೆ ೧೭.ಮತಿ ಹೀನ ವಿದ್ವಾಂಸರ ಮಾತ್ಸರ್ಯ-ಈರ್ಷ್ಯೆ ೧೮.ಮೋಸಕ್ಕೂ ಮಿತಿ ಬೇಡವೇ? ೧೯.ಬಾಲ ಕತ್ತರಿಸುವ ಬೇತಾಳ ೨೦.ತರ್ಕ ತಿಳಿಯದ ಎತ್ತು ೨೧.ವಾದಿಯೇ ಪ್ರತಿವಾದಿಗೆ ಸಾಕ್ಷಿಯಾದಾಗ ೨೨.ರಾಜನಿತ್ತ ತರ್ಕಬದ್ಧ ತೀರ್ಪು ೨೩.ದುರಾಸೆಗೆ ದೊರೆತ ಪ್ರತಿಫಲ ೨೪.ಮುಂಗೋಪಿಯ ನ್ಯಾಯ ನಿರ್ವಹಣೆ ೨೫.ಅನ್ಯಾಯ ಪಟ್ಟಣದಲ್ಲಿ ನ್ಯಾಯಕ್ಕೆ ಬೆಲೆಯುಂಟೆ? ೨೬.ಕಣ್ಣು ಮೂಗುಗಳ ಪೈಪೋಟಿ ೨೭.ಹೊರಗಣ್ಣಿಗಿಂತ ಒಳಗಣ್ಣು ಮುಖ್ಯ ೨೮.ಹೆಣ ಹೊರುವವನ ಹಣದಾಸೆ ೨೯.ಭಾಷೆಯ ಭಿನ್ನಾರ್ಥ ತಂದ ಬವಣೆ ೩೦.ಮುಗ್ಧೆಯರ ಮೌಢ್ಯ ೩೧.ಕೈಗಷ್ಟೇ ಅಲ್ಲ ಕಾಲಿಗೂ ಕೆಲಸ ಕೊಡುವ ಲಿಪಿಕಾರ ೩೨.ವಕೀಲನ ಸಮಯೋಚಿತ ಸಲಹೆ ೩೩.ಅಧಿಕಾರದ ಕುರುಡು ೩೪.ಆಶ್ರಯದಾತನನ್ನೇ ಆಚೆಗೆ ತಳ್ಳಲು ಹವಣಿಸಿದ ಹಂದಿ ೩೫.ಹಗಲುಗನಸಿನ ವ್ಯಾಪಾರಿ ೩೬.ಮಗುವಿನ ಉದ್ಧಾರ. ಗ್ರಂಥದ ಒಳಗೆ ಅಲ್ಲಲ್ಲಿ ರೇಖಾಚಿತ್ರಗಳಿವೆ.

೧೮. ಅನುಸಂಧಾನ

ಲೇ: ಕೆ.ಕಮಲಾಕ್ಷ; ಪ್ರ: ರಾಜ್ ಪ್ರಕಾಶನ, ೮೩, ಕೆ.ಎಸ್.ಆರ್.ಟಿ.ಸಿ. ಬಡಾವಣೆ, ಹನುಮಂತನಗರ, ಬನ್ನಿಮಂಟಪ, ಮೈಸೂರು-೫೭೦ ೦೧೫; ಮೊ.ಮು: ೨೦೦೪; ಪು: ೮+೧೧೨=೧೨೦; ಡಿಮ್ಮೈ೧/೮

ವಿಮರ್ಶಾತ್ಮಕ ಲೇಖನಗಳು ಎಂಬ ಅಡಿಬರಹ ಇದೆ. ೧೩ ಲೇಖನಗಳ ಈ ಸಂಕಲನದಲ್ಲಿ ಜಾನಪದಕ್ಕೆ ಸಂಬಂಧಿಸಿದ ನಾಲ್ಕು ಲೇಖನಗಳಿವೆ: ೧.ದಕ್ಷಿಣ ಕನ್ನಡದ

ಕೆಲವು ಕಲಾ ಪ್ರಕಾರಗಳು ೨.ಒಂದು ಅಪೂರ್ವ ಯಕ್ಷಗಾನ ಪ್ರಸಂಗ–ಆಟದೊಳಗಣ ಆಟ ೩.ಯಕ್ಷಗಾನ ಅಭಿನಯ ೪.ದೈವಾರಾಧನೆಯಲ್ಲಿ ವೈದಿಕ ಅವೈದಿಕ ಸಂಘರ್ಷ

೧೯. ಅಪರಾಳ ತಮ್ಮಣ್ಣಕೃತ ಶ್ರೀಕೃಷ್ಣಪಾರಿಜಾತ

ಸಂ: ಆರ್.ಜಿ.ಕುಲಕರ್ಣಿ; 'ಅರಕೇರಿ' ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೊ.ಮು: ೧೯೭೨; ಪು: ೧೬+೩೧೪=೩೩೦; ಡೆಮ್ಮೈ೧/೮

ರಾಗತಾಳ ಸಹಿತದ ೧೬೨ ಪು: ಗಳಷ್ಟು ದೀರ್ಘವಾದ ಯಕ್ಷಗಾನ ಕಾವ್ಯ. ಪುರುಷ ಪಾತ್ರ ಹಾಗೂ ಸ್ತ್ರೀಪಾತ್ರಗಳ ಪ್ರತ್ಯೇಕ ಪಟ್ಟಿಗಳಿವೆ. ಹಿಮ್ಮೇಳ ಮುಮ್ಮೇಳದವರನ್ನೂ ಇತರ ಸಹಾಯಕ ಪಾತ್ರಗಳನ್ನೂ ನಮೂದಿಸಲಾಗಿದೆ. ೧೧೪ ಪುಗಳಷ್ಟು ವಿಸ್ತಾರವಾದ ಪ್ರಸ್ತಾವನೆ ಇದೆ. ಎರಡು ವರ್ಣ ಕಲಾಕೃತಿಗಳಿವೆ. ಆರು ಅನುಬಂಧಗಳಿವೆ ೧.ಶ್ರೀಕೃಷ್ಣ ಪಾರಿಜಾತ: ಪೂರ್ವ ರಂಗ ೨.ಹಾಡುಗಳ ಅಕ್ಷರಾನುಕ್ರಮಣಿಕೆ ೩.ಶ್ರೀಕೃಷ್ಣ ಪಾರಿಜಾತದಲ್ಲಿ ಪ್ರಯುಕ್ತವಾದ ಗಾದೆಗಳು ೪.ನಾಟಕದಲ್ಲಿ ಪ್ರಯುಕ್ತವಾದ ಅಲಂಕಾರ ಹಾಗೂ ಶೃಂಗಾರ ಸಾಧನಗಳು ೫.ಪಾರಿಜಾತದಲ್ಲಿ ಪ್ರಯುಕ್ತ ಗ್ರಾಮ ಹಾಗೂ ಗ್ರಾಮದೈವಗಳು ೬.ವಿವಿಧ ಛಂದ (ಪದ ಪದ್ಯ ಜಾತಿ)ಗಳ ವಿವರಣೆ. ಹಾ.ಮಾ.ನಾಯಕ ಅವರ ಮುನ್ನುಡಿ ಇದೆ.

೨೦. ಅಪೂರ್ವ ರತ್ನ

ಲೇ: ಪಿ.ಕೆ. ರಾಜಶೇಖರ; ಪ್ರ: ಸಂವಹನ, ೧೨/೧ಎ, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ; ಮೈಸೂರು–೫೭೦ ೦೦೧; ಮೊ.ಮು: ೨೦೦೬; ಪು: ೮; ಕ್ರೌನ್ ೧/೪

ಸರಳ ಭಾಷೆಯಲ್ಲಿ ನಿರೂಪಿತವಾಗಿರುವ ಒಂದು ಜನಪದ ಕಥೆ. ರೇಖಾಚಿತ್ರಗಳಿವೆ.

೨೧. ಅಬೆ ದುಬೋ ಅ

ಲೇ: ಬಿ.ಎಸ್.ತಲ್ವಾಡಿ; ಪ್ರ: ಕರ್ನಾಟಕ ಜಾನಪದ ಪರಿಷತ್ತು, ೧, ಜಲದರ್ಶಿನಿ ಬಡಾವಣೆ, ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪; ಮೊ.ಮು: ೨೦೦೮; ಪು: ೩೨; ಕ್ರೌನ್೧/೮

ವ್ಯಕ್ತಿ ಪರಿಚಯ ಎಂಬ ಅಡಿಬರಹ ಇದೆ. Abbe Jean Aneoine Dubois ಎಂಬುದು ಶೀರ್ಷಿಕೆಯ ಇಂಗ್ಲಿಷ್ ಮೂಲರೂಪ. ಶ್ರೀರಂಗಪಟ್ಟಣದಲ್ಲಿ ದುಬೋಅ, ಕೃತಿಗಳು, ಮುಂತಾದ ಒಳಶೀರ್ಷಿಕೆಗಳಿವೆ. ಜಿ.ನಾರಾಯಣ ಅವರ ಅಧ್ಯಕ್ಷರ ಮಾತು ಎಂಬ ಮುನ್ನುಡಿ ಇದೆ.

೨೨. ಅಬ್ಬಗ ದಾರಗ

ಲೇ: ಕೆ.ಜೆ.ಶೆಟ್ಟಿ ಕಡಂದಲೆ; ಪ್ರ: ನವಶಕ್ತಿ ಪ್ರಕಾಶನ, ಕಡಂದಲೆ, ದಕ; ಮೊ.ಮು: ೧೯೭೮;

ಪು: ೬+೪೦=೪೬; ಕ್ರೌನ್೧/೮

ತುಳು ಪಾಡ್ದನದ ಕಥೆ ಎಂಬ ಅಡಿಬರಹ ಇದೆ. ಒಳ ಶೀರ್ಷಿಕೆಗಳು ಹೀಗಿವೆ: ೧.ಸೊನ್ನೆಯ ಜನನ ೨.ಕಾನಬೆಟ್ಟಿನಲ್ಲಿ ಸೊನ್ನೆ ೩.ಮರದ ಮರೆಯಲ್ಲಿ ಮಗು ೪.ಸೊನ್ನೆಗೆ ಮಾನಭಂಗ ೫.ಹರಕೆಯ ಫಲ–ಅಬ್ಬಗ–ದಾರಗರ ಜನನ ೬.ಮದುವೆಯ ಕರೆಗೆ ಕಾಯಿ ಮಹೂರ್ತ ೭.ಅಬ್ಬಗ ದಾರಗರ ಚನ್ನೆಯಾಟ ೮.ಸೊನ್ನೆ ಮಾರ್ಲರು ಹಿಂದಿರುಗಿದಾಗ. ಕು.ಶಿ.ಹರಿದಾಸಭಟ್ಟ ಅವರ ಮುನ್ನುಡಿ ಇದೆ.

೨೩. ಅಬ್ಬರ ತಾಳ

ಲೇ: ತುದಿಯಡ್ಕ ವಿಷ್ಣ್ವಯ್ಯ; ಪ್ರ: ಬೆಳಕು ಪ್ರಕಾಶನ, ಸುಳ್ಯ (ದ.ಕ.)–೫೭೪ ೨೩೯; ಮೊ.ಮು: ೧೯೯೭; ಪು: ೯೮; ಡಿಮ್ಮೈ ೧/೮

ಯಕ್ಷಗಾನದ ಕುರಿತ ಲೇಖನಗಳ ಸಂಗ್ರಹ ಎಂಬ ಅಡಿಬರಹ ಇದೆ. ಒಂಬತ್ತು ಲೇಖನಗಳಿವೆ: ೧.ಭರತನಾಟ್ಯಶಾಸ್ತ್ರ ಮತ್ತು ಯಕ್ಷಗಾನ ಬಯಲಾಟ ೨.ಭರತನು ಹೇಳುವ ಭಾರತೀವೃತ್ತಿ ಮತ್ತು ತಾಳಮದ್ದಳೆ ೩.ಕುರುಗೋಡು ಶಾಸನದ ತಾಳಮದ್ದಳೆ ಮತ್ತು ಕನಕದಾಸನ ನಳಚರಿತ್ರೆಯ ತಾಳಮದ್ದಳೆ ೪.ಯಕ್ಷಗಾನದ ಅರ್ಥಗಾರಿಕೆ ೫.ಯಕ್ಷಗಾನ ವಸ್ತು ವಿವೇಚನೆ ೬.ಯಕ್ಷಗಾನದಲ್ಲಿ ಸಂಗೀತದ ಅಭಿವ್ಯಕ್ತಿ ಮತ್ತು ತಂತ್ರ ೭.ಯಕ್ಷಗಾನದ ಅಭಿನಯ ೮.ಕುಕ್ಕೂಕೋ–ಕೊಕೋಕೋ ೯.ತಾಳಮದ್ದಳೆ

೨೪. ಅಭಿಮನ್ಯು

ಸಂ: ಎನ್.ಆರ್.ನಾಯಕ ಪ್ರ: ಜಾನಪದ ಪ್ರಕಾಶನ, ಹೊನ್ನಾವರ, ಉತ್ತರಕನ್ನಡ; ಮೊ.ಮು: ೨೦೦೩; ಪು: ೧೨೮; ಡಿಮ್ಮೈ ೧/೮

ಖಂಡಕಾವ್ಯ ಎಂಬ ಅಡಿಬರಹ ಇದೆ. ಸಂಪಾದಕರ ಪ್ರಸ್ತಾವನೆ ಇದೆ. ಕಠಿಣ ಶಬ್ದಗಳಿಗೆ ಆಯಾ ಪು: ದಲ್ಲೇ ಅರ್ಥ ನೀಡಲಾಗಿದೆ.

೨೫. ಅಭಿವಂದನಾ

ಸಂ: ಹೆಚ್.ಕೆ. ಸಿದ್ಧಗಂಗಯ್ಯ, ಪಂಡಿತ ಭೋಗನಂಜಪ್ಪ; ಪ್ರ: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಶ್ರೀ ಆದಿಚುಂಚನಗಿರಿ ಕ್ಷೇತ್ರ, ಮಂಡ್ಯ ಜಿಲ್ಲೆ; ಮೊ.ಮು: ೧೯೯೬; ಪು: ೩೨+೩೨+೬೬೪=೭೨೮; ಡಿಮ್ಮೈ ೧/೮

ಶ್ರೀ ಬಾಲಗಂಗಾಧರನಾಥ ಸ್ವಾಮಿಗಳಿಗೆ ಅರ್ಪಿಸಿದ ಅಭಿನಂದನ ಗ್ರಂಥವಿದು. ಇದರಲ್ಲಿ ಜಾನಪದಕ್ಕೆ ಸಂಬಂಧಿಸಿದ ಎರಡು ಲೇಖನಗಳಿವೆ: ೧ಮಜಾತ್ರೆಗಳು–ಜನಪದ ಕಲೆಗಳು– ಗೊ.ರು. ಚನ್ನಬಸಪ್ಪ ೨.ಜನಪದ ಗೀತೆಗಳಲ್ಲಿ ತೌರಿನ ಚಿತ್ರಣ – ಬೈರಮಂಗಲ ರಾಮೇಗೌಡ.

೨೬. ಅಮರ ಜಾನಪದ

ಲೇ: ಬಸವರಾಜ ಪೋಲಿಸ ಪಾಟೀಲ; ಪ್ರ: ಅಮರ ಪ್ರಕಾಶನ, ೩ನೇ ಹಂತ, ಎಲ್.ಐ.ಜಿ., ೧೭೫, ಬಡೇಪುರ ಕಾಲನಿ, ಯೂನಿವರ್ಸಿಟಿ ರಸ್ತೆ, ಗುಲ್ಬರ್ಗ–೫೮೫ ೧೦೫; ಮೊ.ಮು: ೨೦೦೪; ಪು: ೮+೧೨೦=೧೨೮; ಡಿಮ್ಮೈ ೧/೮

ಒಂಬತ್ತು ಲೇಖನಗಳ ಸಂಕಲನ: ೧.ಜನಪದ ಧಾರ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆ ೨.ಜನಪದ ಕಥೆಗಳು–ಒಂದು ಅವಲೋಕನ ೩.ಹೈದ್ರಾಬಾದ ಕರ್ನಾಟಕದ ಲಾವಣಿ ಸಾಹಿತ್ಯ ೪.ಸಂಸ್ಕೃತಿ–ಜನಪದ ಸಂಸ್ಕೃತಿ ೫.ಕಲಬುರಗಿ ಜಿಲ್ಲೆಯ ಜನಪದ ಸಾಹಿತ್ಯ–ಒಂದು ಮುನ್ನೋಟ ೬.ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ–ಒಂದು ಸಮೀಕ್ಷೆ ೭.ಹೈದ್ರಾಬಾದ ಕರ್ನಾಟಕ ತತ್ವಪದ ಸಾಹಿತ್ಯ ೮.ಜನಪದದಲ್ಲಿ ರಜಾಕಾರರ ದುರಂತ ಚಿತ್ರಣ ೯.ಜನಪದ ಸಮ್ಮೇಳನಾಧ್ಯಕ್ಷರ ಭಾಷಣ.

೨೭. ಅಮೃತಕಾವಲು

ಸಂ: ಸಂಪಾದಕ ಮಂಡಳಿ: ೧೩ ಹೆಸರುಗಳಿವೆ; ಪ್ರ: ಕೀರ್ತನ್ ಗ್ರಾಫಿಕ್ಸ್, ಮೈಸೂರು; ಮೊ.ಮು: ೨೦೧೦; ಪು: ೨೩೬; ಡಿಮ್ಮೈ ೧/೮

ಪಿರಿಯಾಪಟ್ಟಣ ತಾಲ್ಲೂಕು ಮಾಹಿತಿ ಕೋಶ ಎಂಬ ಅಡಿಬರಹ ಇದೆ. ಹತ್ತು ಅಧ್ಯಾಯಗಳಿರುವ ಈ ಗ್ರಂಥದಲ್ಲಿ 'ಕಲೆ ಮತ್ತು ಸಂಸ್ಕೃತಿ' ಎಂಬ ಅಧ್ಯಾಯವೂ ಒಂದು. ಈ ಅಧ್ಯಾಯದಲ್ಲಿ ಜನಪದ ಕಲೆಗಳು ಎಂಬ ಒಂದು ಲೇಖನ ಇದೆ.

೨೮. ಅಮೋಘಸಿದ್ಧ ಪರಂಪರೆ

ಲೇ: ಚನ್ನಪ್ಪ ಕಟ್ಟಿ; ಪ್ರ: ಪ್ರಸಾರಾಂಗ, ವಚನ ಪಿತಾಮಹ ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ಬಿ.ಎಲ್.ಡಿ.ಶಿಕ್ಷಣ ಸಂಸ್ಥೆ, ವಿಜಾಪುರ; ಮೊ.ಮು: ೨೦೧೨; ಪು: ೧೮+೨೯೪=೩೧೨; ಡಿಮ್ಮೈ೧/೮

ಪಿಎಚ್.ಡಿ. ಮಹಾಪ್ರಬಂಧ. ಆರು ಅಧ್ಯಾಯಗಳಿವೆ: ೧.ಉದ್ದೇಶ, ವ್ಯಾಪ್ತಿ, ಸ್ವರೂಪ, ಆಕರ ೨.ಕಾಲ–ದೇಶ–ಪಂಥ–ಪ್ರಭಾವ ೩.ವಿಜಾಪುರ ಪರಿಸರದ ಒಡೆಯರ ಪಂಗಡಗಳು ಹಾಗೂ ಅಮೋಘಸಿದ್ಧನ ಪರಿವಾರ ೪.ಜಾತ್ರೆ–ಉತ್ಸವಗಳು, ನಂಬಿಕೆ–ಆಚರಣೆಗಳು ೫.ಒಡೆಯರ ಸಾಹಿತ್ಯ: ಉಗಾಳಿಕೆ, ಹರಕೆ ಮತ್ತು ಹೇಳಿಕೆ ೬.ಫಲಿತಗಳು ಸಾಧ್ಯತೆಗಳು. ಅನುಬಂಧದಲ್ಲಿ, ಹರಕೆಯ ಹಾಡುಗಳು, ಆರತಿ ಪದ, ವಕ್ತೃಗಳ ವಿವರ ಹಾಗೂ ಫೋಟೋಗಳಿವೆ.

೨೯. ಅಯ್ಯನ ಕೆರೆ

ಲೇ: ಪಿ.ಎನ್.ರುದ್ರಪ್ಪ; ಪ್ರ: ಜಗಜ್ಯೋತಿ ಪ್ರಕಾಶನ, ೫೯, ೨ನೇ ಮೈನ್, ೨ನೇ ಹಂತ,

ಕುಮಾರಸ್ವಾಮಿ ಲೇಔಟ್, ಬೆಂಗಳೂರು–೭೮; ಮೊ.ಮು: ೧೯೯೬; ಪು: ೮+೭೬=೮೪; ಕ್ರೌನ್ ೧/೮

ಜಾನಪದ ನೃತ್ಯರೂಪಕ ಎಂಬ ಅಡಿಬರಹ ಇದೆ. "ಚಾರಿತ್ರಿಕ ಮತ್ತು ಜಾನಪದ ಘಟನೆಗಳನ್ನೊಳಗೊಂಡ ಅಯ್ಯನಕೆರೆ ಜಾನಪದ ನೃತ್ಯ ನಾಟಕ"ವು ನಡುನಡುವೆ ಜನಪದ ಗೀತೆಗಳನ್ನು ಒಳಗೊಂಡಿದೆ.

೩೦. ಅರಣ್ಯ ಕುಮಾರ

ಸಂ: ಬಸವರಾಜ್ ನೆಲ್ಲಿಸರ; ಪ್ರ: ಯಕ್ಷ ಪ್ರಕಾಶನ, ಮೈಸೂರು; ಮೊ.ಮು: ೧೯೭೮; ಪು: ೦೮+೮೪=೯೨; ಕ್ರೌನ್ ೧/೮

ಚೌಡಿಕೆ ಸಂಪ್ರದಾಯದ ಹಿರೇನಲ್ಲೂರು ಗೋವಿಂದಯ್ಯ ಎಂಬ ಕಲಾವಿದನಿಂದ ಸಂಗ್ರಹಿಸಲ್ಪಟ್ಟ ಕಾವ್ಯ, ಗದ್ಯ ಪದ್ಯ ಸಂಭಾಷಣೆ ಉಪಕಥೆ–ಇವು ಈ ಕಾವ್ಯದಲ್ಲಿವೆ. ೧೩ ಪು: ಗಳ ಪ್ರಸ್ತಾವನೆ ಇದೆ. ಕಾವ್ಯ ಪ್ರಾರಂಭವಾಗುವ ಮುಂಚೆ ಕಥಾ ಸಾರಾಂಶವನ್ನು ನೀಡಲಾಗಿದೆ. ಚೌಡಿಕೆ ಮೇಳದ ಚಿತ್ರ ಇದೆ.

೩೧. ಅರ್ಥಸಹಿತ ಗಾದೆ ಮಾತುಗಳು

ಲೇ: ಜ್ಯೋತಿ ಹರ್ಲಾಪುರ; ಪ್ರ: ಪಾರು ಪ್ರಕಾಶನ, ಸ್ಟೇಶನ್ ರೋಡ್, ಗದಗ; ಮೊದಲ ಐದು ಮುದ್ರಣಗಳ ನಮೂದು ಇಲ್ಲ, ಆರನೆಯ ಮು: ೨೦೦೧; ಪು: ೯೬; ಕ್ರೌನ್೧/೮

೧೦೯ ಗಾದೆಗಳು ಮತ್ತು ವಿವರಣೆ. ಕೊನೆಯಲ್ಲಿ, ಗಾದೆಗಳ ನುಡಿಕಟ್ಟು ಎಂಬ ಭಾಗದಲ್ಲಿ ಗಾದೆಗಳನ್ನು ಕುರಿತ ಗಾದೆಗಳೂ, ಗಾದೆಗಳ ಬಗ್ಗೆ ಇರುವ ವಿವರಣೆಗಳೂ ಇವೆ. ಇವುಗಳ ಸಂಖ್ಯೆ ೧೦೧.ಕೊನೆಯ ಅನ್ಯ ಗಾದೆಗಳ ಅಪಾರ ಸಂಗ್ರಹ ಎಂಬ ಭಾಗದಲ್ಲಿ ೧೦೧ ಗಾದೆಗಳಿವೆ.

೩೨. ಅರ್ಥಸಹಿತ ಯಕ್ಷಗಾನ ಅಂಗದ ಸಂಧಾನ

ಅರ್ಥಲೇಖಕರು: ಹಂಡೆ ಶ್ರೀಪಾದದಾಸರು; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು: ೧೯೫೨; ಪು: ೪+೯೬=೧೦೦; ಕ್ರೌನ್ ೧/೮

ರಾಗ ತಾಳ ಛಂದೋಸಹಿತದ ಕಾವ್ಯ. ಪ್ರತಿಯೊಂದು ಪದ್ಯದ ಕೊನೆಯಲ್ಲೂ ಅದರ ತಾತ್ಪರ್ಯ ನೀಡಲಾಗಿದೆ. ಪ್ರಕಾಶಕರ ಮುನ್ನುಡಿ, ಪಾತ್ರಗಳ ವಿವರ, ಇವೆ.

೩೩. ಅರ್ಥಸಹಿತ ಯಕ್ಷಗಾನ ಚೂಡಾಮಣಿ ಪ್ರಸಂಗ

ಅರ್ಥಲೇಖಕರು: ಮಲ್ಪೆ ಶಂಕರನಾರಾಯಣ ಸಾಮಗ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ

ಗ್ರಂಥಾಲಯ, ಉಡುಪಿ; ಮೊ.ಮು: ೧೯೩೫; ನಾ.ಮು: ೧೯೫೩; ಪು: ೧೦೭; ಕ್ರೌನ್ ೧/೮

ರಾಗ ತಾಳ ಛಂದೋಸಹಿತದ ಯಕ್ಷಗಾನ ಕಾವ್ಯ. ಉಂಗುರ ಸಂಧಿ ಎಂಬ ಅಡಿಬರಹ ಇದೆ. ಪ್ರತಿಯೊಂದು ಪದ್ಯದ ಕೊನೆಯಲ್ಲೂ ಅದರ ತಾತ್ಪರ್ಯವನ್ನು ನೀಡಲಾಗಿದೆ. ಮೊದಲನೆಯ ಅಚ್ಚಿನ ಮುನ್ನುಡಿ, ಪಾತ್ರಗಳ ವಿವರ ಇವೆ.

೩೪. ಅರ್ಥಗಾರಿಕೆ–ಸ್ವರೂಪ ಸಮೀಕ್ಷೆ

ಸಂ: ಎಂ.ಪ್ರಭಾಕರ ಜೋಶಿ; ಪ್ರ: ಪೊಳಲಿ ಶಾಸ್ತ್ರಿ ಸ್ಮಾರಕ ಸಮಿತಿ, ಮಂಗಳೂರು–೩; ಮೊ.ಮು: ೧೯೮೧; ಪು: ೪+೭೦=೭೪; ಡಿಮ್ಮೈ ೧/೮

ಗೋಷ್ಠಿಯೊಂದರ ವಿವರಗಳು, ಪ್ರಬಂಧ ಮಂಡನೆ ಮತ್ತು ಪ್ರತಿಕ್ರಿಯೆಗಳಿವೆ. ಪ್ರಬಂಧ: ಅರ್ಥಗಾರಿಕೆ: ಒಂದು ಸ್ವರೂಪ ಸಮೀಕ್ಷೆ–ಕೆ.ಎಂ.ರಾಘವ ನಂಬಿಯಾರ್. ಪ್ರತಿಕ್ರಿಯೆಗಳು: ೧.ಅರ್ಥ, ಅಷ್ಟಾಂಗ ಸಂತುಲನ–ಪೆರ್ಲ ಕೃಷ್ಣಭಟ್ಟ ೨.ಧ್ವನಿ, ಔಚಿತ್ಯ–ಕೇಶವ ಉಚ್ಚಿಲ್ ೨.ರಹಸ್ಯಂ ಚ ಪ್ರಕಾಶಂ ಚ–ಲಕ್ಷ್ಮೀಶ ತೋಳ್ಪಾಡಿ. ಅಧ್ಯಕ್ಷ ಭಾಷಣ: ರಸ–ಆವರಣ–ಪರಿಣಾಮ–ಕೆರೆಮನೆ ಶಂಭು ಹೆಗಡೆ. ಪ್ರಶ್ನೋತ್ತರ ಇದೆ. ಸಂಪಾದಕನ ಸಮೀಕ್ಷೆ: ಗೋಷ್ಠಿ ಒಳನೋಟ, ಹೊರನೋಟ–ಎಂ. ಪ್ರಭಾಕರ ಜೋಶಿ.

೩೫. ಅವರ ನೆನೆದೇವು

ಸಂ: ಜೀ.ಶಂ. ಪರಮಶಿವಯ್ಯ; ಪ್ರ: ಶ್ರೀ ಆದಿ ಚುಂಚನಗಿರಿ ಗ್ರಂಥಮಾಲೆ, ಆದಿಚುಂಚನಗಿರಿ, ನಾಗಮಂಗಲ ತಾಲ್ಲೂಕು; ಮೊ.ಮು: ೧೯೬೦; ಪು: ೧೧೨; ಕ್ರೌನ್ ೧/೮

ಬಯಲನಾಡಿನ ಜಾನಪದ ಗೀತೆಗಳು ಎಂಬ ಅಡಿಬರಹ ಇದೆ. ೪೭ ಹಾಡುಗಳ ಸಂಕಲನ. ಆ ಪುಣ್ಯ ನೆಲೆಗಳು ಎಂಬ ಕೊನೆಯ ಲೇಖನದಲ್ಲಿ ಕೆಲವು ವ್ಯಕ್ತಿಗಳ ಹಾಗೂ ಕೆಲವು ಸ್ಥಳಗಳ ವಿವರಣೆ ಇದೆ. ಮುನ್ನುಡಿ ಮತ್ತು ಹಿನ್ನುಡಿ: ಜೀ.ಶಂ. ಪರಮಶಿವಯ್ಯ.

೩೬. ಅವರಿವರು ಹೇಳಿದ ಕಥೆಗಳು

ಸಂ: ಎಲ್.ಆರ್.ಹೆಗಡೆ; ಪ್ರ: ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಕುವೆಂಪು ನಗರ, ಬೆಂಗಳೂರು–೫೬೦ ೦೨೯; ಮೊ.ಮು: ೧೯೯೯; ಪು: ೬+೬೦=೬೬; ಡಿಮ್ಮೈ೧/೮

ಹದಿನಾಲ್ಕು ಕಥೆಗಳನ್ನೂ ನಾಲ್ಕು ಐತಿಹ್ಯಗಳನ್ನೂ ಒಳಗೊಂಡಿರುವ ಸಂಕಲನ: **ಕಥೆಗಳು:** ೧.ಗೋಪಾಲರಾಜಸ್ಥಾನ ೨.ಸಬೀರರಾಜ ೩.ಈಶ್ವರನ ವರ ೪.ರಾಜಕುಮಾರನ ಸಾಹಸ ೫.ದೊಣ್ಣೆರಾಜ ೬.ದೈವದ ಗತಿ ವಿಚಿತ್ರವಾಗಿದೆ ೭.ಮೂರ್ಖ ಹಟಮಾರಿ ಹುಡುಗ ೮.ಮಾತನಾಡುವ ಪೆಟ್ಟಿಗೆ ೯.ಚತುರ ಹುಡುಗಿ ೧೦.ಬಬ್ಬಿ ಸಾಹೇಬರ ಥಂಬು ೧೧.ನಾ

ಬರಲೇಕೆ? ೧೨.ಯಾರಿಗೆ ಸಲ್ಲುವ ಹೆಣ್ಣು ೧೩.ಅಕ್ಕಿ ಮುಕ್ಕ ತಿಮ್ಮಣ್ಣ ೧೪.ಯಾರ ತಪ್ಪು? **ಐತಿಹ್ಯಗಳು:** ೧.ನಂಬಿ ಕೆಟ್ಟವರಿಲ್ಲ ೨.ವಡ್ಡಿನ ಪಾಲು ಜಟ್ಟಿಗ ೩.ನಾನು ಬರುತ್ತೇನೆ ೪.ರಾಜೇ ಬಕ್ಷೀರ. ಹೇಳಿದವರ ಹೆಸರುಗಳನ್ನು ಆಯಾ ಕಥೆಯ ಹಾಗೂ ಆಯಾ ಐತಿಹ್ಯದ ಕೊನೆಯಲ್ಲಿ ನಮೂದಿಸಲಾಗಿದೆ.

೩೭. ಅವರು ನೀಡಿದ ದೀಪ

ಲೇ: ಕೆ.ವಿ. ಸುಬ್ಬಣ್ಣ; ಪ್ರ: ಅಕ್ಷರ ಪ್ರಕಾಶನ, ಸಾಗರ, ಶಿವಮೊಗ್ಗ; ಮೊ.ಮು: ೧೯೫೮; ಪು: ೧೬೨; ಕ್ರೌನ್ ೧/೮

ಲೇಖಕರ ಅರಿಕೆಯ ಮೊದಲ ವಾಕ್ಯವೇ ಈ ಗ್ರಂಥವನ್ನು ವಿವರಿಸುತ್ತದೆ: "ಮುಂದಿನ ಹನ್ನೆರಡು ಶೀರ್ಷಿಕೆಗಳಡಿಯಲ್ಲಿ ನಮ್ಮ ನಾಡಿನ ಗೀತ ಸಂಪ್ರದಾಯವೊಂದನ್ನು ಪರಿಚಯ ಮಾಡಿಕೊಡಲೆತ್ನಿಸಿದ್ದೇನೆ". ಗ್ರಂಥದ ಕೊನೆಯಲ್ಲಿ ಪ್ರಾದೇಶಿಕ ಶಬ್ದಕೋಶ ಇದೆ. ಮಲೆನಾಡಿನ ಅಂಟಿಗೆ ಪಂಟಿಗೆ ಸಂಪ್ರದಾಯವನ್ನೂ ಅದಕ್ಕೆ ಸಂಬಂಧಿಸಿದ ಹಾಡುಗಳನ್ನೂ ಬಳಸಿಕೊಂಡು ರೂಪಗೊಂಡಿರುವ ಲೇಖನಗಳಿವೆ.

೩೮. ಅವ್ವಣೆವ್ವ ಕಾವ್ಯ

ಸಂ: ತಾರಿಹಳ್ಳಿ ಹನುಮಂತಪ್ಪ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು: ೨೦೦೪, ಪು: ೧೦+೧೩೬=೧೪೬; ಡೆಮ್ಮಿ ೧/೮

"ಕಾವ್ಯವು ಅವ್ವಣೆವ್ವನ ಹುಟ್ಟು, ಮದುವೆ, ಗಂಡನ ಸಾವು ಮತ್ತೆ ಮರುಮದುವೆ ಹೀಗೆ ಹಲವಾರು ಅಂಶಗಳನ್ನೊಳಗೊಂಡಿರುವ ಸುದೀರ್ಘವಾದ ಈ ಕಾವ್ಯ ಕನ್ನಡದ ಜನಪದ ಕಾವ್ಯಗಳಲ್ಲಿ ಒಂದು" ಎಂಬುದಾಗಿ ಪ್ರಸ್ತಾವನೆಯಲ್ಲಿ ಹೇಳಲಾಗಿದೆ. ಅಂತರ್ಜಾತಿಯ ಹಾಗೂ ಮರುಮದುವೆಯ ಪ್ರಸಂಗಗಳನ್ನು ಈ ಕಾವ್ಯವು ಒಳಗೊಂಡಿದೆ. ಮಹಾಭಾರತದ ಪಾತ್ರಗಳಿವೆ. ಪರಿವಿಡಿ ಹೀಗಿದೆ: ೧.ಪ್ರಸ್ತಾವನೆ ೨.ಪ್ರಾರ್ಥನೆ ೩.ಅವ್ವಣೆವ್ವ ಕಾವ್ಯ ೪.ಮಂಗಳಾರತಿ ಹಾಡು. ಅನುಬಂಧದಲ್ಲಿ, ಗೌರಿ ಮಕ್ಕಳ ಹಬ್ಬ, ಕಲಾವಿದರ ವಿವರಗಳು, ಪದಕೋಶ, ಇವೆ.

೩೯. ಅವ್ವ ನಿನ್ನ ದನಿ ಅಪರಂಜಿ

ಎಂಟು ಅಧ್ಯಾಯಗಳಿವೆ: ೧.ಕುಮಾರವ್ಯಾಸ ಮತ್ತು ಜಾನಪದ ೨.ಜಾನಪದ ಕಾವ್ಯ ಮತ್ತು ಶಿಷ್ಟ ಕಾವ್ಯ ಸ್ವರೂಪ ೩.ಕುಮಾರವ್ಯಾಸ ಭಾರತದ ಕಥೆಗಳಲ್ಲಿ ಜಾನಪದೀಯಾಂಶಗಳು ೪.ಜಾನಪದೀಯ ನಂಬಿಕೆ, ಆಚರಣೆಗಳು ೫.ಜ್ಯೋತಿಷ ೬.ವೀಳೆಯ ಪದ್ಧತಿ ೭.ಕಲೆ ಮತ್ತು ವೃತ್ತಿಗಳಲ್ಲಿ ಜಾನಪದಾಂಶಗಳು ೮.ಕುಮಾರವ್ಯಾಸನ ಭಾಷೆ-ಶೈಲಿ

೩೭೩. ಕುತೂಹಲಕರ ಒಗಟುಗಳು

ಸಂ: ಕೆ. ಇಂದುಮತಿ; ಪ್ರ: ಸಂತೋಷ್ ಪಬ್ಲಿಕೇಷನ್ಸ್, ೩೦, ಬಿನ್ನಿ ಬಡಾವಣೆ, ಮೊದಲನೇ ಮುಖ್ಯ ರಸ್ತೆ, ವಿಜಯನಗರ, ೨ನೇ ಹಂತ, ಬೆಂಗಳೂರು-೫೬೦೦೪೦; ಮೊ.ಮು: ೧೯೯೯; ಪು: ೮೫; ಕ್ರೌನ್ ೧/೪

೬೮೬ ಒಗಟುಗಳ ಸಂಕಲನ

೩೭೪. ಕುರುಡ ಮತ್ತು ಗೂನ

ಅನುವಾದ ಮತ್ತು ಆಯ್ಕೆ: ಡಿ.ಎನ್.ಶ್ರೀನಾಥ್; ಪ್ರ: ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ರೈಲ್ವೆ ಪ್ಯಾರಲಲ್ ರೋಡ್, ಕುಮಾರ ಪಾರ್ಕ್ ಈಸ್ಟ್, ಬೆಂಗಳೂರು-೫೬೦ ೦೦೧; ಮೊ.ಮು: ೧೯೯೧, ಎ.ಮು: ನಮೂದಿ ಇಲ್ಲ, ಮು.ಮು: ೧೯೯೪; ಪು: ೪+೪೦=೪೪; ಕ್ರೌನ್ ೧/೮

ಮಕ್ಕಳಿಗಾಗಿ ಆರು ಜಾನಪದ ಕಥೆಗಳು ಎಂಬ ಅಡಿಬರಹ ಇದೆ. ೧.ಕಜ್ಜಾಯದ ಮರ (ಬಂಗಾಳ) ೨.ಗೆದ್ದ ಗುಬ್ಬಚ್ಚಿ (ರಾಜಸ್ತಾನ) ೩.ಚಾಡಿಖೋರನ ಚಮತ್ಕಾರ (ಪಂಜಾಬ್) ೪.ಕಳ್ಳನನ್ನೇ ಮಂಕು ಮಾಡಿದ ಪ್ರಾಣಿಗಳು (ಅರುಣಾಚಲ ಪ್ರದೇಶ) ೫.ಕುರುಡ ಮತ್ತು ಗೂನ (ಅಸ್ಸಾಮ್) ೬.ಪಕ್ಷಿಯ ಕಾಳು (ನೇಪಾಳ)

೩೭೫. ಕುರುಬ ಜನಪದ

ಸಂ: ಚನ್ನಪ್ಪ ಕಟ್ಟಿ, ಆರ್.ಎಸ್. ವಾಡೇದ; ಪ್ರ: ಕನಕ ಜಯಂತ್ಯುತ್ಸವ ಸಮಿತಿ, ಸಿಂದಗಿ, ಬಿಜಾಪುರ ಜಿಲ್ಲೆ; ಮೊ.ಮು: ೧೯೯೭; ೮+೧೨೦; ಡಿಮ್ಮೈ ೧/೮

ವಿವಿಧ ಲೇಖಕರು ಬರೆದಿರುವ ಹನ್ನೊಂದು ಲೇಖನಗಳಿವೆ: ೧.ಕುರುಬ ಜನಾಂಗದ ಐತಿಹಾಸಿಕ ಹಿನ್ನೆಲೆ-ಎಚ್.ಜೆ.ಲಕ್ಕಪ್ಪಗೌಡ ೨.ಕುರುಬ ಜನಾಂಗದ ಆರಾಧ್ಯ ದೇವತೆಗಳು-

ಎನ್.ಎಂ.ಅಂಬಲಿಯವರ ೩.ಕುರುಬ ಜನಾಂಗದ ಮತಾಚರಣೆಗಳು–ಎಚ್.ಬಿ.ಯಲಬುರ್ಗಿ ೪.ಬಸವಯುಗದ ಗೋಲಗೇರಿಯ ಗೊಲ್ಲಾಳ–ಎಸ್.ಸಿ.ಪಾಟೀಲ ೫.ದಾಸಶ್ರೇಷ್ಠ ಕನಕದಾಸರು–ಎ.ಆರ್.ಹೆಗ್ಗನದೊಡ್ಡಿ ೬.ಕನಕದಾಸರ ಕಾವ್ಯದರ್ಶನ–ಸರೋಜ ಇಟ್ಟಣ್ಣನವರ ೭.ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಪ್ರಜ್ಞೆ–ನಾಗೇಶ ರಾಂಪೂರ ೮.ಡೊಳ್ಳಿನ ಹಾಡು–ಶ್ರೀರಾಮ ಇಟ್ಟಣ್ಣನವರ ೯.ಡೊಳ್ಳು ಕಲೆ–ಮೇಳ–ನಿಂಗಣ್ಣ ಸಣ್ಣಕ್ಕಿ ೧೦.ಕುರುಬರ ರ್‍ವಾಣಗಳು–ಎಸ್.ಎಫ್.ಜಕಬಾಳ ೧೧.ಒಡೆಯರ ಹೇಳಿಕೆಗಳು–ಎಂ.ಎಂ.ಪಡಶೆಟ್ಟಿ

೩೭೬. ಕುರುಬರ ಹೆಜ್ಜೆಗಳು ಒಂದು ಅಧ್ಯಯನ

ಲೇ: ಚಂದ್ರಕಾಂತ ಬಿಜ್ಜರಗಿ: ಪ್ರ: ಶೈಲಚಂದ್ರ ಪ್ರಕಾಶನ,ವಿಜಾಪುರ; ಮೊ.ಮು: ೨೦೦೬; ಪು: ೨೦+೧೬=೪೦೮=೪೪೪; ಡಿಮ್ಮೈ ೧/೮

ಒಂಬತ್ತು ಅಧ್ಯಾಯಗಳನ್ನು ಒಳಗೊಂಡ ಗ್ರಂಥ: **ಅಧ್ಯಾಯ ಒಂದು:** ೧.ಅಧಯ್ಯನದ ಉದ್ದೇಶ ೨.ಅಧ್ಯಯನದ ಸ್ವರೂಪ ೩.ಸಂಸ್ಕೃತಿ ೪.ಹಾಲುಮತ ಧರ್ಮ. **ಅಧ್ಯಾಯ ಎರಡು:** ಕುರುಬರ ಹೆಜ್ಜೆಗಳು. **ಅಧ್ಯಾಯ ಮೂರು:** ಆದಿದೇವತೆಗಳು: ೧.ಬ್ರಹ್ಮ ೨.ಶಿವಶಂಕರ ಲಿಂಗ ೩.ಶ್ರೀರಾಮ ೪.ಶ್ರೀಕೃಷ್ಣ ೫.ಮಾರುತಿ (ಹನುಮ) ೬.ಬೀರಪ್ಪ – ವೀರಪ್ಪ ೭.ಮೈಲಾರ ಮಲ್ಲಯ್ಯ ೮.ವೀರಭದ್ರ ೯.ವಿರುಪಾಕ್ಷ ೧೦.ಶ್ರೀಶೈಲ ಮಲ್ಲಿಕಾರ್ಜುನ ೧೧.ಪಾಂಡುರಂಗ ವಿಠ್ಠಲ ೧೨.ತಿರುಪತಿ ವೆಂಕಟೇಶ ೧೩.ಬನಶಂಕರಿ–ಮರಗಮ್ಮ ೧೪.ಹುಲಿಜಂತಿ ಮಾಳಿಂಗರಾಯ ೧೫.ಬಾಬಾ(ಸಿದ್ಧ)ಬುಡನಗಿರಿ. **ಅಧ್ಯಾಯ ನಾಲ್ಕು:** ೧.ಕುಲ–ಗೋತ್ರ–ಬೆಡಗುಗಳು ೨.ಭಾರತದಲ್ಲಿ ಕುರುಬರು ೩.ಭಾರತೀಯ ಭಾಷೆಗಳಲ್ಲಿ ಹೆಸರಿಸಲ್ಪಡುವ ಕುರುಬರು ೪.ಪಶುಪಾಲಕರ ಪ್ರಾಚೀನ ನಾವುಗಳು ೫.ಕುರುಬರ ಬೆಡಗುಗಳು ೬.ಮಹಾರಾಷ್ಟ್ರ ಕುರುಬರ ಬೆಡಗುಗಳ ೭.ಇನ್ನುಳಿದ ಬೆಡಗು–ಕುಳಿ–ಕುಲಗಳು ೮.ಉತ್ತರ ಭಾರತದ ಗೋತ್ರ–ಬೆಡಗು ೧೧.ಗಡ್ಡಿಗಳ ಗೋತ್ರ–ಬೆಡಗುಗಳು ೧೨.ಗಡ್ಡಿ ಬ್ರಾಹ್ಮಣರ ಗೋತ್ರ –ಬೆಡಗುಗಳು ೧೩.ಗಡ್ಡಿ ರಜಪೂತರು ೧೪.ರಜಪೂತರ ಗೋತ್ರ –ಬೆಡಗುಗಳು ೧೫.ಗಡ್ಡಿರತಿಗಳ ಗೋತ್ರ–ಬೆಡಗುಗಳು ೧೬.ಗಡ್ಡಿ ಸಿಪ್ಪಿಗಳ ಗೋತ್ರ–ಬೆಡಗುಗಳು ೧೭.ಮಧ್ಯ ಮತ್ತು ಪಶ್ಚಿಮ ಭಾರತದ ಗೋತ್ರ–ಬೆಡಗು ೧೮.ಮಧ್ಯಪ್ರದೇಶದ ಒಳಪ್ರದೇಶದ ಗೋತ್ರಗಳು. **ಅಧ್ಯಾಯ ಐದು:** ಉಣ್ಣೆ ಕಂಕಣ–ಹತ್ತಿ ಕಂಕಣ. **ಅಧ್ಯಾಯ ಆರು:** ಕುರುಬರಿಂದ ಕವಲೊಡೆದ ಜಾತಿಗಳು: ೧.ಆದಿ ಬಣಜಿಗರು ೨.ಜೈನರು ೩.ಕ್ಷತ್ರಿಯರು ೪.ಹಂಡೆ(ವಜೀರ) ಕುರುಬರು ೫.ಮರಾಠರು ೬.ರಡ್ಡಿಗಳು ೭.ಜಾಡರು ೮.ಒಕ್ಕಲಿಗರು ೯.ಲಾಳಗೊಂಡರು. **ಅಧ್ಯಾಯ ಏಳು:** ಪ್ರಸಿದ್ಧ ಕುರುಬ ಕುಲಪುರುಷರು: ೧.ಕುರುಬ ಕುಲೋತ್ತಮ ಬಸವಣ್ಣ ೨.ಛತ್ರಪತಿ ಶಿವಾಜಿ ೩.ಶ್ರೀ ರೇವಣಸಿದ್ಧರು ೪.ಶ್ರೀಸಿದ್ಧರಾಮ ೫.ಶ್ರೀ ಅಮೋಘಸಿದ್ಧರು. **ಅಧ್ಯಾಯ ಎಂಟು:** ಕುರುಬ ಮೂಲದ ರಾಜಮನೆತನಗಳು: ೧.ಕೌರವ–ಪಾಂಡವರು ೨.ನಂದ ಮತ್ತು ಮೌರ್ಯರು ೩.ಶಾತವಾಹನರು ೪.ಪಲ್ಲವರು ೫.ಕದಂಬರು ೬.ಗಂಗರು ೭.ಬಾದಾಮಿ

ಚಾಲುಕ್ಯರು ೮.ರಾಷ್ಟ್ರಕೂಟರು ೯.ಕಲ್ಯಾಣ ಚಾಲುಕ್ಯರು ೧೦.ನೊಳಂಬರು ೧೧.ಹೊಯ್ಸಳರು ೧೨.ಸೇವಣ(ದೇವಗಿರಿ) ಯಾದವರು ೧೩.ಕಲಚೂರ್‍ಯರು ೧೪.ಇಂದೂರ ಹೋಳ್ಕರ ೧೫.ಹೆಗ್ಗಡದೇವನಕೋಟೆ ಅರಸರು ೧೬.ಜಿಂಜಿ ಮತ್ತು ಕೃಷ್ಣಗಿರಿಯ ರಾಜರು ೧೭.ವಿಜಯನಗರ ಅರಸರು ೧೮.ಸುರುಪುರದ ನಾಯಕರು ೧೯.ಬೂದಿಹಾಳು ಪಾಳೆಗಾರರು ೨೦.ಬಡೋದೆಯ ಗಾಯಕವಾಡರು ೨೧.ಪಾಲರಾಜ ಮನೆತನಗಳು ೨೨.ಮಾಂಡು ಮತ್ತು ಮಗಧ ಅರಸರು ೨೩.ಕೊಲ್ಲಾಪೂರದ ಶಿಲಾಹಾರರು ೨೪.ಚಾವುಂಡರಾಯ. **ಅಧ್ಯಾಯ ಒಂಬತ್ತು:** ಕುರುಬರ ಮುಂದಿನ ಹೆಜ್ಜೆಗಳು: ೧.ಜನಸಂಖ್ಯೆ ೨.ಶೀಲ–ಮಡಿ–ಮೈಲಿಗೆ ೩.ಡೊಳ್ಳುವಾದ್ಯದ ಮಹತ್ವ ೪.ರಾಜಕೀಯದಲ್ಲಿ ಸಮಾಜ ಪಾತ್ರ ೫.ದುಶ್ಚಟಗಳಿಂದ ದೂರವಿರಿ ೬.ದೇವರ ಹೆಸರಿನಲ್ಲಿ ನಡೆಯುವ ದುಶ್ಚಟಗಳನ್ನು ವಿರೋಧಿಸಿ. ಎಚ್.ಜೆ.ಲಕ್ಕಪ್ಪಗೌಡರ ಮುನ್ನುಡಿ, ಸುಧಾಕರ ಅವರ ಗೆಜ್ಜೆ ಕಾಲಿನ ಹೆಜ್ಜೆವಾದ ಎಂಬ ಬರಹ (ಅಭಿಪ್ರಾಯ), ಇವೆ.

೩೭೭. ಕುಲಗೋಡ ತಮ್ಮಣ್ಣ ಕೃತ ಶ್ರೀಕೃಷ್ಣ ಪಾರಿಜಾತ ಬಯಲಾಟ

ಸಂ: ಎಂ.ಎಸ್. ಸುಂಕಾಪುರ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು. ೧೯೭೨; ಪು: ४+೨೮+೧೩೬=೧೬೮; ಡಿಮ್ಮೈ ೧/೮

೧೪ ಅಧ್ಯಾಯಗಳನ್ನುಳ್ಳ ಬಯಲಾಟ. ಆರ್. ಸಿ. ಹಿರೇಮಠ ಅವರ ಮುನ್ನುಡಿ. ೨೭ ಪುಟಗಳ ಸಂಪಾದಕರ ಪ್ರಸ್ತಾವನೆ.

೩೭೮. ಕುಲ್ಡ–ಕುಂಟ ಕೆಪ್ಪ–ಜಾಣರ ಜನಪದ ಕಥೆಗಳು

ಸಂ: ಜೀನಹಳ್ಳಿ ಸಿದ್ಧಲಿಂಗಪ್ಪ; ಪ್ರ: ಪ್ರೇಮ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ಶಿವಮೊಗ್ಗ ಜಿಲ್ಲೆ – ೫೭೭ ೨೨೩, ಮೊ.ಮು. ನಮೂದು ಇಲ್ಲ, ಎ.ಮು. ೧೯೯೧; ಪು: ೮೦, ಕ್ರೌನ್ ೧/೮

೨೧ ಕಥೆಗಳ ಸಂಕಲನ. ಕಥೆಯೊಳಗೆ ಕಣ್ಣು ಹಾಯಿಸುವ ಮುನ್ನ ಎಂಬ ಸಂಪಾದಕರ ಮಾತು, ಅನುಬಂಧದಲ್ಲಿ ಕಥೆಗಾರರ ಪರಿಚಯ ಇವೆ.

೩೭೯. ಕೂಡುಕಟ್ಟು

ಲೇ: ಪುರುಷೋತ್ತಮ ಬಿಳಿಮಲೆ; ಪ್ರ: ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ; ಮೊ.ಮು: ೧೯೯೭; ಪು: ೬+೨೪೮=೨೫೪; ಡಿಮ್ಮೈ೧/೮

ಹದಿನೈದು ಲೇಖನಗಳ ಸಂಕಲನ: ೧.ಮೈಲಾರ: ಮದುವೆ, ವಾಸ್ತು, ಜಾತ್ರೆ ಮತ್ತು ಚರಿತ್ರೆ ೨.ಬೊಜ್ಜ: ಸಾವಿನ ಸಾಂಕೇತಿಕ ಪ್ರತಿನಿಧೀಕರಣ ೩.ಪಂಚಭೂತ ಪರಿಕಲ್ಪನೆ: ಜಾನಪದದಲ್ಲಿ ೪.ಸಾಂಸ್ಕೃತಿಕ ಅನನ್ಯತೆ: ಹುಡುಕಾಟದ ಸಮಸ್ಯೆಗಳು ೫.ಜನಪದ ಸಾಹಿತ್ಯ: ಚರಿತ್ರೆ, ಪುರಾಣ, ಮನಸ್ಸು ೬.ಕರ್ನಾಟಕ ಜಾನಪದ: ಲೋಕದೃಷ್ಟಿಯ ಪರಿಶೀಲನೆ ೭.ಅರಣ್ಯ ಜಾನಪದ: ಪರಿಕಲ್ಪನೆಯ ಕುರಿತ ಚರ್ಚೆ ಪರಿಶೀಲನೆ ೮.ಯಕ್ಷಗಾನ:

ಪ್ರದರ್ಶನ ವಿಶ್ಲೇಷಣೆ ೯.ಜನಪದ ಆಟ: ರಚನೀಕರಣ ಮತ್ತು ಪ್ರದರ್ಶನ ೧೦.ಜಾನಪದ ದಾಖಲಾತಿ: ಕೆಲವು ಅನುಮಾನಗಳು ೧೧.ಜಾನಪದ: ಸಂವಹನ ಮಾದರಿಗಳು ೧೨.ಜಾನಪದ: ವೈಜ್ಞಾನಿಕ ವಿಶ್ಲೇಷಣೆ ೧೩.ಜನ ಸಂಸ್ಕೃತಿ: ಸಂಘರ್ಷ ಮತ್ತು ಸಮನ್ವಯ ೧೪.ಜನಪದ ಕತೆ: ನಾಗಮಂಡಲದ ಅಭ್ಯಾಸ ೧೫.ಮಹಿಳಾ ಜಾನಪದ: ಮಹಿಳಾ ಶಕ್ತಿಮೂಲಗಳ ಶೋಧ. ಕೆಲವು ಫೋಟೋಗಳು, ರೇಖಾಚಿತ್ರಗಳು, ಇವೆ.

೩೮೦. ಕೂಡ್ಲು ಮೇಳ

ಲೇ: ಬಾ. ಸಾಮಗ ಮಲ್ಪೆ; ಪ್ರ: ತುಳುನಾಡ್ ಪ್ರಗತಿ ಪ್ರಕಾಶನಾಲಯ, ಮಲ್ಪೆ-೫೭೬ ೧೧೮; ದಕ್ಷಿಣ ಕನ್ನಡ; ಮೊ.ಮು.೧೯೮೦; ಪು: ೨೨; ಡಿಮ್ಮೈ ೧/೮

ಕುತ್ಯಾಳ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮೇಳ-ಕೂಡ್ಲು ಎಂಬ ಅಡಿಬರಹ ಇದೆ. ಮೇಳದ ಸಂಕ್ಷಿಪ್ತ ಸಮಗ್ರ ಪರಿಚಯ ಉಳ್ಳ ಗ್ರಂಥ. ಕೆಲವು ಫೋಟೋಗಳಿವೆ.

೩೮೧. ಕೂಸಾಯ್ತು ನಮ್ಮ ಕೊಮರಾಗೆ

ಸಂ: ಎನ್.ಆರ್. ನಾಯಕ್; ಪ್ರ: ಕನ್ನಡ ಸಾಹಿತ್ಯ ಪರಿಷತ್ತು,, ಚಾಮರಾಜಪೇಟೆ, ಬೆಂಗಳೂರು-೧೮; ಮೊ.ಮು: ೧೯೮೧; ಪು: ೮+೨೮=೮೬; ಡಿಮ್ಮೈ ೧/೮

ಮದುವೆಯ ಹಾಡುಗಳ ಸಂಗ್ರಹ ಎಂಬ ಅಡಿಬರಹ ಇದೆ. ಒಂಬತ್ತು ಬಗೆಯ ಮದುವೆಯ ಹಾಡುಗಳಿವೆ: ೧.ನಾಡವರ ಮದುವೆಯ ಹಾಡುಗಳು ೨.ಹವ್ಯಕರ ಮದುವೆಯ ಹಾಡುಗಳು ೩.ನಾಮಧಾರಿಯವರ ಮದುವೆಯ ಹಾಡುಗಳು ೪.ಗಾಮೊಕ್ಕಲಿಗರ ಮದುವೆಯ ಹಾಡುಗಳು ೫.ಹಾಲಕ್ಕಿ ಒಕ್ಕಲಿಗರ ಮದುವೆಯ ನಾಡುಗಳು ೬.ನಾಮಧಾರಿ ಮದುವೆಯ ಹಾಡುಗಳು ೭.ತೆಂಗಿನ ದೀವರ ಮದುವೆಯ ಹಾಡುಗಳು. ೮.ಅಂಬಿಗರ ಮದುವೆಯ ಹಾಡುಗಳು ೯.ಹರಕಂತ್ರರ ಮದುವೆಯ ಹಾಡುಗಳು. ಹಂಪ ನಾಗರಾಜಯ್ಯ ಅವರ ಮುನ್ನುಡಿ, ಸಂಪಾದಕರ ೪೫ ಪುಟಗಳಷ್ಟು ಧೀರ್ಘವಾದ ಪೀಠಿಕೆ, ಕೊನೆಯಲ್ಲಿ ಶಬ್ದಾರ್ಥಕೋಶ, ಇವೆ.

೩೮೨. ಕೃಷಿ ಗಾದೆಗಳು

ಲೇ: ಎಂ.ಎ. ನಾರಾಯಣರೆಡ್ಡಿ, ಪಿ. ನಾರಾಯಣಸ್ವಾಮಿ; ಪ್ರ: ನವ ಕರ್ನಾಟಕ ಪ್ರಕಾಶನ; ಮೊ.ಮು.೧೯೯೭; ಪು: ೧೨೦; ಕ್ರೌನ್ ೧/೮

ವಿವರಿಸಲ್ಪಟ್ಟ ೪೯೭ ಗಾದೆಗಳ ಸಂಕಲನ.

೩೮೩. ಕೃಷಿ ಜಾನಪದ

ಲೇ: ಎಂ. ಎನ್.ವಾಲಿ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು-೫೬೦ ೦೧೮; ಮೊ.ಮು: ೨೦೦೬; ಪು: ೮+೧೨೦=೧೨೮; ಡಿಮ್ಮೈ ೧/೮

ಎಂಟು ಲೇಖನಗಳ ಸಂಕಲನ: ೧.ಭೂಮಿತಾಯಿ ೨.ಮಳೆಗಾಳಿ ೩.ಪಶು ಸಂಪತ್ತು ೪.ಕೃಷಿ ಉಪಕರಣಗಳು ೫.ಸುಗ್ಗಿಯ ಸೊಬಗು ೬.ರೈತನ ನಂಬಿಗೆ-ಸಂಪ್ರದಾಯಗಳು ೭.ಕೃಷಿಕರ ತತ್ವ ಸಿದ್ಧಾಂತಳು ೮.ಜಾನಪದ ಸಂಸ್ಕತಿ. ಅನುಬಂಧದಲ್ಲಿ ಐದು ಕಾವ್ಯಗಳಿವೆ: ೧.ಅಧ್ಯಾತ್ಮ ಕೃಷಿ ೨.ಹೊಸಾ ಹೊಲ ಮಾಡಬೇಕು ೩.ತತ್ವ ಪದ ೪.ಬಿತ್ತುವ ಶಕುನ ೫.ಮೇದರ ಕೇತಯ್ಯನ ಹಂತಿಯ ಹಾಡು.

೩೮೪. ಕೃಷಿ ಜಾನಪದ ಮತ್ತು ಮಹಿಳೆ

ಲೇ: ಸುಮಂಗಲಾ ಅತ್ತಿಗೇರಿ; ಪ್ರ: ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು-೫೬೦೦೦೨; ಮೊ.ಮು: ೨೦೧೦; ಪು: ೧೬+೨೨೪=೨೪೦; ಡೆಮ್ಮಿ ೧/೮

ಪಿಎಚ್.ಡಿ. ಮಹಾಪ್ರಬಂಧ. ಎಂಟು ಅಧ್ಯಾಯಗಳಿವೆ **ಅಧ್ಯಾಯ ಒಂದು:** ಅಧ್ಯಯನ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ: ೧.ಪ್ರಸ್ತಾವನೆ ೨.ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ ೩.ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ೪.ಅಧ್ಯಯನದ ಪರಿಕಲ್ಪನೆಗಳು ೫.ಅಧ್ಯಯನದ ಸ್ವರೂಪ. **ಅಧ್ಯಾಯ ಎರಡು:** ಹಾವೇರಿ ಜಿಲ್ಲೆ: ಒಂದು ಪರಿಚಯಾತ್ಮಕ ನೋಟ: ೧.ಜಿಲ್ಲೆಯ ಚಾರಿತ್ರಿಕ ನೋಟ ೨.ಜಿಲ್ಲೆಯ ಭೌಗೋಳಿಕ ಹಿನ್ನೆಲೆ ೩.ಜಿಲ್ಲೆಯ ಹವಾಮಾನ ಮತ್ತು ಮಳೆಗೆ ಸಂಬಂಧಿಸಿದ ವಿವರ ೪.ಜಿಲ್ಲೆಯ ಜನಸಂಖ್ಯೆ ಮತ್ತು ಜನಸಾಂದ್ರತೆ ೫.ಜಿಲ್ಲೆಯ ಪ್ರಮುಖ ಉದ್ಯೋಗ ೬.ಜಿಲ್ಲೆಯ ಭೂಹಿಡುವಳಿ ಮತ್ತು ಹಿಡುವಳಿದಾರರ ವಿವರ ೭.ಜಿಲ್ಲೆಯ ಪ್ರಮುಖ ಬೆಳೆಗಳು ೮.ಜಿಲ್ಲೆಯ ಆದಾಯ ಮೂಲಗಳು ೯.ಜಿಲ್ಲೆಯ ಆಡಳಿತಾತ್ಮಕ ವಿವರಗಳು ೧೦.ಜಿಲ್ಲೆಯ ಶೈಕ್ಷಣಿಕ ವಿವರಗಳು ೧೧.ಜಿಲ್ಲೆಯ ಇತರೆ ವಿವರಗಳು. **ಅಧ್ಯಾಯ ಮೂರು:** ಕೃಷಿ ಹುಟ್ಟು ಬೆಳವಣಿಗೆ ಮತ್ತು ಮಹಿಳೆ: ೧.ಕೃಷಿಗೆ ಮಹಿಳೆಯ ಕೊಡುಗೆ ೨.ಕೃಷಿಯ ಆರಂಭಿಕ ಹಂತದಲ್ಲಿ ಮಹಿಳೆಯ ಸ್ಥಾನಮಾನಗಳು ೩.ಕೃಷಿಯಲ್ಲಿ ಪುರುಷನ ಪ್ರವೇಶದ ನಂತರದಲ್ಲಾದ ಬದಲಾವಣೆಗಳು. **ಅಧ್ಯಾಯ ನಾಲ್ಕು:** ಭೂಮಿ ಮತ್ತು ಹೆಣ್ಣಿನ ಸಮೀಕರಣ: ೧.ಭೂಮಿಯನ್ನು ಹೆಣ್ಣಾಗಿ ಪರಿಭಾವಿಸುವ ಕ್ರಮ ೨.ಹೆಣ್ಣನ್ನು ಭುಮಿಯಂತೆ ಪರಿಭಾವಿಸುವ ಕ್ರಮ. **ಅಧ್ಯಾಯ ಐದು:** ಕೃಷಿ ಸಂಬಂಧಿ ನಂಬಿಕೆ-ಆಚರಣೆಗಳು ಮತ್ತು ಮಹಿಳೆ: ೧.ಸ್ತ್ರೀತ್ವದ ಬಗೆಗಿನ ಕೃಷಿಕರ ಪರಿಭಾವನೆ ೨.ಕೃಷಿ ಆಚರಣೆಗಳ ಹಿಂದಿರುವ ಆದಿಮ ಪ್ರವೃತ್ತಿ ೩.ಕೃಷಿಯ ಸಾಂಸ್ಕೃತಿಕ ಸ್ಥಿತ್ಯಂತರಗಳು. **ಅಧ್ಯಾಯ ಆರು:** ಕೃಷಿ ಸಂಬಂಧಿ ಜನಪದ ಸಾಹಿತ್ಯ ಮತ್ತು ಮಹಿಳೆ: ೧.ಕೃಷಿ ಸಂಬಂಧಿ ಜನಪದ ಸಾಹಿತ್ಯದ ಸ್ವರೂಪ ೨.ಕೃಷಿ ಸಂಬಂಧಿ ಜನಪದ ಸಾಹಿತ್ಯದಲ್ಲಿ ಮಹಿಳೆ. **ಅಧ್ಯಾಯ ಏಳು:** ಕೃಷಿ, ಮಹಿಳೆ ಮತ್ತು ಸಮಕಾಲೀನತೆ: ೧.ವರ್ತಮಾನದ ಕೃಷಿಯಲ್ಲಿ ಮಹಿಳೆ: ಅ.ಮನೆಯ ಒಳಗೆ ಮಹಿಳೆಯ ಪಾಲುದಾರಿಕೆ ಮತ್ತು ಸ್ಥಾನಮಾನ ಆ.ಮನೆಯ ಹೊರಗೆ ಮಹಿಳೆಯ ಪಾಲುದಾರಿಕೆ ಮತ್ತು ಸ್ಥಾನಮಾನ ೨.ಆಧುನಿಕತೆ: ಕೃಷಿ ಮತ್ತು ಮಹಿಳೆ: ಅ.ಆಧುನಿಕತೆಯಿಂದ ಕೃಷಿ ಮತ್ತು ಕೃಷಿ ಅವಲಂಬಿತ ಮಹಿಳಾ ದುಡಿಮೆಗಾರರ

ಮೇಲಾದ ಪರಿಣಾಮ ಆ.ಆಧುನಿಕತೆಯಿಮದ ಪಾರಂಪರಿಕ ಕೃಷಿ ಜ್ಞಾನ ಮತ್ತು ಕೃಷಿ ಸಾಂಸ್ಕೃತಿಕ ಪರಸರದಲ್ಲಾದ ಪರಿಣಾಮ. **ಅಧ್ಯಾಯ ಎಂಟು:** ಸಮಾರೋಪ

೩೮೫. ಕೃಷ್ಣ ಕಥಾ ಪ್ರಸಂಗಗಳು

ಸಂ: ಆರ್.ವಿ.ಭಂಡಾರಿ; ಪ್ರ: ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-೫೬೦೦೦೨; ಮೊ.ಮು: ೨೦೦೬; ಪು: ೮೯+೪೯೨=೫೮೧; ಡಿಮ್ಮೆ ೧/೮

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆಯ ೧೯ನೆಯ ಸಂಪುಟ ಹತ್ತು ಪ್ರಸಂಗಗಳಿವೆ, ಕವಿಗಳ ಸಹಿತ: ೧.ಕೃಷ್ಣ ಚರಿತೆ-ಪಾರ್ತಿಸುಬ್ಬ ೨.ಯಾದವಾಭ್ಯುದಯ-ಪೆರಡಾಲ ಕೃಷ್ಣಯ್ಯ ೩.ರುಕ್ಮಿಣೀ ಸ್ವಯಂವರ-ಅಜ್ಞಾತ ಕವಿ, ಸಂಗ್ರಹ: ಕೆ.ಸುಬ್ಬರಾವ್ ೪.ಶ್ರೀಕೃಷ್ಣ ವಿವಾಹ-ಹಲಸಿನಹಳ್ಳಿ ನರಸಿಂಹಶಾಸ್ತ್ರಿ ೫.ಜಾಂಬವತೀ ಕಲ್ಯಾಣ ಮತ್ತು ಸತ್ಯಭಾಮಾ ಪರಿಣಯ -ಚೋರಾಡಿ ವೆಂಕಟರಮಣ ಭಟ್ಟ ೬.ಪಾರಿಜಾತ ಪ್ರಸಂಗ-ಅಜಪುರದ ಸುಬ್ಬ ೭.ರತಿಜನ್ಮ-ನಗಿರೆ ಸುಬ್ರಹ್ಮಣ್ಯ ೮.ಬಾಣಾಸುರ ಕಾಳಗ-ವಿಷ್ಣುವರಂಬಳ್ಳಿ ನಾಶ್ವಮೇಧ-ರಾಜಗೋಪಾಲಾಚಾರ್ಯ. ಬಿ.ಎಸ್. ಯಡಿಯೂರಪ್ಪ ಅವರ ಶುಭನುಡಿ, ಗೊ.ರು. ಚನ್ನಬಸಪ್ಪ ಅವರ ಅಧ್ಯಕ್ಷರ ನುಡಿ, ಹಿ.ಶಿ.ರಾಮಚಂದ್ರೇಗೌಡ ಅವರ ಪೂರ್ವಾಪರ ಎಂಬ ಅಧ್ಯಕ್ಷರ ಮಾತು, ಸಂಪಾದಕರ ಕವಿ ಪರಿಚಯ, ಕಥಾ ಸಾರಾಂಶ ಇವೆ.

೩೮೬. ಕೃಷ್ಣಗೊಲ್ಲರ ಕಥನ ಕಾವ್ಯಗಳು

ಸಂ: ಕೆ.ಎಂ. ಮೈತ್ರಿ; ಪ್ರ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ; ಮೊ.ಮು.: ೨೦೦೦; ಪು: ೧೨+೩೪೮ = ೩೬೦; ಡಿಮ್ಮೆ ೧/೮

ಎಂಟು ಕಥನಕಾವ್ಯಗಳ ಹಾಗೂ ಏಳು ಮದುವೆ ಪದಗಳ ಸಂಕಲನ. ಕಥನಕಾವ್ಯಗಳು: ೧.ಎತ್ತಯ್ಯನ ಕಾವ್ಯ ೨.ಚಿತ್ತಯ್ಯನ ಕಾವ್ಯ ೩.ಈರಣ್ಣನ ಕಾವ್ಯ ೪.ನಿಂಗಣ್ಣನ ಕಾವ್ಯ ೫.ಬೊಮ್ಮೈಲಿಂಗನ ಕಾವ್ಯ ೬.ಗೌರಸಂದ್ರ ಮಾರಮ್ಮನ ಕಾವ್ಯ ೭.ತಿರುಪತಿ ತಿಮ್ಮಪ್ಪನ ಕಾವ್ಯ ೮.ಅಭಿಮನ್ಯುವಿನ ಕಾವ್ಯ. ಅನುಬಂಧದಲ್ಲಿ ಅರ್ಥಕೋಶ, ಪದಸೂಚಿ, ಸ್ಥಳಸೂಚಿ, ಸಂಬಂಧಸೂಚಿ, ಕಲಾವಿದರೊಂದಿಗೆ ಸಂದರ್ಶನ, ಇವೆ.

೩೮೭. ಕೃಷ್ಣಾ ತೀರದ ಜನಪದ ಒಗಟುಗಳು

ಸಂ.ಪ್ರಕಾಶ್ ಗ. ಖಾಡೆ; ಪ್ರ: ಅನೀಕೇತನ ಪ್ರಕಾಶನ, ಜಯನಗರ ಬಡಾವಣೆ, ಬಾಗಲಕೋಟ; ಮೊ.ಮು: ೨೦೦೫; ಪು: ೪೪; ಡಿಮ್ಮೆ ೧/೮

೩೦೫ ಒಗಟುಗಳಲ್ಲಿ ೧೨ ಒಡಗತೆಗಳೂ ಈ ಕೃತಿಯಲ್ಲಿವೆ. ಸಂಪಾದಕರ ಪ್ರಸ್ತಾವನೆ, ಅನುಬಂಧಗಳಲ್ಲಿ ಸಂಗ್ರಹವಿವರ, ಅರ್ಥಕೋಶ, ಇವೆ.

೩೮೮. ಕೆ. ವಿರೂಪಾಕ್ಷಗೌಡ

ಲೇ: ರಾಘವೇಂದ್ರ ದಂಡಿನ್; ಪ್ರ: ಕರ್ನಾಟಕ ಜಾನಪದ ಪರಿಷತ್ತು, ೧, ಜಲದರ್ಶಿನಿ ಬಡಾವಣೆ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪; ಮೊ.ಮು.೨೦೧೦; ಪುಟ ೩೬; ಕ್ರೌನ್ ೧/೮

ವ್ಯಕ್ತಿ ಪರಿಚಯ ಎಂಬ ಅಡಿಬರಹ ಇದೆ. ಜಿ. ನಾರಾಯಣ ಅವರ ಅಧ್ಯಕ್ಷರ ಮಾತು ಎಂಬ ಮುನ್ನುಡಿ ಇದೆ.

೩೮೯. ಕೆಂಪಣ್ಣಗೌಡ ವಿರಚಿತ ಯಕ್ಷಗಾನ ಕರೀಬಂಟನ ಕಥೆ

ಸಂ: ಎಚ್.ಬಿ. ಯಶೋಧರಾ; ಪ್ರ: ಸಹ್ಯಾದ್ರಿ ಪ್ರಕಾಶನ,ಶ್ರೀಕುವೆಂಪು ವಿದ್ಯಾಪರಿಷತ್ತು, ಕವಿಶೈಲ, ಜಯಲಕ್ಷ್ಮೀಪುರಂ,ಮೈಸೂರು–೧೨; ಮೊ.ಮು.೧೯೮೪; ಪು: ೧೦೬+೨೭೮=೩೮೪; ಡಿಮ್ಮೈ ೧/೮

ಸುದೀರ್ಘ ಯಕ್ಷಗಾನ ಕಾವ್ಯ. ಕಾವ್ಯದ ಕೊನೆಯಲ್ಲಿ ೨೩ ಪರಿಶಿಷ್ಟಗಳಲ್ಲಿ ಪಾಠಾಂತರಗಳಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ನೀಡಲಾಗಿದೆ. ೧೦೧ ಪುಟಗಳ ಪೀಠಿಕೆಯಿದೆ. ದೇ.ಜವರೇಗೌಡ ಅವರ ಮುನ್ನುಡಿ, ಪು: ಸಂಖ್ಯೆ ಹಾಗೂ ಪದ್ಯಸಂಖ್ಯೆಗಳ ಸಹಿತ ಅರ್ಥಕೋಶ, ಇವೆ.

೩೯೦. ಕೆಂಪಣ್ಣಗೌಡನ ಯಕ್ಷಗಾನ ಕಾವ್ಯಗಳು

ಸಂ: ಹ.ಕ. ರಾಜೇಗೌಡ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು–೫೬೦ ೦೦೨; ಮೊ.ಮು. ೧೯೯೩; ಪು: ೧೧೨+೪೮೦=೫೯೨; ಡಿಮ್ಮೈ ೧/೮

ಮೂರು ಯಕ್ಷಗಾನ ಕಾವ್ಯಗಳ ಸಂಕಲನ: ೧.ಕರಿರಾಯ ಚರಿತ್ರೆ ೨.ನಳ ಚರಿತ್ರೆ ೩.ಶನಿಮಹಾತ್ಮೆ. ಜೀ.ಶಂ. ಪರಮಶಿವಯ್ಯ ಅವರ ಮುನ್ನುಡಿ, ಅರ್ಥಕೋಶ, ಇವೆ.

೩೯೧. ಕೆರೆ ಹೊನ್ನಮ್ಮ ಮತ್ತು ಇತರ ಲಾವಣಿಗಳು

ಸಂ: ಟಿ.ಎಸ್. ರಾಜಪ್ಪ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು: ೧೯೭೪; ಪು: ೨೪+೨೫೬=೨೮೦; ಡಿಮ್ಮೈ ೧/೪

ಕೊಡಗು ಜಿಲ್ಲೆಯಲ್ಲಿ ಸಂಗ್ರಹಗೊಂಡಿರುವ ಒಂಬತ್ತು ಕಥನಗೀತೆಗಳ ಸಂಕಲನ: ೧.ಕೆರೆ ಹೊನ್ನಮ್ಮ ೨.ಬಾಣಾವತಿ ದೊರೆ ೩.ಹರಿಯಾಲ ದ್ಯಾವಮ್ಮ ೪.ಕುಸುಮಾಲೆ ೫.ಬಾಣಂತಮ್ಮ–ಹುಲುಕೋಡಯ್ಯ ೬.ಕೆಂಚಮ್ಮ ೭.ಉತ್ತರ ದೇವಿ ೮.ಗಿರಿಜಾಮಲ್ಲಯ್ಯ ೯.ಶಿವಗಂಗೆ. ಹಾ.ಮಾ.ನಾಯಕ ಅವರ ಮುನ್ನುಡಿ, ಜೀ.ಶಂ. ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಇವೆ. ಇಲ್ಲಿನ ಎಲ್ಲ ಕಾವ್ಯಗಳನ್ನೂ ಗದ್ಯರೂಪದಲ್ಲಿ

ಪರಿಚಯ ಮಾಡಿಕೊಟ್ಟಿದ್ದಾರೆ ಸಂಪಾದಕರು ಪ್ರಸ್ತಾವನೆಯಲ್ಲಿ. ಕೊನೆಯಲ್ಲಿ ಸಂಗ್ರಹ ವಿವರ ಇದೆ.

೩೯೨. ಕೆರೆಮನೆ ಶಿವರಾಮ ಹೆಗಡೆ

ಲೇ: ಜಿ.ಎಸ್.ಭಟ್,ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಿಮೈ,೧೪/೩, ನೃಪತುಂಗ ರಸ್ತೆ, ಬೆಂಗಳೂರು–೫೬೦೦೦೨; ಮೊ.ಮು: ೧೯೯೪; ಪು: ೬+೫೬=೬೨; ಡಿಮೈ ೧/೮

ಯಕ್ಷಗಾನ ಕಲಾವಿದ ಕೆರೆಮನೆ ಶಿವರಾಮ ಹೆಗಡೆಯವರ ಜೀವನ ಮತ್ತು ಸಾಧನೆಗಳನ್ನು ಕುರಿತ ಕೃತಿ.

೩೯೩. ಕೆಲವು ಜನಪದ ಸಂಪ್ರದಾಯಗಳು

ಲೇ: ತ.ಚಿ. ಚಲುವೇಗೌಡ; ಪ್ರ: ತಳಗವಾದಿ ಪ್ರಕಾಶನ, ೨೨, ವಿಜಯಶ್ರೀ, ಸರಸ್ವತಿಪುರಂ, ತೊಣಚಿಕೊಪ್ಪಲು ಬಡಾವಣೆ, ಮೈಸೂರು–೫೭೦ ೦೦೯; ಮೊ.ಮು: ೧೯೭೮; ಪು: ೪೮+೨೦೨=೨೫೦; ಕ್ರೌನ್ ೧/೮

ಎರಡು ಭಾಗಗಳಲ್ಲಿ ಹಾಗೂ ೨೭ ಅಧ್ಯಾಯಗಳಲ್ಲಿ ನಿರೂಪಿತವಾಗಿರುವ ಗ್ರಂಥ: **ಭಾಗ ಒಂದು: ಹುಟ್ಟಿನಿಂದ ಸಾವಿಗೆ:** ೧.ಜನನ ಮತ್ತು ಬಾಣಂತನ ೨.ಸೂತಕ ೩.ಮಗು ಹೊಸಲು ದಾಟಿದಾಗ ೪.ಮೊಗೆ ಹಾಕುವುದು ೫.ಹೆಣ್ಣಿಗೆ ಸೊಪ್ಪು ಹಾಕುವುದು ೬.ಹೆಣ್ಣಿಗೆ ಹೂವು ಮುಡಿಸುವುದು ೭.ವಿಳ್ಳೇಶಾಸ್ತ್ರ ೮.ಮದುವೆ ೯.ಸೋಬನ ೧೦.ಬಸಿರು ಒಸಗೆ ೧೧.ಕುಲ ಕೂಡಿಸುವುದು ೧೨.ಒಪ್ಪ ಮಾಡುವುದು ೧೩.ತಿಥಿ ಮಾಡುವುದು. **ಭಾಗ ಎರಡು: ಹಳ್ಳಿಯ ಬದುಕಿನಲ್ಲಿ:** ೧೪.ಹೊಸ ಮಡಕೆ ತೆಗೆದುಕೊಳ್ಳುವುದು ೧೫.ದೇವರಿಗೆ ಧೂಪ ಹಾಕುವುದು ೧೬.ಮಡೆ ಹುಯ್ಯುವುದು ೧೭.ಮಾರಮ್ಮನ ಮಾಡುವುದು ೧೮.ದೊಡ್ಡಮ್ಮ ೧೯.ಕಾರ್‌ಹಬ್ಬ ೨೦.ಸೊಸ್‌ಮಾರಿ ಹಬ್ಬ ೨೧.ಹೆಚ್ಚು ಮಾಡುವುದು ೨೨.ಕಳ ಮಾಡುವುದು ೨೩.ಒಕ್ಕಣೆ ಮಾಡುವುದು ೨೪.ಹಬ್ಬಗಳು ಮತ್ತು ಬೇಸಾಯ ೨೫.'ಊರಲು–ಕಾರ' ಹಾಕುವುದು. ೨೬.ಕೆಲವು ಪ್ರಾಣಿಗಳು ಸತ್ತಾಗ ೨೭.ಕಸರೆ ಹಾಕುವುದು. ಜೀ.ಶಂ. ಪರಮಶಿವಯ್ಯ ಅವರ ಮುನ್ನುಡಿ, ಡಿ.ಕೆ. ರಾಜೇಂದ್ರ ಅವರ 'ಈ ಪುಸ್ತಕದ ಬಗ್ಗೆ', ಪ್ರಸ್ತಾವನೆ, ಇವೆ.

೩೯೪, ಕೆಲವು ಲಾವಣಿಗಳು

ಸಂ: ಎಲ್.ಆರ್. ಹೆಗಡೆ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು. ೧೯೭೩; ಪು: ೧೦+೧೬೨=೧೭೨; ಡಿಮೈ ೧/೮

ಹನ್ನೊಂದು ಕಥನಗೀತೆಗಳ ಸಂಕಲನ: ೧.ಕಾಸರಕೋಡು ತಿಮ್ಮಣ್ಣ ೨.ಸಣ್ಣಗಂಗೆ ೩.ರತ್ನದೇವಿ ೪.ನಾಗಮ್ಮ–ಸುಬ್ಬರಾಯ ೫.ಹೊನ್ನಮ್ಮ ಗೌರಿ ೬.ಅಣ್ಣ ಹೊನ್ನಿಗ–ತಮ್ಮ

ಚೆನ್ನಿಗ ೭.ದಿಂಡಿನ ಓಲೆ ೮.ಅತುಮವ್ವಿ ೯.ಜಂಗಮಸ್ವಾಮಿಯರು ೧೦.ಗಿಡ್ಡಣ್ಣಗೌಡ ೧೧.ಹರಿಚಂದ್ರ ಗಿರಿರಾಯ. ಹಾ.ಮಾ.ನಾಯಕ ಅವರ ಮುನ್ನುಡಿ, ಜೀ.ಶಂ. ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಕೊನೆಯಲ್ಲಿ ಅರ್ಥಕೋಶ, ಇವೆ.

೩೯೫. ಕೇದಗೆ

ಲೇ: ಪ್ರಭಾಕರ ಜೋಶಿ; ಪ್ರ: ಚಿತ್ರಾ ಪ್ರಕಾಶನ, ಮಂಗಳೂರು; ಮೊ.ಮು: ೧೯೮೬; ಪು: ೧೧+೯೬=೧೦೭; ಡಿಮ್ಮೈ೧/೮

ಯಕ್ಷಗಾನ ವಿಮರ್ಶಾ ಪ್ರಬಂಧಗಳು ಎಂಬ ಅಡಿಬರಹ ಇದೆ. ಏಳು ಲೇಖನಗಳಿವೆ: ೧.ಕರಾವಳಿಯ ಯಕ್ಷಗಾನ (ಮೂಲ, ಬೆಳವಣಿಗೆ, ಸ್ವರೂಪ, ವೈಶಿಷ್ಟ್ಯಗಳನ್ನು ಕುರಿತು) ೨.ಕಲೆ ಮತ್ತು ವ್ಯವಸಾಯ ೩.ಪ್ರಸಂಗ ರಚನೆ: ರಂಗದೃಷ್ಟಿ ೪.ತಾಳಮದ್ದಲೆಯ ಮಾತುಗಾರಿಕೆ ೫.ಅರ್ಥಗಾರಿಕೆ: ಸೃಜನಶೀಲ ದೃಷ್ಟಿ ೬.ಯಕ್ಷಗಾನ ಪರಂಪರೆ ಮತ್ತು ತುಳು ೭.ಯಕ್ಷಗಾನದಲ್ಲಿ ಮುಖವರ್ಣಿಕೆ. ಕೊನೆಯಲ್ಲಿ ಫೋಟೋಗಳು ರೇಖಾಚಿತ್ರಗಳು ಇವೆ.

೩೯೬. ಕೇರಳ ಕಥನ

ಲೇ: ಮೋಹನ ಕುಂಟಾರ್; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು.೨೦೦೬; ಪು: ೮+೨೯೮=೩೦೬; ಡಿಮ್ಮೈ ೧/೮

ಈ ಗ್ರಂಥದ ೧೪ ಅಧ್ಯಾಯಗಳಲ್ಲಿ ಜಾನಪದಕ್ಕೆ ಸಂಬಂಧಿಸಿದ ಕೆಲವು ಲೇಖನಗಳಿವೆ: ಮತಧರ್ಮ ಮತ್ತು ಸಂಪ್ರದಾಯ, ಬುಡಕಟ್ಟು ಕಲೆಗಳು, ರಂಗ ಕಲೆಗಳು, ಕರಕುಶಲ ಕಲೆಗಳು, ಸಾಂಪ್ರದಾಯಕ ಆಚರಣೆಗಳು, ಭಾಷೆ ಮತ್ತು ಸಾಹಿತ್ಯ ಇತ್ಯಾದಿ. ಬಿ.ಎ. ವಿವೇಕ ರೈ ಅವರ ಬಯಲನು ತುಂಬುವ ಆಲಯದ ಬೆಳಕಿನ ಬೀಜಗಳು ಎಂಬ ಮುನ್ನುಡಿ ಇದೆ.

೩೯೭. ಕೇರಳದ ಜಾನಪದ

ಲೇ: ಎಚ್.ಎಸ್. ರಾಮಚಂದ್ರಗೌಡ; ಪ್ರ: ಮಲೆನಾಡು ಪ್ರಕಾಶನ, ಬೆಂಗಳೂರು; ಮೊ.ಮು.: ೭೮; ಪುಟ: ೨೪+ ೧೩೦ = ೧೫೪; ಕ್ರೌನ್ ೧/೮

ಕೇರಳದ ಜನಪದ ಸಾಹಿತ್ಯ ಮತ್ತು ನೃತ್ಯಗಳನ್ನು ಪರಿಚಯ ಮಾಡಿಕೊಡುವ ಕೃತಿ. 'ವಡಕನ್ ಪಾಟ್ಟುಕಳ್'ಎಂದು ಕರೆಯಲಾಗುವ ಕೇರಳದ ಲಾವಣಿಗಳನ್ನು ಮೊದಲನೆಯ ಭಾಗದಲ್ಲಿ ಪರಿಚಯ ಮಾಡಿಕೊಡಲಾಗಿದೆ. ವಡಕನ್ ಪಾಟ್ಟುಕಳ್ ಎಂಬ ಶೀರ್ಷಿಕೆಯಡಿ ಪೀಠಿಕಾ ರೂಪದ ಲೇಖನವಿದೆ. ನಡು ನಡುವೆ ಲಾವಣಿಯ ಭಾಗಗಳನ್ನು ಉದ್ಧರಿಸುತ್ತ (ಮೂಲ ಹಾಗೂ ಅನುವಾದಿತ) ಐದು ಲಾವಣಿಗಳ ಕಥೆಗಳನ್ನು ನೀಡಲಾಗಿದೆ: ೧.ಆರೋಮರು ಪಗಡೆ ಕಲಿಯಲು ಹೋದದ್ದು. ೨.ಆರೋಮರು ಅಂಕಕ್ಕೆ

ಒಪ್ಪಿಕೊಂಡದ್ದು ೩.ಆರೋಮರು ಅಂಕಕ್ಕೆ ಹೋದದ್ದು ೪.ಉಣ್ಣಿಯಾರ್ಚೆ ೫.ಕಿರಿಯ ಆರೋಮುಣ್ಣಿ. ಎರಡನೆಯ ಭಾಗದಲ್ಲಿ ಒದೇನನ ಎಂಬ ವೀರನನ್ನು ಕುರಿತ ಲಾವಣಿಗಳ ವಿವರಗಳಿವೆ. ಮೂರನೆಯ ಭಾಗದಲ್ಲಿ ಕುರುನ್ನಯರನ್ವಿಲ್ ಕಣ್ಣನ್ ಎಂಬ ಲಾವಣಿಯ ಕಥಾಭಾಗ ಹಾಗೂ ಬೆಳಕು ಕಂಡಿರುವ ೪೨ ಲಾವಣಿಗಳನ್ನು ಪಟ್ಟಿ ಮಾಡಲಾಗಿದೆ. ಗ್ರಂಥದ ಎರಡನೆಯ ಭಾಗದಲ್ಲಿ ಜನಪದ ನೃತ್ಯಗಳ ಬಗ್ಗೆ ವಿವರಗಳಿವೆ. ಭಗವತಿಯಾಟ, ಮುಡಿಯೇಟ್ಟಂ, ತೀಯಾಟ್ಟಂ, ತೆಯ್ಯನೃತ್ಯ, ಪಾಟ್ಟು, ಪಾನ, ಗರುಡನ್ ತೂಕ್ಕಂ ಕುಣಿಯಾರ್ ಕಳಿ ಮುಂತಾದ ೧೮ ನೃತ್ಯ ಪ್ರಕಾರಗಳನ್ನು ಪರಿಚಯ ಮಾಡಿಕೊಡಲಾಗಿದೆ. ಡಾ. ಜೀ. ಶಂ. ಪರಮಶಿವಯ್ಯ ಅವರ ಮುನ್ನುಡಿ ಇದೆ.

೩೯೮. ಕೇರಳ ಜಾನಪದ ಅಧ್ಯಯನ

ಮೂಲ: ಚುಮ್ಮಾರ್ ಚೂಂಡಲ್, ಅನು: ಪಳುಕಲ್ ಗಂಗಾಧರನ್ ನಾಯರ್, ಪರಿಷ್ಕರಣೆ: ಬಿ.ಎಸ್. ನಾಗರತ್ನಕುಮಾರಿ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೪/೩,ಕೆನರಾ ಫೈನಾನ್ಸ್ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು–೫೬೦ ೦೦೨; ಮೊ.ಮು: ೧೯೯೮; ಪು: ೬+೬೨=೬೮; ಡಿಮ್ಮೈ ೧/೮

ಎಂಟು ಅಧ್ಯಾಯಗಳಿವೆ: ೧.ಕಳಮೇಮಿತ್ತು ೨.ಕೇರಳ ಜಾನಪದದಲ್ಲಿ ಕಣ್ಣಿಗಿಯ ಐತಿಹ್ಯ ೩.ನಂತುಣಿ ಗೊಂಬೆಯಾಟ (ಪಾವಕ್ಕೂತ್ತು) ೫.ಮಾರ್ಗಂ ಕಳಿ ೬.ಕುಮ್ಮಾಟ್ಟಿ ೭.ಐವರ್ ನಾಟಕಂ ೮.ಕಣ್ಯಾರ್ ಕಳಿ. ಎಚ್.ಜೆ. ಲಕ್ಕಪ್ಪಗೌಡ ಅವರ ಪ್ರಧಾನ ಸಂಪಾದಕರ ಮಾತು ಇದೆ.

೩೯೯. ಕೇರಳದ ಜನಪದ ವೀರ ತಚ್ಚೋಳಿ ಒದೇನನ್

ಲೇ: ಕೆ.ಕಮಲಾಕ್ಷ; ಪ್ರ: ವಿಸ್ತರಣೆ ಹಾಗೂ ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ–೫೮೧ ೨೦೫; ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ; ಮೊ.ಮು: ೨೦೧೩; ಪು: ೨೦+೨೫೦; ಡಿಮ್ಮೈ ೧/೮

ಕೇರಳದ ಜನಪದ ವೀರ ತಚ್ಚೋಳಿ ಎಂಬ ಊರಿನ ಒದೇನನ್ ಎಂಬುವನ ಸಾಹಸಗಳ ಮಾಲೆ ಈ ಕೃತಿ. ಮೂರು ಆಕರಗಳ ಆಧಾರದಿಂದ ಈ ಪೂರ್ಣರೂಪದ ಕಥಾನಕವನ್ನು ರೂಪಿಸಿರುವುದಾಗಿ ಲೇಖಕರ ಮಾತು ತಿಳಿಸುತ್ತದೆ. ಬ್ರಿಟಿಷ್ ಅಧಿಕಾರಿ ಪರ್ಸಿ ಮೆಕ್ವೀನ್ ಅವರು ಸಂಗ್ರಹಿಸಿದ್ದ ಹಾಡುಗಳಲ್ಲಿ ಐವತ್ತನ್ನು ಆಯ್ದು ಅಚ್ಯುತ ಮೆನೋನ್ ಎಂಬುವರು ಪ್ರಕಟಿಸಿದ್ದ Ballads of North Malbar ಎಂಬ ಕೃತಿಯು ಒಂದು ಆಕರ. ಎಂ.ಸಿ.ಅಪ್ಪುಣ್ಣಿ ನಂಬ್ಯಾರರು ಸಂಗ್ರಹಿಸಿದ್ದ 'ವಡಕ್ಕನ್ ಪಾಟ್ಟುಗಳ್' ಎಂಬ ಕೃತಿಯು ಎರಡನೆಯ ಆಕರ. ಮೂರನೆಯದು ಇರುವತ್ತಿನಾಲ್ ವಡಕ್ಕನ್ ಪಾಟ್ಟುಗಳ್. ಇವಿಷ್ಟೇ ಅಲ್ಲದೆ, ಈ ಕಥಾನಕವು ಪರಿಪೂರ್ಣವಾಗಲು ಇನ್ನೂ ಎರಡು ಆಕರಗಳ ನೆರವು ಇದೆ: 1.ವಿಲಿಯಂ ಲೋಗನ್ ಅವರ The Malbar Manual ನಿಂದ ಸಂಗ್ರಹಿಸಿದ Tachcholi Ballad 2.ಕಡತ್ತನಾಡ್ ಮಾಧವಿ ಅಮ್ಮ ಹಾಗೂ ಕೆ.ವಾಸುದೇವನ್ ಮೂಸ್ಸದ್ ಅವರುಗಳ

ಎರಡು ಪಾಠಾಂತರಗಳು. ಈ ಧೀರ್ಘ ಕಥಾನಕದ ಪ್ರತಿಯೊಂದು ಅಧ್ಯಾಯಕ್ಕೂ ಆಕರ್ಷಕ ಶೀರ್ಷಿಕೆ ಇದೆ. ಅಂಬಳಿಕೆ ಹಿರಿಯಣ್ಣ ಅವರ ದೇಶ ಸುತ್ತು ಕೋಶ ಓದು ಎಂಬ ಮುನ್ನುಡಿ, ಸ.ಚಿ.ರಮೇಶ್ ಅವರ ನಿರ್ದೇಶಕರ ಮಾತು, ಮತ್ತು ಲೇಖಕರ ಕೃತಿ ಓದತೊಡಗುವ ಮುನ್ನ ಎಂಬ ಪ್ರಸ್ತಾವನೆ, ಇವೆ.

೪೦೦. ಕೇಳಿಕೆ

ಲೇ: ವೇಮಗಲ್ ಡಿ. ನಾರಾಯಣಸ್ವಾಮಿ; ಪ್ರ: ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು; ಮೊ.ಮು.೨೦೦೫; ಪುಟ ೧೨+೧೨+೨೧೬=೨೪೦; ಡಿಮ್ಮೈ ೧/೮

ಜನಪದ ರಂಗ ಪ್ರಕಾರದ ಅಧ್ಯಯನ ಎಂಬ ಅಡಿಬರಹ ಇದೆ. ಪಿಎಚ್.ಡಿ. ಮಹಾಪ್ರಬಂಧ. ಆರು ಅಧ್ಯಾಯಗಳಿವೆ: ೧.ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಅಧ್ಯಯನ ವಿಧಾನ ೨.ಕರ್ನಾಟಕದ ರಂಗಭೂಮಿ ಪ್ರಕಾರಗಳ ಸಂಕ್ಷಿಪ್ತ ನೋಟ ೩.ಗಡಿಪ್ರದೇಶದ ಜನಪದ ರಂಗಪ್ರಕಾರಗಳು ಮತ್ತು ದ್ರಾವಿಡ ರಂಗಭೂಮಿಯ ಪರಿಕಲ್ಪನೆ ೪.ಕೇಳಿಕೆ ರಂಗಭೂಮಿ ೫.ಕೇಳಿಕೆ ಜನಪದ ರಂಗ ಪ್ರಕಾರದ ವಿವಿಧ ನೆಲೆಗಳು ೬.ಕೇಳಿಕೆ ಮತ್ತು ಇತರ ರಂಗಪ್ರಕಾರಗಳು: ಒಂದು ತೌಲನಿಕ ನೋಟ. ಅನುಬಂಧದಲ್ಲಿ ಮಾಹಿತಿ ನೀಡಿದ ಕೇಳಿಕೆ ಕಲಾವಿದರ ಪಟ್ಟಿ, ಕೇಳಿಕೆ ಹಸ್ತಪ್ರತಿಗಳ ಮಾದರಿಗಳು, ಕೋಲಾರ ಜಿಲ್ಲೆಯ ಜನಪದ ಕಲೆಗಳ ಪಟ್ಟಿ, ಕೆಲವು ಫೋಟೋಗಳು ಇವೆ. ಪ್ರಾರಂಭದಲ್ಲಿ ಹಿ.ಚಿ. ಬೋರಲಿಂಗಯ್ಯ ಅವರ ಮುನ್ನುಡಿ ಇದೆ.

೪೦೧. ಕೈಗಾರಿಕಾ ಜಾನಪದ

ಲೇ: ಕೆ.ಆರ್.ಸಂಧ್ಯಾರೆಡ್ಡಿ; ಪ್ರ: ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ-೫೭೬ ೧೦೨; ಮೊ.ಮು: ೧೯೯೭; ಪು: ೧೦+೧೩೫=೧೪೫; ಕ್ರೌನ್ ೧/೮

ಏಳು ಅಧ್ಯಾಯಗಳಿವೆ: ೧.ಜನಪದ-ಜಾನಪದ: ಬದಲಾದ ಪರಿಕಲ್ಪನೆ ೨.ವೃತ್ತಿ ಜಾನಪದ ೩.ಪಾರಂಪರಿಕ ವೃತ್ತಿ ಜಾನಪದ ಪ್ರಕಾರಗಳು ೪.ಆಧುನಿಕ ಕೈಗಾರಿಕಾ ಜಾನಪದ ಸ್ವರೂಪ ಮತ್ತು ಅಧ್ಯಯನದ ವಿಧಾನ ೫.ಕೈಗಾರಿಕಾ ಜಾನಪದ ಪ್ರಕಾರಗಳು: ಕೈಗಾರಿಕಾ ಕಥನಗಳು, ಗೀತೆಗಳು, ಕೈಗಾರಿಕಾ ಭಾಷೆ ೬.ಅಶಾಬ್ದಿಕ ಜಾನಪದ: ಸಂಜ್ಞಾಭಿವ್ಯಕ್ತಿಗಳು, ಕಾರ್ಯತಂತ್ರಗಳು, ಕೀಟಲೆ, ಕೈಗಾರಿಕಾ ಸಂಪ್ರದಾಯಗಳು ಪದ್ಧತಿಗಳು ಇತ್ಯಾದಿ. ೭.ಸಮಾರೋಪ

೪೦೨. ಕೈಫಿಯತ್ತುಗಳಲ್ಲಿ ಕುಮಾರರಾಮ

ಲೇ: ಸುರೇಶ ಬ. ಹಲರ್ಾಪುರ; ಪ್ರ: ಮಹರ್ಷಿ ವಾಲ್ಮೀಕಿ ಪ್ರಕಾಶನ, ಹಲರ್ಾಪುರ; ಮೊ.ಮು: ೧೯೯೮; ಪು: ೧೦೬: ಡಿಮ್ಮೈ ೧/೮

ಏಳು ಅಧ್ಯಾಯಗಳಿವೆ: ೧.ಪ್ರಸ್ತಾವನೆ ೨.ಕೈಫಿಯತ್ತುಗಳ ಅರ್ಥ-ಸ್ವರೂಪ-ಉದ್ದೇಶ ೩.ಕುಮಾರ ರಾಮನ ಮನೆತನದ ಹಿನ್ನೆಲೆ ಮತ್ತು ಕೈಫಿಯತ್ತುಗಳು ೪.ಕೈಫಿಯತ್ತುಗಳಲ್ಲಿ ಕುಮಾರರಾಮನ ಪೂರ್ವಕಾಲೀನ ಮನೆತನ ೫.ಕೈಫಿಯತ್ತುಗಳಲ್ಲಿ ಕುಮಾರರಾಮ ೬.ಕೈಫಿಯತ್ತು ೭.ಸಮಾರೋಪ. ಅನುಬಂಧದಲ್ಲಿ ಕ್ಷೇತ್ರಕಾರ್ಯದಲ್ಲಿ ಸಂದರ್ಶಿಸಿದ ವ್ಯಕ್ತಿಗಳ ವಿವರಗಳಿವೆ. ಕೆ.ಆರ್.ದುರ್ಗಾದಾಸ್ ಅವರ ಮುನ್ನುಡಿ ಇದೆ.

೪೦೩. ಕೈಲಿಯ ಕರೆದ ನೊರೆಹಾಲು

ಸಂ.ಗುಂಡ್ಮಿ ಚಂದ್ರಶೇಖರ ಐತಾಳ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು.೧೯೭೦; ಪು: ೧೬+೧೧೬=೧೩೨; ಡಿಮ್ಮೈ೧/೮

ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಗೀತೆಗಳು ಎಂಬ ಅಡಿಬರಹ ಇದೆ. ಇಲ್ಲಿನ ಹಾಡುಗಳನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಲಾಗಿದೆ: **ಭಾಗ ಒಂದು: ಅನುಷ್ಠಾನಗಳು:** ೧.ತೊಳಸಿ ಪೂಜೆಯ ಪದ ೨.ವಾಲಗದ ಸಂಧಿ ೩.ಮನೆಯ ಯಜಮಾನನ ಹೊಗಳಿಕೆ ೪.ಬ್ಯಾಂಟಿಸಂಧಿ ೫.ಶಿವರಾಮ ಸಂಧಿ ೬.ಕೋಲು ಸಂಧಿ ೭.ಕ್ವಾಡಂಗಿ ಸಂಧಿ ೮.ಹೊಗಳಿಕೆ ಸಂಧಿ ೯.ತೇರು ಕಟ್ಟಿದ ಕತೆ ೧೦.ಕೊಡನೀರು ಮದಿಹಾಡು ೧೧.ದಿಮ್‌ಸಾಲ್ ಪದ ೧೨.ಹೊಲಿ ಕರೆಯುವ ಹಾಡು ೧೩.ದೋಣಿ ಒತ್ತುವ ಹಾಡು ೧೪.ಹೂಡುವ ಪದ ೧೫.ನೀರು ಮೊಗೆಯುವ ಹಾಡು. **ಭಾಗ ಎರಡು: ಪೌರಾಣಿಕ ಕಥನ ಗೀತಗಳು:** ೧.ಕುಂತಿ ಕರ್ಣನನ್ನು ಪಡೆದ ಕತೆ ೨.ಕೃಷ್ಣನ ತೊಟ್ಟಿಲಿನ ಕತೆ ೩.ದ್ರೌಪದೀ ದೇವಿಯ ಕತೆ ೪.ಸೀತಾ ದೇವಿಯ ವನ್ವಾಸ ೫.ದ್ರೌಪದಿಯನ್ನು ಕಣ್ಣು ಕಟ್ಟಿ ಕಾಡಿಗೆ ಬಿಟ್ಟ ಕತೆ ೬.ಸೌಭದ್ರಿಯ ಹಾಡು. **ಭಾಗ ಮೂರು: ಸಾಮಾಜಿಕ ಕಥನ ಗೀತೆಗಳು:** ೧.ಉತ್ತರಾದೇವಿಯ ಕತೆ ೨.ಹೊಸ್ಮಣ್‌ನಾಯ್ಕನ ಕತೆ ೩.ಗಂಡ್ಸ್ ಕೊಂದ್ ಹೊನ್ನಮ್ಮ್ ಕತೆ ೪.ಕೊರಾತಿ ಕಂಚಿಯ ಕತೆ ೫.ಹಾಸಾನ್ನಾಯ್ಕ ರೂಸಾನ್ನಾಯ್ಕ ಎಂಬ ಮೊಗವೀರ ಸೋದರರ ಕತೆ ೬.ಪಟ್ಟಣ ಸೆಟ್ಟಿಯ ಕತೆ ೭.ಬಣಜ ಸೆಟ್ಟರ ಕತೆ **ಭಾಗ ನಾಲ್ಕು: ಸಂವಾದ ಕಥನ ಗೀತೆಗಳು:** ೧.ಅತ್ತಿಗ್ಯಕ್ಕ ಮೈದಿನ್ಯಕ್ಕ ೨.ಭಾವ ಮೈದಿನಿ ೩.ಬಾಕುಡ ಬಾಕುಡ್ತಿ ೪.ಗಂಡನಿಗೆ ಬುದ್ಧಿ ಕಲಿಸಿದ ಹೆಂಡತಿ ೫.ಅತ್ತಿಗಿ ಮೈದಿನಿ ಜಗಳ ೬.ಅಣ್ಣ ತಂಗಿಯನ್ನು ಮದುವೆಗೆ ಕರೆದುದು. ಹಾ.ಮಾ.ನಾಯಕ ಅವರ ಮುನ್ನುಡಿ, ಸಂಪಾದಕರ ಪೀಠಿಕೆ, ಕೊನೆಯಲ್ಲಿ, ಅರ್ಥಕೋಶ, ಇವೆ.

೪೦೪. ಕೊಂಕಣಿ ಜನಪದ ಕಾವ್ಯ

ಆಯ್ಕೆ: ಎಡ್ವರ್ಡ್ ನೊರೋನ; ಪ್ರ: ಕರ್ನಾಟಕ ಸಾಹಿತ್ಯ ಅಕಾಡಿಡೆಮಿ, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೧; ಮೊ.ಮು.೧೯೯೮; ಪು: ೧೬ +೭೦=೮೬; ಕ್ರೌನ್ ೧/೮

ಹದಿಮೂರು ಬಗೆಯ ಹಾಡುಗಳಿವೆ: ಶಿಶುಗೀತೆ, ವೊವಿ, ಧಾಲೊ, ಪುಗ್ಡಿ, ಶಿಗ್ಮೊ, ಮಾಂಡೊ, ದುಲ್ಪೊದ್, ದೆಖ್ಣಿ, ಕಥನ, ಗುಮ್ಟಾಂ, ದುಡಿಮೆ ಕಂಡುಂಬಿ, ಸಾಂಜ್ಯಾಲ್. ಪ್ರತಿಯೊಂದು ಹಾಡೂ ಕೊಂಕಣಿ ಭಾಷೆಯಲ್ಲಿದ್ದು ಆಯಾ ಹಾಡಿನ ಜೊತೆಗೇ

ಕನ್ನಡಾನುವಾದವನ್ನೂ ನೀಡಲಾಗಿದೆ. ಪ್ರತಿ ಹಾಡಿನ ನಡುನಡುವೆ ಲಘು ವಿವರಣೆ ಇದೆ. ಕೊಂಕಣಿ ಭಾಷೆ ಮತ್ತು ಜಾನಪದ ಕಾವ್ಯ ಎಂಬ ಪ್ರಸ್ತಾವನೆ ಇದೆ. ಶಬ್ದಾರ್ಥಗಳು ಮತ್ತು ಟಿಪ್ಪಣಿಗಳು ಇವೆ.

೪೦೫. ಕೊಂಡ ಹಾಯುವ ಸಂಪ್ರದಾಯ

ಲೇ: ಡಾ. ತೀ. ನಂ. ಶಂಕರನಾರಾಯಣ; ಪ್ರ: ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ; ಮೊ.ಮು.೧೯೮೯, ಪು: ೧೨+ ೯೨= ೧೦೪; ಕ್ರೌನ್ ೧/೮

ಇದು ಒಂದು ಅಧ್ಯಯನ ಗ್ರಂಥ: ಪೀಠಿಕೆ, ಸ್ವರೂಪ ಮತ್ತು ಉದ್ದೇಶ, ವೈಜ್ಞಾನಿಕ ಪ್ರಯೋಗಗಳು, ಸಮಾರೋಪ–ಎಂಬ ನಾಲ್ಕು ಅಧ್ಯಾಯಗಳಿವೆ. ಅನುಬಂಧದಲ್ಲಿ, ೧೯೮೬ ರಲ್ಲಿ ಬೀರೂರಿನ ವೀರಭದ್ರಸ್ವಾಮಿ ಕೊಂಡೋತ್ಸವದ ಸಂದರ್ಭದಲ್ಲಿ ಘಟಿಸಿದ ಸಾವುನೋವುಗಳ ಬಗ್ಗೆ ಸಂದರ್ಶನ ನಡೆಸಿದ ವರದಿ ಇದೆ. ಆ ಸಂದರ್ಭದ ಪತ್ರಿಕಾ ವರದಿ ಹಾಗೂ ಅದರ ಪ್ರತಿಕ್ರಿಯೆ ಇದೆ. ಗ್ರಂಥದ ಮುಖ್ಯ ಭಾಗದಲ್ಲಿ ವಿವಿಧ ದೇಶಗಳಲ್ಲಿ ಕಂಡು ಬರುವ ಇಂಥ ಸಂಪ್ರದಾಯಗಳ ಬಗೆಗಿನ ಚರ್ಚೆ ಇದೆ. ಪ್ರಾರಂಭದಲ್ಲಿ ಕು.ಶಿ. ಹರಿದಾಸ ಭಟ್ಟರ 'ಪ್ರಕಾಶಕರ ಮಾತು', ಎಂ. ಚಿದಾನಂದಮೂರ್ತಿ ಅವರ 'ಮುನ್ನುಡಿ', ಲೇಖಕರ 'ಅರಿಕೆ' ಇವೆ.

೪೦೬. ಕೊಂಬೆ ರೆಂಬೆಲ್ಲ ಎಳೆಗಾಯಿ

ಸಂ: ಅಂದನೂರು ಶೋಭ; ಪ್ರ: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು; ಮೊ.ಮು. ೧೯೭೮; ಪುಟ ೧೨+೧೬೮=೧೮೦; ಡಿಮ್ಮೈ ೧/೧೨

ಇಲ್ಲಿನ ಜನಪದ ಗೀತೆಗಳನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದೆ: ೧.ಕಥನಾತ್ಮಕ ಗೀತೆಗಳು ೨.ದೇವರು ಮದುವೆ ಸಂಸಾರ. ಒಟ್ಟು ೫೮ ಹಾಡುಗಳಿವೆ. ಅವುಗಳಲ್ಲಿ ೧೨ ಕಥನಗೀತೆಗಳು: ೧.ಅಣ್ಣುಲ್ಲ ಕಿವುಡು ಕೊಂತಿ ಎಣ್ಣು ತಂದೀನಮ್ಮ ೨.ನಿಚ್ಚ ಮಾದಿಗರೆಣ್ಣೆ ಬಚ್ಚಣದಾ ಬೊಮ್ಮೆ ೩.ಏಟಕ್ಕ ಏಳು ತುಕುಡ ಆದಾನ ಶಂಕರದೇವ ೪.ಶಂಕರದೇವನ ಕಥೆ ೫.ಮಾಗಡಿ ಕೆಂಪಣ್ಣ ಮಾರಾಯ ದೊರೆ ಮಗನೆ ೬.ದ್ರಾಂಬಿ ವುವ್ವ ಆಗಿ ಅವ್ವ ವುಟ್ಟಿದಾಳೋ, ೭.ಸೂಳೆ ಮನೆಗೆ ವೊರುಟ ಸ್ವಾಮಿಗಳು ಗಕ್ಕನೆ ಬರುವುದಿಲ್ಲ ೮.ಎತ್ತು ನಾನು ಗೊಡ್ಡಾದೆ ಮಗನೇ ೯.ಆವಿನ್ನ ಕೊಯ್ದೊಳೆ ಆಮ್ರಾವ ಮಾಡಿದಾಳೆ ೧೦.ನಾನು ಒಬ್ಬಳೆ ಬಂದೆ ತಾಯಿ ಮನೆಗಿನ್ನು ೧೧.ನಿನ್ನೆಂಡ್ತಿ ಜಾಲಾರಿ ಏಳು ತಿಂಗಳ ಗರ್ಭಿಣಿ ೧೨.ವುಟ್ಟೀದ ಮಲ್ಲೀಗೆ ವುಟ್ಟಿದಂತೆ ಇರುವೆನು. ಪ್ರಸ್ತಾವನೆಯಲ್ಲಿ ಕಥನ ಗೀತೆಗಳ ಸಂಕ್ಷಿಪ್ತ ಗದ್ಯ ನಿರೂಪಣೆ ಇದೆ. ಕೊನೆಯಲ್ಲಿ, ಈ ಸಂಗ್ರಹದ ಹಾಡುಗಳನ್ನು ಹೇಳಿದವರು, ಶಬ್ದಕೋಶ ಇವೆ.

೪೦೭. ಕೊಂತಿ ಪೂಜೆ

ಲೇ: ಡಿ. ಲಿಂಗಯ್ಯ; ಪ್ರ: ದಿನಕರ ಪ್ರಕಾಶನ, ಬೆಂಗಳೂರು; ಮೊ.ಮು. ೧೯೬೭, ಪು: ೧೮ + ೬೪= ೮೨; ಕ್ರೌನ್ ೧/೮

ಕೊಂತಿ ಪೂಜೆ ಎಂಬ ಆಚರಣೆಯನ್ನು ಕುರಿತ ಒಂದು ಸಂಕ್ಷಿಪ್ತ ಅಧ್ಯಯನ. ಪ್ರಾರಂಭದಲ್ಲಿ ಲೇಖಕರ ಪ್ರಸ್ತಾವನೆ, ಅನುಬಂಧದಲ್ಲಿ ಕೊಂತಿ ಪದಗಳು, ಅರ್ಥಕೋಶ, ಕೆಲವು ವಿಮರ್ಶೆಗಳು, ಇವೆ.

೪೦೮. ಕೊಂತಿಪೂಜೆ

ಲೇ: ಸೋಮಣ್ಣ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು. ೨೦೦೦; ಪು: ೨+೩೦=೩೨; ಡಿಮ್ಮೈ ೧/೮

ಒಂದು ಆಚರಣೆಯ ಸಂಕ್ಷಿಪ್ತ ಅಧ್ಯಯನ. (ಕೊಂತಿಪೂಜೆ ಎಂಬ ಆಚರಣೆಯನ್ನು ಕುರಿತು ವಿವಿಧ ಮೂಲಗಳಿಂದ ಸಂಗ್ರಹಿತವಾಗಿರುವ ಮಾಹಿತಿಗಳನ್ನು ಒದುಗಿಸುವ ಕೃತಿ.)

೪೦೯. ಕೊಂತಿ ಪೂಜೆ: ಒಂದು ಅಧ್ಯಯನ

ಲೇ: ಕ್ಯಾತನಹಳ್ಳಿ ರಾಮಣ್ಣ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು. ೧೯೮೫; ಪು: ೮+೧೨೬=೧೩೪; ಡಿಮ್ಮೈ ೧/೮

ಐದು ಅಧ್ಯಾಯಗಳಿವೆ: ೧.ಪ್ರವೇಶ ೨.ಆಚರಣೆ ೩.ಸಾಮಾಜಿಕ ಹಿನ್ನೆಲೆ ೪.ಕಥೆ ಮತ್ತು ಸಾಹಿತ್ಯ ೫.ಕೊಂತಿ ಪದಗಳು. ಎಚ್. ತಿಪ್ಪೇರುದ್ರಸ್ವಾಮಿ ಅವರ ಮುನ್ನುಡಿ, ಜೀ.ಶಂ. ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಕೊನೆಯಲ್ಲಿ ನಾಲ್ಕು ಅನುಬಂಧಗಳಿವೆ: ೧.ಹಾಡುಗಾರಿಕೆಯಲ್ಲಿ ಕಾಣುವ ಪದ್ಯ ರೂಪಗಳು ೨.ಕೆಲವು ಆಮೇಲಿನ ಸಂಗ್ರಹಗಳು ೩.ಜನಪದ ಶಬ್ದರೂಪಗಳು ೪.ಗ್ರಂಥ ಋಣ.

೪೧೦. ಕೊಂತೆಮ್ಮನ ಪದಗಳು

ಲೇ: ಎಂ.ಆರ್. ಲಕ್ಷ್ಮಮ್ಮ; ಪ್ರ: ಪ್ರಬುದ್ಧ ಕರ್ನಾಟಕ, ಚಿತ್ರಭಾನು ಸಂವತ್ಸರ, ಸಂಕ್ರಾತಿಯ ಸಂಚಿಕೆ, ಮೈಸೂರು ವಿಶ್ವವಿದ್ಯಾನಿಲಯ; ಡಿಮ್ಮೈ ೧/೮

ಹದಿನೈದು ಪುಟಗಳಿರುವ ಲೇಖನ. ಕೊಂತಿಪೂಜೆ ಸಂಪ್ರದಾಯವನ್ನು ಕುರಿತ ಮೊಟ್ಟಮೊದಲ ಲೇಖನ.

೪೧೧. ಕೊಡಗಿನ ಕೈಮಡಗಳು

ಲೇ: ಎಂ.ಜಿ. ನಾಗರಾಜ್; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ,

ಚಾಮರಾಜಪೇಟೆ, ಬೆಂಗಳೂರು– ೫೬೦ ೦೧೮; ಮೊ.ಮು: ೨೦೦೪; ಪು: ೭+೧೫೧=೧೫೮; ಡಿಮ್ಮೈ ೧/೮

ಈ ಗ್ರಂಥದಲ್ಲಿ ಆರು ಅಧ್ಯಾಯಗಳಿವೆ : ೧.ಕೊಡಗಿನ ಕೈಮಡಗಳು ೨.ಶಾಸನೋತ್ತ ಹಾಗೂ ರಾಚನಿಕ ಕೈಮಡಗಳ ಉಗಮ ಮತ್ತು ವಿಕಾಸ ೩.ಕೈಮಡಗಳ ರಚನಾ ವಾಸ್ತು ಮತ್ತು ಪರಿಸರ ಆಚರಣೆ ೪.ಮನತನಗಳ ಕೈಮಡ, ಸಮಾಧಿ ಸ್ಥಾನ ಗುರು ಕಾರೋಣ ನೆಲೆಗಳ ವೈಶಿಷ್ಟ್ಯಗಳು ೫.ಪಿನ್‌ಮನೆ– ಕೈಮಡಗಳು ಸಂಕೀರ್ಣ ೬.ಮನೆ ಪದಗಳು ಮತ್ತು ಕೈಮಡಗಳ ಸಮಬಂಧಗಳು. ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರ ಅಧ್ಯಕ್ಷರ ನುಡಿ ಎಂಬ ಮುನ್ನುಡಿ, ಅಲ್ಲಲ್ಲಿ ಫೋಟೋಗಳು ಇವೆ.

೪೧೨. ಕೊಡಗಿನ ಸಾಂಸ್ಕೃತಿಕ–ಜಾನಪದ ನೆಲೆಗಳು

ಲೇ: ಎಂ.ಜಿ.ನಾಗರಾಜ್; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೫೬೦ ೦೧೮; ಮೊ.ಮು: ೨೦೧೦; ಪು: ೮+೧೮೪+೯೨; ಡಿಮ್ಮೈ ೧/೮

ಹತ್ತು ಲೇಖನಗಳ ಸಂಕಲನ: ೧.ಸುಗ್ಗಿ ಕಟ್ಟೆಗಳು ೨.ಹರಿಸೇವೆ ಮತ್ತು ಹರಿಸೇವೆ ಕಲ್ಲುಗಳು ೩.ಮಳೆಗಾಲದ ಕೃಷಿಯ ಹಾಡು 'ಒಯ್ಯಕಾಕುವ' ೪.ಹುತ್ತರಿ ಮತ್ತು ಹುತ್ತರಿಯ ಕೋಲಾಟ ೫.ದೊಡ್ಡಯ್ಯ–ಹುಲುಕೋಡಯ್ಯ ಸಂಕ್ರಾಂತಿ ಜಾತ್ರೆ ೬.ಜನಪದ ಆಚರಣೆಗಳ ಮಕ್ಕಿ ಶಾಸ್ತಾವು ೭.ಕೊಲೆ ಕಲ್ಲುಗಳು ೮.ದಕ್ಷಿಣ ಕೊಡಗಿನ ಕುಂದಗಿರಿ ೯.ಐತಿಹಾಸಿಕ ಜಾನಪದ ವೀರ ಕಲ್ಯಾಟಬಾಚರಣಿಯಂಡ ಕೆ.ಅಣ್ಣಯ್ಯ. ಅಧ್ಯಕ್ಷರ ನುಡಿ ಎಂಬ ನಲ್ಲೂರು ಪ್ರಸಾದ್. ಆರ್.ಕೆ. ಅವರ ಮುನ್ನುಡಿ ಇದೆ.

೪೧೩. ಕೊಡಗು ಜನಪದ ಸಂಸ್ಕೃತಿ

ಸಂ: ಬಿ.ಎ.ಷಂಶುದ್ದೀನ್; ಪ್ರ: ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಡಿಕೇರಿ; ಮೊ.ಮು: ೨೦೧೧; ಪು: ೧೩೮; ಡಿಮ್ಮೈ ೧/೮

ವಿವಿಧ ಲೇಖಕರು ಬರೆದಿರುವ ಹತ್ತು ಲೇಖನಗಳ ಸಂಕಲನ: ೧.ಕೊಡಗಿನ ಜನಪದ ಹಾಡುಗಳು–ಬೆಸೂರು ಮೋಹನ್ ಪಾಳೇಗಾರ್ ೨.ಕೊಡಗಿನ ಜಾನಪದ ವಿಕಾಸ ಮತ್ತು ಕೈಮಡುಗಳು–ಎಂ.ಜಿ.ನಾಗರಾಜ್ ೩.ಕೊಡಗಿನ ಊರ ಹಬ್ಬಗಳು ಹಾಗೂ ದೈವ ಕೋಲಗಳು–ಮಾದೇಟಿರ ಬೆಳ್ಯಪ್ಪ ೪.ಕೊಡವ ಜನಪದ ಸಂಸ್ಕೃತಿ–ಬಾಚರಣಿಯಂಟ ರಾಣು ಅಪ್ಪಣ್ಣ ೫.ಬುಡಕಟ್ಟು ಜನರ ಸಾಂಸ್ಕೃತಿಕ ಬದುಕು–ಜಿ.ಸೋಮಣ್ಣ ೬.ಕೊಡವ ಸಂಸ್ಕೃತಿಯೊಂದಿಗೆ ಕೊಡವ ಭಾಷಿಕರು–ಅಡ್ಡಂಡ ಕಾರ್ಯಪ್ಪ ೭.ಕೊಡಗುಗೌಡ ಸಮುದಾಯದ ಪದ್ಧತಿಗಳು ಮತ್ತು ಪರಂಪರೆ–ಕೋರನ ಸರಸ್ವತಿ ಪ್ರಕಾಶ್ ೮.ಜನಪದ ಸಂಸ್ಕೃತಿಯಲ್ಲಿ ಹಬ್ಬಗಳು–ಸಿ.ಎಸ್.ಸುರೇಶ್ ೯.ತೇಮಲೆ ಕುಡಿಯ ಸಮುದಾಯ–ಕೆ.ಆರ್.ವಿದ್ಯಾಧರ ೧೦.ಸೋಮವಾರಪೇಟೆ ತಾಲೂಕಿನ ಸುಗ್ಗಿಕಟ್ಟೆಗಳು–ಡಿ.ಎಂ. ಪು: ಸ್ವಾಮಿ

೪೧೪. ಕೊಡಗು ಜಿಲ್ಲೆಯ ಸುಗ್ಗಿಕಟ್ಟೆಗಳು

ಲೇ: ಎಂ.ಜಿ.ನಾಗರಾಜ್; ಪ್ರ: ಶ್ರೀ ಗೌರೀ–ಗಂಗಾ ಪ್ರಕಾಶನ, ಬೆಂಗಳೂರು–೫೬೦ ೦೧೦; ಮೊ.ಮು: ೧೯೮೯; ಪು: ೮+೧೦೨+೧೨=೧೨೨; ಕ್ರೌನ್ ೧/೮

"ಜನಪದ ಬದುಕಿನ ಮೇಲೆ ಪರಿಣಾಮ ಉಂಟುಮಾಡಿದ ಇತಿಹಾಸದ ಘಟನೆಗಳನ್ನು ಸಾಂಕೇತಿಕವಾಗಿ ತೋರಿವೆ ಈ ಸುಗ್ಗಿಕಟ್ಟೆಗಳು. ತತ್ಕಾಲೀನ ಬದುಕಿನವರೆವಿಗೂ ಪರಿಣಾಮ ಮೂಡಿಸಿ ಬಂದಿರುವ ಈ ಸುಗ್ಗಿ ಕಟ್ಟೆಗಳ ಕುರಿತು ನಡೆಸಿದ ಸಂಶೋಧನೆಯ ಫಲವಾಗಿ ನನ್ನ ಈ ಕೃತಿ ತಮ್ಮ ಮುಂದಿದೆ" ಎಂಬುದಾಗಿ ಲೇಖಕರು ಹೇಳಿಕೊಂಡಿದ್ದಾರೆ. ಕೊಡಗಿನಾಚೆಗಿನ ಕೆಲವು ಸುಗ್ಗಿಕಟ್ಟೆಗಳ ಪ್ರಸ್ತಾಪ ಇದೆ. ಕೊನೆಯಲ್ಲಿ ಕೆಲವು ಫೋಟೋಗಳಿವೆ.

೪೧೫. ಕೊಡವ ಜನಪದ ಕಾವ್ಯ

ಆಯ್ಕೆ: ಡಿ.ಬಿ. ರಾಮಚಂದ್ರಾಚಾರ್; ಪ್ರ: ಕರ್ನಾಟಕ ಸಾಹಿತ್ಯ ಅಕಾಡಿಮೈ, ನೃಮಪತುಂಗ ರಸ್ತೆ, ಬೆಂಗಳೂರು–೫೬೦೦೦೧; ಮೊ.ಮು: ೧೯೯೮; ಪು: ೧೨+೪೦=೫೨; ಕ್ರೌನ್ ೧/೮

ಆರು ಬಗೆಯ ಹಾಡುಗಳಿವೆ: ೧.ಹುತ್ತರಿ ಹಡು ೨.ಜೋಯ್‌ಪಾಟ್ ೩.ಕುಡಿಯರ ಗೀತೆಗಳು ೪.ಸಾರ್ತಾವುಡ ಪಾಟ್ ೫.ದೇವತೆಯಡ ಪಾಟ್ ೬.ಬೆಟ್ಟಕುರುಬ–ಜೇನುಕುರುಬರ ಕೋಲಾಟ. ಪ್ರತಿಯೊಂದು ಹಾಡಿನ ಪ್ರಾರಂಭದಲ್ಲಿ, ನಡುನಡುವೆ, ಪ್ರಾರಂಭದಲ್ಲಿ ಹಾಗೂ ಕೊನೆಯಲ್ಲಿ–ಹೀಗೆ ಗದ್ಯ ನಿರೂಪಣೆ ಇದೆ. ಆಯ್ದವರ ಪ್ರಸ್ತಾವನೆ, ಕೊನೆಯಲ್ಲಿ, ಶಬ್ದಾರ್ಥ ವಿಶೇಷ ಪದಗಳು, ಇವೆ.

೪೧೬. ಕೊಡವ ಜನಪದ ಕಲೆಗಳು

ಲೇ: ಚಕ್ಕೆರೆ ಶಿವಶಂಕರ್; ಪ್ರ: ಕರ್ನಾಟಕ ಜಾನಪದ ಪರಿಷತ್ತು, ೧, ಜಲದರ್ಶಿನಿ ಬಡಾವಣೆ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪; ಮೊ.ಮು.೨೦೦೮; ಪುಟ ೩೨; ಕ್ರೌನ್ ೧/೮

ಉಮ್ಮತ್ತಾಟ್, ಯರವರ ಕುಣಿತ, ಕಪ್ಪೆಯಾಟ್, ಕುಡಿಯರ ಕುಣಿತ, ಕುರುಬಾಟ್, ಕೈತಲೆ ಆಟ್, ಕೊರ್ತಿ ಆಟ್, ಕೊಂಬಾಟ್, ಕೊಂಬು ಕೊಟ್ಟ ವಾಲಗ, ಜೋಯಿಪಾಟ್, ಡೋಳುಪಾಟ್, ಡಪ್ಪು ಕುಣಿತ (ದಪ್ಪುರಾವತಿ), ಪರಿಯಕಳಿ, ಪೀಲಿಯಾಟ್, ವಾಲಗತ್ತಾಟ್, ಬೊಳುಕ್ಕಾಟ್, ಬಿಲ್ಲಾಟ್, ಬಾಳೋಪಾಟ್, ಹುತ್ತರಿ ಕೋಲಾಟ, ಸುಗ್ಗಿ ಕುಣಿತ, ಭೂತದ ಕುಣಿತ – ಈ ಕಲೆಗಳನ್ನು ಕುರಿತ ಪರಿಚಯ ಇರುವ ಕೃತಿ ಇದಾಗಿದೆ.

೪೧೭. ಕೊಡವರ ಮದುವೆ

ಲೇ: ಎಚ್.ಕೆ.ನಾಗೇಶ್; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ;

ಮೊ.ಮು.೧೯೯೯; ಪು: ೨+೩೦=೩೨; ಡಿಮ್ಮೈ ೧/೮

ಕೊಡವರು, ಅವರ ಸಾಮಾಜಿಕತೆ, ಧಾರ್ಮಿಕತೆ ಮುಂತಾದ ಹಿನ್ನೆಲೆಯೊಡನೆ, ಸಂಪ್ರದಾಯಗಳು ಪ್ರಾರಂಭವಾಗುತ್ತವೆ. ಆಭರಣಗಳು, ವೇಷಭೂಷಣಗಳು, ವಿವಾಹ ಪದ್ಧತಿಗಳಾದ ಕನ್ನಿಮಂಗಲ, ಕರಿಕ್ ಮುರಿಪ, ವಿವಾಹಾನಂತರದ ಆಚರಣೆಗಳ ಪ್ರಸ್ತಾಪವೂ ಇದೆ. ಕೂಡಾವಳಿ, ವಿಚ್ಛೇದನ, ಬಾಲ್ಯವಿವಾಹ ಪದ್ಧತಿಯ ಪ್ರಸ್ತಾಪವೂ ಇದೆ.

೪೧೮. ಕೊಡವರು

ಲೇ: ಬಿ.ಡಿ. ಗಣಪತಿ; ಪ್ರ: ನಮೂದು ಇಲ್ಲ; ಮೊ.ಮು: ೧೯೬೭; ಪು: ೮+೨೧೪=೨೨೨; ಡಿಮ್ಮೈ ೧/೮

ಜೀವನ ಮತ್ತು ಪದ್ಧತಿಗಳು ಎಂಬ ಅಡಿಬರಹ ಇದೆ. ಹದಿನೈದು ಅಧ್ಯಾಯಗಳಿವೆ: ೧.ದೇಶ ಮತ್ತು ಜನತೆ ೨.ಕೊಡವರ ಮೂಲವೆಲ್ಲಿ? ೩.ಐನ್ ಮನೆ ೪.ಜೀವನ ಮಾದರಿ ೫.ಕುಟುಂಬ ಮತ್ತು ಸಾಮಾಜಿಕ ಜೀವನ ೬.ಕ್ಷತ್ರಿಯ ಪರಂಪರೆ ೭.ಮಹಿಳೆಯರ ಸ್ಥಾನ ೮.ಕೊಡವರ ಉಡಿಗೆ ತೊಡಿಗೆಗಳು ೯.ಆಭರಣಗಳು ೧೦.ಜನಪದ ಗೀತೆಗಳು ಮತ್ತು ನೃತ್ಯಗಳು ೧೧.ಧಾರ್ಮಿಕ ನಂಬಿಕೆ ಮತ್ತು ವಿಶ್ವಾಸಗಳು ೧೨.ಕೆಲವು ನಂಬಿಕೆ ಮತ್ತು ವಿಶ್ವಾಸಗಳು ೧೩.ಕೊಡವರ ಹಬ್ಬಗಳು ೧೪.ಕೊಡವರ ಸಂಪ್ರದಾಯ ಮತ್ತು ಪದ್ಧತಿಗಳು ೧೫.ಸಾವು ಪದ್ಧತಿ. ಹಿನ್ನೆಲೆಯಾಗಿ ಎಂಬ ಭಾಗದಲ್ಲಿ, ಕೊಡಗಿನ ಪರಿಚಯ, ಚಾರಿತ್ರಿಕ ಹಿನ್ನೆಲೆ, ೧೯೫೬ರ ಕೊಡಗು, ಕಾವೇರಿ ಚರಿತ್ರೆ–ಎಂಬ ಬರಹಗಳೂ; ಪ್ರಕೃತಿ ಮಾತೆಯ ಪದತಳದಲ್ಲಿ ಎಂಬ ಭಾಗದಲ್ಲಿ, ಒಂದು ಚಿಂತನೆ ಹಾಗೂ ಕೆಲವು ನಾಣ್ನುಡಿಗಳು–ಎಂಬುವೂ; ಇವೆ. ಕೊಡವರ ಕೆಲವು ನಾಣ್ನುಡಿಗಳು ಎಂಬ ಭಾಗದಲ್ಲಿ, ನಾಣ್ನುಡಿಯ ಭಾವಾರ್ಥವನ್ನು ಪ್ರತಿಯೊಂದರ ಕೆಳಗಡೆ ಕನ್ನಡದಲ್ಲಿ ಕೊಡಲಾಗಿದೆ ಎಂಬ ವಿವರಣೆಯೊಡನೆ, ೨೨೨ ಕೊಡವ ಭಾಷೆಯ ಗಾದೆಗಳನ್ನೂ ಅವುಗಳ ಕನ್ನಡ ರೂಪಗಳನ್ನೂ ನೀಡಲಾಗಿದೆ.

೪೧೭. ಕೊಪ್ಪಳ ಜಿಲ್ಲೆಯ ಜನಪದ ಕಲಾವಿದರು

ಲೇ: ಗವೀಶ ಹಿರೇಮಠ; ಪ್ರ: ಕರ್ನಾಟಕ ಜಾನಪದ ಅಕಾಡಿಮ್ಮೈ, ಬೆಂಗಳೂರು–೦೨; ಮೊ.ಮು: ೨೦೦೯; ಪು: ೧೨+೧೬೪=೧೭೬; ಡಿಮ್ಮೈ ೧/೮

೬೫ ಜನ ಕಲಾವಿದರನ್ನು ಪರಿಚಯಿಸುವ ಗ್ರಂಥ: ೧.ಭೀಮವ್ವ ದೊಡ್ಡಬಾಳಪ್ಪ ಶಿಳ್ಳಿಕ್ಯಾತರ ೨.ವೀರಭದ್ರಪ್ಪ ಮರಿವೀರಪ್ಪ ಬಳಿಗಾರ ೩.ಭರಮಪ್ಪ ಪೂಜಾರ ೪.ಮುದುಕಪ್ಪ ಹೂಗಾರ ೫.ಏಕನಾಥಪ್ಪ ಜಂಬಣ್ಣ ೬.ಲಕ್ಷ್ಮಣ ಮಾಸ್ತರ ಬಿಸರಳ್ಳಿ ೭.ಈಶ್ವರಪ್ಪ ಹಡಪದ ೮.ಹನುಮಂತಪ್ಪ ಗೊಂದಲಿಗ ೯.ಶಿವಯ್ಯ ಮರುಳಸಿದ್ಧೇಶ್ವರ ಮಠ ೧೦.ದೇವೇಂದ್ರಪ್ಪ ಕಮ್ಮಾರ ೧೧.ಕಲ್ಲಪ್ಪ ಎಲಿಗಾರ ೧೨.ಲೋಕಪ್ಪ ಗಾಳಿ ೧೩.ಗುರುಬಸಯ್ಯ ಬ್ರಹನ್ಮಠ ೧೪.ಜಗದೀಶ ಬಸಪ್ಪ ಭಾವಿ ೧೫.ಬಡಕಪ್ಪ ಮಾಸ್ತರ ಬಳ್ಳಾರಿ ೧೬.ಶಂಕರಪ್ಪ ಹೊರಪೇಟ

೧೭.ಸಾವಿತ್ರಿ ಮಜುಮದಾರ ೧೮.ಚೆನ್ನಪ್ಪ ಹೂಗಾರ ೧೯.ಶಂಕರಪ್ಪ ಹೊರಪೇಟ ೨೦.ದೊಡ್ಡಪರಸಪ್ಪ ದೊಡ್ಡಮನಿ ೨೧.ಮಾರೆಪ್ಪ ದಾಸರ ೨೨.ಸುಟ್ಟವ್ವ ಹರಿಜನ ೨೩.ರೇಚಪ್ಪ ಮಾಸ್ತರ ಮಡಿವಾಳ ೨೪.ಬೀರಪ್ಪ ಯಡಿಯಾಪುರ ೨೫.ಲಕ್ಷ್ಮೀಬಾಯಿ ಚೆಲುವಾದಿ ೨೬.ದುರಗಪ್ಪ ಜಗ್ಗಲ ೨೭.ಹನುಮವ್ವ ಕುರುಬರ ೨೮.ಭೀಮಪ್ಪ ಬಿಂಗಿ ೨೯.ಸಿದ್ಧಲಿಂಗಯ್ಯ ಮೃತ್ಯುಂಜಯ ಚೌಡಿ ೩೦.ಶೇಖರಗೌಡ ಕಲ್ಲನಗೌಡ ಮಾಲಿಪಾಟೀಲ ೩೧.ರೇವಣಪ್ಪ ನಿಂಗಪ್ಪ ಹಿರೇಕುರುಬರ ೩೨.ನೀಲಮ್ಮ ಹಳ್ಳಿಗುಡಿ ೩೩.ಸಿದ್ಧಪ್ಪ ನರಸಪ್ಪ ಗೊಂಡಬಾಳ ೩೪.ಈರಮ್ಮ ನಾಗಪ್ಪ ಉಚಿಡಿ ೩೫.ಹನುಮಪ್ಪ ಕೌದಿ ೩೬.ಭರಮಪ್ಪ ಹರಿಜನ ೩೭.ಶರಣಪ್ಪ ವಡಗೇರಿ ೩೮.ಬಸಪ್ಪ ಚೌಡಕಿ ೩೯.ಭಾಷಾ ಸಾಬ ಇಮಾಮಸಾಬ ಚೌದರಿ ೪೦.ಶಿವಪ್ಪ ಬೀರಪ್ಪ ಡೊಳ್ಳಿನ ೪೧.ದಾವಲಸಾಬ ಅತ್ತಾರ ೪೨.ಮುದುಕವ್ವ ಮಾದರ ೪೩.ಹನುಮವ್ವ ಹಡಪದ ೪೪.ವೆಂಕಟಸಿಂಗ್ ನರಸಿಂಗಬಾನು ೪೫.ಭಾಷಾಸಾಬ ಮಹ್ಮದ ಹುಸೇನಸಾಬ ೪೬.ಸಂಗಪ್ಪ ಬಸಪ್ಪ ದೊಡ್ಡಬಸಪ್ಪನವರ್ ೪೭.ದುರಗಪ್ಪ ಗೆನ್ನಕ್ಕಿ ೪೮.ಮಲ್ಲಿಕಾರ್ಜುನಪ್ಪ ಗುರಪ್ಪ ಗಾಣಿಗೇರ ೪೯.ಕೃಷ್ಣಪ್ಪ ಹುಲಿಗೆಪ್ಪ ಗೊಂದಲಿಗ ೫೦.ಚಂದ್ರಶೇಖರ ಲಿಂಗದಹಳ್ಳಿ ೫೧.ಫಕೀರಸಾಬ ಮೌಲಾಸಾಬ ಭಾವಿಕಟ್ಟಿ ೫೨.ಕೆ.ದೊಡ್ಡವೀರಣ್ಣ ೫೩.ರಂಗಪ್ಪ ಮಾರ್ತಂಡಪ್ಪ ಐಲಿ ೫೪.ಶಂಕರಪ್ಪ ಗುರುಪಾದಪ್ಪ ಮಾಂತಾ ೫೫.ನಾಗಪ್ಪ ಡೋಣಾಪುರ ೫೬.ಚಿದಾನಂದಪ್ಪ ಮುಷ್ಠೂರ ೫೭.ಈರಮ್ಮ ಲೈನದಾರಿ ೫೮.ಹೊನ್ನಂಬಿ ಗೊರಳ್ಳಿ ೫೯.ಶಿರಸಪ್ಪಯ್ಯ ವಿಶ್ವಕರ್ಮ ೬೦.ದೊಡ್ಡಹನುಮಂತಪ್ಪ ಹೂಗಾರ ೬೧.ಕೆ. ಸರೋಜಬಾಯಿ ಗಡ್ಡಿ ೬೨.ಖುದಾನಸಾಬ ಜೂಲಕೇರಿ ೬೩.ಮಹಾದೇವಮ್ಮ ಶೆಟ್ಟರ ೬೪.ಕರಿಯಪ್ಪ ಮಾಸ್ತರ ಗುರಿಕಾರ ೬೫.ಹೊನ್ನಮ್ಮ ಆರಬಳ್ಳು

೪೨೦. ಕೊಪ್ಪಳ ಜಿಲ್ಲೆಯ ಜನಪದ ಸಂಸ್ಕೃತಿ

ಲೇ: ಬಸವರಾಜ ವೀ ಮೂಲಿಮನಿ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮; ಮೊ.ಮು: ೨೦೦೭; ಪು: ೮+೧೯೯=೧೧೭; ಡಿಮ್ಮೈ ೧/೮

೨೩ ಲೇಖನಗಳ ಸಂಕಲನ: ೧.ಕೊಪ್ಪಳ ಜಿಲ್ಲೆಯ ಜನಪದ ಸಂಸ್ಕೃತಿ ೨.ಅತಂತ್ರ ಬದುಕಿನ ಹಾದಿಯಲ್ಲಿ 'ಪುರವಂತರು' ೩.ಕುರುಬ ಗೊಲ್ಲರು ೪.ಚೌಡಿಕೆಯವರು ೫.ರಾಸುಗಳನ್ನು ಮೆರೆಸುತ್ತಿದ್ದ 'ಜುಲಾ'ಭವಿಷ್ಯವೆ ಈಗ ಮಸುಕು ೬.ಮುಳ್ಳಯ್ಯನವರ ಮುಳ್ಳಿನ ಹಾದಿ ೭.ಸಂಕ್ರಮಣ ಸ್ಥಿತಿಯಲ್ಲಿ ಸುಡುಗಾಡು ಸಿದ್ಧರು ೮.ಜೋಗಿಯರ ಶಿಥಿಲ ಬದುಕು ೯.ಕರಡಿ ಕುಣಿಸುವವರು ೧೦.ಮರೆಯಾಗುವತ್ತ ಕಲಾತ್ಮಕ ಪಲ್ಲಕ್ಕಿಗಳು ೧೧.ಪರ್ವತ ಮಲ್ಲಯ್ಯನವರು ೧೨.ಸಾಂಸ್ಕೃತಿಕ ಆರಾಧಕ 'ಕಿನ್ನರಿ ಜೋಗಿ'ಗಳ ಅತಂತ್ರ ಜೀವನ ೧೩.ಪಿಂಜಾರರ ಬದುಕು ಹಸನಾಗುವುದೆಂದಿಗೆ?೧೪.ಶ್ವಾನಗಳಿಗೆ ಅನ್ನದಾನ! ೧೫.ಸಂಗಾಪುರ ಚಾಪೆಗೆ ಬೇಕು ಆಸರೆಯ ಭರವಸೆ ೧೭.ಹತ್ತೂರು ಸುತ್ತುವ 'ಎತ್ತಿನ ಹೆಳವರು' ೧೮,ಅತಂತ್ರರಾಗಿರುವ 'ಆಯಗಾರರು' ೧೯.ತ್ರಿಶಂಕು

ಸ್ಥಿತಿಯಲ್ಲಿ ಶಂಖಸಿದ್ಧರು ೨೦.ಇವರೇ 'ಕಂಚಿವೀರ'ರು ೨೧.ಹಡದಿ–ಮಡಿ ಆಚರಣೆಯ ಸಂಕೇತ ೨೨.ನಂಜಿನ ನಾಶಕ್ಕೆ ಚಿಲಕಮುಖಿ ನೀರು! ೨೩.ಹಗಲು ವೇಷ ಎಷ್ಟು ದಿನ?

೪೨೧. ಕೊಪ್ಪಳ ಜಿಲ್ಲೆಯ ಜಾತ್ರೆಗಳು

ಲೇ: ಎಸ್. ಎಸ್. ಹಿರೇಮಠ; ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ,ಬೆಂಗಳೂರು–೧೮, ಮೊ.ಮು; : ೨೦೦೦; ಪು: ೨೬+೧೦೪=೧೩೦; ಡಿಮ್ಮೈ ೧/೮

ತಾಲೂಕುವಾರು ವಿಂಗಡಿಸಿಕೊಂಡು ಜಾತ್ರೆಗಳ ವಿವರಗಳನ್ನು ನೀಡಲಾಗಿದೆ. **೧.ಕೊಪ್ಪಳ ತಾಲೂಕಿನ ಜಾತ್ರೆಗಳು:** ಗವಿಸಿದ್ದೇಶ್ವರ ಜಾತ್ರೆ, ಯಮನೂರಪ್ಪನ ಉರುಸು, ಪಾಂಡುರಂಗನ ಜಾತ್ರೆ, ಹುಲಿಗೆಮ್ಮನ ಜಾತ್ರೆ, ಕುಮಾರರಾಮನ ಜಾತ್ರೆ, ಇಂದರಗಿ ಅ(ತಿ)ರಳಿಮರದಪ್ಪನ ಜಾತ್ರೆ, ಹನುಮಂತದೇವರ ಉಚ್ಚಯ್ಯ (ಉಚ್ಚಾಯ), ದುರಗಮ್ಮನ ಜಾತ್ರೆ, ಹನುಮಪ್ಪನ ಜಾತ್ರೆ, ತೆಪ್ಪೋತ್ಸವ, ಕೊರ್ರಮ್ಮನ ಚರಗೋತ್ಸವ, ಶಿವಪುರದ ಮಾರ್ಕಂಡೇಯ ಜಾತ್ರೆ, ಹೊಸಬಂಡಿ ಹರ್ಲಾಪುರದ ಈಶ್ವರ ಜಾತ್ರೆ, ಮಾರಮ್ಮನ ಜಾತ್ರೆ, ವಾಸವಿ ಜಾತ್ರೆ, ಬಸಾಪುರದ ಗವಿಸಿದ್ಧೇಶ್ವರ ಜಾತ್ರೆ, ಅಗಳಕೇರಾ (ಹನುಮಪ್ಪನ ಜಾತ್ರೆ), ಬೂದಿಗುಂಪ ಕರಿಯಮ್ಮನ ಜಾತ್ರೆ, ಶಾಂತಲಿಂಗೇಶ್ವರ ಜಾತ್ರೆ, ಅಮರೇಶ್ವರ ಜಾತ್ರೆ, ಕೂಕನಪಳ್ಳಿ ಜಾತ್ರೆ (ಕಾರ್ತೀಕ ಮಾಸದ ಬಸವೇಶ್ವರ ಪುರಾಣ ಪಠಣದ ಮುಕ್ತಾಯ ಸಮಾರಂಭದ ಜಾತ್ರೆ), ದ್ಯಾಮವ್ವನ ಜಾತ್ರೆ, **೨.ಗಂಗಾವತಿ ತಾಲೂಕಿನ ಜಾತ್ರೆಗಳು:** ಪಂಪಾಪತಿ ಹಂಪಮ್ಮನ ಜಾತ್ರೆ, ಬುತ್ತಿಪೂಜೆ, ಮಲ್ಲಿಕಾರ್ಜುನ ಮಠ ಚನ್ನಬಸವಸ್ವಾಮಿ ತೇರು, ಕೊಟ್ಟೂರು ಬಸವೇಶ್ವರ ರಥೋತ್ಸವ, ಆನೆಗೊಂದಿ ಕನಕಗಿರಿ ಮುಂತಾದವು. **೩.ಯಲಬುರ್ಗಾ ತಾಲೂಕಿನ ಜಾತ್ರೆಗಳು:** ಯಲಬುರ್ಗಾದ ಉರುಸು, ಮೊಗ್ಗಿ ಬಸವೇಶ್ವರ ಜಾತ್ರೆ, ಮಂಗಳೂರು ರ್‍ಯಾವಣಿಕೆ ಜಾತ್ರೆಗಳು, ಹನುಮಪ್ಪನ ಜಾತ್ರೆ, ಕುಕನೂರು ಗುದ್ನೆಪ್ಪನ ಜಾತ್ರೆ, ಮಹಾಮಾಯೆ ಜಾತ್ರೆ, ಕುಡಗುಂಟಿ ಬಸವೇಶ್ವರ ಜಾತ್ರೆ, ಕುದುರಿಮೋತಿಯ ಮೂರುದಿನಗಳ ಜಾತ್ರೆ, ಲಿಂಗನಬಂಡಿ, ವಜ್ರಬಂಡಿ, ಹನುಮಪ್ಪನ ಜಾತ್ರೆ, ದುರಗವ್ವನ ಜಾತ್ರೆ, ಮಳೆ ಮಲ್ಲೇಶ್ವರ ಜಾತ್ರೆ. **೪.ಕುಷ್ಟಗಿ ತಾಲೂಕಿನ ಜಾತ್ರೆಗಳು:** ೧.ಅಡವಿರಾಯನ ಜಾತ್ರೆ, ೨.ಬುತ್ತಿ ಬಸವೇಶ್ವರ ಜಾತ್ರೆ, ೩.ಕಟ್ಟೆ ದುರಗಮ್ಮನ ಜಾತ್ರೆ ೪.ದ್ಯಾಮವ್ವನ ಜಾತ್ರೆ ೫.ನಿಡಸೇಶಿಯ ಹುಲಿಗೆಮ್ಮನ ಮತ್ತು ಚನ್ನಬಸವಸ್ವಾಮಿ ಜಾತ್ರೆಗಳು ೬.ದೋಟಿಹಾಳ ಸುತಮುನಿಯಪ್ಪನ ಜಾತ್ರೆ ೭.ಮುದೇನೂರು ಮಹಿಳೆಯರ ತೇರು ೮.ಬೆನಕನ ಹಾಳು, ತಳವಗೇರಾ ಜಾತ್ರೆಗಳು ೯.ಕುಂಬಳಾವತಿ ದ್ಯಾಮವ್ವ ೧೦.ಚಂದಾಲಿಂಗೇಶ್ವರ ಜಾತ್ರೆ ೧೧.ಕಬ್ಬರಗಿ ಮಾಸ್ತೆಮ್ಮನ ಜಾತ್ರೆ, ಎಚ್.ಜೆ. ಲಕ್ಕಪ್ಪಗೌಡ ಅವರ ಮುನ್ನುಡಿ, ಕೊನೆಯಲ್ಲಿ ಕೆಲವು ಪೋಟೋಗಳು ಇವೆ.

೪೨೨. ಕೊಪ್ಪಳ ಜಿಲ್ಲೆಯ ಸಾಹಿತ್ಯ ಸಂಸ್ಕೃತಿ ಪರಂಪರೆ

ಲೇ: ಎಚ್.ಎಸ್.ಪಾಟೀಲ; ಪ್ರ: ಕೊಪ್ಪಳ ಜಿಲ್ಲಾ ಸಾಹಿತ್ಯ ಪರಿಷತ್ತು, ಕೊಪ್ಪಳ; ಮೊ.ಮು: ೨೦೧೦; ಪು: ೧೦+೨೧೮=೨೨೮; ಡಿಮ್ಮೈ೧/೮

ಹನ್ನೊಂದು ಅಧ್ಯಾಯಗಳಿವೆ: ೧.ಪ್ರವೇಶ ೨.ಸಾಹಿತ್ಯ ಸಂಸ್ಕೃತಿ ಪರಂಪರೆ ೩.ಚರಿತ್ರೆ ೪.ಸಾಹಿತ್ಯ ೫.ಕನ್ನಡ ಕಟ್ಟಿದವರು ೬.ರಂಗಚಟುವಟಿಕೆಗಳು ೭.ಜಾನಪದ ಹಾಗೂ ಜಾನಪದ ಕಲೆಗಳು ೮.ಲಲಿತ ಕಲೆಗಳು ೯.ಅಭಿವೃದ್ಧಿ ಹಾಗೂ ಜನಪ್ರತಿನಿಧಿಗಳು ೧೦.ಸ್ಮರಣೀಯ ಸೇವಾನಿರತರು ೧೧.ಹೈದರಾಬಾದ ವಿಮೋಚನಾ ಹೋರಾಟಗಾರರು. ನಲ್ಲೂರು ಪ್ರಸಾದ್ ಅವರ ಮುನ್ನುಡಿ ಇದೆ.

೪೨೩. ಕೊಮಾರಪಂತರ ಕಥನ ಕವನಗಳು

ಸಂ: ಎನ್.ಆರ್. ನಾಯಕ; ಪ್ರ: ಜಾನಪದ ಪ್ರಕಾಶನ, ಹೊನ್ನಾವರ; ಮೊ.ಮು: ೨೦೦೪; ಪು: ೬+೯೦=೯೬; ಡಿಮ್ಮೈ ೧/೮

ಐದು ಕಥನ ಕವನಗಳಿವೆ: ೧.ಮಾಬ್ಲ ಸ್ವೊಮಿ ೨.ಮಂಡಾಳದುರ್ಗೆ–ಸೀತೆ ೩.ಮಾಲ್ಕುಮಿ ಕನ್ನೆ ೪.ದರ್ಮಳ್ಳಿ ದರಿರಾಜ ಮತ್ತು ಅಸ್ತುರಿ ೫.ಸೆಣ್ಣಮ್ಮ. ಸಂಪಾದಕರ ಪ್ರಸ್ತಾವನೆ ಇದೆ.

೪೨೪. ಕೊಮಾರ ರಾಮಯ್ಯನ ಚರಿತ್ರೆ

ಸಂ: ಎಂ.ಎಂ. ಕಲಬುರ್ಗಿ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು.೨೦೦೧; ಪು: ೮+೫೬+೪೧೨=೪೭೬; ಡಿಮ್ಮೈ ೧/೮

ತಾಳೆಗರಿ ಹಾಗೂ ಇತರ ಹಸ್ತಪ್ರತಿಗಳಿಂದ ಪರಿಷ್ಕರಿಸಿದ ಕಾವ್ಯ ಇದಾಗಿದೆ.

೪೨೫. ಕೊರಗರ ಸಂಸ್ಕೃತಿ

ಲೇ: ಪುರುಷೋತ್ತಮ ಬಿಳಿಮಲೆ; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು–೫೬೦ ೦೦೨: ಮೊ.ಮು: ೧೯೯೩; ಪು: ೪೮+೧೦೮=೧೫೬; ಕ್ರೌನ್ ೧/೮

ಮೂರು ಅಧ್ಯಾಯಗಳಿವೆ: ೧.ಹಿನ್ನೆಲೆ ೨.ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ ೩.ಭಾಷೆ–ಸಾಹಿತ್ಯ. ಅನುಬಂಧದಲ್ಲಿ ಇಷ್ಟು ಇವೆ: ೧.೧೮೯೪ರಲ್ಲಿ ಸ್ವರಕನು ನೀಡಿದ ಮಾಹಿತಿ ೨.ಕೊರಗ ಭಾಷೆಯಲ್ಲಿ ಒಂದು ಜನಪದ ಕತೆ; ಅನುವಾದ, ಟಿಪ್ಪಣಿ ೩.ಕೊರಗ ತನಿಯನ ಕತೆ ೪.ಪೆದ್ದನ ಕತೆ ೫.ಕತ್ತಲೆಗೆ ಎಷ್ಟು ಅಕ್ಕಿ?ಸಂಜೆಗೆ ಎಷ್ಟು ಅಕ್ಕಿ? ೬.ಪಂಥ ೭.ಅತ್ತೆ ಸತ್ತ ಕತೆ ೮.ತಾಯಿ ಮಗನ ಕತೆ ೯.ಕಾಟದ ಕಾನದ ೧೦.ಕೊರಗರು ಹೇಳಿದ ಒಂದು ಕವಿತೆ ೧೧.ಕೊರಗರು ಹೇಳಿದ ತಿತ್ತಿರಿ ಪದ(ಶಿಶು ಗೀತೆ) ೧೨.ಒಂದು ಕವಿತ ೧೩.ಒಂದು ಶಿಶುಗೀತೆ ೧೪.ಕೊರಗರ ಕೋಲ ೧೫.ಕೊರಗ ಜನಾಂಗದ ಪ್ರಥಮ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳು ೧೬.ಕಾಪು ಸಮಗ್ರ ಗ್ರಾಮೀಣ ಆಶ್ರಮ ಇವರು ತಮ್ಮ ಅಧ್ಯಯನದಲ್ಲಿ ಕಂಡುಕೊಂಡ ಮುಖ್ಯ ಅಂಶಗಳು. ಕೆಲವು ಫೋಟೋಗಳಿವೆ. ಬರಗೂರು ರಾಮಚಂದ್ರಪ್ಪ ಅವರ ಸಂಸ್ಕೃತಿ–ಉಪಸಂಸ್ಕೃತಿ ಎಂಬ ಸುದೀರ್ಘ ಪ್ರಸ್ತಾವನೆ ಇದೆ.

೪೨೬. ಕೋಗಿಲಾಗಿ ಕೂಗುತೀಯಲ್ಲೊ

ಸಂ: ಪಿ.ಕೆ. ರಾಜಶೇಖರ; ಪ್ರ: ಹೊನ್ನಾರು ಜನಪದ ಗಾಯಕರು, ಎಲ್ ೨೪, ೯ನೇ ತಿರುವು ಮಾನಸಗಂಗೋತ್ರಿ, ಮೈಸೂರು–೫೭೦ ೦೦೬; ಮೊ.ಮು. ೨೦೦೪; ಪು: ೯೬; ಡಿಮ್ಮೈ ೧/೮

ಮೈಸೂರಿನ ಹೊನ್ನಾರು ಜನಪದ ಗಾಯಕರು ಕಾರ್ಯಕ್ರಮಗಳಲ್ಲಿ ಹಾಡಲು ಬಳಸಿಕೊಳ್ಳುವ ೩೨ ಜನಪದ ಗೀತೆಗಳನ್ನು ಸಂಕಲಿಸಿ ನೀಡಿದ್ದಾರೆ. ತಂಡದ ಪರಿಚಯ ಹಾಗೂ ಸಂಗೀತ ಸಾಧಕ ಮೈಸೂರು ಎಸ್. ಮ್ಯಾನ್ಯುಯಲ್ ಅವರ ಬಗ್ಗೆ ಲೇಖನ ಇದೆ.

೪೨೭. ಕೋಟದವರು

ಲೇ: ಪಾ.ನ. ಮಯ್ಯ; ಪ್ರ: ಪಾರಂಪಳ್ಳಿ ಪ್ರಕಾಶನ ಮಂಗಳೂರು; ಮೊ.ಮು: ೧೯೯೫; ಪು: ೮+೩೫೦ = ೩೫೮; ಸೆಮಿ.

ಕೋಟ ಪ್ರದೇಶದ ಸಾಂಸ್ಕೃತಿಕ ಅಧ್ಯಯನ ಎಂಬ ಅಡಿಬರಹ ಇದೆ. ಏಳು ಭಾಗಗಳಿವೆ: **ಒಂದು:** ಹಿನ್ನೆಲೆ. **ಎರಡು:** ಕೋಟ ಪದ ನಿಷ್ಪತ್ತಿ ಮತ್ತು ಪರಿಚಯ: ೧.ಕೋಟಪದ ನಿಷ್ಪತ್ತಿ ೨.ಬೌಗೋಳಿಕ ಪರಿಚಯ ೩.ಕೋಟ ಪ್ರದೇಶದ ೧೪ ಗ್ರಾಮಗಳು ೪.ಶಾಸನಗಳಲ್ಲಿ ಕೋಟ ಪ್ರದೇಶ. **ಮೂರು:** ಕೋಟ ಪ್ರದೇಶದ ಆರ್ಥಿಕ ಪರಿಸ್ಥಿತಿ: ೧.ಆರ್ಥಿಕ ನೆಲೆಗಳು ೨.ಮೀನುಗಾರಿಕೆ ೩.ಹೋಟೆಲು ಉದ್ಯಮ ೪.ವ್ಯಾಪಾರ. **ನಾಲ್ಕು:** ಕೋಟ ಜಾನಪದ– ಭಾಗ ೧: ೧.ಪ್ರವೇಶ ೨.ಜೀವನಾವರ್ತನದ ವಿವಿಧ ಘಟ್ಟಗಳು ೩.ವಾರ್ಷಿಕಾವರ್ತನದ ವಿವಿಧ ಘಟ್ಟಗಳು ೪.ಜೀವನಾವರ್ತನ ಮತ್ತು ವಾರ್ಷಿಕಾವರ್ತನದ ಆಚರಣೆಗಳಿಗಿರುವ ಅಂತರ್‌ಸಂಬಂಧ. **ಐದು:** ಕೋಟ ಜಾನಪದ– ಭಾಗ ೨: ೧.ವಸತಿ ೨.ಆಹಾರ ಮತ್ತು ಪಾನೀಯ ೩.ಉಡುಗೆ ತೊಡುಗೆಗಳು ೪.ಮೌಖಿಕ ಜಾನಪದ ೫.ಜನಪದ ರಂಗಕಲೆಗಳು. **ಆರು:** ಕೋಟ ಪ್ರದೇಶದ ಧಾರ್ಮಿಕ ಆಚರಣೆಗಳು: ೧.ಕೋಟ ಪ್ರದೇಶದ ಪ್ರಮುಖ ದೇವಾಲಯಗಳು ಮತ್ತು ಅವುಗಳಲ್ಲಿನ ಆರಾಧನಾ ಸಂಪ್ರದಾಯಗಳು ೨.ಕೋಟ ಪ್ರದೇಶದ ಪ್ರಮುಖ ದೇವಸ್ಥಾನಗಳು ಮತ್ತು ಅವುಗಳಲ್ಲಿನ ಆರಾಧನಾ ಸಂಪ್ರದಾಯಗಳು ೩.ದೇವ ಹಾಗೂ ದೈವ ಸ್ಥಾನಗಳು ಸೂಚಿಸುವ ಸಾಂಸ್ಕೃತಿಕ ಹೊಕ್ಕು ಬಳಕೆಗಳು. **ಏಳು:** ಸಮಾರೋಪ. ಪುರುಷೋತ್ತಮ ಬಿಳಿಮಲೆ ಅವರ ಮುನ್ನುಡಿ ಅನುಬಂಧದಲ್ಲಿ ಒಂದು ಕಥೆ ಎರಡು ಸಾಂದರ್ಭಿಕ ಹಾಡುಗಳು ನಿರೂಪಕಿಯರ ಹೆಸರುಗಳು ಕೆಲವು ಫೋಟೋಗಳು ಇವೆ.

೪೨೮. ಕೋಟಿ ಚೆನ್ನಯ ಪಾರ್ದನ ಸಂಪುಟ

ಸಂ: ದಾಮೋದರ ಕಲ್ಮಾಡಿ; ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು; ಮೊ.ಮು: ೨೦೦೨; ಪು: ೨೦+೩೧೫ = ೩೩೫; ಕ್ರೌನ್ ೧/೮

ಮೂರು ಭಾಗಗಳಲ್ಲಿ ನೀಡಲಾಗಿರುವ ತುಳು ಕಾವ್ಯ: ೧.ನಾಂದಿ: ಪಾರ್ದನದ ಪೀಠಿಕೆ ಬೆರ್ಮೆರೆ ಸಂದಿ ಕೇಂಜವ ಪಕ್ಕಿಲೆನ ಸಂದಿ ಏಕಸಾಲೆರೆ – ದೆಯ್ಯಾರೆ ಸಂದಿ ನಾಗಬೆರ್ಮೆರೆ ಸಂದಿ ೨.ಬದುಕು: ದೇಯಿ ಬೈದೆತಿ ಸಂದಿ ಬಲ್ಲಾಲೆರೆ ಸಂದಿ ಬಂಟರೆ ಸಂದಿ ಬುದ್ಯಂತ ಬೀರ ಕೊಲಲ ಸಾದನೆ ೩.ಅಂತ್ಯ; ವಾಗ್ದಾನ ಅಮರ ತೀರ್ಪು ಅಂತ್ಯ ಸಂಸ್ಕಾರ ಗರೋಡಿ–ಗುಂಡ ನಿರ್ಮಾಣ ಅನೆಮುನೆ. ಆಯಾ ಪು: ದ ಪದ್ಯಭಾಗದ ಶಬ್ದಾರ್ಥ ಭಾವಾರ್ಥಗಳೆರಡನ್ನೂ ಆಯಾ ಪು: ದಲ್ಲೇ ನೀಡಲಾಗಿದೆ. ಅಕ್ಷರ ಸೂರ್ಯನಿಗೆ ನಮನ ಎಂಬ ಮಲ್ಲೇಪುರಂ ಜಿ.ವೆಂಕಟೇಶ ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ ಕ್ಷೇತ್ರಕಾರ್ಯ ನಡೆಸಿದ ಪ್ರದೇಶದ ಭೂಪಟ, ವಕ್ತೃಗಳ ಪಟ್ಟಿ ಇವೆ.

೪೨೯. ಕೋಟಿ ಚೆನ್ನಯ

ಲೇ: ವಾಮನ ನಂದಾವರ; ಪ್ರ: ಹೇಮಾಂಶು ಪ್ರಕಾಶನ, ಮಂಗಳೂರು–೫೭೫ ೦೦೬; ಮೊ.ಮು. ೨೦೦೧; ಪು: ೪೨೦; ಕ್ರೌನ್ ೧/೪

ಜಾನಪದೀಯ ಅಧ್ಯಯನ ಎಂಬ ಅಡಿಬರಹ ಇದೆ. ಪಿಎಚ್.ಡಿ. ಮಹಾಪ್ರಬಂಧ. ಒಂಬತ್ತು ಅಧ್ಯಾಯಗಳಿವೆ: ೧.ಕೋಟಿ ಚೆನ್ನಯ: ನಡೆದಿರುವ ಕೆಲಸದ ಸಮೀಕ್ಷೆ ೨.ಕೋಟಿ ಚೆನ್ನಯ: ಕಥೆ–ಪಾಡ್ದನ ಆರಾಧನ ಸ್ವರೂಪ ೩.ಕೋಟಿ ಚೆನ್ನಯ: ಜನಪದ ಸಾಹಿತ್ಯ ಪ್ರಕಾರವಾಗಿ ಮತ್ತು ಮೌಖಿಕ ಮಹಾಕಾವ್ಯವಾಗಿ ೪.ಕೋಟಿ ಚೆನ್ನಯ: ಚಾರಿತ್ರಿಕತೆ ಮತ್ತು ಭೌಗೋಳಿಕತೆ ೫.ಕೋಟಿ ಚೆನ್ನಯ: ಆರಾಧನ ಸಂಕೀರ್ಣದ ಭಾಗವಾಗಿ ಗರಡಿಗಳು ಮತ್ತು ವಿಗ್ರಹಗಳು ೬.ಕೋಟಿ ಚೆನ್ನಯ: ಮನೋವೈಜ್ಞಾನಿಕ ಮತ್ತು ರಾಚನಿಕ ದೃಷ್ಟಿ ೭.ಕೋಟಿ ಚೆನ್ನಯ: ಸಾಂದರ್ಭಿಕ ಮತ್ತು ಪ್ರದರ್ಶನ ಸಿದ್ಧಾಂತಗಳ ದೃಷ್ಟಿಯಲ್ಲಿ ೮.ಕೋಟಿ ಚೆನ್ನಯ: ಅಂತಾರಾಷ್ಟ್ರೀಯ ಜಾನಪದ ಹಿನ್ನೆಲೆಯಲ್ಲಿ ಕೋಟಿ ಚೆನ್ನಯದ ತೌಲನಿಕತೆ ೯.ಕೋಟಿ ಚೆನ್ನಯದ ಜನಪ್ರಿಯತೆ ಮತ್ತು ಆಧುನಿಕತೆ. ಬಿ.ಎ. ವಿವೇಕ ರೈ, ಹಿ.ಶಿ. ರಾಮಚಂದ್ರೇಗೌಡ, ತೀ.ನಂ. ಶಂಕರನಾರಾಯಣ ಅವರುಗಳ ನುಡಿಗಳಿವೆ. ಕೃತಿಯ ಒಳಗೆ ಹಲವು ಫೋಟೋಗಳು, ರೇಖಾಚಿತ್ರಗಳು, ಭೂಪಟಗಳಿವೆ. ಕೊನೆಯಲ್ಲಿ ಫಲಿತಾಂಶ ಎಂಬ ಲೇಖನವಿದೆ. ಹನ್ನೆರಡು ಅನುಬಂಧಗಳಿವೆ: ೧.ದೃಶ್ಯ ಶ್ರವ್ಯ ದಾಖಲಾತಿ ೨.ಕೋಟಿ ಚೆನ್ನಯ ಪ್ರಕಟಿತ ಸಾಹಿತ್ಯ ಕೃತಿಗಳು ೩.ಮೌಖಿಕ ಕಾವ್ಯ ಪ್ರದರ್ಶನ ಪಠ್ಯ ಸಂಗ್ರಹ ೪.ಕೋಟಿ ಚೆನ್ನಯ ಪಾಡ್ದನದ ಕೆಲವು ಪಾಠಗಳ ಮುಖ್ಯ ಘಟ್ಟಗಳು ೫.ಜನಪದ ವೈದ್ಯ ಪಠ್ಯ ೬.ಗರಡಿ ಪ್ರಸರಣ ವಿಳಾಸ ಪಟ್ಟಿ ೭.ಅವಳಿ ದರ್ಶನ ಪಾತ್ರಿಗಳು ೮.ಕ್ಷೇತ್ರ ಕಾರ್ಯ ಮಾಹಿತಿ ೯.ಸಾಂಸ್ಕೃತಿಕ ಪದಕೋಶ ೧೦.ನಿರೂಪಕರ ಮಾಹಿತಿ ೧೧.ಪರಾಮರ್ಶನ ಸಾಹಿತ್ಯ ೧೨.ಪದ ಸಂದರ್ಭ ಸೂಚಿ.

೪೩೦. ಕೋಟೆಯವರು

ಲೇ: ಡಿ.ಆರ್. ಪಾಂಡುರಂಗ; ಪ್ರ: ಸ್ವಾಗತ ಸಮಿತಿ, ಅಖಿಲ ಭಾರತ ೭೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ–೨೦೦೭, ಉಡುಪಿ; ಮೊ.ಮು.೨೦೦೭; ಪು: ೧೦+೧೫೮=೧೬೮;

ಡೆಮ್ಮೈ ೧/೮

ಸೇರೆಗಾರರ ಜನಾಂಗೀಯ ಅಧ್ಯಯನ ಎಂಬ ಅಡಿಬರಹ ಇದೆ. ಹದಿಮೂರು ಅಧ್ಯಾಯಗಳಿವೆ: ೧.ಹಿನ್ನೆಲೆ ೨.ಮೂಲ ಮತ್ತು ಐತಿಹಾಸಿಕ ವಿವರ ೩.ಸಾಮಾಜಿಕ ಜೀವನ ೪.ವಿವಾಹ ಸಂಪ್ರದಾಯಗಳು, ಪ್ರಾದೇಶಿಕತೆ ವ್ಯತ್ಯಾಸಗಳು ೫.ಸೇರೆಗಾರರ ಸಾಮಾಜಿಕ ಜೀವನ ೬.ಜೀವನ ಚಕ್ರ (ಷೋಡಶಕರ್ಮಗಳು) ೭.ಧಾರ್ಮಿಕ ಆಚರಣೆಗಳು ೮.ಧಾರ್ಮಿಕ ಪುರುಷರು ೯.ಹಬ್ಬ ಮತ್ತು ಉತ್ಸವಗಳು ೧೦.ವೈದ್ಯ ಮತ್ತು ಇತರ ಹವ್ಯಾಸಗಳು ೧೧.ಭೌತಿಕ ಸಂಸ್ಕೃತಿ ೧೨.ಜನಪದ ಸಾಹಿತ್ಯ ೧೩.ವರ್ತಮಾನ. ಅಧ್ಯಯನದ ಸಾರಾಂಶ ಎಂಬ ಇನ್ನೊಂದು ಅಧ್ಯಾಯವೂ ಇದೆ. ಅನುಬಂಧದಲ್ಲಿ, ವಕ್ತೃಗಳ ವಿಳಾಸ, ಆಕರ ಗ್ರಂಥಗಳು, ಪರಾಮರ್ಶನ ಗ್ರಂಥಗಳು ಇವೆ. ಉಪ್ಪುಂದ ಚಂದ್ರಶೇಖರ ಹೊಳ್ಳ ಅವರ ಪ್ರಸ್ತಾವನೆ ಇದೆ.

೪೩೧. ಕೋತಿ ಮತ್ತು ರಾಕ್ಷಸ ಹಾಗೂ ಇತರ ಜನಪದ ಕಥೆಗಳು

ನಿರೂಪಕರು: ಎ. ಕರಿಯ ಕುಡಿಯ, ಸಂ: ಕೆ.ಕೆ. ವೀಣಾ ; ಪ್ರ: ಕೃತಿ ಪ್ರಕಾಶನ, ಪರಮೇಶ್ವರಿ ನಿವಾಸ, ಸರ್ಕಾರಿ ಪ್ರೌಢಶಾಲೆ ಹತ್ತಿರ, ಕುಂಜತ್ತೂರು, ಮಂಜೇಶ್ವರ ಗ್ರಾಮ, ಕಾಸರಗೋಡು ತಾಲ್ಲೂಕು; ಮೊ.ಮು: ೨೦೦೨; ಪು: ೧೬+೯೬=೧೧೨; ಡೆಮ್ಮೈ ೧/೮

ಐದು ಕಥೆಗಳಿವೆ : ೧.ಕೋತಿ ಮತ್ತು ರಾಕ್ಷಸ ೨.ಮಾಲಿನಿ ಜಯಸಿಂಹ ೩.ಮಾತ್ಸರ್ಯದ ಸೋದರರು ೪.ದೇವಿ ಮತ್ತು ಮಾಯಾರಾಕ್ಷಸಿ ೫.ಕೇಸರಿಯ ಸಾಹಸ. ವ.ನಂ. ಶಿವರಾಮು ಅವರ ಮುನ್ನುಡಿ ಇದೆ.

೪೩೨. ಕೋರಣ್ಯ ನೀಡವ್ವ ಕೋಡುಗಲ್ಲಯ್ಯನಿಗೆ

ಸಂ: ಚಕ್ಕೆರೆ ಶಿವಶಂಕರ್; ಪ್ರ: ಕಲ್ಯಾಣಿ ಪ್ರಕಾಶನ, ಶ್ರೀನಗರ, ಬೆಂಗಳೂರು-೫೬೦ ೦೫೦; ಮೊ.ಮು. ೧೯೮೮; ಪು: ೧೮೬; ಕ್ರೌನ್ ೧/೮

ಮಲೆಯ ಮಾದೇಶ್ವರ ಮಹಾಕಾವ್ಯದ ಮೂರು ಅಧ್ಯಾಯಗಳನ್ನುಳ್ಳ ಗ್ರಂಥ: ೧.ಸತ್ಯಗುಣೆ ಶಂಕಮ್ಮನ ಸಾಲು ೨.ಇಕ್ಕೇರಿ ದೇವಮ್ಮನ ಸಾಲು ೩.ಬೇವಿನಹಟ್ಟಿ ಕಾಳಮ್ಮನ ಸಾಲು. ೩೧ ಪುಟಗಳಷ್ಟು ದೀರ್ಘವಾದ ಪ್ರಸ್ತಾವನೆ, ಕೊನೆಯಲ್ಲಿ ಶಬ್ದಸೂಚಿ, ಅರ್ಥಕೋಶ, ಇವೆ.

೪೩೩. ಕೋಲಾಟ

ಲೇ: ಮಳಲಿ ವಸಂತಕುಮಾರ್; ಪ್ರ: ರಾಜ್ಯ ಸಂಪನ್ಮೂಲ ಕೇಂದ್ರ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು-೨೩; ಮೊ.ಮು: ೧೯೮೯; ಪು: ೩೬; ಪೂಲ್ಸ್ ಕ್ಯಾಪ್ ೧/೪

ಕೋಲಾಟದ ಬಗ್ಗೆ, ಕೋಲು ಪದಗಳ ಗ್ಗೆ, ಕೋಲಾಟದ ಬಗೆಗಳ ಬಗ್ಗೆ, ಸಂಕ್ಷಿಪ್ತವಾಗಿ ತಿಳಿಸಿಕೊಡುವ ಕೃತಿ. ಕೆಲವು ರೇಖಾ ಚಿತ್ರಗಳಿವೆ. ಲಿಂಗದೇವರು ಹಳೆಮನೆ ಅವರ ಮುನ್ನುಡಿ ಇದೆ.

೪೩೪. ಕೋಲಾಟಗಳು ಮತ್ತು ಕೋಲುಪದಗಳು

ಸಂ: ಎಸ್.ಪಿ. ಪದ್ಮಪ್ರಸಾದ್; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು – ೧೮; ಮೊ.ಮು. ೧೯೮೨, ಪು: ೩೪+೧೧೦=೧೪೪, ಡಿಮ್ಮೈ ೧/೮

ಎರಡು ಭಾಗಗಳಿವೆ: ೧.ಕೋಲು ಪದಗಳು: ಇದರಲ್ಲಿ ೩೦ ಪದಗಳಿವೆ. ೨.ಕೋಲಾಟಗಳು: ಇದರಲ್ಲಿ ೩೫ ಬಗೆಯ ಕೋಲಾಟಗಳ ವಿವರಣೆಯೊಡನೆ ಅಲ್ಲಲ್ಲಿ ರೇಖಾಚಿತ್ರಗಳೂ ಛಾಯಾಚಿತ್ರಗಳೂ ಇವೆ. ಎರಡು ಭಾಗಗಳಲ್ಲಿ ಪ್ರಸ್ತಾವನೆ ಇದೆ; ಒಂದು ಭಾಗವು ಕೋಲಾಟಗಳನ್ನೂ ಇನ್ನೊಂದು ಭಾಗವು ಕೋಲುಪದಗಳನ್ನೂ ವಿವರಿಸುತ್ತದೆ. ಹಂಪ ನಾಗರಾಜಯ್ಯ ಅವರ ಮುನ್ನುಡಿ ಇದೆ.

೪೩೫. ಕೋಲಾಟಗಳು

ಲೇ: ಡಿ.ಲಿಂಗಯ್ಯ; ಪ್ರ: ಐ.ಬಿ.ಎಚ್. ಪ್ರಕಾಶನ, ಬೆಂಗಳೂರು; ಮೊ.ಮು. ೧೯೮೩, ಪು: ೪೪, ಕ್ರೌನ್ ೧/೮

ಕೋಲಾಟವನ್ನು ಕುರಿತ ಒಂದು ಸಂಕ್ಷಿಪ್ತ ಅಧ್ಯಯನ. ೪ ಛಾಯಾಚಿತ್ರಗಳು, ೪ ರೇಖಾ ಚಿತ್ರಗಳು, ಇವೆ.

೪೩೬. ಕೋಲಾಟದ ಪದಗಳು

ಸಂ: ಡಿ.ಕೆ. ಈರೇಗೌಡ; ಪ್ರ: ಪೃಥ್ವೀ ಪ್ರಕಾಶನ, ಸರಸ್ವತೀಪುರಂ, ಮೈಸೂರು–೯; ಮೊ.ಮು. ೧೯೭೫; ಪು: ೨೨+೧೦೬=೧೨೮; ಕ್ರೌನ್ ೧/೮

೬೦ ಕೋಲು ಪದಗಳ ಸಂಕಲನವಿದು. ಜೀ.ಶಂ. ಪರಮಶಿವಯ್ಯ ಅವರ ೨೨ ಪುಟಗಳಷ್ಟು ದೀರ್ಘವಾದ ಮುನ್ನುಡಿ, ಕೊನೆಯಲ್ಲಿ ಅರ್ಥಕೋಶ, ಇವೆ.

೪೩೭. ಕೋಲಾಟದ ಪದಗಳು

ಸಂ: ಬಸವರಾಜ ಮಲಶೆಟ್ಟಿ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೧೮; ಮೊ.ಮು.೧೯೮೧; ಪುಟ ೮+೯೮=೧೦೬; ಡಿಮ್ಮೈ ೧/೮

ಇಲ್ಲಿನ ೧೦೮ ಹಾಡುಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ: ೧.ದೈವ ೨.ಪ್ರಣಯ ೩.ತಮಾಶೆ ೪.ಸಂಕೀರ್ಣ. ಹಂಪ. ನಾಗರಾಜಯ್ಯ ಅವರ ಮುನ್ನುಡಿ, ಶಬ್ದಕೋಶ ಇವೆ.

೪೩೮. ಕೋಲಾಟದ ಪದಗಳು

ಸಂ: ಸೋಮನಾಥ ನುಚ್ಚಾ; ಪ್ರ: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦೦೦೨; ಮೊ.ಮು: ೨೦೦೬; ಪು: ೭೮+೪೬೪=೫೪೨; ಡಿಮ್ಮೈ ೧/೮

ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆಯ ೯ನೆಯ ಸಂಪುಟ. ೩೫೭ ಕೋಲುಪದಗಳು ಹಾಗೂ ಮೂರು ಪ್ರಸಂಗಗಳನ್ನುಳ್ಳ ಸಂಕಲನ: **ಭಾಗ ಒಂದು: ದೇವರು:** ೧.ಪೈಲೆ ಪ್ರಥಮ ಶರಣಾತ್ರಿ ೨.ನಮದು ಶಿವಶರಣ ೩.ಈಗ್ಯಾರ ನೆನದೇವು ೪.ಶರಣೆನ್ನಿರೋ ೫.ಮಾತಾಲಿ ನೆನದೇವು ೬.ಮಾತನಾಡಮ್ಮಯ್ಯ ಮಾತನಾಡೆ ೭.ನಮ್ಮ ಮ್ಯಾಲ ದಯವಿರಲಿ ೮.ಶರಣು ಮಾಡುವೆ ಸ್ವಾಮಿ ೯.ವಿಗ್ಗಣೇಶರಗೆ ಶರಣು ೧೦.ಗಣನಾಥೋ ಸುಂದರ ೧೧.ಗಣನಾಯ್ಕ ೧೨.ಶ್ರೀ ಗಣರಾಯ ಸ್ತುತಿ ೧೩.ಗಣನಾಥ ೧೪.ಗಣಪತಿ ಭವನ ೧೫.ಗಣಸ್ತುತಿ ೧೬.ಗಜಾಽನನಽರೇ ಗಜಾನನಽ ೧೭.ಓಂ ನಮೋ ಗಣಪತಿ ೧೮.ಗಣಪತಿ ನಾಮ್ ನುಡೀತ ೧೯.ಬಂದನೊ ಗಣಪತಿ ೨೦.ರಂಗನ ಮೇಲೆ ಚೆಲ್ಯವರೋಕುಳಿಯ ೨೧.ರಂಗಾ ನೀ ಚೆಲುವ ೨೨.ಕರಿಯ ಗೋಪಾಲ ೨೩.ರಂಗ ನಿನ್ನ ಪಾದಕ ೨೪.ಬಾಲಕೃಷ್ಣ ಹಾಲೆಲ್ಲ ಉಳಿಸಿದನೇ ೨೫.ಓಡಿಬರುವನಾರೋ ಶ್ರೀಕೃಷ್ಣ ೨೬.ಶಾಲಿಯ ಕರುಣಿಸೊ ರಂಗ ೨೭.ಚಂಡಿನಾಟ ಆಡುವಾಗ ೨೮.ಗೋಪಾಲ ಮಾಡಿದನು ದಾಳಿ ೨೯.ಬನದಾಗೋ ರಂಗ ೩೦.ವಿಶಾಲ ಕೋಸಲ ಗೋವಿಂದ್ಹರಿಯೆ ೩೧.ಚೆನ್ನಬಸವಣ್ಣ ೩೨.ಬಸವಣ್ಣ ೩೩.ಬಸವಣ್ಣ ಬರುವಾಗ ೩೪.ಎಲ್ಲಿದ್ಯೋ ಬಸವಣ್ಣ ೩೫.ದೊಡ್ಡಮ್ಮಗೆ ಜೋಡಿಸಿ ಕೈಯ ಮುಗಿದೇವು ೩೬.ದುರ್ಗಮ್ಮ ೩೭.ಹನುಮಪ್ಪ ಸ್ವಾಮಿ ೩೮.ಕನಕಗಿರಿ ಸ್ವಾಮಿ ೩೯.ನಂಜಯ್ಯ ಸುಳಿದನು ಸೂಳೇರ ಕೇರಿಯಲ್ಲಿ ೪೦.ನಂಜುಂಡ ೪೧.ಹಾಲು ಕುಡಯೋ ನಂಜುಂಡ ೪೨.ಚಾಮುಂಡಿ ಪದ ೪೩.ಮೈಸೂರು ಚಾಮುಂಡಿ ೪೪.ಮಾದಪ್ಪ ೪೫.ಕೊಂಡದೇವತೆ ೪೬.ಕೆಂಗಯ್ಯ ೪೭.ಕೆಂಗಪ್ಪ ೪೮.ಮಲ್ಲಯ್ಯ ೪೯.ಜಲದುರಗಿ ೫೦.ಸ್ವಾಮಿ ಮಳೆರಾಯ ೫೧.ಕೊಮಾರ ಸ್ವಾಮಿ ೫೨.ಈರಣ್ಣ ೫೩.ಜುಂಜಪ್ಪ ೫೪.ಗಾದಿರ್ಕೈಯ ೫೫.ತಿಮ್ಮಯ್ಯ ೫೬.ಮುತ್ಯಾದ್ಯಾವಣ್ಣ ೫೭.ಹರಕೆ. **ಪೌರಾಣಿಕ:** ೫೮.ಸತ್ಯ ಶ್ರಾವಣ ೫೯.ಚೆಂದೊಳ್ಳೆ ರಾಮನ ಕೊಂಡಾಡಿರೋ ೬೦.ನೋಡ ಬಂದೆವು ನಿಮ್ಮ ಹನುಮಪ್ಪನ ೬೧.ಲವಣಿಕೇರ್ ಹನುಮ ೬೨.ಬಾಲದ್ಹನುಮಂತಾ ೬೩.ಗಿಳಿಹಿಂಡ ಗೆದ್ದಾಳೆ ದುರುಪತಿ ೬೪.ದ್ರೌಪದಿಗೆ ಸೋತಾರ ೬೫.ಸುಬಿದ್ರಾನ ಖಳಽರಿ ಅರ್ಜುನ ೬೬.ಕೊರವಂಜಿ ಕೋಲು ೬೭.ದೀಪದ ಬೆಳಕಲ್ಲಿ ಶಿವನೆ ಕೇಳೊ ೬೮.ಗೌರಿಗಿ ಗಂಗಿ ಶರಣೆನ್ನು ೬೯.ಗಂಗಿ ಗೌರಿ ಜಗಳ ೭೦.ಗಂಗಿ-ಗೌರಿ ೭೧.ಮಡದಿ ಗೌರವ್ವನ ಸಿಂಗಾರಿ. **ಪ್ರಣಯ:** ೭೨.ಮಾರನಾಟಕ್ಕೆ ಕರಿದರೆ ೭೩.ನೀವು ಯಾರ ಮನಿಗೆ ಹೋಯ್ತೀರಿ ೭೪.ಇವಳ್ಯಾರೆ ಸುಂದಾರಿ ೭೫.ಆಚಿಽ ಗಲ್ಲಿಯ ಪಾರ ೭೬.ತಂದುದಾಽರಿ ಕಮಲದಂಗಿಽನ ೭೭.ಒಳ್ಳೆ ಸಿಂಗರಾಗ್ಯಾಳೊ ೭೮.ಇವಳ್ಯಾರೆ ಸುಂದರಿ ೭೯.ಗೋಕುಳಪುರ ಹೆಣ್ಣ ೮೦.ಇದು ಏನೋಽ ಪ್ರಿಯ

೮೧.ನಾವು ನುಡಿಸಿ ಬರಾಣ ನಗಾರಿ ೮೨.ಸಂಗತಿ ಮಾಡಽ ಒಂದಿನ ೮೩.ಮಾಡಿಟ್ಟೋ ಬಸರ ೮೪.ತೆಕ್ಕಿಗಿ ಬಿದ್ದವ್ವ ಪಾಮರ ೮೫.ಕನ್ಯಾ ಪ್ರಾಯದ್ಹೆಣ್ಣ ೮೬.ಚಿಕ್ಕಿಹಂತಾ ಚಿಕ್ಕಪೋರಿ ೮೭.ಹುಡುಗಿ ಇದ್ದಾಳೊ ಬೆರಕಿ ೮೮.ಯಾ ಊರಾವಾಽ ಏನು ಚಲುವ ೮೯.ಹಾರುರಽ ಪೋರಿ ಸಿಂಗಾರಾಗಿ ೯೦.ಎನ್ನ ಕೊಡ ಒಡಿತೋ ೯೧.ಅಗಽಸಿ ಬಣ್ಣದ ಸೀರಿ ೯೨.ಥಳ್ಳನ ಪೋರಿಯ ಗೆಳಳತಾಽನ ೯೩.ನಾ ತಾಳಲಾರೆ ೯೪.ಥಳ್ಳನ್ನ ಪೋರಿ ೯೫.ಮೋಹದ ನಲ್ಲ ಯಾಕೆ ಬರಲಿಲ್ಲ ೯೬.ಇದು ಏನೋಽ ಪ್ರಿಯ ೯೭.ಯಾವೂರಂತ ಕೇಳಿದಳಪ್ಪ ೯೮.ಗೆಣೆಯ ಇಳಿದು ಬಂದಾನಲ್ಲಾ ೯೯.ಮುಡಿಯಲಾರೆ ಮುರುಗವ ೧೦೦.ಊರಮುಂದೆ ಕುಂಡ್ರಬಾರದೆ ೧೦೧.ಶಿಳ್ಳು ಬಣಜಿಗರ ಹುಡುಗ ೧೦೨.ಎಂತ ಕುಸಲಗಾರನೇ ಮಿಡುಗ ೧೦೩.ನಿಲ್ಲೋ ನಿಲ್ಲಯ್ಯ ರಾಜ ೧೦೪.ಮುತ್ತಿನ ಶೆಟ್ಟಿ ೧೦೫.ಹಾಳಾದ ಗಂಡ ಕಂಡಯ ಬಿಟ್ಟ ೧೦೬.ಕಂಡು ನಿನ್ನ ಸೈರಿಸಲಾರೆ ೧೦೭.ಕರಿತಾಳೆ ಯಳದಳ್ಳಿಯವಳು ೧೦೮.ಹೋಗತಾಳೆ ಸೆಟಗೊಂಡ ೧೦೯.ತೋಳಬಂದಿ ಗೆಳತಿ ೧೧೦.ಹೊಳಿಯ ಬಂದರ ತೇಲಿ ಹೋಗೋಣ ೧೧೧.ಇಬ್ಬರೂ ಕಲಿಯೋನು ರಾತ್ರಿ ೧೧೨.ಹಾದ ಹೋಗವಳ ಮಲಿ ನೋಡ ೧೧೩.ಅಕ್ಕಿಯ ಒಬ್ಬಿ ನುರತಾವ್ ೧೧೪.ಪ್ರೀತಿ ತಗ್ಗಿತ ಅರ್ಧ ತಾಸಿನೊಳಗ ೧೧೫.ಹೋಗತಿನೆಂಬುದು ಮರಿಯೊ ೧೧೬.ಬೆಕ್ಕಿನ ಮರಿಯಾಗಿ ಹಿಡಿದಾಳೂ ೧೧೭.ಕಂಚಿನ್ಹಂಗ ಹೊಳುವತಾಳ ೧೧೮.ಯಾರೆ ಕಾಣೆ ತಂಗಿ ೧೧೯.ಮುಟ್ಟದಿರ ಮಲಿಯ ೧೨೦.ಬೆಳಗಿನಾಗ ನೀನು ಬಂದ್ಹೋಗೊ ೧೨೧.ಮುಂದರ ಮುರಿಯಲೇಳಗೆಣಿಯಾ ೧೨೨.ದೀಪ ಹಚ್ಚಿದಂಗೆ ರೂಪ ೧೨೩.ಹುಡುಗ ಬರತಾನ ಕರಕೋಳೆ ೧೨೪.ಗಂಡನ ಮನಿಗೆ ಹೋಗತೀನಿಗೆಳೆಯಾ ೧೨೫.ಒಳ್ಳೆ ವರದ ಹೆಣ್ಣ ೧೨೬.ನಿರಗ್ಯಾಗ ಲೋಬಾನ ೧೨೭.ಬಂಗಾರದಂತವ್ನೆ ತಿರಿಗ್ಹೋಗ ೧೨೮.ಹುಣ್ಣ ಒಂದು ಹಚ್ಚಿದೆಲ್ಲಾ ೧೨೯.ಬಾರೋ ನನ್ನ ಹೋಳೀ ಕಾಮಾ ೧೩೦.ನೋಡಿ ಸೈರಿಸಲಾರೆ ೧೩೧.ಮೆಚ್ಚು ಬಂದೆನಾ ೧೩೨.ಎಲ್ಲಿ ಕಲ್ತಾಳಣ್ಣಾ ಸೋಗು ೧೩೩.ದೂಳಚೆಂಚೀಲಿ ಬಾ ೧೩೪.ಮಲ್ಲೀಗಿ ಸರಗಳೆಲ್ಲೀವು ೧೩೫.ಸೋಗಿನ ಹೆಣ್ಣೆನೀನು ೧೩೬.ಎದ್ದು ಬಂದೀನಿ ಬುದ್ದಿ ಸಾಲಾದೆ ೧೩೭.ಮನಿತನ ಕರಿತಾರೆ ೧೩೮.ಬಂದರ ಅನುವಗೊಡಲಿಲ್ಲ ೧೩೯.ಒಳ್ಳೊಳ್ಳೆ ಹುಡುಗರಿಗೆ ೧೪೦.ನನ್ನ.... ಹುಡಿಗಿ ೧೪೧.ಪರದೇಸಿ ನಾ ನೊಬ್ಬಳಾದೇನೆ ೧೪೨.ದೇಸವ ನೋಡಬೇಕು ೧೪೩.ಮಳ್ಳಗಾರಿ ಮಾದರ್ಹುಡೀಗಿ ೧೪೪.ಹೂವಿನ ಸೀರಿ ಹರದಾ ೧೪೫.ಹುಡುಗನ ಒಲ್ಲೆ ೧೪೬.ಕುಬಸಾ ಹರದಿ ಜಗ್ಗ್ಯಾಡಿ ೧೪೭.ದೂಳ ಚೆಂಜೀಲಿ ಬರುವಳ್ಗೊ ೧೪೮.ಹೋಗೋಣು ಬೆಳತನಾ ರಾತ್ರಿ ೧೪೯.ಕರದಾಳ ಗೆಣೆಯಾನ್ನ ೧೫೦.ಚೆಂಡಹೂವಾಗಿ ಹೊರಳಿದಳಂತ ೧೫೧.ಸುಮ್ಮನೆ ಬಾ ಮನಿಗೆ ೧೫೨.ನಿನ್ನ ಕಡಗಕ ಮರುಳಾದೆ ೧೫೩.ಜೋಡಿಕಿನ್ನರ ನುಡಿಸೋ ಜಾಣಾ ೧೫೪.ಬಾ ಹೆಣ್ಣೆ ಮರುಳಾದೆ ೧೫೫.ಹೌದಲೆ ಗಿಡ್ಡಿ ೧೫೬.ಏನು ಮೋಸವ ಮಾಡಿದಾ ೧೫೭.ಮೆರಿಯುವ ರಗಡೆ ೧೫೮.ಕಾಕುಳ್ಳಿಗ್ಹೋಗಿ ಕಳದಾಳ ೧೫೯.ಚಂದ್ರಮನ ಬೆಳಕು ನೀನಾಗೆ ೧೬೦.ಗೆಣಿಯಾ ಸಿಗಲಿಲ್ಲ ೧೬೧.ಮುತ್ತ ಕಳವೋ ಮೂಗತಿಗೆ ೧೬೨.ಹೋಗ

ಎಂಬುದು ದರುಮೇನೆ ೧೬೩.ನಾಳೆ ಬರುತೀನೆಂದು ೧೬೪.ಹುಡುಗಿಯರು ೧೬೫.ನಿಲ್ಲು ನಿಲ್ಲಯ್ಯ ರಾಜ ೧೬೬.ಅಲ್ಲಿ ಸಾವಿರದ ಗಿಣಿಉಂಡೊ ೧೬೭.ಕರಿಯ ಕಬ್ಬಿನ ಕೋಲು ೧೬೮.ಗಂಜಿಯಗಾರೇ ಹೆಣ್ಣೆ ೧೬೯.ಆಗದೌನೆ ಭೋಗದೌನೆ ೧೭೦.ಹಾದಿಯ ಹೊಲದವಳೇ ೧೭೧.ನನ್ನ ಗೆಣೆಯ ಬರ್ಲಿಲ್ಲ ೧೭೨.ಬಾಲ್ಯಾರ್ಹೊಂಟಾರು ಬಾವಿನೀರಿಗೆ ೧೭೩.ಬಾಯಾರಿ ಬಂದೆ ೧೭೪.ನಿನಗಿಂತ ಚೆಲುವೆ ಮನಿನಾಥ ೧೭೫.ಅರಳೋ ಮರಳೊಂದರಳೋ ಜಾಣ ೧೭೬.ಎಲೆಗಳ್ಳಿ ರಾಮ ೧೭೭.ಜಲ್ತಾರದೋಲೆ ಕಿವಿಯೋಳೆ ೧೭೮.ಮೂವರ್ದ ಮುದುಗೆಣಯ ೧೭೯.ಚಿಕ್ಕ ಉಂಗುರಕೆ ನಾರಿ ಮನಸೋತಳೋ ೧೮೦.ನನ್ನ ಮಂಚದ ಮೇಲಿಲ್ಲ ೧೮೧.ಮುಟ್ಟಿದರೇನಾಯಿತೋ ಜಾಣ ೧೮೨.ಸುಮಾನುಗಾತಿ–ಚೆನ್ನಿಗಿ ಚೆಲುವಾನಕೆಡಿಸ್ಯಾಳು ೧೮೩.ಹಾ ಸಖಿ ೧೮೪.ಮಾವನ ಮಗಳಲ್ಲೆ ಒಳ್ಳೆಮಲ್ಲಿಽಗೆ ಹೂವಲ್ಲೆ ೧೮೫.ಬಟ್ಟಾಕುಚದ ಮೇಲೆ ಬೆಟ್ಟಿಟ್ಟುಽ ಹೋದನಾ ೧೮೬.ಇಬ್ಬರಿಗು ಮನವ ಕೊಡಲಾರೆ ೧೮೭.ಮಿಂಡ ಬರುವ ದಾರೀಲಿ ದುಂಡು ಮಲ್ಲಿಗೆ ಸುರಿಯಾಲಿ ೧೮೮.ಕರೆತಾರೆ ತಂಗಿಲಲ್ಲಾನ ೧೮೯.ಮೈ ನೆರೆದ್ಹೆಣ್ಣು ಕೈಜಾರಿ ಹೋಗುವಾಗ ೧೯೦.ಕಟ್ಟು ನರಿಗೆಯ ಮೇಲೆ ಕಣ್ಣಿಟ್ಟಿ ಸುಗುಣಿ ೧೯೧.ಸೂಳೆ ಬಾಳೆಂಬುದು ಸುಣ್ಣದ ರವೆ ಕಾಣೊ ೧೯೨.ಚಂದುಳ್ಳಿ ಚದುರೆ ೧೯೩.ವೈಯಾರದ್ಹೆಣ್ಣೆ ೧೯೪.ಬಲ್ಲಿದನ ಸಂಗ ಮೇಲು ೧೯೫.ಮುದುಕ–ಮೊಮ್ಮಗಳು ೧೯೬.ಅಳಿಯ ಬಂದಾನ ೧೯೭.ಹಬ್ಬ ಬಂತೋ ಮಾವ ೧೯೮.ಪೋರಿಮ್ಯಾಲ ಹೇರಿ ೧೯೯.ಮಾವಾ ನಿನಗೊಂದು ನಯ್ಯಕಮ್ಮಾಟ ೨೦೦.ದುಡ್ಡು ಕೊಡತೀನೆಂದು ೨೦೧.ಅಡ್ಡಗೋಡಿ ಬಸುರಾಗಿ ೨೦೨.ತಿಗಳ ತಿಂದಽತಿ ೨೦೩.ಸ್ಯಾವಿಗಿ ಬಸಿಯೋದು ಕಂಡೆ ೨೦೪.ಗಡ್ಡಾ ಮೀಸಿ ಸುಟ್ಟಾ ೨೦೫.ನನ್ನ ಜಲ್ಮ ಹೋಗಲಿಲ್ಲತ್ತಿಗಿ ೨೦೬.ತತ್ರಿಬಿತ್ರಿ ಹೆಣ್ಣೆ ೨೦೭.ನನ್ನಂತಾಕಿಗೆ ವಟವಟ ಅಂತಾರ ೨೦೮.ಸೀರೆ ಉಡೋದು ಮರತಾಳಲ್ಲಾ ೨೦೯.ಮುದುಕಿ ಆದ್ಯಲ್ಲೆ ೨೧೦.ದೀವಿಗೆ ಕಳಿಯೋಣ ೨೧೧.ಒಬ್ಬನ ಕಟ್ಟಿದ್ದೆ ೨೧೨.ತ್ವಾಡಣ್ಣನ್ಹೆಂಡಿರು ೨೧೩.ಅತ್ತೆ–ಅಳಿಯ ೨೧೪.ತೋಳಪ್ಪ ಕುರಿಗಳ ಹೊತ್ತಾನೋ ೨೧೫.ಸುಂಡಣ್ಣ **ಸಂಕೀರ್ಣ:** ೨೧೬.ಕೋಲ್ ಕೋಲ್ ಕೂಡಿ ಬರಲಿ ೨೧೭.ಅಪ್ಪ ಹಂಪಯನ ಹೊಸತೇರು ೨೧೮.ಮಾಗಡಿ ರಂಗನ ತೇರ ೨೧೯.ತೇರಿಗೋಗನ ಬನ್ನಿರೊ ೨೨೦.ತೇರ ನೋಡೋಣ ಬನ್ನಿರೋ ೨೨೧.ಒಪ್ಪುಳ್ಳ ತೇರ ಹರಿಸೂವೆ ೨೨೨.ತೇರು ನಿಲ್ಲಗೊಡಬ್ಯಾಡಿ ೨೨೩.ತೇರು ಸಾಗತತಿ ೨೨೪.ತೇರಿನ ಸಿಂಗಾರಗಳಣ್ಣಾ ೨೨೫.ತೇರಿಗ್ಹೋಗೋಣು ಬನ್ನಿರೆ ೨೨೬.ತೇರು ಸಾಗುತತಿ ೨೨೭.ಎಕ್ಕ್ಹಳ್ಳಿ ಜಾತ್ರ ೨೨೮.ಸಂಕರಾತ್ರಿ ಜಾತ್ರಿ ೨೨೯.ಮಕ್ಕುಳುಂಟು ಮಲಿ ಇಲ್ಲ ೨೩೦.ಓದಕಲತವರ್ಹೇಳಿರೋ ೨೩೧.ಒಬ್ಬನ್ನ ಕರಕೊಂಡು ಒಳಗಿದ್ದೆ ೨೩೨.ಒಗಟಿನ ಹಾಡು ೨೩೩.ಒಗಟಿನ ಪದ ೨೩೪.ನಾವು ನೀವು ಕೊಡಿದೇವ ೨೩೫.ಬ್ಯಾಡ ತಮ್ಮ ಸ್ತ್ರೀಯರ ಸಂಗ ೨೩೬.ಈಗಿನ ಕಾನೂನಽ ೨೩೭.ಕಲಿಯ ಧರ್ಮದ ಮಾತಕೇಳಾ ೨೩೮.ಮತಿಗೆಡದಿರೋ ಮಧ್ಯದಲ್ಲಿ ೨೩೯.ಎಲ್ಲಾ ಒಂದೇ ೨೪೦.ಸೂಳೇರ ಸಾವಾಸಾ ೨೪೧.ನಾಗರ ಪಂಚಮಿ ೨೪೨.ನಾಳೆ ಬಂತ ನಾಗರ ಪಮಚಮಿ ೨೪೩.ದೊಡ್ಡ ಎಳಮಾಸಿ ೨೪೪.ಕಾರಹುಣ್ಣೆ ಹಬ್ಬ ಬಂತು

೨೪೫.ಚೆಂಡು ಕೊಡೆ ಚಿಕ್ಕಮ್ಮ ೨೪೬.ಹಾಲು ಕಾಸವ್ವ ತಂಗಿ ಹಾಲು ಕಾಸs ೨೪೭.ಸವಕಾsರ್ತಿ ಇದ್ದ ಅನ್ನಬ್ಯಾಡೆ ೨೪೮.ನಾ ಹೊಯ್ತೀನಿ ದನ ಕಾಯಿಲಾsಕ ೨೪೯.ಬೇಡತಾರ ಪಟ್ಟಿ ೨೫೦.ಕುದರಿಯ ತಂದಿದ ಮಾರಲಾಕ ೨೫೧.ಅಳಬ್ಯಾಡೋ ಏ ಕಂದಾ ೨೫೨.ಬಡಿಗ್ಯಾ ಗುಬ್ಬಿಮನಿ ಕಟ್ಟಿದ ೨೫೩.ಗೊಲ್ಲನಾರ್ಯಾರು ೨೫೪.ಗೌವಳಗಿತ್ತಿ ೨೫೫.ಗೊಲ್ಲತಿ ೨೫೬.ಗೋಪಾಲರ ಪುಟ್ಟಿದನೇ ೨೫೭.ಅಳಿಯನ ಶೋಧ ೨೫೮.ಕುಣದಾನರಿ ಪೋರ ೨೫೯.ಝುಡಿಯsನಿಲ್ಲದೆ ಬಾವಿ ೨೬೦.ರಂಗರತುನಾs ದನಬಿಡೊದಿಲ್ಲೆನಾ ೨೬೧.ಬಳೆಗಾರ ಬಂದಾನ ೨೬೨.ಚೇಳಿನ ಬ್ಯಾನಿ ಹೆಂತಾದೊ ೨೬೩.ಯಾಕ ಬಂದಿರಿ ತಾತ ೨೬೪.ಹೋಗ್ತೇನೆ ಯವ್ವ ೨೬೫.ಡೋರಗ್ಯೆ ಊರಾ ೨೬೬.ಹ್ಯಾಂಗೆ ತರಲಿ ನೀರಾ ೨೬೭.ಗುಡಿ ಕಟ್ಟೊ ಉಪ್ಪಾರಣ್ಣಾ ೨೬೮.ನೀರ ಮುನಿದು ಪೋದ ೨೬೯.ಕುದರಿ ತಯ್ಯಾರಿ ೨೭೦.ತಂಗಿ ನೀ ಮಾತಾಡೆ ೨೭೧.ಹೈದ್ರಾಬಾದ್ ಮದ್ದಳಿ ೨೭೨.ಸಣ್ಣಕಿ ನೂಲಮ್ಮ ೨೭೩.ಊರುಗಳು ೨೭೪.ಊರುಗಳ ಪದ ೨೭೫.ಕಟೆಕಟೆ ಕಲ್ಲೂರು ೨೭೬.ಏನು ಮೋಜೋ ನಮ್ಮ ಬೆಳ್ಳುಳ್ಳಿ ಶಾರಾ ೨೭೭.ಹೈದ್ರಾಬಾದಿನೆಂಬುವ ಶಾರ ೨೭೮.ಬೆಂಗಾಳ್ ಬೆಂಗಳೂರು ೨೭೯.ಕೋಲು ಹಾಕುತ್ತ ಬಂದ್ಯೊ ೨೮೦.ಕವಿ ೨೮೧.ಸಾವಕಾರಿದ್ದಾನೋ ಶ್ರೇಷ್ಠ ೨೮೨.ಮುಳ್ಳು ೨೮೩.ಕಸ್ತೂರೆಂತಾ ತುಪ್ಪಣ್ಣ ೨೮೪.ಎಲ್ಲ ಹೇಳಿ ಕೊಡುವೆ ೨೮೫.ನಸುಪುಡಿ ಗಿರಾಕೆ ೨೮೬.ತೊಂಬಾsಕ ಚಿಲಿಮಿ ತಾರೆ ೨೮೭.ಹಾವ ಸಿಂಬೆಯ ಮಾಡಿ ೨೮೮.ಪ್ರಾಯ ತುಂಬತತಿ ಶಿವಮುಟ್ಟಿ ೨೮೯.ಅಕ್ಕ ತಂಗೆಮ್ಮನ ಕೊಡಬೇಕು ೨೯೦.ಕಲ್ಲು ೨೯೧.ನಾಯಿ ೨೯೨.ಸೂಳೇರು ಬರುವರು ೨೯೩.ಕಸಬರಿಗಿ ೨೯೪.ಗಬ್ಬು ಎದ್ದೆನ ನಮ್ಮಪ್ಪ ೨೯೫....... ಅಲ್ಲವೇ ೨೯೬.ಕಾಲು ಜಾರಿ ಬಿದ್ದಾರ್ ೨೯೭.ತಾಯಿ ಮುಂದ ಹೇಳತಾಳ ೨೯೮.ಅಳಬ್ಯಾಡೋ ನನ ಕಂದಾ ೨೯೯.ಸೂಳಿಗ್ಯಾರ ಜಕ್ಕಾ ೩೦೦.ಬಯಕಿ ಹಾಡು ೩೦೧.ಹೆಸುರಿಟ್ಟಾರ ಕುಮಾರಸ್ವಾಮಿ ೩೦೨.ಕೋಲುಯ್ಯೋದು ನೋಡಿ ಬಂದೆ ೩೦೩.ಕೊರವಂಜಿ ಹಾಡು ೩೦೪.ಜಂಗುಮಾ ೩೦೫.ಹ್ಯಾಗಿರಲೆ ಮನೆಯಲಿ ೩೦೬.ಹಯನುಮನೊ ಗರುಡನೊ ೩೦೭.ಯಂತಾದು ಕುಣಗಲು ಕೆರೆ ೩೦೮.ದಾನಧರ್ಮ ಮಾಡಲಿಕೆ ೩೦೯.ಹಿಟ್ಟುಮಾಡಿ ಸೊಪ್ಪು ಮಾಡಿ ೩೧೦.ಈ ಜಗsವ ಇಂದ್ರಾಗಾಂಧೀದ್ಯೆತಿ ೩೧೧.ಮಾಗಡಿ ಕೆಂಪಗೌಡ ೩೧೨.ಚಿಕ್ಕಶಿವಗಂಗಿ ೩೧೩.ಅಕ್ಕ ಬಾರಕ್ಕ ೩೧೪.ಈಗಿನ ಹೆಣ್ಣು ಮಕ್ಕಳು ೩೧೫.ಚೋಜುಗವ ನೋಡಿರಣ್ಣ ೩೧೬.ಬಂಜೆಂಬ ಸೊಲ್ಲ ೩೧೭.ಗುಡಿಯ ನೋಡಿರಣ್ಣ ೩೧೮.ಎಲ್ಲೆಲ್ಲಾ ಆಡ್ಯಾನೆ ಮಳೆರಾಯ ೩೧೯.ಒಪ್ಪಾಗಿನೆಯ್ಯೋ ಚೆಲುವಯ್ಯ ೩೨೦.ಸೀಳಿ ಮಾರಾವೆ ಸಿರಿಗಂಧ ೩೨೧.ಧಾರಣೆಕೇಳಬನ್ನಿ ಧರ್ಮದ ಕೊಳ್ಗತನ್ನಿ ೩೨೨.ಗೀಜಿಗ ೩೨೩.ಕವಣೇ ಕಾಲೀಗೆ ಹುರಿಗಜ್ಜೆ ೩೨೪.ಮೆಕ್ಕಾ ಹಾಡು ೩೨೫.ಅಣ್ಣಾನೀ ಬಲ್ಲರ್ಥೇಳೋ ೩೨೬.ಗುದ್ದಮ್ನ್ ಬ್ಯಾನೆ ೩೨೭.ಸೂಜಿ ಹಾಡು ೩೨೮.ದಂಡೀಗೆ ಹೋಗತೀನಿ ೩೨೯.ಕೋಲು ಬಿಡ್ತಾರೆಂದು ಕೋಪ ಮಾಡಲು ಬ್ಯಾಡ ೩೩೦.ಬಂಡಿ ಪೂಜೆ ೩೩೧.ಹಿಲಕ್ ಪಲಕ್ ಹೆಂಗಿರಬೇಕು ೩೩೨.ಹುಲಿ ಕೊಂದ ಭಂಟ ೩೩೩.ಗೀಜುಗನೆ ಗಿಣಿ ರಾಮಾನೆ ೩೩೪.ರಾಮ್

ಗಿರೀಲ್ ಮಳೆಬಂದು ೩೩೫.ಸುಮ್ಮನೆ ಮಲಗೋ ಕಂದಮ್ಮಾ ೩೩೬.ಜುಂಜಾಣೆಗ ೩೩೭.ಜಗಳ ಬಂದರೆ ಕಾಲ ಕೆರೆವರು ತಾನ ೩೩೮.ಮಾತಾಡಿಸುವೆ ತಲೆಗಳ ರನ್ನದ ೩೩೯.ತಾಳಬೇಕು ತಕ್ಕ ಮದ್ದೆ ಬೇಕು ೩೪೦.ಮಾಲಿಂಗ ಬೆಣ್ಣೆ ಮೆಲು ಬಾರೊ ೩೪೧.ತಂಗ್ಯಮ್ಮ ನಿನ್ನ ನಾನೇ ನಂದಿನೆ? ೩೪೨.ಬಿತ್ತಿರಿ ಸೀರೆ ಏ ಬಿಗದುಡೆ ೩೪೩.ತೂಗು ತೂಗುಯ್ಯಾಲೆಯ ೩೪೪.ರಾವಣಿ ಬಾಕಿಲ ತೆಗಿ ತೆಗಿಯೆ ೩೪೫.ಏಳೋ ಚೆನ್ನಾಜಿ ಸೈಸ್ಯೆ ಏಲುತ ಸುಖನಿದ್ರೆ ೩೪೬.ದೂರುದೂರಿ ನಾಡು ಪಾಪಯ್ಯ ೩೪೭.ಚಿತ್ತಾರ್ಗೊಂಬೆ ಕೋಲು ೩೪೮.ಬಾರು ಗೀಜುಗನೆ ಮುದ್ದಿನ ತೇರುಗೀಜುಗನೆ ೩೪೯.ಕೋಳಿಕೊಕ್ಕಕ್ಕ ರಾಗಿಯ ಮುಕ್ಕಕ್ಕ ೩೫೦.ಕಣ್ಣಿಟ್ಟು ನೋಡದಿರಣ್ಣ. . . . ೩೫೧.ಗರತಿಗೆ ಹಾದರಸಲ್ಲ ೩೫೨.ನಮ್ಮಲೋಲಿ ಗಿಡ್ಡವ್ವ ೩೫೩.ಆಚಿಕೇರಿಲಿ ಒಂದು ರೇಖೆ ಬಣ್ಣದ ಹುಂಜ ೩೫೪.ಬರಿ ಕೆರೆಗೆ ಬಲೆ ಬೀಸಿ ಫಲವೇನೊ ರಮಣ ೩೫೫.ಗಂಡನಿನಗೆ ತಿಳಿಯಲಿಲ್ಲ ೩೫೬.ಕಾಕೋಳಿ ಕೂಗಲಿ ಲೋಕ ಬೆಳಗಾಗಲಿ ೩೫೭.ನಾಗಕನ್ನಿಕ್ಯಾರು ತೂಗೀರೆ. **ಭಾಗ ಎರಡು: ಕೋಲಾಟ ಪ್ರಸಂಗಗಳು:** ೧.ಕೃಷ್ಣ ಗೋಪಿಯರ ಪ್ರಸಂಗ ೨.ರಾಮಾಯಣ ಪ್ರಸಂಗ ೩.ಮಹಾಭಾರತ ಪ್ರಸಂಗ. ಹೆಚ್.ಡಿ. ಕುಮಾರಸ್ವಾಮಿ ಅವರ ಹೊನ್ನುಡಿ, ಹಿ.ಶಿ. ರಾಮಚಂದ್ರೇಗೌಡ ಅವರ ಪೂರ್ವಾಪರ ಎಂಬ ಅಧ್ಯಕ್ಷರ ಮಾತು, ಸಂಪಾದಕರ ಪ್ರಸ್ತಾವನೆ, ಅನುಬಂಧದಲ್ಲಿ, ಆಕರಸೂಚಿ, ಅರ್ಥಕೋಶ, ಇವೆ.

೪೩೯. ಕೋಲಾರ ಜಿಲ್ಲೆಯ ಆಚರಣೆಗಳು ಮತ್ತು ಸಂಪ್ರದಾಯಗಳು

ಲೇ: ನರಸಿಂಹೇಗೌಡ ನಾರಣಾಪುರ; ಪ್ರ: ಕಿರಣ ಕಿಶೋರ ಪ್ರಕಾಶನ, ೧೨೬೧, ಪೈಪ್‌ಲೈನ್, ೩ನೇ ಅಡ್ಡರಸ್ತೆ, ರಾಬರ್ಟ್‌ಸನ್ ಪೇಟೆ, ಕೆ.ಜಿ.ಎಫ್– ೫೬೩ ೧೨೨ ; ಮೆ.ಮು.೨೦೦೫; ಪು: ೧೬+೨೨೮+೪=೨೪೮; ಡಿಮ್ಮೈ ೧/೮

ಪೀಠಿಕೆ ಮತ್ತು ಉಪಸಂಹಾರ ಬಿಟ್ಟು ಒಟ್ಟು ಎಂಟು ಅಧ್ಯಾಯಗಳಿವೆ: ಈ ಎಂಟೂ ಅಧ್ಯಾಯಗಳ ಶೀರ್ಷಿಕೆಗಳಲ್ಲಿ 'ಆಚರಣೆ ಮತ್ತು ಸಂಪ್ರದಾಯಗಳು' ಎಂಬ ಪ್ರಯೋಗ ಇದೆ: ೧.ಕೃಷಿ ೨.ಜನನ ೩.ಮದುವೆ, ೪.ಕರಗ ೫.ಕುರುಬರ ದ್ಯಾವರ ೬.ಹೊಸ ದ್ಯಾವರ ೭.ಬಂಡಿ ದ್ಯಾವರ ೮.ಮರಣ. ಚಕ್ಕೆರೆ ಶಿವಶಂಕರ್ ಅವರ ಮುನ್ನುಡಿ ಇದೆ. ಆಯಾ ಆಚರಣೆಗಳಿಗೆ ಸಂಬಂಧಿಸಿದ ಹಲವಾರು ಫೋಟೋಗಳಿವೆ. ಕೊನೆಯಲ್ಲಿ ಆಕರ ಗ್ರಂಥಗಳು, ವಕ್ತೃಗಳು, ಅರ್ಥಕೋಶ, ಪದಸೂಚಿ, ಭಾವಚಿತ್ರ ಸೂಚಿ ಇವೆ.

೪೪೦. ಕೋಲಾರಮ್ಮ

ಲೇ: ಜಿ.ಆರ್.ತಿಪ್ಪೇಸ್ವಾಮಿ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಿಮ್ಯೆ, ನೃಪತುಂಗ ರಸ್ತೆ, ಬೆಂಗಳೂರು –೫೬೦೦೦೨ ಮೊ.ಮು: ೧೯೯೬; ಪು: ೮+೩೫=೪೩; ಡಿಮ್ಮೈ ೧/೮

ಒಂಬತ್ತು ಅಧ್ಯಾಯಗಳಿವೆ: ೧.ಮಾತೃದೇವತಾಕಲ್ಪನೆ ೨.ಗ್ರಾಮ ದೇವತೆಗಳು ೩.ಕೋಲಾರದ ಐತಿಹಾಸಿಕ ಹಿನ್ನೆಲೆ ೪.ಗುಡಿಯ ಸ್ವರೂಪ ೫.ಕತೆ ಮತ್ತು ಐತಿಹ್ಯಗಳು

೬.ಸಪ್ತಮಾತೃಕೆಯರು ೭.ಶಾಸನಗಳು ೮.ನಂಬಿಕೆ ಮತ್ತು ಆಚರಣೆಗಳು ೯.ಸಂಸ್ಕೃತೀಕರಣ

೪೪೧. ಕೋಲು ಮಲ್ಲಿಗೆ ಕೋಲೆ

ಸಂ: ಕರಾಕೃ; ಪ್ರ: ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು-೫; ಮೊ.ಮು. ೧೯೬೨; ಪು: ೬೬; ಕ್ರೌನ್ ೧/೮

ಚಿತ್ರದುರ್ಗ, ತುಮಕೂರು, ಮಂಡ್ಯ, ಹಾಸನ ಜಿಲ್ಲೆಗಳಲ್ಲಿ ಸಂಗ್ರಹಿಸಿರುವ ೩೭ ಕೋಲುಪದಗಳ ಸಂಗ್ರಹ. ಹಾಡಿದವರ ವಿವರಗಳಿವೆ.

೪೪೨. ಕೋಲು ಪದಗಳು

ಸಂ: ಮಳಲಿ ವಸಂತಕುಮಾರ್; ಪ್ರ: ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು-೪; ಮೊ.ಮು. ೧೯೭೦; ಪ.ಎ.ಮು. ೧೯೭೮; ಪು: ೧೩೪; ಕ್ರೌನ್ ೧/೮

೫೮ ಕೋಲುಪದಗಳ ಸಂಗ್ರಹ. ೩೨ ಪುಟಗಳ ಪ್ರಸ್ತಾವನೆಯಲ್ಲಿ ಕೋಲಾಟದ ವಿಧಗಳು ಹಾಗೂ ಅವುಗಳ ಹೆಸರುಗಳು, ಸಾಧನಗಳು, ವಾದ್ಯಗಳು, ಕೊನೆಯಲ್ಲಿ, ಅರ್ಥಕೋಶ, ಈ ಕೃತಿಯನ್ನು ಕುರಿತು ವಿದ್ವಾಂಸರ ಮಾತುಗಳಿವೆ.

೪೪೩. ಕೋಲುಹಾಡು

ಲೇ: ಮೋಹನದಾಸ; ಪ್ರ: ಶ್ರೀ ಮನ್ಮಥ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು: ೧೯೨೩; ಪು: ೨೮; ಕ್ರೌನ್ ೧/೮

ಇದರಲ್ಲಿ ೨೧೬ ಚರಣಗಳಿವೆ.

೪೪೪. ಕೋಲ್ ಕೋಲ್ ಕೂಡಿಬರಲಿ

ಲೇ: ಸಂ: ಎಸ್.ವಿ. ರಂಗಣ್ಣ; ಪ್ರ: ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು: ೧೯೭೬; ಪು: ೧೯+೧೨೩ = ೧೪೨; ಡಿಮ್ಮೆ ೧/೮

ನಾಲ್ಕು ಲೇಖನಗಳ ಹಾಗೂ ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟ ಜನಪದ ಗೀತೆಗಳು ಈ ಗ್ರಂಥದಲ್ಲಿ ಸೇರ್ಪಡೆಯಾಗಿವೆ. ಲೇಖನಗಳು: ೧.ಕರ್ಣಾಟಕದ ಜನಪದ ಸಾಹಿತ್ಯ ೨.ಜಾನಪದದ ಮೌಲ್ಯ ವಿಮರ್ಶೆ ೩.ಹಾಡಿನಿಂದ ಸಮಾಧಾನ ೪.ಹುಲಿವೀರ ಹಾಡುಗಳ ನಾಲ್ಕು ಭಾಗಗಳು ಹೀಗಿವೆ **ಭಾಗ ಒಂದು**: ಕಥನ ಗೀತೆಗಳು: ೧.ಯಾಗ್ರ ೨.ಗೀಜಿಗ-ಗೀಜಿಗಗಿತ್ತಿ ೩.ಮಲ್ಲೇಶ-ಪಾರ್ವತಿ ೪.ಶಿವ ಗಂಗೆ ಗೌರಿ ೫.ದೇಶವನಾಳುವಾಗೆ ಐಸ್ಮಂದಿ ಹೆಂಡಿರೊ ೬.ಗಂಗೆ ಗೌರಿ ೭.ಮೀನಿನೆಸರು **ಭಾಗ ಎರಡು**: ಕೋಲು ಪದಗಳು **ಭಾಗ ಮೂರು**: ಬೀಸುವ ಪದಗಳು. **ಭಾಗ ನಾಲ್ಕು**: ಸಂಕೀರ್ಣ, ಹಾ.ಮಾ. ನಾಯಕ ಅವರ ಮುನ್ನುಡಿ, ಜೀ.ಶಂ. ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಇವೆ.

೪೪೫. ಕೋಳಿ ಅಂಕ

ಲೇ: ಬಿ.ಶಿವರಾಮ ಶೆಟ್ಟಿ; ಪ್ರ: ರಾಜ್ಯ ಸಂಪನ್ಮೂಲ ಕೇಂದ್ರ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು–೨೩; ಮೊ.ಮು: ೧೯೮೯; ಪು: ೩೬; ಫುಲ್ಸ್ ಕ್ಯಾಪ್ ೧/೪

ಕರಾವಳಿಯ ಕೋಳಿ ಅಂಕವನ್ನು ಸಂಕ್ಷಿಪ್ತವಾಗಿ ಸ್ಪಷ್ಟವಾಗಿ ಪರಿಚಯಿಸಿಕೊಡುವ ಕೃತಿ. ಅನೇಕ ರೇಖಾಚಿತ್ರಗಳಿವೆ. ಈ ಆಟಕ್ಕೆ ಸಂಬಂಧಿಸಿದ ನಂಬಿಕೆಗಳು ಆಚರಣೆಗಳು ಇತ್ಯಾದಿ ವಿವರಗಳಿವೆ. ಲಿಂಗದೇವರು ಹಳೆಮನೆ ಅವರ ಮುನ್ನುಡಿ ಇದೆ.

೪೪೬. ಕೌಜಲಗಿ ನಿಂಗವ್ವ

ಲೇ: ಶ್ರೀರಾಮ ಇಟ್ಟಣ್ಣವರ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೪/೩, ನೃಪತುಂಗ ರಸ್ತೆ, ಬೆಂಗಳೂರು–೫೬೦ ೦೦೧; ಮೊ.ಮು.೧೯೯೬; ಪು: ೪೫; ಡೆಮ್ಮೈ ೧/೮

ಶ್ರೀಕೃಷ್ಣ ಪಾರಿಜಾತ ರಂಗಭೂಮಿಯ ಆರಂಭದ ಕಲಾವಿದೆಯನ್ನು ಕುರಿತ ಈ ಗ್ರಂಥವು ೯ ಭಾಗಗಳಲ್ಲಿ ನಿರೂಪಿತವಾಗಿದೆ: ೧.ನಿಂಗವ್ವನಳ ಪ್ರವೇಶಕ್ಕೆ ಮೊದಲು ೨.ಹುಟ್ಟು – ಬಾಲ್ಯ ಮುಂತಾಗಿ ೩.ಯಾದವಾಡ ಮಲಕಪ್ಪನ ಶಿಷ್ಯಳಾಗಿ ೪.ನಿಂಗವ್ವನ ಕಂಪನಿ: ಐತಿಹಾಸಿಕ ನಡೆ ೫.ನಿಂಗವ್ವನ ಕಂಪನಿ: ಪ್ರಯೋಗಶೀಲತೆ ೬.ಕಲಾವಿದೆಯಾಗಿ ನಿಂಗವ್ವ ೭.ನಿಂಗವ್ವನ ಸ್ವಭಾವ ೮.ನಿಂಗವ್ವನ ವಂಶ ೯.ಸಮಾರೋಪ. ಎಚ್.ಜೆ. ಲಕ್ಕಪ್ಪಗೌಡ ಅವರ ಅಧ್ಯಕ್ಷರ ಮಾತು ಇದೆ.

೪೪೭. ಕ್ಯಾತಮಾರನಹಳ್ಳಿ: ಒಂದು ಸಾಂಸ್ಕೃತಿಕ ಅಧ್ಯಯನ

ಲೇ: ಮೈಸೂರು ಉಮೇಶ; ಪ್ರ: ಹೊನ್ನಾರು ಜನಪದ ಗಾಯಕರು, ಮೈಸೂರು; ಮೊಮು: ೨೦೧೨; ಪು: ೨೪+೩೩೬=೩೬೦; ಡೆಮ್ಮೈ ೧/೮

ಪಿಎಚ್.ಡಿ. ಮಹಾಪ್ರಬಂಧ. ಎಂಟು ಅಧ್ಯಾಯಗಳಿವೆ: **ಅಧ್ಯಾಯ ಒಂದು:** ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ. **ಅಧ್ಯಾಯ ಎರಡು:** ಭೌಗೋಳಿಕ ನೆಲೆ. **ಅಧ್ಯಾಯ ಮೂರು: ಚಾರಿತ್ರಿಕ ನೆಲೆ:** ೧.ಕ್ಯಾತಮಾರನಹಳ್ಳಿಗೆ ಸಂಬಂಧಪಟ್ಟಂತಹ ಐತಿಹ್ಯಗಳು ೨.ಮೈಸೂರಿಗೆ ಸೋಲಿಗರ ಆಗಮನ ೩.ಕ್ಯಾತಮಾರನಹಳ್ಳಿಯ ದಲಿತರು. **ಅಧ್ಯಾಯ ನಾಲ್ಕು: ಧಾರ್ಮಿಕ ನೆಲೆ:** ೧.ಹುಲಿಯಮ್ಮ ದೇವತೆಯ ಬಗೆಗಿರುವ ಪುರಾಣ ಕತೆಗಳು ೨.ಜಾತ್ರೆಯಲ್ಲಿ ಜರಗುವ ಆಚರಣೆಗಳು: ಮರ ತರುವುದು, ತಂಬಿಟ್ಟಿನಾರತಿ, ಮರ್ರೊಳ್ಳು ಮತ್ತು ಕರಕಲು ಹಾಕುವುದು, ಮರ ನಿಲ್ಲಿಸುವುದು, ಕೋಲುಕಟ್ಟಿ ಕುಣಿಯುವವರು, ಕಳ್ಳರ ಎಡೆ, ಹುಲಿವೇಷ ಮತ್ತು ಹರಕೆಗಳೂ, ಕಂಬ ವಿಸರ್ಜನೆ ಅಥವಾ ನಿಶಾನೆ ಮರ ಇಳಿಸುವುದು. ೩.ಹಬ್ಬ–ಹರಿದಿನಗಳು: ಸಂಕ್ರಾಂತಿ, ಮಹಾಶಿವರಾತ್ರಿ, ಯುಗಾದಿ, ಶ್ರೀರಾಮನವಮಿ, ಆಷಾಢ ಮಾಸ, ಶ್ರಾವಣ ಮಾಸ, ವರಮಹಾಲಕ್ಷ್ಮೀವ್ರತ, ಪರ್ವತ

೧೩ ಹಾಡುಗಳ ಸಂಕಲನ: ೧.ಜಾಯು-ಮಾಯದ ಗಾಣಿಗ ೨.ನಾಡಗುತಿಯ ಹಾಡು ೩.ಎಲೆ ಗೌರಿ ೪.ಕಾನ್ ಕಾನ್ ಕನ್ನಡಿ ೫.ಜೋಗಪ್ಪನ ವೇಷ ೬.ತೋಳನಿಗೆ ಬಲಿ ೭.ಕುಂತುಮ್ಮಿಯ ಮಕ್ಕಳು ೮.ಕುಸುಮಾಲೆ ೯.ಅತ್ತಿಗೆ-ಮೈದುನ ೧೦.ಸೂಳೆ ಸಹವಾಸ ೧೧.ಹಣಕ್ಕಾಗಿ ಹೆಣ ಬಿತ್ತು ೧೨.ತಂಗಿಯ ಬಡತನ ೧೩.ತಾಯಿಯ ನೆನಪು. ವಿಸ್ತಾರವಾದ ಪೀಠಿಕೆ ಇದೆ.

೫೧೨. ಗುಮ್ನಳ್ಳಿ ಕದನ

ಸಂ: ಎಚ್.ವಿ. ವೀರನಾಯಕ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮; ಮೊ.ಮು. ೧೯೮೩; ಪುಟ ೮+೪೨=೫೦; ಡಿಮ್ಮೈ ೧/೮

ನಡುನಡುವೆ ಗದ್ಯ ವಿವರಣೆಗಳನ್ನುಳ್ಳ ಒಂದು ಕಥನಗೀತೆ. ಶಿರಾ ಕೋಟೆಯ ರೇಖಾಚಿತ್ರ, ಇಬ್ಬರು ಹಾಡುಗಾರ್ತಿಯರ ಹೆಸರು ಫೋಟೋ, ಹಂಪ ನಾಗರಾಜಯ್ಯ ಅವರ ಮುನ್ನುಡಿ, ಕೊನೆಯಲ್ಲಿ ಅರ್ಥಕೋಶ, ಇವೆ.

೫೧೩. ಗುರುಶಿಷ್ಯರ ತತ್ವಪದಗಳು

ಸಂ: ವಿಜಯಶ್ರೀ ಸಬರದ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು.೧೯೯೭; ಪುಟ ೧೬+೫೬=೭೨; ಡಿಮ್ಮೈ ೧/೮

ಪ್ರಸ್ತಾವನೆ ಆದಮೇಲೆ ನಾಲ್ಕು ಶೀರ್ಷಿಕೆಗಳಿವೆ: ೧.ತಿಪ್ಪಣ್ಣ ತಾತಾನ ತತ್ವಪದಗಳು ೨.ಯರಮಾರೆಪ್ಪನ ತತ್ವಪದಗಳು ೩.ಹೊಸೂರು ತಿಪ್ಪಣ್ಣನ ತತ್ವಪದಗಳು ೪.ಕಲ್ಮಲಾ

ತಾಯಣ್ಣನ ತತ್ವಪದಗಳು. ಅನುಬಂಧದಲ್ಲಿ, ತತ್ವಪದಕಾರರ ಭಾವಚಿತ್ರಗಳು (ಈ ಪ್ರತಿಯಲ್ಲಿ ಇಲ್ಲ), ತತ್ವಪದಗಳ ಅಕಾರಾದಿ, ಪಾರಿಭಾಷಿಕ ಪದಗಳ ಅರ್ಥ, ಇವೆ.

೫೧೪. ಗುಲಗಂಜಿ ಮಾದೇವಿ

ಸಂ: ಕುರುವ ಬಸವರಾಜ್; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮; ಮೊ.ಮು.೧೯೮೧; ಪುಟ ೧೦+೧೬೮=೧೭೮; ಡಿಮ್ಮೈ ೧/೮

ಹದಿನಾಲ್ಕು ಜನಪದ ಕಥೆಗಳು ಎಂಬ ಅಡಿಬರಹ ಇದೆ. ಅನುಬಂಧದಲ್ಲಿ ಕಥೆಗಾರರ ಪರಿಚಯ, ಜನಪದ ಕಥಾ ವಿಭಜನೆ, ಮುಖ್ಯ ಆಶಯಗಳ ಸೂಚಿ, ವಿಶಿಷ್ಟ ಪದಸೂಚಿ, ಇಂಗ್ಲಿಷ್ ಪದಸೂಚಿ, ಶಬ್ದಾರ್ಥ ಸೂಚಿ ಇವೆ. ಹಂಪ ನಾಗರಾಜಯ್ಯ ಅವರ ಮುನ್ನುಡಿ ಇದೆ.

೫೧೫. ಗುಲಬರ್ಗಾ ಜಿಲ್ಲೆಯ ಜನಪದ ಕಲಾವಿದರು

ಲೇ: ಗಿರಿಜಾ ಕರ್ಪೂರ; ಪ್ರ: ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು-೦೨; ಮೊ.ಮು..೨೦೦೯; ಪುಟ ೧೨+೧೧೬=೧೨೮; ಡಿಮ್ಮೈ ೧/೮

ಗುಲಬರ್ಗಾ ಜಿಲ್ಲೆಯ ೫೯ ಕಲಾವಿದರನ್ನು ಪರಿಚಯಿಸಿಕೊಡುವ ಗ್ರಂಥ. ೧.ಕಾಶಿನಾಥ ಚವ್ಹಾಣ ೨.ಚಂದ್ರಶೇಖರ ಹೊಸುರಕರ್ ೩.ಗಿರಿಜಾ ಮ.ಕರ್ಪೂರ ೪.ಅವ್ವ ಗೌರವ್ವ ಕಾಡಾದಿ ೫.ತುಕಾರಾಮ ನೀಲಪ್ಪ ಭಜಂತ್ರಿ ೬.ಧನಸಿಂಗ ಚವ್ಹಾಣ ೭.ಶಿವಲಿಂಗಯ್ಯ ರೇವಣಸಿದ್ಧಯ್ಯ ಸಾಲಿಮಠ ೮.ಅಮೃತೇಶ ಕಲಶೆಟ್ಟಿ ೯.ಶಾಂತಪ್ಪ ವೀರಭದ್ರಪ್ಪ ಉಡಚಣ ೧೦.ಬಂಗಾರೆವ್ವ ಸಾಲಿ ೧೧.ಬಾಬುರಾವ ಕೋಬಾಳ ೧೨.ಪುಂಡಲೀಕ ಪೂಜಾರಿ ೧೩.ಮೋನಪ್ಪ ಗೋಲಪ್ಪ ಪೋದ್ದಾರ ೧೪.ಮಹಾದೇವಿ ಸಿದ್ದಣ್ಣ ಸರಸಂಬಿ ೧೫.ಸಿದ್ಧಾರೂಢ ಮಲ್ಲಪ್ಪ ಗಡೇದ ೧೬.ಚತುರಾಬಾಯಿ ಶಿವಸಿಂಪಿ ೧೭.ವೀರಣ್ಣ ಗುರುಪಾದಪ್ಪ ಶೀಲವಂತ ೧೮.ಸಾಯಬಣ್ಣ ೧೯.ದಾನಮ್ಮ ರೇಣಗಿ ೨೦.ಪಂಪಯ್ಯ ಸ್ವಾಮಿ ೨೧.ಶಿವಲಿಂಗಪ್ಪ ಡಿಗ್ಗಿ ೨೨.ಭಿಮಾಶ್ಕ ಶರಣಪ್ಪ ಭಕರೆ ೨೩.ಗಿರಿಜಾಬಾಯಿ ರಾಠೋಡ ೨೪.ಸಂಬಣ್ಣ ಮಹಾದೇವಪ್ಪ ಸಿಂಪಿ ೨೫.ಬಸವಣ್ಣೆಪ್ಪ ನಾವದಗಿ ೨೬.ಬಸವಣ್ಣೆಪ್ಪ ಕರಬಸಪ್ಪ ಮುಂದೋಡಗಿ ೨೭.ಸಿದ್ದಪ್ಪ ಮೇಟಿ ೨೮.ಮಲ್ಲಿಕಾರ್ಜುನ ಸಂಗಾವಿ ೨೯.ಶಿವಶರಣಪ್ಪ ಕೋಬಾಳ ೩೦.ರುಕ್ಮಣಪ್ಪ ಗರಡಕರ್ ೩೧.ಶಾಂತಮ್ಮ ಹೊನ್ನಡ್ಡಿ ೩೨.ಬಸವಂತ ರೂಂಪಳ್ಳಿ ೩೩.ಚನ್ನಯ್ಯಸ್ವಾಮಿ ೩೪.ಭೂಪರಾವ್ ಪಡದಳ್ಳಿ ೩೫.ನಾಗಪ್ಪ ಅಮ್ಲಾಪೂರ ೩೬.ಶಿವಮ್ಮ ಭಾವಿದೊಡ್ಡಿ ೩೭.ಹಣಮಂತ ಘತ್ತೆಪೂರ ೩೮.ಕಮಲಮ್ಮ ನಾಟಿಕರ್ ೩೯.ಹಣಮಂತರಡ್ಡಿ ನಾಗರಡ್ಡಿಕರ್ ೪೦.ಶರಣಪ್ಪ ಇದಲಾಯಿ ೪೧.ಬಸವಣ್ಣೆಪ್ಪ ಶಿವಪ್ಪ ರೇವೂರ ೪೨.ನಾಗಪ್ಪ ಶೆರೀಕಾರ ೪೩.ನಾಗಪ್ಪ ಶೇರಿಕಾರ ೪೩.ಮೊಗಲಪ್ಪ ತೋಡಿ ೪೪.ವೇದಮೂರ್ತಿ ಗುರುಲಿಂಗಯ್ಯ ೪೫.ನಾಗಮ್ಮ ಸಾಲಿಮಠ ೪೬.ಮೋನಪ್ಪ ವಿಠ್ಠಪ್ಪ ಸುತಾರ (ಬಡಿಗೇರ) ೪೭.ಗಣಪತಿ ಹಡಪದ ೪೮.ಶಿವರುದ್ರಪ್ಪ

ಗುರುಸಿದ್ದಪ್ ಆಂವಟಿ ೪೯.ದೊಂಡಿಬಾ ಮಕಾಜಿ ಚವ್ಹಾಣ ೫೦.ಅಣ್ಣಪ್ಪ ಮಲಕಾಜಪ್ಪ ಹಡಲಗಿ ೫೧.ದಿಗಂಬರ ಪಂಚಾಳ (ವಿಶ್ವಕರ್ಮ) ೫೨.ಬಕ್ಕಪ್ಪ ಗೇನಳ್ಳಿ ಐನೂಲಿ ೫೩.ಸಾಯಬಣ್ಣದಾಸ ೫೪.ಶ್ರೀಮಂತ ಆಲ್ದಿ ೫೫.ಅಂಬುಬಾಯಿ ಬಡಿಗೇರ ೫೬.ಶಕುಂತಲಾ ಮುತ್ತಗಿ ೫೭.ಬಸವರಾಜ ಅಲಗೂಡ ೫೮.ವಿಠ್ಠಲರಾವ ಹನುಮಂತರಾವ ಹೊಸಗೌಡ ೫೯.ಅಂಬವ್ವ ಭೀಮಣ್ಣ ಪಟ್ಟಣ

೫೧೬. ಗುಲ್ಬರ್ಗ ಜಿಲ್ಲೆಯ ತ್ರಿಪದಿಗಳು

ಸಂ; ಚೆನ್ನಣ್ಣ ವಾಲೀಕಾರ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು: ೧೯೭೬; ಪು: ೧೦+೧೦೮ = ೧೧೪; ಡಿಮೈ

ವಿಷಯವಾರು ವಿಂಗಡಿಸಿದ ತ್ರಿಪದಿಗಳ ಸಂಕಲನ. ಹಾ.ಮಾ. ನಾಯಕ ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ ಅರ್ಥಕೋಶ, ಹಾಡಿದವರು, ಇವೆ.

೫೧೭. ಗುಲಬರ್ಗ ಜಿಲ್ಲೆಯ ಮೊಹರಂ ಪದಗಳು

ಸಂ: ಚೆನ್ನಣ್ಣ ವಾಲೀಕಾರ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮; ಮೊ.ಮು.೧೯೮೧; ಪುಟ ೧೦+೧೬೮=೧೭೮; ಡಿಮೈ ೧/೮

ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟಿರುವ ಹಾಡುಗಳ ಸಂಕಲನ: ೧.ಕರ್ಬಲಾ ಪದಗಳು ೨.ಧಾರ್ಮಿಕ ಪದಗಳು ೩.ಸಾಮಾಜಿಕ ಪದಗಳು ೪.ಇತರ ಪದಗಳು. ಹಾ.ಮಾ. ನಾಯಕ ಅವರ ಮುನ್ನುಡಿ, ಜೀ.ಶಂ. ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಸಂಪಾದಕರ ಪ್ರಸ್ತಾವನೆ ಇವೆ. ನಾಲ್ಕು ಅನುಬಂಧಗಳಿವೆ: ೧.ಪ್ರಾದೇಶಿಕ ಶಬ್ದಾರ್ಥಗಳು ೨.ದೇವರುಗಳು ೩.ಕರ್ತೃಗಳು ೪.ಹಾಡಿದವರು.

೫೧೮. ಗುಲಬರ್ಗಾ ಜಿಲ್ಲೆಯ ಸಂಪ್ರದಾಯದ ಹಾಡುಗಳು

ಲೇ: ಬಿ. ಯಶೋಧರಾ ಶಾಸ್ತ್ರಿ; ಪ್ರ: ಜ್ಯೋತಿರ್ಮಯಿ ಪ್ರಕಾಶನ, ಮಾತಾ ಮಾಣಿಕೇಶ್ವರಿನಗರ, ಗುಲಬರ್ಗಾ-೫೮೫ ೧೦೩; ಮೊ.ಮು.೧೯೯೯; ಪುಟ ೧೨+೨೯೩=೩೦೫; ಡಿಮೈ ೧/೮

ಪಿಎಚ್.ಡಿ. ಮಹಾಪ್ರಬಂಧ. ಐದು ಅಧ್ಯಾಯಗಳಿವೆ: ೧.ಅಧ್ಯಯನದ ಉದ್ದೇಶ ೨.ಗುಲಬರ್ಗಾ ಜಿಲ್ಲೆಯ ಸಂಪ್ರದಾಯಗಳು ೩.ಹಾಡುಗಳ ವಸ್ತು ೪.ಹಾಡುಗಳ ಭಾಷೆ ,ಛಂದಸ್ಸು, ಸಂಗೀತ ೫.ಹಾಡುಗಳ ವೈಶಿಷ್ಟ್ಯ. ಅನುಬಂಧದಲ್ಲಿ ಕೆಲವು ಹಾಡುಗಳು ಹಾಗೂ ಪ್ರಾದೇಶಿಕ ಪದಕೋಶ, ಕೆಲವು ಫೋಟೋಗಳು, ಇವೆ. ವ್ಹಿ.ಜಿ. ಪೂಜಾರ ಅವರ ಮುನ್ನುಡಿ, ಎಚ್.ಜೆ. ಲಕ್ಕಪ್ಪಗೌಡ ಅವರ ಮೆಚ್ಚುನುಡಿ ಇವೆ.

೫೧೯. ಗುಳ್ಳವ್ವ: ಆಚರಣೆ–ವಿಶ್ಲೇಷಣೆ

ಲೇ: ವೀರೇಶ ಶೇ. ಬಡಿಗೇರ; ಪ್ರ: ಮಯ ಪ್ರಕಾಶನ, ಕಮಲಾಪುರ–೫೮೩ ೨೨೧; ಮೊ.ಮು.೧೯೯೯; ಪುಟ ೧೪+೭೪=೮೮; ಡೆಮ್ಮಿ ೧/೮

ಐದು ಅಧ್ಯಾಯಗಳಿವೆ: ೧.ಪ್ರವೇಶ ೨.ಆಚರಣೆ: ಗುಳ್ಳವ್ವನ ರಚನೆ, ಕೋಟೆಯ ನಿರ್ಮಿತಿ ವಿಧಾನ, ಅಲಂಕಾರ, ಗೊಗ್ಗವ್ವ–ಗೊಗ್ಗಪ್ಪ, ಪೂಜೆ ಮತ್ತು ನೈವೇದ್ಯ, ಆರತಿ, ಗುಳ್ಳವ್ವನ ವಿಸರ್ಜನೆ (ಬಾಗಲಕೋಟೆ ತಾಲ್ಲೂಕು), ಗುಳ್ಳವ್ವನ ಸಾವಿನ ಸಂದರ್ಭದಲ್ಲಿ ಆಡುವ ಆಟಗಳು: ಗಿಡಗಿಡ ಮಂಗ್ಯಾ, ಖ್ವಾ ಖ್ವಾ ಆಟ, ಕಣಮುಚಗಿ ಆಟ, ಇಸ್ಪಾಫ್ ಆಟ, ಹೆಣ್ಣು ಕೊಡುವ ಮತ್ತು ತರುವ ಆಟ ೩.ವಿಶ್ಲೇಷಣೆ ೪.ಗುಳ್ಳವ್ವನ ಕಥೆ ಮತ್ತು ಹಾಡುಗಳು ೫.ಸಮಾರೋಪ. ಅನುಬಂಧದಲ್ಲಿ ಕ್ಷೇತ್ರಕಾರ್ಯ ಕೈಗೊಂಡ ಊರುಗಳ ಹೆಸರುಗಳು ಹಾಗೂ ತಡವಾಗಿ ದೊರೆತ ಒಂದು ವಿಶೇಷ ಕಥೆಯೂ ಇವೆ. ಹಿ.ಚಿ.ಬೋರಲಿಂಗಯ್ಯ ಅವರ ಕೋಚೆತ್ತಿ ಹಾಡಿದಾಗ ಎಂಬ ಮುನ್ನುಡಿ ಇದೆ.

೫೨೦. ಗೆಜ್ಜಿ ನುಡದಾವ

ಸಂ: ಬಾಲಕೃಷ್ಣ ಜಂಬಗಿ; ಪ್ರ: ಜಾನಪದ ಮಂಟಪ, ರಾಯಭಾಗ, ಬೆಳಗಾವಿ ಜಿಲ್ಲೆ; ಮೊ.ಮು. ೧೯೮೧; ಪುಟ ೧೨+೯೪=೧೦೬; ಕ್ರೌನ್ ೧/೮

ಜನಪದ ತ್ರಿಪದಿ ಸಂಗ್ರಹ ಎಂಬ ಅಡಿಬರಹ ಇದೆ. ೧೫ ಭಾಗಗಳಾಗಿ ವಿಂಗಡಿಸಲ್ಪಟ್ಟಿರುವ ೪೪೯ ತ್ರಿಪದಿಗಳಿವೆ: ೧.ದೇವ–ದೇವತೆಯರು ೨.ತವರು ೩.ಅಣ್ಣ–ತಮ್ಮ ೪.ಅಕ್ಕ–ತಂಗಿ–ಗೆಳತಿ ೫.ಪತಿ ೬.ಮಗ–ಮಗಳು ೭.ಭಾವ–ಮೈದುನ, ಅತ್ತಿಗಿ–ನಾದುನಿ ೮.ಅತ್ತೆ–ಮಾವ, ಸೊಸೆ–ಅಳಿಯ ೯.ಪ್ರಣಯ ೧೦.ಅಣಕ–ಹಾಸ್ಯ ೧೧.ರಾಮಾಯಣ–ಮಹಾಭಾರತ ೧೨.ಸುಬೋಧ ೧೩.ಮಳೆ–ಬೆಳೆ–ರಾಶಿ ೧೪.ಪಶು–ಪಕ್ಷಿ ೧೫.ಸಂಕೀರ್ಣ. ಜ್ಯೋತಿ ಹೊಸೂರ ಅವರ ಮುನ್ನುಡಿ, ಕೊನೆಯಲ್ಲಿ ಅರ್ಥಕೋಶ ಇವೆ.

೫೨೧. ಗೆಜ್ಜಿ ನುಡಿದಾವ ಗಿಲಿ ಗಿಲಿ

ಸಂ.ಎ.ಕೆ.ರಾಮೇಶ್ವರ,ಎಚ್.ಕೆ.ಶೇಕಪ್ಪ ಆಲೂರ; ಪ್ರ.ಜೇವರಗಿ ತಾಲ್ಲೂಕ ಮಟ್ಟದ ಜಾನಪದ ಕಲಾಮೇಳ, ಜಿಲ್ಲಾ ಗುಲಬರ್ಗಾ; ಮೊ.ಮು: ೧೯೮೯; ಪು: ೨೦+೨೧೨=೨೩೨; ಡೆಮ್ಮಿ ೧/೮

೬ ಲೇಖನಗಳು ಹಾಗೂ ೪೨ ಹಾಡುಗಳು ಇವೆ. ಲೇಖನಗಳು: ೧.ಜೇವರಗಿ ತಾಲ್ಲೂಕಿನ ಗ್ರಾಮೀಣ ವೈಶಿಷ್ಟ್ಯಗಳು–ಎಚ್.ಕೆ.ಶೇಖಪ್ಪ ಆಲೂರ ೨.ಜೇವರಗಿ ತಾಲ್ಲೂಕಿನ ಜಾನಪದ ಜೀವ ನಾಡಿಗಳು–ಶ್ರೀ.ಮ.ನಿ.ಪ್ರ.ಸ್ವಶ್ರೀ ಶಾಂತಲಿಂಗಸ್ವಾಮಿಗಳು, ಜಾನಪದ ಗೋಷ್ಠಿಯಲ್ಲಿ ಮಂಡಿತವಾದವು: ೧.ವಚನ ಸಾಹಿತ್ಯಕ್ಕೆ ಜಾನಪದರ ಕೊಡುಗೆ–ಬಿ.ಮಹಾದೇವಪ್ಪ ೨.ಜಾನಪದ ಜೀವಿಗಳಾಗಿ ಹರಿದಾಸರು–ಸ್ವಾಮಿರಾವ ಕುಲಕರ್ಣಿ

೩.ಕಲಬುರ್ಗಿ ಜಿಲ್ಲೆಯ ಜಾನಪದ ಕಲೆಗಳು--ಸೂಗಯ್ಯ ಹಿರೇಮಠ ೪.ಜಾನಪದ ರಂಗಭೂಮಿಯ ವೈಶಿಷ್ಟ್ಯಗಳು–ಹೇಮಂತ ಕುಮಾರ ಕೊಲ್ಹಾಪುರ್ ಒಡಗತಿ ಬಡಿ ನನ್ನ ಸರಿ ನಡಿ ಎಂಬ ಶೀರ್ಷಿಕೆಯಲ್ಲಿ ೯೫ ಒಗಟುಗಳಿವೆ.ಉತ್ತರಸಹಿತ ಹಾಡು ಮುಕ್ತಾಯವಾಗುವ ಪುಟಗಳಲ್ಲಿ ಸ್ಥಳಾವಕಾಶ ಇದ್ದಲ್ಲೆಲ್ಲ ಗಾದೆಗಳನ್ನು ತುಂಬಲಾಗಿದೆ.

೫೨೨. ಗೆಜ್ಜೆ ಮಾತಾಡುತಾವೆ

ಸಂ: ಜಿ.ಎನ್.ಮೋಹನ್; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು; ಮೊ.ಮ: ನಮೂದು ಇಲ್ಲ; ಪು: ೭೨; ಕ್ರೌನ್ ೧/೪

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಿಮ್ಯೆಯ ಕಾರ್ಯಚಟುವಟಿಕೆಗಳನ್ನು ಕುರಿತು ವಿವಧ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸಾಂದರ್ಭಿಕ ಲೇಖನಗಳ ಸಂಕಲನ

೫೨೩. ಗೆಜ್ಜೆ ಗಲಿರೆಂದವೊ

ಸಂ: ಜೀ.ಶಂ. ಪರಮಶಿವಯ್ಯ; ಪ್ರ: ಶಕ್ತಿ ಪ್ರಕಾಶನ, ಗೋಕುಲಂ ಮೂರನೇ ಹಂತ, ಮೈಸೂರು–೫೭೦೦೦೨; ಮೊ.ಮು: ೧೯೯೦; ಪು: ೪೮; ಡಿಮ್ಮೈ ೧/೮

ಕೋಲುಪದಗಳ ಸಂಕಲನ: ೧.ಗ್ಯಾನ ಮಾಡಿ ನೆನೆದೇನು ೨.ಎಂ ತೋರಿಗೆಂಥ ವನವಾಸ ೩.ಯಾರಿಗೆ ಕೊಡಲಮ್ಮ ೪.ಮೊಗ್ಗು ಬಾಡ್ಯಾವೆ ಬಿಸಲೀಗೆ ೫.ರಕ್ತದ ಮಡುವ ಕಲಕ್ಯಾಳೆ ೬.ನಂಬಿಕೆ ಕೊಡೆ ಬಲಗ್ಯೆಗೆ ೭.ಹೂ ಕಂಡು ಜಡೆಯ ಒದರ್‍ಯಾನು ೮.ಭೈರವ ಕಂಡರೆ ಬರಹೇಳು ೯.ಪರಿಸೇಲಿ ಕೋಲ ಹಾಕುತೀವಿ ೧೦.ದೂರದಿಂದ ಕೈಯ ಮುಗಿದೇವು ೧೧.ಚಾಮುಂಡಿ ಕದವ ತೆಗೆಯೆಂದ ೧೨.ಕಿನ್ನುಡಿ ಮೇಲೆ ಕಿರುಗೆಜ್ಜೆ ೧೩.ಕೊಳ್ಳಿರಿ ಬಲಗ್ಯೆಗೆ ಭಾಷೆಯ ೧೪.ಭೈರವನ ತೇರು ಹರಿದಾವೊ ೧೫.ಸೋಲಿಸಬೇಡ ಗೆಲಿಸಯ್ಯ ೧೬.ತಾವರೆ ಹೂವಿನ ಗಮಲವೊ ೧೭.ಮನಸಿಲ್ಲ ಹೆಣ್ಣೆ ಹೋಗುವಾಕೆ ೧೮.ಯಾಸುಗಾರ ಹನುಮಯ್ಯ ೧೯.ಹೆಚ್ಚೊಕ್ಕಲಾಗಿ ಬದುಕಪ್ಪ ಕೊನೆಯಲ್ಲಿ ಶಬ್ದಕೋಶ ಇದೆ.

೫೨೪. ಗೆದರೆಬೆಟ್ಟ ಮತ್ತು ಗುರುಮಕ್ಕಳು

ಲೇ: ಮ.ನಾ.ಕೃಷ್ಣಮೂರ್ತಿ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು.೨೦೧೧; ಪುಟ ೪+೨೮=೩೨; ಡಿಮ್ಮೈ ೧/೮

ಒಂದು ತೌಲನಿಕ ಜಾನಪದ ಅಧ್ಯಯನ ಎಂಬ ಅಡಿಬರಹ ಇದೆ. ಗೆದರೆಬೆಟ್ಟ: ಒಂದು ಆಧ್ಯಾತ್ಮಿಕ ಹಿನ್ನೆಲೆ, ಬೆಟ್ಟಕ್ಕೆ ಸೇರಿದವರ (ಗುರುಮಕ್ಕಳ)ಜೀವನ ಕ್ರಮ, ಗುರುಮಕ್ಕಳ (ಪರ್ಯಾಯ ಸನ್ಯಾಸಿಗಳು ಅಥವಾ ಬೆಟ್ಟಕ್ಕೆ ಸೇರಿದವರು), ಜೀವನ ವಿಧಾನ, ದೀಕ್ಷಾ ಸಂಹಿತೆ, ವಸ್ತ್ರ ಸಂಹಿತೆ, ಆಹಾರ ಸಂಹಿತೆ, ಭಾಷಾ ಸಂಹಿತೆ, ನೀತಿ ಸಂಹಿತೆ, ಭಜನಾ ಸಂಹಿತೆ, ನಡವಳಿಕಾ ಸಂಹಿತೆ, ಜೀವನ ಸಂಹಿತೆ, ಗೆದರೆ ಬೆಟ್ಟದ ಕಲ್ಯಾಣಿ,

ಗೆದರೆಬೆಟ್ಟದೊಂದಿಗೆ ಬೆಸೆದುಕೊಂಡ ಗುರುಮಕ್ಕಳ ಬಾಂಧವ್ಯಗಳು, ಏಳುಸುತ್ತಿನ ದೇವಕಣಗಿಲೆ ಹೂವು, ಗೆದರೆಬೆಟ್ಟದ ಮಠಗಳು ಮತ್ತು ದೇವಾಲಯಗಳು, ಕಂಬದ ನರಸಿಂಹಸ್ವಾಮಿ, ಗೆದರೆಬೆಟ್ಟದ ಸುತ್ತಲಿನ ವಿಖ್ಯಾತ ಸ್ಥಳಗಳು, ಉಪಸಂಹಾರ ಎಂಬ ಉಪಶೀರ್ಷಿಕೆಗಳಿವೆ.

೫೨೫. ಗೊಂಡರ ಪದಗಳು

ಸಂ.ಎಲ್.ಆರ್.ಹೆಗಡೆ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೧೮; ಮೊ.ಮು: ೧೯೭೭; ಪು ೮+೧೯೬=೨೦೪; ಕ್ರೌನ್ ೧/೮

ನಾಲ್ಕು ಭಾಗಗಳನ್ನಾಗಿ ವಿಂಗಡಿಸಲಾಗಿದೆ.: ೧.ಗೊಂಡರ ಪದಗಳು ೨.ಮಂಡಲದ ಪದಗಳು ೩.ಶಿವಭಿಕ್ಷ ಮಹಾರಾಜ ೪.ಸೋಮಚಕ್ರವರ್ತಿ–ಭೀಮ ಚಕ್ರವರ್ತಿ. ಗೊಂಡರ ಪದಗಳು ಮತ್ತು ಮಂಡಲದ ಪದಗಳು ಎಂಬ ಎರಡು ಭಾಗಗಳಲ್ಲಿ ಪ್ರಸ್ತಾವನೆ ಇದೆ. ಗೊಂಡರ ಪದಗಳು ಎಂಬ ಪದ್ಯಭಾಗ ಇಲ್ಲ. ಮಂಡಲದ ಪದಗಳಲ್ಲಿ ಇವು ಇವೆ: ದೆವ್ವ ಕರೆವ ಹಾಡು, ಹೊನ್ನಮ್ಮ ಮಾಸ್ತಿ, ಬಲೀಂದ್ರ, ಕಲಿಕಾಲ, ಹೊನ್ನಮ್ಮನ ತಳ ಮನೆಯಲ್ಲಿ, ಹುಲಿ ಬೇಟೆ, ಪುಣ್ಯವಂತರು–ಪಾಪಿಗಳು, ನಾಗದೇವತೆಯ ಹಾಡು, ಕಾಡೇ ಹಾಡು ಕೊನೆಯಲ್ಲಿ ಅರ್ಥಕೋಶ ಇದೆ.

೫೨೬. ಗೊಂಡರ ಸಂಸ್ಕೃತಿ

ಲೇ: ಸೈಯದ್ ಜಮೀರುಲ್ಲಾ ಷರೀಫ್; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು; ಮೊ.ಮು.: ೧೯೯೩; ಪುಟ: ೪೪ + ೩೪೮ = ೩೯೨; ಕ್ರೌನ್ ೧/೮

ಈ ಗ್ರಂಥದಲ್ಲಿ ಐದು ಅಧ್ಯಾಯಗಳಿವೆ. ೧.ಹಿನ್ನೆಲೆ ೨.ಗೊಂಡರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ ೩.ಭಾಷೆ ಮತ್ತು ಸಾಹಿತ್ಯ ೪.ಆಚರಣೆ, ಕಲೆ ಮತ್ತು ಮನರಂಜನೆ ೫.ಗೊಂಡರ ಧಾರ್ಮಿಕ ವ್ಯವಸ್ಥೆ. ಕೊನೆಯಲ್ಲಿ ೧೨ ಛಾಯಾಚಿತ್ರಗಳಿವೆ. ಪ್ರಾರಂಭದಲ್ಲಿ ಬರಗೂರು ರಾಮಚಂದ್ರಪ್ಪ ಅವರ 'ಸಂಸ್ಕೃತಿ–ಉಪಸಂಸ್ಕೃತಿ' ಎಂಬ ಸಂಶೋಧನಾತ್ಮಕ ಪ್ರಸ್ತಾವನೆ ಇದೆ.

೫೨೭. ಗೊಂದಲಿಗರ ಕಥೆಗಳು

ಸಂ: ಕ್ಯಾತನಹಳ್ಳಿ ರಾಮಣ್ಣ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು. ೧೯೭೨; ಪುಟ ೩೨+೧೫೬; ಡಿಮೈ ೧/೮

ಗೊಂದಲಿಗರಲ್ಲಿ ಬಳಕೆಯಲ್ಲಿರುವ ಏಳು ಕಥೆಗಳ ಸಂಕಲನ: ೧.ಸತಿ ಸುಲೋಚನೆ ೨.ಅಡವಿ ಕುಮಾರ ೩.ಬಾಳಾವತಿ ೪.ನಳ ನಿಳ ೫.ರಾಜಾ ಷೋಕಸೇನ ೬.ಬಾಳಭಿಕ್ಷುಕರಾಜ ೭.ಜಯಾರಾಣಿ. ಹಾ.ಮಾ.ನಾಯಕ ಅವರ ಮುನ್ನುಡಿ, ಜೀ.ಶಂ. ಪರಮಶಿವಯ್ಯ

ಅವರ ವಿಭಾಗ ಸಂಪಾದಕರ ಮಾತು, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ ಅರ್ಥಕೋಶ, ಸಂಗ್ರಹ ವಿವರ, ಇವೆ.

೫೨೮. ಗೊಂದಲಿಗರ ದೇವೇಂದ್ರಪ್ಪನವರ ಆಟಗಳು

ಸಂ: ಮುದೇನೂರು ಸಂಗಣ್ಣ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ; ಮೊ.ಮು. ೧೯೯೩; ಪುಟ ೬೮+೩೯೬=೪೬೪; ಡಿಮ್ಮೈ ೧/೮

ಈ ಸಂಕಲನದಲ್ಲಿ ಆರು ಕಾವ್ಯಗಳು ಹಾಗೂ ಎರಡು ಅಡ್ಡಕಥೆಗಳು ಇವೆ. ಕಾವ್ಯಗಳು: ೧.ಮಹಾಸತಿ ಶಿವಲೋಚನಾ ೨.ಬಾಳ ಭಿಕ್ಷುಕ ೩.ಸತ್ಯ ಶೀಲಾವತಿ ೪.ರಾಜಾ ವೀರ ಪರಾಕ್ರಮ ೫.ವಿಘ್ನಾವತಿ ೬.ದುರಾಸೆಯ ಭಕ್ತ. ಅಡ್ಡಕಥೆಗಳು: ೧.ಜಗಳಗಂಟಿ ಜಕ್ಕವ್ವ ೨.ಸಂತ ದಂಪತಿಗಳು. ಚಂದ್ರಶೇಖರ ಕಂಬಾರ ಅವರ ಮುನ್ನುಡಿ, ೫೮ ಪುಟಗಳ ಸುದೀರ್ಘ ಪೀಠಿಕೆ, ಕಲಾವಿದರ ಫೋಟೋಗಳು, ಕೊನೆಯಲ್ಲಿ, ಕೆಲವು ಕಠಿಣ ಶಬ್ದಗಳ ಸಾಂದರ್ಭಿಕ ಅರ್ಥಗಳು, ಇವೆ.

೫೨೯. ಗೊಂದಲಿಗರ ಸಂಸ್ಕೃತಿ

ಲೇ: ನಿಂಗಣ್ಣ ಸಣ್ಣಕ್ಕಿ; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು –೫೬೦ ೦೦೨; ಮೊ.ಮು; ೧೯೯೩; ಪು: ೪೮+೨೧೪ = ೨೬೨; ಕ್ರೌನ್

ಆರು ಅಧ್ಯಾಯಗಳಿವೆ; ೧.ಹಿನ್ನೆಲೆ ೨.ಜೀವನ ವಿಧಾನ ಆಚರಣೆ ಸಾಮಾಜಿಕ ನೆಲೆ ೩.ಭಾಷೆ–ಸಾಹಿತ್ಯ ೪.ಪ್ರದರ್ಶನಾತ್ಮಕ ಕಲೆಗಳು ಕ್ರೀಡೆಗಳು ೫.ಸಾಮಾಜಿಕ ಪರಿವರ್ತನೆಯ ಹಿನ್ನೆಲೆಯಲ್ಲಿ ೬.ಸಮಾರೋಪ. ಅನುಬಂಧದಲ್ಲಿ ೧.ಭೂತ್ಯಾ; ಎಣ್ಣಿಯ ಜೋಗ್ಯಾ ೨.ಗೊಂದಲಿಗರ ಗಾದೆ–ನುಡಿಗಟ್ಟು–ಒಗಟು (೨೬೦ ಗಾದೆಗಳು ಕೆಲವು ನುಡುಗಟ್ಟುಗಳು ೧೦ ಒಗಟುಗಳು ೬ ಒಡಪುಗಳು–ಈ ಭಾಗದಲ್ಲಿವೆ.) ೩.ಗೊಂದಲಿಗರ ಕೆಲವು ಹಾಡುಗಳು ಇವೆ. ಬರಗೂರ ರಾಮಚಂದ್ರಪ್ಪ ಅವರ ಪ್ರಸ್ತಾವನೆ ಇದೆ.

೫೩೦. ಗೊಂದಲಿಗರು: ಒಂದು ಅಧ್ಯಯನ

ಲೇ: ಕ್ಯಾತನಹಳ್ಳಿ ರಾಮಣ್ಣ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು: ೧೯೮೨; ಪು: ೧೬+೧೦೨=೧೧೮; ಡಿಮ್ಮೈ ೧/೮

ಏಳು ಅಧ್ಯಾಯಗಳಿವೆ: ೧.ಪ್ರವೇಶ ೨.ಗೊಂದಲಿಗರು ೩.ಸಂಸ್ಕೃತಿ ೪.ಗೊಂದಲ ೫.ಸಾಹಿತ್ಯ ೬.ಆಶಯಗಳು ೭.ಉಪಸಂಹಾರ. ಹಾ.ಮಾ.ನಾಯಕ ಅವರ ಮುನ್ನುಡಿ, ಜೀ.ಶಂ.ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಇವೆ.

೫೩೧. ಗೊಂಬೀಗೌಡರ ಸೂತ್ರದ ಗೊಂಬೆ ಆಟಗಳು

ಸಂ: ಮುದೇನೂರ ಸಂಗಣ್ಣ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು–೧೮; ಮೊ.ಮು: ೧೯೫೫; ಪು: ೮+೧೩೬=೧೪೪; ಕ್ರೌನ್ ೧/೮

ರಾವಣವಧಾ ಹಾಗೂ ಅಭಿಮನ್ಯು ವಧಾ ಎಂಬ ಎರಡು ಪ್ರಸಂಗಗಳ ಸಂಕಲನ. ೨೬ ಪುಟಗಳಷ್ಟು ದೀರ್ಘವಾದ ಪ್ರಸ್ತಾವನೆಯಲ್ಲಿ, ವಸ್ತು, ಪ್ರೇಕ್ಷಕ–ಪ್ರಯೋಗ ಸಂಬಂಧ, ಗೊಂಬೆಗಳು, ಗೊಂಬೆ ಮತ್ತು ಸೂತ್ರಗಳ ಸಂಬಂಧ, ಭಾಗವತ, ಕುಣಿತ, ವಾದ್ಯ ಪರಿಕರಗಳು, ಮದ್ದಲೆ–ಮದ್ದಲೆಕಾರ, ಮಾತುಗಾರಿಕೆ, ಹನುಮನಾಯಕ, ಯಕ್ಷಗಾನ ಶೈಲಿಯಲ್ಲಿ ಗೊಂಬೆಆಟ, ದೊಡ್ಡಾಟದ ಶೈಲಿಯಲ್ಲಿ ಗೊಂಬೆ ಆಟ, ಗೊಂಬೀಗೌಡರು, ಹನುಮನ ಗೌಡರ ಆಟದ ವೈಶಿಷ್ಟ್ಯ, ಕತೆ ಹೇಳುವ ತಾತ್ಪರ್ಯ, ಪ್ರಸ್ತುತದಲ್ಲಿ ಗತಿಸ್ಥಿತಿ ಎಂಬ ವಿಷಯಗಳ ಬಗ್ಗೆ ವಿವರಗಳಿವೆ. ಗೊ.ರು. ಚನ್ನಬಸಪ್ಪ ಅವರ ಅಧ್ಯಕ್ಷರ ನುಡಿ, ಕೊನೆಯಲ್ಲಿ, ಕೆಲವು ಶಬ್ದಗಳ ಸಾಂದರ್ಭಿಕ ಅರ್ಥಗಳು ಇವೆ.

೫೩೨. ಗೊಂಬೆಯಾಟಗಳು

ಲೇ: ಹೆಚ್.ಎಸ್. ರಾಮಚಂದ್ರೇಗೌಡ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು, ಮೊ.ಮು: ೧೯೮೦; ಪು: ೨೮; ಕ್ರೌನ್ ೧/೮

ತೊಗಲುಗೊಂಬೆಗಳನ್ನು ತಯಾರಿಸುವ ವಿಧಾನ, ಕಲೆ, ಪ್ರದರ್ಶನ; ಹಾಗೂ ಸೂತ್ರದ ಗೊಂಬೆಯಾಟದ ವಿವರಗಳು; ಇವನ್ನು ಸಂಕ್ಷಿಪ್ತವಾಗಿ ಸರಳವಾಗಿ ಪರಿಚಯಿಸಿಕೊಡುವ ಕೃತಿ. ಅಲ್ಲಲ್ಲಿ ಕೆಲವು ರೇಖಾಚಿತ್ರಗಳಿವೆ.

೫೩೩. ಗೊಂಬೆಯಾಟವಯ್ಯ

ಸಂ: ಕೆ.ವೆಂಕಟ ಕೃಷ್ಣಯ್ಯ; ಪ್ರ: ಶ್ರೀಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ(ರಿ), ಶ್ರೀರಾಮಪೇಟೆ, ಕಾಸರಗೋಡು, ದ.ಭಾರತ; ಮೊ.ಮು: ೧೯೯೨; ಪು: ೪೦+೨೧೩=೨೫೩; ಡಿಮ್ಮೈ ೧/೮

ದಶಮಾನೋತ್ಸವ ಸಂದರ್ಭದಲ್ಲಿ ಬಿಡುಗಡೆಯಾದ ಜಾನಪದ ಗ್ರಂಥ ಎಂಬ ಅಡಿಬರಹ ಇದೆ.(೧೯೮೧–೧೯೯೧) ಪತ್ರಿಕಾ ವರದಿಗಳ ಹಾಡುಗಳು ೨೦ ಲೇಖನಗಳಿವೆ. ೧.ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಗೊಂಬೆಯಾಟ –ಕೃಷ್ಣಯ್ಯ.ಎಸ್.ಎ ೨.ಗಡಿನಾಡಿನಲ್ಲಿ ಜನಪದ ಕಲೆಗಳು –ಉಪ್ಪಂಗಳ ರಾಮಭಟ್ಟ ೩.ತೊಗಲು ಬೊಂಬೆಯಾಟ–ಒಂದು ಪ್ರಾಚೀನ ರಂಗಭೂಮಿ–ಕೃಷ್ಣಯ್ಯ ಎಸ್.ಎ ೪.ರಷ್ಯದ ಬೊಂಬೆಯಾಟಗಾರ ಸರ್ಗೈ ಒಬ್ರಜ್ಟ್ಸೋವ್–ಎಂ.ಶಿವರಾಮ ಆಚಾರಕ ೫.ರಷ್ಯದ ವೈವಿಧ್ಯಮಯ ಬೊಂಬೆಯಾಟ –ಶಿವರಾಮ. ಎಂ. ೬.ರಷ್ಯದ ಬೊಂಬೆಯಾಟದ ಪರಿಕರಗಳು –ಎಂ.ಶಿವರಾಮ ಆಚಾರ್ ೭.ವಾಯಾಂಗ್ ಕುಲೀಟ್ (ಮಲೇಶ್ಯಾದ ಬೊಂಬೆಯಾಟ–ಛಾಯಾ ಪ್ರದರ್ಶನ–ದ ಒಂದು ಕಿರುನೋಟ)–ಕೆ.ಎಸ್.ಸುಬ್ರಾಯ ಭಟ್ ೮.ಸಂಯುಕ್ತ ಅಮೇರಿಕಾದ ಬೊಂಬೆಯಾಟ ಪ್ರೇಮಿಗಳು –ಎಂ.ಶಿವರಾಮ ಆಚಾರ್ ೯.ಆಸ್ಟ್ರಿಯಾ ದೇಶದಲ್ಲಿ

ಬೊಂಬೆಯಾಟ-ಎಂ.ಶಿವರಾಮ ಆಚಾರ್ ೧೦.ಜಪಾನೀಯರ ಬೊಂಬೆಯಾಟ ಬುನಾಕು-ಎಂ.ಶಿವರಾಮ ಆಚಾರ್ ೧೧.ಜಾವಾದಲ್ಲಿ ಬೊಂಬೆಗಳು -ಎಂ.ಶಿವರಾಮ ಆಚಾರ್ ೧೨.ಯಕ್ಷಗಾನ -ನಡೆದು ಬಂದ ರೀತಿ-ದೇಶಮಂಗಲ ಕೃಷ್ಣ ಕಾರಂತ ೧೩.ಗೊಂಬೆಗಳ ಗಾಂಭೀರ್ಯ-ಕೆ.ಎಸ್.ಸುಬ್ರಾಯ ಭಟ್ ೧೪.ಹವ್ಯಕರು-ಜಾನಪದ ಸಾಹಿತ್ಯ -ಎ.ನರಸಿಂಹಭಟ್ ಗೊಂಬೆಗಳಿಂದೊಂದು ಯಕ್ಷಗಾನ ನೃತ್ಯ-ಮೂಲ: ಅಂಬಿಕಾಸುತನ್ ಮಾಂಗಾಡ್, ಅನು: ಕೆ.ವೆಂಕಟಕೃಷ್ಣಯ್ಯ-ಮಾತೃಭೂಮಿ ೧೩-೨-೧೯೮೩.೪.ಶ್ರೀಗೋಪಾಲಕೃಷ್ಣ ಯಕ್ಷಗಾನ ಗೊಂಬೆಯಾಟ-ಶ್ರೀಕೃಷ್ಣಯ್ಯ ಅನಂತಪುರ, ಉದಯವಾಣಿ, ೨೧-೫-೧೯೮೩.ಯಕ್ಷಗಾನ ಗೊಂಬೆಗಳು-ಸದಾಶಿವ ಕೋಟೂರು, ವಾರಪತ್ರಿಕೆ ೯-೯-೧೯೮೪ ೬.puppet shows gaining in popularity, The Hindu,5-10-1984 ೭.puppet players Rama Bhat, Decan Henald 29-10-1984 ೮.ಬೊಂಬೆಯಾಟವಯ್ಯಾ..ಮಕ್ಕಳ..ಉಪ್ಪಂಗಳ ರಾಮ ಭಟ್ಟ,ಉದಯವಾಣಿ,೨೯-೧೦-೧೯೮೪ ೯.puppeters by night, students by day -"shree"Padre current,18-05-1985,೧೦.ಆಟ-ಅಧ್ಯಯನ ರಾಮದಾಸ್ ಕಾಸರಗೋಡು, ಉದಯವಾಣಿ,೧೫-೩-೧೯೮೭ ೧೧.ಕೈಚಳಕದ ಸಾಮರ್ಥ್ಯ ಪ್ರತಿ ಬಿಂಬಿಸುವ ಗೊಂಬೆಯಾಟ-ಮೂಲ: ಶಶಿಧರನ್ ಮಂಗತ್ತಿಲ್,ಅನು.ಕೆ.ವೆಂಕಟಕೃಷ್ಣಯ್ಯ, ಕೇರಳ ಕೌಮದಿ, ೧೧-೫-೧೯೮೮ ೧೨.ಕೈ.ಬೆರಳುಗಳು ನಿಯಂತ್ರಿಸುವ ನಾಟ್ಯ-ಮೂಲ: ಪ್ರಭಾ ಅಜಾನೂರ್, ಅನು: ಕೆ.ವೆಂಕಟಕೃಷ್ಣಯ್ಯ,ಮಾತೃಭೂಮಿ,೧೨-೩-೧೯೮೯ ೧೩.ಕುಣಿಯುವ ಬೊಂಬೆಗೆ ಕಬ್ಬಿಣದ ಸರಿಗೆ-ಶಂಕರ್ ಸಾರಡ್ಕ ಉದಯವಾಣಿ ೨೦.೦೫.೧೯೯೦ ೧೫.ದೇನಿಶ್‌ರ ಮನಸೆಳೆದ ಯಕ್ಷಗಾನ-ಎಂ.ಶಿವರಾಮ ಆಚಾರ್, ಸಂಯುಕ್ತ ಕರ್ನಾಟಕ,೭-೪-೧೯೯೧ ೧೬.ಮರೆಯಾಗುತ್ತಿರುವ ಕಲೆ-ಸಲಾಕಿ ಇಲ್ಲಿಂದ ಮುಂದಕ್ಕೆ ಲೇಖನಗಳು ಮುಂದುವರಿದಿವೆ: ೧೫.ಕಾಸರಗೋಡಿನ ತುಳುಜನಪದ ಸಾಹಿತ್ಯ -ವೆಂಕಟರಾಜ ಪುಣಿಂಚತ್ತಾಯ ೧೬.ಕಲ್ಕತ್ತೆಯ ಬೊಂಬೆಯಾಟ ಸಂಘ-ಎಂ.ಶಿವರಾಮ ಆಚಾರ್ ೧೯.ಚೀನಾದಲ್ಲಿ ಬೊಂಬೆಯಾಟ -ಎಂ.ಶಿವರಾಮ ಆಚಾರ್ ೨೦.ಮಕ್ಕಳ ಆರೋಗ್ಯ ರಕ್ಷಣೆಯಲ್ಲಿ ಬೊಂಬೆಯಾಟದ ಪಾತ್ರ-ಎಂ.ಶಿವರಾಮ ಆಚಾರ್.ಕೆಲವು ಫೋಟೊಗಳಿವೆ.

೫೩೪. ಗೊಂಬೆರಾಮರ ಸಂಸ್ಕೃತಿ

ಲೇ: ಟಿ.ಗೋವಿಂದ ರಾಜು; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು: ೧೯೯೩; ಪು: ೮೪+೨೬೦=೩೦೮; ಕ್ರೌನ್೧/೮

ಆರು ಅಧ್ಯಾಯಗಳಿವೆ: ೧.ಹಿನ್ನೆಲೆ ೨.ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ ೩.ಆಚರಣೆ ಮತ್ತು ಕಲೆ ೪.ಪ್ರದರ್ಶನ ಕಲೆ ೫.ಭಾಷೆ ಮತ್ತು ಸಾಹಿತ್ಯ ೬.ಉಪಸಂಹಾರ., ಅನುಬಂಧದಲ್ಲಿ, ಗೊಂಬೆರಾಮರ ಸಾಹಿತ್ಯ, ವಿದೇಶಿ ಪ್ರವಾಸಾನುಭವ, ವಕ್ತೃವಿವರ, ಇವೆ. ಗೊಂಬೆರಾಮರ ಸಾಹಿತ್ಯದಲ್ಲಿ, ಮಹಿಳೆಯರ ಹಾಗೂ ಗಂಡಸರ ಹಾಡುಗಳಿವೆ.

ಕತೆಗಳು ಇವು: ೧.ಕಿಳ್ಳೆಕ್ಯಾತ–ಜುಟ್ಟುಬೂತುಗ ೨.ಕಲಿಕ್ಯಾತ–ಹುಲುಸಿನ ಮಗ ೩.ಕಿಳ್ಳೆಕ್ಯಾತ ಭೂಮಿಗೆ ಹುರುಳಿ ತಂದದ್ದು ೪.ಸೀತೆಯ ಹುಟ್ಟು ೫.ಕಲಿಯುಗ ರಾಮ ೬.ಕರೋಕಲ್ ಸಿಳ್ಳೇಕ್ಯಾತ ೭.ಸೃಷ್ಟಿ ಪುರಾಣ ೮.ಭಾಗವತ/ಕೃಷ್ಣ ಕಪ್ಪಗಾಗಿದ್ದು ೯.ಸೂರ್ಯ–ಚಂದ್ರ ೧೦.ಚಂದ್ರ ೧೧.ಚುಕ್ಕೆಗಳು. ಪ್ರಸಂಗ ಸಾಹಿತ್ಯ: ೧."ಶೂರ್ಪನಖಿ ಪ್ರಸಂಗ"ದ ಒಂದು ಭಾಗ ೨.,ಶೂರ್ಪನಖಿಯ ಅಲಂಕಾರ ೩.'ಶೂರ್ಪನಖಿ' ಪ್ರಸಂಗದ ಇನ್ನೊಂದು ಮಾದರಿ ೪.'ಸೂತ್ರದ ಗೊಂಬೆ'ಯಾಟದಲ್ಲಿ ಶೂರ್ಪನಖಿ ೫.'ಸ್ವಾತಂತ್ರ್ಯ ಸಂಗ್ರಾಮ' ಭಾಗ ೧ರ ಮೊದಲ ದೃಶ್ಯ. ಅಡ್ಡಸೋಗುಗಳು: ೧.'ಪುಣ್ಯಕೋಟಿ'–(ಒಂದು ತುಣುಕು) ೨.ಬಂಗಾರಕ್ಕ–ಸಿಳ್ಳೇಕ್ಯಾತರ ಹಾಸ್ಯ ೩.ಚೇಳು ಕಡಿತ. ಕಲಾವಿದರೊಬ್ಬರು ಹೇಳಿರುವ ವಿದೇಶಿ ಪ್ರವಾಸಾನುಭವ ಇದೆ. ಕೊನೆಯಲ್ಲಿ ಕೆಲವು ರೇಖಾಚಿತ್ರಗಳಿವೆ.

೫೩೫. ಗೊರವರ ಕೆಂಚಮಲ್ಲಯ್ಯ ಹಾಡಿರುವ ಕಲ್ಯಾಣದೊಳಗೊಂದು ಪಂಚಾಯಿತಿ

ಸಂ: ಚಕ್ಕೆರೆ ಶಿವಶಂಕರ್; ಪ್ರ: ಸಾಗರ್ ಪ್ರಕಾಶನ ೧೬೭೯, ೧೦ನೇ ಮುಖ್ಯ ರಸ್ತೆ, ೫ನೇ 'ಎ' ಅಡ್ಡರಸ್ತೆ, ಬನಶಂಕರಿ ೧ನೇ ಹಂತ, ೨ನೇ ಘಟಟ, ಬೆಂಗಳೂರು–೫೬೦ ೦೫೦; ಮೊ.ಮು.: ೨೦೦೬; ಪು: ೧೦೪; ಡಿಮ್ಮೆ ೧/೮

"ಪ್ರಸ್ತುತ ಖಂಡಕಾವ್ಯವು ಐತಿಹಾಸಿಕ ಅಂಶಗಳಿಗೆ ತೀರಾ ಸಮೀಪವಾದದಾಗಿದ್ದು ಬಾಗಲವಾಡಿಯಲ್ಲಿ ಆರಂಭವಾದ ಕಥೆ ಕಲ್ಯಾಣದಲ್ಲಿ ಕೊನೆಗೊಳ್ಳುತ್ತದೆ. ಕತೆಯ ತಾಳಿನಿಂದ ತುದಿಯವರೆವಿಗೂ ಸಮಾನ ಸೂತ್ರ ಒಂದನ್ನು ಕಾಯ್ದಿರಿಸಿಕೊಂಡು ಹೋಗುತ್ತದೆ. ಅಲ್ಲಲ್ಲಿ ವಿಲಕ್ಷಣ ಘಟಗಳು ಬರುತ್ತವಾದರೂ ಕಥೆಗೆ ಹೊರತಾಗಿ ನಿಲ್ಲದೆ ಕಥೆಯೊಂದಿಗೆ ಮೇಳೈಸುತ್ತವೆ"ಎಂಬುದಾಗಿ ಪ್ರಸ್ತಾವನೆಯಲ್ಲಿ ಸಂಪಾದಕರು ಹೇಳಿದ್ದಾರೆ. ಅರ್ಥಕೋಶ ಇದೆ.

೫೩೬. ಗೊರವರ ಕೆಂಚಮಲ್ಲಯ್ಯ ಹಾಡಿರುವ ಮೈಲಾರ ಮಾಳಮ್ಮ ಮತ್ತು ನೀಲವೇಣಿ

ಸಂ: ಚಕ್ಕೆರೆ ಶಿವಶಂಕರ್; ಪ್ರ: ಸಾಗರ್ ಪ್ರಕಾಶನ, ೧೬೭೯, ೧೦ನೇ ಮುಖ್ಯ ರಸ್ತೆ, ೫ನೇ 'ಎ' ಅಡ್ಡರಸ್ತೆ, ಬನಶಂಕರಿ ೧ನೇ ಹಂತ, ೨ನೇ ಘಟ್ಟ, ಬೆಂಗಳೂರು–೫೬೦ ೦೫೦; ಮೊ.ಮು: ೨೦೦೭; ಪು: ೧೬೮; ಡಿಮ್ಮೆ ೧/೮

ಹೆಸರೇ ಹೆಳುವಂತೆ ಇದು ಎರಡು ಖಂಡಕಾವ್ಯಗಳ ಗುಚ್ಛ "ಮೈಲಾರ ಮಾಳಮ್ಮ ಕಾವ್ಯದಲ್ಲಿ ಮೈಲಾರಲಿಂಗನ ಕತೆಯ ಉತ್ತರಾರ್ಥವನ್ನು ಮಾತ್ರ ಕಾಣುತ್ತೇವೆ..... ಮೈಲಾರಲಿಂಗನು ಗೊರವಯ್ಯನಾಗಿ ಬಂದು ಹೆಗ್ಗಡದೇವನಕೋಟೆಯಲ್ಲಿದ್ದ ಕುರುಬರ ಮಾಳಮ್ಮನನ್ನು ಲಗ್ನವಾದ ಕಥೆ" ಕರಪಾಲ ಮೇಳದವರು ಹಾಡುವ 'ನೀಲಕಂಠ ರೂಪಾವತಿ' ಕಥನಕಾವ್ಯವು 'ನೀಲವೇಣಿ' ಕಥೆಯ ಸ್ವರೂಪವನ್ನು ಹೋಲುತ್ತದೆ" ಎಂಬುದಾಗಿಯೂ ಹೇಳಿದ್ದಾರೆ. ವಿವರವಾದ ಪ್ರಸ್ತಾವನೆ, ಅರ್ಥಕೋಶ ಇವೆ.

೫೩೭. ಗೊರವರ ಸಂಸ್ಕೃತಿ

ಲೇ: ಚಕ್ಕೆರೆ ಶಿವಶಂಕರ್; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗರಸ್ತೆ, ಬೆಂಗಳೂರು–೫೬೦ ೦೦೨; ಮೊ.ಮು.೧೯೯೩; ಪುಟ ೪೮+೨೫೬=೩೦೪; ಕ್ರೌನ್ ೧/೮

ಏಳು ಅಧ್ಯಾಯಗಳಿವೆ: ೧.ಹಿನ್ನೆಲೆ ೨.ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ ೩.ಭಾಷೆ–ಸಾಹಿತ್ಯ ೪.ಆಚರಣೆ ಮತ್ತು ಕಲೆ ೫.ಪ್ರದರ್ಶನಾತ್ಮಕ ಕಲೆಗಳು ೬.ಕ್ರೀಡೆಗಳು ೭.ಸಾಮಾಜಿಕ ಪರಿವರ್ತನೆಯ ಹಿನ್ನೆಲೆಯಲ್ಲಿ. ಅನುಬಂಧದಲ್ಲಿ ಕಾವ್ಯಕಥೆಗಳು, ಕಾವ್ಯ, ಲೌಕಿಕ ಕಥನ ಕಾವ್ಯಗಳು, ತಮಾಷೆ ಕಥೆಗಳು ಇವೆ. ಬರಗೂರು ರಾಮಚಂದ್ರಪ್ಪ ಅವರ ಸಂಸ್ಕೃತಿ–ಉಪಸಂಸ್ಕೃತಿ ಎಂಬ ಪ್ರಸ್ತಾವನೆ ಇದೆ.

೫೩೮. ಗೊರೂರು ರಾಮಸ್ವಾಮಿ ಅಯ್ಯಂಗಾರ್

ಲೇ: ಸಿ.ಜಿ.ವೆಂಕಟಯ್ಯ; ಪ್ರ: ಕರ್ನಾಟಕ ಜಾನಪದ ಪರಿಷತ್ತು,೧,ಜಲದರ್ಶಿನಿ ಬಡಾವಣೆ,ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ನ್ಯೂ ಬಿ.ಇ.ಎಲ್.ರಸ್ತೆ, ಬೆಂಗಳೂರು–೫೬೦ ೦೫೪; ಮೊ.ಮು.೨೦೦೮; ಪುಟ ೩೨; ಕ್ರೌನ್ ೧/೮

ವ್ಯಕ್ತಿ ಪರಿಚಯ ಎಂಬ ಅಡಿಬರಹ ಇದೆ. ಜಿ. ನಾರಾಯಣ ಅವರ ಅಧ್ಯಕ್ಷರ ಮಾತು ಎಂಬ ಮುನ್ನುಡಿ ಇದೆ.

೫೩೯. ಗೊಲ್ಲಕಡಗ

ಲೇ: ಮೀರಾಸಾಬಿಹಳ್ಳಿ ಶಿವಣ್ಣ; ಪ್ರ: ಸಿ.ವಿ.ಜಿ. ಪಬ್ಲಿಕೇಷನ್ಸ್, ೭೦, ೨ನೇ ಮುಖ್ಯರಸ್ತೆ, ಜಬ್ಬರ್ ಬ್ಲಾಕ್, ವೈಯಾಲಿಕಾವಲ್, ಬೆಂಗಳೂರು–೫೬೦ ೦೦೩; ಮೊ.ಮು.೧೯೯೯; ಪುಟ ೧೬+೧೫೨=೧೬೮; ಡಿಮ್ಮೈ ೧/೮

ಚಿತ್ರದುರ್ಗ ಸೀಮೆಯ ಬುಡಕಟ್ಟು ಜನಾಂಗ ಕುರಿತ ಜಾನಪದೀಯ ಲೇಖನಗಳು ಎಂಬ ಅಡಿಬರಹ ಇದೆ. ೨೦ ಲೇಖನಗಳಿವೆ: ೧.ಕಾಡುಗೊಲ್ಲರ ಜಾನಪದ ೨.ಎತ್ತಪ್ಪನ ಸಂಪ್ರದಾಯ ೩.ಜುಂಜಪ್ಪನ ಕಾವ್ಯ ೪.ಕಾಡುಗೊಲ್ಲರ ಶವಸಂಸ್ಕಾರಗಳು ೫.ಢಗಮು–ಒಂದು ರೋಚಕ ಜನಪದ ಕಾವ್ಯ ೬.ಕಾಡುಗೊಲ್ಲರ ಎರಡು ವಿಶಿಷ್ಟ ಸಂಪ್ರದಾಯಗಳು ೭.ಊದೊ ಗಣೆ ೮.ಕಾಡುಗೊಲ್ಲರ ದೀವಳಿಗೆ ೯.ನಾಯಕ ಜನಾಂಗ–ಒಂದು ನೋಟ ೧೦.ಚಳಕೇರಮ್ಮ – ಒಂದು ಅವಲೋಕನ ೧೧.ಉಚ್ಚಂಗಮ್ಮ ೧೨.ಪಾಳ್ಳೇಗಾರ ವೇಷ ೧೩.ಒಕ್ಕಲಿಗರು – ಒಂದು ಪಕ್ಷಿನೋಟ ೧೪.ಷಟ್‌ಸ್ಥಲ ಭಂಗಿಯ ಅಪೂರ್ವ ಶಿವಲಿಂಗ ೧೫.ಬಯಲು ನಾಟಕಗಳ ದೊಂಬಿದಾಸರು ೧೬.ಉಪ್ಪಾರ ೧೭.ವಿಶಿಷ್ಟ ಜನಪದ ಹರಕೆ – ಚಪ್ಪಲಿ ಸೇವೆ ೧೮.ಮಾಯವಾಗುತ್ತಿರುವ ಕರ ಪಲ್ಲವಿ ೧೯.ಉಟ್ಲುಮರ ೨೦.ಕರ್ನಾಟಕದಲ್ಲಿ ಸಂಕ್ರಾಂತಿ.

೫೪೦. ಗೊಳಸಂಗಿ ಗ್ರಾಮ: ಒಂದು ಸಾಂಸ್ಕೃತಿಕ ಅಧ್ಯಯನ

ಲೇ: ಅರ್ಜುನ ಯ.ಗೊಳಸಂಗಿ; ಪ್ರ: ಮಲ್ಲಿಕಾರ್ಜುನ ಪ್ರಕಾಶನ, ಗೊಳಸಂಗಿ; ಮೊ.ಮು: ೧೯೯೫; ಪು: ೧೦+೧೫೨=೧೬೨ ಡಿಮ್ಮೈ೧/೮

ಪಿಎಚ್.ಡಿ. ಮಹಾಪ್ರಬಂಧ. ನಾಲ್ಕು ಅಧ್ಯಾಯಗಳಿವೆ: ೧.ಗೊಳಸಂಗಿಯ ಪೂರ್ವೇತಿಹಾಸ ೨.ಜನಪದ ವರ್ಗಗಳ ಸಾಂಸ್ಕೃತಿಕ ಬದುಕು ೩.ಜನಪದ ದೇವತೆಗಳು ಹಾಗೂ ಜಾತ್ರೆ–ಉತ್ಸವ–ಕಲೆಗಳು ೪.ಜನಪದ ಹಬ್ಬ–ಹರಿದಿನ, ಆಚರಣೆ ಹಾಗೂ ಆಟಗಳು. ಉಪಸಂಹಾರ. ಅನುಬಂಧದಲ್ಲಿ ಅರ್ಜುನ ಯ. ಗೊಳಸಂಗಿ, ಕಾ.ಹು.ಬಿಜಾಪುರ, ಅವರುಗಳು ಸಂಗ್ರಹಿಸಿರುವ ಹಾಡುಗಳಿವೆ. ಕೆಲವು ಫೋಟೋಗಳಿವೆ.

೫೪೧. ಗೊಂಬೇಗೌಡರ ರಾಮನಗೌಡರು

ಲೇ: ಚಂದ್ರಪ್ಪ ಸೊಬಟಿ; ಪ್ರ: ವಿಸ್ತರಣೆ ಹಾಗೂ ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ–೫೮೧೧೯೭, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ; ಮೊ.ಮು: ೨೦೧೩; ಪು: ೧೨+೮೬+೮=೧೦೬; ಡಿಮ್ಮೈ ೧/೪

ಕಲಾವಿದರೊಬ್ಬರನ್ನು ಪರಿಚಯಿಸಿಕೊಡುವ ಗ್ರಂಥ. ನಾಲ್ಕು ಅಧ್ಯಾಯಗಳಿವೆ: ೧.ಪ್ರಸ್ತಾವನೆ ೨.ಆತ್ಮಕಥನದ ಅನಾವರಣ ೩.ಮಾತಿಗಾಗಿ ಮತ್ತೊಂದಿಷ್ಟು ಮಾತುಕತೆ ೪.ಗೊಂಬೆಯಾಟದ ತಾತ್ವಿಕ ವಿಶ್ಲೇಷಣೆ. ಅನುಬಂಧದಲ್ಲಿ, ಸಾಂಸ್ಕೃತಿಕ ಪದಕೋಶ, ಆಯ್ದ ಪತ್ರಿಕಾ ಪ್ರಕಟಣೆಗಳು, ವ್ಯಕ್ತಿವಿವರ, ಛಯಾಚಿತ್ರಗಳು, ಪ್ರಶಸ್ತಿ ಪತ್ರಗಳು, ಇವೆ. ದೇಶ ಸುತ್ತು ಕೋಶ ಓದು ಎಂಬ ಅಂಬಳಿಕೆ ಹಿರಿಯಣ್ಣ ಅವರ ಮುನ್ನುಡಿ, ಸ.ಚಿ. ರಮೇಶ ಅವರ ನಿರ್ದೇಶಕರ ಮತು, ಇವೆ.

೫೪೨. ಗೋಕಾವಿ ನಾಡಿನ ಹೊನ್ನಬೆಳೆ

ಸಂ: ಸಿ.ಕೆ. ನಾವಲಗಿ, ಚಂದ್ರಶೇಖರ ಅಕ್ಕಿ; ಪ್ರ: ಕನಕ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು(ರಿ); ಮೊ.ಮು.೨೦೦೪; ಪುಟ ೭+೨೩೪=೨೪೧; ಡಿಮ್ಮೈ ೧/೮

ಈ ಗ್ರಂಥದಲ್ಲಿ ಹನ್ನೊಂದು ಲೇಖನಗಳಿದ್ದು ಜಾನಪದಕ್ಕೆ ಸಂಬಂಧಿಸಿದ ಎರಡು ಲೇಖನಗಳಿವೆ: ೧.ಜಾನಪದದ ಚೆಲುವ ಚಂದ್ರಶೇಖರ ಕಂಬಾರ–ವೀರೇಶ ಬಡಿಗೇರ ೨.ಶ್ರೀಕೃಷ್ಣ ಪಾರಿಜಾತದ ಕುಲಗೋಡ ತಮ್ಮಣ್ಣ–ಶ್ರೀರಾಮ ಇಟ್ಟಣ್ಣವರ.

೫೪೩. ಗೋವಿನ ಕತೆ ಹಾಡು

ಲೇ: ಟಿ.ಕೇಶವ ಭಟ್ಟ; ಪ್ರ: ಚಿರ ಸಾಹಿತ್ಯ ಪ್ರಕಾಶನ,೭೫೪,೧೫ನೇಯ ಮುಖ್ಯ ರಸ್ತೆ, ಬನಶಂಕರಿ ಎರಡನೆಯ ಹಂತ, ಬೆಂಗಳೂರು–೫೬೦೦೧೧; ಮೊ.ಮು: ೧೯೭೧, ಎ.ಮು: ೧೯೭೫; ಪು: ೮+೫೬=೬೪; ಕ್ರೌನ್ ೧/೮

ಸಂಪಾದಿತ ಪರಿಷ್ಕತ-ವಿಸ್ಮತ ಪ್ರತಿ ಎಂಬ ಅಡಿಬರಹ ಇದೆ. ಈ ಹಾಡಿನ ಗ್ರಂಥ ಸಂಸ್ಕರಣಕ್ಕಾಗಿ ಮೂರು ಪ್ರತಿಗಳನ್ನು ಬಳಸಲಾಗಿದೆ ಎಂಬುದಾಗಿ ಮುನ್ನುಡಿಯಲ್ಲಿ ಹೇಳಲಾಗಿದೆ. ಕ ಎಂಬುದು ೧೯೧೪ರಲ್ಲಿ ಬರೆಯಲ್ಪಟ್ಟಿರುವ ಕಾಗದದ ಪ್ರತಿ, ಗ ಎಂಬುದು ಡಿ.ಎಲ್. ನರಸಿಂಹಾಚಾರ್ಯರು ಸಂಪಾದಿಸಿರುವ ಪ್ರತಿ. ಡಿ.ಎಲ್.ಎನ್.ಅವರು ನಾಲ್ಕು ಪ್ರತಿಗಳ ಸಹಾಯದಿಂದ ಸಂಪಾದಿಸಿದ್ದ ವಿವರಗಳೂ ಈ ಕೃತಿಯಲ್ಲಿ ಇವೆ. ಚ ಎಂಬುದು ೧೨೨ ಪದ್ಯಗಳನ್ನುಳ್ಳ ಹಳೆಯ ಕಾಲದ ದೊರಗುಕಾಗದದ ಪ್ರತಿ ಪ್ರಸ್ತುತ ಕೃತಿಯಲ್ಲಿ ನಾಲ್ಕು ಸಾಲಿನ ೨೩೭ ಪದ್ಯಗಳಿವೆ.

೫೪೪. ಗೋವಿನ ಕಥಾಸಾಹಿತ್ಯ

ಸಂ: ಟಿ. ಕೇಶವಭಟ್ಟ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮; ಮೊ.ಮು.೧೯೯೮; ಪುಟ ೧೨+೨೩೨=೨೪೪; ಡೆಮ್ಮೈ ೧/೮

ಗೋವಿನ ಕಥೆಯನ್ನು ಒಳಗೊಂಡಿರುವ ಹನ್ನೊಂದು ಕಾವ್ಯಗಳನ್ನು ಈ ಗ್ರಂಥ ಒಳಗೊಂಡಿದೆ. **ಕನ್ನಡದಲ್ಲಿ:** ೧.ಗೋವಿನ ಕತೆ ಹಾಡು ೨.ಗೋವಿಜಯ ೩.ಯಕ್ಷಗಾನ ಗೋವಿನ ಕಥೆ ೪.ಆಕಳ ಹಾಡು ೫.ಕವುಲಿ ಹಾಡು ೬.ಕೌಲೆ ಹಾಡು ೭.ಕಾಮಧೇನು ಗೋವಿನ ಕಥೆ ೮.ಗೋವಿನ ಹಾಡು. **ಸಂಸ್ಕೃತದಲ್ಲಿ:** ೯.ಬಹುಲೋಪಾಖ್ಯಾನ ೧೦.ನಂದೋಪಾಖ್ಯಾನ ೧೧.ಗೋ ಸಾವಿತ್ರೀಸ್ತೋತ್ರಂ. ಅನುಬಂಧದಲ್ಲಿ, ಗೋವಿನ ಕಥೆಯ ಕೃತಿಗಳು ಮತ್ತು ಲೇಖನಗಳನ್ನು ಪಟ್ಟಿ ಮಾಡಲಾಗಿದೆ.

೫೪೫. ಗೋವಿನ ಕಥೆ ಹಾಡು

ಲೇ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಐದನೆಯ ಅಚ್ಚು: ೧೯೫೦; ಪುಟ ೨೨; ಕ್ರೌನ್ ೧/೧೬

ಗೋಸಾವಿತ್ರೀಸ್ತೋತ್ರ ಸಹಿತ ಎಂಬ ಅಡಿಬರಹ ಇದೆ. ಇದು ಪ್ರತ್ಯೇಕ ಹಾಡು. ಗೋವಿನ ಹಾಡು ಮುಗಿದ ಮೇಲೆ ಈ ಸ್ತೋತ್ರವನ್ನು ನೀಡಲಾಗಿದೆ.

೫೪೬. ಗೋವಿನ ಹಾಡು

ಸಂ: ನಮೂದು ಇಲ್ಲ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮; ಮೊ.ಮು: ೧೯೭೨; ಪ್ರ: ೬+೨೦=೨೬; ಕ್ರೌನ್ ೧/೮.

ಇದೊಂದು ಕಥನಕಾವ್ಯ. ದೇಶಹಳ್ಳಿ ಜಿ. ನಾರಾಯಣ ಅವರ ಪ್ರಸ್ತಾವನೆ, ರಂ. ಶ್ರೀ. ಮುಗಳಿ ಅವರ ಮುನ್ನುಡಿ, ಇವೆ. ಇದರಲ್ಲಿ ೧೧೪ ಪದ್ಯಗಳಿವೆ.

೫೪೭. ಗೋಸಾಯಿ ಮತ್ತು ಇತರ ಜನಪದ ಕಥೆಗಳು

ಸಂ: ಸಣ್ಣನಂಜೇಗೌಡ; ಪ್ರ: ಕಾವ್ಯಕಲಾ ಪ್ರಕಾಶನ, ೧೧೨, ಪೋಲೀಸ್ ಕ್ವಾರ್ಟಸ್, ಮಾಗಡಿ ರಸ್ತೆ, ಬೆಂಗಳೂರು–೫೬೦ ೦೨೩; ಮೊ.ಮು: ೧೯೮೯, ಎ.ಮು: ೧೯೯೦; ಪು: ೩೨; ಕ್ರೌನ್ ೧/೮

ಮೂರು ಕಥೆಗಳಿವೆ: ೧.ಗೋಸಾಯಿ ೨.ಚಿನ್ನದ ತುಪ್ಪಳದ ಕುರಿಮರಿ ೩.ಗುಡುಗನ್ನು ಬಂಧಿಸಿದ ಸುಕಾರು.

೫೪೮. ಗೌಡ ಜನಾಂಗ: ಇತಿಹಾಸ ಮತ್ತು ಸಂಸ್ಕೃತಿ

ಸಂ: ಕೆ. ಚಿನ್ನಪ್ಪಗೌಡ; ಪ್ರ: ಬೆಳ್ಳಿಹಬ್ಬ ಆಚರಣಾ ಸಮಿತಿ, ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘ, ಮಂಗಳೂರು; ಮೊ.ಮು.೨೦೦೩; ಪುಟ ೩೩೦; ಡೆಮ್ಮಿ ೧/೮

ವಿವಿಧ ಲೇಖಕರ ಹದಿನಾರು ಲೇಖನಗಳ ಸಂಕಲನ. ಮೂರು ಭಾಗಗಳಿವೆ. **ಭಾಗ ಒಂದು: ಅಭಿವಂದನ–ಅಭಿನಂದನ:** ೧.ಆದಿ ಚುಂಚನಗಿರಿಯ ಸಾಂಸ್ಕೃತಿಕ ಅವಲೋಕನ–ಕೆ. ರಾಜೇಶ್ವರಿಗೌಡ ೨.ಗೌಡ ಜನಾಂಗದ ಮೇರುವ್ಯಕ್ತಿ–ಶ್ರೀ ಕುರುಂಜಿ ವೆಂಕಟ್ರಮಣಗೌಡ–ಡಿ.ಜವರೇಗೌಡ ೩.ವಿದ್ಯಾನಗರ ಕುರುಂಜಿಬಾಗ್–ಶಿಕ್ಷಣ ಹರಿಕಾರ ಶ್ರೀ ಕುರುಂಜಿಯವರ ವ್ಯಕ್ತಿತ್ವ ದರ್ಶನ–ಪೂವಪ್ಪ ಕಣಿಯೂರು, ಕೆ.ವಿ. ದಾಮೋದರಗೌಡ. **ಭಾಗ ಎರಡು: ಗೌಡ ಜನಾಂಗದ ಹಿನ್ನೆಲೆ, ಇತಿಹಾಸ, ಅನನ್ಯತೆ:** ೪.ಗೌಡರ ಏಳು ಬೀಳು–ಚಾರಿತ್ರಿಕ ಅವಲೋಕನ– ಎನ್.ಎಸ್. ದೇವಿಪ್ರಸಾದ್ ೫.ಸುಳ್ಯ ಪರಿಸರದ ಗೌಡರು–ಪುರುಷೋತ್ತಮ ಬಿಳಿಮಲೆ ೬.ನಾಮಧಾರಿ ಒಕ್ಕಲಿಗರು– ಅಂಬಳಿಕೆ ಹಿರಿಯಣ್ಣ ೭.ಮಲೆನಾಡು ಶೈವ ಒಕ್ಕಲಿಗರು ಅಥವಾ ವಿಭೂತಿ ಗೌಡರು– ವೈ.ಸಿ. ಭಾನುಮತಿ ೮.ಗಂಗಡಿಕಾರ ಒಕ್ಕಲಿಗರು–ಒಂದು ಸಮೀಕ್ಷೆ–ನಲ್ಲೂರು ಪ್ರಸಾದ್ ೯.ಕನ್ನಡ ನಾಡಿನ ಒಕ್ಕಲಿಗರು–ಹ.ಕ. ರಾಜೇಗೌಡ ೧೦.ಶಾಸನೋಕ್ತ ಒಕ್ಕಲಿಗ ವೀರರು –ಡಿ.ಕೆ.ರಾಜೇಂದ್ರ. **ಭಾಗ ಮೂರು: ಗೌಡ ಜನಾಂಗ–ಕೃಷಿ, ಸಾಹಿತ್ಯ, ಸಂಸ್ಕೃತಿ:** ೧೧.ಕೃಷಿ ಜಗತ್ತಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಗೌಡರು–ಎ.ಕೆ. ಹಿಮಕರ ೧೨.ದಕ್ಷಿಣ ಕನ್ನಡ ಜಿಲ್ಲೆಯ ಗೌಡರ ಐನ್ ಮನೆಗಳು–ಪೂವಪ್ಪ ಕಣಿಯೂರು ೧೩.ಕನ್ನಡದ ಕಟ್ಟಾಳು ಕೊಳಂಬೆ ಪುಟ್ಟಣ್ಣಗೌಡ–ನೂರರ ನೆನಪು–ಎಂ.ಶಿವಣ್ಣ ನೆಲಮನೆ ೧೪.ದಕ್ಷಿಣ ಕನ್ನಡ ಜಿಲ್ಲೆಯ ಗೌಡ ಜನಾಂಗದ ಸಾಹಿತಿಗಳು – ಸಂಜೀವ ಕುದ್ಪಾಜೆ ೧೫.ಗೌಡರು–ಜನಾಂಗ ಮತ್ತು ಕುಣಿತ–ಯದುಪತಿ ೧೬.ಜನಪದ ಕಥೆಗಳಲ್ಲಿ ಗೌಡ ಜನಾಂಗದ ಸಾಂಸ್ಕೃತಿಕ ಅನನ್ಯತೆ–ವಿಶ್ವನಾಥ ಬದಿಕಾನ.

೫೪೯. ಗೌಡ ಕನ್ನಡದ ಜನಪದ ಕತೆಗಳು

ಲೇ: ವಿಶ್ವನಾಥ ಬದಿಕಾನ; ಪ್ರ: ಮದಿಪು ಪ್ರಕಾಶನ, ಮಂಗಳಗಂಗೋತ್ರಿ–೫೭೪೧೯೯ (ದ.ಕ.); ಮೊ.ಮು: ೧೯೯೪; ಪು: ೧೬+೧೮೦=೧೯೬; ಡೆಮ್ಮಿ ೧/೮

ವರ್ಗ ಮತ್ತು ಆಶಯಸೂಚಿ ಎಂಬ ಅಡಿಬರಹ ಇದೆ. ಎಂ.ಫಿಲ್. ಪದವಿಗಾಗಿ ಸಿದ್ಧಪಡಿಸಿದ ಗ್ರಂಥ. ಆರು ಅಧ್ಯಾಯಗಳಿವೆ: ೧.ಪ್ರಸ್ತಾವನೆ ೨.ಗೌಡ ಜನಾಂಗದ ಪರಿಚಯ ೩.ಗೌಡ ಕನ್ನಡದ ಜನಪದ ಕಥೆಗಳ ಸ್ಥೂಲ ಸಮೀಕ್ಷೆ ೪.ಗೌಡ ಕನ್ನಡದ ಜನಪದ ಕಥೆಗಳ ಮಾರ್ಗಸೂಚಿ ೫.ಗೌಡ ಕನ್ನಡದ ಜನಪದ ಕಥೆಗಳ ಆಶಯ ಸೂಚಿ ೬.ಸಮಾರೋಪ. ಕೆ. ಚನ್ನಪ್ಪಗೌಡ ಅವರ ಮುನ್ನುಡಿ, ಪದಸೂಚಿ, ನಿರೂಪಕರ ವಿವರ, ಇವೆ.

೫೫೦. ಗೌರಕ್ಕನ ಮುಕ್ತಕಗಳು ಮತ್ತು ಮೈದುನ ರಾಮಣ್ಣ

ಲೇ: ಚೌಡೇಗೌಡ ಬೀಡನಹಳ್ಳಿ: ಪ್ರ: ಪ್ರಸಾರಾಂಗ,ಬೆಂಗಳೂರು ವಿಶ್ವವಿದ್ಯಾಲಯ,ಬೆಂಗಳೂರು; ಮೊ.ಮು.೧೯೭೮; ಪುಟ ೬+೪+೨೦+೧೦೨=೧೩೨; ಡಿಮ್ಮೈ ೧/೮

ಒಂದು ಕಥನ ಕಾವ್ಯ ಹಾಗೂ ಬಿಡಿಗೀತೆಗಳ ಸಂಕಲನ. ಮೈದುನ ರಾಮಣ್ಣ ಕಾವ್ಯದ ಒಳ ಶೀರ್ಷಿಕೆಗಳು: ಬಂಜೆ ಹೊಟ್ಟೆಗೆ ಬರೆಯಿರಿ, ನ್ಯಾಯದ ಸಭೆಯಲ್ಲಿ, ಒಡಹುಟ್ಟು ನಿನಗೆ ಮೊದಲಿಲ್ಲ, ಅಕ್ಕ ನನಗಿರುವಳೇ ಹೇಳಮ್ಮ, ಕೈಲಾಸಕ್ಕೆ ದಾರಿ ಹೇಳಮ್ಮ, ಅಕ್ಕ ಗೌರಮ್ಮನ ಮಠವೆಲ್ಲಿ? ಒಪ್ಪಿತು ಜಂಗಮರ ಸಭೆಯಲ್ಲಿ, ಅಕ್ಕಮ್ಮನ ಹಬ್ಬಕ್ಕೆ ಕಳಗಯ್ಯ, ಸಿರಿಗೌರಿ ತುಪ್ಪ ಎರೆದಳು. ಗೌರಕ್ಕನ ಮುಕ್ತಕಗಳು ಎಂಬ ಭಾಗದ ಒಳ ಶೀರ್ಷಿಕೆಗಳು: ಗೌರಕ್ಕನ ಮುಕ್ತಕಗಳು ಹಾಸ್ಯದ ಹನಿಗಳು, ಗೌರಾಯಿ ಶಿವರಾಯ, ನೀ ಮುತ್ತು ಸಾವಿರಕ್ಕೆ ಬೆಲೆಯಾಗು, ರಾಣಿ– ನಿನ್ನ ಮಕ್ಕಳ ಹೆಸರ್ಹೇಳೆ, ಯಾಕೆ ಕಣ್ಣೀರು ಎದೆಮೇಲೆ, ನಿನಗಿಬ್ಬರೇನೇ ಪುರುಷರು, ನಾ ಈಚಲ ಹಣ್ತೆಂದು ವ್ರತಗೆಟ್ಟೆ, ಗಂಡನ ಮನೆಯ ಗಂಡುಗೇರೆ ಮುಳ್ಳು, ಛಿದ್ರವಾಯಿತು ಧರೆಯಲ್ಲಿ, ಗಂಡುಳ್ಳವಳ ಮನೆಗ್ಹೋಗಿ, ಹೋಗು ನಿನ್ನವರು ಬೈತಾರೆ, ನಿನ್ನ ಚಂದಕ್ಕೆ ಮುಂಜರಗು ಹಿಡಿದವನೆ, ಅಕ್ಕನ ಮಗಳೇ ಬಿಡು ಸೆರಗು, ಎಲ್ಲಿ ಕಲಿತ್ಯಪ್ಪಾ ಹೊಸ ಮಾತ. ಒಡಹುಟ್ಟು ಎಂಬ ಇನ್ನೊಂದು ಭಾಗದಲ್ಲಿ ಇರುವ ಶೀರ್ಷಿಕೆಗಳು: ಮರಿದುಂಬಿ ಕರುವ ಬಿಡು ಬಾರೋ, ನನ್ನ ಕರೆಯೋಕೆ ನನ್ನವ್ವೆ ಮಗ ಬಂದ, ಹೆಣ್ಣು ಕೊಡುವೆನು ಬರಹೇಳು, ಅಕ್ಕನ ಮಗಳ ತರಬೇಕು, ರಾಶ್ಯ ಅಳೆಯೋದು ಬೆಳಗಾದೋ, ನೀ ಬೇಗೇಳು ನಮ್ಮ ಕಳಸಕೆ ನೀರಿಲ್ಲದ ಕೆರೆಗೆ ಕರು ಹೋಗಿ......, ಕಡೆಯ ಕಂಬದ ಗೌಳಿ, ನೀ ಬದ್ದರೆ ಸಾಕು ಸುಖದಿಂದ ಬಡಹುಟ್ಟು ಎಲ್ಲಿ ಪಡೆದಿಯೆ? ಅಣ್ಣಯ್ಯ, ಹೆಣ್ಣು ಕೊಡಣ್ಣ ಮಗನಿಗೆ, ಬಾಲೆಯರು ಬಸಿರು ಬಯಸ್ಯಾರು,ರಾಜುಣವ ಚೆಲ್ಲುತ್ತ... ಪ್ರಸ್ತಾವನೆ, ಅರ್ಥಕೋಶ, ಇವೆ

೫೫೧. ಗೌರಮ್ಮನ ಪದಗಳು

ಸಂ: ಕ.ಮ.ಶಿ. ಚಂದ್ರಶೇಖರಯ್ಯ; ಪ್ರ: ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು; ಮೊ.ಮು.೧೯೫೪, ಎ.ಮು. ೧೯೭೬; ಪುಟ ೨೪; ಕ್ರೌನ್ ೧/೮

ವಿಷಯವಾರು ವಿಂಗಡಿಸಿದ ಕೆಲವು ಹಾಡುಗಳಿವೆ.

೫೫೨. ಗ್ರಂಥಸ್ಥ ಗಾದೆಗಳ ಶಬ್ದಕೋಶ

ಸಂ/ಪ್ರ: ಎಚ್.ಎಸ್. ಅಚ್ಚಪ್ಪ, ಮೈಸೂರು; ಮೊ.ಮು: ೧೯೬೯; ಪು: ೬೦; ಡಿಮ್ಮೈ ೧/೮

೯ನೆಯ ಶತಮಾನದಿಂದ ೧೯ನೆಯ ಶತಮಾನದವರೆಗಿನ ೧೩೦ ಕವಿಗಳ ಗ್ರಂಥಗಳಿಂದ ಆಯ್ದ ಗಾದೆಗಳ ಬೃಹತ್ ಸಂಕಲನ. ಪ್ರಾರಂಭದಲ್ಲಿ ಎಸ್.ಶ್ರೀಕಂಠಶಾಸ್ತ್ರೀ, ಅ.ವೆಂಕಟಸುಬ್ಬಯ್ಯ, ಎಂ. ಚಿದಾನಂದಮೂರ್ತಿ, ನಾ.ವಾ. ಪದ್ಮನಾಭಾಚಾರ್ಯ, ಎಸ್.ವಿ. ಪರಮೇಶ್ವರ ಭಟ್ಟ, ಜಿ. ವೆಂಕಟಸುಬ್ಬಯ್ಯ, ತೀ.ನಂ. ಶ್ರೀಕಂಠಯ್ಯ, ಡಿ.ಎಲ್.ನರಸಿಂಹಾಚಾರ್, ತ.ಸು.ಶಾಮರಾಯ, ಜಿ.ವರದರಾಜರಾವ್, ದೇ.ಜವರೇಗೌಡ, ಕೆ.ನರಸಿಂಹಮೂರ್ತಿ ಅವರುಗಳ ಅಭಿಪ್ರಾಯಗಳು, ಜಿ.ಪಿ. ರಾಜರತ್ನಂ ಅವರ 'ಎರಡು ಮಾತು' ಇವೆ. ಕೊನೆಯಲ್ಲಿ, ಪರಿಶಿಷ್ಟಗಳು, ಆಧಾರ ಗ್ರಂಥಗಳು, ಅನುಬಂಧಗಳು, ಶಬ್ದಕೋಶ ಇವೆ.

೫೫೩. ಗ್ರಂಥೋಕ್ತ ಮಾದೇಶ್ವರ

ಲೇ: ಎಸ್.ವಿದ್ಯಾಶಂಕರ; ಪ್ರ: ಶ್ರೀ ಮಾದೇಶ್ವರ ಸ್ವಾಮಿಯ ಇತಿಹಾಸ ಸಂಶೋಧನಾ ಸಂಸ್ಥೆ ಮಧುವನಹಳ್ಳಿ, ಕೊಳ್ಳೇಗಾಲ ತಾಲೂಕು: ಮೊ.ಮು.: ೧೯೭೯; ಪು: ೭+೮೩=೯೦; ಕ್ರೌನ್

ಆರು ಗ್ರಂಥಗಳ ಆಧಾರದಲ್ಲಿ ರೂಪುಗೊಂಡಿರುವ ಈ ಗ್ರಂಥವು ೧೨ ಅಧ್ಯಾಯಗಳನ್ನು ಒಳಗೊಂಡಿದೆ: ೧.ಅವತಾರ ಕಾರಣ ೨.ಪೂರ್ವ ಜನ್ಮ ೩.ಪೂರ್ವಜರು ೪.ಮಾನವನವತಾರ ೫.ಗುರುಗಳು ೬.ಸಾಧಕನಾಗಿ ತೋರಿದ ಮಹಿಮೆ ೭.ನಿರಂಜನ ಜಗದ್ಗುರು ಪಟ್ಟ ೮.ದುಷ್ಟ ನಿಗ್ರಹ: ಗರ್ವಿತಳಾದ ಬೇವಿನಕಾಳಿಯ ನಿಗ್ರಹ, ದುಷ್ಟ ಶ್ರಮಣನ ನಿಗ್ರಹ ೯.ಶಿಷ್ಯ ರಕ್ಷಣೆ: ಪರಮ ಭಕ್ತೆ ಸಂಕಮ್ಮನಿಗೆ ಅನುಗ್ರಹ ದೇವಕಿಯ ರಕ್ಷಣೆ ಶಂಕರಪ್ರಿಯನ ಉದ್ಧಾರ ೧೦.ಧರ್ಮ ಪ್ರಚಾರ ೧೧.ಲಿಂಗರೂಪು ೧೨.ವ್ಯಕ್ತಿ ಚಿತ್ರಗಳು: ಮಾರಮ್ಮ, ಉಪ್ಪಿನಹಳ್ಳಿ ಬಸಪ್ಪ, ಹನುಮಯ್ಯ, ರಂಗನಾಥ, ಕಾರಯ್ಯ ಮತ್ತು ಬಿಲ್ಲಯ್ಯ, ದುಂಡಮ್ಮ, ಶೇಷಣ್ಣೊಡೆಯ, ಹೊನ್ನಿದೇವ, ಬಂಡೆಹಳ್ಳಿಯ ಆಚಾರಿ, ಆಲಂಬಾಡಿ ಜುಂಜೇಗೌಡ.

೫೫೪. ಗ್ರಾಮ ಕಲ್ಯಾಣ ಯಕ್ಷಗಾನ ಪ್ರಸಂಗ

ಲೇ: ಯು.ವಿ.ನಾಯಕ್, ಪ್ರ: ಶ್ರೀದತ್ತಾತ್ರೇಯ ಯಕ್ಷಗಾನ ಸಂಘ, ನಿಡಿಗಲ್ ಅಂಚೆ, ಮುಂಡಾಜೆ; ಮೊ.ಮು: ೧೯೬೩; ಪು: ೮+೩೪=೪೨; ಕ್ರೌನ್ ೧/೮

ರಾಗ ತಾಳ ಛಂದೋ ಸಹಿತದ ಯಕ್ಷಗಾನ ಕಾವ್ಯ. ಪಾತ್ರ ಪರಿಚಯ, ಕಥಾಸಾರ,ಇವೆ.ಜಿ.ಎನ್.ಭಿಡೆ ಅವರ ಮುನ್ನುಡಿ ಇದೆ.

೫೫೫. ಗ್ರಾಮಜ್ಯೋತಿ

ಸಂ: ಗೊ.ರು.ಚನ್ನಬಸಪ್ಪ; ಪ್ರ: ಕೆ.ಆರ್.ಲಿಂಗಪ್ಪ ಅಭಿನಂದನ ಗ್ರಂಥ ಸಮಿತಿ, ಬೆಂಗಳೂರು-೬೯; ಮೊ.ಮು.೧೯೭೯; ಪುಟ ೧೬+೫೩೬=೫೫೨; ಡಿಮ್ಮೈ ೧/೮

ಕೆ.ಆರ್. ಲಿಂಗಪ್ಪ ಅಭಿನಂದನ ಗ್ರಂಥ ಎಂಬ ಅಡಿಬರಹ ಇದೆ. ೪೭ ಲೇಖನಗಳ ಸಂಕಲನ: ೧.ಜಾನಪದ ಜ್ಯೋತಿ ಕೆ.ಆರ್.ಲಿಂಗಪ್ಪ – ಗೊ.ರು.ಚ ೨.ಗ್ರಾಮೀಣರ ಕಲಾಕೇಂದ್ರ ಗುಡಿ –ಎಂ.ಎಸ್. ಸುಂಕಾಪುರ ೩.ಉತ್ತರ ಕನ್ನಡ ಜಿಲ್ಲೆಯ ಒಂದು ದೇವಾಲಯ –ಎಂ.ಚಿದಾನಂದಮೂರ್ತಿ ೪.ಹಳ್ಳಿಯ ಮನೆಗಳ ನಿರ್ಮಾಣ – ರಂಗಾರೆಡ್ಡಿ ಕೋಡಿರಾಂಪುರ ೫.ಹಿಂದಿನ ಕಾಲದ ಶಾಲೆಗಳು –ಸಿಂಪಿ ಲಿಂಗಣ್ಣ ೬.ಉತ್ತರ ಕರ್ನಾಟಕದ ಒಕ್ಕಲಿಗರ ಊಟೋಪಚಾರಗಳು ೭.ಹಾಸನ ಜಿಲ್ಲೆಯ ಅಡುಗೆ ಮತ್ತು ಊಟೋಪಚಾರಗಳು–ಹಾ.ತಿ. ಕೃಷ್ಣೇಗೌಡ ೮.ಜನಪದ ಉಡುಗೆ–ತೊಡುಗೆಗಳು–ಹಿ.ಶಿ.ರಾಮಚಂದ್ರೇಗೌಡ ೯.ಸಂಪ್ರದಾಯ,ಶುಭದ ಸಂಕೇತ ರಂಗೋಲಿ–ಪುಷ್ಪಾವತಮ್ಮ ೧೦.ಹಚ್ಚೆ–ಒಂದು ವಿಶಿಷ್ಟ ಸಂಪ್ರದಾಯ–ಎಸ್.ಬಿ.ರವಿಕಲಾ ೧೧.ಗ್ರಾಮಾಂತರ ವ್ಯವಸಾಯ ಚಕ್ರ–ಹ.ಕ. ರಾಜೇಗೌಡ ೧೨.ಬೇಸಾಯದ ಉಪಕರಣಗಳು–ಎಚ್.ವಿ. ವೀರಭದ್ರಯ್ಯ ೧೩.ಗ್ರಾಮೀಣ ಸಮಾಜದಲ್ಲಿ ಆಯಗಾರರು –ಬಸವರಾಜ್ ನೆಲ್ಲಿಸರ ೧೪.ಜನಪದ ಅಳತೆ ಮತ್ತು ತೂಕ ಪದ್ಧತಿಗಳು–ಪಿ.ಕೆ. ರಾಜಶೇಖರ ೧೫.ಹಳ್ಳಿಗರ ಲೆಕ್ಕಾಚಾರ–ಒಂದು ವಿಶಿಷ್ಟ್ಯ ಪ್ರಪಂಚ –ಶ್ರೀಕಂಠಕೂಡಿಗೆ ೧೬.ಸರಳ ಸಹಜ ರಮ್ಯ–ಜನಪದ ಆಟಗಳು–ಎಚ್.ಜೆ.ಲಕ್ಕಪ್ಪಗೌಡ ೧೭.ಕೆಲವು ಗ್ರಾಮೀಣ ಆಟಗಳು–ಸುಶೀಲಾ ಸೊಂಡೂರ್ ೧೮.ಜನಪದ ವಿನೋದ ವೈವಿಧ್ಯ –ಸಣ್ಣ ನಂಜೇಗೌಡ ೧೯.ಹಳ್ಳಿಗರ ಬೇಟೆ ಕಲೆ–ಚಂದ್ರು ಕಾಳೇನಹಳ್ಳಿ ೨೦.ದೈವೀ ಆರಾಧನೆಯ ಕೆಲವು ಆಚರಣೆಗಳು–ಎಚ್.ಎಸ್.ಸಿದ್ಧಗಂಗಪ್ಪ ೨೧.ಹರಕೆ ಸೇವೆ ಸಂಪ್ರದಾಯ–ನಂ. ತಪಸ್ವೀಕುಮಾರ್ ೨೨.ಗ್ರಾಮಾಂತರದ ಕೆಲವು ಹಬ್ಬಗಳು–ಟಿ.ಎಸ್. ರಾಜಪ್ಪ ೨೩.ಆರತಿ ಹೊರುವ ಸಂಪ್ರದಾಯ–ಎಚ್.ಆರ್. ರಂಗಲಕ್ಷ್ಮಮ್ಮ ೨೪.ಮಾರಿ ಹಬ್ಬದ ಸ್ವರೂಪ–ಒಂದು ವಿಶ್ಲೇಷಣೆ– ಬೈರಮಂಗಲ ರಾಮೇಗೌಡ ೨೫.ಹಬ್ಬ–ಹರಿದಿನಗಳು–ಕೆಲವು ತಾತ್ವಿಕ ಅನಿಸಿಕೆಗಳು–ಶಿವರಾಮೇಗೌಡ ನಾಗವಾರ ೨೬.ಮೈಸೂರು ಮಾರಿಜಾತ್ರೆ–ಸುಶೀಲಾ ಸೊಂಡೂರ್ ೨೭.ಸ್ಥಳನಾಮಗಳ ವೈಶಿಷ್ಟ್ಯ–ಎಸ್.ಗಾಯತ್ರಿದೇವಿ ೨೮.ತುಳುನಾಡಿನ ಮೇರರು–ಬಿ.ಎ.ವಿವೇಕ ರೈ ೨೯.ಮಲೆನಾಡ ನಾಮಧಾರಿಗಳ ಸಂಸ್ಕಾರ ಸಂಪ್ರದಾಯಗಳು–ಅಂಬಳಿಕೆ ಹಿರಿಯಣ್ಣ ೩೦.ಹತ್ತಿಕಂಕಣದ ಕುರುಬರಲ್ಲಿ ಮದುವೆಯ ಆಚರಣೆ – ಎಸ್.ಜಿ. ಸಿದ್ಧರಾಮಯ್ಯ ೩೧.ಒಕ್ಕಲಿಗರ ಮದುವೆಯ ಒಂದು ಆಚರಣೆ–ನಾ. ಅಶ್ವತ್ಥಪ್ಪ ೩೨.ಹಳ್ಳಿಗರ ನಂಬಿಕೆಯ ಹಲವು ಶಾಸ್ತ್ರಗಳು – ನಗುವನಹಳ್ಳಿ ರತ್ನ ೩೩.ಬ್ರಾಹ್ಮಣರ ಕೆಲವು ಪದ್ಧತಿ ಹಾಗೂ ನಂಬಿಕೆಗಳು – ಮಲ್ಲಿಪಟ್ಟಣ ಸತ್ಯನಾರಾಯಣ ೩೪.ಭಿನ್ನ ಕಲ್ಪನೆಯ ಮಾಟ–ಮದ್ದುಗಳು–ಕೆ.ಮರುಳಸಿದ್ದಪ್ಪ ೩೫.ವಿರಳವಾಗುತ್ತಿರುವ ಸೂತ್ರದ ಗೊಂಬೆಯಾಟ–ಪಿ.ಆರ್. ತಿಪ್ಪೇಸ್ವಾಮಿ ೩೬.ಕಣ್ಮರೆಯಾಗುತ್ತಿರುವ ಕೀಲುಗೊಂಬೆಯಾಟ–ಜೀ.ಶಂ. ಪರಮಶಿವಯ್ಯ ೩೭.ಪ್ರಾಚೀನ ಕಲೆ–ತೊಗಲುಗೊಂಬೆ

ಆಟ–ಡಿ.ಕೆ.ರಾಜೇಂದ್ರ ೩೮.ರಂಜನೆಯ ಕಲೆ ದೊಂಬರಾಟ–ಎನ್.ಟಿ. ಮೇಣಸಗಿ ೩೯.ಉಪೇಕ್ಷಿಸಲಾಗದ ಜನಪದ ಪಶುವೈದ್ಯ– ತೀ.ನಂ. ಶಂಕರನಾರಾಯಣ ೪೦.ಹಾವು ಮತ್ತು ಹಾವಾಡಿಗ–ಶೇಖರ ಪೂಜಾರ ೪೧.ಕೋಲೆ ಬಸವನಾಟ–ಒಂದು ಅಧ್ಯಯನ –ಮಿಂಚನಗುರಿಕಿ ದಿವಾಕರ ೪೨.ರಾಜಮೋಡಿ–ರಣಮೋಡಿ–ಎಚ್.ಎಸ್. ಸಿದ್ಧಗಂಗಪ್ಪ ೪೩.ಈಗಲೂ ಇರುವ ಗಾಳಿ ಹಿಡಿಯುವ ಪದ್ಧತಿ–ಸಿ.ಕೆ. ಪರಶುರಾಮಯ್ಯ ೪೪.ಮಾಸ್ತಮ್ಮ–ಒಂದು ವಿವರಣೆ –ರಾಗೌ ೪೫.ಜಾನಪದ ವಾಕ್‌ಪ್ರಚಾರಗಳು– ಎಸ್.ಪಿ. ಪಾಟೀಲ ೪೬.ಜೀವಂತ ಚಿಲುಮೆ ಜನಪದ ಪಡೆನುಡಿಗಳು–ಜೆ.ಸಿ.ಶಿವಶಂಕರ್ ೪೭.ಒಂದು ಜಾನಪದ ಪ್ರಾರ್ಥನೆ–ದೇಜಗೌ.

೫೫೬. ಗ್ರಾಮ ದರ್ಶನ

ಮಂಡ್ಯ ಜಿಲ್ಲೆಯ ಕೆಲವು ಗ್ರಾಮಗಳ ಅಧ್ಯಯನ; ಸಂ: ಶಿವಳ್ಳಿ ಕೆಂಪೇಗೌಡ; ಪ್ರ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್.೧ ನೇ ತಿರವು,ಬಂದೀಗೌಡ ಬಡಾವಣೆ,ಮಂಡ್ಯ ೫೭೧೪೦೧; ಮೊ.ಮು: ೨೦೧೦; ಪು: ೮+೧೦೦=೧೦೮ ಡಿಮ್ಮೈ ೧/೮

ಹದಿನೈದು ಗ್ರಾಮಗಳ ಇತಿಹಾಸ ಬದುಕು ಸಂಸ್ಕೃತಿಗಳನ್ನು ತೆರದಿಡುವ ಕೃತಿ: ೧.ಮಾಣಿಕ್ಯನ ಹಳ್ಳಿ ೨.ಬಿದರಕೋಟೆ ೩.ಪುರ ೪.ವಳಗೆರೆಹಳ್ಳಿ ೫.ಮುದಿಗಂದೂರ ೬.ಆತಕೂರು ೭.ಕೌಡ್ಲೆ ೮.ತಡಗವಾಡಿ ೯.ಮಹದೇವಪುರ ೧೦.ವಂಡಿಯಾಂಡಹಳ್ಳಿ ೧೧.ದೊಡ್ಡ ಗರುಡನ ಹಳ್ಳಿ ೧೨.ಆನವಾಳು ೧೩.ಡಿಂಕ ೧೪.ಹೊಸ ಕನ್ನಂಬಾಡಿ ೧೫.ಬಸರಾಳು

೫೫೭. ಗ್ರಾಮ ದೇವತೆಗಳು

ಲೇ: ಸಿದ್ಧಲಿಂಗಯ್ಯ; ಪ್ರ; ಮೂಲಭಾರತಿ ಪ್ರಕಾಶನ, ಬೆಂಗಳೂರು; ಮೊ.ಮು. ೧೯೯೭; ಪುಟ ೧೬+೧೨+೩೪೪=೩೭೨; ಕ್ರೌನ್ ೧/೪

ಪಿಎಚ್.ಡಿ. ಮಹಾಪ್ರಬಂಧ. ಹನ್ನೊಂದು ಅಧ್ಯಾಯಗಳಿವೆ: ೧.ಗ್ರಾಮದೇವತೆಗಳ ಅಧ್ಯಯನದ ಅಗತ್ಯ ೨.ಗ್ರಾಮದೇವತೆಯ ಪರಿಕಲ್ಪನೆ ೩.ಗ್ರಾಮದೇವತೆಗಳ ವರ್ಗೀಕರಣ ೪.ಗ್ರಾಮದೇವತೆಗಳನ್ನು ಕುರಿತ ಪುರಾಣ, ಐತಿಹ್ಯಗಳು ೫.ಗ್ರಾಮದೇವತೆಗಳನ್ನು ಕುರಿತ ಆಚರಣೆಗಳು ೬.ಬದಲಾಗುತ್ತಿರುವ ಪರಿಸರದಲ್ಲಿ ಗ್ರಾಮದೇವತೆಗಳು ೭.ಛಾಯಾಚಿತ್ರಗಳು ೮.ಗ್ರಾಮದೇವತೆಯ ಕಥೆ ೯.ಗ್ರಾಮದೇವತೆಯ ಕಥೆಗೆ ಮುನ್ನ ೧೦.ಗ್ರಂಥಸೂಚಿ ೧೧.ದೇವತೆಗಳು

೫೫೮. ಗ್ರಾಮದೇವತೆಗಳ ಅಧ್ಯಯನ–ಒಂದು ಸಾಂಸ್ಕೃತಿಕ ಶೋಧ

ಲೇ: ಬಸವರಾಜು ತೋಟಹಳ್ಳಿ; ಪ್ರ: ದೇವಿ ಪ್ರಕಾಶನ, ೪೧೩, ೧೦ನೇ ಮುಖ್ಯರಸ್ತೆ, ವಿನಾಯಕ ನಗರ (ಹಳೇಗುಡ್ಡದ ಹಳ್ಳಿ), ಬೆಂಗಳೂರು–೨೬; ಮೊ.ಮು: ೨೦೦೭; ಪು: ೧೨+೩೦೪=೩೧೬; ಡಿಮ್ಮೈ ೧/೮

ಪಿಎಚ್.ಡಿ. ಮಹಾಪ್ರಬಂಧ. ಒಂಬತ್ತು ಅಧ್ಯಾಯಗಳಿವೆ: ೧.ಗ್ರಾಮ ದೇವತೆಗಳ ಉಗಮ, ವ್ಯಾಪ್ತಿ, ಉದ್ದೇಶ ೨.ಗ್ರಾಮದೇವತೆಗಳ ಸ್ವರೂಪ ಮತ್ತು ವಿಶ್ಲೇಷಣೆ ೩.ಕನಕಪುರ ತಾಲ್ಲೂಕಿನ ಚಾರಿತ್ರಿಕ ಮತ್ತು ಭೌಗೋಳಿಕ ಹಿನ್ನೆಲೆ ಹಾಗೂ ಸಾಂಸ್ಕೃತಿಕ ಪರಿಚಯ ೪.ಧರ್ಮ ಮತ್ತು ದೇವರ ಚಾರಿತ್ರಿಕ ಅವಲೋಕನ ಹಾಗೂ ಸ್ವರೂಪ ೫.ಗ್ರಾಮ ದೇವತೆಗಳ ವರ್ಗೀಕರಣ ೬.ದೇವತೆಗಳಲ್ಲಿ ಸಾಮಾಜಿಕ ಅಸಮಾನತೆ ಮತ್ತು ದೇವಸ್ಥಾನಗಳಲ್ಲಿ ನಿಷೇಧತೆ ೭.ಆಧುನಿಕತೆ ಮತ್ತು ದೈವೀ ಪರಿಕಲ್ಪನೆ ೮.ಪುರಾಣ ಮತ್ತು ಐತಿಹ್ಯಗಳು ೯.ಊರ ಆಚರಣೆಗಳು. ಸಮಾರೋಪ ಎಂಬ ಅಧ್ಯಾಯವೂ ಇದೆ. ಕಿ.ರಂ. ನಾಗರಾಜ ಅವರ ಮುನ್ನುಡಿ, ಅನುಬಂಧದಲ್ಲಿ, ಗ್ರಾಮದೇವತೆಗಳ ಜನಪದ ಸಾಹಿತ್ಯ ಸಂಗ್ರಹದ ವಿಶ್ಲೇಷಣೆ, ಕೊನೆಯಲ್ಲಿ ಕೆಲವು ಫೋಟೋಗಳು ಇವೆ.

೫೫೯. ಗ್ರಾಮ ದೇವತೆ ಮಾರಮ್ಮ

ಧ್ವನಿ ಮುದ್ರಣ, ಸಂಗ್ರಹ ಮತ್ತು ಸಂಪಾದನೆ: ಸಂ: ಎಚ್.ಎಲ್. ನಾಗೇಗೌಡ, ಸಹ ಸಂ. ಡಾ. ಎಸ್.ಪಿ. ಪದ್ಮಪ್ರಸಾದ್; ಪ್ರ: ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು; ಮೊ.ಮು.೧೯೯೧; ಪುಟ ೮ + ೧೦೮= ೧೧೬; ಕ್ರೌನ್ ೧/೮

ಇಡೀ ಗ್ರಂಥವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ೧.ಪ್ರಸ್ತಾವನೆ ೨.ಮಾರಮ್ಮನ ಕತೆ ೩.ಅನುಬಂಧಗಳು. ಪ್ರಸ್ತಾವನೆಯಲ್ಲಿ ಏಳು ಭಾಗಗಳಿವೆ. ೧.ಮಾರಿಕತೆ – ಪಾಠಭೇದಗಳು ೨.ಕತೆಯ ವಿಶ್ಲೇಷಣೆ ೩.ಕತೆಯ ಉಗಮ ಮತ್ತು ವಿಕಾಸ ೪.ಮಾರಿ ಹಲವು ವಿಧ ೫.ಮಾರಿ ಮತ್ತು ಇತರ ಗ್ರಾಮದೇವತೆಗಳು ೬.ಮಾರಿಹಬ್ಬದ ಆಚರಣೆ – (ಅ) ಮಧುಗಿರಿಯಲ್ಲಿ (ಆ) ಇತರೆಡೆಗಳಲ್ಲಿ ೭.ಪ್ರಸ್ತುತ ಕತೆಯ ವಸ್ತುವಿನ ಬಗ್ಗೆ ಆರು ಅನುಬಂಧಗಳಿವೆ. ೧.ಆದಿಶಕ್ತಿಯ–ಜಾಂಬರ ವಂಶದ ಉತ್ಪತ್ತಿ –ತ್ರಿಮೂರ್ತಿಗಳ ಉತ್ಪತ್ತಿ – ಇತ್ಯಾದಿ. ಚೌಡಿಕೆಯ ತಯಾರಿಕೆ–ಮಾರಿಹಬ್ಬದ ವಿಧಾನದ ಸಂಕ್ಷಿಪ್ತ ನಿರೂಪಣೆ ೨.ವಿಶಿಷ್ಟ ಶಬ್ದಸೂಚಿ ೩.ಗಾದೆ / ನುಡಿಗಟ್ಟುಗಳ ಸೂಚಿ ೪.ಆಶಯಸೂಚಿ ೫.ಅಧ್ಯಯನಕಾರರು ಗಮನಿಸಬೇಕಾದ ಗ್ರಂಥಗಳು / ಲೇಖನಗಳು ೬.ಭಿನ್ನಪಾಠ. ಇಷ್ಟೆಲ್ಲ ಆದ ಮೇಲೆ ಕೊನೆಯಲ್ಲಿ 'ಅರ್ಥ, ವಿವರಣೆ, ಟಿಪ್ಪಣಿ' ಇತ್ಯಾದಿ ಎಂಬ ಭಾಗ ಇದೆ.

೫೬೦. ಗ್ರಾಮ ಮತ್ತು ಶಿಷ್ಟ ದೇವತೆಗಳು– ತೌಲನಿಕ ಅಧ್ಯಯನ (ಹೊಸಕೋಟೆ ತಾಲ್ಲೂಕು)

ಲೇ: ಎಸ್.ಲಕ್ಷ್ಮೀದೇವಿ; ಪ್ರ: ಚಿತ್ಕಲಾ ಪ್ರಕಾಶನ,ಕುಪ್ಪಂ; ಮೊ.ಮು.೨೦೦೭; ಪುಟ ೨೫+೩೯೮=೪೨೩; ಡಿಮ್ಮೈ ೧/೮

ಪಿಎಚ್.ಡಿ. ಮಹಾಪ್ರಬಂಧ ಎಂಬ ಅಡಿಬರಹ ಇದೆ. ಎಂಟು ಅಧ್ಯಾಯಗಳಿವೆ: **ಅಧ್ಯಾಯ ಒಂದು: ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:** ೧.ಇದುವರೆಗೆ ನಡೆದಿರುವ

ಗ್ರಾಮದೇವತೆಗಳ ಕೆಲವು ಅಧ್ಯಯನಗಳು. **ಅಧ್ಯಾಯ ಎರಡು: ಹೊಸಕೋಟೆ ತಾಲ್ಲೂಕಿನ ಸಾಮಾನ್ಯ ಸ್ವರೂಪ:** ೧.ಚಾರಿತ್ರಿಕ, ಭೌಗೋಳಿಕ, ನೈಸರ್ಗಿಕ ಹಾಗೂ ಸಾಂಸ್ಕೃತಿಕ ವಿವರಗಳು ೨.ಗ್ರಾಮದೇವತೆಯ ದೇವಾಲಯಗಳ ಸ್ವರೂಪ ೩.ಗ್ರಾಮದೇವತೆಗಳ ವರ್ಗೀಕರಣ ೪.ಗ್ರಾಮದೇವತೆ ಪುರಾಣ, ಐತಿಹ್ಯ ಮತ್ತು ನಂಬಿಕೆಗಳು. **ಅಧ್ಯಾಯ ಮೂರು: ಶಿಷ್ಟದೈವಗಳು ಮತ್ತು ಗ್ರಾಮದೇವತೆಗಳು:** ೧.ಶಿಷ್ಟ ದೈವಗಳ ಆಚರಣೆಗಳು ೨.ಗ್ರಾಮದೇವತೆಗಳ ಆಚರಣೆಗಳು ೩.ಸಾಮ್ಯ ಮತ್ತು ಭೇದಗಳು ೪.ಛಾಯಾಚಿತ್ರಗಳು. **ಅಧ್ಯಾಯ ನಾಲ್ಕು: ಪ್ರಮುಖ ಗ್ರಾಮದೇವತೆಗಳ ಜಾತ್ರೆಗಳು:** ೧.ದೊಡ್ಡ ಪ್ರಮಾಣದ ಜಾತ್ರೆಗಳು: ಹೊಸಕೋಟೆ–ದ್ರೌಪದಮ್ಮ, ಉಪ್ಪಾರಹಳ್ಳಿ–ಮದ್ದೂರಮ್ಮ, ಜಡಿಗೇನಹಳ್ಳಿ–ಗುಡ್ಡದಮ್ಮ, ವಾಗಟ–ಚೌಡೇಶ್ವರಿ, ಸೂಲಿಬೆಲೆ–ಮಹೇಶ್ವರಮ್ಮ, ದೊಡ್ಡ ಹುಲ್ಲೂರು–ಗುರು ಮುತ್ಯಾಲಮ್ಮ, ಲಾಲ್‌ಬಾಗ್ ದಾಸರಹಳ್ಳಿ–ಎಲ್ಲಮ್ಮ, ಕೊಳತ್ತೂರು–ಮಾರಮ್ಮ ೨.ಮಧ್ಯಮ ಪ್ರಮಾಣದ ಜಾತ್ರೆಗಳು: ಆವಲಹಳ್ಳಿ–ಸವಾರಮ್ಮ, ಗಣಗಲು–ಗುಟ್ಟದಮ್ಮ, ಮಾಕನಹಳ್ಳಿ–ಕರಗದಮ್ಮ, ಮುಗಬಾಳ–ಮಾರಮ್ಮ, ಹಲಸಹಳ್ಳಿ–ದೊಡ್ಡಮ್ಮ, ದೊಡ್ಡಗುಬ್ಬಿ–ಮದ್ದೂರಮ್ಮ, ಜಿನ್ನಾಗರ–ದೊಡ್ಡಮ್ಮ; ೩.ಸಣ್ಣ ಪ್ರಮಾಣದ ಜಾತ್ರೆಗಳು: ಹಸಿಗಾಳ, ಲಕ್ಕೊಂಡಹಳ್ಳಿ, ಕಮ್ಮಸಂದ್ರ, ನಂದಗುಡಿ, ದಂಡುಪಾಳ್ಯ, ಸೋಣದೇನಹಳ್ಳಿ, ಕುಂಬಳಹಳ್ಳಿ, ಕಲ್ಲಹಳ್ಳಿ, ಸಾದಪ್ಪನಹಳ್ಳಿ, ಮುಗಳೀಪುರ. **ಅಧ್ಯಾಯ ಐದು: ಗ್ರಾಮ ದೇವತೆ ಹಾಗೂ ಪೂರಕ ದೇವತೆಗಳು:** ೧.ಸಂಬಂಧ ಮತ್ತು ವ್ಯತ್ಯಾಸಗಳು ೨.ಸಾಮ್ಯ ಮತ್ತು ಭೇದಗಳು. **ಅಧ್ಯಾಯ ಆರು: ಗ್ರಾಮದೇವತೆಗಳ ಆರಾಧನೆಯ ಹಿನ್ನೆಲೆಯಲ್ಲಿ ವಿಧಿ–ನಿಷೇಧಗಳು:** ೧.ವೈಯಕ್ತಿಕ ವಿಧಿ–ನಿಷೇಧಗಳು ೨.ಕೌಟುಂಬಿಕ ವಿಧಿ–ನಿಷೇಧಗಳು ೩.ಸಾಮಾಜಿಕ ವಿಧಿನಿಷೇಧಗಳು. **ಅಧ್ಯಾಯ ಏಳು: ಆಧುನಿಕತೆಯ ಹಿನ್ನೆಲೆಯಲ್ಲಿ ಗ್ರಾಮದೇವತೆಗಳು:** ೧.ಆಧುನೀಕರಣದ ಪ್ರಭಾವದಲ್ಲಿ ಗ್ರಾಮದೇವತೆಗಳ ಪ್ರಸ್ತುತತೆ. **ಅಧ್ಯಾಯ ಎಂಟು: ಉಪಸಂಹಾರ**. ಅನುಬಂಧದಲ್ಲಿ, ವಕ್ತೃಗಳ ವಿವರ, ಶಬ್ದಸೂಚಿ, ಇವೆ. ತಾಳ್ತಜೆ ವಸಂತಕುಮಾರ್ ಅವರ ಮುನ್ನುಡಿ ಇದೆ.

೫೬೧. ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಷ

ಲೇ: ವಿಶ್ವನಾಥ; ಪ್ರ: ದೇವಿ ಪ್ರಕಾಶನ,ಯು–೧೯,ಸಿಎಚ್–೧೯, ಪಂಪಾಪತಿ ರಸ್ತೆ, ಸರಸ್ವತಿಪುರಂ, ಮೈಸೂರು–೫೭೦ ೦೦೯, ಮೊ.ಮು: ೨೦೦೦; ಪು: ೧೬+೨೫೬=೨೭೨; ಡಿಮೈ ೧/೮

ಎಂಟು ಸಂಶೋಧನ ಲೇಖನಗಳ ಸಂಕಲನ: ೧.ಗ್ರಾಮನಾಮ ಚರಿತ್ರೆ ೨.ಗ್ರಾಮನಾಮ ಕುರುಹು ೩.ಗ್ರಾಮನಾಮ ಸಂಸ್ಕೃತಿ ೪.ಗ್ರಾಮನಾಮ ಪರಿಸರ ಮತ್ತು ಪರಿಶೀಲನೆ ೫.ಗ್ರಾಮನಾಮಗಳ ಭೌಗೋಳಿಕ ಸಾಂಸ್ಕೃತಿಕ ಹಿನ್ನೆಲೆ ೬.ಗ್ರಾಮನಾಮಗಳ ಭಾಷಾವಿಜ್ಞಾನ ೭.ಗ್ರಾಮನಾಮ ಗ್ಲೋಸರಿ ೮.ಗ್ರಾಮನಾಮಗಳ ಒಟ್ಟು ನೋಟ. ಕೃಷ್ಣಮೂರ್ತಿ ಹನೂರು ಅವರ ಮುನ್ನುಡಿ, ಲೇಖಕರ ನಿರೂಪ ಎಂಬ ಪ್ರಸ್ತಾವನೆ, ಕೊನೆಯಲ್ಲಿ, ಗ್ರಾಮನಾಮಗಳ ಸಂಕೇತಗಳು, ಸಂಕೇತಾಕ್ಷರ ಪದಸೂಚಿ, ನಿಘಂಟಿನಲ್ಲಿ ಬಳಸಿರುವ ಸಂಕೇತಾಕ್ಷರಗಳು, ಇವೆ.

೫೬೨. ಗ್ರಾಮ ವ್ಯಾಸಂಗ

ಲೇ: ಎಚ್.ವ್ಹಿ. ನಾಗೇಶ; ಪ್ರ: ಚಂದ್ರನಾಥ ಪ್ರಕಾಶನ, ಧಾರವಾಡ–೭; ಮೊ.ಮು: ೧೯೮೧; ಪು: ೯೬; ಡಿಮ್ಮೈ ೧/೮

ಐದು ಅಧ್ಯಾಯಗಳಿವೆ: ೧೨.ಬಿಟ್ಟಿಯ ಬೆತ್ತ ೨.ನಮ್ಮ ಗ್ರಾಮದೇವತೆಗಳು ೩.ಆಯ ಮತ್ತು ಆಯಗಾರರು ೪.ಗ್ರಾಮೀಣ ಸಹಕಾರ ೫.ಗ್ರಾಮೀಣ ಬದಲಾವಣೆ. ಕೃಷ್ಣಶರ್ಮ ಬೆಟಗೇರಿ ಅವರ ಮೊದಲ ನುಡಿ, ಸಿ. ಪಾರ್ವತಮ್ಮ ಅವರ ಮುನ್ನುಡಿ ಇವೆ.

೫೬೩. ಗ್ರಾಮಾಂತರ ಕಥೆಗಳು

ಸಂ: ಬೋರೇಗೌಡ ಬಳದರೆ; ಪ್ರ: ಪ್ರಬುದ್ಧ ಪ್ರಕಾಶನ, ಮೈಸೂರು–೬; ಮೊ.ಮು: ೧೯೭೦; ಪು: ೨೪+೧೩೨ = ೧೫೬ ಕ್ರೌನ್ ೧/೪

೨೬ ಕಥೆಗಳ ಸಂಕಲನ: ೧.ಐದು ಜನರ ಕಥೆ ೨.ಸುಳಿಬಾಳೆ ಹಣ್ಣು ೩.ಮಗುವಿನ ಸಾಹಸ ೪.ದೊರೆಯ ಮಗ ೫.ಗೌಡನ ಮಕ್ಕಳು ೬.ಅಪ್ಪ ಕಂಡ ಸ್ವಪ್ನ ೭.ಮುತ್ತು ತಿನ್ನುವ ಕೋಳಿ ೮.ಹೇಡಿಕುಮಾರನ ಕತ್ತೆ ೯.ಮಂತ್ರಿ ಮಗಳ ಬುದ್ಧಿವಂತಿಕೆ ೧೦.ಮೂರುಮಲ್ಲಿಗೆ ತೂಕದ ಹೆಣ್ಣು ೧೧.ಕೊಡೊ ಶಿವನಿಗೆ ಬಡತನವಾ ೧೨.ಮುಳ್ಳು ಸೊಡ್ರಿಯ ಕಥೆ ೧೩.ಸುಂಡ ಹೆಣ್ಣಾದದ್ದು ೧೪.ನಾಗೇಂದ್ರ ೧೫.ಹೆಡ್ಡ ದೊರೆ ೧೬.ಮುದುಕಿ ೧೭.ಪೆದ್ದ ಹುಡುಗ ೧೮.ಹೆಂಡತಿಯ ಶಾಪ ೧೯.ಕೆಂಡಣ್ಣ ಬೆಂಕ್ಯಣ್ಣ ೨೦.ಸವತಿ ಮತ್ಸರ ೨೧.ಕಳ್ಳನ ಹುಡುಗ ೨೨.ನಾಯಿ ಕೊಟ್ಟ ಭರ್ಣಿ ೨೩.ದೊರೆ ಮತ್ತು ಹುಡುಗಿ ೨೪.ನಿಚ್ಚಮುಂಡೆ ಕಥೆ ೨೫.ಬಿದ್ರೆಯೊಳ್ಗಿನ ಚದ್ರೆ ೨೬.ರಾಜಕುಮಾರನ ಕಥೆ. ಜೀ.ಶಂ. ಪರಮಶಿವಯ್ಯ ಅವರ ಮುನ್ನುಡಿ, ಕೊನೆಯಲ್ಲಿ ಕಥೆಗಳನ್ನು ಹೇಳಿದವರು, ಅರ್ಥಕೋಶ, ಇವೆ.

೫೬೪. ಗ್ರಾಮಾಂತರ ಶಿಶುಪ್ರಾಸಗಳು

ಸಂ: ಬೋರೇಗೌಡ ಚಿಕ್ಕಮರಳಿ; ಪ್ರ: ಅನಿಕೇತನ, ಚಿಕ್ಕಮರಳಿ, ಪಾಂಡವಪುರ ತಾಲ್ಲೂಕು; ಮೊ.ಮು. ೧೯೮೩; ಪು ೮+೯೬=೧೦೪; ಡಿಮ್ಮೈ ೧/೮

೧೮೫ ಶಿಶುಪ್ರಾಸಗಳ ಸಂಕಲನ. ಸಿ.ಪಿ.ಕೆ. ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ ಕೆಲವು ಶಿಶುಪ್ರಾಸಗಳಿಗೆ ವಿವರ ನೀಡುವ ಟಿಪ್ಪಣಿಗಳು, ಅರ್ಥಕೋಶ ಇವೆ.

೫೬೫. ಗ್ರಾಮಾಂತರ

ಲೇ: ಎಚ್.ಆರ್.ಚೇತನ; ಪ್ರ: ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು–೫೭೦ ೦೦೬; ಮೊ.ಮು.೨೦೧೧; ಪುಟ ೨೪+೧೦೬+೪=೧೩೪; ಕ್ರೌನ್ ೧/೮

ಹನ್ನೊಂದು ಅಧ್ಯಾಯಗಳಿವೆ: ೧.ಗ್ರಾಮ ಪರಿಕಲ್ಪನೆ ಮತ್ತು ಅದರ ಸ್ವರೂಪ ೨.ಗ್ರಾಮದ ಒಳಗೆ ೩.ಆಚರಣೆಗಳು, ವಿಧಿ ನಿಷೇಧಗಳು ೪.ಹಬ್ಬ ಹರಿದಿನಗಳು ೫.ಅಡುಗೆ ಸಂಪ್ರದಾಯಗಳು ೬.ಒಡವೆ ವಸ್ತ್ರಗಳು ೭.ವ್ಯವಸಾಯ ಚಕ್ರ ೮.ಗ್ರಾಮಾಂತರ ವ್ಯವಸಾಯೋಪಕರಣಗಳು ೯.ಮದುವೆ ಸಂಪ್ರದಾಯಗಳು ೧೦.ಸಾಹಿತ್ಯ ಮತ್ತು ಕಲೆಗಳು ೧೧.ಮಳೆಯ ನಕ್ಷತ್ರಗಳು. ಪ್ರಾರಂಭದಲ್ಲಿ ಪ್ರಸ್ತಾವನೆ ಇದೆ.

೫೬೬. ಗ್ರಾಮೀಣ ಅನುಭಾವ ಗೀತೆಗಳು

ಸಂ: ಬಿ.ಎಸ್. ಚಂದ್ರಕಲಾ; ಪ್ರ: ಸ್ವರ–ಲಿಪಿ ಪ್ರತಿಷ್ಠಾನ, ಉತ್ಕರ್ಷ, ೨೩೩, ೧ನೇ ಎ ಮುಖ್ಯರಸ್ತೆ, ಪಶ್ಚಿಮ ಕಾರ್ಡ್ ರಸ್ತೆ, ೨ನೇ ಹಂತ, ಬೆಂಗಳೂರು–೫೬೦ ೦೮೬; ಮೊ.ಮು.೧೯೯೮; ಪುಟ ೧೬+೧೪೪=೧೬೦; ಡೆಮ್ಮಿ ೧/೮

೫೬ ಹಾಡುಗಳಿಗೆ ಸ್ವರಪ್ರಸ್ತಾರ ಹಾಕಲಾಗಿದೆ. ಜಾನಪದ ಸಾಹಿತ್ಯ ಎಂಬ ರಘುಸುತ ಅವರ ಬರಹ, ಎ.ಸುಬ್ಬರಾವ್ ಅವರ ಮುನ್ನುಡಿ, ಇವೆ.

೫೬೭. ಗ್ರಾಮೀಣ

ಲೇ: ಎಂ.ಚಿದಾನಂದ ಮೂರ್ತಿ; ಪ್ರ: ಬಾಪ್ಕೊ ಪ್ರಕಾಶನ, ೮೮ ಮೈಸೂರು ರಸ್ತೆ, ಬೆಂಗಳೂರು–೫೬೦೦೧೮; ಮೊ.ಮು: ೧೯೭೭; ಪು: ೮+೨೩೩=೨೪೧; ಡೆಮ್ಮಿ ೧/೮

ಗ್ರಾಮ ಜೀವನಕ್ಕೆ ಸಂಬಂಧಿಸಿದ ಸಂಶೋಧನ ಪ್ರಬಂಧ ಮಾಲೆ ಎಂಬ ಅಡಿಬರಹ ಇದೆ. ೧೯ ಲೇಖನಗಳಿವೆ: ೧.ಪಗರಣ (ಹಗರಣ)–ಇತಿಹಾಸದಲ್ಲಿ ಮತ್ತು ಸಮಕಾಲೀನದಲ್ಲಿ ೨.ಪ್ರಾಚೀನ ಕರ್ನಾಟಕದಲ್ಲಿ ಗಮಕ ಮತ್ತು ಗಮಕಗಳು ೩.ನಾಗಬೆತ್ತ ೪.ಐನೋರು ಮತ್ತು ಕಾಲಿಲ್ಲದ ಐನೋರು ೫.ಶೂಲದ ಹಬ್ಬ ೬.ದಂತ ಕತೆಗಳು ೭.'ದೇವದಾಸಿ'ಯೊಬ್ಬಳೊಡನೆ ಸಂದರ್ಶನ ೮.ಬಸವಿ ಲಕ್ಕಜ್ಜಿ ೯.ಬೈಗುಳುಗಳು ೧೦.ನಮ್ಮ ಹಳ್ಳಿಗಳು : ಅಂದು–ಇಂದು (ಆಧುನೀಕರಣದಲ್ಲಿ ಒಂದು ಅಭ್ಯಾಸ) ೧೧.ಪುರಾಣ,ಸಂಕೇತಗಳಲ್ಲಿ ಇತಿಹಾಸ ಸುರಕ್ಷಿತ: ಎರಡು ಮಾಸ್ತಿ ಗುಡಿಗಳ ಪ್ರತ್ಯಕ್ಷ ಅಧ್ಯಯನ ೧೨.ಜೋಕುಮಾರ ೧೩.ಸೌಭಾಗ್ಯದ ಲಕ್ಷಣಗಳು ೧೪.ಐದು ಜನಪದ ಶಬ್ದಗಳು–ಅವುಗಳ ನಿಷ್ಪತ್ತಿ ೧೫.ಹಾದಿ ದೆವ್ವ ಆಟ ೧೬.ಕನ್ನಡ ಗಾದೆಗಳನ್ನು ಕುರಿತಂತೆ ಕೆಲವು ಟಿಪ್ಪಣಿಗಳು ೧೭.ಒನಕೆಹಾಡು–ಒಂದು ವಿವೇಚನೆ ೧೮.ಕರಪಲ್ಲ ೧೯.ಜನಪದ ಕತೆ, ಐತಿಹ್ಯ ಮತ್ತು ಪುರಾಣ

೫೬೮. ಗ್ರಾಮೀಣ ಉಡುಗೆ ತೊಡುಗೆಗಳು

ಸಂ: ದೇವೇಂದ್ರಕುಮಾರ ಹಕಾರಿ, ಕೆ.ಆರ್.ಸಂಧ್ಯಾರೆಡ್ಡಿ; ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು; ಮೊ.ಮು.೨೦೦೦, ಪುಟ೧೪+೩೦೦=೩೧೪, ಕ್ರೌನ್ ೧/೮

ಏಳು ಸಂಶೋಧನ ಲೇಖನಗಳ ಸಂಕಲನ: ೧.ಉತ್ತರ ಕರ್ನಾಟಕದ ಉಡುಪುಗಳು –ಮಂದಾಕಿನಿ ಪುರೋಹಿತ ೨.ಕೊಡವರ ಉಡುಪುಗಳು –ಐನಂಡ ಮು.ಪ್ರಭುಕುಮಾರ್ ೩.ಉತ್ತರ ಕರ್ನಾಟಕದ ಆಭರಣಗಳು– ಶಾಲಿನಿ ರಘುನಾಥ ೪.ಮಲೆನಾಡಿನ ಆಭರಣಗಳು– ವೈ.ಸಿ.ಭಾನುಮತಿ ೫.ಕೊಡವರ ಆಭರಣಗಳು– ಶ್ರೀಮತಿ ಐನಂಡ ಕನಿಕೆ ಪ್ರಭುಕುಮಾರ್ ೬.ದಕ್ಷಿಣ ಕನ್ನಡದ ಆಭರಣಗಳು– ಪಾಲ್ತಾಡಿ ರಾಮಕೃಷ್ಣ ಆಚಾರ್ ೭.ಉತ್ತರ ಕನ್ನಡ ಜಿಲ್ಲೆಯ ಆಭರಣಗಳು–ಶಾಂತಿ ನಾಯಕ. ಪ್ರತಿಯೊಂದು ಲೇಖನ ಕೊನೆಯಲ್ಲಿ ಚಿತ್ರಗಳಿವೆ. ಕೆಲವಕ್ಕೆ ಛಾಯಾಚಿತ್ರಗಳು, ಕೆಲವಕ್ಕೆ ರೇಖಾಚಿತ್ರಗಳು. ಎಚ್.ಜೆ. ಲಕ್ಕಪ್ಪಗೌಡರ ಮುನ್ನುಡಿ ಇದೆ. ಗ್ರಾಮೀಣ ಉಡುಗೆ ತೊಡುಗೆ ಎಂಬ ಶೀರ್ಷಿಕೆಯಲ್ಲಿ ಸಂಪಾದಕರ ಪ್ರಾಸ್ತಾವಿಕ ನುಡಿಗಳಿವೆ.

೫೬೯. ಗ್ರಾಮೀಣ ಕ್ರೀಡೆಗಳು

ಲೇ: ಹೊ.ಗ.ಮನೋಹರ್; ಪ್ರ: ಭಾಸ್ಕರ ಪ್ರಕಾಶನ, ನೇಸರ, ವೈ.ಟಿ.ರಸ್ತೆ, ತುರುವೇಕೆರೆ–೫೭೨ ೨೨೭; ಮೊ.ಮು.೧೯೯೮; ಪುಟ ೮+೫೬=೬೪; ಡಿಮ್ಮೈ ೧/೮

ಪ್ರತಿಯೊಂದು ಶೀರ್ಷಿಕೆಯೂ ವರ್ಣನಾತ್ಮಕವಾಗಿದೆ. ಇಲ್ಲಿ ೨೫ ಆಟಗಳಿವೆ: ಗಾಳಿಪಟ, ದಾರದ ಆಟ, ಚಟ್ಲ ಪಟ್ಲ ಕಾಯಿ, ಅಟ್ಟಾಮುಟ್ಟಾ ತನ್ನಾದೇವಿ, ಹಾಸಿ ಬೀಸಿ ನೆಲ್ಲಕ್ಕಿ, ಆನೆ–ಕುರಿ, ಮರಕೋತಿ, ಲಗ್ಗೆ, ತೆಂಗಿನಕಾಯಿ ಆಟ, ಆಟ್ಯಪಾಟ್ಯ, ಗಿರಗಿಟ್ಲೆ, ದೊಂಬರಾಟ, ಕೋಲಾಟ, ಕಣ್ಣುಮುಚ್ಚಾಟ, ಕುದುರೆ ಆಟ, ಕಂಬಳ, ಚಿಣ್ಣಿದಾಂಡು, ಕೋಳಿ ಅಂಕ, ಬುಗುರಿ, ಪಗಡೆ, ರತ್ತೋರತ್ತೋ, ಕಲ್ಲಾಟ, ಕುಂಟು ಬಿಲ್ಲೆ, ಹಳಗುಣಿಮಣೆ, ಟೋಪಿ ಆಟ. ಅಲ್ಲಲ್ಲಿ ರೇಖಾಚಿತ್ರಗಳಿವೆ. ಹೆಚ್.ಆರ್. ದಾಸೇಗೌಡ ಅವರ ಎರಡು ಮಾತು ಎಂಬ ಮುನ್ನುಡಿ ಇದೆ.

೫೭೦. ಗ್ರಾಮೀಣ ಗಾದೆಗಳು

ಸಂ: ಬಿ.ಕೃಷ್ಣಪ್ಪ ರೆಡ್ಡಿ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೧೮; ಮೊ.ಮು. ೧೯೮೧; ಪುಟ ೧೨+೧೪೨=೧೫೪; ಡಿಮ್ಮೈ೧/೮

ಲಭ್ಯ ಪ್ರತಿಯಲ್ಲಿ ಗಾದೆಗಳ ಭಾಗ ಇಲ್ಲ. ನಾಲ್ಕು ಅನುಬಂಧಗಳಲ್ಲಿ ಎರಡನೆಯದು ಇಲ್ಲ. ಅನುಬಂಧ ೧: ಗ್ರಾಮೀಣ ಪಾರಿಭಾಷಿಕ ಪದಕೋಶ. ಅನುಬಂಧ ೩: ಅರ್ಥಕೋಶ, ಅನುಬಂಧ ೪: ಗಾದೆಗಳ ವರ್ಗೀಕರಣ. ಹಂಪ.ನಾಗರಾಜಯ್ಯ ಅವರ ಮುನ್ನುಡಿ ಇದೆ.

೫೭೧. ಗ್ರಾಮೀಣ ಚಮತ್ಕಾರ ಗಣಿತ (ಭಾಗ–೩)

ಸಂ: ಜೀನಹಳ್ಳಿ ಸಿದ್ಧಲಿಂಗಪ್ಪ; ಪ್ರ: ಪ್ರೇಮ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ಶಿವಮೊಗ್ಗ ಜಿಲ್ಲೆ–೫೭೭ ೨೨೩; ಮೊ.ಮು: ೧೯೮೯, ಏಳನೆಯ ಮುದ್ರಣ: ೧೯೮೯; ಪು: ೬೪; ಕ್ರೌನ್ ೧/೮

೨೭ ಲೆಕ್ಕಗಳು ಹಾಗೂ ೭೫ ಭಾಷಾ ಚಮತ್ಕಾರಗಳು ಈ ಸಂಗ್ರಹದಲ್ಲಿ ಇವೆ. ಉತ್ತರಗಳೂ ಇವೆ. ನಿರೂಪಕರ ಪರಿಚಯ ಇದೆ.

೫೭೨. ಗ್ರಾಮೀಣ ನಂಬಿಕೆಗಳು

ಸಂ: ಎಲ್.ಆರ್.ಪ್ರ: ಕಾದಂಬರಿ ಲೋಕ, ಸರಸ್ವತಿಪುರಂ, ಮೈಸೂರು-೯, ಮು. ಗಳು: ೧೯೮೬, ೧೯೮೭, ೧೯೮೮ , ಪು: ೧೬; ಕ್ರೌನ್ ೧/೮

ಹತ್ತು ಭಾಗಗಳಲ್ಲಿ ೧೩೪ ಗಾದೆಗಳಿವೆ.ಭಾಗಗಳು: ೧.ದೇವರು ೨.ಶುಭಕಾರ್ಯ ೩.ಬಸುರಿ ೪.ಬಾಣತಿ ೫.ಮಕ್ಕಳು ೬.ಕನಸು-ಮನಸು ೭.ಸಾವು ೮.ದೆವ್ವ ೯.ಪ್ರಾಣಿ-ಪಕ್ಷಿ ೧೦.ಕೆಲವು ನಿತ್ಯದ ಪ್ರಮುಖ ನಂಬಿಕೆಗಳು

೫೭೩. ಗ್ರಾಮೀಣ ಬದುಕು ಮತ್ತು ಮಹಿಳೆ

ಲೇ: ನಾಜ್‌ನೀನ್ ಬೇಗಂ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮; ಮೊ.ಮು. ೨೦೦೦; ಪುಟ ೮+೮೮=೯೬; ಡೆಮ್ಮಿ ೧/೮

ಆರು ಲೇಖನಗಳ ಸಂಕಲನ: ೧.ಗ್ರಾಮೀಣ ಸ್ತ್ರೀಯರ ಸ್ಥಾನಮಾನ ೨.ಗ್ರಾಮೀಣ ಮಹಿಳೆಯರ ಸಾಂಪ್ರದಾಯಿಕ ಪಾತ್ರ ೩.ಗ್ರಾಮೀಣ ಮಹಿಳೆಯರ ಜೀವನ ಕ್ರಮ ೪.ಗ್ರಾಮೀಣ ಮಹಿಳೆ ಮತ್ತು ವಿವಾಹ ೫.ಧರ್ಮ, ಮೂಢನಂಬಿಕೆ ಮತ್ತು ಗ್ರಾಮೀಣ ಮಹಿಳೆ ೬.ಗ್ರಾಮೀಣ ಮಹಿಳೆ ಮತ್ತು ಶೋಷಣೆ ಕಲ್ಯಾಣ ಯೋಜನೆಗಳು. ಎನ್. ಬಸವಾರಾಧ್ಯ ಅವರ ಮುನ್ನುಡಿ ಇದೆ.

೫೭೪. ಗ್ರಾಮೀಣ ಬೇಟೆಗಳು

ಸಂ: ದೇವೇಂದ್ರಕುಮಾರ ಹಕಾರಿ, ಕೆ.ಆರ್. ಸಂಧ್ಯಾರೆಡ್ಡಿ; ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು - ೫೬೦೦೧೮; ಮೊ.ಮು: ೨೦೦೦; ಪು: ೧೬+೧೫೮ = ೧೭೪

ವಿವಿಧ ಲೇಖಕರ ಬೇಟೆಗೆ ಸಂಬಂಧಿಸಿದ ಒಂಬತ್ತು ಲೇಖನಗಳ ಸಂಕಲನ: ೧.ಬಯಲು ಸೀಮೆಯಲ್ಲಿ ಪ್ರಾಣಿ ಬೇಟೆ-ಎಂ.ಎಸ್. ಪ್ರಕಾಶ್ ೨.ಮಲೆನಾಡಿನಲ್ಲಿ ಪ್ರಾಣಿಬೇಟೆ-ಯು.ಎಸ್. ರಾಮಣ್ಣ ೩.ಕೊಡಗಿನಲ್ಲಿ ಪ್ರಾಣಿ ಬೇಟೆ-ಐನಂಡ ಎಂ. ಧನು ೪.ದಕ್ಷಿಣ ಕನ್ನಡದಲ್ಲಿ ಪ್ರಾಣಿ ಬೇಟೆ-ನರೇಂದ್ರ ರೈ ದೇರ್ಲ ೫.ಬಯಲು ಸೀಮೆಯಲ್ಲಿ ಹಕ್ಕಿ ಬೇಟೆ-ಎಂ.ಎಸ್. ಪ್ರಕಾಶ್ ೬.ಕೊಡಗಿನಲ್ಲಿ ಹಕ್ಕಿ ಬೇಟೆ-ಐನಂಡ ಎಂ. ಧನು. ೭.ಉತ್ತರ ಕನ್ನಡ ಜೇನು ಬೇಟೆ-ಪಿ.ಬಿ. ನಾಯಕ್ ೮.ಕೊಡಗಿನಲ್ಲಿ ಜೇನು ಬೇಟೆ-ಕೆ.ಎಸ್. ಶೋಭ ೯.ಬಯಲುಸೀಮೆಯಲಿ ಮೀನು ಬೇಟೆ-ಎಂ.ಎಸ್. ಪ್ರಕಾಶ್ ಎಚ್.ಜೆ. ಲಕ್ಕಪ್ಪಗೌಡ ಅವರ ಮುನ್ನುಡಿ ಇದೆ.

ಏಳು ಸಂಶೋಧನ ಲೇಖನಗಳ ಸಂಕಲನ: ೧.ಉತ್ತರ ಕರ್ನಾಟಕದ ಉಡುಪುಗಳು —ಮಂದಾಕಿನಿ ಪುರೋಹಿತ ೨.ಕೊಡವರ ಉಡುಪುಗಳು —ಐನಂಡ ಮು.ಪ್ರಭುಕುಮಾರ್ ೩.ಉತ್ತರ ಕರ್ನಾಟಕದ ಆಭರಣಗಳು– ಶಾಲಿನಿ ರಘುನಾಥ ೪.ಮಲೆನಾಡಿನ ಆಭರಣಗಳು– ವೈ.ಸಿ.ಭಾನುಮತಿ ೫.ಕೊಡವರ ಆಭರಣಗಳು– ಶ್ರೀಮತಿ ಐನಂಡ ಕನಿಕೆ ಪ್ರಭುಕುಮಾರ್ ೬.ದಕ್ಷಿಣ ಕನ್ನಡದ ಆಭರಣಗಳು– ಪಾಲ್ತಾಡಿ ರಾಮಕೃಷ್ಣ ಆಚಾರ್ ೭.ಉತ್ತರ ಕನ್ನಡ ಜಿಲ್ಲೆಯ ಆಭರಣಗಳು–ಶಾಂತಿ ನಾಯಕ. ಪ್ರತಿಯೊಂದು ಲೇಖನ ಕೊನೆಯಲ್ಲಿ ಚಿತ್ರಗಳಿವೆ. ಕೆಲವಕ್ಕೆ ಛಾಯಾಚಿತ್ರಗಳು, ಕೆಲವಕ್ಕೆ ರೇಖಾಚಿತ್ರಗಳು. ಎಚ್.ಜೆ. ಲಕ್ಕಪ್ಪಗೌಡರ ಮುನ್ನುಡಿ ಇದೆ. ಗ್ರಾಮೀಣ ಉಡುಗೆ ತೊಡುಗೆ ಎಂಬ ಶೀರ್ಷಿಕೆಯಲ್ಲಿ ಸಂಪಾದಕರ ಪ್ರಾಸ್ತಾವಿಕ ನುಡಿಗಳಿವೆ.

೫೭೯. ಗ್ರಾಮೀಣ ಕ್ರೀಡೆಗಳು

ಲೇ: ಹೊ.ಗ.ಮನೋಹರ್; ಪ್ರ: ಭಾಸ್ಕರ ಪ್ರಕಾಶನ, ನೇಸರ, ವೈ.ಟಿ.ರಸ್ತೆ, ತುರುವೇಕೆರೆ–೫೭೨ ೨೨೭; ಮೊ.ಮು.೧೯೯೮; ಪುಟ ೮+೫೬=೬೪; ಡಿಮೈ ೧/೮

ಪ್ರತಿಯೊಂದು ಶೀರ್ಷಿಕೆಯೂ ವರ್ಣನಾತ್ಮಕವಾಗಿದೆ. ಇಲ್ಲಿ ೨೫ ಆಟಗಳಿವೆ: ಗಾಳಿಪಟ, ದಾರದ ಆಟ, ಚಟ್ಲಿ ಪಟ್ಲಿ ಕಾಯಿ, ಅಟ್ಟಾಮುಟ್ಟಾ ತನ್ನಾದೇವಿ, ಹಾಸಿ ಬೀಸಿ ನೆಲ್ಲಕ್ಕಿ, ಆನೆ–ಕುರಿ, ಮರಕೋತಿ, ಲಗ್ಗೆ, ತೆಂಗಿನಕಾಯಿ ಆಟ, ಆಟ್ಯಪಾಟ್ಯ, ಗಿರಗಿಟ್ಲೆ, ದೊಂಬರಾಟ, ಕೋಲಾಟ, ಕಣ್ಣುಮುಚ್ಚಾಟ, ಕುದುರೆ ಆಟ, ಕಂಬಳ, ಚಿಣ್ಣಿದಾಂಡು, ಕೋಳಿ ಅಂಕ, ಬುಗುರಿ, ಪಗಡೆ, ರತ್ತೋರತ್ತೋ, ಕಲ್ಲಾಟ, ಕುಂಟು ಬಿಲ್ಲೆ, ಹಳಗುಣಿಮಣೆ, ಟೋಪಿ ಆಟ. ಅಲ್ಲಲ್ಲಿ ರೇಖಾಚಿತ್ರಗಳಿವೆ. ಹೆಚ್.ಆರ್. ದಾಸೇಗೌಡ ಅವರ ಎರಡು ಮಾತು ಎಂಬ ಮುನ್ನುಡಿ ಇದೆ.

೫೮೦. ಗ್ರಾಮೀಣ ಗಾದೆಗಳು

ಸಂ: ಬಿ.ಕೃಷ್ಣಪ್ಪ ರೆಡ್ಡಿ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೧೮; ಮೊ.ಮು. ೧೯೮೧; ಪುಟ ೧೨+೧೪೨=೧೫೪; ಡಿಮೈ೧/೮

ಲಭ್ಯ ಪ್ರತಿಯಲ್ಲಿ ಗಾದೆಗಳ ಭಾಗ ಇಲ್ಲ. ನಾಲ್ಕು ಅನುಬಂಧಗಳಲ್ಲಿ ಎರಡನೆಯದು ಇಲ್ಲ. ಅನುಬಂಧ ೧: ಗ್ರಾಮೀಣ ಪಾರಿಭಾಷಿಕ ಪದಕೋಶ. ಅನುಬಂಧ ೩: ಅರ್ಥಕೋಶ, ಅನುಬಂಧ ೪: ಗಾದೆಗಳ ವರ್ಗೀಕರಣ. ಹಂಪ.ನಾಗರಾಜಯ್ಯ ಅವರ ಮುನ್ನುಡಿ ಇದೆ.

೫೮೧. ಗ್ರಾಮೀಣ ಚಮತ್ಕಾರ ಗಣಿತ (ಭಾಗ–೩)

ಸಂ: ಜೀನಹಳ್ಳಿ ಸಿದ್ಧಲಿಂಗಪ್ಪ; ಪ್ರ: ಪ್ರೇಮ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ಶಿವಮೊಗ್ಗ ಜಿಲ್ಲೆ–೫೭೭ ೨೨೩; ಮೊ.ಮು: ೧೯೮೯, ಏಳನೆಯ ಮುದ್ರಣ: ೧೯೮೯; ಪು: ೬೪; ಕ್ರೌನ್ ೧/೮

ಘ

೫೭೮. ಘಟ್ಟದ ಕೋರೆ ಯಕ್ಷಗಾನ ಮತ್ತು ಕೋಳಗಾಲ

ಲೇ: ಜಯಚಂದ್ರರಾಜ ಅರಸು; ಪ್ರ: ಪ್ರಣವಶ್ರೀ ಪ್ರಕಾಶನ, ಜೆ.ಪಿ.ನಗರ, ಬೆಂಗಳೂರು-೨೮; ಮೊ.ಮು: ೧೯೯೫; ಪು: ೮+೧೮೪+೨೬=೨೧೮; ಡಿಮ್ಮೈ ೧/೮

ಏಳು ಅಧ್ಯಾಯಗಳಿವೆ: ೧.ಘಟ್ಟದ ಕೋರೆ ಯಕ್ಷಗಾನ ೨.ಪ್ರಸಂಗದ ಸಿದ್ಧತೆ ಮತ್ತು ಪ್ರಯೋಗ ೩.ಮೂಡಲಪಾಯ ಪಡುವಲಪಾಯ ದೊಡ್ಡಾಟ ಮತ್ತು ಘಟ್ಟದಕೋರೆಯ ಸ್ವರೂಪ ಸಾಮ್ಯಗಳು ೪.ಕೋಳಗಾಲದಲ್ಲಿ ಘಟ್ಟದಕೋರೆ ಯಕ್ಷಗಾನದ ಪರಂಪರೆ ಮತ್ತು ಕಾಲಘಟ್ಟಗಳು ೫.ಹಸ್ತಪ್ರತಿ ಸಾಹಿತ್ಯ ಮತ್ತು ಕವಿದರ್ಶನ ೬.ಕೋಳಗಾಲದ ನೆಲಜಲ ಮತ್ತು ಜನಜೀವನ ೭.ಸಮಾರೋಪ. ಸಾ.ಶಿ.ಮರುಳಯ್ಯ ಅವರ ಮುನ್ನುಡಿ, ಮತಿಘಟ್ಟ ಕೃಷ್ಣಮೂರ್ತಿ ಅವರ ಬೆನ್ನುಡಿ, ಕೆಲವು ಫೋಟೋಗಳು, ಇವೆ.

೫೭೯. ಘಟ್ಟದಕೋರೆ ಕಲಾವಿದ ಬಸವರಾಜ ಅರಸು

ಸಂ: ಜಯಚಂದ್ರರಾಜ ಅರಸು; ಪ್ರ: ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು; ಮೊ.ಮು. ೨೦೦೯; ಪುಟ ೧೮+೯೦=೧೦೮; ಡಿಮ್ಮೈ ೧/೮

ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಪುಟ್ಟ ಗ್ರಾಮವಾದ ಕೋಳಗಾಲದಲ್ಲಿ ಅಸ್ತಿತ್ವದಲ್ಲಿರುವ ಘಟ್ಟದಕೋರೆ ಎಂಬ ಯಕ್ಷಗಾನ ಪ್ರಭೇದದ ಇತಿಹಾಸದೊಂದಿಗೇ ಬಸವರಾಜ ಅರಸು ಎಂಬ ಶ್ರೇಷ್ಠ ಕಲಾವಿದರ ಜೀವನ ಚಿತ್ರವನ್ನು ಒಳಗೊಂಡ ಕೃತಿ.

ಚ

೫೮೦. ಚಂದುಳ್ಳ ಮಕ್ಕಳ ಒಂಭತ್ತು ಕೊಡು ಸ್ವಾಮಿ

ಸಂ: ಬಿ. ಸಿದ್ಧಗಂಗಯ್ಯ ಕಂಬಾಳು; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮; ಮೊ.ಮು. ೧೯೮೨, ಪು: ೨೦+೧೬೮=೧೮೮, ಡಿಮ್ಮೈ ೧/೮

ಈ ಸಂಕಲನದ ಹಾಡುಗಳನ್ನು ೯ ಭಾಗಗಳನ್ನಾಗಿ ವಿಂಗಡಿಸಲಾಗಿದೆ. ೧.ನೀ ನಿರಳೀಗೆ ಬಾರೇ ಸಪುನಾಕೆ ೨.ಮದಲಿಂಗನ ಬಾವಿಸಿ ಹಸೆಗೆ ಕರೆತನ್ನಿ ೩.ಮಠದಾಗೆ ಓದೋ ತಮ್ಮಯ್ನ ದನಿ ಚೆಂದ ೪.ತಣುವೇನೋ ಅಣ್ಣ ತವರೀಗೆ ೫.ತೃಪ್ತಿ-ಅತೃಪ್ತಿ. ೬.ಚಂದುಳ್ಳ

ಮಕ್ಕಳ ಒಂಭತ್ತು ಕೊಡು ಸ್ವಾಮಿ. ೭.ಮಾತಾಯಿ ನಮ್ಮವ್ವ ಯಾರ ಮ್ಯಾಲೆ ಕಣ್ಣಿಟ್ಟೆ ೮.ಎಳೆಯರ ಪ್ರಾಸಗಳು ೯.ಸೆರೆಸೂರೆ-ಹಗರಾಣ. ಹಂಪ ನಾಗರಾಜಯ್ಯ ಅವರ 'ಮುನ್ನುಡಿ', ಸಂಪಾದಕರ 'ಪ್ರಸ್ತಾವನೆ', ಕೊನೆಯಲ್ಲಿ 'ಸಂದರ್ಶನ' ಎಂಬ ಭಾಗವು ಸಂಗ್ರಹ ವಿವರಗಳನ್ನು ಒಳಗೊಂಡಿದೆ.

೫೮೧. ಚಂದ್ರಕ್ಕನ ಹಾಡುಗಳು

ಸಂ: ಮಂದಾಕಿನಿ; ಪ್ರ: ಗೋಕುಲ, ಶ್ರೀ ಪ್ರಕಾಶನ, ಕಲ್ಯಾಣನಗರ, ಧಾರವಾಡ-೨; ಮೊ.ಮು: ೧೯೮೫; ಪು: ೧೬+೪೭=೬೩; ಕ್ರೌನ್ ೧/೮

೩೧ ಸಂಪ್ರದಾಯದ ಹಾಡುಗಳ ಸಂಕಲನ. ಎಂ.ಎಸ್.ಸುಂಕಾಪುರ ಅವರ ಮುನ್ನುಡಿ ಇದೆ.

೫೮೨. ಚಂದ್ರಗುತ್ತಿ ಜಾತ್ರೆ

ಲೇ: ಎಸ್. ಮೋಹನ್; ಪ್ರ: ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ - ೫೭೭ ೪೫೧, ಶಿವಮೊಗ್ಗ ಜಿಲ್ಲೆ; ಮೊ.ಮು: ೨೦೦೪; ಪು: ೧೦+೬೪=೭೪; ಕ್ರೌನ್ ೧/೮.

ಚಂದ್ರಗುತ್ತಿಯನ್ನು ಕುರಿತ ಸಮಗ್ರ ಮಾಹಿತಿ ಈ ಗ್ರಂಥದಲ್ಲಿದೆ. ಒಳ ಶೀರ್ಷಿಕೆಗಳು ಹೀಗಿವೆ: ಪೀಠಿಕೆ, ಚಂದ್ರಗುತ್ತಿ ಹೆಸರಿನ ಹಿನ್ನೆಲೆ, ಇತಿಹಾಸದಲ್ಲಿ ಚಂದ್ರಗುತ್ತಿ, ಐತಿಹ್ಯಗಳು, ನಾಥಪಂಥ ಹಾಗೂ ರೇಣುಕಾ ಎಲ್ಲಮ್ಮ ಇತ್ಯಾದಿ. ದೈವಗಳು, ವಾದ್ಯಗಳು, ಬೆತ್ತಲೆಸೇವೆ, ಜೋಗತಿ ಸಂಪ್ರದಾಯ, ನಂಬಿಕೆ ಮತ್ತು ಆಚರಣೆ, ಜಾನಪದದಲ್ಲಿ ಚಂದ್ರಗುತ್ತಿ ಮುಂತಾದ ವಿವರಗಳಿವೆ.

೫೮೩. ಚಂದ್ರಗುತ್ತಿ ರೇಣುಕಾಂಬೆ ಜಾತ್ರೆ

ಲೇ: ಎನ್.ಹುಚ್ಚಪ್ಪ ಮಾಸ್ತರ್; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ನೃಪತುಂಗರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು. ೧೯೯೭; ಪು: ೬+೫೦=೫೬; ಡೆಮ್ಮಿ ೧/೮

ಚಂದ್ರಗುತ್ತಿಯ ಐತಿಹಾಸಿಕ ಹಿನ್ನೆಲೆ, ದೇವತೆಗಳು, ನಂಬಿಕೆಗಳು, ಹರಕೆಗಳು, ಬೆತ್ತಲೆ ಸೇವೆ ಮತ್ತು ಇತರ ಸೇವೆಗಳು, ನವರಾತ್ರಿ ಉತ್ಸವ ಜಾತ್ರೆ, ಹೀಗೆ ಸಂಕ್ಷಿಪ್ತವೂ ಪೂರ್ಣವೂ ಆದ ಚಿತ್ರ ಈ ಗ್ರಂಥದಲ್ಲಿದೆ.

೫೮೪. ಚಂದ್ರವಂಶೋದಯ

ಲೇ: ಎ.ವಿ.ಗಜಾನನ ಹೆಗಡೆ; ಪ್ರ: ಗಿರಿ ಪ್ರಕಾಶನ, ತುಮರಿ, ಸಾಗರ ತಾಲ್ಲೂಕು; ಮೊ.ಮು.೧೯೯೭; ಪು: ೪೮; ಕ್ರೌನ್ ೧/೮

ಯಕ್ಷಗಾನ ಪ್ರಸಂಗ ಎಂಬ ಅಡಿಬರಹ ಇದೆ. ರಾಗ ತಾಳ ಛಂದೋ ಸಹಿತದ್ದು. ಪಿ.ಶಾಂತಾರಾಮ ಪ್ರಭು ಅವರ ಮುನ್ನುಡಿ ಇದೆ.

೫೭೫. ಚದುರ ಜಾನಪದ

ಲೇ: ಮೃತ್ಯುಂಜಯ ಹೊರಕೇರಿ; ಪ್ರ: ಮರುಗ ಪ್ರಕಾಶನ, ೫೦, ಪಂಚಶೀಲ, ಸರಸ್ವತೀಪುರ, ಗುಲಬರ್ಗಾ-೫೮೫ ೧೦೬; ಮೊ.ಮು: ೨೦೦೩; ಪು: ೧೦+೧೩೦=೧೪೦

ನಾಲ್ಕು ಭಾಗಗಳಲಿ ವಿಂಗಡಿಸಲ್ಪಟ್ಟಿರುವ ಇಪ್ಪತ್ತು ಲೇಖನಗಳ ಸಂಕಲನ. **ಭಾಗ ಒಂದು: ಜಾನಪದ:** ೧.ಜಾನಪದ ಅಗತ್ಯತೆ ೨.ಜಾನಪದ-ಜಾಣಪದ-ಜನಪ್ರಿಯ ೩.ಕನ್ನಡ ಜಾನಪದ ಅಧ್ಯಯನದ ಇತಿಹಾಸ. **ಭಾಗ ಎರಡು: ಜಾನಪದ ಕಲೆಗಳು:** ೪.Bhajana Art of North Karnataka ೫.ಬಳ್ಳಾರಿ ಜಿಲ್ಲೆಯ ಜಾನಪದ ತೊಗಲುಗೊಂಬೆಯಾಟ ೬.ಚೌಡಿಕೆ ಮೇಳ: ಒಂದು ಟಿಪ್ಪಣಿ. **ಭಾಗ ಮೂರು: ಜಾನಪದ ವಿದ್ವಾಂಸರು;** ೭.ಡಾ. ಗದ್ದಗಿಮಠರ ಜಾನಪದ ಸಂಗ್ರಹ-ಸಂಶೋಧನಾ ವಿಧಾನ ೮.ಡಾ.ಬಿ.ಬಿ. ಹೆಂಡಿ ಅವರ ಜಾನಪದ ಕೃತಿಗಳು ಹಾಗೂ ಬರಹಗಳು ೯.ಡಾ. ಲಠ್ಠೆ ಸಂಪಾದಿತ ಬಯಲಾಟಗಳು ೧೦.ಕಾರಂತರ 'ಜಾನಪದ ಗೀತೆಗಳು' ೧೧.ಹಲಸಂಗಿ ಗೆಳೆಯರು-ಮಧುರ ಚೆನ್ನ. **ಭಾಗ ನಾಲ್ಕು: ಜಾನಪದ ಸಾಹಿತ್ಯ:** ೧೨.ಬಲೋರಿ ಹಾಡುಗಳು ೧೩.ಚೌಪದನಗಳು ಒಂದು ವಿಚಾರ ೧೪.ಬಾದಾಮಿ ಕೋಟೆಯ ಹಾಡು ೧೫.ಕಳೆದುಕೊಂಡ ಬಾದಾಮಿಯ ಐತಿಹಾಸಿಕ ಲಾವಣಿ ೧೬.ನಲವಡಿ ಶ್ರೀಕಂಠಶಾಸ್ತ್ರೀಗಳ ಕರ್ಬಲಾ ಹಾಡುಗಳು ೧೭.ಜೋಗುಳ ಪದಗಳು ೧೮.ಜನಪದ ಗಣಿತ ೧೯.ಜನಪದ ಗಾದೆಗಳಲ್ಲಿ ಜೀವನಾನುಭವ ೨೦.ಬೈಗುಳ: ಜನಪದ ಸಾಹಿತ್ಯದ ಒಂದು ಪ್ರಕಾರ.

೫೮೬. ಚನ್ನಮಲ್ಲಯ್ಯನ ಜಾನಪದ ಹಾಡುಗಳು

ಸಂ: ಮಲ್ಲಿಕಾರ್ಜುನ ಶಿ. ಲಠ್ಠೆ; ಪ್ರ: ಭಕ್ತ ಮಂಡಳಿ, ಕುಕಡೊಳ್ಳಿ, ಬೆಳಗಾವಿ ಜಿಲ್ಲೆ; ಮೊ.ಮು. ೧೯೭೮; ಪು: ೨೪+೬೦=೮೪; ಕ್ರೌನ್ ೧/೮

ಇಲ್ಲಿನ ಹಾಡುಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ: ೧.ಭಜನೆಯ ಹಾಡುಗಳು ೨.ಲಾವಣಿ ಪದಗಳು: ಗಣಪತಿ, ದೇವರಕೊಂಡದ ಸಾಧುವಿನ ವೈರಾಗ್ಯ, ಕಲಿಜನರ ಗುಣಾವಳಿಯ ವರ್ಣನೆ, ಲಾವಣಿ ತತ್ವ, ತತ್ತ್ವ ೩.ಮಂಗಳಾರತಿ ಪದಗಳು. ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ ಶಬ್ದಾರ್ಥಗಳು ಇವೆ.

೫೮೭. ಚನ್ನಾದೇವಿ ಅಗ್ರಹಾರ: ಜಾನಪದೀಯ ಅಧ್ಯಯನ

ಲೇ: ಟಿ. ಗೋವಿಂದರಾಜು: ಪ್ರ: ಪುಸ್ತಕ ಜೇನು ಚನ್ನಾದೇವಿಯ ಅಗ್ರಹಾರ, ಕಾಡನೂರು ಅಂಚೆ, ದೊಡ್ಡಬಳ್ಳಾಪುರ ತಾ॥ ೫೬೧ ೨೦೪; ಮೊ.ಮು: ೧೯೯೩; ಪು: ೧೨+೩೩೬; ಡಿಮ್ಮೈ

ಪಿ.ಎಚ್.ಡಿ. ಮಹಾಪ್ರಬಂಧ. ಹದಿನಾಲ್ಕು ಅಧ್ಯಾಯನಗಳಿವೆ: ೧.ಅಧ್ಯಯನದ ಉದ್ದೇಶ ಸ್ವರೂಪ ೨.ಊರಿನ ಭೌಗೋಳಿಕ ಹಾಗೂ ನೈಸರ್ಗಿಕ ವಿವರಗಳು ೩.ಊರಿನ ಪ್ರಾಚೀನತೆ–ಹೆಸರಿನ ಮೂಲ ಇತ್ಯಾದಿ ೪.ಜಾತಿ ಪದ್ಧತಿ ೫.ಅರ್ಥವ್ಯವಸ್ಥೆ ೬.ಆಡಳಿತ ೭.ಕುಟುಂಬದ ಪದ್ಧತಿ ೮.ವಿವಾಹ ಸಂಪ್ರದಾಯಗಳು ೯.ಶವ ಸಂಸ್ಕಾರ ಪದ್ಧತಿಗಳು ೧೦.ಇತರ ಶಾಸ್ತ್ರ–ಸಂಪ್ರದಾಯ; ಬಂಬಿಕೆ ನಡವಳಿಕೆಳು ೧೧.ಧರ್ಮ–ದೇವರು; ಹಬ್ಬ–ಹರಿದಿನ ೧೨.ಕಲೆ–ಕ್ರೀಡೆ–ವಿನೋದ ೧೩.ಜನಪದ ಸಾಹಿತ್ಯ ೧೪.ಉಪಸಂಹಾರ ಅನುಬಂಧದಲ್ಲಿ ವಕ್ತೃವಿವರ ಸಾಂಸ್ಕೃತಿಕ ಪದಕೋಶ ಆಯ್ದ ಶಬ್ದಸೂಚಿ ಇವೆ. ಕೆ. ಮರುಳಸಿದ್ದಪ್ಪ ಅವರ ಮುನ್ನುಡಿ ಇದೆ.

೫೮೮. ಚಲವಾದಿ ಗೌರಮ್ಮನ ಕಥೆಗಳು

ಸಂ: ಸರೋಜಿನಿ ಆಯ್. ಪಾವಟೆ; ಪ್ರ: ಆಯ್. ಎಸ್. ಪಾವಟೆ ಪ್ರಕಾಶನ, ಬಾಗಲಕೋಟೆ; ಮೊ.ಮು. ೨೦೦೦; ಪು: ೧೩೦; ಡಿಮೈ ೧/೮

೫೪ ಕಥೆಗಳ ಸಂಕಲನ. ಆರು ಅನುಬಂಧಗಳಿವೆ: ೧.ಗೌರಮ್ಮನ ಕಥೆ ೨.ಸಂವಾದ ೩.ವಂಶಾವಳಿ ೪.ಪದ್ಮಾವತಿ ಹಾಡು ೫.ಶಬ್ದಾರ್ಥ ೬.ಗ್ರಂಥ ಋಣ. ಗೌರಮ್ಮನ ಪ್ರಶಸ್ತಿ ವಿವರ, ಹಾಗೂ ಎಸ್.ಎಸ್. ಹರ್ಲಾಪೂರ ಅವರ ನಾ ಕಂಡ ಹಾಡಿನ ಗೌರಮ್ಮ ಎಂಬ ಬರಹ ಇವೆ.

೫೮೯. ಚಲವಾದಿ ಚಂದ್ರಪ್ಪನ ಅನುಭಾವ ಪದಗಳು

ಸಂ: ಶಿವಾನಂದ ಗುಬ್ಬಣ್ಣವರ; ಪ್ರ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು.೧೯೮೮; ಪು: ೧೦+೨೨೨=೨೩೨; ಡಿಮೈ ೧/೮

ಹನ್ನೆರಡು ಭಾಗಗಳಲ್ಲಿ ೧೪೦ ಹಾಡುಗಳಿವೆ. ಭಾಗಗಳು: ೧.ದೇವಸ್ತುತಿ ೨.ಶಕ್ತಿಸ್ತುತಿ ೩.ಗುರುಸ್ತುತಿ ೪.ಬೋಧೆ ೫.ನೀತಿ ೬.ಪೌರಾಣಿಕ ೭.ಚಾರಿತ್ರಿಕ ೮.ಬೆಡಗು ೯.ಘಟನಾತ್ಮಕ ೧೦.ಡೊಳ್ಳಿನ ಹಾಡು ೧೧.ಮೋಹರಮ್ ರಿವಾಯತ್ ೧೨.ಸೋಬಾನ ಪದ. ಪ್ರಸ್ತಾವನೆ ಇದೆ. ಅನುಬಂಧದಲ್ಲಿ, ಟಿಪ್ಪಣಿಗಳು, ಗ್ರಾಮ್ಯಪದ ಕೋಶ, ವಿಶಿಷ್ಟ ಪದಸೂಚಿ, ಹಾಡಿನ ಮೊದಲ ಚರಣಗಳ ಅಕಾರಾದಿ ಇವೆ.

೫೯೦. ಚಾಡಿಯ ಫಲ

ಸಂ: ಜೀನಹಳ್ಳಿ ಸಿದ್ಧಲಿಂಗಪ್ಪ; ಪ್ರ: ಪ್ರೇಮ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ದಾವಣಗೆರೆ ಜಿಲ್ಲೆ–೫೭೭ ೨೨೩; ಮೊ.ಮು. ೨೦೦೨; ಪು: ೧೨; ಕ್ರೌನ್ ೧/೪

ದಪ್ಪ ಅಕ್ಷರದಲ್ಲಿ ಅಚ್ಚಾಗಿರುವ ಒಂದು ಜನಪದ ಕಥೆ. ಪ್ರತಿ ಪು: ದಲ್ಲೂ ರೇಖಾಚಿತ್ರಗಳಿವೆ.

೫೯೨. ಚಾಪ ಹಾಕುತೀವ ಡಪ್ಪಿನ ಮ್ಯಾಲ

ಸಂ: ಸಂಗಮೇಶ ಬಿರಾದಾರ; ಪ್ರ: ಗೆಳೆಯರ ಬಳಗ; ತುಂಗಳ, ಜಮಖಂಡಿ ತಾಲ್ಲೂಕು, ವಿಜಾಪುರ ಜಿಲ್ಲೆ; ಮೊ.ಮು. ೧೯೮೧; ಪು: ೧೦+೧೦೪ = ೧೧೪; ಡಿಮ್ಮೈ.

ಪೌರಾಣಿಕ ಸಂದರ್ಭಗಳನ್ನು ಒಳಗೊಂಡ ಹದಿನಾರು ಹಾಡುಗಳ ಸಂಕಲನ. ಪ್ರಾರಂಭದ ಶ್ರೀಗಜಾನನ ಸ್ತೋತ್ರ ಹಾಗೂ ಕೊನೆಯ ಮಂಗಲ – ಇವುಗಳನ್ನು ಬಿಟ್ಟು ಉಳಿದ ೧೪ ಹಾಡುಗಳಿಗೆ ಕಥಾಸಾರ ಸಂಗ್ರಹ ವಿವರ ಮುಂತಾದುವನ್ನು ಕೊನೆಯಲ್ಲಿ ಸಮಾಲೋಚನೆ ಎಂಬ ವಿಭಾಗದಡಿ ನೀಡಲಾಗಿದೆ. ಅದಾದ ಮೇಲೆ ೧೪ ಪಾತ್ರಗಳನ್ನು ಪರಿಚಯಿಸಿಕೊಡುವ ‘ಪೌರಾಣಿಕ ಪಾತ್ರಗಳು’ಎಂಬ ವಿಭಾಗ ಲಾವಣಿಯ ಛಂದಸ್ಸು ಎಂಬ ವಿಭಾಗ, ಕಠಿಣ ಶಬ್ದಾರ್ಥ, ಇವೆ.

೫೯೩. ಚಾಮರಾಜನಗರ ಜಿಲ್ಲೆಯ ಜನಪದ ಕಲಾವಿದರು

ಲೇ: ಮಹಾದೇವ ಶಂಕನಪುರ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು–೦೨; ಮೊ.ಮು. ೨೦೦೮; ಪು: ೨೧+೧೯೮=೨೧೯; ಡಿಮ್ಮೈ ೧/೮

೫೫ ಕಲಾವಿದರನ್ನು ತಾಲ್ಲೂಕುವಾರು ವಿಂಗಡಿಸಲಾಗಿದೆ. **ಚಾಮರಾಜನಗರ ತಾಲೂಕು:** ೧.ಪಟ್ಟಮಲ್ಲೇಗೌಡ ೨.ಮಾದೇಗೌಡ ೩.ಕರುಗ ನಂಜಮ್ಮ ೪.ಚಿಕ್ಕರಂಗಯ್ಯ ೫.ಎಂ. ಮಹಾದೇವಯ್ಯಾ ೬.ದುಂಡಮ್ಮ ೭.ಶಂಕರಪ್ಪ ೮.ಹಾಲಗೂಡಯ್ಯ ೯.ಮಾದಶೆಟ್ಟಿ ೧೦.ದೊಡ್ಡಗವಿ ಬಸಪ್ಪ ೧೧.ಹೆಚ್. ಸಣ್ಣಶೆಟ್ಟಿ ೧೨.ಸಿ. ಮಾದಶೆಟ್ಟಿ ೧೩.ಮಾದಶೆಟ್ಟಿ ೧೪.ಮಹದೇವೇಗೌಡ ೧೫.ಯಬ್ರಯ್ಯ ೧೬. ಹುಚ್ಚು ಮಾದಶೆಟ್ಟಿ **ಗುಂಡ್ಲುಪೇಟೆ ತಾಲೂಕು:** ೧೭.ಕೆಬ್ಬೇಪುರ ರಾಚುಯ್ಯ ೧೮.ಅಂಕಳ್ಳಿ ಸಿದ್ದಯ್ಯ ೧೯.ಆರ್. ರಂಗಧಾಮಯ್ಯ ೨೦.ಆರ್. ಹನುಮಂತಯ್ಯ ೨೧.ಎಂ.ಎಸ್. ಬಸವಣ್ಣ ೨೨.ಬಂಗಾರಚಾರ್ ೨೩.ಬಿ.ವಿ. ಶಿವರುದ್ರಪ್ಪ ೨೪.ಮಲ್ಲಮ್ಮ ೨೫.ಚಿಕ್ಕರಂಗಶೆಟ್ಟಿ ೨೬.ನಿಂಗಾಚಾರ್ ೨೭.ದೇವಯ್ಯ ೨೮.ಸಣ್ಣದೇವಮ್ಮ ೨೯.ಸಿದ್ಧಯ್ಯ. **ಯಳಂದೂರು ತಾಲೂಕು:** ೩೦.ಕಾಳವಾರ ಸಿದ್ಧಶೆಟ್ಟಿ ೩೧.ಭಿಕ್ಷೆಯ ಸಿದ್ಧಶೆಟ್ಟಿ ೩೨.ಗುರುಮಲ್ಲಮ್ಮ ೩೩.ಮರಿನಿಂಗಯ್ಯ ೩೪.ಮಾದಶೆಟ್ಟಿ ೩೫.ಬಿ.ಕೆ. ರಂಗಯ್ಯ ೩೬.ವೆಂಕಟರಂಗ ಶೆಟ್ಟಿ ೩೭.ಹೆಚ್.ಎಂ. ಸಿದ್ಧರಾಜು ೩೮.ಮಹದೇವ ಶೆಟ್ಟಿ ೩೯.ಲಕ್ಷ್ಮಮ್ಮ ೪೦.ಕೊಳಲು ನಂಜಯ್ಯ ೪೧.ನಾರದ ಹಿಂಡಯ್ಯ. **ಕೊಳ್ಳೇಗಾಲ ತಾಲೂಕು:** ೪೨.ಮೋಳೆ ರಾಚಯ್ಯ ೪೩.ಕುಂತೂರು ಕಾಳಶೆಟ್ಟಿ ೪೪.ಈರಯ್ಯ ೪೫.ಚಿಕ್ಕಮಾದಯ್ಯ ೪೬.ಕೊಮ್ಮೇಗೌಡ ೪೭.ಕೆ. ನಂಜಯ್ಯ ೪೮.ಬಸವಯ್ಯ ೪೯.ಗುರುಬಸಮ್ಮ ೫೦.ಚಿನ್ನಸ್ವಾಮಿ ೫೧.ಕುಣಗಳ್ಳಿ ಕೆಂಪಯ್ಯ ೫೨.ಮುತ್ತಯ್ಯ ೫೩.ಚಿಕ್ಕ ಕರುಗಯ್ಯ ೫೪.ಕಾರಾಪುರ ಪುಟ್ಟಮಾದಯ್ಯ ೫೫.ಅಟ್ಟಲ ಮಾದಯ್ಯ. ಲೇಖಕರ ಪ್ರಸ್ತಾವನೆ ಇದೆ.

೫೯೪. ಚಾಮಾಯಿ

ಸಂ: ರಾಗೌ; ಪ್ರ: ಸಾಧನ ಸಾಹಿತ್ಯ ಮಂದಿರ, ಲಕ್ಷ್ಮೀ ವಿಲಾಸ ರಸ್ತೆ, ಮೈಸೂರು–೫೭೦ ೦೦೧; ಮೊ.ಮು. ೧೯೮೧; ಪು: ೨೮+೧೦೧=೧೨೯; ಕ್ರೌನ್ ೧/೮

ಎಂಟು ಕಥನಗೀತೆಗಳ ಸಂಕಲನ: ೧.ಕುಸುಮಾಲೆ ೨.ಬಾಣಂತಿ ಕೆಂಪಮ್ಮ ೩.ಉತ್ತರದೇವಿ ೪.ಕಾಳಮ್ಮ ೫.ಬೇಡನ ಬಾಲೆ ೬.ಮಲ್ಲಯ್ಯ–ಗಿರಿಜೆ ೭.ನಂಜುಂಡ–ಚಾಮಾಯಿ ೮.ಗಂಗೆ ಗೌರಿ ಜಗಳ. ಸಂಪಾದಕರ ಪ್ರಸ್ತಾವನೆಯಲ್ಲಿ ಪ್ರತಿಯೊಂದು ಕಥನಗೀತೆಯ ಬಗ್ಗೆ ಚರ್ಚೆ ಹಾಗೂ ವಿವರಣೆಗಳಿವೆ. ಕೊನೆಯಲ್ಲಿ ಅರ್ಥಕೋಶ ಇದೆ.

೫೯೫. ಚಾಮುಂಡಿ ಸಿರಿ ಚಾಮುಂಡಿ

ಲೇ. ಡಾ. ಪಿ.ಕೆ. ರಾಜಶೇಖರ; ಹೊನ್ನಾರು ಜಾನಪದ ಗಾಯಕರು, ಮೈಸೂರು; ಮೊ.ಮು: ೧೯೯೪, ಪು: ೧೬ + ೧೧೬= ೧೩೨, ಕ್ರೌನ್ ೧/೮

ಯಾರು ಈ ಚಾಮುಂಡಿ?, ಮಹಿಷಾಸುರ ಮರ್ದಿನಿ, ನಂಜುಂಡನ ನಲ್ಲೆ – ಎಂಬ ಮೂರು ಭಾಗಗಳಲ್ಲಿ ಚಾಮುಂಡೇಶ್ವರಿಯ ಬದುಕಿನ ಕಥೆಗಳನ್ನು ನಿರೂಪಿಸಲಾಗಿದೆ. 'ಮುತ್ತು ಕೇರಾಕೆ ಮೊರವಾದೆ'ಎಂಬ ಶೀರ್ಷಿಕೆಯಡಿ ಲೇಖಕರ ಮಾತುಗಳಿವೆ. ಕೊನೆಯಲ್ಲಿ 'ಜನಪದ ಶಬ್ದರೂಪಗಳು' ಎಂಬ ಅರ್ಥಕೋಶವಿದೆ. ಲೇಖಕರ ಜಾನಪದ ಕೃತಿಗಳ ಪಟ್ಟಿ ಇದೆ.

೫೯೬. ಚಾರಿತ್ರಿಕ ಜನಪದ ಕಥನ ಕಾವ್ಯಗಳು

ಸಂ: ಎಚ್. ಎಲ್. ನಾಗೇಗೌಡ, ಸಂಪಾದಕರು: ಡಿ. ಲಿಂಗಯ್ಯ ; ಪ್ರ; ಕರ್ನಟಕ ಜಾನಪದ ಪರಿಷತ್ತು, ೧, ಜಲದರ್ಶಿನಿ ಬಡಾವಣೆ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು – ೫೬೦ ೦೫೪; ಮೊ.ಮು: ೨೦೦೮; ಪು: ೨೨೮; ಡಿಮ್ಮೈ ೧/೮

ಒಂಬತ್ತು ಕಾವ್ಯಗಳಿವೆ: ೧.ಮಾಗಡಿ ಕೆಂಪೇಗೌಡನ ಕಥೆ ೨.ಲಿಂಗರಾಜಮ್ಮನ ಕಥೆ ೩.ಮಡಿಕೇರಿ ಲಿಂಗರಾಜ ೪.ಲಕ್ಕಣ್ಣ ಈರಣ್ಣ ೫.ಸರ್ಜಪ್ಪ ನಾಯಕ ೬.ಬಸವರಾಯ ೭.ಹರಳಯ್ಯ ೮.ಚೆನ್ನಿಗರಾಮ ೯.ಸಿಂಧೂರ ಲಕ್ಷ್ಮಣ. ಅನುಬಂಧದಲ್ಲಿ, ರಣಭೈರೇಗೌಡ, ಪಿರಿಯಾಪಟ್ಟಣದ ವೀರರಾಜ, ಕೆಂಪೇಗೌಡನ ಕಾಶಲುಚಿಟುಗು ಕೋಲುಪದ, ಮಾಗಡಿ ಕೆಂಪೇಗೌಡನ ಜಂಪು ಕೋಲುಪದ, ಇವೆ. ಡಿ. ಲಿಂಗಯ್ಯ ಹಾಗೂ ಸರ್ವಮಂಗಳ ಅವರುಗಳು ಸಿದ್ಧಪಡಿಸಿದ ಅರ್ಥಕೋಶ ಇದೆ. ಜಿ. ನಾರಾಯಣ ಅವರ ಅಧ್ಯಕ್ಷರ ಮಾತು ಎಂಬ ಮುನ್ನುಡಿ, ಡಿ. ಲಿಂಗಯ್ಯ ಅವರ ಪ್ರಸ್ತಾವನೆ ಇವೆ.

೫೯೭. ಚಾರಿತ್ರಿಕ ಲಾವಣಿಗಳು

ಸಂ: ಹರಿಶ್ಚಂದ್ರ ದಿಗ್ಸಂಗಿಕರ್; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು: ೨೦೦೯; ಪು: ೮+೧೩೨=೧೪೦; ಡಿಮ್ಮೈ ೧/೮

ಹತ್ತೊಂಬತ್ತು ಲಾವಣಿಗಳ ಸಂಗ್ರಹ: ೧, ೨, ೩: ಕಲಬುರ್ಗಿ ಶರಣ ಬಸವೇಶ್ವರ ೪.ನಿಕ್ಕಿ ಜಾಬೀರ ೫.ನಬಿ ಹಬೀಬ ೬.ಇಬ್ರಾಹಿಮ ಖಲಿಲುಲ್ಲಾ ೭, ೮: ಮಹಿಬೂಬ ಸುಬಾನಿ ೯.ಮುರಲಿಧರ ೧೦.ಜೋಗತಿ ಎಲ್ಲಮ್ಮ ೧೧.ತಿರುನೀಲಕಂಠ ೧೨.ರೇವಣಸಿದ್ಧ ೧೩.ಬಸವ ವಿಜಯದಾಗ ಬರೆದ ಭವಿಷ್ಯ ೧೪.ಸಿದ್ಧರಾಮ ೧೫.ವೀರ ಬಾಹುಕ ೧೬.ಹೊನ್ನವ್ವ ಚನ್ನವ್ವ ೧೭.ಈರಣ್ಣ ಸಂಗಣ್ಣ. ವುುರಿಗೆಪ್ಪ ಅವರ ಶಬ್ದಪಾರಮಾರ್ಗಮಶಕ್ಯಂ ಎಂಬ ಮುನ್ನುಡಿ, ಸಂಪಾದಕರ ಪ್ರಸ್ತಾವನೆ ಇವೆ. ಕೊನೆಯಲ್ಲಿ, ಲಾವಣಿ ರಚಿಸಿದ ಕವಿಗಳ ಪಟ್ಟಿ ಹಾಗೂ ಹಾಡುಗಾರರ ಪಟ್ಟಿ ಇವೆ.

೫೯೮. ಚಿಕ್ಕಮ್ಮನ ಕಥೆಗಳು (ಭಾಗ–೧)

ಲೇ: ಎಚ್.ಆರ್. ಲೀಲಾವತಿ; ಪ್ರ: ತಾರಿಣಿ ಪ್ರಕಾಶನ, ೭೬, ಜಯಲತ, ಮಾರುತಿ ದೇವಸ್ಥಾನದ ರಸ್ತೆ, ೪ನೇ ಮುಖ್ಯರಸ್ತೆ, ಸರಸ್ವತಿಪುರ, ಮೈಸೂರು–೯; ಮೊ.ಮು.೨೦೦೬; ಪು: ೮+೭೪=೮೨; ಕ್ರೌನ್ ೧/೮

ಭಾರತದ ಜಾನಪದ ಕಥೆಗಳು ಎಂಬ ಅಡಿಬರಹ ಇದೆ. **ಹರಿಯಾಣದ ಕಥೆಗಳು:** ೧.ಅತಿ ಬುದ್ಧಿವಂತಿಕೆ ೨.ಹಕ್ಕಿ ಮತ್ತು ಇಲಿ ೩.ಸರಿಯಾದ ಜೋಡಿ ೪.ನರಿ ಮತ್ತು ತುಂಡುಕಾಗದ ೫.ಒಂದು ಲಕ್ಷ ರೂಪಾಯಿ ೬.ಯಾರು ಅರ್ಹರು ೭.ರೂಪ ಮತ್ತು ವಸಂತ ೮.ಎಮ್ಮೆ ಮೊಸರು ೯.ಸೊಟ್ಟ ಸೊಟ್ಟಾಗಿರುವ ಪಾಯಸ. **ಪಂಜಾಬ್ ಕಥೆಗಳು:** ೧೦.ರೈತ ಮತ್ತು ಧನಿಕ ೧೧.ನರಿ ಮತ್ತು ನವಿಲು ೧೨.ನರಿ ಮತ್ತು ಮೊಸಳೆ ೧೩.ನರಿ ಮತ್ತು ಹಲ್ಲಿ ೧೪.ತುಂಟನರಿ ಮತ್ತು ಪುಟ್ಟ ಗುಬ್ಬಚ್ಚಿ. ೧೫.ಆಗೋದೆಲ್ಲಾ ಒಳ್ಳೆಯದಕ್ಕೆ (ಒರಿಸ್ಸಾ) ೧೬.ಬುದ್ಧಿಮತಿ (ಆಂಧ್ರ). ಅಲ್ಲಲ್ಲಿ ರೇಖಾಚಿತ್ರಗಳಿವೆ.

೫೯೯. ಚಿಕ್ಕಳ್ ಬುಡ್ಡಿ

ಸಂ: ಎನ್.ಆರ್. ನಾಯಕ; ಪ್ರ: ಜಾನಪದ ಪ್ರಕಾಶನ, ಹೊನ್ನಾವರ, ಉ.ಕನ್ನಡ–೫೮೧ ೩೩೪; ಮೊ.ಮು. ೨೦೧೦; ಪು: ೫+೭೩=೭೮; ಡಿಮ್ಮೈ ೧/೮

ಮಕ್ಕಳ ಗೀತೆಗಳು ಎಂಬ ಅಡಿಬರಹ ಇದೆ. ಗೆಜ್ಜೆ ಹೆಜ್ಜೆ ಎಂಬ ಹೆಸರಿನ ಐದು ಭಾಗಗಳನ್ನುಳ್ಳ ೬೮ ಹಾಡುಗಳಿವೆ.

೬೦೦. ಚಿಟಕಲ ಮತ್ತು ಇತರ ಕಥೆಗಳು

ಸಂ: ಪ್ರಣತಾರ್ತಿ ಹರನ್; ಪ್ರ: ಸಮುದಾಯ ಅಧ್ಯಯನ ಕೇಂದ್ರ, ೩೦೫೯, ೪ನೇ ಅಡ್ಡರಸ್ತೆ, ಗೋಕುಲಂ ಪಾರ್ಕ್ ರಸ್ತೆ, ಗೋಕುಲಂ, ಮೈಸೂರು – ೫೭೦ ೦೦೨; ಮೊ.ಮು: ೧೯೯೬; ಪು: ೬+೧೧೦=೧೧೬; ಕ್ರೌನ್ ೧/೮.

೩೨ ಜನಪದ ಕಥೆಗಳ ಸಂಕಲನ: ೧.ಆನಂದ್‌ಮಾಯ್ನಾ: ೨.ಗಂಗೇಂದಾ ಗೋದಾವರಿ ೩.ಧೂಳ್ ಮುಚ್ಕೊತ್ತಾ ೪.ಗುಟ್ಟು ೫.ನಲವತ್ತು–ನಲವತ್ತೊಂದು ೬.ಮಾತಾಡು ೭.ಆಷಾಢಭೂತಿ ೮.ಹೈಕಣ್ಣ್‌ಜಜ್ಜ ೯.ರಾಮಪ್ರೀತಿ ೧೦.ದಾನ–ಧರ್ಮ ೧೧.ಜ್ಯೋತಿಷಿಗೆ ಶಾಪ ೧೨.ಕೋಮಟಿಯ ಹಣ ೧೩.ಉಸರರ್ ೧೪.ಸತ್‌ಹೆಗ್ಣ ೧೫.ಘಂಟಾನುರನ ಕಥೆ ೧೬.ವಿಧಿನಿಯಾಮಕ ೧೭.ಅಡ ಇಟ್ಟ ಕಥೆ ೧೮.ಪತ್ರೆ ಆಸ್–ಪತ್ರೆ ೧೯.ಹಾರುವ ನಾಯಿ – ಭೋ ಉದ್ದಾನೆ ನಾಯಿ ೨೦.ವೀರನ ಕಥೆ ೨೧.ಮುಗಿಯದ ಕಥೆ ೨೨.ಲಕ್ಕಂಶಟ್ಟಿ ೨೩.ನದಿಗೆ ತಡೆ–ಸೂರ್ಯನಿಗೆ ತಡೆ ೨೪.ಮೃತ್ಯುದೇವತೆ ೨೫.ಸೋಮಾರಿ ಹುಡುಗ ೨೬.ಚಿನ್ನದ ವರ ೨೭.ಮಹೋದರ ೨೮.ಮೊರ ಬಡಿಯೋ ಕೋಲು ೨೯.ಕಾಲಾಯ ತಸ್ಮೈ ನಮಃ ೩೦.ನೀರ್ ಬಂದ್ರೈತ್ರಿ ೩೧.ಸೂರಯ್ಯ ಚಂದ್ರಯ್ಯ ೩೨.__________ ಚಿಟಕಲ ಕಥೆಗಳನ್ನು ಹೇಳಿದವರ ವಿವರಗಳನ್ನು ವಿಶಿಷ್ಟ ರೀತಿಯಲ್ಲಿ ಪರಿಚಯಿಸಲಾಗಿದೆ. ಇಬ್ಬರು ಹೇಳಿದ ಕಥೆಗಳು ಇಲ್ಲಿವೆ. ಪ್ರಾರಂಭದಲ್ಲಿ ಸುಬ್ಬಲಕ್ಷ್ಮಮ್ಮ ಅವರ ಪರಿಚಯ ಹಾಗೂ ಸಂದರ್ಶನ ಇದೆ. ಅದಾದ ಮೇಲೆ ಅವರು ಹೇಳಿದ ಮೊದಲ ಏಳು ಕಥೆಗಳಿವೆ. ಅದಾದ ಮೇಲೆ ಎಚ್. ಆರ್. ನಾರಾಯಣರಾವ್ (ದೊರೆಸ್ವಾಮಿ) ಅವರ ಪರಿಚಯ ಹಾಗೂ ಸಂದರ್ಶನ ಇದೆ. ಅದಾದ ಮೇಲೆ ಅವರು ಹೇಳಿದ ೮ ರಿಂದ ೩೨ರ ವರೆಗಿನ ಕಥೆಗಳಿವೆ. ಕೊನೆಯಲ್ಲಿ ಒಂದು ಪು: ದ ಅರ್ಥಕೋಶ ಇದೆ.

೬೦೧. ಚಿತ್ರಕಲ್ಲು ಮದಕರಿ

ಸಂ.ಕರಾಕೃ; ಪ್ರ: ಜನಪದ ಅಕ್ಯಾಡೆಮಿ, ಕದಂಬ, ಕಾರ್ಡುರೋಡ್, ಇಂಡಸ್ಟ್ರಿಯಲ್ ಎಸ್ಟೇಟ್, ರಾಜಾಜಿನಗರ ಬೆಂಗಳೂರು–೧೦; ಮೊ.ಮು: ೧೯೭೫; ಪು: ೧೯೫; ಕ್ರೌನ್ ೧/೮

ಜನಪದ ಗೀತೆಗಳ ಸಂಗ್ರಹ ಎಂಬ ಅಡಿಬರಹ ಇದೆ. ಒಟ್ಟು ೩೯ ಶೀರ್ಷಿಕೆಗಳಿವೆ. ಆಯಾ ಹಾಡಿನ ಪ್ರಾರಂಭದಲ್ಲೆ ಹಾಡಿದವರ ವಿವರಗಳನ್ನು ನೀಡಲಾಗಿದೆ. ಕೆಲವು ಪೋಟೋಗಳೂ ಕೆಲವು ರೇಖಾಚಿತ್ರಗಳೂ ಇವೆ.

೬೦೨. ಚಿತ್ರಕೇತು

ಸಂ: ಸೋಮಶೇಖರ ಇಮ್ರಾಪುರ; ಪ್ರ: ಚೇಯನಾ ಪ್ರಕಾಶನ, ನಿರ್ಮಲನಗರ, ಧಾರವಾಡ; ಮೊ.ಮು.೨೦೦೦; ಪು: ೧೮+೧೮೨=೨೦೦; ಕ್ರೌನ್ ೧/೮

ಮೂಡಲಪಾಯ ಬಯಲಾಟ ಎಂಬ ಅಡಿಬರಹ ಇದೆ. ಹಾಡುಗಳ ಸಂಖ್ಯೆ ತುಂಬ ಕಡಿಮೆ ಇದೆ. ಪ್ರಸ್ತಾವನೆ ಇದೆ.

೬೦೩. ಚಿತ್ರದುರ್ಗ ಜಿಲ್ಲೆಯ ಜನಪದ ಕಥೆಗಳು

ಸಂ: ಜಿ.ವಿಶ್ವೇಶ್ವರಪ್ಪ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೊ.ಮು: ೧೯೮೩; ಪು: ೧೨+೪೦೦=೪೧೨; ಡೆಮ್ಮಿ ೧/೮

೧೬ ಜನಪದ ಕಥೆಗಳ ಸಂಕಲನ: ೧.ರಸ್ತಾಳಿರಾಜ ೨.ಸೀಲಾವತಿ ೩.ರಾಜಂಸ–ಪರಾಂಸ ೪.ನೀರಾಂಜ್ಗೊಮಾರ ೫.ದಾನಪಲ್ಕ್ ರಾಜ್ನಮಗಾ ಸುರೇಕಾಂತ ೬.ನೀರಾಂಜ್ಗೊಮಾರ ೬.ಕಪ್ಗೊರ್ಳ–ಸಿಂತಾಮಣಿ–ನಾಗಮಣಿ–ಸೂಡಾಮಣಿ ೭.ಸತ್ಯದ ನೀಲಗಂಗವ್ವ ೮.ಧೂಳಾವತೀ ರಾಜ ೯.ಗುರುದೇವಿ–ಸಿವಾಸಿಣಿ ೧೦.ಬುಗುಣೆ ಹೂವು ೧೧.ನಾಗೇಂದ್ರ, ೧೨.ಆನಂದಕುಮಾರ ೧೩.ಆನಂದ ಕಲ್ಯಾಣಿ ೧೪.ರಾಜಾಚಂದ್ರವತೀ–ರಾಜಾರಣಧೀರ ೧೫.ಸುರೇಕಾಂತ–ಕುರೆ ಕಥೆ ೧೬.ಬಸ್ರಾಜ ಹುಲಿರಾಜ. ಹಾ.ಮಾ.ನಾಯಕ ಅವರ ಮುನ್ನುಡಿ, ಜೀ.ಶಂ.ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಕೊನೆಯಲ್ಲಿ ಅರ್ಥಕೋಶ, ಸಂಗ್ರಹವಿವರ ಇವೆ.

೬೦೪. ಚಿತ್ರದುರ್ಗ ಜಿಲ್ಲೆಯ ಜನಪದ ಕಲಾವಿದರು

ಲೇ.ಚಿಕ್ಕಣ್ಣ ಯಣ್ಣೆಕಟ್ಟೆ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,ಬೆಂಗಳೂರು–೦೨; ಮೊ.ಮು: ೨೦೦೮; ೧೪+೧೩೬=೧೫೦; ಡೆಮ್ಮಿ ೧/೮

ಚಿತ್ರದುರ್ಗ ಜಿಲ್ಲೆಯ ೬೫ ಕಲಾವಿದರನ್ನು ಪರಿಚಯಿಸಿಕೊಡುವ ಗ್ರಂಥ: ತೋಪಮ್ಮ, ಹೆಂಜಮ್ಮ, ಹನುಮಜ್ಜಿ, ಸಿರಿಯಜ್ಜಿ, ಮಾರಪ್ಪ, ಇಕ್ಕನೂರು ನಿಂಗಜ್ಜ, ಓಬಳವ್ವ, ಆಸಾದಿ ಹನುಮಂತಪ್ಪ, ಬೋವಿ ಜಯಮ್ಮ, ಕೋಲಾಟದ ಚಿತ್ರಯ್ಯ, ಪೆನ್ನಪ್ಪ, ಚನ್ನಬಸಪ್ಪ, ಈರಬಡಪ್ಪ, ತೊರೆ ಸಾಲಪ್ಪ, ಸಣ್ಣನರಸಿಂಹಪ್ಪ, ಶಾಂತಮ್ಮ, ನೀಲಪ್ಪ, ಬಂಗಾರಮ್ಮ, ಗಿಡ್ಡಜ್ಜ, ಗುರುವಯ್ಯ ಒಡೆಯರ್, ಸುಡುಗಾಡಮ್ಮ, ಹನುಮಂತಪ್ಪ, ಚಿನ್ನಮ್ಮ, ವೀರಭದ್ರಯ್ಯ, ಜಿ. ಶಿವಪ್ಪ, ತಮ್ಮಣ್ಣ, ತಿಪ್ಪಮ್ಮ, ದೊಡ್ಡಕರಿಯಪ್ಪ, ಮಳಲಿ ಈರಮ್ಮ, ಈರಣ್ಣ, ಲಕ್ಷ್ಮಣ, ಗಂಗಾಧರಪ್ಪ, ಸಕ್ಕರ ನಿಂಗಜ್ಜಿ, ಗೋವಿಂದಪ್ಪ, ಹಾವಿನಪ್ಪ, ಕೆ. ರಾಮಚಂದ್ರ, ಘನಿಸಾಬ್, ಬಿ.ಇ. ತಿಪ್ಪೇಸ್ವಾಮಿ, ಗೋನೂರು ಬೋರಣ್ಣ, ವೆಂಕಟೇಶ್, ದೊಡ್ಡತಿಮ್ಮಯ, ಮಹಾಲಿಂಗಪ್ಪ, ಗಾದೀರಯ್ಯ, ಕೆಂಚಮ್ಮ, ಕಲಮರಹಳ್ಳಿ ಎತ್ತಪ್ಪ, ಹೆಳವರ ಗೋವಿಂದಪ್ಪ, ನಿಂಗಜ್ಜಿ, ಮಲ್ಲಪ್ಪ, ಪಾರಿಬಾಯಿ, ತಿಪ್ಪೇಸ್ವಾಮಿ, ಮಹದೇವಮ್ಮ, ಕೆಂಚಮ್ಮ, ಕಮಲಮ್ಮ, ರುದ್ರಪ್ಪ, ರಾಮಚಂದ್ರ ನಾಯಕ, ಗಂಗಮ್ಮ, ವಾಜಿದ್, ಎಲ್. ಕೃಷ್ಣಪ್ಪ, ತಿಪ್ಪನಾಯಕ, ಕೆಂಚಜ್ಜಿ, ಬೊಮ್ಮಲಿಂಗಪ್ಪ, ಕೊಟ್ರಪ್ಪ, ಶರಣಯ್ಯ, ಹೆಚ್. ರಂಗಸ್ವಾಮಿ, ಭಾಗವತ ನಾಗಪ್ಪ.

೬೦೫. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು

ಲೇ: ವಿರೂಪಾಕ್ಷಿ ಪೂಜಾರಹಳ್ಳಿ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು. ೨೦೦೨; ಪುಟ ೧೬+೨೫೮=೨೭೪; ಡಿಮ್ಮೈ ೧/೮

ಮ್ಯಾಸಬೇಡರ ಮೌಖಿಕ ಚರಿತ್ರೆ ಮತ್ತು ಸಂಸ್ಕೃತಿ ಅಧ್ಯಯನ ಎಂಬ ಅಡಿಬರಹ ಇದೆ. ಪಿಎಚ್.ಡಿ. ಮಹಾಪ್ರಬಂಧ. ಎಂಟು ಅಧ್ಯಾಯಗಳಿವೆ: ೧.ಪ್ರಸ್ತಾವನೆ ೨.ಬುಡಕಟ್ಟುಗಳ ಪರಿಚಯ ೩.ವೀರರು: ತಾತ್ವಿಕ ಚಿಂತನೆ ೪.ಬೇಡ-ನಾಯಕ ವೀರರ ಆರಾಧನಾ ಕ್ಷೇತ್ರಗಳು ೫.ಮ್ಯಾಸನಾಯಕ ಪರಂಪರೆಯಲ್ಲಿ ಬುಡಕಟ್ಟು ವೀರರು ೬.ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು ೭.ಬುಡಕಟ್ಟು ವೀರರ ಧಾರ್ಮಿಕ ಪಂಥ ಮತ್ತು ಸಾಂಸ್ಕೃತಿಕ ಪರಂಪರೆ ೮.ಸಮಾರೋಪ.

೬೦೬. ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ

ಲೇ: ಎಂ.ಜಿ. ಈಶ್ವರಪ್ಪ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮; ಮೊ.ಮು: ೧೯೯೫; ಪು: ೮+೩೫೬=೩೬೪; ಡಿಮ್ಮೈ ೧/೮

ಪಿಎಚ್.ಡಿ. ಮಹಾಪ್ರಬಂಧ. ಒಂಬತ್ತು ಅಧ್ಯಾಯಗಳಿವೆ: ೧.ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ೨.ವ್ಯವಸಾಯದ ಉಗಮ ಮತ್ತು ಬೆಳವಣಿಗೆ ೩.ಕರ್ನಾಟಕದಲ್ಲಿ ವ್ಯವಸಾಯ ಸಂಬಂಧಿ ಉಲ್ಲೇಖಗಳು ಮತ್ತು ಗ್ರಂಥಗಳು ೪.ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ೫.ಜಿಲ್ಲೆಯ ಮಳೆ ಜಾನಪದ ೬.ಖುಷ್ಕಿ ವ್ಯವಸಾಯದ ಬೆಳೆಗಳು ೭.ತರಿ ಮತ್ತು ಬಾಗಾಯ್ತು ಬೆಳೆಗಳು ೮.ವ್ಯವಸಾಯದ ಸಾಮಾನ್ಯ ವಿಷಯಗಳು ೯.ಉಪಸಂಹಾರ. ಅನುಬಂಧದಲ್ಲಿ, ಪ್ರಾದೇಶಿಕ ಪದಗಳ ಅರ್ಥಸೂಚಿ, ಆಯ್ದ ಗ್ರಂಥಸೂಚಿ ಇವೆ. ಒಳಗೆ ಅಲ್ಲಲ್ಲಿ ಕೃಷಿ. ಉಪಕರಣಗಳ ರೇಖಾಚಿತ್ರಗಳೂ ಫೋಟೋಗಳೂ ಇವೆ.

೬೦೭. ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು

ಸಂ: ಮೈಲಹಳ್ಳಿ ರೇವಣ್ಣ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು. ೧೯೮೪; ಪು: ೧೦+೩೦೮=೩೧೮; ಡಿಮ್ಮೈ ೧/೮

ಎಂಟು ಕಾವ್ಯಗಳ ಸಂಕಲನ: ೧.ಕಾಳಿಂಗರಾಯ ೨.ಗುಣಸಾಗರಿ ೩.ಯೋಗಿ ನಾರಂದ ೪.ಭೂಮಿಗೆ ಗೌರಮ್ಮ ಇಳಿದಳಾಗ ೫.ಶಾನಯ್ಯ ೬.ಅರ್ಜುನ ರಾಯ ೭.ದ್ರೌಪದಿ ೮.ಸುಭದ್ರ. ಹಾ.ಮಾ.ನಾಯಕ ಅವರ ಮುನ್ನುಡಿ, ಜೀ.ಶಂ. ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ ಅರ್ಥಕೋಶ, ಟಿಪ್ಪಣಿಗಳು, ಸಂಗ್ರಹವಿವರ, ಇವೆ.

೬೦೮. ಚಿನ್ನದ ಕದರ್ಥಾಂಗೆ ಸಲಹಿನಿ

ಸಂ: ಗುಂಡ್ಮಿ ಚಂದ್ರಶೇಖರ: ಐತಾಳ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೧೮; ಮೊ.ಮು: ೧೯೮೨; ಪು: ೩೨+೧೦೪=೧೩೬; ಡಿಮ್ಮೈ ೧/೮

ಹದಿಮೂರು ಕಾವ್ಯಗಳ ಸಂಕಲನ: ೧.ಚಿನ್ನದ ಕದರ್ಥಾಂಗೆ ಸಲಹಿನಿ ೨.ರಾಯ ನಿನ್ಹಂಗು ನನಗೇನು ೩.ಬಡನಾಡಿದ್ ಪಾನಿ ಮರಿಲಾರಿ ೪.ಗಿಂಡಿಲ್ ತುಂಬಿದಳು ನೊರಿಹಾಲ ೫.ಮಡದಿಯು ಮುಸುಕ ತೆಗುವಳು ೬.ಬೆಳ್ಳು ನೊಂದಿತು ಬಿಡುಕೈಯ ೭.ಇದ್ದ ಮರ್‍ಯಾದಿನ್ ಕಳ್ಕಂಡ ೮.ಒಕ್ಕಿತು ನನ್ನ ಒಡಲುರಿ ೯.ತೋಳ ಬೀಸಿದರೆ ಪರಿಮಳ ೧೦.ಇಲ್ಲಿ ಹೇಳಿದ ಹಾಡು ದಿಲ್ಲಿಗೂ ಕೇಂಡಾವು ೧೧.ಕಾಸಿಗ್ಹೋದಷ್ಟು ಫಲುಬುಕ್ಕ್ ೧೨.ಮುತ್ತಿನ್ ಚೆಂಡಿಟ್ಟು ಕರೆದಳು ೧೩.ರಾಮಾಯಣ ಮಹಾಭಾರತ. ಹಂಪ ನಾಗರಾಜಯ್ಯ ಅವರ ಮುನ್ನುಡಿ, ಕೊನೆಯಲ್ಲಿ, ಶಬ್ದಕೋಶ, ಹಾಡು ಹೇಳಿದವರು ಇವೆ.

೬೦೯. ಚಿನ್ನದ ಕಳಶ

ಲೇ: ರಾ. ಲಕ್ಷ್ಮೀನಾರಾಯಣ; ಪ್ರ: ಗಿರೀಶ ಪ್ರಕಾಶನ, ೪೮೦, ಹೊಸಮನೆ ರಸ್ತೆ, ಚಿಕ್ಕಮಗಳೂರು; ಮೊ.ಮು: ೧೯೭೯; ಪು: ೧೦+೧೦೬=೧೧೬; ಕ್ರೌನ್ ೧/೮

ಚೀಣಾದ ಜನಪದ ಕಥೆಗಳು ಎಂಬ ಅಡಿಬರಹ ಇದೆ. ಹತ್ತು ಕಥೆಗಳಿವೆ: ೧.ಚಿನ್ನದ ಕಲಶ (ಟಿಬೇಟಿಯನ್) ೨.ಚತುರನಾದ ರೈತ (ಥಾಯ್) ೩.ಬೆಟ್ಟದ ಹುಡುಗ (ಮಂಗೋಲ್) ೪.ಸಾಹಸಿ ಸಿಂಗ್ರ (ಯೀ) ೫.ಬುದ್ಧಿವಂತ ಹೆಂಡತಿ (ಬೇವೂರ್) ೬.ಮಾಯದ ಕುಂಚ (ಹಾನ್) ೭.ಯಮನ ಸೋಲು (ಮಂಗೋಲ್) ೮.ದುರಾಶೆಯ ಫಲ (ಚಾಂಗ್) ೯.ಗುರುವಿಗೆ ತಿರುಮಂತ್ರ (ಹಾನ್) ೧೦.ಇಬ್ಬರು ಸೋದರರು (ತುಂಗ್). ಅ.ರಾ. ಮಿತ್ರ ಅವರ ಮುನ್ನುಡಿ ಇದೆ.

೬೧೦. ಚಿನ್ನದ ತುಪ್ಪಳು

ಸಂ: ಪಿ.ಕೆ. ರಾಜಶೇಖರ; ಪ್ರ: ಸುನೀಲ್ ಪ್ರಕಾಶನ, ೯೦೭(ಮಹಡಿ), ೩ನೇ ಮೈನ್, ನ್ಯೂ ಕಾಂತರಾಜ ಅರಸ್ ರಸ್ತೆ, ಕುವೆಂಪುನಗರ, ಮೈಸೂರು–೫೭೦ ೦೦೯; ಮೊ.ಮು.೨೦೦೦; ಪು: ೪೭; ಕ್ರೌನ್ ೧/೮

ಜಾನಪದ ಕಥೆಗಳು ಎಂಬ ಅಡಿಬರಹ ಇದೆ. ಗ್ರೀಕ್ ಪುರಾಣದಿಂದ ಎತ್ತಿಕೊಂಡ ಕಥೆ ಎಂಬ ಸುಳಿವೂ ಇದೆ. ಎಂಟು ಅಧ್ಯಾಯಗಳಿವೆ: ೧.ಹೇಗೆ ತಾನೇ ರಾಜನಾಗಬಲ್ಲೆ? ೨.ಒಂಟಿ ಪಾದರಕ್ಷೆಯವನು ೩.ಚಿನ್ನದ ತುಪ್ಪಳಿನ ಟಗರು ೪.ಆರ್ಗೋ ಹಡಗಿನ ಪ್ರಯಾಣಿಕರು ೫.ಸಿಂಪ್ಲೆಗೇಡ್ಸ್ ಇಬ್ಬಂಡೆಗಳು ೬.ಮಾಟಗಾತಿ ಮೀಡಿಯಾ ೭.ಜಯಶೀಲ ಜೇಸನ್ ೮.ಅಪೂರ್ವಕಾಂತಿಯ ಚಿನ್ನದ ತುಪ್ಪಳು. ಅಲ್ಲಲ್ಲಿ ರೇಖಾಚಿತ್ರಗಳಿವೆ.

೬೧೧. ಚಿನ್ನದ ದೋಸೆ ಮತ್ತು ಇತರ ಕಥೆಗಳು

ಬರೆದವರು: ಕರ್ಣಾಟಕ ಸಂಘದ ಸದಸ್ಯರು, ಸಂ: ಜಿ.ಪಿ. ರಾಜರತ್ನಂ; ಪ್ರ: ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜ್, ಬೆಂಗಳೂರು; ಮೊ.ಮು. ೧೯೫೩, ಎ.ಮು. ೧೯೬೪; ಪು: ೩೨; ಕ್ರೌನ್ ೧/೮

ಕೇಳಿದ ಎಂಟು ಜನಪದ ಕಥೆಗಳನ್ನು ಸರಳವಾಗಿ ಬರೆಯಲಾಗಿದೆ. ಚಿತ್ರದುರ್ಗ ಜಿಲ್ಲೆಯ ಅಶೋಕ ಸಿದ್ಧಾಪುರ, ಬೆಳಗಟ್ಟ, ಹೊಳಲ್ಕೆರೆ ತಾಲೂಕಿನ ಸಿರಾಪನಹಳ್ಳಿ, ನಾಗಮಂಗಲ, ಚಿಕ್ಕಬಳ್ಳಾಪುರ, ಮೈಸೂರು ಮುಂತಾದ ಪ್ರದೇಶಗಳಲ್ಲಿ ಕೇಳಿದ ಕಥೆಗಳಿವು. ಎರಡನೆಯ ಮುದ್ರಣದಲ್ಲಿ ಎಸ್.ಆರ್. ಸ್ವಾಮಿ ಅವರು ಬರೆದ ಎಂಟು ರೇಖಾಚಿತ್ರಗಳನ್ನು ಸೇರಿಸಲಾಗಿದೆ.

೬೧೨. ಚಿನ್ನದ ಮಲ್ಲಿಗೆ

ಸಂ: ವಸಂತಿ ಚಂದ್ರಶೇಖರ್; ಪ್ರ; ಜನಪದ ಅಕಾಡೆಮಿ, ಕದಂಬ, ಕಾರ್ಡ್‌ರಸ್ತೆ, ರಾಜಾಜಿನಗರ, ಬೆಂಗಳೂರು–೫೬೦ ೦೧೦; ಮೊ.ಮು; ೧೯೮೩; ಪು: ೪+೧೦೧=೧೦೫; ಕ್ರೌನ್ ೧/೮

ಅಜ್ಜಿ ಹೇಳಿದ ಕಥೆಗಳು ಎಂಬ ಅಡಿಬರಹ ಇದೆ. ಹದಿನೇಳು ಕಥೆಗಳಿವೆ: ೧.ದುರ್ಗಸೇನ ೨.ಚೆಲುವೆ ೩.ಮಲಮಗಳು ೪.ಚಿನ್ನದಮಲ್ಲಿಗೆ ೫.ಮಂಗಳೆ ಹೂವಾದಳು ೬.ಬಂಗಾರದ ಕೂದಲು ೭.ಹರಿವ ಚಿನ್ನದ ನೀರು ೮.ಅವಳಿಮಕ್ಕಳು ೯.ಚಿನ್ನದಹಣ್ಣು ೧೦.ಸರ್ಪಮತ್ಸರ ೧೧.ಕುಶಾಲವತಿ ೧೨.ಅದೃಷ್ಟ ೧೩.ಕಮಲದ ಮೊಗ್ಗು ೧೪.ಮುತ್ತು ರತ್ನ ೧೫.ಸೂರ್ಯನ ವರ ೧೬.ತಂಗಿ ೧೭.ಕೂಗುವ ಹಣ್ಣು

೬೧೩. ಚಿಪ್ಪಿನೊಳಗಿನ ಜೀವ

ಸಂ: ಗಣಪತಿ ದಿವಾಣ; ಪ್ರ: ರವಿರಾಜ ದಿವ್ಯಾ ದಿವಾಣ ಪ್ರಕಾಶನ, ಅಂಚೆ: ಎಡನಾಡು, ಕುಂಬಳೆ–೬೭೧ ೩೨೧; ಮೊ.ಮು. ೧೯೯೮; ಪು: ೨೪+೮೦=೧೦೪; ಡಿಮ್ಮೈ ೧/೮

ಒಗಟುಗಳ ಸಂಕಲನ ಎಂಬ ಅಡಿಬರಹ ಇದೆ. ೩೪೦ ಸ್ವರಚಿತ ಒಗಟುಗಳ ಸಂಕಲನ. ಕಯ್ಯಾರ ಕಿಞ್ಞಣ್ಣ ರೈ ಅವರ ಮುನ್ನುಡಿ ಇದೆ.

೬೧೪. ಚಿಲಿಪಿಲಿ

ಸಂ: ಮೇಟಿಕೆರೆ ಹಿರಿಯಣ್ಣ; ಪ್ರ: ಹಾಸನ ಜಿಲ್ಲಾ ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜು ಪ್ರಾಂಶುಪಾಲರ ಸಂಘ (ರಿ), ಹಾಸನ; ಮೊ.ಮು.೨೦೦೦; ಪು: ೮+೧೮೪=೧೯೨; ಡಿಮ್ಮೈ ೧/೮

ಎರಡು ಭಾಗಗಳಿವೆ: ೧.ಕನ್ನಡ ಜನಪದ ಶಿಶುಪ್ರಾಸಗಳು: ಈ ಭಾಗದಲ್ಲಿ ೪೬೬ ಶಿಶುಪ್ರಾಸಗಳಿವೆ. ೨.ಜನಪದ ಉರ್ದು ಶಿಶುಪ್ರಾಸಗಳು: ಈ ಭಾಗದಲ್ಲಿ ೭೮

ಶಿಶುಪ್ರಾಸಗಳಿವೆ; ಉರ್ದೂ ಶಿಶುಪ್ರಾಸದ ಜೊತೆಯಲ್ಲೆ ಕನ್ನಡಾನುವಾದವನ್ನೂ ನೀಡಲಾಗಿದೆ. ಹೀಗೆ ಈ ಗ್ರಂಥದಲ್ಲಿ ಒಟ್ಟು ೫೪೪ ಶಿಶುಪ್ರಾಸಗಳಿವೆ. ಹಾರುತಿದೆ ಹಕ್ಕಿ ಹಿಡಿ ಅದರ ಕಿವಿ ಎಂಬ ಹಿ.ಶಿ.ರಾಮಚಂದ್ರೇಗೌಡ ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ಹಂಗಂದ್ರೇನು ಹಿಂಗಂದ್ರೇನು ಎಂಬ ಶೀರ್ಷಿಕೆಯನ್ನುಳ್ಳ ಅರ್ಥಕೋಶ ಇವೆ.

೬೧೫. ಚೀನಾದ ಜನಪದ ಹಾಡುಗಳು

ಸಂ: ಕೆ.ಎನ್. ವಿಜಯಲಕ್ಷ್ಮಿ; ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಕರ್ನಾಟಕ; ಮೊ.ಮು. ೧೯೯೬, ಪು: ೧೪ + ೫೩ = ೬೭, ಡಿಮ್ಮೈ ೧/೮

ಚೀನಾ ದೇಶದ ೪೪ ಹಾಡುಗಳ ಅನುವಾದ ಕೃತಿ. ಕ್ರಿ. ಪೂ. ೫೪೪ ರಲ್ಲಿ ಈ ಹಾಡುಗಳು ಹಾಡಲ್ಪಡುತ್ತಿದ್ದುವು ಎಂಬ ಅಂಶವನ್ನು ಲೇಖಕಿ 'ಈ ಜನಪದ ಹಾಡುಗಳನ್ನು ಕುರಿತು' ಎಂಬ ತಮ್ಮ ಮಾತುಗಳಲ್ಲಿ ತಿಳಿಸಿದ್ದಾರೆ.

೬೧೬. ಚುಂಚನಗಿರಿ (ನೆನಪಿನ ಸಂಚಿಕೆ)

ಪ್ರ.ಸಂ: ಹಾ.ಮಾ.ನಾಯಕ, ಸಂ: ಜೀ.ಶಂ. ಪರಮಶಿವಯ್ಯ, ಸಿ.ಪಿ. ಕೃಷ್ಣಕುಮಾರ್; ಪ್ರ: ಸಮ್ಮೇಳನದ ಸ್ವಾಗತ ಸಮಿತಿ, ಮೂರನೆಯ ಜಾನಪದ ಸಮ್ಮೇಳನ, ನಾಗಮಂಗಲ, ಮೊ.ಮು.೧೯೭೧, ಪು: ೧೪೨, ಡಿಮ್ಮೈ ೧/೮

ಈ ಸಂಚಿಕೆಯಲ್ಲಿ ಒಟ್ಟು ೪೨ ಬರಹಗಳಿವೆ. **ನೆನಪಿನಿಂದ:** ಕಾಳ್ಗೋರಿ–ಕಪ್ಗೋರಿ – ಸಿ.ಪಿ.ಕೆ., **ಜನಪದ ಗದ್ಯಕಥನ–ಕಟ್ಟು ಕತೆಗಳು:** ಆಳಿಗೆ ಸಾವಿರ, ಆಯುಧಕ್ಕೆ ಸಾವಿರ – ಸದಾಶಿವ ಎಣ್ಣೆಹೊಳೆ, ಕೋತಿ ಪರಸಂಗ – ಹೊರೆಯಾಲ ದೊರೆಸ್ವಾಮಿ, ಕೀಲುಕುದುರೆ – ಕ್ಯಾತನಹಳ್ಳಿ ರಾಮಣ್ಣ, ಕುನ್ನಿಮಕ್ಳು – ಎನ್.ಆರ್. ನಾಯಕ್, **ಐತಿಹ್ಯಗಳು:** ವೈದ್ಯೇಶ್ವರ ಇತ್ಯಾದಿ – ಪಿ.ಕೆ. ರಾಜಶೇಖರ, ತಲಕಾಡು –ಎಂ.ಎಸ್. ಶಾರದಮ್ಮ, ಮೊಣಕಾಲ್ಮೂರು – ಹ.ನಾ. ಮಂಗಳೆ, ಕೋಣನ ಕಿಂಡಿ – ಸರಸ್ವತಿ, **ಪುರಾಣಗಳು:** ಅಪ್ಪನ ಪಾದ – ಸಿ. ದೇವಮ್ಮ, ಲಕ್ಷ್ಮಣ ತೀರ್ಥ – ಎಸ್. ಮಂಜುಳಾ, ಅಂಬುತೀರ್ಥ – ಕೆ. ಶ್ರೀಕಂಠ, **ಜನಪದ ಗೀತೆಗಳು, ಲಾವಣಿಗಳು:** ಮಾರಮ್ಮನ ಹಾಡು – ಜಿ.ಪಿ. ವಿಶ್ವನಾಥಯ್ಯ, ಕೆಂಪೇಗೌಡ–ಡಿ.ಕೆ. ಈರೇಗೌಡ, ಚಳ್ಳೂರು ಬಣಜಿಗ – ಡಿ.ಕೆ. ಈರೇಗೌಡ, ಕೋಗಿಲೆ– ಡಿ.ಕೆ. ಈರೇಗೌಡ, ಭಾಳ್‌ಭಾಳ– ಸಿಂಪಿ ಲಿಂಗಣ್ಣ, ಏನಾದ? – ಸಿಂಪಿ ಲಿಂಗಣ್ಣ, ಕೃಷ್ಣ ಹುಟ್ಟಿದಾನೊ ಎಂಟನೆ ಅವತಾರಕ – ಸಿಂಪಿ ಲಿಂಗಣ್ಣ, ಕುಸುಮ ಬಾಲೆ – ರಾಗೌ, ಜೋಕುಮಾರನ ಹಾಡುಗಳು – ಕೆ. ವಿರೂಪಾಕ್ಷಗೌಡ, ಸತ್ಸಂಗದ ಹಾಡುಗಳು – ಕೆ. ವಿರೂಪಾಕ್ಷಗೌಡ, ಬಯಲುಸೀಮೆ ಗೌಡನ ಮಗಳು – ಕಾಳೇಗೌಡ ನಾಗವಾರ, ಉತ್ತರದೇವಿ ಹಾಡು – ಎಂ.ಜಿ. ಈಶ್ವರಪ್ಪ, ಮಾದೇಶ್ವರನ ಪದಗಳು – ಬಿ.ಎಂ. ನಂಜಯ್ಯ, ನಾಗರಪಂಚಮಿ– ಪಿ.ಆರ್. ತಿಪ್ಪೇಸ್ವಾಮಿ, ಸೋದರಮಾವ–ಕೆ.ಟಿ. ವೀರಪ್ಪ, ಇತರ ಶಿಶುಪ್ರಾಸಗಳು – ಟಿ.ಎಸ್. ರಾಜಪ್ಪ, ಗಾದೆಗಳು – ಸುಧಾಕರ, ಒಗಟುಗಳು–

ಎಂ.ಜಿ. ಈಶ್ವರಪ್ಪ, ನಂಬಿಕೆಗಳು – ಜಿ.ವಿ.ಡಿ., ಎನ್.ಎಸ್. ತಿಮ್ಮೇಗೌಡ, ಬೈಗುಳಗಳು – ಬೀಡನಹಳ್ಳಿ ಚೌಡೇಗೌಡ. ಯಕ್ಷಗಾನ: ತೆಂಕುತಿಟ್ಟು ಬಡಗುತಿಟ್ಟು – ಟಿ. ಕೇಶವಭಟ್ಟ, ಯಕ್ಷಗಾನದ ವೇಷಭೂಷಣಗಳು – ಡಿ.ಕೆ. ರಾಜೇಂದ್ರ, ಮಲೆನಾಡಿನ ಬೇಸಾಯದ ಕೆಲವು ಸಂಪ್ರದಾಯಗಳು – ಎಂ.ಸಿ. ವಸಂತಕುಮಾರ್, ಹೆಳವರ ಮೂಲ–ಎಚ್.ಎಲ್. ನಾಗೇಗೌಡ, ಜನಪದ ವೈದ್ಯ – ತೀ.ನಂ. ಶಂಕರನಾರಾಯಣ, ಒಕ್ಕಲಿಗರಲ್ಲಿ ಮದುವೆ – ಹ.ಕ. ರಾಜೇಗೌಡ, ಹವ್ವಳ್ಳಿಯ ಸುಗ್ಗಿಹಬ್ಬ – ಕೆ. ಶ್ರೀಕಂಠ, ಹಕ್ಕಿ ಬಿಕ್ಕಿ ಜನಾಂಗ – ಹ.ಪು. ರಾಜಶೇಖರ ಶೆಟ್ಟಿ, ಲಗ್ಗೆ ಆಟ–ಕೆ. ಶ್ರೀಕಂಠ. ಪ್ರಾರಂಭದಲ್ಲಿ ಸಂಪಾದಕೀಯ ಹಾಗೂ ಸಮ್ಮೇಳನಕ್ಕೆ ಸಂಬಂಧಿಸಿದ ವ್ಯಕ್ತಿಗಳ ಫೋಟೋಗಳಿವೆ. ಕೊನೆಯಲ್ಲಿ ಅನುಬಂಧ: ವಕ್ತೃ ವಿವರ ಇದೆ.

೬೧೭. ಚುಂಚನಗಿರಿ ಭೈರವೇಶ್ವರ

ಲೇ: ಪಿ.ಕೆ. ರಾಜಶೇಖರ; ಪ್ರ: ಹೊನ್ನಾರು ಜನಪದ ಗಾಯಕರು, ಮೈಸೂರು; ಮೊ.ಮು. ೧೯೮೩, ಪು.೧೬+೪೮+೬೪; ಕ್ರೌನ್ ೧/೮

ಕಥನಕಾವ್ಯ ಹೆಸರೇ ಹೇಳುವಂತೆ ಚುಂಚನಗಿರಿ ಭೈರವೇಶ್ವರನನ್ನು ಕುರಿತ ೪೩ ಪು: ಗಳ ಕಾವ್ಯ ಪ್ರಸ್ತಾವನೆಯಲ್ಲಿ ಚುಂಚನಗಿರಿ ಕ್ಷೇತ್ರದ ಗುರುಪರಂಪರೆಯನ್ನು ಪಟ್ಟಿ ಮಾಡಲಾಗಿದೆ. ಬೇರೆ ಬೇರೆ ಸಂಪ್ರದಾಯಗಳಲ್ಲಿ ದೊರೆಯುವ ಕಥಾರೂಪಗಳನ್ನು ನೀಡಲಾಗಿದೆ. ಕೊನೆಯಲ್ಲಿ ಎರಡು ಪು: ಗಳ ಅರ್ಥಕೋಶ; ಇದೆ.

೬೧೮. ಚುಕ್ಕೋಳ ಪದಗಳು

ಸಂ: ಡಾ.ಎಂ.ಎಸ್. ಲಠ್ಠೆ; ಪ್ರ: ಸತೀಶ ಪ್ರಕಾಶನ, ಕಲಬುರ್ಗಿ; ಮೊ.ಮು.೧೯೭೬; ಪು: ೩೪+೧೨೮ = ೧೬೨; ಕ್ರೌನ್ ೧/೮

ಇದೊಂದು ಶಿಶುಪ್ರಾಸಗಳ ಸಂಕಲನ: ಮಕ್ಕಳ ಜನಪದ ಸಾಹಿತ್ಯ ಎಂಬ ಅಡಿಬರಹ ಇದೆ. ಸಂಗ್ರಹವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ: ೧.ಹುಡುಗಿಯರ ಪದಗಳು ೨.ಹುಡುಗರ ಪದಗಳು ೩.ಸಮ್ಮಿಶ್ರ ಹಾಡುಗಳು. ಮೂರೂ ಭಾಗಗಳನ್ನು ಉಪವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಪರಿವಿಡಿ ಆದ ಮೇಲೆ ಪದಗಳು ಪ್ರಾರಂಭವಾಗುವ ಮುಂಚೆ, ಶಿಶುಪ್ರಾಸಗಳ ರೂಪದಲ್ಲಿರುವ ನಾಲ್ಕು ಸ್ತುತಿಗೀತೆಗಳನ್ನು ನೀಡಲಾಗಿದೆ. ಬೆಟಗೇರಿ ಕೃಷ್ಣಶರ್ಮ ಅವರ ಎಂಟು ಪು: ಗಳ ಮುನ್ನುಡಿ ಇದೆ. ಲೇಖಕರ ಪ್ರಸ್ತಾವನೆಯಲ್ಲಿ ಶಿಶುಪ್ರಾಸಗಳ ಬಗ್ಗೆ ಚರ್ಚೆ ಇದೆ. ಮತ್ತು ಇದರಲ್ಲಿ ೨೫ ಅಡಿಟಿಪ್ಪಣಿಗಳಿವೆ. ಕೊನೆಯಲ್ಲಿ ಅನುಬಂಧ ಇದೆ. ಇದರಲ್ಲಿ 'ಟಿಪ್ಪಣಿಗಳು' ಎಂಬ ಮೊದಲನೆಯ ಅನುಬಂಧದಲ್ಲಿ ಶಿಶುಪ್ರಾಸಗಳು ಬಳಕೆಯಾಗುವ ಕೆಲವು ಸಂದರ್ಭಗಳನ್ನೂ ಕೆಲವು ಆಟಗಳನ್ನೂ ವಿವರಿಸಲಾಗಿದೆ, ಶಬ್ದಾರ್ಥ ಎಂಬ ಅರ್ಥಕೋಶವಿದೆ. ಒಪ್ಪೋಲೆ ಇದೆ.

೬೧೯. ಚೆನ್ನದಾಸರ

ಲೇ: ಯಲ್ಲಪ್ಪ ಬಿ.ಹಿಮ್ಮಡಿ; ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–೫೬೦ ೦೦೨; ಮೊ.ಮು.೨೦೦೮; ಪು: ೩೪+೨೩೬=೨೭೦; ಡಿಮ್ಮೈ ೧/೮

ಹತ್ತು ಅಧ್ಯಾಯಗಳಿವೆ: ೧.ಪ್ರವೇಶ ೨.ಮೂಲ ಮತ್ತು ಪ್ರಸಾರ ೩.ಸ್ಥಳಾವರಣ ಮತ್ತು ಬ್ರಹ್ಮಾಂಡದ ಪರಿಕಲ್ಪನೆ ೪.ಬಂಧುತ್ವ ಮತ್ತು ವಿವಾಹ ೫.ಆರಾಧನೆ ಆಚರಣೆ ನಂಬಿಕೆಗಳು ೬.ಒಳಾಡಳಿತ ವ್ಯವಸ್ಥೆ ೭.ಆರ್ಥಿಕ ಜೀವನ ೮.ಸಾಹಿತ್ಯ ಮತ್ತು ಭಾಷೆ ೯.ಪ್ರದರ್ಶಕ ಕಲೆಗಳು ೧೦.ಸಮಸ್ಯೆ ಸಂಘಟನೆ ಪರಿಹಾರ. ಕೆ.ಎಂ. ಮೇತ್ರಿ ಅವರ ಪ್ರಸ್ತಾವನೆ ಇದೆ.

೬೨೦. ಚೆನ್ನಿಗ ಚೆಲುವಯ್ಯ

ಸಂ: ಕರಾಕೃ; ಪ್ರ: ಜನಪದ ಅಕಾಡೆಮಿ, 'ಕದಂಬ' ಕಾರ್ಡ್ ರಸ್ತೆ, ಇಂಡಸ್ಟ್ರಿಯಲ್ ಎಸ್ಟೇಟ್, ರಾಜಾಜಿನಗರ, ಬೆಂಗಳೂರು ೧೦; ಮೊದಲ ಮುದ್ರಣ ನಮೂದಿಸಿಲ್ಲ. ಎ.ಮು.: ೧೯೬೫, ಮೂ.ಮು: ೧೯೭೪; ಪು: ೧೪+೧೧೭=೧೩೧–೪=೧೨೭, ಕ್ರೌನ್ ೧/೮

ಶೀರ್ಷಿಕೆಯ ಅಡಿಯಲ್ಲಿ 'ಯದುಗಿರಿಯ ಚೆಲುವನಾರಾಯಣ ಸ್ವಾಮಿ ಹಾಗೂ ವರನಂದಿಯನ್ನು ಅಥವಾ ಬೀಬಿ ನಾಚ್ಚಿಯಾರ್‌ಗಳನ್ನು ಕುರಿತ ಕಥಾನಕ' ಎಂಬ ವಿವರಣೆಯಿದೆ. ಎಂ.ವಿ. ಸೀತರಾಮಯ್ಯ ಅವರ ಎಂಟು ಪು: ಗಳ 'ಮೆಚ್ಚುಗೆಯ ಮುನ್ನುಡಿ' ಇದೆ. ಕರಾಕೃ ಅವರನ್ನು ಪರಿಚಯಿಸಲು ಜೀ.ಶಂ. ಪರಮಶಿವಯ್ಯ ಅವರ ಬರೆದ 'ಪರಿಚಯ' ಎಂಬ ೧೨ ಪು: ಗಳ ಲೇಖನವಿದೆ. ಶ್ರೀ ಸ್ವಾಮಿ, ಬೆಂಗಳೂರು – ಎಂಬುವರು ಬರೆದ ೨೭ ಪು: ಗಳ 'ಬೀಬೀ ನಾಚ್ಚಿಯಾರ್' ಎಂಬ ಗದ್ಯ ಕಥೆ ಇದೆ. ೧೯೫೮ ನೆಯ ಡಿಸೆಂಬರ್ ತಿಂಗಳ 'ನವನೀತ್' ಮಾಸ ಪತ್ರಿಕೆಯಲ್ಲಿ ಡಾ.ಎಂ. ಕೆ. ಕಲ್ಯಾಣಸುಂದರಂ ಅವರು ಬರೆದ 'ಮುಸಲ್ಮಾನ್ ಮೀರಾ' ಎಂಬ ಲೇಖನವನ್ನು ಅನುವಾದ ಮಾಡಿ 'ಪುಸ್ತಕ ಪ್ರಪಂಚ' ಪತ್ರಿಕೆಯಲ್ಲಿ ಪ್ರಕಟಿಸಿದ ಜೀ.ಶಂ. ಪರಮಶಿವಯ್ಯ ಅವರ ಲೇಖನವನ್ನು ಇಲ್ಲಿ ಮುದ್ರಿಸಲಾಗಿದೆ. 'ಪ್ರಜಾಮತ' ಪತ್ರಿಕೆಯಲ್ಲಿ ಜಿ.ಟಿ. ಸಂಪತ್ಕುಮಾರಾಚಾರ್ ಅವರು ಬರೆದಿದ್ದ 'ಮೇಲುಕೋಟೆ ಚೆಲುವರಾಯಸ್ವಾಮಿ ಕುರಿತು...'ಎಂಬ ಲೇಖನವನ್ನು ಎತ್ತಿಕೊಳ್ಳಲಾಗಿದೆ. 'ಪ್ರಜಾವಾಣಿ'ಯಿಂದ ಎಸ್.ಕೆ. ರಾಮಚಂದ್ರರಾವ್ ಅವರ ಬರಹವನ್ನು ಇಲ್ಲಿ ಬಳಸಿಕೊಳ್ಳಲಾಗಿದೆ ಹಾಗೂ ಈ ಬರಹಕ್ಕೆ ಇಲ್ಲಿ ಶೀರ್ಷಿಕೆ ಇಲ್ಲ. ನಾಲ್ಕು ಪು: ಗಳ ಪೀಠಿಕೆ ಇದೆ. ಬರೆದವರ ಹೆಸರಿಲ್ಲ. ಕರಾಕೃ ಅವರೇ ಬರೆದ ಮೂರು ಪು: ಗಳ 'ಚೆಲುವಯ್ಯ ವರನಂದಿಯ ಕಥೆ' ಗದ್ಯದಲ್ಲಿದೆ. ಇಷ್ಟೆಲ್ಲ ಆದ ಮೇಲೆ ೬೫ನೇ ಪು: ದಿಂದ ೧೧೭ನೆಯ ಪು: ದವರೆಗೆ ೫೨ ಪು: ಗಳಷ್ಟು ತ್ರಿಪದಿಗಳಿವೆ. ೩೬ ರೇಖಾಚಿತ್ರಗಳಿವೆ.

೬೨೧. ಚೋರಬಸವೇಶ್ವರ ಚರಿತ್ರೆ

ನಮಗೆ ಲಭ್ಯವಾದ ಪ್ರತಿಯಲ್ಲಿ ಪ್ರಾರಂಭದ ಪುಟಗಳು ಇಲ್ಲ; ಕೊನೆಯ ಪುಟ ಸಂಖ್ಯೆ: ೧೫೮; ಡಿಮ್ಮೈ ೧/೧೨

ಇದೊಂದು ರಾಗ ತಾಳ ಛಂದೋ ಸಹಿತದ ಯಕ್ಷಗಾನ ಕಾವ್ಯವಾಗಿದೆ. ಅಕ್ಷರ ವಿನ್ಯಾಸ ಹಾಗೂ ಕಾಗದದ ಬಣ್ಣ ಹಾಗೂ ಶಿಥಿಲ ಸ್ಥಿತಿಯನ್ನು ಗಮನಿಸಿದರೆ ಈ ಗ್ರಂಥವು ೧೯೦೦ಕ್ಕಿಂತಲೂ ಹಿಂದೆ ಅಚ್ಚಾಗಿರುವಂತೆ ತೋರುತ್ತದೆ.

೬೨೨. ಚೌಡಕಿ ಪದಗಳು

ಪ್ರ.ಸಂ: ವೈ.ವೈ. ಬೆಟಗೆರಿ, ಸಹ ಸಂ: ಡಿ.ಬಿ. ಢಂಗ; ಪ್ರ: ಜೆ.ಬಿ. ಪಬ್ಲಿಕೇಶನ್, ಗದಗ; ಮೊ.ಮು. ೧೯೮೯; ಪು: ೮+೬೦=೬೮; ಕ್ರೌನ್ ೧/೮

ಜಾನಪದ ಹಾಡುಗಳು ಎಂಬ ಅಡಿಬರಹ ಇದೆ. ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ, ಜಾನಪದ ಶಬ್ದಾರ್ಥಗಳು ಇವೆ.

೬೨೩. ಚೌಡಿಕೆ ಕಾವ್ಯಗಳು

ಸಂ.: ನಂ. ನಾರಾಯಣಗೌಡ; ಪ್ರ: ಸಂಯುಕ್ತ ಪ್ರಕಾಶನ, ಮೈಸೂರು; ಮೊ.ಮು: ೧೯೭೪, ಪು: ೫೨+೨೪೦= ೨೯೨, ಡಿಮ್ಮೈ ೧/೮

ಚೌಡಿಕೆ ಸಂಪ್ರದಾಯದವರು ಹಾಡುವ ಏಳು ಕಾವ್ಯಗಳ ಸಂಕಲನ: ೧.ಎಲ್ಲಮ್ಮ–೧: ಎಲ್ಲಮ್ಮನ ಕಥೆ ೨.ಎಲ್ಲಮ್ಮ–೨: ಓರ್ಗಲ್ ರುದ್ರ ೩.ಸರ್ಜಪ್ಪ ನಾಯ್ಕ ೪.ಬಳ್ಳಾರಿ ತತ್ವ ೫.ಅಣ್ಣ ತಂಗಿ ೬.ಆನಂದ್ರತಿ ೭.ವಿಶ್ವಬ್ರಹ್ಮ. ೩೯ ಪು: ಗಳಷ್ಟು ದೀರ್ಘವಾದ ಪಿ.ಕೆ. ರಾಜಶೇಖರ ಅವರ ಸಂಶೋಧನಾತ್ಮಕ ಮುನ್ನುಡಿ, ಗಾಯಕ ಬಜಗೂರು ಎಲ್ಲಯ್ಯ ಅವರ ಪರಿಚಯ ಇದೆ. ಫೋಟೋ ಇದೆ. ಕೊನೆಯಲ್ಲಿ ಅರ್ಥಕೋಶ ಇದೆ.

೬೨೪. ಚೌಡಿಕೆ ಮೇಳ

ಲೇ: ಕ್ಯಾತನಹಳ್ಳಿ ರಾಮಣ್ಣ; ಪ್ರ: ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ –೫೭೭ ೪೫೧, ಶಿವಮೊಗ್ಗ ಜಿಲ್ಲೆ; ಮೊ.ಮು. ೨೦೦೪; ಪು: ೯+೬೦=೬೯; ಕ್ರೌನ್ ೧/೮

ಚೌಡಿಕೆ ಮೇಳವನ್ನು ಕುರಿತ ಒಂದು ಅಭ್ಯಾಸ. ಅನುಬಂಧದಲ್ಲಿ ಎಲ್ಲಮ್ಮ ಕಾವ್ಯ ಇದೆ. ಚೌಡಿಕೆ ಸಂಪ್ರದಾಯ ಇರುವ ಕರ್ನಾಟಕ ಭೂಭಾಗ ಗುರುತಿಸುವ ಹಾಗೂ ಬಾರ್ಕಿ ಚೌಡಿಕೆ, ಶ್ರುತಿ ಚೌಡಿಕೆಗಳ ಪಿ.ಆರ್. ತಿಪ್ಪೇಸ್ವಾಮಿ ಅವರ ರೇಖಾಚಿತ್ರಗಳಿವೆ.

೬೨೫. ಚೌಡಿಕೆಯವರು

ಲೇ: ಸಿ. ಕೆ. ಪರಶುರಾಮಯ್ಯ; ಪ್ರ: ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು–೫೬೦ ೦೦೯; ಮೊ.ಮು. ೧೯೮೪; ಪು: ೪೪; ಕ್ರೌನ್ ೧/೮

ಚೌಡಿಕೆ ಸಂಪ್ರದಾಯದ ಬಗ್ಗೆ ಒಂದು ಸ್ಥೂಲ ಅಧ್ಯಯನ. ಕಲಾವಿದರ ಫೋಟೋಗಳು, ಕೆಲವು ರೇಖಾಚಿತ್ರಗಳು ಇವೆ.

ಜ

೬೨೬. ಜಂಗಮ ಜಾನಪದ

ಲೇ: ಸಿ.ಕೆ. ನಾವಲಗಿ; ಪ್ರ: ಸಾಹಿತ್ಯ ಚಂದನ, ೪೦೨/೧೬, ೪ನೇ ಮುಖ್ಯರಸ್ತೆ, ೫೦ ಅಡಿರಸ್ತೆ, ಬನಶಂಕರಿ ೧ನೇ ಹಂತ ೨ನೇ ಘಟ್ಟ, ಬೆಂಗಳೂರು–೫೬೦ ೦೫೦; ಮೊ.ಮು: ೨೦೦೮; ಪು: ೧೪೪, ಡಿಮ್ಮೈ ೧/೮

ಹನ್ನೆರಡು ಲೇಖನಗಳ ಸಂಕಲನ: ೧.ಜಾಗತೀಕರಣ ಮತ್ತು ಜಾನಪದ ೨.ಜನಪದ ಸಾಹಿತ್ಯದ ವೈಚಾರಿಕ ನೆಲೆ ೩.ಕರ್ನಾಟಕ ಜನಪದ ರಂಗಭೂಮಿಯ ಇತಿಹಾಸ ೪.ನಾನು ಗ್ರಹಿಸಿದ ಜಾನಪದ ವಿದ್ವಾಂಸ– ಹಿಶಿರಾ ೫.ಜಾನಪದ ಸಂಶೋಧಕ ರಾಮೇಗೌಡ (ರಾಗೌ) ೬.ಜಾನಪದ ಜಂಗಮ ಪಿ.ಕೆ. ರಾಜಶೇಖರ ೭.ಜಾನಪದ ಪ್ರತಿಭೆ ಬಸವರಾಜ ಮಲಶೆಟ್ಟಿ ೮.ಭಾವಜೀವಿ ವೀರಣ್ಣ ರಾಜೂರ ೯.ಎಂ.ಎಸ್. ಲಟ್ಠೆ–ಒಂದು ಆತ್ಮೀಯ ನೆನಪು ೧೦.ಅಭಿಜಾತ ಗಾಯಕ ಬಾಳಪ್ಪ ಹುಕ್ಕೇರಿ ೧೧.ಪಾರಿಜಾತದ ಕೃಷ್ಣ–ಕೊರವಂಜಿ ನಾಗೇಂದ್ರ ಕಂಬಾರ ೧೨.ಮಕ್ಕಳ ಜನಪದ ಕ್ರೀಡೆಗಳು.

೬೨೭. ಜಂಬುನೇರ್ಲಣ್ಣು ಜಗ್ಗಿ ಬಿದ್ದಾವೆ

ಸಂ: ಮೈಲಹಳ್ಳಿ ರೇವಣ್ಣ; ಪ್ರ. ಎಸ್. ಆರ್.ಎ.ಎಮ್. ಎಚ್. ಪ್ರಕಾಶನ, ಕೋಟೇಶ್ವರ, ದ.ಕ; ಮೊ.ಮು: ೧೯೯೨; ಪು: ೨೭+೧೩೨=೧೫೯; ಡಿಮ್ಮೈ ೧/೮

೭೩೬ ಒಗಟುಗಳ ಸಂಕಲನ. ಐದು ಅನುಬಂಧಗಳಲ್ಲಿ ಒಟ್ಟು ೭೪ ಒಗಟುಗಳಿವೆ: ೧ ಗೀತಾತ್ಮಕ ಒಗಟುಗಳು(೧೭) ೨.ಗಣಿತಾತ್ಮಕ ಒಗಟುಗಳು (೧೫) ೩.ಸರಪಣಿ ಒಗಟುಗಳು(೬) ೪.ಸಂಭಾಷಣಾತ್ಮಕ ಒಗಟುಗಳು (೧೬) ೫.ಒಗಟು ಕಥೆಗಳು (೨೦) ಸಿ.ಪಿ.ಕೆ ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ, ಉತ್ತರಗಳು, ವಕ್ತೃಗಳ ವಿವರ, ಇವೆ.

೬೨೮. ಜಗತ್ತಿನ ಜನಪದ ಕಥೆಗಳು

ಸಂ/ಲೇ: ಹ.ಕ. ರಾಜೇಗೌಡ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು – ೧೮; ಮೊ.ಮು: ೧೯೭೩; ಪು: ೧೪+೩೯೮ = ೪೧೨: ಡಿಮ್ಮೈ ೧/೮

ಈ ಸಂಕಲನದಲ್ಲಿ ಜಗತ್ತಿನ ಬೇರೆ ಬೇರೆ ದೇಶಗಳ ಐವತ್ತು ಮೂರು ಕಥೆಗಳನ್ನು ಸೇರಿಸಿದ್ದೇನೆ ಎಂಬುದಾಗಿ ಲೇಖಕರು ಹೇಳಿಕೊಂಡಿದ್ದಾರೆ: ೧.ಜಲಕನ್ಯ (ಗ್ರೀಸ್) ೨.ಮೂರು ಜನ ದುಷ್ಟ ಹೆಂಗಸರು (ಪರ್ಷಿಯ) ೩.ಮರ ಕಡಿಯುವವನು ಮತ್ತು ನರಿ (ರಷ್ಯ) ೪.ಹೂ ಕೊಟ್ಟ ಚದುರೆ (ಕರ್ನಾಟಕ) ೫.ಮರದ ಮೇಲಿನ ಹುಡುಗಿ (ಚೈನಾ) ೬.ಬಿದುರಿನ ಚದುರೆ (ಜಪಾನ್) ೭.ರಾಕ್ಷಸಿಯಾದ ರಾಜಕುಮಾರಿ (ಇಂಗ್ಲೆಂಡ್) ೮.ಕತ್ತಲೆಯ ರಾಜ (ದಕ್ಷಿಣ ಇಟಲಿ) ೯.ಕಪ್ಪೆ (ಉತ್ತರ ಇಟಲಿ) ೧೦.ಬಡಕಲು ಕುದುರೆ (ಡೆನ್ಮಾರ್ಕ್) ೧೧.ಮೂರು ಆಸೆಗಳು (ಫ್ರೆಂಚ್) ೧೨.ನಾಯಿ ಮತ್ತು ಮೂಳೆ (ನೈಜೀರಿಯ) ೧೩.ಬುದ್ಧಿವಂತಳಾದ ಹುಡುಗಿ (ರಾಜಾಸ್ಥಾನ) ೧೪.ನಾಲ್ಕು ಒಗಟುಗಳು (ಗುಜರಾತ್) ೧೫.ಆರು ಮಂದಿ ಸಹೋದರರ ಮತ್ತು ಅವರು ಸೋದರಳಿಯ (ಅಸ್ಸಾಂ) ೧೬.ಏರರುಚಿಯ ಕಥೆ (ಕೇರಳ) ೧೭.ಕಳೆದುಹೋದ ಉಂಗುರ (ಘಾನ) ೧೮.ಕರಿಯ ಜೇಡ (ಪೋರ್ಚುಗೀಸ್) ೧೯.ಜಾಕ್ ಮತ್ತು ಅವನ ಸ್ನೇಹಿತರು (ಕೆಲ್ಟಿಕ್) ೨೦.ಪೆದ್ದ ತಮ್ಮ (ಟರ್ಕಿ) ೨೧.ಹಲಸಿನ ಹಣ್ಣು (ಬಾಂಗ್ಲದೇಶ) ೨೨.ಮೂರು ಪ್ರಶ್ನೆಗಳು (ಸಿಲೋನ್) ೨೩.ಮಾಂತ್ರಿಕ ಸೌತೆಕಾಯಿ (ರೊಡೀಷಿಯ) ೨೪.ಇಬ್ಬರು ಅಣ್ಣತಮ್ಮಂದಿರು ಮತ್ತು ಕಲ್ಲಿನ ಸಿಂಹ (ಟಿಬೆಟ್) ೨೫.ನಿದ್ದೆ ಮಾಡದ ದೊರೆ (ಐರ್ಲೆಂಡ್) ೨೬.ಇಬ್ಬರು ಸ್ನೇಹಿತರು (ಒರಿಸ್ಸ) ೨೭.ಬುದ್ಧಿವಂತಳಾದ ರಾಜಕುಮಾರಿ (ಹಿಮಾಚಲ ಪ್ರದೇಶ) ೨೮.ಎಲೆ ಮತ್ತು ಅಡಿಕೆ (ವಿಯಟ್ನಾಂ) ೨೯.ನಿದ್ರೆ ಬಾರದ ದೊರೆ (ಇಂಡೋನೇಷಿಯಾ) ೩೦.ಸುಲ್ತಾನನ ಆಯ್ಕೆ ೩೧.ರೈತ ಮತ್ತು ದೊರೆ (ಪೋಲೆಂಡ್) ೩೨.ಒಳ್ಳೆಯ ಪಾಲು (ಪಾಕಿಸ್ತಾನ) ೩೩.ಏಳು ನಕ್ಷತ್ರಗಳ ಕಥೆ (ಥೈಲೆಂಡ್) ೩೪.ಅಸಾಧ್ಯ ಕಥೆಗಳನ್ನು ಹೇಳುವ ಮೂವರು ಯುವಕರು (ಬರ್ಮ) ೩೫.ಕ್ರಿಸ್‌ಮಸ್ ಬಹುಮಾನ (ಜರ್ಮನಿ) ೩೬.ಮರಕಡಿಯುವವನ ಮಗಳು ಮತ್ತು ಬೆಕ್ಕು (ಸ್ವೀಡನ್) ೩೭.ಧೀರ್ಘ ನಿರೀಕ್ಷೆ (ಮಲಯ) ೩೮.ಕ್ವೀಗೆ ಮತ್ತು ಬಾಹಿತಿ (ಟಾಂಜನೀಯ) ೩೯.ಇಬ್ಬರು ಠಕ್ಕರು (ಕಾಶ್ಮೀರ) ೪೦.ಯಾರು ಹೆಚ್ಚು ? (ತುಳು) ೪೧.ಬೇಟೆಗಾರ ಮತ್ತು ರಾಜಕುಮಾರಿ (ಇಸ್ರೇಲ್) ೪೨.ಹುಲಿಯನ್ನು ಮದುವೆಯಾದ ಬ್ರಾಹ್ಮಣರ ಹುಡುಗಿ (ತಮಿಳುನಾಡು) ೪೩.ಕತ್ತೆ ಮೇಜು ಮತ್ತು ಕೋಲು (ಯಾರ್ಕ್‌ಷೈರ್) ೪೪.ಒಂದೇ ತರದ ರುಚಿ (ಪಂಜಾಬು) ೪೫.ಏಳು ಬಣ್ಣದ ಕುದುರೆ (ಮೆಕ್ಸಿಕೊ) ೪೬.ಕಬ್ಬಿಣದ ಕೋಟೆ (ಬೊಹೇಮಿಯ) ೪೭.ಮುದುಕ ಕಮ್ಮಾರ (ವೇಲ್ಸ್) ೪೮.ರಾಜಕುಮಾರಿ ಮತ್ತು ರೈತಹುಡುಗ (ಲಾಟ್‌ವಿಯನ್) ೪೯.ಚಿನ್ನದ ಮಕ್ಕಳು (ರುಮೇನಿಯ) ೫೦.ಟಿಮ್ ಮತ್ತು ಮೊಂಡಹಸು (ಆಸ್ಟ್ರೇಲಿಯ) ೫೧.ಹನ್ನೆರಡು ತಿಂಗಳುಗಳು (ಜೆಕೊಸ್ಲವೇಕಿಯ) ೫೨.ಮರ ಕಡಿಯುವವನು ಮತ್ತು ಐಶ್ವರ್ಯ (ಅರೇಬಿಯ) ೫೩.ಮೂರು ಪರೀಕ್ಷೆಗಳು

(ಉತ್ತರ ಅಮೆರಿಕ). ದೇಶಹಳ್ಳಿ ಜಿ. ನಾರಾಯಣ ಅವರ ಪ್ರಸ್ತಾವನೆ, ರಂಶ್ರೀ. ಮುಗಳಿ ಅವರ ಮುನ್ನುಡಿ, ಇವೆ.

೬೨೯. ಜಗಲೂರು

ಸಂ: ಎಸ್.ವೈ. ಸೋಮಶೇಖರ್; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮಪಮ.ಮು: ೨೦೧೦; ಪು: ೧೨+೧೩೦+೮=೧೫೦; ಡಿಮ್ಮೈ ೧/೮

ಈ ಗ್ರಂಥದಲ್ಲಿ ಹದಿಮೂರು ಅಧ್ಯಾಯಗಳಿದ್ದು ಅವುಗಳಲ್ಲಿ ಮೂರು ಜಾನಪದಕ್ಕೆ ಸಂಬಂಧಿಸಿವೆ: ೧.ಸ್ಥಳನಾಮಗಳು–ವಿ.ಎಚ್. ಅಜೇಯ ಕುಮಾರ ೨.ಕಲ್ಲೇದೇವರಪುರ: ಸಾಂಸ್ಕೃತಿಕ ಹಿನ್ನೆಲೆಯಲ್ಲಿ–ನಾಗರಾಜಪ್ಪ. ಎಸ್. ೩.ಕುಲಕಸುಬುಗಳು–ಡಿ. ಶ್ರೀನಿವಾಸ್.

೬೩೦. ಜನ ಜಾನಪದ

ಲೇ: ಮಂಜುನಾಥ ಬೇವಿನಕಟ್ಟಿ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು.೨೦೦೩; ಪುಟ ೪+೨೮=೩೨; ಡಿಮ್ಮೈ ೧/೮

ಪೀಠಿಕೆ, ಪರಿಕಲ್ಪನೆ, ಜನ ಜಾನಪದ ಎಂದರೇನು? ಜನ ಜಾನಪದದ ಲಕ್ಷಣಗಳು, ಜನ ಜಾನಪದದ ಉಪಯೋಗ, ಜನ ಜಾನಪದದ ಕೆಲವು ನಮೂನೆಗಳು –ಹೀಗೆ ಹಲವು ನಿಟ್ಟುಗಳಿಂದ ಚರ್ಚಿಸಲ್ಪಟ್ಟಿರುವ ಕೃತಿ. ಜನಜಾನಪದಕ್ಕೆ ಹೊಂದುವ ಕೆಲವು ತ್ರಿಪದಿಗಳ ನಮೂನೆಗಳನ್ನೂ, ಕಥಾಮಾದರಿಗಳನ್ನೂ ನೀಡಲಾಗಿದೆ.

೬೩೧. ಜನ–ಜನಪದ –ಜಾನಪದ

ಸಂ: ಎಂ.ಚಿದಾನಂದ ಮೂರ್ತಿ; ಪ್ರ: ಸಪ್ನ ಬುಕ್ ಹೌಸ್, ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ, ಬೆಂಗಳೂರು–೫೬೦೦೦೯; ಮೊ.ಮು.೨೦೦೨; ಪುಟ ೨೨+೬೧೪=೬೩೬; ಡಿಮ್ಮೈ ೧/೮

ಗ್ರಾಮೀಣ, ಪಗರಣ, ಸಂಕಲನಗಳ ಎಲ್ಲ ಸಂಪ್ರಬಂಧಗಳು; ಹೊಸತು ಹೊಸತು ಸಂಕಲನದ ಆಯ್ದ ಕೆಲವು ಸಂಪ್ರಬಂಧಗಳು; ಪೂರ್ಣ ಸೂರ್ಯಗ್ರಹಣ ಎಂಬ ಇಡೀ ಕೃತಿ; ಇಷ್ಟು ಇಲ್ಲಿ ಸೇರಿರುವ ಸಂಗತಿಯನ್ನು ಲೇಖಕರು ತಮ್ಮ ಮಾತಿನಲ್ಲಿ ಹೇಳಿದ್ದಾರೆ. ಮೊದಲ ಎರಡು ಸಂಕಲನಗಳಿಂದ ೪೩ ಲೇಖನಗಳಿವೆ: ೧.ಪಗರಣ(ಹಗರಣ)–ಇತಿಹಾಸದಲ್ಲಿ ಮತ್ತು ಸಮಕಾಲೀನದಲ್ಲಿ ೨.ಜೋಕುಮಾರ ೩.ಜೋಕುಮಾರನ ಕಥೆಯ ಇನ್ನೊಂದು ಪ್ರಭೇದ ೪.ಜಾನಪದ ಶಾಸ್ತ್ರ, ಸಮೂಹ ಸ್ಮರಣೆಯ ಕತೆಗಳು ಇತ್ಯಾದಿ ೫.ಜನಪದ ಕತೆ, ಐತಿಹ್ಯ ಮತ್ತು ಪುರಾಣ ೬.ಪುರಾವಸ್ತುಶಾಸ್ತ್ರ(Antiquelore) (ಅಥವಾ ಪಳೆವಸ್ತುಗಳಿಗೆ ಸಂಬಂಧಿಸಿದ ಜಾನಪದ ಶಾಸ್ತ್ರ) ೭.ನಯಸೇನ: ಕನ್ನಡದ ಒಬ್ಬ

ಜಾನಪದ ಚಂಪೂ ಕವಿ ೮.ಒಂದು ಅಪೂರ್ವ ಜಾನಪದ ದುರಂತ ಗೀತೆ (ಜಾನಪದ ಸಾಹಿತ್ಯದ ಬಗ್ಗೆ ಕೆಲವು ಅನ್ನಿಸಿಕೆಗಳು) ೯.ಉತ್ತರ ಕನ್ನಡ ಜಿಲ್ಲೆಯ ಒಂದು ದೇವಾಲಯ ೧೦."ದೇವದಾಸಿ"ಯೊಬ್ಬಳೊಡನೆ ಸಂದರ್ಶನ ೧೧.'ಬಸವಿ'ಲಕ್ಕಜ್ಜಿ೧೨.ಹಾಸ್ಯದ ಕತೆಯೊಂದರಲ್ಲಿ ವರ್ಗ ಹೋರಾಟ: 'ರಾಮಧಾನ್ಯಚರಿತ್ರೆ'೧೩.ಅಪೂರ್ವ ವಾದ್ಯಮೇಳ: ಜಗ್ಗಲಗೆ ೧೪.ಕುರುಬ ಜಾತಿಯ ಒಡೆಯರು ಮತ್ತು ಒಡೇರಮ್ಮ (ಒಡೆಯರಮ್ಮ) ೧೫.ಐನೋರು ಮತ್ತು ಕಾಲಿಲ್ಲದ ಐನೋರು ೧೬.ಜಾನಪದಶಾಸ್ತ್ರದಲ್ಲಿ ಅಂತರಶಿಸ್ತೀಯ ಅಧ್ಯಯನ: "ಕಬ್ಬಿಣ"ದ ಒಂದು ನಿದರ್ಶನ ೧೭.ಪುರಾಣ, ಸಂಕೇತಗಳಲ್ಲಿ ಇತಿಹಾಸ ಸುರಕ್ಷಿತ: ಎರಡು ಮಾಸ್ತಿ ಗುಡಿಗಳ ಪ್ರತ್ಯಕ್ಷ ಅಧ್ಯಯನ ೧೮.ಪ್ರಸ್ತುತ ಹಬ್ಬಗಳ ಹಿಂದೆ ಪ್ರಾಕ್ತನತೆ ೧೯."೧೧೫ ಜಾನಪದ ಕಿರುಗತೆಗಳು" ಪುಸ್ತಕ ಕುರಿತು ೨೦.ಮತ್ತೆರಡು ಶೂಲಬ್ರಹ್ಮ ಶಿಲ್ಪಗಳು ೨೧.ಆದಿಚುಂಚನಗಿರಿ ಮಠದ ಮೂಲದ ಬಗ್ಗೆ ಹೆಚ್ಚಿನ ಸಮರ್ಥನೆ ೨೨.'ಕುಪ್ಪಕುರೆ' –ಹಿಂದಿನ ಕಾಲದ ಮಕ್ಕಳ ಒಂದು ಆಟ ೨೩.ಹಾದಿ ದೆವ್ವದ ಆಟ ೨೪.ಪ್ರಾಚೀನ ಕರ್ನಾಟಕದಲ್ಲಿ ವೃಕ್ಷಾರೋಪಣ ೨೫.ಸುಡುಗಾಡು ಸಿದ್ಧರು ೨೬.ಹಿಂದಿನ ಕರ್ನಾಟಕದಲ್ಲಿ ಗುಲಾಮಗಿರಿ ಮತ್ತು ಗುಲಾಮರ ಮಾರಾಟ ೨೭.ಕನ್ನಡ ಕಾವ್ಯ ಶಾಸನಗಳಲ್ಲಿ ಮೈಲಾರ ಮತ್ತು ಮಾಳಚಿ ೨೮.ಪ್ರಾಚೀನ ಕರ್ನಾಟಕದಲ್ಲಿ ಗಮಕ ಮತ್ತು ಗಮಕಿಗಳು ೨೯.ನಾಗಬೆತ್ತ ೩೦.ಶೂಲದ ಹಬ್ಬ ೩೧.ದಂತಕತೆಗಳು ೩೨.ಬೈಗುಳಗಳು ೩೩.ನಮ್ಮ ಹಳ್ಳಿಗಳು: ಅಂದು–ಇಂದು (ಆಧುನೀಕರಣದಲ್ಲಿ ಒಂದು ಅಭ್ಯಾಸ) ೩೪.ಸೌಭಾಗ್ಯದ ಲಕ್ಷಣಗಳು ೩೫.ಐದು ಜನಪದ ಶಬ್ದಗಳು –ಅವುಗಳ ನಿಷ್ಪತ್ತಿ ೩೬.ಕನ್ನಡಗಾದೆಗಳನ್ನು ಕುರಿತಂತೆ ಕೆಲವು ಟಿಪ್ಪಣಿಗಳು ೩೭.ಒನಕೆವಾಡು– ಒಂದು ವಿವೇಚನೆ ೩೮.ಕರಪಲ್ಲ ೩೯."ವಿವಾಹ ಪುರಾಣ"–ಕನ್ನಡದ ಅತ್ಯಂತ ಪ್ರಾಚೀನ ಶಾಸನಸ್ಥ ಜಾನಪದ ಕೃತಿ ೪೦.ಹರಿಕಥೆಯ ಉಗಮ ೪೧.ಗ್ರಾಮ ದೇವತೆ–ಗ್ರಾಮ್ಯ ದೇವತೆಗಳು ೪೨."ಮಹೇಶ್ವರ ಜ್ವರ"–"ಮಹೇಶ್ವರಿ ಉಪದ್ರ" ಎಂದರೇನು? ೪೩ ಬಾದುಬ್ಬೆ–ಬಾದುಮಯ್ಯ–ಬನಶಂಕರಿ ಪೆಟ್ಟಿಗೆ–ಲಜ್ಜಾಗೌರಿ. ಮುಂದೆ, ಪೂರ್ಣ ಸೂರ್ಯ ಗ್ರಹಣ ಇಡೀ ಕೃತಿಯ ಎಂಟು ಅಧ್ಯಾಯಗಳಿವೆ: ೧.ಗ್ರಹಣ ಮತ್ತು ಸಾಮಾನ್ಯ ಮನುಷ್ಯ ೨.ಗ್ರಹಣಗಳ ಬಗ್ಗೆ: ಪುರಾಣಗಳು, ನಂಬಿಕೆಗಳು ಮತ್ತು ರಿಚುಯಲ್ಲುಗಳು ೩.ಗ್ರಹಣಗಳು: ಪ್ರಾಚೀನ ಕನ್ನಡಿಗರು ಕಂಡಂತೆ ೪.ಫೆಬ್ರವರಿ ಹದಿನಾರು: ನನ್ನ ಅನುಭವ ೫.ಗ್ರಹಣದ ಸಾಮಾಜಿಕ ಸಮೀಕ್ಷೆ ೬."ಸೂರ್ಯ ಗ್ರಹಣ ಅದ್ಭುತ ಮಹಾಶಾಂತಿ ಮಹೋತ್ಸವ" ೭.ಸಮೂಹ ಮಾಧ್ಯಮದಲ್ಲಿ 'ಗ್ರಹಣ' ೮.ಉಪಸಂಹಾರ. ಆರು ಅನುಬಂಧಗಳಿವೆ.

೬೩೨. ಜನತಾ ಗೀತೆಗಳು

ಸಂ: ಬಿ.ಎಸ್. ಗದ್ದಗಿಮಠ; ಪ್ರ: ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ (ರಿ), ಧಾರವಾಡ; ಮೊ.ಮು. ೧೯೫೬; ಪುಟ ೨೮+೯೨+೪+೨=೧೨೬; ಕ್ರೌನ್ ೧/೮

ಈ ಗ್ರಂಥದ ಹಾಡುಗಳಲ್ಲಿ ಐದು ವಿಭಾಗಗಳಿವೆ: ೧.ಸಂಪ್ರದಾಯದ ಹಾಡುಗಳು ೨.ಹಂತಿಯ ಹಾಡುಗಳು ೩.ಹೋಳಿಯ ಹಾಡುಗಳು ೪.ಬೀಸುವ ಹಾಡುಗಳು

೫.ಇತರ ಹಾಡುಗಳು. ಇವಲ್ಲದೆ, ದೊಡ್ಡ ಹಾಡುಗಳು, ದುಂದುಮೆ ಹಾಡುಗಳೂ ಇವೆ. ಕೊನೆಯಲ್ಲಿ ಶಬ್ದಕೋಶ ಇದೆ.

೬೩೩. ಜನದನಿ

ಸಂ: ಜಿ. ಗೋವಿಂದಯ್ಯ ಕೋರೇಗಾಲ; ಪ್ರ; ಕಮಲ ಪ್ರಕಾಶನ, ಕೆ.ಎಂ.ದೊಡ್ಡಿ (ಭಾರತಿನಗರ) ೫೭೧ ೪೨೨; ಮದ್ದೂರು ತಾಲ್ಲೂಕು, ಮಂಡ್ಯಜಿಲ್ಲೆ; ಮೊ.ಮು. ೨೦೦೫; ಪು; ೮+೫೨=೬೦; ಡಿಮ್ಮೈ ೧/೮

ಜನಪದ ಸೊಗಸು ಎಂಬ ಅಡಿಬರಹ ಇದೆ. ನಡುನಡುವೆ ಗದ್ಯ ವಿವರಣೆ ಇರುವ ಹಾಗೂ ಇಲ್ಲದಿರುವ ಹಾಡುಗಳು, ಪೂರ್ಣ ಗದ್ಯರೂಪ ಹಾಗೂ ಪೂರ್ಣ ಪದ್ಯರೂಪ ಇರುವ ಸಂಗ್ರಹಗಳು, ಎಲ್ಲ ಸೇರಿ ಒಟ್ಟು ಹನ್ನೆರಡು ಶೀರ್ಷಿಕೆಗಳಿವೆ: ೧.ಪ್ರಾರ್ಥನೆ ೨.ಚಲುವರಾಯಸ್ವಾಮಿ ೩.ಮಾತೊಂದು ಮನವೆರಡು (ಗಂಗೆ-ಗೌರಿ-೧) ೪.ಶಿವನು ಭಿಕ್ಷಕ್ಕೆ ಬಂದ (ಗಂಗೆ-ಗೌರಿ-೨) ೫.ಸೋ ಎನ್ನಿರೇ ಸೋಬಾನೆ ಬನ್ನಿರೇ(ಗಂಗೆ-ಗೌರಿ-೩) ೬.ಗಗ್ಗನೆ ಗೌರಿ ಕದ ತೆಗಿಯೆ (ಗಂಗೆ-ಗೌರಿ-೪) ೭.ಇಬ್ಬರು ಹೆಂಡಿರ ಕಾಟ (ಗಂಗೆ-ಗೌರಿ-೫) ೮.ಪಾರ್ವತಿಯ ಪರೀಕ್ಷೆ ೯.ಮಲ್ಶೈ ಮಹದೇಶ್ವರ ೧೦.ಮುಡುಕು ತೊರೆ ಮಲ್ಲೇಶ್ವರನ ಕಥನ ೧೧.ವೆಂಕಟರಮಣ ಸ್ವಾಮಿ ೧೨.ಮಲ್ಲಣ್ಣನ ತಿರುಮಂತ್ರ. ರಮೇಶ ಹುಲ್ಲುಕೆರೆ ಅವರ ಮುನ್ನುಡಿ, ಜಯಪ್ರಕಾಶಗೌಡ ಅವರ ಬೆನ್ನುಡಿ, ಇವೆ.

೬೩೪. ಜನಪದ ಅಂಕಗಣಿತ-ಜಾಣಚಮತ್ಕಾರ (ಭಾಗ ನಾಲ್ಕು)

ಸಂ: ಜೀನಹಳ್ಳಿ ಸಿದ್ಧಲಿಂಗಪ್ಪ; ಪ್ರ: ಪ್ರೇಮ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ಶಿವಮೊಗ್ಗ ಜಿಲ್ಲೆ-೫೭೭ ೨೨೩; ಮೊ.ಮು. ೧೯೮೭, ಎ.ಮು. ೧೯೮೮; ಪುಟ ೮೦; ಕ್ರೌನ್ ೧/೮

೩೯ ಲೆಕ್ಕಗಳೂ, ೪೧ ಭಾಷಾ ಚಮತ್ಕಾರಗಳೂ, ಈ ಗ್ರಂಥದಲ್ಲಿವೆ. ಉತ್ತರಗಳು, ನಿರೂಪಕರ ಪರಿಚಯ, ಇವೆ.

೬೩೫. ಜನಪದ ಅಂಕಗಣಿತ-ಜಾಣಚಮತ್ಕಾರ

ಸಂ: ಜೀನಹಳ್ಳಿ ಸಿದ್ದಲಿಂಗಪ್ಪ, ಪ್ರ: ಪ್ರೇಮ ಪ್ರಕಾಶನ ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ಶಿವಮೊಗ್ಗ ಜಿಲ್ಲೆ; ಮೊ.ಮು.: ೧೯೮೭, ಐದನೇ ಮುದ್ರಣ ೧೯೯೪, ಉಳಿದ ಮುದ್ರಣಗಳನ್ನು ನಮೂದಿಸಿಲ್ಲ, ಪುಟ: ೬೪, ಕ್ರೌನ್ ೧/೮

ಮೊದಲ ಭಾಗವಾದ 'ಜನಪದ ಗಣಿತ' ದಲ್ಲಿ ೩೯ ಲೆಕ್ಕಗಳಿವೆ. ಎರಡನೆಯ 'ಭಾಷಾ ಚಮತ್ಕಾರ' ಎಂಬ ಭಾಗದಲ್ಲಿ ೧೭ ಬಗೆಯ ಭಾಷಾ ಚಮತ್ಕಾರಗಳಿವೆ. ಕೊನೆಯಲ್ಲಿ ಉತ್ತರಗಳಿವೆ. ನಿರೂಪಕರ ಪರಿಚಯ ಇದೆ. 'ಸಂಪಾದಕರ ಮಾತು' ಗಳಲ್ಲಿ ಗ್ರಂಥಾತ್ಮವನ್ನು ಕುರಿತ ಚರ್ಚೆಯಿದೆ.

೬೩೬. ಜನಪದ ಅಡುಗೆ

ಲೇ: ವೈ.ಸಿ.ಭಾನುಮತಿ; ಪ್ರ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು.೨೦೦೭; ಪುಟ ೮+೯೨=೧೦೦; ಫೂಲ್ಸ್‌ಕ್ಯಾಪ್ ೧/೮

ಪ್ರಚಾರ ಪುಸ್ತಕ ಮಾಲೆಯ ಈ ಪುಟ್ಟ ಪುಸ್ತಕದೊಳಗೆ ಈ ಶೀರ್ಷಿಕೆಗಳಿವೆ: ಹಿನ್ನೆಲೆ, ವರ್ಗೀಕರಣ, ಉತ್ತರ ಕರ್ನಾಟಕದ ಅಡುಗೆಗಳು, ದಕ್ಷಿಣ ಕರ್ನಾಟಕದ ಅಡುಗೆಗಳು, ಕರಾವಳಿ ಕರ್ನಾಟಕದ ಅಡುಗೆಗಳು, ಮಲೆನಾಡು ಕರ್ನಾಟಕದ ಅಡುಗೆಗಳು, ಮಲೆನಾಡಿನ ವಿಶಿಷ್ಟ ಅಡುಗೆಗಳು, ಕಡುಬುಗಳು, ಹಣ್ಣಿನ ಅಡುಗೆಗಳು, ಬಾನಗಳು, ಸೇವಿಗೆ, ಇತರ ಸಿಹಿ ಅಡುಗೆಗಳು, ಸಾಂದರ್ಭಿಕ ಅಡುಗೆಗಳು, ಜೀವನಾವರ್ತದ ಘಟ್ಟಗಳಲ್ಲಿ ಅಡುಗೆಗಳು, ಹಬ್ಬ ಹರಿದಿನಗಳ ಅಡುಗೆಗಳು, ಪಥ್ಯದ ಆಹಾರ, ಮಾಂಸದ ಅಡುಗೆಗಳು, ಪಾನೀಯಗಳು, ದನಗಾಹಿ ಹುಡುಗರ ಅಡುಗೆಗಳು, ಹಪ್ಪಳ ಉಪ್ಪಿನಕಾಯಿಗಳು, ಅಡುಗೆ ಸಂರಕ್ಷಣೆ, ಅಡುಗೆ ನಂಬಿಕೆ–ಸಂಪ್ರದಾಯಗಳು, ಉಪಸಂಹಾರ. ಜೆ. ಶಶಿಧರ ಪ್ರಸಾದ್ ಅವರ ಮುನ್ನುಡಿ ಇದೆ

೬೩೭. ಜನಪದ ಅಡುಗೆ ಉದ್ಯಮೀಕರಣ

ಸಂ: ಹಂಪನಹಳ್ಳಿ ತಿಮ್ಮೇಗೌಡ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು; ಮೊ.ಮು: ನಮೂದು ಇಲ್ಲ; ಪು: ೧೬+೧೦೪; ಡಿಮ್ಮೈ ೧/೮

ವಿಚಾರ ಸಂಕಿರಣವೊಂದರಲ್ಲಿ ಸಾದರಪಡಿಸಿದ ಪ್ರಬಂಧಗಳ ಸಂಕಲನ: ೧.ಅಧ್ಯಕ್ಷರ ನುಡಿ–ಕೆರೆಮನೆ ಶಂಭು ಹೆಗಡೆ ೨.ಅತ್ತೆ ಮನೆಗೂ ಬಂದೆಯಾ ಜಡೆ ಶಂಕರಾ!–ಹಂಪನಹಳ್ಳಿ ತಿಮ್ಮೇಗೌಡ ೩.ಸ್ಥಳೀಯ ತಿನಿಸುಗಳ ಔದ್ಯಮೀಕರಣ: ಕೆಲವು ಪ್ರಾಸ್ತಾವಿಕ ಟಿಪ್ಪಣಿಗಳು–ಯಶವಂತ ಡೋಂಗ್ರೆ ೪.ಜನಪದ ಅಡುಗೆ ವಾಣಿಜ್ಯೀಕರಣ: ಸಂಶೋಧನೆ ಅಗತ್ಯ–ಜೆ.ಶಶಿಧರ ಪ್ರಸಾದ್ ೬.ಮಲೆನಾಡಿನ ಘನರೂಪದ ಅಡುಗೆಗಳು–ವೈ.ಸಿ.ಭಾನುಮತಿ ೬.ಮಲೆನಾಡಿನ ದ್ರವರೂಪದ ಆಹಾರಗಳು–ಎಂ.ಶಂಕರ ೭.ಅಡುಗೆ ಮನೆಯನ್ನು ಒಡೆದು ಬರಲೇ ಬೇಕಲ್ಲವೇ?–ರಾಜೇಗೌಡ ಹೊಸಹಳ್ಳಿ ೮.ಬಯಲು ನಾಡಿನ ದ್ರವರೂಪದ ಆಹಾರಗಳು–ಪುಟ್ಟಸ್ವಾಮಿ ೯.ಬಯಲುನಾಡಿನ ಘನರೂಪದ ಆಹಾರ ಮತ್ತು ಉದ್ಯಮೀಕರಣ–ವ.ನಂ.ಶಿವರಾಮು ೧೦.ಬಯಲು ಸೀಮೆಯ ಅಡುಗೆ ಕ್ರಮ: ಒಂದು ನೋಟ–ಚಿಕ್ಕಣ್ಣ ಯಣ್ಣೆಕಟ್ಟೆ ೧೧.ಜನಪದ ಅಡುಗೆ ಸಂಶೋಧನಾ ಸಾಮಗ್ರಿ ಆಗಬೇಕು–ರಾಗೌ ೧೨.ಜನಪದ ಅಡುಗೆ ಮತ್ತು ಔದ್ಯಮೀಕರಣ–ಆರ್.ರಾಮಚಂದ್ರ.

೬೩೮. ಜನಪದ ಆಟಗಳು

ಸಂ: ಬಿ.ಎ. ವಿವೇಕ ರೈ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು; ಮೊ.ಮು. ೧೯೯೦, ಪುಟ: ೮ + ೧೦೬ = ೧೧೪, ಡಿಮ್ಮೈ ೧/೮

'ಸಂಶೋಧನ ಲೇಖನಗಳು' ಎಂಬ ಅಡಿಬರಹ ಇದೆ. ಮಂಗಳೂರು ವಿಶ್ವವಿದ್ಯಾನಿಲಯದ

ಕನ್ನಡ ವಿಭಾಗವು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಿಮ್ಯೆಯ ಸಹಯೋಗದೊಂದಿಗೆ ವಿಶ್ವವಿದ್ಯಾನಿಲಯದ ಆವರಣ ಮಂಗಳಗಂಗೋತ್ರಿಯಲ್ಲಿ ಜನವರಿ ೧೯ ಮತ್ತು ೨೦, ೧೯೯೦ ರಂದು 'ಜನಪದ ಆಟಗಳು–ವಿಚಾರ ಸಂಕಿರಣ ಮತ್ತು ಪ್ರದರ್ಶನ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ನಡೆಸಿತು" ಎಂಬುದಾಗಿ ಸಂಪಾದಕರು ಪ್ರಸ್ತಾವನೆಯನ್ನು ಪ್ರಾರಂಭಿಸಿದ್ದಾರೆ. ಅಲ್ಲಿ ಮಂಡಿತವಾದ ಆರು ಲೇಖನಗಳ ಸಂಕಲನವಿದು: ೧.ಜನಪದ ಆಟಗಳು: ಚಾರಿತ್ರಿಕ ಅಧ್ಯಯನ ೨.ಒಂದು ಸಮಾಜಶಾಸ್ತ್ರೀಯ ಅಧ್ಯಯನ ೩.ಆಟ ಮತ್ತು ವಿಧಿಕ್ರಿಯೆ ೪.ಜನಪದ: ಮನೋ ವೈಜ್ಞಾನಿಕ ಅಧ್ಯಯನ ೫.ದೇಶೀಯ ವಾದ ಮತ್ತು ಜನಪದ ಆಟಗಳು ೬.ಸಂವಹನ ಮಾಧ್ಯಮಗಳಾಗಿ ಜನಪದ ಆಟಗಳು ಒಂದು ಟಿಪ್ಪಣಿ. ಈ ಲೇಖನಗಳನ್ನು ಮಂಡಿಸಿದವರು ಕ್ರಮವಾಗಿ: ಅಂಬಳಿಕೆ ಹಿರಿಯಣ್ಣ, ಶಾಂತಿ ನಾಯಕ, ತೀ.ನಂ. ಶಂಕರನಾರಾಯಣ, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ ದೇವೇಂದ್ರಕುಮಾರ ಹಕಾರಿ. ಅನುಬಂಧದಲ್ಲಿ ಎರಡೂ ದಿನಗಳು ಪ್ರದರ್ಶಿತವಾದ ೨೪ ಒಳಾಂಗಣ ಆಟಗಳನ್ನೂ, ೧೯ ಹೊರಾಂಗಣ ಆಟಗಳನ್ನೂ, ಪಟ್ಟಿ ಮಾಡಲಾಗಿದೆ.

೬೩೯. ಜನಪದ ಆಟಗಳು

ಲೇ: ಚಕ್ಕೆರೆ ಶಿವಶಂಕರ್; ಪ್ರ: ಕರ್ನಾಟಕ ಜಾನಪದ ಪರಿಷತ್ತು, ೧, ಜಲದರ್ಶಿನಿ ಬಡಾವಣೆ, ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು– ೫೬೦ ೦೫೪; ಮೊ.ಮು.೨೦೦೮; ಪುಟ ; ಕ್ರೌನ್ ೧/೮

ಅಜ್ಜಿಸೂಜಿ, ಅಣ್ಣೆಕಲ್ಲು, ಅಳೀರ್ ಗುಡುಗುಡು, ಆನೆಆಟ, ಉಪ್ಪುಪ್‌ಕಡ್ಡಿ, ಉಪ್ಪೇರುಪ್ಪ, ಬಳೆ ಚೂರಿನ ಆಟ, ಕಂಬಿ ಆಟ, ಕಲ್ಲೂಪರಾಣಿ ಆಟ, ಚೆಂಡಾಟ, ಕುಂಟೆಬಿಲ್ಲೆ, ಗುಲ್ಲೋರಿಯೊ, ಟೋಪಿ ಆಟ, ಬಗಾಟ ಬಗರಿ, ಕಪ್ಪೆ ಆಟ, ಕಾನ್‌ಕಾನುತ್ತುತ್ತು, ಆನೆ ಕುರಿ, ಅಪ್ಪಪ್ಪಂಡ ಆಲಿಮೊಗ್ಗು, ಚೆನ್ನೆಮಣೆ, ಕಾಗೆಗಿಳಿ ಆಟ, ಮುಂತಾದ ಆಟಗಳ ವಿವರಗಳಿವೆ. ಪ್ರಸ್ತಾವನೆಯಲ್ಲಿ ಆಟಗಳ ಹುಟ್ಟು, ಬೆಳವಣಿಗೆ, ಪ್ರಾದೇಶಿಕತೆ, ಲಕ್ಷಣಗಳು, ವರ್ಗೀಕರಣ, ಪ್ರದರ್ಶನ ಮಾಹಿತಿ, ಮುಂತಾದ ವಿವರಗಳಿವೆ. ಜಿ. ನಾರಾಯಣ ಅವರ ಅಧ್ಯಕ್ಷರ ಮಾತು ಎಂಬ ಮುನ್ನುಡಿ ಇದೆ.

೬೪೦. ಜನಪದ ಆಟಗಳು

ಲೇ: ಸುಶೀಲ ಹೊನ್ನೇಗೌಡ; ಪ್ರ: ಶರತ್ ಪ್ರಕಾಶನ, ೨೯೮೫, ಪೂರ್ಣಚಂದ್ರ, ನೆಹರೂನಗರ, ಮಂಡ್ಯ; ಮೊ.ಮು. ೧೯೭೯; ಪುಟ ೧೮+೧೦೦=೧೧೮; ಕ್ರೌನ್ ೧/೮

ಇಲ್ಲಿನ ಆಟಗಳನ್ನು ಆರು ಬಗೆಯಾಗಿ ವಿಂಗಡಿಸಲಾಗಿದೆ: ೧.ಹುಡುಗಿಯರ ಆಟಗಳು ೨.ಹುಡುಗರ ಆಟಗಳು ೩.ದೊಡ್ಡವರ ಆಟಗಳು ೪.ಮಕ್ಕಳ ಆಟಗಳು ೫.ಸಾಹಸದ ಆಟಗಳು ೬.ಇತರೆ ಆಟಗಳು. ಕ್ರಮವಾಗಿ ೧೩+೧೭+೬+೨೦+೫+೫ ಹೀಗೆ ಒಟ್ಟು

೬೬ ಆಟಗಳ ಸಂಗ್ರಹವಿದು. ಎಚ್.ಎಲ್. ನಾಗೇಗೌಡ ಅವರ ಮುನ್ನುಡಿ, ರಾಗೌ ಅವರ ಮುಮ್ಮಾತು, ಲೇಖಕಿಯವರ ಪ್ರಸ್ತಾವನೆ, ಇವೆ. ಕೊನೆಯಲ್ಲಿ ಟಿಪ್ಪಣಿಗಳಾಗಿ, ೧.ಕಳ್ಳರನ್ನು ಕಂಡು ಹಿಡಿಯುವ ವಿಧಾನಗಳು ೨.ಆಟವನ್ನು ಯಾರು ಮೊದಲು ಆಡಬೇಕೆನ್ನುವುದನ್ನು ನಿರ್ಧರಿಸುವ ಬಗೆ ೩.ಆಟಗಾರರನ್ನು ಹಂಚಿಕೊಳ್ಳುವ ರೀತಿ, ಇವೆ.

೬೪೧. ಜನಪದ ಆಟಗಳು

ಸಂ: ರಾಗೌ; ಪ್ರ: ಸಂವಹನ, ೧೨/೧ಎ, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು–೫೭೦ ೦೦೧; ಮೊ.ಮು. ೨೦೦೧; ಪುಟ ೬೪; ಕ್ರೌನ್ ೧/೮

೩೬ ಬಗೆಯ ಆಟಗಳ ಪರಿಚಯ ಇಲ್ಲಿದೆ. ಕೆಲವು ರೇಖಾಚಿತ್ರಗಳಿವೆ. ಪೀಠಿಕೆ, ಕೊನೆಯಲ್ಲಿ ಆಟಗಳ ಕೆಲವು ಪ್ರಾಸಗಳಿವೆ.

೬೪೨. ಜನಪದ ಆರಾಧನಾ ಕಲೆಗಳು

ಲೇ: ಪಿ.ಕೆ.ರಾಜಶೇಖರ; ಪ್ರ: ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬; ಮೊ.ಮು.೨೦೧೦; ಪುಟ ೨೪+೬೪=೮೮; ಕ್ರೌನ್ ೧/೮

ಇಪ್ಪತ್ತು ಕಲೆಗಳ ಪರಿಚಯವನ್ನು ಮಾಡಿಕೊಡುವ ಕೃತಿ: ೧.ನಂದಿಧ್ವಜ ಕುಣಿತ ೨.ಡೊಳ್ಳು ಕುಣಿತ ೩.ಕರಗ ಕುಣಿತ ೪.ಪಟ ಕುಣಿತ ೫.ಬೀಸು ಕಂಸಾಳೆ ೬.ಸೋಮನ ಕುಣಿತ ೭.ಪೂಜಾ ಕುಣಿತ ೮.ಚೌಡಿಕೆ ಮೇಳ ೯.ವೀರಭದ್ರನ ಕುಣಿತ ೧೦.ಗೊರವರ ಕುಣಿತ ೧೧.ಕಣ್ಣ ಕನ್ನಡಿ ೧೨.ಮಜ್ಜಣ ಕುಣಿತ ೧೩.ಬೋಳುಕಾಟ್ ೧೪.ತೊಂಡಲದೇವರ ಕುಣಿತ ೧೫.ಪಂಜಿನ ಕುಣಿತ ೧೬.ಹರಿಗೆ ಕುಣಿತ ೧೭.ಬಾಣದೇವರ ಕುಣಿತ ೧೮.ಸಂತಾಮ ಕುಣಿತ ೧೯.ಸಿಂಡೀರಣ್ಣನ ಕುಣಿತ ೨೦.ಕಾಡೆಮ್ಮ ದೊಡ್ಡು ಕುಣಿತ.

೬೪೩. ಜನಪದ ಆರಾಧನೆ ಮತ್ತು ರಂಗಕಲೆ

ಲೇ: ಸುಶೀಲಾ ಪಿ. ಉಪಾಧ್ಯಾಯ; ಪ್ರ: ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ–೫೭೬ ೧೦೨; ಮೊ.ಮು: ೧೯೮೯; ಪು: ೮+೧೬೪=೧೭೨; ಕ್ರೌನ್ ೧/೮

ಮೂರು ಉಪನ್ಯಾಸಗಳ ಸಂಕಲನ: ೧.ಜನಪದ ಆರಾಧನಾ ಸಂಪ್ರದಾಯಗಳು ೨.ಜನಪದ ಪುರಾಣ ಕಾವ್ಯಗಳು ೩.ಜನಪದ ಆರಾಧನಾ ರೂಪದಲ್ಲಿ ಬೆಳೆದು ಬಂದ ರಂಗ ಕಲೆಗಳು. ಪ್ರಸ್ತಾವನೆ, ಕೆಲವು ಫೋಟೋಗಳು, ಸಾಂಸ್ಕೃತಿಕ ಪದಕೋಶ, ಇವೆ.

೬೪೪. ಜನಪದ ಇಬ್ಬಂದಿ ಕಥೆಗಳು

ಲೇ: ಎಸ್. ಶ್ರೀಧರಮೂರ್ತಿ; ಪ್ರ: ಮಾನವಿಕ ಕರ್ಣಾಟಕ, ಸಂಪುಟ ೭, ಸಂಚಿಕೆ ೧, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು.: ೧೯೭೬, ಡಿಮ್ಮೈ ೧/೮

ಈ ಬಗೆಯ ಕಥೆಗಳನ್ನು ಕುರಿತ ಬಹುಶಃ ಏಕೈಕ ಲೇಖನ. ಅನುಬಂಧದಲ್ಲಿ, ಆಫ್ರಿಕ ಸೈಬೀರಿಯ ಘಾನಾ ಜಾಂಬಿಯ ಮುಂತಾದ ಹಲವು ದೇಶಗಳಲ್ಲಿ ಕಂಡು ಬರುವ ಹಲವು ಇಬ್ಬಂದಿ ಕಥೆಗಳ ಉದಾಹರಣೆಗಳಿವೆ. ಗ್ರಂಥ ಋಣದಲ್ಲಿ ೫ ಇಂಗ್ಲಿಷ್ ಮೂಲಗಳನ್ನೂ, ೩ ಕನ್ನಡ ಮೂಲಗಳನ್ನೂ, ನಮೂದಿಸಲಾಗಿದೆ.

೬೪೫. ಜನಪದ ಊಟೋಪಚಾರಗಳು

ಲೇ: ಸಿ.ಟಿ. ಗುರುಪ್ರಸಾದ್; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಕಲಯ, ಹಂಪಿ; ಮೊ.ಮು: ೨೦೧೩; ಪು: ೧೨+೭೨=೮೪; ಡಿಮ್ಮೈ ೧/೮

ಮಂಡ್ಯ ಜಿಲ್ಲೆಯನ್ನು ಪರಿಗಣಿಸಿ ಎಂಬ ಅಡಿಬರಹ ಇದೆ. ಎಂಟು ಅಧ್ಯಾಯಗಳಿವೆ: **ಒಂದು: ಮಂಡ್ಯ ಜಿಲ್ಲೆಯ ಭೌಗೋಳಿಕ ಹಿನ್ನೆಲೆ ಮತ್ತು ವ್ಯವಸಾಯ ಪದ್ಧತಿ:** ೧.ಪ್ರಧಾನ ಬೆಳೆಗಳು ೨.ವಾಣಿಜ್ಯ ಬೆಳೆಗಳು ೩.ಪೂರಕ ಬೆಳೆಗಳು., **ಎರಡು: ಮಂಡ್ಯ ಜಿಲ್ಲೆಯ ಸಮುದಾಯಗಳು ಮತ್ತು ಆಹಾರ ಪದ್ಧತಿ:** ೧.ಮಂಡ್ಯ ಜಿಲ್ಲೆಯ ವಿಶಿಷ್ಟ ಸಮುದಾಯಗಳು ೨.ನಿತ್ಯಾಹಾರ ಪದ್ಧತಿಗಳು. **ಮೂರು: ಅಡುಗೆ ಪದ್ಧತಿಯ ವಿಧಗಳು:** ೧.ವಿಶೇಷ ಅಡುಗೆ ಪದ್ಧತಿಗಳು ೨.ಪ್ರದೇಶವಾರು ಆಹಾರ ಪದ್ಧತಿಗಳು ಮತ್ತು ಭಿನ್ನತೆಗಳು ೩.ಋತುಮಾನಕ್ಕನುಗುಣವಾಗಿ ರೂಢಿಸಿಕೊಂಡ ಅಡುಗೆ ಪದ್ಧತಿಗಳು. **ನಾಲ್ಕು: ಆಚರಣಾ ಸಂಬಂಧಿ ಅಡುಗೆ ಪದ್ಧತಿಗಳು:** ೧.ಹಬ್ಬದ ವಿಶೇಷ ಅಡುಗೆಗಳು ೨.ಜೀವನಾವರ್ತನ ಆಚರಣೆಗಳ ಸಂದರ್ಭದ ಅಡುಗೆ ಮತ್ತು ಊಟೋಪಚಾರಗಳು ೩.ಧಾರ್ಮಿಕ ಸಂಬಂಧಿ ಅಡುಗೆಗಳು. **ಐದು: ಅಡುಗೆ ಪದ್ಧತಿ ಮತ್ತು ಊಟಕ್ಕೆ ಸಂಬಂಧಿಸಿದ ಸಂಪ್ರದಾಯಗಳು:** ಸಸ್ಯಾಹಾರಕ್ಕೆ ಹಾಗೂ ಮಾಂಸಾಹಾರಕ್ಕೆ ಸಂಬಂಧಿಸಿದ ಸಂಪ್ರದಾಯಗಳು. **ಆರು: ಆಧುನಿಕ ಸಂದರ್ಭದಲ್ಲಿ ಅಡುಗೆ ಪದ್ಧತಿಯ ರೂಪಾಂತರ.** **ಏಳು: ಆಹಾರ ಪದ್ಧತಿಗಳ ತಾತ್ವಿಕ ವಿವೇಚನೆ.** **ಎಂಟು: ಉಪಸಂಹಾರ:** ಮಾಹಿತಿ ನೀಡಿದವರ ವಿವರಗಳು. ಕನ್ನಡವೇ ಸತ್ಯ ಕನ್ನಡವೇ ನಿತ್ಯ ಎಂಬ ಹಿ.ಚಿ. ಬೋರಲಿಂಗಯ್ಯ ಅವರ ಮುನ್ನುಡಿ ಇದೆ.

೬೪೬. ಜನಪದ ಒಕ್ಕಲು

ಲೇ: ಜಯಲಕ್ಷ್ಮೀ ಸೀತಾಪುರ; ಪ್ರ: ತಳಗವಾದಿ ಪ್ರಕಾಶನ, ೨೨, ವಿಜಯಶ್ರೀ, ಕುವೆಂಪುನಗರ, ಮೈಸೂರು–೫೭೦ ೦೦೯; ಮೊ.ಮು.೨೦೦೪; ಪುಟ ೧೨+೮+೧೪೦=೧೬೦; ಕ್ರೌನ್ ೧/೮

ನಾಲ್ಕು ಸಂಶೋಧನ ಲೇಖನಗಳ ಸಂಕಲನ: ೧.ಈಡಿಗರು ೨.ಮೇದರು ೩.ಗಾಣಿಗರು ೪.ವಿಶ್ವಕರ್ಮರು.

೬೪೭. ಜನಪದ ಒಗಟು ಕಥೆಗಳು

ಸಂ: ಕುರುವ ಬಸವರಾಜ್; ಪ್ರ: ಅಂತರಂಗ ಪ್ರಕಾಶನ, ಕುರುವ, ಗೋವಿನಕೋವಿ ಅಂಚೆ, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ–

ಈ ಗ್ರಂಥದಲ್ಲಿ ೪೩ ಒಗಟುಕಥೆಗಳಿವೆ: ೧.ಪದ್ಮಾವತಿ ಸೂಳೆ ೨.ಮ್ಯಾಕ್ ನೋಡಿ ಕೆಳಾಕ್ ನೋಡಿ ಒಳಗೆ ಬಾ ೩.ಐದು ಪೈಸದಾಗೆ ಹೂವು ಎಣ್ಣೆ ಕಟಿಗೆ ತಗೊಂಡು ಬಾ ೪.ಇಪ್ಪತ್ತು ಹೆಣ ಕಡಿದು–ಹದ್ನಾರು ಹೆಣ ಸುಲದು ೫.ಕವಳಿಹಣ್ಣು ಕುಂಬಳಕಾಯಿ ಕೇಳಿದ ಸೂಳೆ ೬.ಮೆತ್ತನಕಲ್ಲು ತಗೊಂಡು ಬಾ ೭.ತೊಡೆಮ್ಯಾಲೆ ಗಂಡ ತೋಳಮ್ಯಾಲೆ ಮಿಂಡ ೮.ಕುಂಕುಮರಾಣಿ ೯.ಹೆಣ್ಣಿನ ಮರ್ಮ ೧೦.ತಪ್ಪಿಸಿಕೊಂಡ ಮಾಯದ ಹಕ್ಕಿ ೧೧.ಉಕ್ಕೆ ತೆರೆ ಹರಾಜು ೧೨.ಗೆಜ್ಜೆಲ್ದೆ ಕುಣಿಯೋನ ಬಾಗಲಾಗಾಸಿ ಬಾ ೧೩.ಮೂಡಲ ಮೂರು ನಾಯಿ ೧೪.ಹೆಂಡತಿಗೆ ಮಗನಾದ ಗಂಡ ೧೫.ಈ ಕಲ್ ಕಡ್ದೋನ್ನ ಮದುವೆ ಆಗ್ತೇನಿ ೧೬.ಬಿಟ್ಟೋನ್ ಹೆಂಡ್ತೀ ಹುಡ್ಕಾಕ್ ಹೋದೋನ್ ೧೭.ಬಳಸಿ ಹೊರಸಿ ಪೂರಸಿ ತಗೊಂಡು ಬಾ ೧೮.ಭಕ್ತಿಗೆ ತಕ್ಕಾದ ಭಾವನ ತಗೊಂಡು ಬಾ ೧೯.ಬಂಗಾರಕ್ಕಿಂತ ಹೆಚ್ಚಿನ ಬಂಗಾರ ತಗೊಂಡು ಬಾ ೨೦.ಶೃಂಗಾರಕ್ಕೊಂದು ಬಂಗಾರ ತಾ ೨೧.ಭೂಮಿಯದಲ್ಲದ ಆಕಾಶದ್ದಲ್ಲದ ನೀರು ೨೨.ಮೂರು ವಾರ ಕೂಡಿದಾಗ ೨೩.ಎಲ್ಡೆ ಕಾಲೀಲಿ ಮೂವರು ಹೋದ್ರು ೨೪.ನಾಕ್ಲೋಕ ನೂಕು ದೀಪ ೨೫.ಆಗೊಮ್ಮೆ–ಈಗೊಮ್ಮೆ ೨೬.ಚಟಪಟ ಗರಗರ ಕೊತಕೊತ ೨೭.ತಲೆಕೂದ್ಲ ಬಗಲಿಯಾಗೆ ಇಟಗಂದು ಕುಂತೇನಿ ೨೮.ಭೂಮಿಗೆ ತ್ಯಾಪೆ ಹಾಕ್ತಾ ಇದೇನಿ ೨೯.ಮಣ್ಣಿಗೆ ಮಣ್ಣು ಕೊಡಾಕೆ ಹೋಗೇತಿ ೩೦.ನಾದದ ಕಾರಣ ೩೧.ಹತ್ತೋದಲ್ಲ ಹರಿಯೋದಲ್ಲ ೩೨.ಮೊಣಕಾಲಿಗೆ ಮೊಲೆ ಬಂದೋಳೆ ೩೩.ಮೋಡ ಕಟ್ಟಿದೆ ಮಳೆಯಾಗ್ತಾಯಿಲ್ಲ ೩೪.ತಾಟಗಿತ್ತಿಕೂಟ ತಾಟಾಡಿ ಬಂದೇನಿ ೩೫.ವುಣೆಗಾರನ ಕೋಟೆ ಹೆಣಗಾಡಾಕೆ ಹೋಗಿದ್ದೆ ೩೬.ಮಜ್ಜಿಗಣ್ಣಿನೋಳೆ ಪಿಸರ್ನ ಮಾತ್ನೋಳೆ ೩೭.ಉಡಿಮ್ಯಾಲೆ ಉಡಿಕಟ್ಟಿರೊ ಜಾಣೆ ೩೮.ಕಾಮಕಸ್ತೂರಿ ಬಂಗಾರ ಗಣಿ ಎಲ್ಲಿಟ್ಟೆ ೩೯.ಸುವ್ವಾರಿ ಹೆಣ್ಣೆ ಸುಪ್ಪಾರಿ ಮುತ್ತೆ ೪.ಇದ್ದವರು ಸತ್ತಾಗ ಸತ್ತ ಮರ ಅತ್ತಾಗ ೪೧.ನೀನೆದ್ದು ಓಡೋಗೊ ಗಳಗಂಟೆ ೪೨.ಕೇಯೂರ ಹಾರೆ ಮಂಜೀರೆ ೪೩.ಅತ್ತೋಗೊ ಮಳೆ ಇತ್ತರೆ ಬರಬಾರ್ದ ಹಿ.ಶಿ. ರಾಮಚಂದ್ರೇಗೌಡ ಅವರ ಮುನ್ನುಡಿ, ಹಾಮಾ. ನಾಯಕ, ಸಿ.ಪಿ.ಕೆ. ಎಚ್.ಎಲ್. ನಾಗೇಗೌಡ, ಅಂಬಳಿಕೆ ಹಿರಿಯಣ್ಣ, ಎಂ.ಎ. ಜಯಚಂದ್ರ, ಅವರುಗಳ ಹೊನ್ನುಡಿಗಳು, ಸಂಪಾದಕರ ಪ್ರಸ್ತಾವನೆ ಇವೆ. ಕೊನೆಯಲ್ಲಿ ಹನ್ನೆರಡು ಅನುಬಂಧಗಳಿವೆ: ೧.ಭಿನ್ನಪಾಠ: ಗಂಡ ಮಗ್ಲಾಗೆ ಮಿಂಡ ತಲೆದಿಂಬಿನಾಗೆ ೨.ಕಥೆಗಾರರ ಪರಿಚಯ ೩.ಆಶಯ ಸೂಚಿ ೪.ಸಂಕೇತ ಸೂಚಿ ೫.ಅಂಕಿತನಾಮ ಸೂಚಿ ೬.ಸ್ಥಳನಾಮ ಸೂಚಿ ೭.ಪ್ರಾಣಿ ಪದಸೂಚಿ ೮.ಇಂಗ್ಲೀಷ್ ಪದಸೂಚಿ ೯.ಸಂಖ್ಯಾಸೂಚಿ ೧೦.ಬೈಗುಳ ಸೂಚಿ ೧೧.ವಿಶಿಷ್ಟ ಪದಸೂಚಿ ೧೨.ಶಬ್ದಾರ್ಥ ಸೂಚಿ.

೬೪೮. ಜನಪದ ಒಗಟು ಮತ್ತು ಗಾದೆಯ ಕಥೆಗಳು

ಸಂ: ಜೀನಹಳ್ಳಿ ಸಿದ್ಧಲಿಂಗಪ್ಪ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೫೬೦ ೦೧೮; ಮೊ.ಮು.: ೨೦೦೨, ಪುಟ: ೨೬+೯೭=೧೨೩, ಡಿಮ್ಮೈ ೧/೮.

೨೦ ಒಗಟು ಕಥೆಗಳನ್ನೂ ೧೦ ಗಾದೆಯ ಕಥೆಗಳನ್ನೂ ಒಳಗೊಂಡಿದೆ. ಪ್ರಾರಂಭದಲ್ಲಿ ಪ್ರಸ್ತಾವನೆ ಇದೆ. ಕೊನೆಯಲ್ಲಿ ೮ ಅನುಬಂಧಗಳಿವೆ: ೧.ಕ್ಷೇತ್ರಕಾರ್ಯ ೨.ಆಶಯಸೂಚಿ ೩.ಒಗಟು ನುಡಿ ಸೂಚಿ ೪.ಗಾದೆ ಸೂಚಿ ೫.ವಿಶಿಷ್ಟ ಪದ ವಿವರ ಸೂಚಿ ೬.ಶಬ್ದಾರ್ಥ ಸೂಚಿ ೭.ಶಬ್ದ ಸೂಚಿ ೮.ಕಥನಗಾರರ ಸೂಚಿ.

೬೪೯. ಜನಪದ ಒಗಟುಗಳು (ಒಳಪುಟದಲ್ಲಿ ಜನಪದ ಒಗಟುಗಳು ಎಂದು ಇದೆ)

ಸಂ: ಮಾಗಡಿ ರಂಗನರಸಿಂಹಯ್ಯ; ಪ್ರ: ಪಾರು ಪ್ರಕಾಶನ, ಸ್ಟೇಶನ್ ರೋಡ್, ಗದಗ–೫೮೨೧೦೧; ಮೊ.ಮು: ನಮೂದು ಇಲ್ಲ; ಪು: ೪೦; ಕ್ರೌನ್ ೧/೪

ಈ ಕೃತಿಯಲ್ಲಿ ೪೪೦ ಜನಪದ ಒಗಟುಗಳು ಹಾಗೂ ೨೦ ಪದ್ಯರೂಪದ ಒಗಟುಗಳಿವೆ. ಕೊನೆಯಲ್ಲಿ ಉತ್ತರಗಳಿವೆ.

೬೫೦. ಜನಪದ ಒಗಟುಗಳು

ಸಂ: ಕೆ.ಚಂದ್ರಶೇಖರ್; ಪ್ರ: ಟಿ. ನಾರಾಯಣ ಅಯ್ಯಂಗಾರ್, ಬಳೇಪೇಟೆ, ಬೆಂಗಳೂರು–೫೬೦೦೫೩; ಮು.ಗಳು: ೧೯೯೨, ೧೯೯೩, ೧೯೯೫, ೧೯೯೮; ಪು: ೧೧೫; ಕ್ರೌನ್ ೧/೮

೧೧೩೫ ಒಗಟುಗಳಿವೆ. ಜೊತೆಜೊತೆಯಲ್ಲೇ ಉತ್ತರಗಳೂ ಇವೆ

೬೫೧. ಜನಪದ ಒಗಟುಗಳು

ಲೇ: ಎಸ್.ಜಿ. ಇಮ್ರಾಪೂರ; ಪ್ರ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು; ೧೯೮೯; ಪು: ೮+೧೯೭=೨೦೫; ಕ್ರೌನ್ ೧/೪

ವಿಮರ್ಶಾತ್ಮಕ ಅಧ್ಯಯನ: ಮಹಾಪ್ರಬಂಧ ಎಂಬ ಅಡಿಬರಹ ಇದೆ. ಇದು ಪಿಎಚ್.ಡಿ. ಮಹಾಪ್ರಬಂಧ. ಐದು ಅಧ್ಯಾಯಗಳಿವೆ: **ಅಧ್ಯಾಯ ಒಂದು:** ೧.ಪ್ರವೇಶ ೨.ಜನಪದ–ಜಾನಪದ ಸಂವಾದಿ. **ಅಧ್ಯಾಯ ಎರಡು:** ೧.ಜನಪದ ಸಾಹಿತ್ಯ ಪ್ರಕಾರಗಳು ಮತ್ತು ಒಗಟು. **ಅಧ್ಯಾಯ ಮೂರು: ಒಗಟುಗಳ ವಿವರವಾದ ಅಧ್ಯಯನ:** ೧.ಒಗಟು: ಶಬ್ದ, ಅರ್ಥ ಮತ್ತು ಪ್ರಯೋಗ ೨.ಒಗಟುಗಳ ಸ್ವರೂಪ ಮತ್ತು ಲಕ್ಷಣ ೩.ಒಗಟುಗಳ ಉಗಮ, ವಿಕಾಸ ಮತ್ತು ಪ್ರಾಚೀನತೆ ೪.ಒಗಟುಗಳ ವರ್ಗೀಕರಣ. **ಅಧ್ಯಾಯ ನಾಲ್ಕು:**

೧.ಒಗಟುಗಳ ಪ್ರಕಾರಗಳು ೨.ಗಾದೆ–ಒಗಟು–ಒಡಪು ೩.ಒಗಟುಗಳ ವ್ಯತ್ಯಯ ಮತ್ತು ಮಾದರಿಗಳು ೪.ಒಗಟಿನ ಪ್ರಯೋಜನಗಳು ೫.ಒಗಟುಗಳ ಛಂದಸ್ಸು ಮತ್ತು ಸಾಹಿತ್ಯಿಕ ಮೌಲ್ಯ ೬.ಸಾಹಿತ್ಯದಲ್ಲಿ ಒಗಟಿನ ಬಳಕೆ. **ಅಧ್ಯಾಯ ಐದು:** ೧.ಕನ್ನಡದಲ್ಲಿ ಒಗಟುಕೃಷಿ. ಕೊನೆಯಲ್ಲಿ, ಸಮಾರೋಪ ಎಂಬ ಅಧ್ಯಾಯವಿದೆ.

೬೫೨. ಜನಪದ ಒಡಪುಗಳು

ಸಂ: ಶಂಕರಾನಂದ ಉತ್ಲಾಸರ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೫೬೦ ೦೧೮; ಮೊ.ಮು: ೧೯೮೧; ಪು: ೭+೨೩=೩೦; ಡಿಮ್ಮೈ ೧/೮

೧೪೦ ಒಡಪುಗಳಿವೆ. ಹಂಪ ನಾಗರಾಜಯ್ಯ ಅವರ ಮುನ್ನುಡಿ, ಕೊನೆಯಲ್ಲಿ ಅರ್ಥಕೋಶ ಮತ್ತು ಟಿಪ್ಪಣಿ, ಇವೆ.

೬೫೩. ಜನಪದ ಕತೆಗಳು

ಸಂ: ಸಾ.ಶಿ. ಮರುಳಯ್ಯ; ಪ್ರ: ಜಾನಪದ ಅಕಾಡೆಮಿ, ಕದಂಬ, ಕಾರ್ಡ್‌ರಸ್ತೆ, ರಾಜಾಜಿನಗರ, ಬೆಂಗಳೂರು–೧೦; ಮೊ.ಮು. ೧೯೮೩; ಪುಟ ೮+೧೦೪=೧೧೨; ಕ್ರೌನ್ ೧/೮

ಜನಪದ ಕಥನ ಕವನಗಳ ಗದ್ಯರೂಪ ಎಂಬ ಅಡಿಬರಹ ಇದೆ. "ಕರಾಕೃ ಅವರ ಹಲವು ವಿವಿಧ ಜನಪದ ಕಥನ ಕವನಗಳಿಂದ" ಇಲ್ಲಿನ ಕತೆಗಳನ್ನು ಆರಿಸಲಾಗಿದೆ. ಬೇರೆ ಬೇರೆ ಲೇಖಕರು ಗದ್ಯಕ್ಕೆ ರೂಪಾಂತರಿಸಿದ್ದಾರೆ. ಅಂಥ ೧೯ ಕತೆಗಳಿವೆ. ಕೊನೆಯಲ್ಲಿ, "ಕೊಟ್ಟರೆ ಕೊಡಲೇಳು ಇಟ್ಟಾಂಗ ಇರಬೇಕ!" ಎಂಬ ಸಿ.ಕೆ. ಪರಶುರಾಮಯ್ಯ ಅವರ ಬರಹದಲ್ಲಿ "ಕೆರೆಗೆ ಹಾರ" ದ ಕತೆಯನ್ನು ಗದ್ಯದಲ್ಲಿ ಹೇಳಿದ್ದಾರೆ. ಸಾ.ಶಿ. ಮರುಳಯ್ಯ ಅವರ 'ಸಂಪಾದಕನ ಮಾತು' ಇದೆ.

೬೫೪. ಜನಪದ ಕಥನ ಗೀತೆಗಳು

ಸಂ: ಸ್ವಾಮಿಗೌಡ (?); ಪ್ರ: ಲಭ್ಯ ಪ್ರತಿಯಲ್ಲಿ ವಿವರ ಲಭ್ಯವಿಲ್ಲ; ಮೊ.ಮು. ೧೯೭೬ (ಸಂಪಾದಕರ ಬರಹಗಳ ಕೊನೆಯಲ್ಲಿ ಲಭ್ಯವಾದ ಇಸವಿ); ಪುಟ ೮+೧೭೬=೧೮೪; ಕ್ರೌನ್ ೧/೮

ಹನ್ನೆರಡು ಕಥನ ಗೀತೆಗಳಿವೆ – ವಿಷಯಾನುಕ್ರಮಣಿಕೆಯಲ್ಲಿ. ಆದರೆ, ಎಲ್ಲವೂ ಹಾಡಿನ ರೂಪದಲ್ಲಿಲ್ಲ. ಕೆಲವು ಗದ್ಯರೂಪದಲ್ಲಿವೆ. ಪದ್ಯರೂಪದಲ್ಲಿರುವ ಕೆಲವು ಹಾಡುಗಳ ಕೊನೆಯಲ್ಲಿ ಕಥೆಯನ್ನು ಸಂಕ್ಷಿಪ್ತ ಗದ್ಯದಲ್ಲಿಯೂ ಹೇಳಲಾಗಿದೆ. ಒಟ್ಟಾರೆ ಇಲ್ಲಿರುವ ಶೀರ್ಷಿಕೆಗಳು ಇವು: ೧.ಕಾಡುಸಿದ್ಧಮ್ಮನ ಕಥೆ ೨.ಕಿರಿಬಳ್ಳೆ ಹಿರಿಬಳ್ಳೆ ಕಥೆ ೩.ಚೆಜ್ಜಾಣೆ ೪.ಪತಿಭಕ್ತೆ ವೀರಾಜಿ ೫.ಶಂಕರಲಿಂಗನ ಸೋದರ ಪ್ರೇಮ ೬.ಶಿವಲೀಲೆ ೭.ಸಂತಾನ ಸಾವ್ರವಾಗಲಿ ೮.ಮಲ್ಲಿಗೆ ಹೂವಿನ ವೈಯ್ಯಾರಿ ೯.ದೊಂಬರ ಚೆನ್ನಿ ೧೦.ಮೇಲುಕೋಟೆ ಚೆಲುವರಾಯ ೧೧.ಬಾಣಾವತಿ ೧೨.ಕೊಡಗಿನ ಲಿಂಗರಾಜ. ಕೊನೆಯಲ್ಲಿ, ಕಥೆ ಹೇಳಿದವರು, ಮಳಲಿ ವಸಂತಕುಮಾರ್ ಅವರ ಮುನ್ನುಡಿ, ಇವೆ.

೬೫೫. ಜನಪದ ಕಥನ ಗೀತೆಗಳು

ಸಂ: ಪಿ.ಕೆ. ಖಂಡೋಬಾ, ಟಿ.ಎಂ. ಭಾಸ್ಕರ್; ಪ್ರ: ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ; ಮೊ.ಮು. ೨೦೦೪; ಪುಟ ೮+೧೨೪; ಡಿಮ್ಮೈ ೧/೮

ಬೇರೆ ಬೇರೆ ಸಂಗ್ರಹಗಳಿಂದ ಆಯ್ದ ಹದಿನಾರು ಕಥನಗೀತೆಗಳ ಸಂಕಲನ: ೧.ಗೋವಿನ ಹಾಡು ೨.ಕೆರೆಗೆ ಹಾರ ೩.ಉತ್ತರದೇವಿ ೪.ನೀಲ ಗಂಗಾನ ಹಾಡು ೫.ಗಂಗೀ ಗೌರಿ ಹಾಡು ೬.ಕಲಿಯುಗದ ಬಾಲೆ ೭.ಈರೋಬಿ ೮.ಕಾಶೀಬಾಯಿ ಹಾಡು ೯.ಕೊಂತ್ಯಮ್ಮ ೧೦.ಬರದ ಹಾಡು ೧೧.ಮಳೀ ಹಾಡು ೧೨.ಸಂಗವ ಮಾಡ್ಯಾಳ ನಿಮ ತಂಗಿ ೧೩.ಅಕ್ಕ ನಾಗಮ್ಮನ ಹಾಡು ೧೪.ಕೆಂಚಮ್ಮ ೧೫.ಮಾದಾರ ಚೆನ್ನಯ್ಯ ೧೬.ಕಲ್ಯಾಣ ಬಸವಯ್ಯ. ವಿ.ಬಿ. ಕುಟಿನ್ಹೊ ಅವರ ಮುನ್ನುಡಿ ಇದೆ. ಪ್ರಸ್ತಾವನೆ, ಕೊನೆಯಲ್ಲಿ, ಆಕರಸೂಚಿ, ವರ್ಗೀಕರಣ ಸೂಚಿ, ಸಾಂಸ್ಕೃತಿಕ ಪದಕೋಶ, ಇವೆ.

೬೫೬. ಜನಪದ ಕಥನ ಗೀತೆಗಳು

ಸಂ: ಪಿ.ಕೆ. ಖಂಡೋಬಾ; ಪ್ರ: ಕರ್ನಾಟಕ ಸಾಹಿತ್ಯ ಅಕಾಡಿಮ್ಮೆ, ನೃಪತುಂಗ ರಸ್ತೆ, ಬೆಂಗಳೂರು–೫೬೦ ೦೦೨; ಮೊ.ಮು.೧೯೯೬; ಪುಟ ೧೦+೭೬=೮೬; ಕ್ರೌನ್ ೧/೮

ಹನ್ನೆರಡು ಕಥನಗೀತೆಗಳ ಸಂಕಲನ: ೧.ಗೋವಿನ ಹಾಡು ೨.ಕೆರೆಗೆ ಹಾರ ೩.ಉತ್ತರದೇವಿ ೪.ನೀಲಗಂಗಾನ ಹಾಡು ೫.ಗಂಗೀಗೌರಿ ಹಾಡು ೬.ಕಲಿಯುಗದ ಬಾಲೆ ೭.ಈರೋಬಿ ೮.ಕಾಶೀಬಾಯಿ ಹಾಡು ೯.ಕೊಂತ್ಯಮ್ಮ ೧೦.ಬರದ ಹಾಡು ೧೧.ಮಳೀಹಾಡು ೧೨.ಸಂಗವ ಮಾಡ್ಯಾಳ ನಿಮ ತಂಗಿ. ಪ್ರಸ್ತಾವನೆ, ಕೊನೆಯ ಅನುಬಂಧದಲ್ಲಿ ಟಿಪ್ಪಣಿಗಳು, ಇವೆ. ಟಿಪ್ಪಣಿಗಳಲ್ಲಿ ಪ್ರತಿಯೊಂದು ಹಾಡಿನ ಟಿಪ್ಪಣಿಯೊಂದಿಗೆ ಶಬ್ದಾರ್ಥಗಳನ್ನೂ ನೀಡಲಾಗಿದೆ. ಇಲ್ಲಿನ ಹಾಡುಗಳನ್ನು ಎಲ್ಲಿಂದ ಎತ್ತಿಕೊಳ್ಳಲಾಗಿದೆ ಎಂದು ಹೇಳುವ ಆಕರಸೂಚಿ, ವರ್ಗೀಕರಣ ಸೂಚಿ, ಇವೆ.

೬೫೭. ಜನಪದ ಕಥನಗೀತೆಗಳಲ್ಲಿ ಮಹಿಳೆ: ಒಂದು ಸಾಂಸ್ಕೃತಿಕ ಅಧ್ಯಯನ

ಲೇ: ಎಂ.ಕೆ. ರುಕ್ಮಿಣಿ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೫೭೦ ೦೧೮; ಮೊ.ಮು: ೨೦೦೮; ಪು: ೯+೨೫೦=೨೫೯; ಡಿಮ್ಮೈ ೧/೮

ಪಿಎಚ್.ಡಿ. ಮಹಾಪ್ರಬಂಧ. ಎಂಟು ಅಧ್ಯಾಯಗಳಿವೆ: **ಅಧ್ಯಾಯ ಒಂದು: ಜನಪದ ಸಾಹಿತ್ಯದಲ್ಲಿ ಮಹಿಳೆ:** ಅ. ಪ್ರಬಂಧದ ಉದ್ದೇಶ ಮತ್ತು ವ್ಯಾಪ್ತಿ ಆ.ಹೆಣ್ಣಿನ ಬಗ್ಗೆ ಚಿಂತನೆ ಇ.ಮಹಿಳೆ ನಡೆದುಬಂದ ದಾರಿ ಈ.ಜನಪದ ಸಾಹಿತ್ಯದಲ್ಲಿ ಮಹಿಳೆ ಉ.ಜನಪದ ಕಥನಗೀತೆಯ ವಸ್ತುವಿನ ಆಯ್ಕೆ ಊ: ಸಂಶೋಧನೆಗೆ ಆಯ್ಕೆ ಮಾಡಿಕೊಂಡ ಕಥನಗೀತೆಗಳ ಸ್ಥೂಲ ಪರಿಚಯ. **ಅಧ್ಯಾಯ ಎರಡು: ರಮ್ಯ ಕಥನಗೀತೆಗಳಲ್ಲಿ ಮಹಿಳೆ:** ಅ.ಕಾಡಸಿದ್ದಮ್ಮ ಆ.ಬಾಲನಾಗಮ್ಮ ಇ.ನೀಲವೇಣಿ ಈ.ನೀಲಕಂಠ ರೂಪಾವತಿ. **ಅಧ್ಯಾಯ**

ಮೂರು: ವಾಸ್ತವಿಕ ಕಥನಗೀತೆಗಳಲ್ಲಿ ಮಹಿಳೆ: ಅ.ಗುಣಸಾಗರಿ ಆ.ಉತ್ತರದೇವಿ ಇ.ಬಂಜೆಹೊನ್ನಮ್ಮ ಈ.ಬಯಲು ಸೀಮೆಯ ಗೌಡನ ಮಗಳು ಉ.ಜಾಗಾಲೆ ಋ.ಕಲಿಯುಗದ ಬಾಲೆ. **ಅಧ್ಯಾಯ ನಾಲ್ಕು: ಸಹಗಮನ ಕಥನಗೀತೆಗಳಲ್ಲಿ ಮಹಿಳೆ:** ಅ.ನಾಗವ್ವಾ ಆ.ಚಿಕ್ಕೋಳು ಹಿರಿದಿಮ್ಮವ್ವ ಇ.ವಡ್ಡಗೆರೆ ನಾಗಮ್ಮ ಈ.ಮಹಾಸತಿ ವೀರತಿಮ್ಮವ್ವ ಉ.ಮಹಾಸತಿ ತೌಡಿ ನಾಗಮ್ಮ ಊ.ಮಹಾಸತಿ ಕಾಟವ್ವ ಋ.ಸತಿ ಚೆನ್ನಮ್ಮ ೠ.ಈರೋಬಿ. **ಅಧ್ಯಾಯ ಐದು: ತ್ಯಾಗ ಬಲಿದಾನ ಕಥನ ಗೀತೆಗಳಲ್ಲಿ ಮಹಿಳೆ:** ಅ.ಹುಳಿಯಾರು ಕೆಂಚಮ್ಮ ಆ.ಅಣಜಿ ಹೊನ್ನಮ್ಮ ಇ.ಒಡ್ಡರಬೋಯಿ ಈ.ಮದಗದ ಕೆಂಚವ್ವ ಉ.ಕೆರೆಗೆ ಹಾರ ಊ.ಮಲ್ಲಿಗೆ ಮಾದೇವಿ ಋ.ಕೆರೆ ಹೊನ್ನಮ್ಮ ೠ.ಧರಣಿಯಮ್ಮ. **ಅಧ್ಯಾಯ ಆರು: ದೈವಸಂಬಂಧಿ ಕಥನಗೀತೆಗಳಲ್ಲಿ ಮಹಿಳೆ:** ಅ.ಗಂಗೆಗೌರಿ ಆ.ಚಾಮುಂಡಿ ಇ.ಮಾಳವ್ವ ಈ.ಕೋಮಲೆ ಉ.ಹೊನ್ನಾಲದೇವಿ ಊ.ವರನಂದಿ ಋ.ಕುಸುಮಾಲೆ ೠ.ಹಟ್ಟಿಲಕ್ಕಮ್ಮ. **ಅಧ್ಯಾಯ ಏಳು: ಪೌರಾಣಿಕ ಕಥನಗೀತೆಗಳಲ್ಲಿ ಮಹಿಳೆ:** ಅ.ಕುಂತಿ ಆ.ದ್ರೌಪದಿ ಇ.ಸುಭದ್ರೆ ಈ.ಸೀತೆ. **ಅಧ್ಯಾಯ ಎಂಟು: ಉಪಸಂಹಾರ**

೬೫೮. ಜನಪದ ಕಥಾಭಾರತಿ

ಲೇ: ಜಿ.ಎಸ್. ಭಟ್; ಪ್ರ: ರಮ್ಯ ಪ್ರಕಾಶನ, ನಂ.೪, ಗಂಗೋತ್ರಿ ಬಡಾವಣೆ, ಮೈಸೂರು–೫೭೦ ೦೦೯; ಮೊ.ಮು. ೧೯೮೭, ಪುಟ ೨೮, ಕ್ರೌನ್ ೧/೮

ಕಿರಿಯರಿಗಾಗಿ ಆಯ್ದ ಜನಪದ ಕಥೆಗಳು ಎಂಬ ಅಡಿಬರಹ ಇದೆ. ನಾಲ್ಕು ಅನುವಾದಿತ ಕಥೆಗಳಿವೆ: ೧.ಹಿಮಾಲ ಮತ್ತು ನಾಗರಾಜ (ಕಾಶ್ಮೀರ) ೨.ಕತ್ತೆ ಮತ್ತು ರಾಜಕುಮಾರಿ (ಗುಜರಾತ್) ೩.ಏಳು ಜನ ಮೂರ್ಖರು ಮತ್ತು ಬ್ರಾಹ್ಮಣ (ಅಸ್ಸಾಮ್) ೪.ಬುದ್ಧಿನಾಥ (ಹಿಮಾಚಲ ಪ್ರದೇಶ).

೬೫೯. ಜನಪದ ಕಥಾಲೋಕ

ಸಂ: ಬಿ. ಸಿದ್ಧಲಿಂಗ ಸ್ವಾಮಿ; ಪ್ರ: ಕಲಾ ಪ್ರಕಾಶನ, ಬೆಂಗಳೂರು; ಮೊ.ಮು. ೨೦೦೯; ಪುಟ ೧೦+೮೧೭=೮೨೭; ಡಿಮ್ಮೈ ೧/೮

ಇಲ್ಲಿ ಮೂರು ಸಂಕಲನಗಳಿವೆ: ೧.ಜನಪದ ಕಥಾ ಸಂಗಮ ೨.ಜನಪದ ಕಥಾ ಮಂಜರಿ ೩.ನಾಡ ಕಥೆಗಳು. ಮೂರು ಸಂಕಲನಗಳಿಗೂ ಪ್ರತ್ಯೇಕ ಪೀಠಿಕೆ, ಪ್ರಸ್ತಾವನೆ, ಪರಿವಿಡಿ ಇವೆ. ಈ ಮೂರೂ ಸಂಕಲನಗಳಿಂದ ಒಟ್ಟು ೨೫೩ ಕಥೆಗಳಿವೆ. ಒಟ್ಟು ೧೯ ವಿಭಾಗಗಳಿವೆ: ಮಕ್ಕಳ ಕಥೆಗಳು, ಪುರಾಣ ಕಥೆಗಳು, ಶರಣರ ಕಥೆಗಳು, ದೇವರ ಕಥೆಗಳು, ಚಾರಿತ್ರಿಕ ಕಥೆಗಳು, ನೀತಿಯ ಕಥೆಗಳು, ಲೌಕಿಕ ಕಥೆಗಳು, ಕಾಲ್ಪನಿಕ ಕಥೆಗಳು, ಉಪಕಥೆಗಳು, ಅತಿಮಾನುಷ ಕಥೆಗಳು, ಪ್ರಾಣಿ ಕಥೆಗಳು, ಒಗಟಿನ ಕಥೆಗಳು, ವಿಚಿತ್ರ ಕಥೆಗಳು, ಪ್ರವಚನದ ಕಥೆಗಳು, ಜಾಣ್ಮೆಯ ಕಥೆಗಳು, ಕ್ಷೇತ್ರ ಮಹಾತ್ಮ್ಯ, ಸ್ಥಳಪುರಾಣಗಳು, ಕವಯತ್ರಿಯರ ಕಥೆಗಳು, ಕಟ್ಟುಕಥೆಗಳು.

೬೬೦. ಜನಪದ ಕಥಾವಳಿ

ಸಂ: ಎಚ್.ಜೆ.ಲಕ್ಕಪ್ಪಗೌಡ ಪ್ರ: ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ಲಿಮಿಟೆಡ್, ಬೆಂಗಳೂರು; ಮೊ.ಮು: ೧೯೭೧; ಪು: ೮+೨೬೮=೨೭೬; ಡಿಮ್ಮೈ ೧/೮

ನಾಲ್ಕು ಭಾಗಗಳಾಗಿ ವಿಂಗಡಿಸಿರುವ ೨೫ ಕಥೆಗಳ ಸಂಕಲನ. **ಭಾಗ ಒಂದು: ಕಿನ್ನರ ಕಥೆಗಳು:** ೧.ಕುಂಟಣ್ಣ ಕಂಡ ಕೈಲಾಸ ೨.ಕಂಚಿನ ಕೊಳ ೩.ಮರಗುದುರೆ ೪.ನಳ್ಳಿಗೊಮಾರ ೫.ಬುದ್ಧಿಯ ಬಲ ೬.ಚಿಕ್ಕಹೊನ್ನಿ–ದೊಡ್ಡಹೊನ್ನಿ ೭.ಪದ್ಮಾವತಿ ೮.ಮಾಡಿದುಣ್ಣೋ ಮಾರಾಯಾ. **ಭಾಗ ಎರಡು: ನೀತಿಕಥೆಗಳು:** ೧.ಬ್ರಹ್ಮಗಂಟು ೨.ಹಣೆಬರಹ ೩.ಯಾರು ಹೆಚ್ಚು? ೪.ಚೆಂದುಳ್ಳಿ ಹೆಣ್ಣು ೫.ಅಣ್ಣ–ತಂಗಿ. **ಭಾಗ ಮೂರು: ಅತಿಮಾನುಷ ಕಥೆಗಳೂ:** ೧.ಗೌಡನ ಮಗ ೨.ದೆವ್ವದ ದಯ ೩.ಕಿಲಾಡಿ ಚಿಕ್ಕ ೪.ಬೆನ್ನ ಹಿಂದೆ ಬಂದ ಭಾಗ್ಯ ೫.ಗುರು–ಶಿಷ್ಯ ೬.ಟೋಪಿ–ಕೋಲು–ಉಂಗುರ ೭.ಹಾವು–ಬೆಕ್ಕು–ಮುರ್ಕಾಟಿ ೮.ಗುಲಗಂಜಿ ಮಾದೇವಿ. **ಭಾಗ ನಾಲ್ಕು: ವಿನೋದ ಕಥೆಗಳು:** ೧.ಪೆದ್ದ ಪಾಪಣ್ಣ ೨.ಚದುರ ಚನ್ನಯ್ಯ ೩.ಘಾಟಿ ಸೊಸೆ. ೪.ಗುರುವ ಗುರುವಾದ. ಕೊನೆಯಲ್ಲಿ ಕಥೆಗಳನ್ನು ಹೇಳಿದವರು, ಅರ್ಥಕೋಶ, ಇವೆ.

೬೬೧. ಜನಪದ ಕಥಾಸಂಗಮ

ಸಂ: ಡಿ.ಲಿಂಗಯ್ಯ; ಪ್ರ: ದಿನಕರ ಪ್ರಕಾಶನ ೧೪೭, ೬ನೇ ಕ್ರಾಸ್, ಆಜಾದ್ ನಗರ, ಬೆಂಗಳೂರು–೫೬೦ ೦೧೮ ಮೊ.ಮು: ೧೯೭೮; ಪು: ೨೦+೧೨೦=೧೪೦; ಡಿಮ್ಮೈ ೧/೮

ಮೂವತ್ತೆರಡು ಕಥೆಗಳ ಸಂಕಲನ: ಹನ್ನೊಂದು ವಿಭಾಗಗಳನ್ನಾಗಿ ಇಲ್ಲಿನ ಕಥೆಗಳು ವಿಂಗಡಿಸಲ್ಪಟ್ಟಿವೆ. ೧.ರಮ್ಯ ಕತೆಗಳು ೨.ಅದ್ಭುತ ಕತೆಗಳು ೩.ಒಗಟಿನ ಕತೆಗಳು ೪.ನೀತಿ ಕತೆಗಳು ೫.ದೆವ್ವದ ಕತೆಗಳು ೬.ಹಾಸ್ಯ ಕತೆಗಳು ೭.ಪಕ್ಷಿ ಕತೆಗಳು ೮.ಆರಾಧನೆಯ ಕತೆಗಳು ೯.ಪೌರಾಣಿಕ ಕತೆಗಳು ೧೦.ದಂತ ಕತೆ ೧೧.ಮೋಸಗಾರರ ಕತೆ. ೧.ರೂಪಸುಂದರಿ ೨.ಸುವರ್ಣಾದೇವಿ ೩.ಬಿದಿರೊಳಗಿನ ಚದುರೆ ೪.ದಾಳಿಂಬೆ ೫.ಚಿನ್ನದ ಪಂಜರದ ಗಿಳಿ ೬.ದೇವಕನ್ನಿಕೆ ೭.ರವಿಕೆಮುಡಿ ೮.ನಾಯಿಬುದ್ಧಿ ೯.ಏಳು ಜನ ಆನೆ ಅಣ್ಣಂದಿರು ೧೦.ಗುಳುಕಾಯಿ ೧೧.ಚೆನ್ನಮಲ್ಲಿ ೧೨.ಬ್ರಹ್ಮಗಂಟು ೧೩.ಇಬ್ಬರು ರಾಜಕುಮಾರಿ ೧೪.ಮಚ್ಚು ಮರೆತ ಮಾರೇಗೌಡ ೧೫.ದೆವ್ವದ ಕಾಟ ೧೬.ದಡ್ಡಕುರುಬರು ೧೭.ನರಿ ಸೌತೆಕಾಯಿ ತಂದ ಕತೆ ೧೮.ಮೂಗುಡೊಂಕಾಗಿ ಸತ್ತವನು ೧೯.ಬದನೆಕಾಯಿ ಕತೆ ೨೦.ದುಗ್ಗಾಣಿ ಮದುವೆ ೨೧.ಕಾಗಕ್ಕ ಗುಬ್ಬಕ್ಕ ೨೨.ಏಳು ಗಿಣಿಯೊಳಗೆ ಒಂದು ಕುಂಟುಗಿಣಿ ೨೩.ಕಳ್ಳ ಮತ್ತು ಬೇಡ ೨೪.ಮಾರಮ್ಮ ೨೫.ಮಾಸ್ತಮ್ಮ ೨೬.ಅಜ್ಜಿಮಂಚ ೨೭.ಭೀಮನ ಗಾಣ ೨೮.ಕುಂಟನಕತೆ ೨೯.ಚಂದ್ರೇಸನ ಕತೆ ೩೦.ಮೂರು ಮಾತು ೩೧.ಹರಕಲು ಅಂಗಿಯ ಹುಡುಗ ೩೨.ಮಾಯದ ಹರಳು. ಸಂಪಾದಕರ ಪ್ರಸ್ತಾವನೆ, ಅರ್ಥಕೋಶ, ಇವೆ.

೬೬೨. ಜನಪದ ಕಥೆಗಳಲ್ಲಿ ಪಾತಿವ್ರತ್ಯದ ಪರಿಕಲ್ಪನೆ

ಲೇ: ಎಸ್.ಅನಸೂಯ; ಪ್ರ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು-೧, ವಿಜಯನಗರ ೧ ನೇ ಹಂತ, ಮೈಸೂರ-೫೭೦೦೦೧೭; ಮೊ.ಮು: ೨೦೧೦; ಪು: ೬೦; ಡಿಮ್ಮೈ ೧/೮

ಕೆಲವು ತ್ರಿಪದಿಗಳನ್ನು ಬಳಸಿಕೊಂಡು ವಿಷಯ ಮಂಡನೆ ಮಾಡಿರುವ ಕೃತಿ.

೬೬೩. ಜನಪದ ಕಥೆಯ ವಸ್ತು ಮತ್ತು ತಂತ್ರ ಹಾಗೂ ಇನ್ನಿತರ ಲೇಖನಗಳು

ಲೇ: ವೀರಣ್ಣ ದಂಡೆ; ಪ್ರ: ಬಸವ ಪ್ರಕಾಶನ, ಕಲಬುರ್ಗಿ; ಮೊ.ಮು.: ೧೯೮೧; ಪು: ೧೨+೧೦೦=೧೧೨; ಕ್ರೌನ್ ೧/೮

ಆರು ಲೇಖನಗಳ ಸಂಕಲನ: ೧.ಒಕ್ಕಲಿಗನ ಎರಡು ಸಂಕೇತ ಶಕ್ತಿಗಳು ೨.ಜನಪದ ಕಾವ್ಯ: ಮೂರು ಚಿತ್ರಗಳು ೩.ಚುಕ್ಕೋಳ ಪದಗಳು: ಒಂದು ಸಾಮಾಜಿಕ ವಿವೇಚನೆ ೪.ಕನ್ನಡ ಲಾವಣಿ ಮತ್ತು ಇಂಗ್ಲೀಷ್ ಬ್ಯಾಲೆಡ್ ೫.ಒಂದು ಜನಪದ ಕಥೆಯ ವಸ್ತು ಮತ್ತು ತಂತ್ರ: ಒಕ್ಕಲಿಗ ಮತ್ತು ಹಕ್ಕಿ ೬.ಜಾನಪದ ಸಂಸ್ಕೃತಿಯ ಹಿನ್ನೆಲೆಯಲ್ಲಿ ಮಹಾದೇವಿಯಕ್ಕನ ಜೀವಿತದ ಕೆಲ ಸಂಗತಿಗಳು. ಬಿ.ಬಿ. ಹೆಂಡಿ ಅವರ ಮುನ್ನುಡಿ, ಕೊನೆಯಲ್ಲಿ ಅನುಬಂಧ, ಇವೆ.

೬೬೪. ಜನಪದ ಕಲಾ ಪ್ರವೇಶ

ಲೇ: ಚಕ್ಕೆರೆ ಶಿವಶಂಕರ್; ಪ್ರ: ಸಾಗರ್ ಪ್ರಕಾಶನ, ೬೯೫, ೧೦ನೇ ಮುಖ್ಯರಸ್ತೆ, ೮೦ ಅಡಿರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦ ೦೭೨; ಮೊ.ಮು.: ೨೦೦೬; ವಿಸ್ತೃತ ಆವೃತ್ತಿ: ೨೦೧೨; ಪು: ೨೨೪+೭೨=೨೯೬; ಡಿಮ್ಮೈ ೧/೮

ಒಟ್ಟು ೧೮೦ ಕಲೆಗಳನ್ನು ಪರಿಚಯಿಸಿಕೊಡುವ ಲೇಖನಗಳಿವೆ. ೭೨ ಪುಟಗಳ ಬಹುವರ್ಣ ಚಿತ್ರಗಳಿವೆ. **ದಕ್ಷಿಣ ಕರ್ನಾಟಕ ಜನಪದ ಕಲೆಗಳು ೭೧:** ಅಂಟಿಗೆ ಪಂಟಿಗೆ, ಆಂಜನೇಯನ ವೇಷ, ಆಸಾದಿ ಕುಣಿತ, ಉರುಮೆ ವಾದನ, ಒನಕೆ ಕುಣಿತ, ಕನ್ನಕಡಿ, ಕರಗ, ಕರಡಿ ಕುಣಿತ, ಕರಪಲ್ಲ, ಕರಪಾಲ ಮೇಳ, ಕಂಸಾಳೆಯವರು, ಕಾಲಾಟಗಾರರ ಕುಣಿತ, ಕಾವಡಿ ಕುಣಿತ, ಕಾಡೆಮ್ಮೆ ದೊಡ್ಡಿನ ಕುಣಿತ, ಕಾಸೆಕುಣಿತ, ಕಿನ್ನರಿ ಜೋಗಿ ಮೇಳ, ಕೀಲುಕುದುರೆ ಕುಣಿತ, ಕೇಳಿಕೆ, ಕೋತಿ ಕುಣಿತ, ಕೋಡಂಗಿ ಕುಣಿತ, ಕೋಲಾಟ, ಕೋಲೆಬಸವನಾಟ, ಕೊಂಬು ಕಹಳೆ, ಗಣೆಯವರು, ಗೇರ್‌ಕಳ್ಳ ಕುಣಿತ, ಗಾರುಡಿಗೊಂಬೆ ಕುಣಿತ, ಗೊರವರ ಕುಣಿತ, ಚಿಟ್‌ಮೇಳ, ಡಿಕಾಂಬರಿ ಕುಣಿತ, ಡೊಳ್ಳು ಕುಣಿತ, ತಮಟೆ ಕುಣಿತ, ತಂಬೂರಿಯವರು, ತೆಲುಗು ಜಂಗಮರು, ತೊಗಲುಗೊಂಬೆಯಾಟ, ದೊಂಬರ ಕುಣಿತ, ದೊಂಬರಾಟ, ದೊಂಬಿದಾಸರು, ನಗಾರಿ ಮೇಳ, ನೀಲಗಾರರು, ನಂದಿಕೋಲು ಕುಣಿತ, ಪಟದ ಕುಣಿತ, ಪೂಜಾ ಕುಣಿತ, ಪಂಜಿನ ಕುಣಿತ, ಪಂಡರೀ

ಭಜನೆ, ಪಾಳೇಗಾರನ ಕುಣಿತ, ಪೋಟಿ ವೇಷ, ಬಾಣದೇವರ ಕುಣಿತ, ಭಜನೆ ಮೇಳ, ಬುಡುಬುಡಿಕೆ, ಬೆಂಕಿಮರಿ ಕುಣಿತ, ಭಾಗವಂತಿಕೆ ಮೇಳ, ಬುರ್ರಕಥಾ, ಮಾನವಮಿ ಪದಗಳು, ಮೂಡಲಪಾಯ ಯಕ್ಷಗಾನ, ಮಾರಿ ಕುಣಿತ, ಮೋಡಿಯಾಟ, ರಂಗದ ಕುಣಿತ, ಲಂಬಾಣಿ ಕುಣಿತ, ವರಸೆಗಳು, ವೀರಗಾಸೆ, ವೀರಭದ್ರನ ಕುಣಿತ, ವೀರಮಕ್ಕಳ ಕುಣಿತ, ಸೂತ್ರದ ಗೊಂಬೆಯಾಟ, ಸೋಮನ ಕುಣಿತ, ಸೋಲಿಗರ ಕುಣಿತ, ಸಿಡೀರಣ್ಣನ ಕುಣಿತ, ಹನ್ನೆರಡು ಸೆರಗಿನ ಕುಣಿತ, ಹರಿಗೆ ಕುಣಿತ, ಹಾವಾಡಿಗರಾಟ, ಹುಲಿವೇಷ, ಹೆಳವರು. **ಉತ್ತರ ಕರ್ನಾಟಕ ಜನಪದ ಕಲೆಗಳು ೩೫:** ಅಲಾವಿಕುಣಿತ, ಅಲಾವಿ ಹೆಜ್ಜೆಮೇಳ, ಆಣಿಪೀಣಿ, ಆಲಿಗುಂ ಕುಣಿತ, ಏಕತಾರಿ ಮೇಳ, ಕರಡೆ ಮಜಲು, ಕೊಡದ ಕುಣಿತ, ಕೃಷ್ಣಪಾರಿಜಾತ, ಗೀಗೀ ಮೇಳ, ಗೊಂದಲಿಗರ ಮೇಳ, ಚಿಟ್ಟಲಗಿ ಮೇಳ, ಚೌಡಮ್ಮನ ಕುಣಿತ, ಚೌಡಿಕೆಯವರು, ಜಗ್ಗಲಿಗೆ ಮೇಳ, ಜೋಗತಿ ಕುಣಿತ, ಡೊಳ್ಳು ಮೇಳ, ದಟ್ಟಿ ಕುಣಿತ, ದಾಸರಾಟ, ದೊಡ್ಡಾಟ, ದುಮ್ಮಾಲಿ ಮೇಳ, ಪುರವಂತಿಕೆ, ಬಹುರೂಪಿಗಳು, ಭಜನಾ ಬಾರೋಡ್, ಭೂತೇರ ಕುಣಿತ, ಮಾಯಮ್ಮನ ಕುಣಿತ, ರಾಜಗೊಂಡರಗುಣಿತ, ರಿವಾಯತ್ ಕುಣಿತ, ಲಾವಣಿ ಮೇಳ, ಲೇಜಿರ ಕುಣಿತ, ವಾಘೆ ಮುರಳಿ, ಸಣ್ಣಾಟ, ಸಿದ್ಧಿಕ ಸಿದ್ಧಿ, ಸುಡುಗಾಡು ಸಿದ್ಧರು, ಹೆಜ್ಜೆ ಮೇಳ, ಹೋಳಿ ಕುಣಿತ. **ಕರಾವಳಿ ಕರ್ನಾಟಕದ ಜಾನಪದ ಕಲೆಗಳು ೫೨:** ಆಟಿಕಳೆಂಜ, ಎರುಕೋಲು, ಕಚ್ಚೆಗೌಳಿಗರ ಕುಣಿತ, ಕರಡಿ ವೇಷ, ಕಂಗಿಲು ಕುಣಿತ, ಕರಂಗೋಲು ಕುಣಿತ, ಕೌಡಿಯಾ ಕುಣಿತ, ಕಾಡ್ಯಾನಾಟ, ಕುಡುಬಿಗಳ ಹೋಳಿ ಕುಣಿತ, ಸಿಂಹನೃತ್ಯ, ಕೊರಗರ ಕುಣಿತ, ಕೊರಗ–ತನಿಯ, ಗುಮಟೆ ಕುಣಿತ, ಗುಮಟೆ ಪಾಂಗ್, ಗೊಂಡರ ಹೋಳಿ ಕುಣಿತ, ಗೊಂಡರ ಮಂಡಲ ಕುಣಿತ, ಚೆನ್ನು ನಲಿಕೆ, ಚಿಕ್ಕಮೇಳ, ಚುಣ್ಣ ಕುಣಿತ, ಜಾಲಾಟ, ಜೋಡಿ ವೇಷ, ಢಕ್ಕೆ ಬಲಿ, ಡಮಾಮಿ ಕುಣಿತ, ತಾರ್ಲೆ ಕುಣಿತ, ತಾಳ ಮದ್ದಲೆ, ತುಳಸಿ ಪೂಜೆ ಕುಣಿತ, ದುಡಿ ಕುಣಿತ, ನಾಗಮಂಡಲ, ಪಾಣಾರಾಟ, ಪಿಲಿಪಂಜಿ ಕುಣಿತ, ಪುಗಡಿ ಕುಣಿತ, ಪ್ರೇತ ಕುಣಿತ, ಬಾಲೆಸಾಂತು, ಭೂತಾರಾಧನೆ, ಬೇಡನ್‌ಮರ್ದ, ಬೇಡರ ಕುಣಿತ, ಬೆದ್ರುಂಡೆ ಕುಣಿತ, ಮದಿಮ್ಮಯ ಮದಿಮ್ಮಲ್ ಕುಣಿತ, ಮರಗಾಲು ಕುಣಿತ, ಮರಾಠಿ ನಾಯ್ಕರ ಕುಣಿತ, ತಾರಗಡಿ ಕುಣಿತ, ಮಾದಿರ ಕುಣಿತ, ಮಾಯಿದ ಪುರುಷ, ಮಾಂಕಾಳಿ ಕುಣಿತ, ಯಕ್ಷಗಾನ, ಸಿದ್ಧವೇಷ, ಸೋಣದ ಜೋಗಿ, ಹಗರಣ, ಹಾಲಕ್ಕಿ ಒಕ್ಕಲಿಗರ ಸುಗ್ಗಿ ಕುಣಿತ, ಹೂವಿನ ಕೋಲು, ಹೂವಿನ ಮಕ್ಕಳ ಕುಣಿತ, ಹೌಂದೇರಾಯನ ವಾಲಗ. **ಕೊಡವ ಸೀಮೆ ಜನಪದ ಕಲೆಗಳು ೨೨:** ಉಮ್ಮತ್ತಾಟ್, ಎರವರ ಕುಣಿತ, ಕಪ್ಪೆಯಾಟ್, ಕುಡಿಯರ ಕುಣಿತ, ಕುರುಬಾಟ್, ಕೈತಲೆ ಆಟ್, ಕೊರ್ತಿ ಆಟ್, ಕೊಂಬಾಟ್, ಕೊಂಬು ಕೊಟ್ಟ ವಾಲಗ, ಜೋಯಿಪಾಟ್, ಡೊಳುಪಾಟ್, ದಪ್ಪು ಕುಣಿತ, ಪರಿಯಕಳಿ, ಪೀಲಿಯಾಟ್, ಬಾಳೋಪಾಟ್, ಬಿಲ್ಲಾಟ್, ಬೊಳುಕಾಟ್, ಬೋಡ್‌ನಮ್ಮೆ ಆಟ್‌ಪಾಟ್, ಭೂತದ ಕುಣಿತ, ವಾಲಗತ್ತಾಟ್, ಸುಗ್ಗಿ ಕುಣಿತ, ಹುತ್ತರಿ ಕೋಲಾಟ. ಲೇಖಕರ ಪೀಠಿಕೆ ಇದೆ.

೬೬೫. ಜನಪದ ಕಲಾವಿದ ಕುಂಸಿ ಹನುಮಂತಪ್ಪ

ಲೇ: ಜೆ. ಕೆ. ರಮೇಶ್; ಪ್ರ: ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ; ಮೊ.ಮು. ೨೦೦೪, ಪುಟ: ೧೦ + ೫೦ = ೬೦, ಕ್ರೌನ್ ೧/೮

ಈ ಪುಟ್ಟ ಪುಸ್ತಕವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ: ೧.ನಿರೂಪಣೆಗೆ ಮುನ್ನ ೨.ಕಥೆಗಾರ: ಕುಂಸಿ ಹನುಮಂತಪ್ಪ ೩.ಅನುಬಂಧಗಳು. ಮೊದಲನೆಯ ಭಾಗವು ಲೇಖಕರ ಮಾತುಗಳಲ್ಲಿ ಕಥೆಗಾರನ ಪರಿಚಯ ಮಾಡಿಕೊಟ್ಟರೆ, ಎರಡನೆಯ ಭಾಗವು ಕಥೆಗಾರನ ಆತ್ಮಕಥನವಾಗಿದೆ. ಮೂರನೆಯ ಭಾಗವಾದ ಅನುಬಂಧಗಳು ಎಂಬುದನ್ನು ಮತ್ತೆ ಮೂರು ಭಾಗ ಮಾಡಿ, ಕಥೆಗಾರ ಹೇಳಿದ ೪ ಕಥೆಗಳನ್ನೂ, ೨೪೦ ಗಾದೆಗಳನ್ನೂ, ೫ ಹಾಡುಗಳನ್ನೂ ನೀಡಲಾಗಿದೆ.

೬೬೬. ಜನಪದ ಕಲಾವಿದರ ಸೂಚಿ

ಸಂ: ಹಂಪ.ನಾಗರಾಜಯ್ಯ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮; ಮೊ.ಮು.೧೯೮೨; ಪುಟ ೭೭೬; ಡಿಮ್ಮೈ ೧/೮

೫೨೦೮ ಕಲಾವಿದರ ವಿಳಾಸಗಳು ಹಾಗೂ ಸಂಬಂಧಪಟ್ಟ ಕಲೆಗಳು ಇವೆ.

೬೬೭. ಜನಪದ ಕಲೆ ಸಂಸ್ಕೃತಿ

ಲೇ: ಎಚ್.ಟಿ. ಪೋತೆ; ಪ್ರ: ಕುಟುಂಬ ಪ್ರಕಾಶನ, ವರ್ಷಾನಿಲಯ, ಪ್ಲಾಟ್ ನಂ. ೮೧/ ೮೨, ವಿಶ್ವವಿದ್ಯಾಲಯ ಅಂಚೆ, ಪ್ರಬುದ್ಧನಗರ, ಕುಸನೂರರಸ್ತೆ, ಗುಲಬರ್ಗಾ; ಮೊ.ಮು. ೨೦೧೨; ಪುಟ ೮+೮೪=೯೨; ಡಿಮ್ಮೈ ೧/೮

ಹತ್ತು ಲೇಖನಗಳಿವೆ: ೧.ಹಣಚಿ ಬಟ್ಟಿನ ಕೈ: ಒಂದು ಅವಲೋಕನ ೨.ಜನಪದ ಹಾಡುಗಾರ್ತಿ: ಸಾಂತ್ರಮ್ಮ ಸುಣಗಾರ ೩.ಲಂಬಾಣಿ ನೃತ್ಯ ೪.ಚರ್ಮ ವಾದ್ಯಗಳು ೫.ಜನಪದ ಕಲಾ ಮೇಳಗಳ ಸಾಂಸ್ಕೃತಿಕ ಅನನ್ಯತೆ ೬.ಆಣೀ ಪೀಣಿ: ಅಂಟಿಗೆ ಪಂಟಿಗೆ ೭.ಹಂತಿಮೇಳ: ಸ್ವರೂಪ ಮತ್ತು ಸಂದರ್ಭ ೮.ಜನಪದ ಭಾಷಿಕ ಪ್ರಕಾರಗಳು ಮತ್ತು ಸಂಸ್ಕೃತಿ ೯.ದಲಿತ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ೧೦.ಜನಪದ ಜ್ಞಾನ: ವಿಜ್ಞಾನ. ಇವಲ್ಲದೆ ಇತರರು ಬರೆದ ಪುಟ್ಟ ಲೇಖನಗಳೂ ಇವೆ: ೧.ಕೃತಿ ವಿಮರ್ಶೆ: ಎಚ್.ಟಿ. ಪೋತೆ –ಬಿ.ಎಸ್. ಭಜಂತ್ರಿ ೨.ಸಮಾಜೋ ಜಾನಪದ –ಶ್ರೀಶೈಲ ನಾಗರಾಳ ೩.ಪಂಚ ಪ್ರಶ್ನೆ – ಜಯತೀರ್ಥ ಪಾಟೀಲ ೪.ಜಾನಪದ ಸಿಂಗಾರ –ಹರಿಶ್ಚಂದ್ರ ದಿಗ್ಸಂಗೀಕರ ೫.ಎಚ್.ಟಿ. ಪೋತೆ: ಜಾನಪದ –ಸಿ. ಕೊಟ್ರೇಶ್.

೬೬೮. ಜನಪದ ಕಲೆ: ಅವಲೋಕನ

ಸಂ: ಅಂಬಳಿಕೆ ಹಿರಿಯಣ್ಣ, ಶಾಲಿನಿ ರಘುನಾಥ; ಪ್ರ: ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು; ಮೊ.ಮು. ೨೦೧೦; ಪಟು: ೧೪+೨೩೦ = ೨೪೪; ಡಿಮ್ಮೈ ೧/೮

ವಿವಿಧ ಲೇಖಕರ ೨೨ ಬರಹಗಳನ್ನು ಈ ಗ್ರಂಥದಲ್ಲಿ ಸಂಕಲಿಸಲಾಗಿದೆ: ೧.ಜನಪದ ಕಲೆ ಒಂದು ನೋಟ –ಹಾ.ಮಾ. ನಾಯಕ ೨.ಜನಪದ ಕಲೆ ಒಂದು ಚಿಂತನೆ – ವೀರಣ್ಣ ದಂಡೆ ೩.ಜನಪದ ಕಲೆಗಳು: ಆನ್ವಯಿಕ ದೃಷ್ಟಿ –ಜೀ.ಶಂ. ಪರಮಶಿವಯ್ಯ ೪.ಕರ್ನಾಟಕ ಜನಪದ ಕಲೆಗಳು –ಎಂ.ಎಸ್. ಲಠ್ಠೆ ೫.ಉಪಯುಕ್ತ ಜನಪದ ಕಲೆಗಳು –ದೇಜಗೌ ೬.ಜನಪದ ಪ್ರದರ್ಶನಾತ್ಮಕ ಕಲೆಗಳು –ದೇವೇಂದ್ರಕುಮಾರ ಹಕಾರಿ ೭.ಅಲೆಮಾರಿಗಳ ಕಲಾ ಪರಂಪರೆ –ಬಸವರಾಜ ಮಲಶೆಟ್ಟಿ ೮.ಜನಪದ ದೃಶ್ಯ ಕಲೆಗಳು –ಗೊ.ರು. ಚನ್ನಬಸಪ್ಪ ೯.ಕರ್ನಾಟಕ ಬುಡಕಟ್ಟು ಚಿತ್ರಕಲೆ –ಗಿರೀಶ್ ಕುಮಾರ. ಎಂ.ಕೆ. ೧೦.ಜನಪದ ಚಿತ್ರಕಲೆ ಮತ್ತು ಜನ ಜೀವನ –ರಂಗಾರೆಡ್ಡಿ ಕೋಡಿರಾಂಪುರ ೧೧.ಜನಪದ ಶಿಲ್ಪಕಲೆ –ಶಾಲಿನಿ ರಘುನಾಥ ೧೨.ಜನಪದ ಮಾಧ್ಯಮಗಳಾಗಿ ಕುಣಿತಗಳು –ಕೆ. ಚಿನ್ನಪ್ಪ ಗೌಡ ೧೩.ಸಂವಹನ ಕ್ರಿಯೆಯಲ್ಲಿ ಜನಪದ ಕಲೆಗಳು –ಎಚ್.ಕೆ. ರಂಗನಾಥ ೧೪.ಆರಾಧನಾ ಸಂಪ್ರದಾಯಗಳು ಮತ್ತು ಕಲೆಗಳು –ಸುಶೀಲಾ ಪಿ. ಉಪಾಧ್ಯಾಯ ೧೫.ಜನಪದ ಕಲೆಗಳು ಮತ್ತು ಮಹಿಳೆ ೧೬.ಜನಪದ ಕಲೆಗಳು ಮತ್ತು ಶರಣರು –ದೇವೇಂದ್ರಕುಮಾರ ಹಕಾರಿ ೧೭.ಉಳಿಸಬಹುದೇ ಜನಪದ ಕಲೆ? –ಎಸ್.ಎಸ್. ಹಿರೇಮಠ ೧೮.ಜನಪದ ಕಲೆಗಳ ಅಳಿವು: ಕಾರಣ ಮತ್ತು ಪರಿಣಾಮ ೧೯.ಜನಪದ ಕಲೆಗಳು: ಸಂವರ್ಧನೆ ನಿಟ್ಟಿನಲ್ಲಿ –ಎಂ.ಜಿ. ಈಶ್ವರಪ್ಪ ೨೦.ಜನಪದ ಕಲೆಗಳು: ಸುಧಾರಣೆ ನಿಟ್ಟಿನಲ್ಲಿ –ಎಂ.ಜಿ. ಈಶ್ವರಪ್ಪ ೨೧.ಜನಪದ ಪ್ರದರ್ಶನ ಕಲೆಗಳು ಮತ್ತು ಸುಧಾರಣೆಯ ಅಗತ್ಯ–ಹಿ.ಚಿ. ಬೋರಲಿಂಗಯ್ಯ ೨೨.ಜನಪದ ಕಲೆಗಳ ಅಧ್ಯಯನ: ಆದದ್ದು ಆಗಬೇಕಾದದ್ದು– ಟಿ. ಗೋವಿಂದರಾಜು ಗೊ.ರು ಚನ್ನಬಸಪ್ಪ ಅವರ ಅಧ್ಯಕ್ಷರ ನುಡಿ, ಸಂಪಾದಕರ ಪ್ರಸ್ತಾವನೆ ಇವೆ.

೬೬೯. ಜಾನಪದ ಜಗಲಿಯಲ್ಲಿ

ಲೇ: ಎನ್.ಆರ್. ನಾಯಕ; ಪ್ರ: ಜಾನಪದ ಪ್ರಕಾಶನ, ಹೊನ್ನಾವರ (ಉ.ಕ) ಮೊ.ಮು. ೨೦೦೨, ಪುಟ.: ೧೨ +೧೨೦+೮ =೧೪೦; ಡಿಮ್ಮೈ ೧/೮

ಎರಡು ಭಾಗಗಳಲ್ಲಿ ನಿರೂಪಿಸಿರುವ ಆತ್ಮಕಥನ: ೧.ಭಯ, ಬೆರಗು, ನಲಿವಿನ ರಂಗ ೨.ನೆರಳು ಬೆಳಕಿನ ಸಂಗ. ಮೊದಲನೆಯ ಭಾಗದಲ್ಲಿ ೨೪ ಅಧ್ಯಾಯಗಳು, ಎರಡನೆಯ ಭಾಗದಲ್ಲಿ ೬೦ ಅಧ್ಯಾಯಗಳೂ ಇವೆ. ಈ ಎರಡೂ ಭಾಗಗಳನ್ನು ಕುರಿತು ಲೇಖಕರು ಹೀಗೆ ಹೇಳಿಕೊಂಡಿದ್ದಾರೆ. "ಜಾನಪದ ಜಗಲಿಯಲ್ಲಿ ನಾನು ಬಾಲ್ಯದಿಂದ ವೃದ್ಧನಾಗುವವರೆಗೆ ಅನುಭವಿಸಿದ ಬೆರಗು, ಭಯ, ಭಕ್ತಿ, ಪ್ರೀತಿ, ವಾತ್ಸಲ್ಯ, ನೋವು, ನಲಿವು, ಸೋಲು, ಗೆಲುವು ಎಲ್ಲದರ ಚಿತ್ತಾರವನ್ನು ನೋಡಬಹುದು. ಮೊದಲನೆಯ

ಭಾಗವನ್ನು ನಾನು ಜಾನಪದ ಜಗಲಿಯಲ್ಲಿ ಕಂಡ ಭಯ, ಬೆರಗು ನಲ್ಮೆಯ ಆಟಪಾಠಗಳ ಚಿತ್ರಗಳೇ ಹೆಚ್ಚಾಗಿ ಆವರಿಸಿದರೆ, ಎರಡನೆಯ ಭಾಗವನ್ನು ನಾನು ಪ್ರಬುದ್ಧನಾದ ಮೇಲೆ ನನ್ನನ್ನು ಇಡಿಯಾಗಿ ಜಾನಪದದಲ್ಲಿ ತೊಡಗಿಸಿಕೊಂಡ ಬದುಕಿನ ಬೆಳಕು ಕತ್ತಲೆಯ ಕಣ್ಣುಮುಚ್ಚಾಲೆ ಆವರಿಸಿಕೊಂಡಿದೆ.

೬೨೦. ಜನಪದ ಕವಿಚರಿತೆ –ಸಂಪುಟ ಒಂದು

ಲೇ: ಮಲ್ಲಿಕಾರ್ಜುನ ಶಿ.ಲಠ್ಠೆ; ಪ್ರ: ಬಸವಂತರಾಯ ಮಾಲಾ ಪಾಟೀಲ ಸ್ಮಾರಕ ಗ್ರಂಥ ಪ್ರಕಾಶನ, ಧಂಗಾಪುರ; ಮೊ.ಮು.೧೯೭೬; ಪುಟ ೩೨೩; ಕ್ರೌನ್ ೧/೮

೧೯೧೦ ರಿಂದ ೧೯೫೫ ರವರೆಗಿನ ೨೫೭ ಮಂದಿ ಜನಪದ ಕವಿಗಳನ್ನು ಪರಿಚಯ ಮಾಡಿಕೊಡುವ ಗ್ರಂಥ.

೬೨೧. ಜನಪದ ಕಸೂತಿ

ಲೇ: ಮಧು ವೆಂಕಾರೆಡ್ಡಿ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು. ೨೦೦೦; ಪುಟ ೨+೩೬=೩೮; ಡಿಮ್ಮೈ ೧/೮

ಏಳು ಅಧ್ಯಾಯಗಳಿವೆ: ೧.ಜನಪದ ಕಲೆ–ಚಿತ್ರಕಲೆ ೨.ಕಸೂತಿ ಕಲೆ: ಪ್ರೇರಣೆ –ಪ್ರಸರಣ ೩.ಕಸೂತಿ –ಹೆಣಿಗೆ ೪.ಕರ್ನಾಟಕ ಕಸೂತಿ ೫.ಕಸೂತಿ: ವಿವಿಧ ದೃಷ್ಟಿಕೋನ ೬.ಕಸೂತಿ–ಹಚ್ಚೆ–ರಂಗೋಲಿ ೭.ಸಮಾರೋಪ.

೬೨೨. ಜನಪದ ಕಾವ್ಯ

ಲೇ: ಗಿರಿಡ್ಡಿ ಗೋವಿಂದರಾಜ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು. ೧೯೭೧, ಪುಟ ೧೦+೭೨=೮೨; ಫೂಲ್ಸ್‌ಕ್ಯಾಪ್ ೧/೮

ಏಳು ಅಧ್ಯಾಯಗಳಲ್ಲಿರುವ ವಿಶ್ಲೇಷಣೆ; ೧.ಜನಪದ ಕಾವ್ಯದ ಪರಂಪರೆ ೨.ಅನುಭವ ಮತ್ತು ಅಭಿವ್ಯಕ್ತಿ ೩.ಸಮಷ್ಟಿ ಪ್ರಜ್ಞೆ ೪.ವೈಚಾರಿಕತೆ ೫.ಮೌಲ್ಯಪ್ರಜ್ಞೆ ೬.ಹೊಸ ಕಾವ್ಯದ ಮೇಲೆ ಪ್ರಭಾವ ೭.ಕೊನೆಯ ಮಾತು. ಎ.ಎಸ್. ಅಡಕೆ ಅವರ ಮುನ್ನುಡಿ, ಲೇಖಕರ ಮೊದಲ ಮಾತು, ಇವೆ.

೬೨೩. ಜನಪದ ಕಾವ್ಯ ಕಥೆಗಳು ಮತ್ತು ಗೀತಮೇಳಗಳು (ಜನಪದ ಬರಹ ಸಂಪುಟ–೩)

ಲೇ: ಜೀ.ಶಂ, ಪರಮಶಿವಯ್ಯ; ಪ್ರ: ಸಾಗರ್ ಪ್ರಕಾಶನ, ೬೯೫, ೧೦ನೇ ಮುಖ್ಯರಸ್ತೆ, ೮೦ ಅಡಿರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು–೫೬೦ ೦೭೨; ಸಮಗ್ರ ಮೊ.ಮು: ೨೦೧೨; ಪು: ೫೪೪; ಡಿಮ್ಮೈ ೧/೮

ಇದು ಎರಡು ಗ್ರಂಥಗಳ ಗುಚ್ಛ : **ಗ್ರಂಥ ಒಂದು : ಜನಪದ ಕಾವ್ಯಕಥೆಗಳು:** ಇದರಲ್ಲಿ ಏಳು ಅಧ್ಯಾಯಗಳಿವೆ: ೧.ಕರಪಾಲದ ಕಥೆಗಳು ೨.ಕಂಸಾಳೆ ಕಥೆಗಳು ೩.ಮುಂಟೇಸ್ವಾಮಿ ಕಥೆಗಳು ೪.ಗುಡ್ಡರ ಕಥೆಗಳು ೫.ನೀಲಗಾರರ ಕಥೆಗಳು ೬.ಜುಂಜಪ್ಪನ ಕಥೆಗಳು ೭.ಹೆಂಗಸರ ಹಾಡ್ಗತೆಗಳು: ನಂಜುಂಡಲಿಂಗ, ಜಗಳವ ನೋಡಿ ನಗುತಾನೆ, ಬಿಟ್ಟೆ ಕಾಣೆ ಇವಳ ಜನುಮಾಕೆ, ಅಣಜಿ ಹೊನ್ನಮ್ಮ, ಇಬ್ಬರಿಗ್ಗೂವ ಮುಡಿಸ್ಯಾನೆ, **ಗ್ರಂಥ ಎರಡು: ಜನಪದ ಗೀತ ಮೇಳಗಳು:** ಇದರಲ್ಲಿ ಆರು ಅಧ್ಯಾಯಗಳಿವೆ: ೧.ದಕ್ಷಿಣ ಕರ್ನಾಟಕದ ಹೆಂಗಸರ ಜನಪದ ಗೀತೆಗಳು ೨.ದಕ್ಷಿಣ ಕರ್ನಾಟಕದ ಗಂಡಸರ ಜನಪದ ಗೀತಮೇಳಗಳು ೩.ದೊಂಬಿದಾಸರು ೪.ಮಂಟೇಸ್ವಾಮಿಯ ನೀಲಗಾರರು ೫.ಕಂಸಾಳೆಯವರು ೬.ಕಿನ್ನರಿ ಜೋಗಿಗಳು. ಮೌನದೊಳಗಿನ ಮಹತ್ತು ಎಂಬ ಚಕ್ಕೆರೆ ಶಿವಶಂಕರ್ ಅವರ ಪ್ರಧಾನ ಸಂಪಾದಕರ ಮಾತು ಇದೆ.

೬೭೪. ಜನಪದ ಕಾವ್ಯ ಮೀಮಾಂಸೆ

ಲೇ: ಎಸ್.ಎಂ.ಹಿರೇಮಠ; ಪು: ವಿದ್ಯಾನಿಧಿ ಪ್ರಕಾಶನ, ಗದಗ; ಮೊ.ಮು: ೨೦೦೩; ಪು: ೬+೨೫೬=೨೬೨; ಡಿಮ್ಮೈ ೧/೮

ಹದಿನಾಲ್ಕು ಅಧ್ಯಾಯಗಳಿವೆ: ೧.ಪೀಠಿಕೆ ೨.ಅಕ್ಷರದೊಂದಿಗೆ ಚಕ್ಕಂದವಾಡುವವನು ೩.ಕಿವಿಗಳಿದ್ದ ಕಾಡು ಕವಿಗೆ ನಾಡು ೪.ಕತ್ತಲೆಯ ಗೂಡಿಂದ ಮೂಡಿದಾ ಮಣಿದೀಪ ೫.ಒಡಲಾಳದ ಮುತ್ತು ಹೊರಗೆ ಬಿತ್ತು ೬.ಗುಡಿಸಿಲಿನ ನೋವಿಗೆ ನಿಡಿಯಾಯ್ತು ಈ ಹಾಡು ೭.ಹಸನಾದ ಹಾಡೀಗಿ ಕುಸುರದ ಒಡ್ಯಾಣ ೮.ದನಿಗೆಟ್ಟು ಧ್ವನಿಯಾಯ್ತು ೯.ರಸಿಕ ಹಾಡಿದ ಹಾಡು ರಸಕಬ್ಬ ತಿಂದಾಂಗ ೧೦.ಹರಕ ಹಾಡಾ ತಂದು ಹಾರ್‍ಯಾಡಿ ಹಾಡುವವರು ೧೧.ಪದವ ಕಾಣದ ಮುರುವ ಅದನ್ಯಾಕೆ ಹಳಿವೆಯಾ? ೧೨.ಜನಪದ ಕಾವ್ಯ ಪ್ರಕಾರಗಳು ೧೩.ಜನಪದ ಮಹಾಕಾವ್ಯ ಸ್ವರೂಪ ೧೪ಸಮಾರೋಪ. ಕೊನೆಯಲ್ಲಿ, ಜನಪದ ಕಾವ್ಯಗಳಲ್ಲಿ ಕಾಣುವ ವಿಶಿಷ್ಟ ಪದಸೂಚಿ ಇದೆ.

೬೭೫. ಜನಪದ ಕಾವ್ಯ ಮೀಮಾಂಸೆ ಹಾಗೂ ವಿಮರ್ಶಾ ಪ್ರಸ್ಥಾನಗಳು

ಲೇ: ವೀರಣ್ಣ ದಂಡೆ; ಪ್ರ: ಕವಿಮಾರ್ಗ ಪ್ರಕಾಶನ, ಸರಸ್ವತಿಪುರ, ವಿಶ್ವವಿದ್ಯಾಲಯ ಅಂಚೆ, ಕಲಬುರ್ಗಿ–೫೮೫ ೧೦೬; ಮೊ.ಮು.: ೨೦೦೪, ಪುಟ ೮+೨೬೪=೨೭೨, ಡಿಮ್ಮೈ ೧/೮

ಮೂರು ಭಾಗಗಳಲ್ಲಿ ಹರಡಿಕೊಂಡಿರುವ ಅಧ್ಯಯನ ಗ್ರಂಥ. ಪ್ರತಿಯೊಂದು ಭಾಗದಲ್ಲೂ ಪ್ರತ್ಯೇಕ ಅಧ್ಯಾಯಗಳಿವೆ. **ಭಾಗ ೧: ಜನಪದ ಕಾವ್ಯ ಮೀಮಾಂಸೆಯ ಪ್ರವೇಶಿಕೆ.** ಅಧ್ಯಾಯಗಳು: ೧.ದೇಸೀ ದೃಷ್ಟಿಯ ಸೈದ್ಧಾಂತಿಕ ಆಲೋಚನೆ ೨.ಕಲಾಮೀಮಾಂಸೆಯ ಮೂರು ಮುಖ್ಯಧಾರೆಗಳು ೩.ಆನಂದವೆಂಬ ಭ್ರಮೆಯ ಬೆನ್ನುಹತ್ತಿ ೪.ಲಲಿತ ಕಲೆಗಳು ಮತ್ತು ಜನಪದ ಸಾಹಿತ್ಯ ೫.ಜನಪದ ಕಾವ್ಯಭಾಷೆ ೬.ಜನಪದ ಕಾವ್ಯ: ಆತಂಕಗಳಿಂದ

ಹೊಸ ಹುಡುಕಾಟದತ್ತ. **ಭಾಗ ೨: ಕಾವ್ಯಮೀಮಾಂಸೆಯ ಮೂಲಭೂತ ಪರಿಕಲ್ಪನೆಗಳು:** ಕವಿ–ಕಾವ್ಯ–ಸಹೃದಯ. ಅಧ್ಯಾಯಗಳು: ೧.ಜನಪದ ಕಾವ್ಯ ಸ್ವರೂಪ ಅರಿಯುವತ್ತ ೨.ಕಾವ್ಯದ ಕಾರಣಗಳು ಕವಿಯ ಸಾಮರ್ಥ್ಯಗಳಾಗಿ ೩.ಕವಿ ಎಂಬ ಪುಣ್ಯವಂತ ೪.ಸಹೃದಯ: ನೋಡುಗ ಮತ್ತು ಕೇಳುಗ ೫.ಕಾವ್ಯದ ಪರಿಣಾಮ ಮತ್ತು ಪ್ರಯೋಜನಗಳು. **ಭಾಗ ೩: ಕಾವ್ಯಮೀಮಾಂಸಾ ಸಿದ್ಧಾಂತಗಳು (ವಿಮರ್ಶಾ ಪ್ರಸ್ಥಾನಗಳು).** ಅಧ್ಯಾಯಗಳು ೧.ಸೌಂದರ್ಯ ಕಾವ್ಯಮೀಮಾಂಸೆ ೧.೧.ಪ್ರಥಮ ವಿಮರ್ಶೆ ಸತ್ವ ಮತ್ತು ಸ್ವರೂಪ ೨.ರಾಚನಿಕ ಕಾವ್ಯಮೀಮಾಂಸೆ ೨.೧.ಜನಪದ ಕಾವ್ಯದ ರಾಚನಿಕ ವಿನ್ಯಾಸ ೨.೨.ಜನಪದ ಮಹಾಕಾವ್ಯ ರಾಚನಿಕ ಮತ್ತು ಸಂವಹನ ಸ್ವರೂಪ ೨.೩.ಕಥಾಘಟಕಗಳು –ಸಂಕೀರ್ಣ ಜನಪದ ಕಥೆಗಳ ರಾಚನಿಕ ಸ್ವರೂಪ ೨.೪ ಮಾದರಿ (Type) ಪರಿಕಲ್ಪನೆ ಮತ್ತು ರಚನೆ. ೩.ಜೀವನ ಕಾವ್ಯಮೀಮಾಂಸೆ ೩.೧.ಮೌಲ್ಯಗಳ ಸಂಘರ್ಷ: ಜನಪದ ಸಾಮಾಜಿಕ ಕಥನ ಸಾಹಿತ್ಯದಲ್ಲಿ. ಗ್ರಂಥದ ಕೊನೆಯಲ್ಲಿ, ಗ್ರಂಥ ಋಣ, ಸಂಕ್ಷೇಪಗಳ ವಿವರ, ಇವೆ.

೬೭೬. ಜನಪದ ಕಾವ್ಯ ಸಂಚಯ

ಸಂ: ಬಸವರಾಜ ನೆಲ್ಲಿಸರ; ಪ್ರ: ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಬಿ.ಆರ್. ಪ್ರಾಜೆಕ್ಟ್, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು.: ೧೯೮೪, ಪುಟ ೨೦+೨೧೬=೨೩೬, ಡಿಮ್ಮೈ ೧/೮

ಇಲ್ಲಿನ ಕಾವ್ಯಗಳನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದೆ. **೧.ಕಥನ ಗೀತೆಗಳು:** ಗುಣಸಾಗರಿ, ಶರಣೆ ಮಾದೇವಿ, ಉತ್ತರ ದೇವಿ **೨.ಸಂಪ್ರದಾಯದ ಹಾಡುಗಳು:** ಮದುವೆ ಪದಗಳು, ದೇವರ ಪದಗಳು, ಬೀಸೋ ಕಲ್ಲಿನ ಪದಗಳು. ಪ್ರಾರಂಭದಲ್ಲಿ ಎಚ್.ತಿಪ್ಪೇರುದ್ರಸ್ವಾಮಿ ಅವರ ಪ್ರಧಾನ ಸಂಪಾದಕರ ಮಾತು, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ: ಹಾಡಿದವರು, ಚಂದಮ್ಮನೊಡನೆ ಸಂದರ್ಶನ, ಕ್ಷೇತ್ರ ಕಾರ್ಯದ ಅನುಭವ ಹಾಗೂ ಸಮಸ್ಯೆಗಳು, ಅರ್ಥಕೋಶ, ಇವೆ.

೬೭೭. ಜನಪದ ಕಾವ್ಯ–ಡೊಳ್ಳಿನ ಪದಗಳು

ಲೇ: ಬೀರಪ್ಪ ಲ. ಹಳಮನಿ; ಪ್ರ: ಶ್ರೀ ಶಂಕರಲಿಂಗ ದೇಸಾಯಿ, ಶ್ರೀ ಭುವನೇಶ್ವರ ಅಸೋಸಿಯೇಟ್ಸ್, ಯಡಹಳ್ಳಿ ತಾಲ್ಲೂಕು, ಬಾಗಲಕೋಟ ಜಿಲ್ಲೆ;

೪೨ ಸ್ವರಚಿತ ಡೊಳ್ಳಿನ ಪದಗಳ ಸಂಕಲನ.

೬೭೮. ಜನಪದ ಕಾವ್ಯಕಥೆಗಳು

ಲೇ: ಜೀ.ಶಂ. ಪರಮಶಿವಯ್ಯ ಪ್ರ; ಸುರುಚಿ ಪ್ರಕಾಶನ, ಮೈಸೂರು; ಮೊ.ಮು: ಕೆಲವು ಪುಟಗಳು ಈ ಪ್ರತಿಯಲ್ಲಿಲ್ಲ; ಕೊನೆಯ ಪುಟ: ೪೧೬; ಕ್ರೌನ್ ೧/೮

ಏಳು ಸಂಪ್ರದಾಯದ ಕಾವ್ಯಗಳ ಕಾವ್ಯಭಾಗಗಳನ್ನು ನಡುನಡುವೆ ಬಳಸಿಕೊಂಡು ಗದ್ಯದಲ್ಲಿ ಕಾವ್ಯಕಥೆಗಳನ್ನು ಹೇಳಲಾಗಿದೆ. ೧.ಕರಪಾಲದ ಕಥೆಗಳು ೨.ಕಂಸಾಳೆ ಕಥೆಗಳು ೩.ಮಂಟೇಸ್ವಾಮಿ ಕಥೆಗಳು ೪.ಗುಡ್ಡರ ಕಥೆಗಳು ೫.ನೀಲಗಾರರ ಕಥೆಗಳು ೬.ಜುಂಜಪ್ಪನ ಕಥೆಗಳು ೭.ಹೆಂಗಸರ ಹಾಡ್ಗತೆಗಳು. ಕೆಲವು ಕಲಾವಿದರ ಫೋಟೋಗಳಿವೆ. ಹಾಡಿದವರ ವಿವರಗಳು, ಪ್ರಸ್ತಾವನೆ, ಇವೆ.

೬೭೯. ಜನಪದ ಕಾವ್ಯದಲ್ಲಿ ಜೀವನ ಧರ್ಮ

ಲೇ: ಪಿ.ವ್ಹಿ. ಮಲ್ಲಾಪುರ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು. ೧೯೭೦; ಪುಟ ೧೦+೯೬=೧೦೬; ಫೂಲ್ಸ್‌ಕ್ಯಾಪ್ ೧/೮

ಒಂಬತ್ತು ಅಧ್ಯಾಯಗಳಿವೆ: ೧.ಮೊದಲ ಮಾತು ೨.ಬದುಕಿನಲ್ಲಿ ನಿಷ್ಠೆ ೩.ದುಡಿತವೇ ಬಾಳ ಮಂತ್ರ ೪.ದೈವ ಭಕ್ತಿ ಬಾಳ ಶಕ್ತಿ ೫.ಜೀವನ ಮೌಲ್ಯ ಪ್ರಸಾರ ೬.ಜೀವನ ಧರ್ಮಕ್ಕೆ ಹೆಣ್ಣು ತುಂಬಿದ ಹಿರಿಮೆ ೭.ಹಾಸ್ಯ ಬಾಳಿಗೆ ಹಾಸ ೮.ಸೌಂದರ್ಯ ಸಿದ್ಧಿ ೯.ಕೊನೆಯ ಮಾತು. ಎ.ಎಸ್. ಅಡಕೆ ಅವರ ಮುನ್ನುಡಿ, ಕೊನೆಯಲ್ಲಿ ಗ್ರಂಥ ಋಣ, ಇವೆ.

೬೮೦. ಜನಪದ ಕಾವ್ಯಮೀಮಾಂಸೆ

ಲೇ: ವೀರಣ್ಣ ದಂಡೆ; ಪ್ರ: ಮೂಡಲ ಪ್ರಕಾಶನ, ಚೌಡೇಶ್ವರ ಕಾಲನಿ, ಬ್ರಹ್ಮಪುರ, ಕಲಬುರ್ಗಿ–೫೮೫೧೦೩; ಮೊ.ಮು: ೧೯೮೨; ಪು: ೭+೬೮ = ೭೫; ಡಿಮ್ಮೈ ೧/೮

ಈ ಗ್ರಂಥದಲ್ಲಿ ಹನ್ನೆರಡು ಪ್ರಕರಣಗಳಿವೆ: ೧.ಪ್ರವೇಶಿಕೆ ೨.ಕಾವ್ಯ ಸ್ವರೂಪ ೩.ಕಾವ್ಯದ ಕಾರಣಗಳು ೪.ಕವಿ ಪ್ರಭೇದಗಳು ೫.ಸಹೃದಯ ೬.ಸ್ವರಗತಿಗಳು ೧೦.ಪ್ರಾಸ ೧೧.ವಿಷಾಕ್ಷರಗಳು ೧೨.ಗಣಗಳು. ಕೊನೆಯಲ್ಲಿ ಶಬ್ದಸೂಚಿ ಇದೆ.

೬೮೧. ಜನಪದ ಕಾವ್ಯಮೀಮಾಂಸೆ

ಲೇ: ವೀರಣ್ಣ ದಂಡೆ; ಪ್ರ: ಮೂಡಲ ಪ್ರಕಾಶನ, ಚೌಡೇಶ್ವರಿ ಕಾಲನಿ, ಬ್ರಹ್ಮಾಪುರ, ಕಲಬುರ್ಗಿ–೫೮೫ ೧೦೩; ಮೊ.ಮು. ೧೯೮೨; ಪುಟ ೮+೬೮=೭೬; ಡಿಮ್ಮೈ ೧/೮

ಹನ್ನೆರಡು ಪ್ರಕರಣಗಳ ಮೂಲಕ ಇಲ್ಲಿನ ವಿಶ್ಲೇಷಣೆ ಇದೆ. ೧.ಪ್ರವೇಶಿಕೆ ೨.ಕಾವ್ಯ ಸ್ವರೂಪ ೩.ಕಾವ್ಯದ ಕಾರಣಗಳು ೪.ಕವಿ ಪ್ರಭೇದಗಳು ೫.ಸಹೃದಯ ೬.ಕಾವ್ಯ ಪ್ರಯೋಜನಗಳು ೭.ಬಂಧ ವಿನ್ಯಾಸ ೮.ಧಾಟಿ ೯.ಸ್ವರಗತಿಗಳು ೧೦.ಪ್ರಾಸ ೧೧.ವಿಷಾಕ್ಷರಗಳು ೧೨.ಗಣಗಳು.

೬೮೨. ಜನಪದ ಕುಣಿತಗಳು

ಲೇ: ಎಚ್.ಆರ್. ಚೇತನ; ಪ್ರ: ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬; ಮೊ.ಮು.೨೦೧೨; ಪುಟ ೨೪+೬೦+೪=೮೮; ಕ್ರೌನ್ ೧/೮

ಹತ್ತು ಅಧ್ಯಾಯಗಳಿವೆ: ೧.ಪ್ರಸ್ತಾವನೆ ೨.ಹಿನ್ನೆಲೆ ೩.ಹುಟ್ಟು-ಬೆಳವಣಿಗೆ ೪.ಸಾಹಿತ್ಯ ೫.ವಾದ್ಯಗಳು ೬.ಉಡುಗೆ-ತೊಡುಗೆಗಳು ೭.ಮನರಂಜಕ ಕುಣಿತಗಳು ೮.ಆಚರಣಾತ್ಮಕ ಕುಣಿತಗಳು ೯.ಅಳಿವು-ಉಳಿವು ೧೦.ಉಪಸಂಹಾರ. ಕೊನೆಯಲ್ಲಿ ಕೆಲವು ಫೋಟೋಗಳಿವೆ.

೬೮೩. ಜನಪದ ಕುಶಲಕಲೆಗಳು

ಲೇ: ಪಿ.ಗೌರೀಶ್ ; ಪ್ರ: ಚೇತನ ಬುಕ್ ಹೌಸ್, ಅಂಜನಾದ್ರಿ, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು-೫೭೦ ೦೨೪; ಮೊ.ಮು: ನಮೂದು ಇಲ್ಲ; ಪು: ೧೦+೧೩೪=೧೪೪; ಡಿಮ್ಮೈ ೧/೮

೩೭ ಶೀರ್ಷಿಕೆಗಳಿವೆ: ೧.ಬೆಟ್ಟದ ಚಾಮುಂಡಿ ೨.ಭಾರತದ ಅಪೂರ್ವ ಜಾನಪದ ವಸ್ತು ಸಂಗ್ರಹಾಲಯ ೨.ಕರಾವಳಿಯ ಆಚರಣೆಗಳಲ್ಲಿ ಅಲಂಕರಣ ಚಿತ್ರಗಳು ೪.ಸುತ್ತೂರಿನ ಸಾಂಸ್ಕೃತಿಕ ವಸ್ತು ಸಂಗ್ರಹಾಲಯ ೫.ಹಚ್ಚೆ ೬.ತೊಗಲು ಗೊಂಬೆಯಾಟ ೭.ಜನಪದ ಚಿತ್ರಕಲೆ ೮.ಜೋಗತಿ ಎಲ್ಲಮ್ಮ ೯.ಮೈಸೂರು ಸುತ್ತಿನ ಜನಪದ ಚಿಕಿತ್ಸೆ ೧೦.ಪ್ರದರ್ಶನ ಸಿದ್ಧಾಂತದ ಹಿನ್ನೆಲೆಯಲ್ಲಿ: ಕೋಲೆ ಬಸವ ಪ್ರದರ್ಶನ ೧೧.ಸಾಂಪ್ರದಾಯಿಕ ಚಿತ್ರಕಲಾವಿದರು ೧೨.ಮೈಸೂರಿನ ಪ್ರೇಕ್ಷಣೀಯ ಸ್ಥಳಗಳು ೧೩.ಮೈಸೂರು ಪ್ರದೇಶದ ಜನಪದ ಕಲೆಗಳು ೧೪.ಮೂವರಲ್ಲಿ ಯಾರ್ದೆಚ್ಚು ? ೧೫.ಶಾಸನಗಳು ೧೬.ಮುಖವಾಡಗಳು ೧೭.ಮಳೆಬಿಸಿಲುಗಳ ಸಂರಕ್ಷಣ ಪರಿಕರಗಳು ೧೮.ಸಾಗಾಣಿಕೆ ಸಲಕರಣೆಗಳು ೧೯.ಪಂಕ ೨೦.ಗುಡುಗುಡಿ ೨೧.ಬೀಗಗಳು ೨೨.ಟೀಪಿ ೨೩.ಕೈಕೋಲು ೨೪.ಬಾರು ಕೋಲು ೨೫.ಶಿಕ್ಷೆಯ ಸಾಧನಗಳು ೨೬.ನೀರೆತ್ತುವ ಸಲಕರಣೆಗಳು ೨೭.ಕೊಣಮಿಗಿಗಳು ೨೮.ಅಳತೆ ಪರಿಕರಗಳು ೨೯.ಕರಂಡಿಗೆ, ಕರಂಡಗಳು ೩೦.ಕರ್ನಾಟಕದ ಕುಂಚಬ್ರಹ್ಮ ೩೧.ಜನಪದ ಆಶುಕವಿ ಸಿದ್ಧಪ್ಪ ಬಿದರಿ ೩೨.ಜನಪದರು ಕಂಡ ಕೆಂಪೇಗೌಡ ೩೩.ಮೈಸೂರಿನ ಮದರ್ ಥೆರೆಸಾ ೩೪.ಅರಸರ ಘಟ್ಟದ ಕೋರೆಯ ಯಕ್ಷಗಾನ ೩೫.ಬಸವರಾಜಯ್ಯನವರ ಸಿನಿಮಾ ಪ್ರಪಂಚ ೩೬.ರಾಜಶೇಖರ ಕದಂಬ ೩೭.ಜನಪದ ಕತೆಗಳ ಶಾಂತಜ್ಜಿ. ಡಿ.ಕೆ. ರಾಜೇಂದ್ರ ಅವರ ಮುನ್ನುಡಿ ಇದೆ.

೬೮೪. ಜನಪದ ಗಣಿತ ಚಮತ್ಕಾರ

ಸಂ: ಜೀನಹಳ್ಳಿ ಸಿದ್ಧಲಿಂಗಪ್ಪ; ಪ್ರ: ಪ್ರೇಮ ಪ್ರಕಾಶನ ಜೀನಹಳ್ಳಿ ಅಂಚೆ ನ್ಯಾಮತಿ ಮಾರ್ಗ ದಾವಣಗೆರೆ ಜಿಲ್ಲೆ-೫೭೭ ೨೨೩; ಮೊ.ಮು.: ೧೯೮೫ ೨ನೆಯ ಮುದ್ರಣ: ೧೯೯೯; ಪು: ೫೬; ಕ್ರೌನ್ ೧/೮

ಎರಡು ಭಾಗಗಳಿವೆ: ೧.ಜನಪದ ಗಣಿತ: ಇದರಲ್ಲಿ ೩೨ ಲೆಕ್ಕಗಳಿವೆ. ೨.ಭಾಷಾ ಚಮತ್ಕಾರ: ೬೮ ಚಮತ್ಕಾರಗಳಿವೆ. ಕೊನೆಯಲ್ಲಿ ವಕ್ತೃ ಪರಿಚಯ ಇದೆ.

೬೮೫. ಜನಪದ ಗಾದೆ ಮತ್ತು ಒಗಟುಗಳು

ಸಂ: ಮೈಲಹಳ್ಳಿ ರೇವಣ್ಣ; ಪ್ರ: ಪ್ರೇಮ ಪ್ರಕಾಶನ, ಜೇನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ-೫೭೭ ೨೨೩; ಮೊ.ಮು: ೨೦೧೨; ಪು: ೪+೮+೩೨೮=೧೪೦; ಡಿಮ್ಮೈ ೧/೮

ಸಂ: ಬಸವರಾಜ ಪೋಲಿಸ ಪಾಟೀಲ; ಪ್ರ: ಅಮರ ಪ್ರಕಾಶನ, ಗುಲಬರ್ಗಾ; ಮೊ.ಮು. ೨೦೦೮; ಪುಟ ೬+೧೨೦=೧೨೬; ಡಿಮ್ಮೈ ೧/೮

ವಿವಿಧ ಲೇಖಕರು ಬರೆದಿರುವ ಹದಿನೈದು ಲೇಖನಗಳಿವೆ: ೧.ಜನಪದ ಸಾಹಿತ್ಯ: ಶರಣರು–ಬಸವರಾಜ ಪೋಲಿಸ ಪಾಟೀಲ ೨.ಜಾನಪದದಲ್ಲಿ ಶರಣರ ಪ್ರತಿಮೆಗಳು – ಚಕ್ಕೆರೆ ಶಿವಶಂಕರ ೩.ಜಾನಪದ ಹಬ್ಬಗಳಲ್ಲಿ ಶಿವಶರಣರು –ಹನುಮಂತರಾವ ದೊಡ್ಡಮನಿ ೪.ಪ್ರಭುದೇವರ ಯಕ್ಷಗಾನ –ಸಂಗಮೇಶ ಸವದತ್ತಿಮಠ ೫.ಬಸವಣ್ಣನವರ ಕುರಿತ ಜನಪದರ ಭಕ್ತಿ–ಭಾವ –ಸಿ.ಕೆ. ನಾವಲಗಿ ೬.ನೀಲಾಂಬಿಕೆ–ಗಂಗಾಂಬಿಕೆ ಮತ್ತು ಜನಪದ ಸಂಪ್ರದಾಯಗಳು – ಜಾಜಿ ದೇವೇಂದ್ರಪ್ಪ ೭.ಜನಪದ ತ್ರಿಪದಿಗಳಲ್ಲಿ ಮುಕ್ತಾಯಕ್ಕ ಹಾಗೂ ಅಜಗಣ್ಣ – ವಿಜಯಶ್ರೀ ಸಬರದ ೮.ಅಕ್ಕಮಹಾದೇವಿ ವಚನಗಳಲ್ಲಿ ಜಾನಪದೀಯ ಅಂಶಗಳು –ಶ್ರೀಶೈಲ ನಾಗರಾಳ ೯.ಜನಪದ ಸಾಹಿತ್ಯದಲ್ಲಿ ಸಿದ್ಧರಾಮ –ಶಂಕರಗೌಡ ಬಿರಾದಾರ, ಗುಂಡಕನಾಳ ೧೦.ದುಂದುಮೆ ಹಾಡುಗಳಲ್ಲಿ ಶರಣ ಆದಯ್ಯ –ಸೋಮನಾಥ ಯಾಳವಾರ ೧೧.ಜನಪದ ಹಾಡು ಹಾಗೂ ಐತಿಹ್ಯಗಳಲ್ಲಿ ಚಂದಯ್ಯನ ಇತಿವೃತ್ತ – ವ್ಹಿ.ಜಿ.ಪೂಜಾರ ೧೨.ಅಂಬಿಗರ ಚೌಡಯ್ಯ ಮತ್ತು ಜನಪದ ನುಡಿಗಟ್ಟುಗಳು –ನಾಗಾಬಾಯಿ ಬಿ.ಬುಳ್ಳಾ ೧೩.ಬಹುರೂಪಿ ಚೌಡಯ್ಯ ಮತ್ತು ಜನಪದ ಕಲೆಗಳು – ಕೆ. ಶಶಿಕಾಂತ ೧೪.ಜನಪದದಲ್ಲಿ ಮಡಿವಾಳ ಮಾಚಿದೇವ – ಮಾಯಾದೇವಿ ಮ.ಪಾಟೀಲ ೧೫.ಸಮಗಾರ ಹರಳಯ್ಯ ಮತ್ತು ಜನಪದ ವೃತ್ತಿ –ಶರಣಪ್ಪ ಆನೆ ಹೊಸೂರ.

೭೬೭. ಜನಪದ ಸಾಹಿತ್ಯಕ್ಕೆ ವಿಜಾಪುರ ಜಿಲ್ಲೆಯ ಕೊಡುಗೆ

ಲೇ: ಹರಿಲಾಲ ಪವಾರ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು. ೨೦೦೨; ಪುಟ ೪+೩೮=೪೨; ಡಿಮ್ಮೈ ೧/೮

ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಬಿಜಾಪುರ ಜಿಲ್ಲೆಯ ಹಲವು ವಿದ್ವಾಂಸರನ್ನು ಪರಿಚಯಿಸಿಕೊಡಲಾಗಿದೆ.

೭೬೮. ಜನಪದ ಸಾಹಿತ್ಯದ ಅವಲೋಕನ

ಲೇ: ಕೃಷ್ಣನಾಯಕ್; ಪ್ರ: ಅಪೂರ್ಣ ಪಬ್ಲಿಷಿಂಗ್ ಹೌಸ್, ೧೭೬, ೧೨ನೇ ಕ್ರಾಸ್; ಮಾಗಡಿ ಮುಖ್ಯ ರಸ್ತೆ, ಅಗ್ರಹಾರ ದಾಸರಹಳ್ಳಿ, ಬೆಂಗಳೂರು–೭೬; ಮೊ.ಮು: ೨೦೧೧; ಪು: ೧೦+೧೫೬; ಕ್ರೌನ್ ೧/೮

ಹನ್ನೊಂದು ಲೇಖನಗಳ ಸಂಕಲನ: ೧.ಜನಪದ ಸಾಹಿತ್ಯದಲ್ಲಿ ಮಹಿಳೆ ೨.ಬದುಕಿನ ಭಾಗವಾಗಿ ಜನಪದ ಗಾದೆಗಳು ೩.ಜನಪದ ಹಾಡುಗಳಲ್ಲಿ ಜೀವನ ಮೌಲ್ಯ ೪.ಜನಪದ

ಸಾಹಿತ್ಯದಲ್ಲಿ ಸ್ತ್ರೀ ಶೋಷಣೆ ೫.ಕೆರೆಗೆ ಹಾರ ೬.ಜನಪದ ಆಟಗಳ ಸಾಂಸ್ಕೃತಿಕ ನೋಟ ೭.ಜನಪದ ಕುಣಿತಗಳು ೮.ಜನಪದ ತ್ರಿಪದಿಗಳಲ್ಲಿ ದೇವರು ೯.ಜನಪದ ಮಹಾಕಾವ್ಯಗಳ ನಾಯಕರು ೧೦.ಕೃಷಿ ಉಪಕರಣಗಳ ಮೇಲೆ ಜಾಗತೀಕರಣ ಪ್ರಭಾವ ೧೧.ಪ್ರಸ್ತುತ ಸ್ಥಿತಿಯಲ್ಲಿ ಬುಡಕಟ್ಟು ಮಹಿಳೆ. ಕೃಷ್ಣಮೂರ್ತಿ ಹನೂರು ಅವರ ಮುನ್ನುಡಿ ಇದೆ.

೭೬೯. ಜನಪದ ಸಾಹಿತ್ಯದ ಮಹಿಳಾ ಜಗತ್ತು

ಸಂ: ಆರ್. ಸುನಂದಮ್ಮ; ಪ್ರ: ಸಮತಾ ಅಧ್ಯಯನ ಕೇಂದ್ರ, ಮೈಸೂರು; ಮೊ.ಮು. ೧೯೯೭; ಪುಟ ೮+೧೫೧=೧೫೯; ಡಿಮ್ಮೈ ೧/೮

ವಿವಿಧ ಲೇಖಕರ ಹತ್ತು ಲೇಖನಗಳ ಸಂಕಲನ: ೧.ಸ್ತ್ರೀ ಸಂಕಥನವಾಗಿ ಪಾಡ್ದನಗಳು – ಗಾಯತ್ರೀ ನಾವಡ ೨.ಜನಪದ ತ್ರಿಪದಿಗಳಲ್ಲಿ ಹೆಣ್ಣಿನ ಸ್ವಪ್ರತೀಕಗಳು –ಸಿ.ವೈ. ಕವಿತಾ ೩.ಸ್ತ್ರೀ ಕೇಂದ್ರಿತ ಕಾವ್ಯಗಳಾಗಿ ಜನಪದ ರಾಮಾಯಣ –ಭಾರತಗಳು– ಆರ್.ಸುನಂದಮ್ಮ ೪.ಜನಪದ ಕಥನಕಾವ್ಯಗಳ ಸ್ತ್ರೀಕಥನ – ಚಂದ್ರಮತಿ ಸೋಂದಾ ೫.ಬಹುಪತ್ನಿತ್ವದಡಿಯಲ್ಲಿ ಬೆಂದ ದೇವಿಯರು – ಮಂಜುಳಾ ಹುಲ್ಲಹಳ್ಳಿ ೬.ಗೀತೆಗಳಲ್ಲಿ ಜನಪದ ಮಹಿಳೆಯರ ಹಾಡು–ಪಾಡು –ಬಿ.ಸಿ.ಮಂಜುಳ ೭.ಒಸಗೆಯ ಒಂದು ಬಗೆ –ಸಿ.ಹೇಮಲತಾ ೮.ಲಿಂಗ ವ್ಯವಸ್ಥೆಯ ವಾಹಕಗಳಾಗಿ ಗಾದೆಗಳು – ವಿಜಯಾ ದಬ್ಬೆ ೯.ಯಾರವು ಬೂಟು? ಯಾರವು ಕೋಟು? –ಪ್ರೀತಿ ಶುಭಚಂದ್ರ ೧೦.ಸಿರಿ ಮತ್ತು ಅದರ ಬೇರೆ ಬೇರೆ ಸ್ವರೂಪಗಳು – ಕೃಷ್ಣಮೂರ್ತಿ ಹನೂರು.

೭೭೦. ಜನಪದ ಸಾಹಿತ್ಯದ ಮೂಲತತ್ವಗಳು

ಲೇ: ಆರ್ವೀಯಸ್ ಸುಂದರಂ; ಪ್ರ: ಅರ್ಕಾವತಿ ಪ್ರಕಾಶನ, ೨೩, ಟಿ.ಕೊಪ್ಪಲ್ ಬಡಾವಣೆ, ಸರಸ್ವತೀಪುರಂ, ಮೈಸೂರು–೫೭೦ ೦೦೯; ಮೊ.ಮು: ೧೯೭೬; ಪು: ೬+೭೨=೭೮; ಕ್ರೌನ್ ೧/೮

ಆರು ಅಧ್ಯಾಯಗಳಿವೆ: ೧.ಪ್ರವೇಶ ೨.ಜನಪದ ಗೀತೆ ೩.ಕಥನಗೀತೆ ೪.ಜನಪದ ಕಥೆ ೫.ಗಾದೆ ೬.ಒಗಟು.

೭೭೧. ಜನಪದ ಸಾಹಿತ್ಯದಲ್ಲಿ ಕಿತ್ತೂರ ಸಂಸ್ಥಾನಿಕರು

ಲೇ: ಶಿವಾನಂದ ಗುಬ್ಬಣ್ಣವರ; ಪ್ರ: ಅಕ್ಷಯ ಪ್ರಕಾಶನ, ಧಾರವಾಡ; ಮೊ.ಮು. ೨೦೧೧; ಪುಟ ೮+೨೬೮; ಡಿಮ್ಮೈ ೧/೮

ಈ ಸಂಶೋಧನಾತ್ಮಕ ಗ್ರಂಥದಲ್ಲಿ ಒಂಬತ್ತು ಅಧ್ಯಾಯಗಳಿವೆ: ೧.ವಿಷಯಕೋಶ ೨.ಕಿತ್ತೂರ ಪರಿಚಯ ೩.ಕೋಲು ಪದಗಳು ೪.ದುಂದುವೆ ಪದಗಳು ೫.ಲಾವಣಿ ಪದಗಳು ೬.ಸೋಬಾನ ಪದಗಳು ೭.ಹಂತಿಪದಗಳು ೮.ಹೋಳಿ ಪದಗಳು ೯.ಸಮಾರೋಪ. ಕೊನೆಯಲ್ಲಿ ವಿಶಿಷ್ಟ ಪದಸೂಚಿ ಇದೆ.

೭೭೨. ಜನಪದ ಸಾಹಿತ್ಯದಲ್ಲಿ ಕಿರಿದರೊಳೆ ಪಿರಿದರ್ಥದ ಚಲಕ

ಲೇ: ಸಿಂಪಿ ಲಿಂಗಣ್ಣ; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು. ೧೯೭೬; ಪುಟ ೮+೬೦=೬೮; ಫೂಲ್ಸ್‌ಕ್ಯಾಪ್ ೧/೮

ಜನಪದ ಸಾಹಿತ್ಯದ ಹರಹನ್ನು ಕುರಿತದ್ದು. ಹತ್ತು ಅಧ್ಯಾಯಗಳಿವೆ: ೧.ಜೀವನ-ಸಾಹಿತ್ಯಗಳ ತಳಕು ೨.ನುಡಿಯ ಹುಟ್ಟು-ಗುಟ್ಟು ೩.ಬಳಕೆಯ ಶಬ್ದಗಳೆಲ್ಲ ನುಡಿಯ ನಾಣ್ಯಗಳೇ ೪.ಹದವರಿತ ಬಳಕೆ ೫.ವಿಶ್ಲೇಷಣಾದ ಹಿನ್ನೆಲೆ ೬.ದೃಷ್ಟಾಂತದ ಹಾಗೂ ಪಡೆನುಡಿಯ ಕೋಲ್ಮಿಂಚು ೭.ಗವಸಣಿಗೆಯಲ್ಲಿರುವ ಗಾದೆ ೮.ಒಗಟಿನ ಅಂದ ೯.ಅಡ್ಡಗತೆಯ ಆಖ್ಯಾನ ೧೦.ಆದಾವ ನಮ್ಮ ಜ್ವಾಳ. ಉಳಿದಾವ ನಮ್ಮ ಹಾಡ. ಆರ್.ಸಿ. ಹಿರೇಮಠ ಅವರ ಮುನ್ನುಡಿ ಇದೆ.

೭೭೩. ಜನಪದ ಸಾಹಿತ್ಯದಲ್ಲಿ ಬಂಡಾಯದ ನೆಲೆ

ಲೇ: ಡಿ. ಶಿವನಂಜಯ್ಯ; ಪ್ರ: ಸಿರಾ ಪಬ್ಲಿಷಿಂಗ್ ಹೌಸ್, ೮೩/೧, ಕೆ.ಎಸ್.ಆರ್.ಟಿ.ಸಿ. ಬಡಾವಣೆ, ಹನುಮಂತ ನಗರ, ಬನ್ನಿಮಂಟಪ, ಮೈಸೂರು-೫೭೦ ೦೧೫; ಮೊ.ಮು: ೨೦೦೭; ಪು: ೮+೨೭೨=೨೮೦; ಡೆಮ್ಮಿ ೧/೮

ಪಿಎಚ್.ಡಿ. ಮಹಾಪ್ರಬಂಧ. ಎಂಟು ಅಧ್ಯಾಯಗಳಿವೆ: **ಅಧ್ಯಾಯ ಒಂದು:** ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ: ೧.ಉದ್ದೇಶ ಮತ್ತು ಮಹತ್ವ ೨.ಸ್ವರೂಪ ಮತ್ತು ವ್ಯಾಪ್ತಿ. **ಅಧ್ಯಾಯ ಎರಡು:** ಕನ್ನಡ ಸಾಹಿತ್ಯದಲ್ಲಿ ಬಂಡಾಯದ ಪರಿಕಲ್ಪನೆ: ೧.ಬಂಡಾಯದ ಅರ್ಥ ಮತ್ತು ವ್ಯಾಖ್ಯಾನ ೨.ಅರಸೊತ್ತಿಗೆ ೩.ಧಾರ್ಮಿಕ ೪.ವರ್ಣ, ಜಾತಿ, ಅಸ್ಪೃಶ್ಯತೆ ೫.ಊಳಿಗಮಾನ್ಯ ೬.ಲಿಂಗತಾರತಮ್ಯ. **ಅಧ್ಯಾಯ ಮೂರು:** ಜಾನಪದ ಮತ್ತು ಬಂಡಾಯ. **ಅಧ್ಯಾಯ ನಾಲ್ಕು:** ಜನಪದ ಗದ್ಯಸಾಹಿತ್ಯದಲ್ಲಿ ಬಂಡಾಯ: ೧.ಕಥೆಗಳಲ್ಲಿ ವರ್ಣ, ಜಾತಿ, ಅಸ್ಪೃಶ್ಯತೆ ೩.ಐತಿಹ್ಯಗಳಲ್ಲಿ ವರ್ಣ, ಜಾತಿ, ಅಸ್ಪೃಶ್ಯತೆ. **ಅಧ್ಯಾಯ ಐದು:** ಜನಪದ ಕಥನಗೀತೆಗಳಲ್ಲಿ ಬಂಡಾಯ: ೧.ವಸಾಹತುಶಾಹಿ ೨.ಸಂಪ್ರದಾಯ ಮತ್ತು ಆಚರಣೆ ೩.ಹೆಣ್ಣಿನ ಶೋಷಣೆ ೪.ವರ್ಣ ಜಾತಿ. **ಅಧ್ಯಾಯ ಆರು:** ಜನಪದ ಮಹಾಕಾವ್ಯಗಳಲ್ಲಿ ಬಂಡಾಯ ೧.ಅರಸೊತ್ತಿಗೆ ೨.ಧಾರ್ಮಿಕ. **ಅಧ್ಯಾಯ ಏಳು:** ಜನಪದ ಭಾಷಿಕ ಪ್ರಕಾರಗಳಲ್ಲಿ ಬಂಡಾಯ: ೧.ಗಾದೆಗಳು: ಅರಸೊತ್ತಿಗೆ, ಜಾತಿ, ಲೈಂಗಿಕ, ಅಸಮಾನತೆ, ಊಳಿಗಮಾನ್ಯ, ಸಂಪ್ರದಾಯ ಮತ್ತು ಆಚರಣೆ ೨.ಒಗಟುಗಳು. **ಅಧ್ಯಾಯ ಎಂಟು:** ಸಮಾರೋಪ.

೭೭೪. ಜನಪದ ಸಾಹಿತ್ಯದಲ್ಲಿ ನೀತಿ

ಲೇ: ಎಂ.ಎನ್. ವಾಲಿ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು: ೧೯೭೮; ಪು: ೮+೬೬=೭೪; ಫೂಲ್ಸ್ ಕ್ಯಾಪ್ ೧/೮

ಆರು ಅಧ್ಯಾಯಗಳಿವೆ: ೧.ಪೀಠಿಕೆ ೨.ನೀತಿಯ ಅರ್ಥ ಹಾಗೂ ವೈಶಾಲ್ಯ ೩.ಜನಪದ ತ್ರಿಪದಿಗಳಲ್ಲಿ ನೀತಿ ೪.ಜನಪದ ತ್ರಿಪದಿಗಳಲ್ಲಿ ಪರ್ಯಾಯ ನೀತಿ ೫.ಜನಪದ ಇತರ ಹಾಡುಗಳಲ್ಲಿ ನೀತಿ ೬.ಉಪಸಂಹಾರ. ಆರ್.ಸಿ. ಹಿರೇಮಠ ಅವರ ಮುನ್ನುಡಿ ಇದೆ.

೭೭೫. ಜನಪದ ಸಾಹಿತ್ಯದಲ್ಲಿ ಮಹಿಳೆ

ಲೇ: ಕೆ.ಆರ್. ಸಂಧ್ಯಾರೆಡ್ಡಿ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮; ಮೊ.ಮು. ೧೯೯೫; ಪುಟ ೪+೫೨=೫೬; ಕ್ರೌನ್ ೧/೮

"ಜನಪದ ಸಾಹಿತ್ಯದ ಸಮೃದ್ಧತೆ, ಅಪಾರ ವೈವಿಧ್ಯತೆ ಹಾಗೂ ವಿಭಿನ್ನತೆ ಮತ್ತು ಅದರ ಸಾಮಾಜಿಕ-ಸಾಂಸ್ಕೃತಿಕ ಪರಿವೇಷವನ್ನು ಗಮನದಲ್ಲಿರಿಸಿಕೊಂಡು" ಪ್ರಸ್ತುತ ವಿಷಯವನ್ನು ವಿಶ್ಲೇಷಿಸುವ ಒಂದು ಪ್ರಯತ್ನ ಈ ಕೃತಿ.

೭೭೬. ಜನಪದ ಸಾಹಿತ್ಯದಲ್ಲಿ ಮಾದೇಶ್ವರ

ಲೇ: ಎಸ್.ಪ್ರೇಮಕುಮಾರಿ; ಪ್ರ: ಶ್ರೀ ಮಾದೇಶ್ವರ ಸ್ವಾಮಿಯ ಇತಿಹಾಸ ಸಂಶೋಧನಾ ಸಂಸ್ಥೆ; ಮೊ.ಮು: ೧೯೭೯; ಪು: ೪+೯೪=೯೮; ಕ್ರೌನ್ ೧/೮

ಹದಿನಾಲ್ಕು ಅಧ್ಯಾಯಗಳಿವೆ: ೧.ಕಥಾಮುಖ ೨.ಭೂಲೋಕದಲ್ಲಿ ಅವತಾರ ೩.ಕಲ್ಯಾಣದಲ್ಲಿ ಮರಿದೇವರು ೪.ಗುರುಗಳ ಅನ್ವೇಷಣೆ ೫.ಪ್ರಭು ಸನ್ನಿಧಿ ೬.ಎಪ್ಪತ್ತೇಳು ಮಲೆ ಪ್ರವಾಸ ೭.ಬೇಡಗಂಪಣರ ಉದ್ಧಾರ ೮.ಗುಡಿ ಗೋಪುರ ನಿರ್ಮಾಣ ೯.ಎಣ್ಣೆ ಮಜ್ಜನದ ಸೇವೆಗೆ ಮೂಗಪ್ಪ ೧೦.ಶ್ರವಣನ ನಿಗ್ರಹ ೧೧.ಮದೋನ್ಮತ್ತೆ ಬೇವಿನ ಕಾಳಿ ೧೨.ವಿಷವಿಕ್ಕಿದ ಇಕ್ಕೇರಿ ದೇವಮ್ಮ ೧೩.ಸಂಕಮ್ಮನಿಗೆ ವರಪ್ರದಾನ ೧೪.ಶಿವಯೋಗದಲ್ಲಿ ಮಾದೇಶ್ವರ

೭೭೭. ಜನಪದ ಸಾಹಿತ್ಯದಲ್ಲಿ ಸ್ತ್ರೀ ಪರಿಕಲ್ಪನೆ

ಸಂ: ಸಿ.ಡಿ. ವೆಂಕಟೇಶ್; ಪ್ರ: ಶ್ರೀ ಶಿರಡಿ ಸಾಯಿ ಎಂಟರ್‌ಪ್ರೈಸಸ್, ೫೮/೧, ೫ನೇ ಮೇನ್, ಗಾಡಿ ಮುದ್ದಣ್ಣ ರೋಡ್, ಕಾಮಾಕ್ಷಿಪಾಳ್ಯ, ಬೆಂಗಳೂರು-೭೯; ಮೊ.ಮು: ೨೦೧೦; ಪು: ೨೧+೨೮೨=೩೦೩; ಡಿಮ್ಮೈ ೧/೮

ವಿವಿಧ ಲೇಖಕರು ಬರೆದ ೨೩ ಲೇಖನಗಳ ಸಂಕಲನ: ೧.'ಮಲೆಮಾದೇಶ್ವರ'ದ ಮಹಾಸ್ತ್ರೀ ಸಂಕಮ್ಮ-ಬಿ.ವಿ. ವಸಂತಕುಮಾರ್ ೨.ಮಾದೇಶ್ವರ ಕಾವ್ಯದ ಸ್ತ್ರೀ ಪ್ರತಿಭಟನಾ ನೆಲೆಗಳು - ಬಿ.ಎಸ್. ಮಂಜುಳ ೩.ಜನಪದ ಮಹಾಭಾರತದಲ್ಲಿ ಹೆಣ್ಣು-ಬಿ.ಎಸ್. ತಲ್ವಾಡಿ ೪.ಮೈಸೂರಿನ ಚಾಮುಂಡಿ ದಿಟ್ಟಹುಡುಗಿ ಬೆಟ್ಟದ ಬೆಡಗಿ-ಸಿ.ಡಿ. ವೆಂಕಟೇಶ ೫.ಬೆಸ್ತರ ಗಂಗೆ ಪಾವಿತ್ರ್ಯದ ತುಂಗೆ-ಡಿ.ಎಂ. ಅಭಿಲಾಷ್ ೬.ಲಜ್ಜಾಗೌರಿ -ಎಂ.ಎಂ. ಕಲ್ಬುರ್ಗಿ ೭.ಕಥನ ಗೀತೆಗಳಲ್ಲಿ ಲಿಂಗ ರಾಜಕಾರಣ ಟಿಪ್ಪಣಿಗಳು-ಕೇಶವ ಶರ್ಮ ೮.ಸಂಪ್ರದಾಯ-ಆಚರಣೆ-ನಂಬಿಕೆ-ಮಹಿಳೆ -ಆರ್. ಸುನಂದಮ್ಮ ೯.ಜನಪದ ಕಥೆಗಳಲ್ಲಿ ಪಾತಿವ್ರತ್ಯದ ಪರಿಕಲ್ಪನೆ-ಎಂ. ಸಿದ್ದಪ್ಪ ಬೆಳಗಟ್ಟ ೧೦.ಮಾತೃಪ್ರಧಾನ ಮಾತೃವಂಶೀಯ ಮತ್ತು ಮಾತೃಸ್ಥಳೀಯ ಕುಟುಂಬ ವ್ಯವಸ್ಥೆ-ಆರ್. ಸುನಂದಮ್ಮ ೧೧.ಜನಪದ ಗೀತೆಗಳಲ್ಲಿ ತಾಯಿ-ಮಗು-ಸರಿತಾ ಜ್ಞಾನಾನಂದ ೧೨.ಕೊಂತೀಪೂಜೆ-ಎಸ್.ಎ. ಕುಮಾರ್

೧೩.ಗ್ರಾಮದೇವತೆ ಉಜ್ಜನಿ ಚೌಡಮ್ಮ –ಎ. ಆನಂದ ಮೂರ್ತಿ ೧೪.ಮೌಖಿಕ ಸಾಹಿತ್ಯದಲ್ಲಿ ಲಿಂಗಸಮಾನತೆಯ ಸ್ವರೂಪ –ಆರ್. ಸುನಂದಮ್ಮ ೧೫.ವೀರನಾರಿಯ ನೆಲ: ಕಾಳಗದ ಚಿಲ್ಕುಂದ–ಚಿಲ್ಕುಂದ ಸೋಮಶೇಖರ ೧೬.ಸ್ತ್ರೀ ವಾದಕ್ಕೆ ಶಕ್ತಿದೇವತೆಯ ಕೊಡುಗೆ–ಆರ್. ಸುನಂದಮ್ಮ ೧೭.ಎಲ್ಲರ ಅಮ್ಮ ಎಲ್ಲಮ್ಮ–ಎನ್. ಚಂದ್ರಪ್ಪ ೧೮.ಕೊಲ್ಲೂರ ಗೌರಿ–ಎಚ್.ಜೆ. ಭೀಮೇಶ್ ೧೯.ಬುಡಕಟ್ಟಿನ ಸ್ತ್ರೀ ಸಂವೇದನೆಗಳು –ಬಿ.ಟಿ. ಲಲಿತಾನಾಯಕ್ ೨೦.ವೀರ ಮಹಿಳೆ–ಎಚ್.ಎಸ್. ಗೋಪಾಲರಾವ್ ೨೧.ಬಿತ್ತನೆಯ ಪ್ರತೀಕ ಕಾಳವ್ವನ ಹಬ್ಬ–ಗುರುಮೂರ್ತಿ ಕೆ. ಗೌಡರ್ ೨೨.ವಡ್ಡಗೆರೆ ನಾಗಮ್ಮ–ವಡ್ಡಗೆರೆ ನಾಗರಾಜಯ್ಯ ೨೩.ಜನಪದ ಕಥೆಗಳು ಐತಿಹ್ಯಗಳು ಮತ್ತು ಮಹಿಳೆ–ವೈ.ಸಿ. ಭಾನುಮತಿ. ವಡ್ಡಗೆರೆ ನಾಗರಾಜಯ್ಯ ಅವರ ಜಾನಪದ ಸಾಹಿತ್ಯದ ಸತ್ಯ ಮತ್ತು ಸೌಂದರ್ಯ ಎಂಬ ಮುನ್ನುಡಿ ಇದೆ.

೭೭೮. ಜನಪದ ಸಾಹಿತ್ಯದಲ್ಲಿ ಹಾಸ್ಯ

ಲೇ: ಜಯಲಕ್ಷ್ಮೀ ಸೀತಾಪುರ; ಪ್ರ: ಕರ್ನಾಟಕ ಜಾನಪದ ಪರಿಷತ್ತು, ೧, ಜಲದರ್ಶಿನಿ ಬಡಾವಣೆ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪; ಮೊ.ಮು.೨೦೧೨; ಪುಟ ೪೦; ಕ್ರೌನ್ ೧/೮

ಕಥೆಗಳಲ್ಲಿ ಹಾಸ್ಯ, ಗೀತೆಗಳಲ್ಲಿ ಹಾಸ್ಯ, ಗಾದೆಗಳಲ್ಲಿ ಹಾಸ್ಯ, ಒಗಟುಗಳಲ್ಲಿ ಹಾಸ್ಯ– ಎಂಬ ನಾಲ್ಕು ವಿಭಾಗಗಳಿವೆ.

೭೭೯. ಜನಪದ ಸಾಹಿತ್ಯದಲ್ಲಿ ಹಾಸ್ಯ

ಲೇ: ಜಯಲಕ್ಷ್ಮೀ ಸೀತಾಪುರ; ಪ್ರ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು ೨೦೦೧; ಪುಟ ೮+೫೪=೬೨; ಫೂಲ್ಸ್‌ಕ್ಯಾಪ್ ೧/೮

ಆರು ಅಧ್ಯಾಯಗಳಲ್ಲಿ ಹಾಸ್ಯವನ್ನು ಪ್ರಸ್ತಾಪಿಸಲಾಗಿದೆ: ೧.ಕಥೆಗಳಲ್ಲಿ ಹಾಸ್ಯ ೨.ಗೀತೆಗಳಲ್ಲಿ ಹಾಸ್ಯ ೩.ಗಾದೆಗಳಲ್ಲಿ ಹಾಸ್ಯ ೪.ಒಗಟುಗಳಲ್ಲಿ ಹಾಸ್ಯ ೫.ಶಿಶುಪ್ರಾಸಗಳಲ್ಲಿ ಹಾಸ್ಯ ೬.ಬೈಗುಳಗಳಲ್ಲಿ ಹಾಸ್ಯ. ಎಸ್.ಎನ್. ಹೆಗ್ಡೆ ಅವರ ಮುನ್ನುಡಿ ಇದೆ.

೭೮೦. ಜನಪದ ಸಿಂಗಾರ ಸಾಧನಗಳು

ಲೇ: ಪಿ.ಕೆ.ರಾಜಶೇಖರ; ಪ್ರ: ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬; ಮೊ.ಮು.೨೦೧೨; ಪುಟ ೨೪+೮೬+೪=೧೧೪; ಕ್ರೌನ್ ೧/೮

ಎಂಟು ಶೀರ್ಷಿಕೆಗಳಿವೆ: ೧.ಅನಾದಿ ಕಾಲದಿಂದ ಆಧುನಿಕ ಕಾಲದವರೆಗೆ ೨.ಅಂಗರಾಗಗಳು (Cosmetics) ೩.ಕೇಶಾಲಂಕಾರ ೪.ವದನಾಲಂಕಾರ ೫.ಪೂಸಕ ಪರಿಮಳಗಳು ೬.ಶರೀರಾಲಂಕಾರ ೭.ಪಾದರಕ್ಷೆಗಳು ೮.ಆಧುನಿಕರಲ್ಲಿ

ಅಂಗರಾಗಗಳು.ಅನುಬಂಧದಲ್ಲಿ, ವಕ್ತೃಗಳ ಪರಿಚಯ, ಕೆಲವು ಚಿತ್ರಗಳು ಫೋಟೋಗಳು ಇವೆ..

೭೮೧. ಜನಪದ ಸಿರಿ

ಲೇ.ಚಂದ್ರಪ್ಪ; ಪ್ರ: ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೇಂದ್ರ ಕ.ಸಾ.ಪ.ಆವರಣ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮; ಮೊ.ಮು: ೨೦೧೧ ಪು: ೮+೬೦=೬೮; ಡಿಮ್ಮೈ ೧/೮

ದೊಡ್ಡಬಳ್ಳಾಪುರ ತಾಲ್ಲೂಕಿನ ಜನಪದ ಕಥೆಗಳ ಸಂಗ್ರಹ ಎಂಬ ಅಡಿಬರಹ ಇದೆ. ಹನ್ನೆರಡು ಕಥೆಗಳಿವೆ: ೧.ತಂಬಿಟ್ಟು ದಾಸಯ್ಯನ ಮೋಹದ ಕಥೆ ೨.ಶಂಖುಮೂರ್ತಿಯ ಕಥೆ ೩.ಇಲಿ ಒಲೆಯನ್ನು ಹೊತ್ತುಕೊಂಡು ಹೋದ ಕಥೆ ೪.ಬಂಡಿ ಕಥೆ ೬.ಒಂಟ್ಕಣ್ಣು ಕಲ್ಡಿ ಕುತಂತ್ರ ೭.ಕುಲಗೆಟ್ಟ ಹೆಣ್ಣಿನ ಕಥೆ ೮.ಎಡವಟ್ಟರಾಯನ ಕಥೆ ೯.ಈರಡದಿಮ್ಮ ಕಥೆ ೧೨.ಚದುರಂಗಮಹಾರಾಜನ ಕಥೆ.

೭೮೨. ಜನಪದ ಸುತ್ತ ಮುತ್ತ

ಲೇ: ವಾಮನ ನಂದಾವರ; ಪ್ರ: ಪ್ರಜಾಬಂಧು ಪ್ರಕಾಶನ, ನೊಯೆಲ್ಲಾ ಬಿಲ್ಡಿಂಗ್, ಹಂಪನ್ ಕಟ್ಟೆ, ಮಂಗಳೂರು-೫೭೫ ೦೦೧; ಮೊ.ಮು: ೧೯೯೨; ಪು: ೧೫೮; ಕ್ರೌನ್ ೧/೮

ಕೆಲವು ನೋಟಗಳು ಎಂಬ ಅಡಿಬರಹ ಇದೆ. ಇವು ಅಂಕಣಬರಹಗಳೆಂಬ ವಿಚಾರವು ಲೇಖಕರ ಮಾತಿನಿಂದ ತಿಳಿದುಬರುತ್ತದೆ. ೩೩ ಲೇಖನಗಳಿವೆ: ೧.ಜನಿವಾರದಲ್ಲಿ ಬಂದ ಭೂತ ೨.ಗಣಪತಿಯನ್ನು ಗುಡ್ಡ ಹತ್ತಿಸಿದ ನಿಡ್ಡೊಡಿತ್ತಾಯ ೩.ಮೈಮೇಲೆ ಬರುವ ಕಾಯಿಲೆ ೪.ಕನಕನ ಕಿಂಡಿಯ ಕೆಳಗೆ ೫.ಮಹಾತ್ಮ್ಯೆ ಮೆರೆಸುವ ಭೂಗತ ಭಕ್ತರು ಮತ್ತು ಅದೃಷ್ಟದ ಬೆನ್ನು ತೋರಿಸುವ ಮಿತ್ರರು ೬.ತುಳುವರ ಕೊಂಡೆ ೭.ಆಟಿ ತಿಂಗಳ ತುಳುವರು ೮.ದಾಸಯ್ಯ ಮತ್ತು ಶಂಖ ಜಾಗಟೆ ೯.ದಿಡಿಂಬಿರಿ ಜಾತ್ರೆ ೧೦.ಕೆಲಸದ ಹಾಡುಗಳಲ್ಲಿ ಉರಲ್ ೧೧.ಬೇಡಿ ೧೨.ಹಿಂಗಾರ ಮತ್ತು ಫಲವಂತಿಕೆ ೧೩.ಸಂದರ್ಭಕ್ಕೆ ಸಿಕ್ಕಿದ ಗಾದೆಗಳು ೧೪.'ಯೆತ್ ಪಿಚ್ಚಿ' ಒಂದು ಜನಪದ ಆಟ ೧೫.ಕಲ್ಲುರ್ಟಿಗೇ ವಿಷ ಹಾಕಿದ ಪಾತ್ರಿ! ೧೬.ಪುರುಷ ವೇಷ ಕುಣಿತ ಮತ್ತು ಗ್ರಾಮ ಭಾವೈಕ್ಯ ೧೭.ಸುದ್ದಿಯ ಹರಿಕಾರ ಕಾಗೆ ೧೮.ಮದುವೆಯ ಹಾದಿಯಲ್ಲಿ ಎರುಕೋಲ ದರ್ಶನ ೧೯.ಮುಕ್ಕಾಲ್ದಿ ೨೦.ಶ್ವಾನ ಜಾನಪದ ೨೧.ಸಂತೆಗೆ ಹೋದಾಗ ೨೨.ಬೆಳ್ಳಿ ಬಂಗಾರದ ಹರಕೆ ೨೩.ತುಳುವ ಚಾವಡಿ ೨೪.ನಂದಾವರದ ಬದುಕು ೨೫.ಎಲ್ಲಪ್ಪನ ಹೆಗಲ ಮೇಲೆ ಭೂತಪ್ಪನ ಚಾಟಿ ೨೬.ಕುಜುಂಬ ಕಾಂಜ ಯಾರು? ೨೭.ಕಾಪು-ಪಿಲಿ-ಕೋಲ-ಒಂದು ಧರ್ಮ ಸಂಕಟ ೨೮.ಹಂದಿಬೇಟೆ ಮತ್ತು ಕಾಲಿಗೆ ಚುಚ್ಚಿದ ಮುಳ್ಳು ೨೯.ಜನಪದ ಕುಣಿತ ಮತ್ತು ಹಿಮ್ಮೇಳ ೩೦.ಜನಪದ ಮನಸ್ಸು ಮತ್ತು ನಂಬಿಕೆಗಳು ೩೧.ಗರಡಿ ಮತ್ತು ತಾವು ೩೨.ಹಕ್ಕಿ ಮೊಟ್ಟೆ ನಿಂಬೆ ಹಣ್ಣು ಅಕ್ಕಿ ಮತ್ತು ಫಲವಂತಿಕೆ ೩೩.ಅಂಬೊಡಿ ಒಂದು

ಅಣಕ ಕಾಳಗ. ೧೨ ಪುಟಗಳ ಅನುಬಂಧದಲ್ಲಿ ಹಲವು ಉಪಯುಕ್ತ ವಿವರಣೆಗಳಿವೆ; ಸಾಂಸ್ಕೃತಿಕ ಪದಕೋಶ, ಮಾಹಿತಿದಾರರ ವಿಳಾಸಗಳು, ಇವೆ.

೭೮೩. ಜನಪದ ಹಾಡುಗಾರ್ತಿ ಚೆನ್ನಮ್ಮ

ಸಂ; ಎನ್.ಎಸ್. ದೇವಿಕಾ ಗೌಡ; ಪ್ರ: ತಳಗವಾದಿ ಪ್ರಕಾಶ ೨೨ ವಿಜಯಶ್ರೀ ಕುವೆಂಪು ನಗರ ಮೈಸೂರು ೫೭೦೦೦೯; ಮೊ.ಮು: ೨೦೦೩; ಪು: ೧೪+೮+೨೦೯ = ೩೩೧; ಕ್ರೌನ್

ಕಲಾವಿದೆಯೊಬ್ಬರ ಆತ್ಮಕಥೆ ಹಾಗೂ ಆಕೆ ಹಾಡಿದ ಸಾಹಿತ್ಯ ಸಂಗ್ರಹವಿದು. ಆರು ಭಾಗಗಳಿವೆ. **ಭಾಗ ೧:** ಜನಪದ ಹಾಡುಗಾರ್ತಿ ಚೆನ್ನಮ್ಮ – ಆತ್ಮಕಥನ. **ಭಾಗ ೨:** ಜನಪದ ಗದ್ಯ ಸಾಹಿತ್ಯ: ೧.ಒಗಟುಗಳು. ೨.ಗಂತ–ಗೇಲು. **ಭಾಗ ೩:** ಸ್ತುತಿಗೀತೆಗಳು. **ಭಾಗ ೪ :** ದೇವರಮೇಲಿನ ಪದಗಳು. **ಭಾಗ ೫ :** ಕೌಟುಂಬಿಕ ಗೀತೆಗಳು. **ಭಾಗ ೬:** ಟಿಪ್ಪಣಿ–ಅರ್ಥ ಕೋಶ ರಾಗೌ ಅವರ ಮುನ್ನುಡಿ ದೇಜಗೌ ಅವರ ನಲ್ನುಡಿ ಇವೆ.

೭೮೪. ಜನಪದ ಹಾಸ್ಯ ಲಹರಿ

ಸಂ: ಕರಾಕೃ; ಪ್ರ: ಜನಪದ ಸಾಹಿತ್ಯ ಅಕಾಡೆಮಿ; ಮೊ.ಮು. ನಮೂದು ಇಲ್ಲ, ಎ.ಮು.೧೯೭೪; ಪುಟ ೪+೭೮=೮೨; ಕ್ರೌನ್ ೧/೮

ಹದಿನೇಳು ಹಾಡುಗಳಿವೆ. ಪ್ರಾರಂಭದಲ್ಲಿ, ಹುಚ್ಚು ಹುಮ್ಮಸ್ಸಿನ ಹೋರಾಟ! ಎಂಬ ಪಿ.ಆರ್. ತಿಪ್ಪೇಸ್ವಾಮಿ ಅವರ ಪ್ರವಾಸ ಕಥನ ಇದೆ. ಕೊನೆಯಲ್ಲಿ, ಜಾನಪದ ಸಾಹಿತ್ಯದಲ್ಲಿ ಹಾಸ್ಯ ಎಂಬ ಜೀ.ಶಂ. ಪರಮಶಿವಯ್ಯ ಅವರ ಲೇಖನ ಇದೆ. ಅಲ್ಲಲ್ಲಿ ರೇಖಾಚಿತ್ರಗಳಿವೆ.

೭೮೫. ಜನಪದ ಹೊಂಬಾಳೆ

ಸಂ: ಎಂ.ಲೀಲಾ ರಾಮಣ್ಣ; ಪ್ರ: ಎಲ್.ಆರ್. ಪಬ್ಲಿಕೇಷನ್ಸ್, ೧೮, ಶಶಿ, ಕೆನರಾ ಬ್ಯಾಂಕ್ ಎದುರು, ಮೊದಲನೆಯ ಹಂತ, ಬೃಂದಾವನ ಬಡಾವಣೆ, ಮೈಸೂರು –೨೦; ಮೊ.ಮು. ೧೯೯೩; ಪು: ೮೦+೬೧೨=೬೯೨; ಡಿಮ್ಮೈ ೧/೮

ಜನಪದ ಗೀತೆಗಳ ಸಂಕಲನ. ಮೂರು ಭಾಗಗಳನ್ನಾಗಿ ವಿಂಗಡಿಸಲಾಗಿದೆ. **ಭಾಗ ಒಂದು: ಜನಪದ ಹೊಂಬಾಳೆ:** ಇದರಲ್ಲಿ ೧೫ ಅಧ್ಯಾಯಗಳಿವೆ: ೧.ರಾಗಿ ಕಲ್ಲಿನ ಪದಗಳು ೨.ಮಹದೇಶ್ವರ ಪದಗಳು ೩.ಬುದ್ಧಿ ತಿದ್ದುವ ಪದಗಳು ೪.ಒಡಹುಟ್ಟಿನ ಪದಗಳು ೫.ನಂಟು ನಡಾವಳಿ ಪದಗಳು ೬.ಹೆಣ್ಣಿನ ಬವಣೆ ಪದಗಳು ೭.ತೊಟ್ಟಿಲು ತೂಗುವ ಪದಗಳು ೮.ಕೀಟಲೆ ಪದಗಳು ೯.ಆಟ್ಟುಳಿ ಪದಗಳು ೧೦.ನೀಳ್ಗವಿತೆಗಳು: ನೇಣಮ್ಮ, ಚಿಕ್ಕೊನ್ನಿ, ಉತ್ತರೆ, ಗಂಗೆ ೧೧.ಪಾರ್ವತಿ ಮೇಲಿನ ಪದಗಳು ೧೨.ಬಿಳಿಗಿರಿ ರಂಗಸ್ವಾಮಿ ಪದಗಳು ೧೩.ಮಾರಮ್ಮನ ಪದಗಳು ೧೪.ಬಿಡಿ ಮುತ್ತುಗಳು ೧೫.ಜವರಾಯನ ಮೇಲಿನ ಪದಗಳು., **ಭಾಗ ಎರಡು: ಕೊಂತಿ ಪದಗಳು:** ಇದರಲ್ಲಿ

೨೦ ಅಧ್ಯಾಯಗಳಿವೆ: ೧.ಕೊಂತಿಯ ಸ್ವಾಗತ ೨.ಕೊಂತಿಯ ಅಲಂಕಾರ ೩.ಕೊಂತಿ ಮೈನೆರೆದಳು ೪.ಕರ್ಣ ಜನನ ೫.ಹೆಣ್ಣು ಕೇಳುವುದು ೬.ಕೊಂತಿ ಮದುವೆ ೭.ತವರಿಂದ ಗಂಡನ ಮನೆಗೆ ಗಂಡನ ಮನೆಯಿಂದ ತವರಿಗೆ ೮.ಕೊಂತಿಯ ಬಸಗೆ ೯.ಕೊಂತಿ ಬಸುರಿಯಾದಳು ೧೦.ಚಿಕ್ಕ ಮಕ್ಕಳೊಂದಿಗೆ ಕೊಂತಿ ೧೧.ಮಕ್ಕಳ ಮದುವೆ ೧೨.ಭೀಮ, ಅರ್ಜುನ ವಿದ್ಯೆ ೧೩.ಅರ್ಜುನ ಜೋಗಿ ೧೪.ಪಾಂಡವರು ಜೂಜಾಡಿದರು ೧೫.ಪಾಂಡವರ ವನವಾಸ ೧೬.ವನವಾಸದಲ್ಲಿ ಬೇಸಾಯ ೧೭.ಕರ್ಣಯುದ್ಧ ೧೮.ಪಾಂಡವರಿಗೆ ಜಯ ೧೯.ಕೊಂತಿಯ ವೈಭವ ೨೦.ಮಂಗಳ. **ಭಾಗ ಮೂರು: ಸೋಬಾನೆ ಪದಗಳು:** ಇದರಲ್ಲಿ ೧೩ ಅಧ್ಯಾಯಗಳಿವೆ: ೧.ಹೆಣ್ಣು ನೋಡುವುದು ಒಪ್ಪುವುದು ೨.ಅಕ್ಕಿ ಶಾಸ್ತ್ರದ ಪದಗಳು, ಮದುವೆ ಸಾಮಾನು ೩.ಕಂಬ ನಿಲ್ಲಿಸುವ ಪದಗಳು ೪.ನೀರು ಹುಯ್ಯುವ ಪದಗಳು ೫.ಕಂಕಣ ಕಟ್ಟುವ ಪದಗಳು ೬.ಹಸೆಮಣೆ ಪದಗಳು, ಹಸೆಗೆ ಕರೆವ ಪದಗಳು ೭.ಧಾರೆ ಪದಗಳು ೮.ತಾಳಿ ಕಟ್ಟುವ ಪದಗಳು ೯.ಬುವ್ವ ಉಣ್ಣಿಸುವ ಪದ, ಮಡಿಲು ತುಂಬುವ ಪದಗಳು ೧೦.ಬೀಗರ ಪದಗಳು ೧೧.ಆರತಿ ಪದಗಳು ೧೨.ಬನಣೆಯ ಪದಗಳು ೧೩.ಜನಪದ ಹೊಂಬಾಳೆ. ರಾಣಾ ಅವರ ಮುನ್ನುಡಿ, ಮಳಲಿ ವಸಂತಕುಮಾರ್ ಅವರ ಮುಮ್ಮಾತು, ಹಾಡಿದವರ ಫೋಟೋ ಮತ್ತು ವಿವರಗಳು, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ, ಅರ್ಥಕೋಶ, ಇವೆ.

೭೮೬. ಜನಪದ ಹೊಲಿಗೆ ಮತ್ತು ಚಿತ್ರಕಲೆ

ಲೇ: ರಾಜೇಂದ್ರ ಯರನಾಳೆ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮; ಮೊ.ಮು: ೨೦೦೪; ಪು: ೫+೪೬=೫೧; ಡಿಮ್ಮೈ ೧/೮

ಎರಡು ಭಾಗಗಳಿವೆ: ೧ಹೊಲಿಗೆ ಕಲೆ: ಉಗಮ, ವಿಕಾಸ, ನಂಬಿಕೆಗಳು, ಗಾದೆ, ಒಗಟು, ಪ್ರಾಸ, ಇತ್ಯಾದಿ ೨.ಚಿತ್ರಕಲೆ: ಉಗಮ, ಪರಂಪರೆ, ಧ್ಯೇಯೋದ್ದೇಶ, ನಂಬಿಕೆ, ನಿಯಮ, ಇತ್ಯಾದಿ.

೭೮೭. ಜನಪದಗೀತೆಗಳಲ್ಲಿ ಮಹಾಭಾರತ ಭಾಗ-೧

ಸಂ: ಕರಾಕೃ; ಪ್ರ: ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು-೫; ಮೊ.ಮು. ೧೯೬೨; ಪುಟ ೧೨೭; ಕ್ರೌನ್ ೧/೮

ನಾಲ್ಕು ಕಾವ್ಯಗಳ ಸಂಕಲನ: ೧.ಸುಭದ್ರೆ ೨.ಅರ್ಜುನ ೩.ದ್ರೌಪತಿ ೪.ಜೋಗಯ್ಯ. ಜಿ. ವರದರಾಜರಾವ್ ಅವರ ಒಳ್ನುಡಿ, ಸಂಗ್ರಾಹಕರ ಜೊತೆಯಲ್ಲಿ ಎಂಬ ಪಿ.ಆರ್. ತಿಪ್ಪೇಸ್ವಾಮಿ ಅವರ ಪ್ರವಾಸ ಕಥನ.

೭೮೮. ಜನಪದದಲ್ಲಿ ಮಳೆರಾಯನ ಮುನಿಸು

ಸಂ: ಬಸವರಾಜ ಆಕಳವಾಡಿ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೫೬೦ ೦೧೮; ಮೊ.ಮು. ೧೯೮೧; ಪುಟ ೪+೧೭=೨೧; ಡಿಮ್ಮೈ ೧/೮

ಮಳೆಗೆ ಸಂಬಂಧಿಸಿದ ಕೆಲವು ಹಾಡುಗಳ ತುಣುಕುಗಳನ್ನು ಕೆಲವು ನಂಬಿಕೆಗಳನ್ನೂ ಆಧರಿಸಿ ರಚಿತವಾಗಿರುವ ಲೇಖನ. ಹಂಪ.ನಾಗರಾಜಯ್ಯ ಅವರ ಮುನ್ನುಡಿ ಇದೆ.

೭೮೯. ಜನಪದರ ಬಾಯಲ್ಲಿ ಹಾಲುಮತದ ಇತಿಹಾಸ

ಲೇ: ರಾಮಪ್ಪ ಭೀಮಪ್ಪ ಚೌಗಲಾ; ಪ್ರ: ರೋಹಿಣಿ ಎಂಟರ್ ಪ್ರೈಸಸ್, ೧೫, ೬ನೇ ಕ್ರಾಸ್, ಧನ್ವಂತರಿ ನಿಲಯ, ವಿಶ್ವನೀಡಂ ಅಂಚೆ, ಕೊಟ್ಟಿಗೇಪಾಳ್ಯ, ಮಾಗಡಿ ಮುಖ್ಯರಸ್ತೆ, ಬೆಂಗಳೂರು–೯೧; ಮೊ.ಮು: ೨೦೧೧; ಪು: ೯+೨೭೫ = ೨೮೪; ಡಿಮ್ಮೈ ೧/೮

"ಚೌಗಾಲ ಅವರು ಬೀರೇಶ್ವರ ಮೈಲಾರಲಿಂಗ ಮಾಳಿಂಗರಾಯ ಜಕ್ಕಪ್ಪರಾಯ ಸಿದ್ಧರಾಮ ಗುರುರೇವಣಸಿದ್ಧ ಇವರೆಲ್ಲರ ಸಾಂಸ್ಕೃತಿಕ ಸಾಮಾಜಿಕ ಹೋರಾಟಗಳನ್ನು ಈ ಪುಸ್ತಕದಲ್ಲಿ ನಿರೂಪಿಸಿದ್ದಾರೆ. ಇವರೆಲ್ಲರ ಕಾರ್ಯಕ್ಷೇತ್ರಗಳ ಪ್ರಾದೇಶಿಕ ಹಾಗೂ ಕುಲ ಸಂಬಂಧಿ ಸಂಗತಿಗಳನ್ನು ಜನಪದೀಯ ಗುಣಕ್ಕನುಸಾರವಾದ ಭಾವದಲ್ಲಿ ಹಿಡಿದಿಟ್ಟಿದ್ದಾರೆ. ಆನಾಂಗದ ಎರಡು ಪ್ರಧಾನ ಬೆಡಗುಗಳ ಹುಟ್ಟು ಬೆಳವಣಿಗೆಗಳನ್ನು ದಾಖಲಿಸುತ್ತಲೇ ಒಳ ಬೆಡಗುಗಳ ಬಗೆಗೂ ಪ್ರಸ್ತಾಪಿಸಿದ್ದಾರೆ" ಎಂಬುದಾಗಿ ಎಸ್.ಜಿ. ಸಿದ್ಧರಾಮಯ್ಯ ಅವರು ಈ ಗ್ರಂಥದ ಮುನ್ನುಡಿಯಲ್ಲಿ ಹೇಳಿದ್ದಾರೆ.

೭೯೦. ಜನಪದರ ಬಾಳದರ್ಶನ

ಲೇ: ಸುಮುಖಾನಂದ ಜಲವಳ್ಳಿ; ಪ್ರ: ಸುಮುಖ ಪ್ರಕಾಶನ, ಕಾವ್ಯಶ್ರೀ, ಮೂರುಕಾವೇರಿ, ಕಿನ್ನಿಗೋಳಿ, ದ.ಕ. ಜಿಲ್ಲೆ–೫೭೪ ೧೫೦; ಮೊ.ಮು: ೨೦೦೩; ಪು: ೮+೮೯=೯೭; ಡಿಮ್ಮೈ ೧/೮

ಜಾನಪದ ವೈಚಾರಿಕ ಕೃತಿ ಎಂಬ ಅಡಿಬರಹ ಇದೆ. ಮೂರು ಅಧ್ಯಾಯಗಳಿವೆ: ೧.ಗಾದೆಗಳಲ್ಲಿ ಮೂಡಿಬಂದ ಜನಪದರ ಬಾಳದರ್ಶನ ೨.ಹಾಡುಗಳಲ್ಲಿ ಮೂಡಿಬಂದ ಜನಪದರ ಬಾಳದರ್ಶನ ೩.ಚಿಂತನೆಗೊಡ್ಡಿಕೊಳ್ಳುವ ಕೆಲವು ಜನಪದ ಗೀತೆಗಳು. ಈ ಮೂರನೆಯ ಭಾಗದಲ್ಲಿ ಮೂವತ್ತು ಅಧ್ಯಾಯಗಳಿದ್ದು, ಪ್ರತಿಯೊಂದು ಅಧ್ಯಾಯದಲ್ಲೂ ಒಂದೊಂದು ತ್ರಿಪದಿಗಳನ್ನು ವಿವರಿಸಲಾಗಿದೆ ಮತ್ತು ಪ್ರತಿಯೊಂದು ಅಧ್ಯಾಯಕ್ಕೂ ಶೀರ್ಷಿಕೆಗಳಿವೆ.

೭೯೧. ಜನಪ್ರಿಯ ೪೦೦ ಗಾದೆಗಳು

ಸಂ: ಬೆ. ಗೋ. ರಮೇಶ್; ಪ್ರ: ಸಂತೋಷ್ ಪಬ್ಲಿಕೇಷನ್ಸ್, ೩೦, ಬಿನ್ನಿ ಬಡಾವಣೆ,

ಒಂದನೇ ಮೈನ್, ವಿಜಯನಗರ, ಎರಡನೇ ಹಂತ, ಬೆಂಗಳೂರು – ೫೬೦ ೦೪೦; ಮೊ.ಮು: ೧೯೮೬, ಎ.ಮು: ೧೯೮೮; ಪು: ೧೦೪; ಕ್ರೌನ್ ೧/೮.

ಇಲ್ಲಿನ ಎಲ್ಲ ೪೦೦ ಗಾದೆಗಳಿಗೂ ವಿವರಣೆಗಳಿವೆ. ಪರಿವಿಡಿಯಲ್ಲಿ ಎಲ್ಲ ಗಾದೆಗಳನ್ನೂ ಅಕಾರಾದಿಯಾಗಿ ನೀಡಿ, ವಿವರಣೆ ಸಹಿತದ ಅವೇ ಗಾದೆಗಳನ್ನು ಅಕಾರಾದಿ ಮಾಡಿಲ್ಲ.

೭೯೨. ಜನಪ್ರಿಯ ಒಗಟುಗಳು

ಸಂ: ಟಿ.ಎಸ್. ಮನೋಹರ್; ಪ್ರ: ಸೃಷ್ಟಿ ಪಬ್ಲಿಕೇಶನ್ಸ್, ೨೮, ೧ನೇ ಕ್ರಾಸ್, ರೈಲ್ವೇ ಗೇಟ್ ಸಮೀಪ, ಬಾಪೂಜಿ ನಗರ, ಬೆಂಗಳೂರು–೫೬೦೦೨೬; ಮೊ.ಮು: ೧೯೯೭; ಪು: ೧೨೮; ಕ್ರೌನ್

ಸಾವಿರಕ್ಕೂ ಮಿಗಿಲಾದ ಅತ್ಯಮೂಲ್ಯ ಒಗಟುಗಳ ಸಂಗ್ರಹ ಎಂಬ ಅಡಿಬರಹ ಇದೆ. ೧೧೭೭ ಒಗಟುಗಳಿವೆ. ಸಾ.ಶಿ. ಮರುಳಯ್ಯ ಅವರ ಮುನ್ನುಡಿ ಇದೆ.

೭೯೩. ಜನಪ್ರಿಯ ಗಾದೆಗಳ ನಿಘಂಟು

ಸಂ: ಕಾವ್ಯಪ್ರೇಮಿ; ಪ್ರ: ಶೇಷಾಚಲ ಗ್ರಂಥಮಾಲೆ, ಧಾರವಾಡ; ಮೊ.ಮು. ಮತ್ತು ಎ.ಮು. ನಮೂದುಗಳಿಲ್ಲ. ಮೂ.ಮು. ೧೯೮೬; ಪುಟ ೧೫೬; ಕ್ರೌನ್ ೧/೮

೧೩೪೦ ಗಾದೆಗಳಿವೆ. ಅಲ್ಲಲ್ಲಿ ಗಾದೆಗಳ ರೂಪ ಧರಿಸಿದ ಸಂಸ್ಕೃತ ಸೂಕ್ತಿಗಳಿವೆ. ಅನುಬಂಧದಲ್ಲಿ, ಕನ್ನಡ ಗಾದೆಗಳಿಗೆ ಕೆಲವು ಸಮಾನಾರ್ಥ ಇಂಗ್ಲಿಷ್ ಗಾದೆಗಳು ಇವೆ. ಇವುಗಳ ಸಂಖ್ಯೆ ೭೦.ಲೇಖಕರ ಪ್ರಸ್ತಾವನೆ ಇದೆ. ಕೊನೆಯಲ್ಲಿ ೧೩.ಇತರರ ಗಾದೆ ಸಂಕಲನಗಳ ಪಟ್ಟಿ ಇದೆ.

೭೯೪. ಜನಪ್ರಿಯ ಗಾದೆಗಳು

ಸಂ: ನಮೂದು ಇಲ್ಲ; ಪ್ರ: ಶ್ರೀ ರಾಧಾಕೃಷ್ಣ ಪ್ರಕಾಶನ, ೧೨೧, ಹೃದಯ, ೧ನೇ ಮುಖ್ಯರಸ್ತೆ, ರಾಮಕೃಷ್ಣ ಬಡಾವಣೆ, ತ್ಯಾಗರಾಜ ನಗರ, ಬೆಂಗಳೂರು – ೫೬೦ ೦೨೮; ಮೊ.ಮು: ೨೦೦೨; ಪು: ೮೦; ಕ್ರೌನ್ ೧/೮.

೧೧೯೦ ಗಾದೆಗಳಿವೆ.

೭೯೫. ಜನಪ್ರಿಯ ಗಾದೆಗಳು

ಸಂ: ಜಿ. ಎಚ್. ಮಾದಯ್ಯ; ಪ್ರ: ಗಾಜನೂರು ಪ್ರಕಾಶನ. ಜೆ. ಪಿ. ನಗರ, ಬೆಂಗಳೂರು – ೫೬೦ ೦೭೮; ಮೊ.ಮು: ೧೯೯೬: ಪ್ರ: ೧೨+೧೨೦=೧೩೨; ಕ್ರೌನ್ ೧/೮.

೧೧೩ ಪುಟಗಳಲ್ಲಿ ಇರುವ ಸುಮಾರು ೨೮೦೦ ಗಾದೆಗಳಿವೆ. ಜೊತೆಗೆ ವಿದೇಶೀ ಗಾದೆಗಳು ಇವೆ: ಅರಬ್ಬಿ ಗಾದೆಗಳು ೬, ಆಂಗ್ಲ ಗಾದೆ ೧, ಆಫ್ರಿಕಾದವು ೨, ಇಟಲಿ ೬, ಐರ್ಲೆಂಡ್ ೧, ಚೀನಾ ೧೪, ಜರ್ಮನ್೧, ಜಪಾನ್ ೪, ಟರ್ಕಿ ೧, ಡೇನಿಷ್ ೫,

ನಾರ್ವೆ ೨, ಪರ್ಶಿಯನ್ ೨, ಫಿನ್ನಿಷ್ ೧, ಸ್ಪಾನಿಷ್ ೧, ಸ್ವೀಡನ್ ೩, ಹಂಗೇರಿ ೭ –ಹೀಗೆ ಈ ಗ್ರಂಥದಲ್ಲಿರುವ ಒಟ್ಟು ವಿದೇಶೀ ಗಾದೆಗಳ ಸಂಖ್ಯೆ ೮೬. ಬೈರಮಂಗಲ ರಾಮೇಗೌಡ ಅವರ ಮುನ್ನುಡಿ, ರವಿ ಜೇಸುರಾಜ್ ಅವರ ಹಿನ್ನುಡಿ, ಇವೆ.

೭೯೬. ಜನಪ್ರಿಯ ಗಾದೆಗಳು

ಸಂಗ್ರಹ, ನಿರೂಪಣೆ: ಎಲ್.ಆರ್. ಸತೀಶ್ ಹೆಗಡೆ, ಕೆ. ರಂಗಾಚಾರಿ; ಪ್ರ: ಗಾಯತ್ರಿ ಪ್ರಕಾಶನ, ಕೆ.ಎಚ್.ಬಿ. ಕಾಲೋನಿ, ೨ನೇ ಹಂತ, ೬ನೇ ಮುಖ್ಯ ರಸ್ತೆ, ೮ನೇ ಅಡ್ಡರಸ್ತೆ, ಬಸವೇಶ್ವರ ನಗರ, ಬೆಂಗಳೂರು–೫೬೦ ೦೭೯; ಮೊ.ಮು: ೧೯೯೮; ಪು: ೫೬; ಕ್ರೌನ್ ೧/೮

ಗಾದೆಗಳ ವಿಸ್ತಾರ ಬರಹ ಎಂಬ ಅಡಿಬರಹ ಇದೆ. ೧೪೮ ಗಾದೆಗಳು ಮತ್ತು ವಿವರಣೆಗಳನ್ನುಳ್ಳ ಗ್ರಂಥ.

೭೯೭. ಜನಪ್ರಿಯ ಜಾನಪದ ಗೀತೆಗಳು

ಸಂ: ಕರಾಕೃ; ಪ್ರ: ಜನಪದ ಅಕ್ಯಾಡೆಮಿ, ಕದಂಬ, ಕಾರ್ಡ್‌ರಸ್ತೆ, ರಾಜಾಜಿನಗರ, ಬೆಂಗಳೂರು–೧೦; ಮೊ.ಮು: ೧೯೫೮, ಎ.ಮು: ೧೯೮೩; ಪುಟ ೪+೯೨=೯೬; ಡಿಮ್ಮೈ ೧/೮

೩೮ ಹಾಡುಗಳ ಸಂಕಲನ: **ಮಲ್ಲಿಗೆ ೧: ಕೋಲು ಮಲ್ಲಿಗೆ:** ೧.ಸಿರಿಗಂಧಾದ ನೆರಿಯೋಳೆ ೨.ಉದುರು ಉದುರು ಮಲ್ಲಿಗೆ ೩.ದಂಡೆ ತಾರೋ ದಂಡೆಸ್ವಾಮಿ ೪.ಬಿತ್ತಿ ಹೋಗ್ಯವರೆ ಅವರೇಯ ೫.ರಾಮಾನೆ ಗಿಣಿ ರಾಮಾನೆ ೬.ನಿಲ್ಲು ನಿಲ್ಲಯ್ಯ ರಾಜ ೭.ಚೆಂಡು ಬಂದಾವೆ ೮.ಸೂರೆ ಮಾಡಿದ ೯.ಸಿಕ್ಕಿ ಬಿದ್ದವು ಬಾಳೆಮೀನು ೧೦.ಮಾಯದಂಥ ಮಳೆಗಳು ಬಂದವು ೧೧.ಮನೆಯು ಎತ್ತಾಗಯಿತೆ ಬರುವನೇಳೋ ೧೨.ಬಾರಯ್ಯ ನಮ್ಮ ಅರಮನೆಗೆ ೧೨ ಎ. ಪರಿಮಳ ಕಸದೂರಿ ಚೆಲ್ಲಳವಳಣ್ಣ (ಚೆಲ್ಲವಳಣ್ಣ) **ಮಲ್ಲಿಗೆ ೨: ಕುಟುಂಬ:** ೧೩.ನಿನ್ನಾಸೆ ನನ್ನ ಬಿಡದಲ್ಲೆ ೧೪.ಕೊರಳಿಗೆ ಬಿಗಿಸೇನು ಸರಮುತ್ತು ೧೫.ದೂರ ಕೊಟ್ಟಿನೆಂದು ಅಳುಬೇಡ ೧೬.ತೌರು ನೆನೆದೇವು ೧೭.ಗುರಿಯಿಟ್ಟು ಗೆದ್ದ ದೊರೆಮಗಳ ೧೮.ಕುಲದ ಗೌಡನ ಮಗನವ್ವ ೧೯.ನಾಂಟ್ಯವನಾಡ್ಯವನೆ ಮಳೆರಾಯ ೨೦.ಓದು ಕಲಿಸಿ ಮಗಳ ಕೊಡಿರಣ್ಣ ೨೧.ಕುಲದಲ್ಲಿ ಹುಟ್ಟವನೆ ದೊರೆಮಗ ೨೨.ಮಕ್ಕಳು ೨೩.ತಂಗ್ಯಮ್ಮ ಬಾಗಿಲು ತಡೆದಾಳೆ ೨೪.ನಲ್ವತ್ತು ಪಂಜು ತರಹೇಳಿ ೨೪.ಎ ಆರತಿ ಬೆಳಗೋಣ ಬಾರೇಸಖೀ. **ಮಲ್ಲಿಗೆ ೨(೩): ದೇವಸ್ತುತಿ:** ೨೫.ಪಾಂಡವರು ೨೬.ಹನುಮಂತ ೨೭.ನಾ ಸೇರಿದೆ ಮೇಲು ಕುಲದೋರಿಗೆ ೨೮.ಮುತ್ತಿನ ಮೇಲುಕೋಟೆ ೨೯.ನಾರಾಯಣ ಸ್ವಾಮಿ ನೆನಪು ೩೦.ನಂಜನಗೂಡ ನಂಜಯ್ಯ ೩೧.ಉತ್ತುಮರ ನೆನನೆದೇವೆ ೩೨.ಶರಣರು. **ಮಲ್ಲಿಗೆ ೩(೪): ಬಿಡಿ ಹೂ:** ೩೩.ಚೆಲುವೆ ಜಾಣರ್‌ದೇವಿ ೩೪.ಹಂಬುಲ ಬಿಡದಲ್ಲೋ ನಿನ್ನ ಮೇಲೆ ೩೫.ನೀ ಬಂದು ಕೂಡೆ ೩೬.ಹೂ ತಂದೆ ಮಾಳಿ ನಿನ್ ತುರುಬೀಗೆ ೩೭.ಉತ್ತಮರ ಕೇರಿಗೆ ಬಂದವಳೆ ಕೊರವಿ ೩೮.ನಂಬಿಕೆ

ಕೊಡೆ. ಅಲ್ಲಲ್ಲಿ ಸಾಂದರ್ಭಿಕ ರೇಖಾಚಿತ್ರಗಳಿವೆ. ಮುನ್ನುಡಿಯ ಮೂಗುತಿ ಎಂಬ ನಿರಂಜನ ಅವರ ಮುನ್ನುಡಿ ಇದೆ.

೨೯೮. ಜನಪ್ರಿಯ ಜಾನಪದ ಪ್ರೇಮಗೀತೆಗಳು

ಸಂ: ಮಾಸ್ಕೇರಿ ಎಂ.ಕೆ. ನಾಯಕ; ಪ್ರ: ಅಶ್ವಿನಿ ಪ್ರಕಾಶನ, ಕೇರಾಫ್ ರಾಜಲಕ್ಷ್ಮಿ ಪ್ರಿಂಟರ್ಸ್, ಚೇತನಾ ಕ್ಯಾಂಟೀನ್ ಹತ್ತಿರ, ಮಸಾರಿ, ಗದಗ-೫೮೨ ೧೦೧; ಮೊ.ಮು.೧೯೯೭; ಪುಟ ೮+೮೦=೮೮; ಕ್ರೌನ್ ೧/೮

ಎಪ್ಪತ್ತು ಹಾಡುಗಳ ಸಂಕಲನ.

೨೯೯. ಜನಪ್ರಿಯ ಸಾವಿರಾರು ಗಾದೆಗಳು

ಸಂ: ಆರ್.ಡಿ. ಜಿ.; ಪ್ರ: ಕರ್ನಾಟಕ ಬುಕ್ ಏಜೆನ್ಸಿ, ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ, ಬೆಂಗಳೂರು-೫೬೦ ೦೦೯; ಮು.ಗಳು: ೨೦೦೧, ಜನವರಿ ೨೦೦೨, ಏಪ್ರಿಲ್ ೨೦೦೨; ಪುಟ ೧೦೮; ಕ್ರೌನ್ ೧/೮

೨೩೭೯ ಗಾದೆಗಳ ಸಂಕಲನ.

೩೦೦. ಜನಾಂಗ ಪರಿಚಯ

ಸಂ. ಡಿ.ಬಿ. ಢಂಗ; ಪ್ರ: ಪೆರಿಯಾರ್ ಪ್ರಕಾಶನ, ಧಾರವಾಡ; ಮೊ.ಮು: ೧೯೮೮; ಪುಟ: ೮+೪೦=೪೮, ಕ್ರೌನ್ ೧/೮

'ಕೆಲವು ಜಾನಪದ ಸಂಕ್ಷಿಪ್ತ ಟಿಪ್ಪಣಿಗಳು' ಎಂಬ ಅಡಿಬರಹ ಇದೆ. ನಾಯಕ, ಉಪ್ಪಾರ, ಕೋಳಿ, ವಿಶ್ವಕರ್ಮ, ಕೊರವ, ಕಂಜಾರ ಭಾಟ, ವಡ್ಡ-ಎಂಬ ಏಳು ಜನಾಂಗಗಳ ಪ್ರತ್ಯೇಕ ಸಂಕ್ಷಿಪ್ತ ಪರಿಚಯ ಉಳ್ಳ ಗ್ರಂಥ. ಮಹಾರಾಷ್ಟ್ರ ಹಾಗೂ ಉತ್ತರ ಕರ್ನಾಟಕಗಳಲ್ಲಿ ಬೆಸ್ತರನ್ನು ಕೋಳಿ ಎಂದು ಕರೆಯುವ ವಿಚಾರವನ್ನು ಲೇಖಕರು ಆ ಲೇಖನದ ಪ್ರಾರಂಭದಲ್ಲಿ ಹೇಳಿದ್ದಾರೆ. ಕೊನೆಯಲ್ಲಿ ಗುರುಪಾದ ಮರಿಗುದ್ದಿ ಅವರ ಹಿನ್ನುಡಿ ಇದೆ.

೩೦೧. ಜನಾಂಗದ ಜೀವಾಳ ಅರ್ಥಾತ್ ಜನಪದ ಸಾಹಿತ್ಯ

ಲೇ: ಸಿಂಪಿ ಲಿಂಗಣ್ಣ; ಪ್ರ: ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ; ಮೊ.ಮು.೧೯೬೦; ಪು.೮+೧೬೪=೧೭೪; ಕ್ರೌನ್ ೧/೮

ಹದಿನಾಲ್ಕು ಲೇಖನಗಳ ಸಂಕಲನವಿದು: ೧.ಜನಪದ ಸಾಹಿತ್ಯವು ಜನಾಂಗದ ಜೀವಾಳ ೨.ಜನಪದ ಸಾಹಿತ್ಯ ಮತ್ತು ಅದರ ಸ್ಥಾನ ೩.ಜನಪದ ಸಾಹಿತ್ಯದಲ್ಲಿ ಕಂಡುಬರುವ ಜನಜೀವನ ೪.ಹಳ್ಳಿಯ ಹಾಡುಗಳಲ್ಲಿ ದೇಶಾಭಿಮಾನ ೫.ಜಾನಪದ ಜೀವನದಲ್ಲಿ ಹಾಸ್ಯ ೬.ಒಡಗತೆಗಳ ಸ್ವಾರಸ್ಯ ೭.ನಿತ್ಯ ಜೀವನದಲ್ಲಿ ಹಳ್ಳಿಯ ಹೆಣ್ಣುಮಕ್ಕಳ ಹಾಡುಗಳು

೮.ಗರತಿಯ ಹಾಡು ೯.ಮಕ್ಕಳನ್ನಾಡಿಸುವ ಹಾಡುಗಳು ೧೦.ಮದುವೆಯ ಹಾಡುಗಳು ೧೧.ಜನಪದ ಸಾಹಿತ್ಯದಲ್ಲಿ ಅದ್ಭುತ ಕಥೆಗಳು ೧೨.ಬಯಲಾಟದ ಪದಗಳು ೧೩.ಲಾವಣಿ ಹಾಡುಗಳು ೧೪.ಜನಪದ ಸಾಹಿತ್ಯದಲ್ಲಿ ಶಿವಾನುಭವ.

೮೦೨. ಜಲಕ್ರೀಡೆ ಹಾಡು

ಲೇ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಹತ್ತನೆಯ ಅಚ್ಚು: ೧೯೫೫; ಪುಟ ೨೦; ಕ್ರೌನ್ ೧/೧೬

ಸೀರೆ ಹಾಡು ಎಂಬ ಅಡಿಬರಹ ಇದೆ. ನಾಲ್ಕು ಸಾಲಿನ ೮೮ ಪದ್ಯಗಳಿವೆ.

೮೦೩. ಜಾಂಬವತಿ ಕಲ್ಯಾಣ

ಸಂ: ಬಿದರಹಳ್ಳಿ ನರಸಿಂಹಮೂರ್ತಿ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು – ೫೬೦ ೦೦೨; ಮೊ.ಮು: ೧೯೯೭ ಪು: ೧೬+೩೮; ಡಿಮ್ಮೈ ೧/೮

ಯಕ್ಷಗಾನ ಪ್ರಸಂಗ ಎಂಬ ಅಡಿಬರಹ ಇದೆ. ರಾಗ ತಾಳ ಛಂದೋಸಹಿತದ ಯಕ್ಷಗಾನ ಕಾವ್ಯ. ಎಚ್.ಜೆ. ಲಕ್ಕಪ್ಪಗೌಡ ಅವರ ಅಧ್ಯಕ್ಷರ ಮಾತು, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ ಕಠಿಣ ಪದಗಳ ಅರ್ಥ, ಇವೆ.

೮೦೪. ಜಾಗರ

ಲೇ: ಎಂ. ಪ್ರಭಾಕರ ಜೋಶಿ; ಪ್ರ: ಸುಮನಸಾ ವಿಚಾರ ವೇದಿಕೆ ಚೊಕ್ಕಾಡಿ ದ.ಕ; ಮೊ.ಮು.: ೧೯೮೪; ಪು: ೮+೧೪೬ = ೧೫೪; ಡಿಮ್ಮೈ.

ಯಕ್ಷಗಾನ ವಿಮರ್ಶಾಪ್ರಬಂಧಗಳು ಎಂಬ ಅಡಿಬರಹ ಇದೆ. ಹದಿನಾರು ಲೇಖನಗಳಿವೆ: ೧.ಸಂಪ್ರದಾಯ ಮತ್ತು ಸುಧಾರಣೆ ೨.ಯಕ್ಷಗಾನ ಪರಂಪರೆ ೩.ಕಾಲಕ್ಕೆ ತಕ್ಕ ಪರಿವರ್ತನೆ ೪.ಶೈಲಿಯ ಸಂರಕ್ಷಣೆ ೫.ಮೂರು ತಿಟ್ಟುಗಳು ೬.ಯಕ್ಷಗಾನ ಮೇಳಗಳು ೭.ಹವ್ಯಾಸೀ ಯಕ್ಷಗಾನ ಸಂಘಗಳು ೮.ಯಕ್ಷಗಾನ–ಸಾಹಿತ್ಯ ಮಾಧ್ಯಮ ೯.ಪಾತ್ರ–ಚಿತ್ರಣ ೧೦.ಅಭಿನಯ ೧೧.ನಾಲ್ಕು ವೇಷಗಳು ೧೨.ತಾಳ ಮದ್ದಳೆ ೧೩.ಅರ್ಥಗಾರಿಕೆ–೧ ೧೪.ಅರ್ಥಗಾರಿಕೆ–೨ ೧೫.ಅರ್ಥಗಾರಿಕೆ ವಾದದ ಮಿತಿ ೧೬.ಹಾಸ್ಯ ಮತ್ತು ಔಚಿತ್ಯ. ಲೇಖನಗಳನ್ನು ಬರೆದ ಸಂದರ್ಭಗಳನ್ನು ಆಯಾ ಲೇಖನದ ಕೊನೆಯಲ್ಲಿ ನಮೂದಿಸಲಾಗಿದೆ. ಲಕ್ಷ್ಮೀಶ ತೋಳ್ಪಾಡಿ ಅವರ ಮುನ್ನುಡಿ ಇದೆ.

೮೦೫. ಜಾಣ ಮಗ

ಸಂ: ಜೀನಹಳ್ಳಿ ಸಿದ್ಧಲಿಂಗಪ್ಪ; ಪ್ರ: ಶ್ರುತಿ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ದಾವಣಗೆರೆ ಜಿಲ್ಲೆ–೫೭೭ ೨೨೩; ಮೊ.ಮು. ೨೦೦೨; ಪುಟ ೧೨; ಕ್ರೌನ್ ೧/೪

ಬಿ.ಎಸ್. ಗದ್ದಗಿಮಠ, ಎಸ್.ಎಂ.ದೇಸಾಯಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಲ್. ಗುಂಡಪ್ಪ, ತರಾಸು, ಚಂದ್ರಶೇಖರನಾಥ ಸ್ವಾಮೀಜಿ, ಜೀ.ಶಂ. ಪರಮಶಿವಯ್ಯ, ಎಸ್.ಡಿ. ಇಂಚಲ, ಎಸ್.ಕೆ. ಕರೀಂಖಾನ್, ಆರ್.ಎಸ್.ಪಂಚಮುಖಿ, ಸಿಂಪಿ ಲಿಂಗಣ್ಣ, ಜಿ. ಹನುಮಂತರಾವ್, ಬಿ. ನರಸಮ್ಮ, ಬಿ.ಎಂ. ಶ್ರೀಕಂಠಯ್ಯ, ದೇ. ಜವರೇಗೌಡ, ಕೆ.ಆರ್. ಲಿಂಗಪ್ಪ, ಗೊ.ರು. ಚನ್ನಬಸಪ್ಪ, ಕೆ.ಎಸ್.ನರಸಿಂಹಸ್ವಾಮಿ, ಎಚ್.ಎಂ. ಶಂಕರನಾರಾಯಣರಾವ್, ದೇವಂಗಿ ಚಂದ್ರಶೇಖರ, ಪಿ.ವಿ. ನಂಜರಾಜ ಅರಸು, ಕೆ.ಟಿ. ಚನ್ನಬಸವೇಗೌಡ, ಎನ್.ಆರ್. ರಂಗಯ್ಯ, ಗಣಪತಿರಾವ್ ಪಾಂಡೇಶ್ವರ, ಪ್ರಭುಶಂಕರ, ಎಚ್.ಎಸ್. ಕೃಷ್ಣಸ್ವಾಮಿ ಐಯ್ಯಂಗಾರ್, ಸಿ.ಪಿ. ಕೃಷ್ಣಕುಮಾರ್, ಎಚ್.ತಿಪ್ಪೇರುದ್ರಸ್ವಾಮಿ, ಟಿ. ಕೇಶವಭಟ್, ಟಿ.ಮಹಾಬಲೇಶ್ವರ ಭಟ್ಟ, ಪಡಾರು ಮಹಾಬಲೇಶ್ವರ ಭಟ್ಟ, ಹಾ.ಮಾ.ನಾಯಕ, ಅರ್ಚಕ ಬಿ. ರಂಗಸ್ವಾಮಿ, ಯಂ.ಬಿ. ಮರಕಿಣಿ, ಕೆ.ಎಸ್. ಕರುಣಾಕರನ್ ಮುಂತಾದವರ ಮಾತುಗಳಿವೆ.

೮೪೦. ಜಾನಪದ ಕಥಾ ಭಾರತಿ

ಸಂ: ಬೆ.ಗೋ.ರಮೇಶ್; ಪ್ರ: ಆಶಾ ಸಾಹಿತ್ಯ, ಬೆಂಗಳೂರು-೫೩; ಮೊ.ಮು.೧೯೭೫; ಪುಟ ೪೮; ಕ್ರೌನ್ ೧/೮

ಹನ್ನೊಂದು ಕಥೆಗಳ ಸಂಕಲನ: ೧.ಚಿಂತೆಯಾಕೋ ಚಿನ್ಮಯ ರೂಪ ೨.ಓತಿಕ್ಯಾತನನ್ನು ಕೊಂದ ಅಳಿಯನ ಕಥೆ ೩.ಹಾವು-ಹಣ್ಣು ೪.ಚಿಟಿಕೆ ಚಪ್ಪರ ೫.ಕುಂಬಳಗೌಡನ ಚದುರ ಸೊಸೆ ೬.ಬಂಗಾರದ ಮೀನು ೭.ಅತಿ ಆಸೆ ಗತಿ ಕೇಡು ೮.ನಿಜವಾದ ಪ್ರೇಮಿ ಯಾರು? ೯.ರಾಜ ಕ್ಷೌರಿಕನಾದ ಕಥೆ ೧೦.ಹಕ್ಕು ೧೧.ಪುರುಷೋತ್ತಮದೇವನ ಕಥೆ. ಜನಪದ ಕಥೆಗಳು – ಒಂದು ಅನಿಸಿಕೆ ಎಂಬ ಸಂಪಾದಕರ ಪ್ರಸ್ತಾವನೆ ಇದೆ.

೮೪೧. ಜಾನಪದ ಕಥಾ ಲೋಕ

ಸಂ: ಕೃಪಾನಂದ; ಪ್ರ: ಆಶಾ ಸಾಹಿತ್ಯ, ಕಾಟನ್‌ಪೇಟೆ ಕ್ರಾಸ್, ಬೆಂಗಳೂರು-೫೩; ಮೊ.ಮು. ೧೯೭೭; ಪುಟ ೫೬; ಕ್ರೌನ್ ೧/೮

ಹನ್ನೆರಡು ಕಥೆಗಳಿವೆ: ೧.ಇದ್ದದ್ದನ್ನೂ ಕಳೆದುಕೊಂಡ ೨.ಸಂಬಳಕ್ಕೆ ಬದಲ ಶರತ್ತು ೩.ಅಮೃತ ಫಲ ೪.ನಾದದ ಮಹಿಮೆ ೫.ಕುಶಲ ಮತಿಯ ಜಾಣ್ಮೆ ೬.ಹೇಡಿ ವೀರನಾದ ೭.ವಿಚಿತ್ರ ನ್ಯಾಯ ೮.ಮಂತ್ರಿ ಶಕ್ತಿ ೯.ಕಿರಿಯವನು ರಹಸ್ಯವನ್ನು ಹೇಗೆ ಅರಿತ? ೧೦.ಮೂಲಿಕ ಹಾಡು ಹೇಳಿತು! ೧೧.ಜೀವ ಉಳಿಯಿತು, ಕಿವಿ ಹೋಯಿತು! ೧೨.ವಿಧಿಯನ್ನು ಗೆದ್ದ ರಾಜಕುಮಾರ. "ಹಲವಾರು ದೇಶೀ ಹಾಗೂ ವಿದೇಶೀ ಜಾನಪದ ಕತೆಗಳಿಂದ ಆಯ್ದು ಇಲ್ಲಿ ಹನ್ನೆರಡು ಕಥೆಗಳನ್ನು ಕೊಡಲಾಗಿದೆ" ಎಂಬುದಾಗಿ ಸಂಪಾದಕರು ಹಿನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ.

೮೪೨. ಜಾನಪದ ಕಥಾ ಸಂಗಮ

ಸಂ.ಬಿ.ಎಸ್.ಸ್ವಾಮಿ; ಪ್ರ: ನವೀನ ಪ್ರಕಾಶನ, ಬೆಂಗಳೂರು; ಮೊ.ಮು: ೧೯೮೮; ಪು: ೪೩೮; ಕ್ರೌನ್ ೧/೮

ಈ ಗ್ರಂಥದ ೪೭ ಕಥೆಗಳನ್ನು ಒಂಬತ್ತು ಬಗೆಯಾಗಿ ವರ್ಗಿಕರಿಸಲಾಗಿದೆ. **ಒಂದು: ಮಕ್ಕಳ ಕಥೆಗಳು:** ೧.ಚೋಟು ಮೆಣಸಿನಕಾಯಿ ೨.ಏಡಿ ಕುಮಾರನ ಕಥೆ. **ಎರಡು: ಪುರಾಣ ಕಥೆಗಳು:** ೧.ಲವ-ಕುಶ ೨.ಅರ್ಜುನಜೋಗಿ ಹಾಡು ೩.ರಾಜಾ ಸತ್ಯವ್ರತ ೪.ಬಾಣಾಸುರ ೫.ರಾಜಾವಿಕ್ರಮ. **ಮೂರು: ಶರಣರ ಕಥೆಗಳು:** ೧.ಬಸವಣ್ಣನವರ ಕಥೆ ೨.ತುರುಕರ ಪೀರಣ್ಣ ೩.ಶೆಟ್ಟಿಗಾರ ಪುಟ್ಟಯ್ಯ ೪.ಮೈದಾಳ ರಾಮ ೫.ಗಂಡು ಬ್ರಹ್ಮಯ್ಯ (ಗನಪತರಾಜ) ೬.ಧರ್ಮಪಾಲ ಚರಿತೆ. **ನಾಲ್ಕು: ದೇವರ ಕಥೆಗಳು:** ೧.ನಂಜುಡೇಶ್ವರ (ಚಾಮುಂಡೇಶ್ವರಿ) ೨.ಬಿಳಿಗಿರಿ ರಂಗಸ್ವಾಮಿ ೩.ಶಿವನು ಗಂಗೆ ತರೋದು ೪.ಮಂಟೇಸ್ವಾಮಿ ೫.ಚೆಲುವ ನಾರಾಯಣ ಸ್ವಾಮಿ ೬.ಮುಡುಕು ತೊರೆ ಮಲ್ಲಿಕಾರ್ಜುನ. **ಐದು: ಚಾರಿತ್ರಿಕ ಕಥೆಗಳು:** ೧.ಪಿರಿಯ ಪಟ್ಟಣದ ಕಾಳಗ (ಕೊಡಗಿನ ರಾಜ, ವೀರರಾಜ ಅರಸು, ಲಿಂಗರಾಜಮ್ಮ). **ಆರು: ನೀತಿಯ ಕಥೆಗಳು:** ೧.ಕೊಡೋದೇವ್ರು ೨.ಏಳು ಜನ ಕಳ್ಳರು. **ಏಳು ಲೌಕಿಕ ಕಥೆಗಳು:** ೪.ಹೊಟ್ಟೇಕಾನಿ ೨.ದೊಂಬರ್ಕನ್ ಶೆಟ್ಟಿ ೩.ಪಂಡ್ರಿಪೂರದ ಪುರುಷಪ್ಪ ೪.ರಾಜನ ಮಗಳು. **ಎಂಟು: ಕಾಲ್ಪನಿಕ ಕಥೆಗಳು:** ೧.ಸೂರ್ಯಚಂದ್ರ ೨.ಅಮರಾವತಿ ೩.ನಿದ್ರೆಲಕ್ಷ್ಮೀ ೪.ಬಾಲನಾಗಮ್ಮ ೫.ಸಾರಂಗಧರ ೬.ಬಂಜೆ ಹೊನ್ನಮ್ಮ ೭.ನೀಲವೇಣ್ಣಿ ೮.ಚೆನ್ನಿಗರಾಮ ೯.ಶೀಲವಂತ ೧೦.ನಲ್ಲತಂಗಿ ೧೧.ಮಾಣಿಕಾದೇವಿ ೧೨.ಭುಜಂಗರಾಜನ ಕಥೆ ೧೩.ದೇವೇಂದ್ರ. **ಒಂಬತ್ತು: ಉಪಕಥೆಗಳು:** ೧.ಹೊಗೆ ಸೊಪ್ಪು ೨.ಅಂಬುಗರ ಚೌಡಯ್ಯ ೩.ಕಡುಬಿನ ನಿಂಗಮ್ಮ ೪.ದಾಸಯ್ಯ ೫.ದಡ್ಡಣ್ಣ ೬.ಕಿವುಡನ ಕಥೆ ೭.ಅತ್ತೆ-ಸೊಸೆ ೮.ಮಂಗಣ್ಣನ ಕಥೆ.

೮೪೩. ಜಾನಪದ ಕಥಾಮೃತ-ಸಂಪುಟ ೧

ಸಂ: ಧವಳಶ್ರೀ; ಪ್ರ: ಪ್ರಾರಂಭದ ಪುಟಗಳು ಲಭ್ಯ ಪ್ರತಿಯಲ್ಲಿಲ್ಲ; ಪುಟ ೧೬+೮೪ (ಇದು ಕೊನೆಯ ಪುಟ ಅಲ್ಲ)=೧೦೦; ಕ್ರೌನ್ ೧/೮

ಇದು ೧೫ ಕತೆಗಳ ಸಂಕಲನ: ೧.ರತ್ನಪಾಲಕ್ಕಿ ೨.ಚಾಡಿಗೆ ಮುಪ್ಪುಂಟೆ? ೩.ಮಿಡಿಚಂಭಟ್ಟ ೪.ಜಿನ್ನಿ ಕಥೆ ೫.ಸಣ್ಣಕ್ಕಿ ಬ್ರಾಹ್ಮಣ ೬.ಕಬ್ಬಿಣದ ಅತ್ತೆ ೭.ದೊಡ್ಡ ಚಿಟ್ಟೆ ಹಕ್ಕಿ ೮.ತಂಗಚ್ಚಿ ಕಥೆ ೯.ಕರಡ್ಬಿಟ್ಟು ಕರಡೋಡ್ತು ೧೦.ಪದ್ಮಾವತಿ ೧೧.ಕೊಬ್ಬರಿಶೆಟ್ಟಿ ಮಗಳು ೧೨.ದಾಳಿಂಬೆ ಚದ್ರೆ ೧೩.ಅತ್ತೆಮನೆ ಸೊಸೆ ೧೪.ಯಾರು ಹೆಚ್ಚು ೧೫.ಭೂತ ಮತ್ತು ಸ್ವೈರಿಣಿ. ದೊಡ್ಡಬೆಲೆಯ ಆತ್ಮಶ್ರೀ ಅವರ ಹಿತನುಡಿ ಇದೆ. ಕೊನೆಯಲ್ಲಿ, ಜಾನಪದ ಶಬ್ದಕೋಶ ಇದೆ.

೮೪೪. ಜಾನಪದ ಕಥಾಮೃತ–ಸಂಪುಟ ೨

ಸಂ: ಧವಳಶ್ರೀ; ಪ್ರ: ಪ್ರಾರಂಭದ ಪುಟಗಳು ಲಭ್ಯ ಪ್ರತಿಯಲ್ಲಿ ಇಲ್ಲ; ಮೊ.ಮು. ೧೯೬೮; ಪುಟ ೮+೧೪೨(ಇದು ಕೊನೆಯ ಪುಟ ಅಲ್ಲ)=೧೫೦; ಕ್ರೌನ್ ೧/೮

ಈ ಗ್ರಂಥವು ೨೧ ಜನಪದ ಕಥೆಗಳ ಸಂಕಲನವಾಗಿದೆ: ೧.ರತ್ನಹಾರ ೨.ದಾಳಿಂಬೆ ಚದ್ರೆ ೩.ಚೋಜಿಗ ಚೋಜಿಗ ೪.ಹೂವ್ವಿನ ಗಿಡದ ಕಥೆ ೫.ಗಾಜಿನ ಕಂಬದ ರಾಜಕುಮಾರಿ ೬.ದೇವಗಂಗೆ ಹೆಣ್ಣು ೭.ಕಾಗಕ್ಕ ಗುಬ್ಬಕ್ಕ ೮.ಲೋಭಿದತ್ತನ ಕಥೆ ೯.ಏಡಿಕಾಯಿ ರಾಜ ೧೦.ಒಣ್ಣೇಕ್ಯಾತನ ಕೊಂದ ಶೂರ ೧೧.ಪೆದ್ದನ ಕಥೆ ೧೨.ಇಲಿ ಕಥೆ ೧೩.ರೂಪಸುಂದರಿ ೧೪.ಬದನೆಕಾಯಿ ೧೫.ದೆವ್ವದ ಕಥೆ ೧೬.ಗಡ್ಡಾಸಾಬಿ ಕಥೆ ೧೭.ಋಣಮುಕ್ತರು ೧೮.ಅವಳ ಮಗನೆ ಅವಳ ಗಂಡ ೧೯.ಜಿನ್ನಿ ಕಥೆ ೨೦.ಸಂಪಿಗೆ ಗಿಡದ ಕಥೆ ೨೧.ಮಲ್ಲಿ ಮಾಧವಿ ನಿನ್ನಿಂದ ನೀ ಕೆಟ್ಟಲ್ಲೇ. ಕೊನೆಯಲ್ಲಿ ಜಾನಪದ ಶಬ್ದಕೋಶ ಇದೆ.

೮೪೫. ಜಾನಪದ ಕಥಾಲೋಕ

ಪ್ರಾರಂಭದ ಪುಟಗಳು ಈ ಪ್ರತಿಯಲ್ಲಿ ಇಲ್ಲದ್ದರಿಂದ ಯಾವ ವಿವರವೂ ಲಭ್ಯವಾಗಿಲ್ಲ; ಪು: ಕೊನೆಯ ಪುಟ ೬೪; ಕ್ರೌನ್ ೧/೮

ಹನ್ನೆರಡು ಕಥೆಗಳಿವೆ: ೧.ಇದ್ದದ್ದನ್ನೂ ಕಳೆದುಕೊಂಡ ೨.ಸಂಬಳಕ್ಕೆ ಬದಲು ಶರತ್ತು ೩.ಅಮೃತ ಫಲ ೪.ನಾದದ ಮಹಿಮೆ ೫.ಕುಶಲಮತಿಯ ಜಾಣ್ಮೆ ೬.ಹೇಡಿ ವೀರನಾದ ೭.ವಿಚಿತ್ರ ನ್ಯಾಯ ೮.ಮಂತ್ರಶಕ್ತಿ ೯.ಕಿರಿಯವನು ರಹಸ್ಯವನ್ನು ಹೇಗೆ ಅರಿತ ? ೧೦.ಮೂಲಿಕೆ ಹಾಡು ಹೇಳಿತು ! ೧೧.ಜೀವ ಉಳಿಯಿತು ಕಿವಿ ಹೋಯಿತು! ೧೨.ವಿಧಿ ಯನ್ನು ಗೆದ್ದ ರಾಜಕುಮಾರ. ಕೊನೆಯಲ್ಲಿ ಕೃಪಾನಂದ ಎಂಬುವವರ ಹಿನ್ನುಡಿ ಇದೆ.

೮೪೬. ಜಾನಪದ ಕಥೆಗಳು

ಸಂ: ಕುಮಾರಿ ಸೀತಾಚಾರಿ – ಅನುವಾದ: ಉಷಾ ಮತ್ತು ಕಾವೇರಿ; ಪ್ರ: ಸುದರ್ಶನ ಪ್ರಕಾಶನ ತಿಪಟೂರು; ಮೊ.ಮು.: ೧೯೬೩; ಪು: ೧೪೮; ಕ್ರೌನ್

೩೧ ಜನಪದ ಕಥೆಗಳ ಸಂಕಲನ: ೧.ಕಪಟಿ ದರ್ವೇಷನಿಗೆ ತಕ್ಕ ಶಾಸ್ತಿ (ಕಾಶ್ಮೀರದ ಜಾನಪದ ಕಥೆ) ೨.ಹಳ್ಳಿಯವನೂ ಕೋಗಿಲೆಯೂ (ಸಂಸ್ಕೃತದ ಜಾನಪದ ಕತೆ) ೩.ನರಿಯೂ ಬೇಟೆಗಾರನೂ (ಸಂಸ್ಕೃತದ ಜಾನಪದ ಕಥೆಗಳು) ೫.ಸಾಯುವ ಕಾಲದ ಬಯಕೆ (ಆಂಧ್ರ ದೇಶದ ಕಥೆ). ೬.ಮೂವರು ಜಾಣರು (ಅಸ್ಸಾಮಿ ಕಥೆ) ೭.ದೆವ್ವವೂ ಪೊರಕೆಯೂ (ಅಸ್ಸಾಮಿ ಕಥೆ) ೮.ಹೊಡೆ ಸ್ವಲ್ಪ ತಡೆ (ಬಂಗಾಳದ ಜಾನಪದ ಕಥೆ) ೯.ರತ್ನಗಳು ಹುಟ್ಟಿದುದು (ಬಂಗಾಲಿ ಜಾನಪದ ಕಥೆ) ೧೦.ಹೊಲತಿಯ ಹನ್ನೆರಡು ಮಕ್ಕಳು (ಕೇರಳದ ಜಾನಪದ ಕಥೆ) ೧೧.ದಡ್ಡ ಗಂಡ ಜಾಣ ಹೆಂಡತಿ (ಕಾಶ್ಮೀರದ

ಜಾನಪದ ಕಥೆ) ೧೨.ಗುಡ್ಡದ ಸಮತಾವಾದಿಗಳು (ಸಂತಾಲ ಪರಗಣಗಳ ಜಾನಪದ ಕಥೆ) ೧೩.ಹೊಗೆಸೊಪ್ಪಿನ ಜನ್ಮದಿನ (Santal Paragana) ೧೪.ಮನುಷ್ಯ ಸತ್ತನಂತರ (ಸಂತಾಲ ಪರಗಣದ ಕಥೆ) ೧೫.ಕುರಿಮರಿ ತೋಳ ಮೊಲ (ಟಿಬೆಟ್ಟಿನ ಜಾನಪದ ಕಥೆ) ೧೬.ಲಾಮನ ಸೇವಕ (ತಿಬೆಟ್ಟಿನ ಜಾನಪದ ಕಥೆ) ೧೭.ಮಹಾರಾಜ ವಿಕ್ರಮನ ಸಾಹಸಗಳು (ದಕ್ಷಿಣ ಜಾನಪದ ಕಥೆ) ೧೮.ದೇವರ ದಾರಿ ಬಿಡಬೇಡ (ಮರಾಠಿ ಜಾನಪದ ಕಥೆ) ೧೯.ಬೀರಬಲ್ಲನ ಕಥೆ (ಹಿಂದಿ ಜಾನಪದ ಕಥೆ) ೨೦.ಕಡೆಗೆಲ್ಲಾ ಒಳಿತೇ (ಒರಿಯಾ ಜಾನಪದ ಕತೆ) ೨೧.ಕೃತಘ್ನ ಗೌತಮ (ತೆಲುಗಿನಿಂದ) ೨೨.ನಾಲ್ವರು ಸೋಮಾರಿಗಳು ೨೩.ಅಧಿಕ ಪ್ರಸಂಗಿ (ಗುಜರಾತಿಯಿಂದ) ೨೪.ವ್ಯಾಪಾರಿಯ ಮಗ –ಅವನ ಸಾಹಸ (ತಮಿಳು ಜಾನಪದ ಕಥೆ) ೨೫.ಪೃಥ್ವಿಯ ಹುಟ್ಟು (ಮಧ್ಯಪ್ರದೇಶದ ಜಾನಪದ ಕಥೆ) ೧೬.ಸೂರ್ಯ ಚಂದ್ರ ಮತ್ತು ನಕ್ಷತ್ರಗಳು (ಮಧ್ಯಪ್ರದೇಶದ ಜಾನಪದ ಕಥೆ) ೨೭.ನೀರಿನ ಕಥೆ (ಮಧ್ಯಪ್ರದೇಶದ ಜಾನಪದ ಕಥೆ) ೨೮.ಅಗ್ನಿಯ ಕಥೆ (ಮಧ್ಯ ಪ್ರದೇಶದ ಜಾನಪದ ಕಥೆ) ೨೯.ಹಕ್ಕಿಗಳು (ಒರಿಸ್ಸಾ ಜಾನಪದ ಕಥೆ) ೩೦.ಆನೆ (ಒರಿಸ್ಸಾ ಜಾನಪದ ಕಥೆ) ೩೧.ಜಾತಿ ಮತ್ತು ಬುಡಕಟ್ಟು –ಅದರ ಮೂಲ (ಒರಿಸ್ಸಾ ಜಾನಪದ ಕಥೆ). ಬಿ.ಡಿ. ಜತ್ತಿ ಅವರ ಮುನ್ನುಡಿ ಇದೆ.

೮೪೭. ಜಾನಪದ ಕಥೆಗಳು

ಲೇ: ರಘುನಾಥ ಗಂಗಾಧರ ವಾಡೇದ; ಪ್ರ: ಲಲಿತ ಪ್ರಕಾಶನ, ಹುಬ್ಬಳ್ಳಿ–೨೦; ಮೊ.ಮು: ನಮೂದು ಇಲ್ಲ; ಪು: ४+೨೭೨=೨೭೬; ಕ್ರೌನ್ ೧/೮

೫೩ ಕಥೆಗಳ ಸಂಕಲನ: ೧.ಗಣಪತಿಯ ಬುದ್ಧಿವಂತಿಕೆ ೨.ಗಣಪತಿಯ ಶಾಸ್ತ್ರಜ್ಞಾನ ೩.ಗಣಪತಿ ಮತ್ತು ಷಣ್ಮುಖ ಇವರ ಜಗಳ ೪.ಸರಸ್ವತಿಗೆ ಸಂತತಿಯ ಅಪೇಕ್ಷೆ ೫.ಮುಸಲಾನ್ನದ ರುಚಿ ೭.ಬುದ್ಧಿವಂತನಾದ ಹುಡುಗ ೮.ಜಾಣನಾದ ವೇಷಗಾರ ೯.ಚತುರನಾದ ಒಕ್ಕಲಿಗ ೧೦.ಧೂರ್ತನರಿ ೧೧.ಬದುಕಿನ ವಿದ್ಯೆ ೧೨.ಅರೆಬರೆ ಜ್ಞಾನದ ಪಂಡಿತರು ೧೩.ಬಂದದ್ದಲ್ಲ ಬಾರಿಸಿದ್ದಲ್ಲ ೧೪.ಹುಚ್ಚು ಮುದು ೧೫.ಲಂಚಕೋರ ಪರೀಕ್ಷಕ ೧೬.ವಿದ್ವಾಂಸನಾದ ಕಳ್ಳ ೧೭.ಚಾತುರ್ಯಪೂರ್ಣ ನ್ಯಾಯ ನಿರ್ಣಯ ೧೮.ಕೃತಘ್ನನಾದ ಗೆಳೆಯ ೧೯.ಯಾರು ಹೆಚ್ಚು? ಯಾರು ಕಡಿಮೆ? ೨೦.ಕೀರ್ತಿಮತಿಯ ಸಾಹಸ ೨೧.ಬೇಡನ ಸುದೈವ ೨೨.ದೇವರು ಭಕ್ತರಿಗೆ ಕೊಡುವ ರೀತಿ ೨೩.ಅದೃಷ್ಟ ೨೪.ಮನೆಗೆ ಬಂದ ಅತಿಥಿ ಮಾರ್ಗಕ್ಕೆ ಹಚ್ಚಿದ ೨೫.ಬುದ್ಧಿಶಾಲಿಯಾದ ಶೆಟ್ಟಿ ೨೬.ಸುದೈವಿಗಳಾದ ರಾಜಕುಮಾರರು ೨೭.ಅವಳಿ–ಜವಳಿ ಮಕ್ಕಳು ೨೮.ಜಾಣ ವಿದ್ಯಾರ್ಥಿ ೨೯.ಜಂಬೂರ ಯೋಗಿ ೩೦.ಗರ್ವಿತ ರಾಜಕುಮಾರಿ ೩೧.ಅವರವರ ಪಾಪ ಅವರವರ ಸುತ್ತ ೩೨.ಬ್ರಹ್ಮ ಹಾಕಿದ ಗಂಟು ೩೩.ರಹಸ್ಯ ಮೃತ್ಯುಪತ್ರ ೩೪.ಸರದಾರನ ಪ್ರಾರಬ್ಧ ೩೫.ಸರ್ಪ ಮುಕುಟ ೩೬.ದೈವ ದೊಡ್ಡದು ೩೭.ಹುಚ್ಚರ ಸಂಗತಿ ೩೮.ದೇವೇಂದ್ರನ ಶಾಪ ೩೯.ನಾನು ಕಂಡದ್ದು ಒಬ್ಬನೇ ಒಬ್ಬನನ್ನು ೪೦.ಜನಕ ರಾಜನ ರಾಜ್ಯದ ಜನ

೪೧.ಶಿಲಾ ಲೇಖ ೪೨.ಅರ್ಧ ಬುದ್ಧಿಯ ಗಂಡು ಅರ್ಧ ಬುದ್ಧಿಯ ಹೆಣ್ಣು ೪೩.ಋಣಾನುಬಂಧ ೪೪.ರೂಪವತಿ ಮತ್ತು ಕುರೂಪಿ ೪೫.ಇಬ್ಬರು ಗೆಳೆಯರು ೪೬.ಮೀನು ಬಲೆಗಾರನ ಡೋಣಿಯ ಕಟ್ಟಿಗೆ ೪೭.ಸಿಟ್ಟು ಬಿಟ್ಟೆ ೪೮.ತೂಂಡೂರ ಗುಂಡ ೪೯.ಲಲಾಟ ಲಿಖಿತ ೫೦.ನಾಲಿಗೆ ಕೊಟ್ಟ ನಾರಿ ೫೧.ಅಸೂಯೆಯ ಫಲ ೫೨.ಒಂದು ಪ್ರದರ್ಶನ ೫೩.ರಾಜನ ಕಣ್ಣು ತೆರೆದವು.

೮೪೮. ಜಾನಪದ ಕಥೆಗಳು

ಲೇ: ಎಲ್.ಆರ್. ಹೆಗಡೆ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು. ೧೯೬೮; ಪುಟ ೮+೯೨=೧೦೦; ಫೂಲ್ಸ್‌ಕ್ಯಾಪ್ ೧/೮

ಜನಪದ ಕಥೆಗಳ ವಿವಿಧ ಮುಖಗಳನ್ನು ಪರಿಚಯಿಸುವ ಕೃತಿ: ಜಾನಪದ ಕಥೆಗಳ ಉಗಮ, ಚರಿತ್ರೆ, ಪ್ರಕಾರಗಳು, ವಿಚಿತ್ರ ಪ್ರಪಂಚ, ವಾಸ್ತವಿಕತೆ, ಹಾಸ್ಯ, ಮಹತ್ವ ಮುಂತಾದ ನಿಟ್ಟುಗಳಿವೆ. ಎ.ಎಸ್. ಅಡಕೆ ಅವರ ಮುನ್ನುಡಿ ಇದೆ.

೮೪೯. ಜಾನಪದ ಕಥೆಗಳು

ಸಂ: ಸ.ಚ. ಮಹದೇವನಾಯಕ್; ಪ್ರ: ಮಾಧವ ಪ್ರಕಾಶನ, ಸರಗೂರು, ಹೆಗ್ಗಡದೇವನ ಕೋಟೆ ತಾಲ್ಲೂಕು; ಮೊ.ಮು: ೧೯೮೧; ಪು: ೧೨+೨೬ = ೩೮; ಕ್ರೌನ್

ನಾಲ್ಕು ಕಥೆಗಳಿವೆ: ೧.ಸುಗಂಧರಾಜನ ಕಥೆ ೨.ಕಲಾವತಿ ರಾಣಿ ಅಂಬುಜೆಯ ಕಥೆ ೩.ಕರಾವಳಿ ದೇಶದ ರಾಜನ ಕಥೆ ೪.ನೀಲಾವತಿ ರಾಜಕುಮಾರಿಯ ಸಾಹಸದ ಕಥೆ ಆಯಾ ಕಥೆಯ ಪ್ರಾರಂಭದಲ್ಲೆ ಪ್ರತ್ಯೇಕ ಪುಟದಲ್ಲಿ ಸಂಗ್ರಹ ವಿವರ ಇವೆ. ಶಬ್ದಾರ್ಥಗಳು ಎಂಬ ಭಾಗದಲ್ಲಿ ಏಳು ಶಬ್ದಗಳಿಗೆ ಅರ್ಥ ನೀಡಲಾಗಿದೆ.

೮೫೦. ಜಾನಪದ ಕಲರವ

ಲೇ: ಬಿ.ಎಸ್. ತಲ್ವಾಡಿ; ಪ್ರ: ಶ್ರೀ ಅನ್ನಪೂರ್ಣ ಪ್ರಕಾಶನ, ೧೭೬, ೧೨ನೇ ಮೆಯಿನ್, ಮಾಗಡಿ ರಸ್ತೆ, ಅಗ್ರಹಾರ ದಾಸರಹಳ್ಳಿ, ಬೆಂಗಳೂರು–೫೭೦ ೦೭೯; ಮೊ.ಮು.೨೦೧೦; ಪುಟ ೮+೩೮೪=೩೯೨; ಡೆಮ್ಮಿ ೧/೮

ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ೩೪ ಲೇಖನಗಳೂ ಎರಡನೆಯ ಭಾಗದಲ್ಲಿ ಕೆಲವು ವ್ಯಕ್ತಿಚಿತ್ರಗಳೂ ಇವೆ. **ಲೇಖನಗಳು: ಭಾಗ ಒಂದು:** ೧.ಕನ್ನಡ ಜನಪದರ ಬೆಳಕಿನ ಹಬ್ಬ ದೀಪಾವಳಿ ೨.ಗಡಿನಾಡಿನ ಗೊರೆಹಬ್ಬ ೩.ಜನಪದರ ಸಂಕ್ರಾಂತಿ ೪.ಕ್ರೈಸ್ತ ಜಾನಪದ ೫.ಬಾಸ್ಕ್ ಜಾನಪದ ೬.ಕ್ರೈಸ್ತ ಜನಪದ ಗೀತೆಗಳು ೭.ಸಂತಾಲಿ ಜನಪದ ಪ್ರೇಮಗೀತೆಗಳು ೮.ಸಂತಾಲಿ ಮದುವೆ ಹಾಡುಗಳು ೯.ಗರ್ವಾಲಿನ ಜನಪದ ಗೀತೆಗಳು ೧೦.ಕಾಡಾರರ ಜನಪದ ಗೀತೆಗಳು ೧೧.ಕೊಡವರ ಜನಪದ ಕಲೆಗಳು ೧೨.ಮಳೆ ಜಾನಪದ ೧೩.ಕರ್ನಾಟಕದ ಜನಪದ ಸಾಹಿತ್ಯ ಮತ್ತು ಕಲೆ

೧೪.ಸಂಸ್ಕೃತಿಯ ಸರದಾರನೆನಿಸಿದ ಜಾನಪದ ೧೫.ಕನ್ನಡ ಜಾನಪದ ಅಧ್ಯಯನಕ್ಕೆ ಕ್ರೈಸ್ತ ಮಿಷನರಿಗಳ ಕೊಡುಗೆ ೧೬.ಶಿಷ್ಟ ಮತ್ತು ಜನಪದ ೧೭.ಜನಪದರು ಕಂಡ ಬಸವಣ್ಣ ೧೮.ಜನಪದ ಗೀತೆಗಳಲ್ಲಿ ಹೆಣ್ಣು ೧೯.ಜನಪದ ಸಾಹಿತ್ಯದಲ್ಲಿ ದಲಿತಪ್ರಜ್ಞೆ ೨೦.ಮಲೆಯ ಮಾದೇಶ್ವರ ಮತ್ತು ಜನಪದ ಸಂಸ್ಕೃತಿ ೨೧.ಜನಪದ ಕರಕುಶಲ ಕಲೆಗಳು ೨೨.ಭಾಗವಂತಿಕೆ ಮೇಳ ೨೩.ಜನಪದ ಮಹಾಭಾರತದಲ್ಲಿ ಹೆಣ್ಣು ೨೪.ಮಲೆಯ ಮಾದೇಶ್ವರ: ಗ್ರಂಥ ಸಂಪಾದನೆ ೨೫.ಜನಪದ ಚಾರಿತ್ರಿಕ ಕಥನಗೀತೆಗಳು ೨೬.ಸತ್ವಪೂರ್ಣ ಜನಪದ ಕಥೆಗಳು ೨೭.ಏರಿಳಿತಗಳಿದ್ದರೂ ಸಾಧನೆ ಅಪಾರ ೨೮.ಬೆಳ್ಳಿಬೆಡಗಿನ ಸಂಭ್ರಮ ೨೯.ಜನಪದ ಕಲೆಗಳ ವೇಷಭೂಷಣಗಳು ೩೦.ತಾಳವಾಡಿಯ ಮಾರಿಹಬ್ಬ ೩೧.ವಿಭಿನ್ನ ಜಾನಪದ ೩೨.ಜಾನಪದ ವಿಸ್ಮಯಗಳು ೩೩.ಕಪಟಿಗಳ ಕಥೆ: ಕೃತಿ ಪರಿಚಯ ೩೪.ಪಡುಬಿದ್ರಿಯ ಢಕ್ಕೆಬಲಿ

೮೫೧. ಜಾನಪದ ಕಲಾವಿಹಾರ

ಲೇ: ಜೀ.ಶಂ. ಪರಮಶಿವಯ್ಯ; ಪ್ರ: ಬುರ್ಲಿ ಬಿಂದುಮಾಧವ ಸ್ಮಾರಕ ಪ್ರತಿಷ್ಠಾನ, ಹುಬ್ಬಳ್ಳಿ-೫೮೦ ೦೩೧; ಮೊ.ಮು: ೧೯೮೪; ಪು: ೨೪+೧೩೦=೧೫೪; ಕ್ರೌನ್ ೧/೮

ಜನಪದ ಕಲೆಯನ್ನು ಕುರಿತ ಪ್ರಬಂಧಗಳು ಎಂಬ ಅಡಿಬರಹ ಇದೆ. ಹತ್ತು ಲೇಖನಗಳಿವೆ: ೧.ಕರ್ನಾಟಕ ಜಾನಪದ ಮತ್ತು ಸಾಂಪ್ರದಾಯಿಕ ಕಲೆಗಳು ೨.ಜನಪದ ಕಲಾತ್ಮಕ ರೂಪಗಳು ೩.ಜನಪದ ಕಲೆ-ಶಿಲ್ಪಕಲೆ ೪.ಮನೆಬಳಕೆಯ ವಸ್ತುಗಳಲ್ಲಿ ಕಲಾತ್ಮಕತೆ ೫.ಗ್ರಾಮೀಣ ದೇಗುಲಗಳ ಭಿತ್ತಿ ಮೂರ್ತಿಗಳು ೬.ಕಣ್ಮರೆಯಾದ ಕೀಲು ಗೊಂಬೆಯಾಟ ೭.ಮೂಡಲಪಾಯ-ಕೆಲವು ವಿಚಾರಗಳು ೮.ಘಟ್ಟದ ಕೋರೆ-ಒಂದು ವಿಶಿಷ್ಟ ಯಕ್ಷಗಾನ ಕಲೆ ೯.ಕಾವ್ಯ ಕಲೆಯ ಚಾರಣರು ೧೦.ಜನಪದ ಕಲೆಗಳು-ಒಂದು ಆನ್ವಯಿಕ ದೃಷ್ಟಿ. ಪ್ರಸ್ತಾವನೆ ಇದೆ.

೮೫೨. ಜಾನಪದ ಕಲೆ-ಬದುಕು

ಲೇ: ಕೆ.ಎಸ್. ಉಪಾಧ್ಯಾಯ; ಪ್ರ: ಕರ್ನಾಟಕ ಸಂಘ, ಪುತ್ತೂರು-೫೭೪ ೨೦೧, ದಕ್ಷಿಣ ಕನ್ನಡ; ಮೊ.ಮು.೧೯೯೪; ಪುಟ ೧೨+೧೨೪=೧೩೬; ಕ್ರೌನ್ ೧/೮

ಹನ್ನೆರಡು ಲೇಖನಗಳ ಸಂಕಲನ: ೧.ಯಕ್ಷಗಾನ ಬಯಲಾಟ: ಒಂದು ಪರಿಚಯ ೨.ವಿಶ್ವವ್ಯಾಪಿ ಗೊಂಬೆಯಾಟ ೩.ಕರ್ನಾಟಕದಲ್ಲಿ ಗೊಂಬೆಯಾಟ ೪.ಯಕ್ಷಗಾನ ಗೊಂಬೆಯಾಟ ೫.ನಾಗಮಂಡಲ ೬.ಭೂತಾರಾಧನೆ ೭.ಕಂಬಳ ೮.ಒತ್ತೆಕೋಲ ೯.ಕೋಳಿ ಅಂಕ ೧೦.ಹಾಂಕಾಂಗ್‌ನಲ್ಲಿ ಯಕ್ಷಗಾನ ದಿಗ್ವಿಜಯ ೧೧.ಉಪ್ಪಿನಕುದುರು ತಂಡದ ಮತ್ತೊಂದು ವಿದೇಶಯಾತ್ರೆ ೧೨.ಆಂಧ್ರದ ತೋಲು ಬೊಮ್ಮಲಾಟ. ಅನುಬಂಧದಲ್ಲಿ ಇತರರು ಬರೆದಿರುವ ಇನ್ನೂ ಐದು ಲೇಖನಗಳಿವೆ: ೧.ಸಾಹಸಿ ಸಂಘಟಕ-ಸಾಂಸ್ಕೃತಿಕ ಕಾರ್ಯಕರ್ತ-ಪತ್ರಕರ್ತ ಕೆ.ಎಸ್. ಉಪಾಧ್ಯಾಯರು-ಎಂ.ಪ್ರಭಾಕರ ಜೋಷಿ ೨.ನನ್ನ ಮನೆತನದ ಕಲೆ ಬೆಳಗಿಸಿದರು – ಯು.ಕೊಗ್ಗ ಕಾಮತ್ ೩.ಯಕ್ಷಗಾನ ಗೊಂಬೆಯಾಟ

ದಕ್ಷಿಣ ಕನ್ನಡದಿಂದ ಯುರೋಪಿಗೆ – ಕೆ. ಶ್ರೀಕರ ಭಟ್ ೪.ಮತ್ತೊಮ್ಮೆ ಸಾಗರ ಜಿಗಿದ ಯಕ್ಷಗಾನ ಬೊಂಬೆಯಾಟ – ಕೆ. ಶ್ರೀಕರ ಭಟ್ ೫.ಕೆ.ಎಸ್. ಉಪಾಧ್ಯಾಯ ಅವರ ಯಕ್ಷಗಾನ ವಿದೇಶ ಯಾತ್ರೆಗೆ ಹತ್ತು ವರ್ಷ–ಎಚ್.ಮಂಜುನಾಥ ಭಟ್. ಮುಳಿಯ ಮಹಾಬಲ ಭಟ್ಟ ಅವರ ಮುನ್ನುಡಿ ಇದೆ. ಕೊನೆಯಲ್ಲಿ ಕೆ.ಎಸ್. ಉಪಾಧ್ಯಾಯ – ಸಾಧನೆಗಳ ಪಕ್ಷಿನೋಟ, ಇದೆ.

೮೫೩. ಜಾನಪದ ಕವಳ ಪೇಳಿ

ಲೇ: ಎನ್.ಆರ್. ನಾಯಕ; ಪ್ರ: ಜಾನಪದ ಪ್ರಕಾಶನ, ಹೊನ್ನಾವರ; ಮೊ.ಮು: ೧೯೯೭; ಪು: ೫+೧೨೮=೧೩೩; ಕ್ರೌ ೧/೮

ಎಂಟು ಲೇಖನಗಳ ಸಂಕಲನ: ೧.ಸಹ್ಯಾದ್ರಿಯ ಬುಡಕಟ್ಟು ಜನಾಂಗಗಳ ಜಾನಪದ ೨.ಬುಡಕಟ್ಟು ಜನಾಂಗಗಳ ಸಾಮಾಜಿಕ ವ್ಯವಸ್ಥೆಯಲ್ಲಿ ಜಾನಪದದ ಪಾತ್ರ ೩.ಹಾಲಕ್ಕಿ ಒಕ್ಕಲಿಗರ ಅಭಿವೃದ್ಧಿಗಾಗಿ ಯೋಜನೆ ೪.ಉತ್ತರ ಕನ್ನಡ ಜಿಲ್ಲೆಯ ಉತ್ಸವಗಳು ೫.ಉತ್ತರ ಕನ್ನಡ ಜಿಲ್ಲೆಯ ಜನಪದ ಸಾಹಿತ್ಯ ಹಾಗೂ ಕಲೆಗಳು ೬.ಯಕ್ಷಗಾನ ಕಲೆ ಜಾನಪದವೋ ಶಾಸ್ತ್ರೀಯವೋ ೭.ಉತ್ತರ ಕನ್ನಡ ಜಿಲ್ಲೆಯ ಜನಪದ ಕಲೆಗಳ ಅಳಿವು ಉಳಿವು ೮.೧೯೮೦ರ ನಂತರಿನ ಜಾನಪದ ಪ್ರಕಾರಗಳು.

೮೫೪. ಜಾನಪದ ಕಿತ್ತೂರಿನ ಕಿಡಿಗಳು

ಲೇ: ಸೋಮಶೇಖರ ಇಮ್ರಾಪುರ; ಪ್ರ: ಚೇತನಾ ಪ್ರಕಾಶನ, ಧಾರವಾಡ; ಮೊ.ಮು. ೧೯೭೯; ಪುಟ ೬೬; ಕ್ರೌನ್ ೧/೮

ನಾಲ್ಕು ಲೇಖನಗಳ ಸಂಕಲನ: ೧.ಕಿತ್ತೂರು ಚೆನ್ನಮ್ಮ ೨.ಸಂಗೊಳ್ಳಿ ರಾಯಣ್ಣ ೩.ಕಿತ್ತೂರಿನ ಇತರ ವೀರರು ೪.ಕಿತ್ತೂರನ್ನು ಕುರಿತ ಲಾವಣಿಗಳು ಹಾಗೂ ಇತರ ಸಾಹಿತ್ಯ.

೮೫೫. ಜಾನಪದ ಕುರಿತು

ಲೇ: ಜ್ಯೋತಿ ಹೊಸೂರ; ಪ್ರ: ಜಾನಪದ ಮಂಟಪ, ಕಾಲಗತಿ ಪ್ರಕಾಶನ, ರಾಯಬಾಗ, ಬೆಳಗಾವಿ ಜಿಲ್ಲೆ; ಮೊ.ಮು.೧೯೮೬; ಪುಟ ೭೪; ಡಿಮ್ಮೈ ೧/೮

ಆರು ಲೇಖನಗಳ ಸಂಕಲನ: ೧.ಬೆಳಗಾವಿ ಜಿಲ್ಲೆಯ ಜನಪದ ಕಲೆಗಳು ೨.ಸಣ್ಣಾಟಗಳ ಪ್ರಯೋಗ ಕಲಾತಂತ್ರ ೩.ಆನಂದಕಂದರ ಜಾನಪದ ಕಾರ್ಯ ೪.ಕಿತ್ತೂರ ವೀರರನ್ನು ಕುರಿತ ಜನಪದ ಸಾಹಿತ್ಯ ೫.ಜಂಬಗಿಯವರ ಜಾನಪದ ಗೆಜ್ಜೆ ನುಡಿತ ೬.೧೯೮೩ ರ ಜನಪದ ಸಾಹಿತ್ಯ.

೮೫೬. ಜಾನಪದ ಕೈಪಿಡಿ

ಲೇ: ತೀ.ನಂ. ಶಂಕರನಾರಾಯಣ, ಪುರುಷೋತ್ತಮ ಬಿಳಿಮಲೆ, ಅಂಬಳಿಕೆ ಹಿರಿಯಣ್ಣ, ಎ.ವಿ. ನಾವಡ, ಶ್ರೀರಾಮ ಇಟ್ಟಣ್ಣನವರ; ಪ್ರ.ಸಂ: ಎಚ್.ಜೆ. ಲಕ್ಕಪ್ಪಗೌಡ, ಸಂಯೋಜಕ ಸಂ: ಪುರುಷೋತ್ತಮ ಬಿಳಿಮಲೆ; ಮೊ.ಮು. ೧೯೯೭; ಪುಟ ೧೨+೬೦೪=೬೧೬; ಡಿಮ್ಮೈ ೧/೮

"ಜಾನಪದ ವಿಜ್ಞಾನದಲ್ಲಿ ನಾವು ಆಗಾಗ ಬಳಸುತ್ತಿರುವ ಪರಿಭಾಷೆ, ಪರಿಕಲ್ಪನೆಗಳ ಅರ್ಥವ್ಯಾಪ್ತಿಯನ್ನು ಖಚಿತಪಡಿಸಿಕೊಳ್ಳುವುದು, ಪ್ರಕಾರಗಳ ಗಡಿರೇಖೆಗಳನ್ನು ನಿಖರಗೊಳಿಸಿಕೊಳ್ಳುವುದು, ಜಾನಪದ ಅಧ್ಯಯನದ ಇತಿಹಾಸ ಮತ್ತು ಅದರ ಆಧುನಿಕ ಒಲವುಗಳನ್ನು ಪರಿಚಯ ಮಾಡಿಕೊಳ್ಳುವುದು, ಜಾನಪದ ವಿದ್ವಾಂಸರ ಕೆಲಸ-ಕಾರ್ಯಗಳನ್ನು ಸ್ಮರಿಸಿಕೊಂಡು ಭವಿಷ್ಯದ ಕಡೆಗೆ ಹೆಜ್ಜೆ ಹಾಕುವುದು – ಈ ಮುಂತಾದ ಬಗೆಬಗೆಯ ಉದ್ದೇಶಗಳನ್ನಿರಿಸಿಕೊಂಡು, ಈ ಕೈಪಿಡಿಯನ್ನು ಸಿದ್ಧಗೊಳಿಸಲಾಗಿದೆ"ಎಂಬುದಾಗಿ ಸಂಯೋಜಕ ಸಂಪಾದಕರಾದ ಪುರಷೋತ್ತಮ ಬಿಳಿಮಲೆ ಅವರು ಹೇಳಿದ್ದಾರೆ. ನೆಲಮನೆ ಕೆ. ದೇವೇಗೌಡ ಅವರ ಮುನ್ನುಡಿ ಇದೆ.

೮೫೭. ಜಾನಪದ ಕೋಗಿಲೆ

ಲೇ: ಎಂ.ಓ. ಮಮತೇಶ; ಪ್ರ: ಉಲ್ಲಾಸ್ ಪ್ರಕಾಶನ, ಸೊಲ್ಲಾಪುರ-೫೭೭ ೫೫೦, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ; ಮೊ.ಮು: ೧೯೯೫; ಪು: ೬+೯೬=೧೦೨; ಕ್ರೌನ್ ೧/೮

ಕೆ.ಆರ್. ಲಿಂಗಪ್ಪ ಅವರ ಜೀವನಚತ್ರವನ್ನುಳ್ಳ ಗ್ರಂಥ. ಒಳಗೆ ಹನ್ನೆರಡು ಶೀರ್ಷಿಕೆಗಳಿವೆ: ೧.ಜಾನಪದ ಕೋಗಿಲೆ (ಸ್ವಾಗತಗೀತೆ) ೨.ಮಲೆನಾಡ ಮಡಿಲಲ್ಲಿ ೩.ಬಾಲ್ಯ-ವಿದ್ಯಾಭ್ಯಾಸ ೪.ವೈವಾಹಿಕ ಜೀವನ ಮತ್ತು ಕುಟುಂಬ ೫.ಕ್ರಿಯಾಶೀಲ ಕೋಗಿಲೆ ೬.ವಕೀಲರಾಗಿ ೭.ಕೋಗಿಲೆ ಹಾಡಿತು ೮.ಕಂಠಶ್ರೀ ೯.ನಾಡಮನ್ನಣೆ ೧೦.ಅಮೇರಿಕಾ ಪ್ರವಾಸ ೧೧.ಕೆ.ಆರ್. ಲಿಂಗಪ್ಪ ಅವರ ವ್ಯಕ್ತಿತ್ವ ೧೨.(ಲಿಂಗಪ್ಪ ಅವರನ್ನು ಕುರಿತ) ನಾಲ್ಕು ತ್ರಿಪದಿಗಳು.

೮೫೮. ಜಾನಪದ ಕ್ರೀಡೆ

ಸಂ: ಎಲ್.ಆರ್. ಹೆಗಡೆ; ಪ್ರ; ಎಲ್.ಆರ್.ಹೆಗಡೆ ಕೃತಿ ಪ್ರಕಾಶನ ಸಮಿತಿ, ಶಿರಸಿ; ಮೊ.ಮು.೨೦೦೦; ಪುಟ ೬+೯೪=೧೦೦; ಡಿಮ್ಮೈ ೧/೮

ಏಳು ಅಧ್ಯಾಯಗಳಿವೆ: ೧.ನೋಡಿ ಕಲಿ, ಮಾಡಿ ಕಲಿ, ಆಡಿ ಕಲಿ ೨.ಆಟದ ಚರಿತ್ರೆ ೩.ಆಟಗಳ ವರ್ಗೀಕರಣ ೪.ಚಿಕ್ಕ ಮಕ್ಕಳ ಆಟಗಳು ೫.ಒಳಾಂಗಣ ಆಟಗಳು ೬.ಹೊರಾಂಗಣ ಆಟಗಳು ೭.ಉಪಸಂಹಾರ. ಮೂರು ಅನುಬಂಧಗಳಿವೆ: ೧.ಪ್ರಶ್ನೋತ್ತರ ೨.ಮಾಹಿತಿ ನೀಡಿದವರು ೩.ಆಟಗಳು (ಅಕಾರಾದಿ). ಅಲ್ಲಲ್ಲಿ ಕೆಲವು ರೇಖಾಚಿತ್ರಗಳಿವೆ.

೮೫೯. ಜಾನಪದ ಕ್ಷೇತ್ರಕಾರ್ಯ

ಲೇ: ಪುರುಷೋತ್ತಮ ಬಿಳಿಮಲೆ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು.: ನಮೂದಿಸಿಲ್ಲ, ಎ.ಮು.; ೧೯೯೩, ಪುಟ ೨೮, ಡಿಮ್ಮೈ ೧/೮

ಆಧುನಿಕ ವಿಧಾನಗಳು ಎಂಬ ಅಡಿಬರಹ ಇದೆ. ಆರು ಅಧ್ಯಾಯಗಳಿವೆ: ೧.ಪ್ರವೇಶ ೨.ಕ್ಷೇತ್ರಕಾರ್ಯದ ತಾತ್ವಿಕ ಸಮಸ್ಯೆಗಳು ೩.ಕ್ಷೇತ್ರಕಾರ್ಯ ಪೂರ್ವ ತಯಾರಿಗಳು ೪.ಕ್ಷೇತ್ರದಲ್ಲಿ ಸಂಶೋಧಕ ೫.ಕ್ಷೇತ್ರಕಾರ್ಯದ ಅನಂತರ ೬.ಯಶಸ್ವಿ ಕ್ಷೇತ್ರಕಾರ್ಯದ ಎರಡು ಮಾದರಿಗಳು.

೮೬೦. ಜಾನಪದ ಕ್ಷೇತ್ರಕಾರ್ಯದ ತತ್ವಗಳು

ಲೇ: ಕ್ಯಾತನಹಳ್ಳಿ ರಾಮಣ್ಣ; ಪ್ರ: ಸಂವಹನ, ೧೨/೧ಎ, ಈವ್ನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು–೫೭೦ ೦೦೧; ಮೊ.ಮು. ೨೦೦೦; ಪುಟ ೮೦; ಕ್ರೌನ್ ೧/೮

ಜಾನಪದ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಈ ಪುಸ್ತಕವು ರೂಪಿಸಲ್ಪಟ್ಟಿದೆ– ಎಂಬುದಾಗಿ ಲೇಖಕರು ಹೇಳಿಕೊಂಡಿದ್ದಾರೆ. ಇಲ್ಲಿ ೧೩ ಅಧ್ಯಾಯಗಳಿವೆ: ೧.ಪ್ರವೇಶ ೨.ಕ್ಷೇತ್ರಕಾರ್ಯ ೩.ಸಂಗ್ರಹಕಾರ ೪.ವೈಜ್ಞಾನಿಕ ಅನ್ವೇಷಣೆ ೫.ಕಾಲ ಕುರಿತು ೬.ಸಿದ್ಧತೆ ೭.ವಿಶ್ವಾಸ ಗಳಿಕೆ ೮.ಸಂಗ್ರಹ ವಿಧಾನಗಳು–೧.೯.ಸಂಗ್ರಹ ವಿಧಾನಗಳು–೨ ೧೦.ಪ್ರಚೋದನೆ ಸಂಭಾವನೆ ಇತ್ಯಾದಿ ೧೧.ಸಮಸ್ಯೆಗಳು ೧೨.ಸಂಗ್ರಹಾನಂತರ ೧೩.ಉಪಸಂಹಾರ.

೮೬೧. ಜಾನಪದ ಖಂಡ ಕಾವ್ಯಗಳು

ಸಂ: ಜೀ.ಶಂ. ಪರಮಶಿವಯ್ಯ; ಪ್ರ: ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು; ಮೊ.ಮು.೧೯೬೮; ಪುಟ ೮ + ೧೦೦ = ೧೦೮ ಕ್ರೌನ್ ೧/೮

ಇದು ಎಂಟು ಕಥನಗೀತೆಗಳ ಸಂಕಲನ: ೧.ಉತ್ತರದೇವಿ ೨.ಈರೋಬಿ ೩.ನಾಗವ್ವ ೪.ಹುಳಿಯಾರು ಕೆಂಚಮ್ಮ ೫.ಹೊನ್ನಮ್ಮ ೬.ಸಂಪನ್ನೆ ೭.ಚಿಕ್ಕೋಳು ಹಿರಿದಿಮ್ಮವ್ವ ೮.ಕೊಂತ್ಯಮ್ಮ. ಪ್ರತಿಯೊಂದು ಕಾವ್ಯದ ಪ್ರಾರಂಭದಲ್ಲಿ ಸಂಗ್ರಹ ವಿವರಗಳೂ, ಕಾವ್ಯದ ಬಗ್ಗೆ ಸಂಕ್ಷಿಪ್ತ ಚರ್ಚೆಯೂ, ಕಾವ್ಯದ ಕಥಾ ಸಾರಾಂಶವೂ, ನೀಡಲ್ಪಟ್ಟಿವೆ. ಟಿಪ್ಪಣಿಗಳು ಎಂಬ ಕೊನೆಯ ಭಾಗದಲ್ಲಿ ಕೆಲವು ವಿವರಣೆಗಳೂ ಶಬ್ದಾರ್ಥಗಳೂ ಇವೆ.

೮೬೨. ಜಾನಪದ ಖಂಡಕಾವ್ಯಗಳು (ಜನಪದ ಕಾವ್ಯಸಂಪುಟ–೨)

ಸಂ: ಜೀ.ಶಂ. ಪರಮಶಿವಯ್ಯ; ಪ್ರ: ಸಾಗರ್ ಪ್ರಕಾಶ್ನ, ೬೯೫, ೧೦ನೇ ಮುಖ್ಯರಸ್ತೆ, ೮೦ ಅಡಿರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು–೫೬೦ ೦೭೨; ಸಮಗ್ರ ಮೊ.ಮು: ೨೦೧೨; ಪು: ೪೬೪; ಡಿಮ್ಮೈ ೧/೮

ದೊಂಬಿದಾಸರ ಲಾವಣಿಗಳು (೧೯೭೪), ಹೆಳವರ ಕಾವ್ಯಗಳು (೧೯೭೪), ಜಾನಪದ ಖಂಡಕಾವ್ಯಗಳು (೧೯೬೮)–ಈ ಮೂರು ಸಂಕಲನಗಳ ಗುಚ್ಛ.

ದೊಂಬಿದಾಸರ ಲಾವಣಿಗಳು ಸಂಕಲನದಲ್ಲಿ ೧೬ ಲಾವಣಿಗಳಿವೆ: ೧.ಪ್ರೇಮ ಸತ್ಯಭೋಜ ೨.ಶ್ರೀಗೌರಿಯ ಮದುವೆ ೩.ಗಂಗೆಯ ತರುವುದು ದಿಟವು ಕಾಣ್ಡೆಣ್ಣೆ ೪.ಗಂಗೇಗು ಗೌರಿಗೂ ಹತ್ತಿತು ಜಗಳ ೫.ಗಂಗೇಗೌರಿವಾದ ೬.ಗಂಗೇಗೌರಿ ಸವಾಲು ೭.ಕೃಷ್ಣಕೊರವಂಜಿ ೮.ತಟವಾಣಿ ಹೆಣ್ಣು ೯.ಅತ್ತೆಸೊಸೆ ೧೦.ಘಾತುಕ ಅಣ್ಣಯ್ಯ ೧೧.ಪಾಪಿಗೇಡಿ ಅಣ್ಣಯ್ಯ ೧೨.ಬಾಲ ನಾಗಮ್ಮ ೧೩.ಬಂಜೆ ಹೊನ್ನಮ್ಮ ೧೪.ಲೋಹಿತಕುಮಾರ ಬಸವಕುಮಾರ ೧೫.ಮಾರೇಗೌಡ ೧೬.ಕೆಂಪೇಗೌಡ. ಪ್ರಸ್ತಾವನೆ, ಶಬ್ದಸೂಚಿ, ಹಾಡಿದವರು, ಇವೆ. ಹೆಳವರ ಕಾವ್ಯಗಳಲ್ಲಿ ಏಳು ಇವೆ: ೧.ಮಲ್ಲರಾಜ ೨.ಹೊನ್ನೊಕ್ಕಲಾಗಲಿ ೩.ಯಮದೋರು ೪.ಹೆಳವೇಗೌಡ ೫.ಯಮದಾಳು ದೇವಮ್ಮ ೬.ನಂಜುಂಡಲಿಂಗ ೭.ಭೈರುವ. ಪ್ರಸ್ತಾವನೆ, ಟಿಪ್ಪಣಿಗಳು, ಇವೆ. ಜಾನಪದ ಖಂಡಕಾವ್ಯಗಳು ಸಂಕಲನದಲ್ಲಿ ಎಂಟು ಕಾವ್ಯಗಳಿವೆ: ೧.ಉತ್ತರದೇವಿ ೨.ಈರೋಬಿ ೩.ನಾಗವ್ವ ೪.ಹುಳಿಯಾರು ಕೆಂಚಮ್ಮ ೫.ಹೊನ್ನಮ್ಮ ೬.ಸಂಪನ್ನೆ ೭.ಚಿಕ್ಕೋಳು ಹಿರಿದಿಮ್ಮವ್ವ ೮.ಕೊಂತ್ಯಮ್ಮ. ಕೊನೆಯಲ್ಲಿ ಟಿಪ್ಪಣಿಗಳಿವೆ.

೮೬೩. ಜಾನಪದ ಗೀತೆಗಳು

ಲೇ: ಕೆ. ಶಿವರಾಮ ಕಾರಂತ; ಪ್ರ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು; ಮೊ.ಮು.೧೯೬೬, ಎ.ಮು. ೧೯೭೧; ಪು: ೮+೧೨೦=೧೨೮; ಕ್ರೌನ್ ೧/೮

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗಕ್ಕಾಗಿ ಮಾಡಿದ ಮೂರು ಉಪನ್ಯಾಸಗಳ ಸಂಕಲನ: ವಿಷಯ ಹೀಗಿವೆ: ೧.ವಸ್ತು, ಪ್ರಕಾರಗಳು ೨.ವಸ್ತುಗಳ ಹಿನ್ನೆಲೆ ೩.ವಸ್ತು ಮತ್ತು ಶರೀರ. ಎಲ್ಲವೂ ಸೋದಾಹರಣ ನಿರೂಪಣೆಗಳಾಗಿವೆ. ಪ್ರಸ್ತಾವನೆ ಇದೆ.

೮೬೪. ಜಾನಪದ ಗೀತೆಗಳು

ಸಂ: ಎಂ. ಜೀವನ; ಪ್ರ: ಸಿಟಿ ಬುಕ್ ಸ್ಟಾಲ್, ಹುಬ್ಬಳ್ಳಿ; ಮೊ.ಮು. ನಮೂದು ಇಲ್ಲ; ಪುಟ ೪೦೮; ಕ್ರೌನ್ ೧/೮

ವಿಷಯಾವಾರು ವಿಂಗಡಿಸಲ್ಪಟ್ಟ ತ್ರಿಪದಿಗಳ ಸಂಕಲನ.

೮೬೫. ಜಾನಪದ ಗೀತೆಗಳು

ಸಂ: ಬಿ.ಎಸ್. ಗದ್ದಗಿಮಠ; ಪ್ರಾರಂಭದ ಪುಟಗಳು ನಮಗೆ ಸಿಕ್ಕಿರುವ ಪ್ರತಿಯಲ್ಲಿ ಇಲ್ಲದ್ದರಿಂದ ಕೆಲವು ವಿವರಗಳನ್ನು ನೀಡಲು ಸಾಧ್ಯವಾಗಿಲ್ಲ.

ಕೌಟುಂಬಿಕ ಸಂಬಂಧಗಳು ಇತ್ಯಾದಿ ವಿಂಗಡಿಸಲ್ಪಟ್ಟಿರುವ ತ್ರಿಪದೀ ಸಂಗ್ರಹವಿದು. ಗ್ರಂಥ ಕ್ರೌನ್ ೧/೮ ಆಕಾರದಲ್ಲಿದೆ. ೨೩೮ನೆಯ ಕೊನೆಯ ಪುಟದ ಅಡಿಟಿಪ್ಪಣಿಯಲ್ಲಿ

'ಸಂಗ್ರಾಹಕ'ರು ಹೀಗೆ ಬರೆದಿದ್ದಾರೆ: "ಕನ್ನಡದಲ್ಲಿ ಜಾನಪದ ಸಾಹಿತ್ಯದ ಕೃಷಿ ಬೆಳೆದಿಲ್ಲ. ಎಲ್ಲರೂ ಹಿಂದಿನದನ್ನು ಹುಡುಕಿ ತೆಗೆಯುವುದರಲ್ಲಿ ಮಗ್ನರಾಗಿರುವರೇ ವಿನಾ ಸೃಷ್ಟಿಸುವತ್ತ ಒಬ್ಬರೂ ಗಮನವಿತ್ತಿಲ್ಲ. ಆ ದಿಶೆಯಲ್ಲಿ ಜಯದೇವಿತಾಯಿ ಲಿಗಾಡೆಯವರ ಪ್ರಯತ್ನವು ಪ್ರಥಮವಾದುದಾಗಿದೆ. ಅವರು ಇಂಥ ನೂರಾರು ಪದ್ಯಗಳನ್ನು ರಚಿಸಿದ್ದಾರೆ. ಪ್ರಸ್ತುತ ಸಂಗ್ರಹದಲ್ಲಿ ತಮ್ಮ ಗೀತೆಗಳನ್ನು ಸೇರಿಸಿಕೊಳ್ಳಲು ಅನುಮತಿಯಿತ್ತ 'ತಾಯಿ' ಯವರಿಗೆ ನಾನು ಉಪಕೃತನಿದ್ದೇನೆ."

೮೬೬. ಜಾನಪದ ಗ್ರಹಿಕೆ

ಲೇ: ಚಕ್ಕೆರೆ ಶಿವಶಂಕರ್; ಪ್ರ: ಜ್ಞಾನೋದಯ ಪ್ರಕಾಶನ, ೧೩೩, ಶಾರದಾ ಕಾಲೋನಿ, ಕೆಎಚ್‌ಬಿಸಿಎಸ್ ಲೇಔಟ್, ೩ನೆಯ ಹಂತ, ೪ನೆಯ ಬ್ಲಾಕ್, ಬಸವೇಶ್ವರನಗರ, ಬೆಂಗಳೂರು–೫೬೦ ೦೭೯; ಮೊ.ಮು.೧೯೯೮; ಪುಟ ೧೦+೧೮೨=೧೯೨; ಕ್ರೌನ್ ೧/೮

ಒಂಬತ್ತು ಲೇಖನಗಳ ಸಂಕಲನ: ೧.ಜನಪದ ಸಾಹಿತ್ಯದಲ್ಲಿ ಕನ್ನಡ ನೆಲದ ಸಂಸ್ಕೃತಿ ೨.ನವ್ಯ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಸಂಬಂಧದ ಸ್ವರೂಪ ೩.ಗುರುಸ್ವಾಮಿ ಪಾದಕ್ಕೆ ಮಲ್ಲಿಗ್ಹೂವಿಟ್ಟು ಶರಣೆಂದೆ ೪.ಕೆಂಪಣ್ಣಗೌಡನ ಸಾಮಾಜಿಕ ಪ್ರಜ್ಞೆ ೫.ಶರಣಾರ ನೆನೆದಾರೆ ಸರಗೀಯ ಇಟ್ಟಂಗೆ ೬.ನಗರ ಜಾನಪದ: ಒಂದು ಗ್ರಹಿಕೆ ೭.ಜನಪದ ಕಥೆ: ವಸ್ತು ವಿನ್ಯಾಸ ೮.ಜಾನಪದ ಸಂಶೋಧನೆ: ನಾಳಿನ ಮಾರ್ಗ ೯.ಕುವೆಂಪು ಕಾವ್ಯದಲ್ಲಿ ಜನಪದ ಸಂವೇದನೆ.

೮೬೭. ಜಾನಪದ ಗ್ರಹಿಕೆ: ಪರಿಕಲ್ಪನೆ

ಸಂ: ಹಿ.ಶಿ. ರಾಮಚಂದ್ರೇಗೌಡ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–೫೬೦ ೦೦೨; ಮೊ.ಮು.೨೦೦೪; ಪುಟ ೨+೧೨೫=೧೨೭; ಡಿಮ್ಮೈ ೧/೮

ಜನಪದ ಕಲಾವಿದರ ಅನಿಸಿಕೆಗಳು ಎಂಬ ಅಡಿಬರಹ ಇದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಜನಪದ ಕಲಾವಿದರುಗಳಿಗೆ ಕೇಳಿದ ಪ್ರಶ್ನೆಗಳು: ೧.ಜಾನಪದ ವಿದ್ವಾಂಸರೆಂಬುವವರು ಆ ಕ್ಷೇತ್ರಕ್ಕೆ ಮಾಡುತ್ತಿರುವ ಕೆಲಸದ ಬಗ್ಗೆ ನಿಮ್ಮ ಅಭಿಪ್ರಾಯ ಏನು? ೨.ಜಾನಪದ ಅಕಾಡಿಮ್ಯೆ ಕಲಾವಿದರಿಗಾಗಿ ಏನೇನು ಮಾಡಬೇಕು? ೩.ಈ ಜಾನಪದ ಕಲೆಯೆನ್ನುವುದು ಏನು? ಇದರ ಗುಣ ಸ್ವಭಾವ ಏನು? ಈ ಪ್ರಶ್ನೆಗಳಿಗೆ ೩೩ ಮಂದಿ ಕಲಾವಿದರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರೆಂದರೆ: ೧.ಜಲ್ಲೆ ಸಿದ್ಧಮ್ಮ, ಜನಪದ ವೈದ್ಯ ೨.ಸುಕ್ರಿ ಬೊಮ್ಮಗೌಡ, 'ಜಾನಪದಶ್ರೀ' ಪುರಸ್ಕೃತ ಬುಡಕಟ್ಟು ಕಲಾವಿದೆ ೩.ಹಿರಿಯಡಕ ಗೋಪಾಲರಾವ್, 'ಜಾನಪದಶ್ರೀ' ಪುರಸ್ಕೃತ ಹಿರಿಯ ಯಕ್ಷಗಾನ ಕಲಾವಿದರು ೪.ಎಂ.ಆರ್. ಬಸಪ್ಪ, 'ಜಾನಪದಶ್ರೀ'

ಪುರಸ್ಕೃತ ವೀರಗಾಸೆ ಕಲಾವಿದರು ೫.ಮಾರೆಪ್ಪ ಮಾರೆಪ್ಪ ದಾಸರ, ತತ್ವಪದ ಕಲಾವಿದರು ೬.ನೆಲ್ಲೀಗೆರೆ ತಿಮ್ಮಪ್ಪಾಚಾರ್ಯ, ಮೂಡಲಪಾಯ ಯಕ್ಷಗಾನ ಭಾಗವತರು ಹಾಗೂ ಸೂತ್ರದ ಗೊಂಬೆಯಾಟ ಕಲಾವಿದರು ೭.ಬಂಗಾರಮ್ಮ, ತತ್ವಪದ ಹಾಡುಗಾರ್ತಿ ೮.ಬಿ.ಎಚ್.ಪುಟ್ಟಶಾಮಾಚಾರ್ಯ, 'ರಾಷ್ಟ್ರ ಪ್ರಶಸ್ತಿ', ಪುರಸ್ಕೃತ ಸೂತ್ರದ ಗೊಂಬೆ ಕಲಾವಿದರು ೯.ಪುಟ್ಟಮಲ್ಲೇಗೌಡ, 'ರಾಜ್ಯ ಪ್ರಶಸ್ತಿ' ಪುರಸ್ಕೃತ ಗೊರವರ ಕುಣಿತದ ಕಲಾವಿದರು ೧೦.ಎ.ಎನ್.ಚನ್ನಬಸವಯ್ಯ, 'ರಾಜ್ಯ ಪ್ರಶಸ್ತಿ' ಪುರಸ್ಕೃತ ಮೂಡಲಪಾಯ ಯಕ್ಷಗಾನ ಭಾಗವತರು ೧೧.ವಸಂತ ನಾರಾಯಣ ರಣ್ಣವರೆ, ಜಗ್ಗಲಿಗೆ ಕಲಾವಿದರು ೧೨.ಮುನಿ ವೆಂಕಟಪ್ಪ, ತಮಟೆ ಕಲಾವಿದರು ೧೩.ಭಾಸ್ಕರ ಕೊಗ್ಗ ಕಾಮತ್, ಯಕ್ಷಗಾನ ಸೂತ್ರದ ಗೊಂಬೆಯಾಟದ ಕಲಾವಿದರು ೧೪.ಬಸವಲಿಂಗಯ್ಯ ಹಿರೇಮಠ, ಜನಪದ ಗಾಯಕರು ೧೫.ತುಡುಮು ಮುನಿವೆಂಕಟಪ್ಪ, ತುಡುಮು ವಾದ್ಯ ಕಲಾವಿದರು ೧೬.ಎಂ.ಎಂ.ಹಾಲಯ್ಯ, ದೊಡ್ಡಾಟದ ಕಲಾವಿದರು ೧೭.ಬಸವೇಗೌಡ, ಭಾಗವಂತಿಕೆ ಕಲಾವಿದರು ೧೮.ಗೋವಿಂದಗೌಡ ೧೯.ಎಚ್.ಎನ್. ಮಾದಯ್ಯ, ಕಂಸಾಳೆ ಕಲಾವಿದರು ೨೦.ಎಸ್.ಮಹದೇವ, ಕಂಸಾಳೆ ಕಲಾವಿದರು ೨೧.ಕೆ.ಗುಡ್ಡಪ್ಪ ಜೋಗಿ, ಕಿನ್ನರಿಜೋಗಿ ಕಲಾವಿದರು ೨೨.ನಿಂಗನಗೌಡ ಮುಂಡರಗಿ, ದೊಡ್ಡಾಟ ಕಲಾವಿದರು ೨೩.ಬಿ.ಕೆ.ರಾಮಣ್ಣ, ಪಟಾಕುಣಿತದ ಕಲಾವಿದರು ೨೪.ಮಹದೇವಯ್ಯ, ನೀಲಗಾರರು ೨೫.ಕಪ್ಪಗಲ್ ಪದ್ಮಮ್ಮ, ದೊಡ್ಡಾಟದ ಹಾಡುಗಾರ್ತಿ ೨೬.ಎ.ಎಸ್.ನಂಜಪ್ಪ, ಮೂಡಲಪಾಯ ಯಕ್ಷಗಾನ ಭಾಗವತರು ೨೭.ಡಿ.ಎಸ್.ಗಂಗಾಧರಗೌಡ, ಸೋಮನ ಕುಣಿತದ ಕಲಾವಿದರು ೨೮.ಸೋಬಾನೆ ಕೃಷ್ಣೇಗೌಡ, ಸೋಬಾನೆ ಕಲಾವಿದರು ೨೯.ಕಂಸಾಳೆ ಮಹಾದೇವಯ್ಯ, ಕಂಸಾಳೆ ಕಲಾವಿದರು ೩೦.ರಾಣಿ ಮಾಚಯ್ಯ, ಉಮ್ಮತ್ತಾಟ್ ಕಲಾವಿದೆ ೩೧.ಮಲ್ಲಯ್ಯಸ್ವಾಮಿ ಅಥಣಿ, 'ರಾಜ್ಯ ಪ್ರಶಸ್ತಿ ಪುರಸ್ಕೃತ' ಶ್ರೀಕೃಷ್ಣ ಪಾರಿಜಾತದಾಟದ ಕಲಾವಿದರು ೩೨.ಯಳಸಂಗಿ ಕಲ್ಲಣ್ಣ, ನಿರ್ದೇಶಕರು, ಕರ್ನಾಟಕ ಜನಪದ ಕಲೆಗಳ ಸಂಘ ೩೩.ಕಾಳಶೆಟ್ಟಿ, ನೀಲಗಾರರು. ಹಿ.ಶಿ. ರಾಮಚಂದ್ರೇಗೌಡ ಅವರ ಪ್ರಸ್ತಾವನೆ, ಕೊನೆಯಲ್ಲಿ ಕಲಾವಿದರ ವಿಳಾಸಗಳು, ಇವೆ.

೮೬೮. ಜಾನಪದ ಗ್ರಹಿಕೆ: ಪರಿಕಲ್ಪನೆ

ಸಂ: ಹಿ.ಶಿ. ರಾಮಚಂದ್ರೇಗೌಡ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು.೨೦೦೪; ಪುಟ ೩೬+೨೮೨=೩೧೮; ಡಿಮ್ಮೈ ೧/೮

ಮೂರು ಭಾಗಗಳಲ್ಲಿರುವ ಬೇರೆ ಬೇರೆ ಲೇಖಕರು ಬರೆದಿರುವ ೭೭ ಲೇಖನಗಳ ಸಂಕಲನ: **ಪ್ರಸ್ತಾವನೆ: ಭಾಗ –ಒಂದು: ಉಳಿಕೆ: ಪಾಶ್ಚಾತ್ಯ ದೃಷ್ಟಿ: ವರ್ಗ ಸೃಷ್ಟಿ:** ೧.ಜನಪದ ೨.ಜಾನಪದ **ಭಾಗ ಎರಡು: ಜನವಾಣಿ: ಕರ್ನಾಟಕದ ದೃಷ್ಟಿ: ಗ್ರಾಮೀಣ ಸೃಷ್ಟಿ:** ೧.ಜನವಾಣಿ ಬೇರು: ಕವಿವಾಣಿ ಹೂವು/ ಬಿ.ಎಂ. ಶ್ರೀ ೨.ಜೀವನವೇ ಕಾವ್ಯ / ದ.ರಾ.ಬೇಂದ್ರೆ

೩.ಗರತಿಯ ಹಾಡು /ಸಿಂಪಿ ಲಿಂಗಣ್ಣ ೪.ಜನತೆಯ ಸಂಸ್ಕೃತಿ /ಮಾಸ್ತಿ ವೆಂಕಟೇಶ ಅಯ್ಯಂಗಾರ್ ೫.ಬೆಳೆಯು ಬೇಕಾದಷ್ಟಿದೆ /ಅರ್ಚಕ ಬಿ.ರಂಗಸ್ವಾಮಿ ೬.ಕರ್ನಾಟಕ ಸಂಸ್ಕೃತಿ/ದೇವುಡು ೭.ಅನ್ನ,ನೀರು,ಕಾವ್ಯ/ಗೊರೂರು ರಾಮಸ್ವಾಮಿ ಅಯ್ಯಂಗಾರ್ ೮.ಇವರೆಲ್ಲರೂ ಜಾನಪದರೇ!/ಬೆಟಗೇರಿ ಕೃಷ್ಣಶರ್ಮ ೯.ಇದು ಸತ್ಯ/ ಗದಗೀಮಠ ೧೦.ರಾಷ್ಟ್ರೀಯ ಸಂಸ್ಕೃತಿಯ ತಾಯಿಬೇರು/ದೇಜಗೌ ೧೧.ಪ್ರಜಾಸಾಹಿತ್ಯ/ ಆರ್.ಸಿ.ಹಿರೇಮಠ ೧೨.ಜನಪದ ಸಾಹಿತ್ಯ, ಅದರ ಸ್ವರೂಪ/ ಹಾ.ಮಾ. ನಾಯಕ ೧೩.ಶರಾವತಿ ಒಮ್ಮೆ ಬತ್ತಿದರೆ.../ ಎಚ್.ಎಲ್. ನಾಗೇಗೌಡ ೧೪.ನಮ್ಮ ಸೌಭಾಗ್ಯ/ ಮತಿಘಟ್ಟ ಕೃಷ್ಣಮೂರ್ತಿ ೧೫.ಸಾಂಪ್ರದಾಯಿಕ ಜೀವನ/ ಜೀ.ಎಸ್. ಶಿವರುದ್ರಪ್ಪ ೧೮.ಜಾನಪದ ಪಳೆಯುಳಿಕೆ ಅಲ್ಲ / ಎಸ್.ಎಂ. ವೃಷಭೇಂದ್ರಸ್ವಾಮಿ ೨೦.ಬೀಗದ ಕೈ/ ದೇವೇಂದ್ರಕುಮಾರ ಹಕಾರಿ ೨೧.ಜನಸಾಮಾನ್ಯರ ಅನುಭವಾಮೃತ/ ಎನ್.ಆರ್. ನಾಯಕ ೨೨.ಜನಪದರಿಗೆ ಸಂಬಂಧಿಸಿದ ವಿಜ್ಞಾನವೆ ಜಾನಪದ / ಹಂಪ. ನಾಗರಾಜಯ್ಯ ೨೩.ಗ್ರಾಮೀಣ ಸಮುದಾಯದ ವಿವಿಧ ಮುಖ/ ಶ್ರೀರಾಮ ಇಟ್ಟಣ್ಣವರ ೨೪.ಸಂಸ್ಕೃತಿಕ ಮರ/ ಎಂ.ಜಿ. ಬಿರಾದಾರ ೨೫.ಸಮಷ್ಟಿ ಪ್ರಜ್ಞೆಯ ಸುಂದರ ಜೀವನಾಭಿವ್ಯಕ್ತಿ/ ವಿಲ್ಯಂ ಮಾಡ್ತ ೨೬.ನನ್ನ ಅಜ್ಜಿ/ ಕಮಲಾ ಹಂಪನಾ ೨೭.ಸಂಸ್ಕೃತಿ ಸ್ವರೂಪವನ್ನು ಗ್ರಹಿಸುವ/ ಕೆ. ಮರುಳಸಿದ್ಧಪ್ಪ ೨೮.ಜನಪದ ಸಂಪತ್ತು ಭೂಮಿ ಇದ್ದ ಹಾಗೆ/ ಬಿ.ಕೆ. ಸುಮಿತ್ರ ೨೯.ವಿಶ್ವವ್ಯಾಪಿ/ ಡಿ.ಕೆ. ರಾಜೇಂದ್ರ ೩೦.ವಿರಾಟ್ ಸ್ವರೂಪಿ/ ಚೆನ್ನಣ್ಣ ವಾಲೀಕಾರ ೩೧.ಮನುಕುಲದ ಸಂಸ್ಕೃತಿ/ ಎಂ.ಎನ್.ವಾಲಿ ೩೨.ಜನತೆಯ ಸಂಸ್ಕೃತಿ / ನಿಂಗಣ್ಣ ಸಣ್ಣಕ್ಕಿ ೩೩.ಜೀವನ ನಿರ್ಮಾಣ / ಸಾ.ಶಿ. ಮರುಳಯ್ಯ ೩೪.ನಾನಾ ಬಣ್ಣಗಳ ಜನಪದ ಸಂಸ್ಕೃತಿ/ ಪಿ.ವಿ. ನಾರಾಯಣ ೩೫.ಚಲಿಸುವ ಜಂಗಮ/ ಲೀಲಾದೇವಿ ಆರ್. ಪ್ರಸಾದ್ ೩೬.ಹದವರಿತ ಬದುಕು/ ಜ.ಹೊ.ನಾರಾಯಣಸ್ವಾಮಿ ೩೭.ಸರ್‌ಡಬ್ ಮೈ/ ಸಣ್ಣರಾಮ **ಭಾಗ ಮೂರು: ತನ್ನ ತಾವು: ಜೀವನ ಸಂಸ್ಕೃತಿ: ಸಮಾನತಾ ದೃಷ್ಟಿ:** ೧.ತಾವಿನಿಂದ/ ಹಿ.ಶಿ. ರಾಮಚಂದ್ರಗೌಡ ೨.ಅದು ಶ್ರಮಿಕವರ್ಗದ ಸಂಸ್ಕೃತಿ/ ಆರ್.ವಿ. ಭಂಡಾರಿ ೩.ಮರಳಿ ತಿಪ್ಪೆಗೆ/ ಶಿವರಾಮಯ್ಯ ೪.ಜೀವ ಕೇಂದ್ರಿತ.... / ಚಕ್ಕರೆ ಶಿವಶಂಕರ್ ೫.ಬಹುತ್ವ–ಅಪಾರ–ಜೀವನಪರ/ ಎಂ. ಪ್ರಭಾಕರ ಜೋಷಿ ೬.ನಮ್ಮ ಜೀಮನದ ಸಕಲಾವಯವಗಳನ್ನು ಸಂಸ್ಪರ್ಶಿಸಿದ ಜ್ಞಾನ/ ವ್ಹಿ.ಜಿ. ಪೂಜಾರ್ ೭.ಓದಿಗಿಂತ ದೊಡ್ಡದು/ ಅಬ್ದುಲ್ ಹಮೀದ್ ೮.ಜಾನಪದ ಪರಿಕಲ್ಪನೆ ಮತ್ತು ರಾಜಕಾರಣ ೯.ವ್ಯವಸಾಯ ಜಾನಪದ ನನ್ನ ಗ್ರಹಿಕೆ/ ಎಂ.ಜಿ. ಈಶ್ವರಪ್ಪಗೌಡ ೧೧.ಚಿಕ್ಕಿ ಚೆಲ್ಲಿದ ಹಾಗೆ... / ಎಸ್.ಪಿ. ಪದ್ಮಪ್ರಸಾದ್ ೧೨.ಸಂಸ್ಕೃತಿ ಸರದಾರನೆನಿಸಿದ ಜಾನಪದ/ ಬಿ.ಎಸ್. ತಲ್ವಾಡಿ ೧೩.ಜಾನಪದ ಒಂದು ಮೆಲಕು/ ಮೀರಾಸಾಬಿಹಳ್ಳಿ ಶಿವಣ್ಣ ೧೪.ಅಜ್ಜನ ಗ್ರಹಿಕೆಯಲ್ಲ... / ರಾಜೇಗೌಡ ಹೊಸಹಳ್ಳಿ ೧೫.ಜಾನಪದರೇ ನಮ್ಮ ಸಂಸ್ಕೃತಿಯ ರಕ್ಷಕರು/ ಸಯದ್ ಜಮೀರುಲ್ಲಾ ಷರೀಫ್ ೧೬.ಬಹುಮುಖಿ/ ಬಸವರಾಜ ಸಬರದ ೧೭.ಬಹುಮುಖಿ ಸೃಜನೆಯ ಸವಾಲು/ ಎಸ್.ಎಸ್. ಹಿರೇಮಠ ೧೮.ಅನುಭವಿಸುವ ರೀತಿಯಲ್ಲಿದೆ/ ಸಿ.ಜಿ.ವೆಂಕಟಯ್ಯ ೧೯.ಸಮೂಹ ಒಳಿತಿನ/ ಶಾಲಿನಿ ರಘುನಾಥ್ ೨೦.ಸಾಂದರ್ಭಿಕ

ಮರು ಅಧ್ಯಯನ/ ಎಸ್.ವಿ.ಕೃಷ್ಣಯ್ಯ ೨೧.ನಿರಂತರ ಕುತೂಹಲಿಯಾಗಿರಬೇಕು/ ಸಿ.ಕೆ. ನಾವಲಗಿ ೨೨.ನಮ್ಮ ಜೀಮನ ವಿಧಾನವೇ ಜಾನಪದ / ಜಿ.ಆರ್. ತಿಪ್ಪೇಸ್ವಾಮಿ ೨೩.ನಿರಂತರ ಹರಿಯುವ ನದಿ/ ಜಿ.ಪಿ. ಬಸವರಾಜ ೨೪.ಜಾನಪದ ನಿತ್ಯ ನೂತನ/ ಬಿ.ಎಲ್. ಶಂಕರ್ ೨೫.ಇವೊತ್ತಿನ ಸಂದರ್ಭಕ್ಕೆ / ರಾಮಚಂದ್ರಶರ್ಮ ೨೬.ದೇಸೀ ಸಂಸ್ಕೃತಿಯನ್ನು ಗಾಢಗೊಳಿಸುವ/ ಚಿಕ್ಕಣ್ಣ ಯಣ್ಣೆಕಟ್ಟೆ ೨೭.ಖಿಲಿವಾಗದು/ ಡಾ॥ ಕಮಲಾ ಹೆಮ್ಮಿಗೆ ೨೮.ಕ್ಷೇತ್ರ ಕಾರ್ಯಕರ್ತನಾಗಿ ಬಸವರಾಜ ನಲ್ಲಿಸರ ೨೯.ಜಾನಪದ ಸೃಷ್ಟಿ ಕಾರ್ಯದಲ್ಲಿ ಮಹಿಳೆ/ ಸುಶೀಲಾ ನೆಲ್ಲಿಸರ ೩೦.ನನ್ನ ಜಾನಪದ ಗ್ರಹಿಕೆ/ ಜಿ.ಎಸ. ಮೋಹನ್ ೩೧.ನಿರಾಳವಾದ ಬದುಕು/ ಜಯಲಕ್ಷ್ಮಿ ಸೀತಾಪುರ ೩೨.ಓದು ವಕ್ಕಾಲು; ಬುದ್ಧಿ ಮುಕ್ಕಾಲು/ ರಾಜಪ್ಪ ದಳವಾಯಿ ೩೩.ಜಾಗತೀಕರಣ ಮತ್ತು ಜಾನಪದಗಳು ಬಹುಮುಖಿ ಸಂಬಂಧಗಳು/ ಚಂದ್ರಶೇಖರ ನಂಗಲಿ ೩೪.'ಓಹನ' 'ಅಲೋಹ' 'ಅಲೋಹ ಐನಾ'/ ಬಂಜಗೆರೆ ಜಯಪ್ರಕಾಶ್ ೩೫.ಆಧುನಿಕ ಸಂದರ್ಭದಲ್ಲಿ ಜಾನಪದ / ಬರಗೂರು ರಾಮಚಂದ್ರಪ್ಪ ೩೬.ನನ್ನ 'ಜಾನಪದ ಗ್ರಹಿಕೆ'/ ಟಿ. ಗೋವಿಂದರಾಜು ೩೭.ಇಷ್ಟೆಯಪ್ಪ ನಾನು ಹೇಳುವುದು / ಮೋಟಮ್ಮ ೩೮.ಸಂಬಂಧಗಳನ್ನು ಕಟ್ಟುವ ಜ್ಞಾನಕೇಂದ್ರ / ಮೊಗಳ್ಳಿ ಗಣೇಶ್

೮೬೯. ಜಾನಪದ ಚಹರೆ

ಲೇ: ವೈ.ಸಿ. ಭಾನುಮತಿ; ಪ್ರ: ರೂಪ ಪ್ರಕಾಶನ ೨೬, ರಾಜ್‌ಕುಮಾರ್ ರಸ್ತೆ, ೧೧ನೆಯ ಬ್ಲಾಕ್, ಜೆ.ಎಸ್.ಎನ್. ಬಡಾವಣೆ ನಜರ್‌ಬಾದ್ ಮೊಹಲ್ಲಾ, ಮೈಸೂರು-೫೭೦ ೦೧೧; ಮೊ.ಮು: ೨೦೦೮; ಪು: ೮+೧೬೪=೧೭೨; ಡಿಮ್ಮೈ ೧/೮

೧೯ ಲೇಖನಗಳ ಸಂಕಲನ: ೧.ಜಗತ್ತಿನ ಜಾನಪದ ಸಂಗ್ರಹಾಲಯಗಳು ೨.ಯಾರ್ಕ್‌ಷೈರ್ ಸಂಗ್ರಹಾಲಯಗಳ ಸಂಕಥನ ೩.ಆಸ್ಟ್ರೇಲಿಯಾದ ಬುಡಕಟ್ಟುಗಳು ೪.ಪಾಲಿನೇಷ್ಯ ಮತ್ತು ಜಾನಪದ ೫.ಆಸ್ಟ್ರಿಯಾದ ಜಾನಪದ ಅಂಶಗಳು ೬.ಮೈಯನ್ಮಾರ್ ಜಾನಪದ ನೆಲೆಗಳು ೭.ಪಂಜಾಬಿನ ಜಾನಪದ ವೈಶಿಷ್ಟ್ಯಗಳು ೮.ಅರುಣಾಚಲ ಪ್ರದೇಶ ಮತ್ತು ಜಾನಪದ ೯.ನಾಗಾಲ್ಯಾಂಡಿನ ಕೊನ್ಯಾಕ್ ಬುಡಕಟ್ಟು ೧೦.ಮಲೆನಾಡಿನ ಗೌಡ ಲಿಂಗಾಯತರು ೧೧.ಲಿಂಗಾಯತರ ದೇವರುಗಳು ಮತ್ತು ಪೂಜಾಚರಣೆಗಳು ೧೨.ಕೃಷಿ ಬಿತ್ತನೆ ಪಾರಂಪರಿಕತೆ ೧೩.ಸ್ಥಿತ್ಯಂತರದಲ್ಲಿ ದೊಂಬಿದಾಸರು ೧೪.ಹಾಸನ ನಗರ ಸ್ಥಳನಾಮ ಸಾಂಸ್ಕೃತಿಕ ಹಿನ್ನೆಲೆ ೧೫.ಮನೆಬಳಕೆ ವಸ್ತುಗಳು ೧೬.ಹರ್ಮನ್ ಮೊಗ್ಲಿಂಗ್ ೧೭.ಕರುಗಲ್ಲು ೧೮.ಜಕ್ಕಣಿ ೧೯.ಗಾದೆ ಮತ್ತು ಒಗಟುಗಳಲ್ಲಿ ಸ್ತ್ರೀ ಸಂವೇದನೆ.

೮೭೦. ಜಾನಪದ ಚಾವಡಿ

ಲೇ: ಮೈಲಹಳ್ಳಿ ರೇವಣ್ಣ; ಪ್ರ: ತಳಗವಾದಿ ಪ್ರಕಾಶನ, ೨೨, ವಿಜಯಶ್ರೀ, ಕಾಮಾಕ್ಷಿ ಆಸ್ಪತ್ರೆ ಹಿಂಭಾಗ, ಕುವೆಂಪುನಗರ, ಮೈಸೂರು-೫೭೦೦೦೯; ಮೊ.ಮು: ೨೦೦೯; ಪು: ೮+೨೦೨=೨೧೦; ಡಿಮ್ಮೈ ೧/೮

ಇಪ್ಪತ್ತು ಲೇಖನಗಳ ಸಂಕಲನ: ೧.ಒಡಪುಗಳು ೨.ಒಗಟುಗಳು ೩.ಗಾದೆಗಳು ೪.ಕಥೆಗಳು ೫.ಮೂರು ಕಾವ್ಯಗಳು (ಕಾಳಿಂಗರಾಯ, ಗುಣಸಾಗ್ರ, ಶಾನಯ್ಯ) ೬.ಜನಪದ ಕಾವ್ಯಗಳಲ್ಲಿ ಪ್ರತಿಮೆಗಳು ೭.ಜನಪದ ಪುರಾಣ ಕಾವ್ಯಗಳು ೮.ಲಾವಣಿಗಳಲ್ಲಿ ಜನಪದ ಸಂಸ್ಕೃತಿ ೯.ಮಸಿಯೂಟ: ಒಂದು ಆಚರಣೆ ೧೦.ಜನಪದ ಸಾಹಿತ್ಯದಲ್ಲಿ ಶಿವ ೧೧.ಜನಪದರು ಕಂಡ ಹನುಮ ೧೨.ಹಕ್ಕಿಪಿಕ್ಕಿಯರ ಸಂಸ್ಕೃತಿ ೧೩.ಆಸಾದಿ ೧೪.ಚಿತ್ರದುರ್ಗ ಜಿಲ್ಲೆಯ ದಲಿತ ಪುರಾಣ; ಐತಿಹ್ಯಗಳು ೧೫.ಚಿತ್ರದುರ್ಗ ಜಿಲ್ಲೆಯ ಜಾನಪದ ಸಾಹಿತ್ಯ ೧೬.ಚಿತ್ರದುರ್ಗ ಜಿಲ್ಲೆಯ ದೊಂಬಿದಾಸರು ೧೭.ಚಿತ್ರದುರ್ಗ ಜಿಲ್ಲೆಯ ದಲಿತ ಕಲಾವಿದರು ೧೮.ಚಾಮರಾಜನಗರ ತಾಲ್ಲೂಕಿನ ಜಾನಪದ ಕಲೆಗಳು ೧೯.ಮಂಡ್ಯ ಜಿಲ್ಲೆಯ ಜಾನಪದ ವಿದ್ವಾಂಸರು ೨೦.ಪಡುವಲಪಾಯ ಯಕ್ಷಗಾನ.

೮೭೧. ಜಾನಪದ ಚಿಂತನ

ಲೇ.ಜಿ.ವಿ.ಡಿ.; ಪ್ರ: ತೇಜಸ್ವಿನಿ ಪ್ರಕಾಶನ, ಜಾಯ್‌ಫುಲ್ ಹೋಮ್ ಸಿದ್ಧಗಂಗಾ ಬಡಾವಣೆ, ತುಮಕೂರು-೨; ಮೊ.ಮು: ೧೯೮೪; ಪು: ೪ +೧೬೯ = ೧೭೩ ; ಕ್ರೌನ್ ೧/೮

ಎಂಟು ಲೇಖನಗಳ ಸಂಕಲನ: ೧.ಕೆಲವು ಜನಪದ ಪ್ರಣಯ ಗೀತೆಗಳ ವಿಶ್ಲೇಷಣೆ ೨.ಕನ್ನಡದಲ್ಲಿ ಜಾನಪದ ಕಲ್ಪನೆ ೩.ಕೆಲವು ಜನಪದ ನಂಬಿಕೆಗಳು ೪.ಜನಪದ ಕವಿಗಳು ಕಂಡ ದೇವರು ೫.ಮಂಡ್ಯ ಜಿಲ್ಲೆಯ ಜಾನಪದ ಸಂಗ್ರಹಕಾರರು ೬.ಮಂಡ್ಯ ಜಿಲ್ಲೆಯ ಕುರುಬರ ವಿವಾಹ ಪದ್ಧತಿ ೭.ಮಳವಳ್ಳಿ ತಾಲ್ಲೂಕಿನ ಐತಿಹಾಸಿಕ ಹಿನ್ನೆಲೆ ೮.ಈಡಿಗರ ವಿವಾಹ ಪದ್ಧತಿ

೮೭೨. ಜಾನಪದ ಚಿಂತನ

ಲೇ: ಬಸವರಾಜ ಪೋಲೀಸ ಪಾಟೀಲ; ಪ್ರ: ಅಮರ ಪ್ರಕಾಶನ, ೩ನೇ ಹಂತ, ಎಲ್.ಐ.ಜಿ., ೧೭೫, ಬಡೇಪುರ ಕಾಲೋನಿ, ಯೂನಿವರ್ಸಿಟಿ ರಸ್ತೆ, ಕಲಬುರ್ಗಿ-೫೮೫ ೧೦೫; ಮೊ.ಮು.೨೦೦೧; ಪುಟ ೬+೧೫೨; ಡಿಮ್ಮೈ ೧/೮

ಹನ್ನೆರಡು ಲೇಖನಗಳ ಸಂಕಲನ: ೧.ಸಂಸ್ಕೃತಿ-ಒಂದು ವಿವೇಚನೆ ೨.ಜನಪದ ಸಾಹಿತ್ಯ: ಹೈದ್ರಾಬಾದ ಕರ್ನಾಟಕದ ಕೊಡುಗೆ ೩.ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ-ಒಂದು ಸಮೀಕ್ಷೆ ೪.ಜನಪದ ಸಾಹಿತ್ಯ ಮತ್ತು ಧರ್ಮಶ್ರದ್ಧೆ ೫.ಜನಪದ ಸಾಹಿತ್ಯ: ಕೋಮು ಸೌಹರ್ದತೆ ೬.ಜನಪದ ಸಾಹಿತ್ಯ ಮತ್ತು ದರಗಾಗಳು ೭.ಜನಪದ ಸಾಹಿತ್ಯ ಮತ್ತು ಮಹಿಳೆ ೮.ಅಪ್ರಕಟಿತ ಸಣ್ಣಾಟಗಳು -ಒಂದು ಸಂಶೋಧನೆ ೯.ಜನಪದ ರಂಗಮಂಟಪ ಮತ್ತು ವೇಷಗಳ ರಚನೆ ೧೦.ಜನಪದ: ಕೆಲ ಟಿಪ್ಪಣಿಗಳು ೧೧.ಹೈದ್ರಾಬಾದ ಕರ್ನಾಟಕ ಲಾವಣಿ ಸಾಹಿತ್ಯ ೧೨.ಸ್ಥಳೀಯ ಐತಿಹ್ಯಗಳು: ಕೆಲ ವಿಚಾರ.

೮೭೩. ಜಾನಪದ ಚಿಂತನ

ಲೇ: ಚಕ್ಕೆರೆ ಶಿವಶಂಕರ್; ಪ್ರ: ಕಲ್ಯಾಣಿ ಪ್ರಕಾಶನ, ಬೆಂಗಳೂರು; ಮೊ.ಮು.೧೯೮೦; ಪುಟ ೧೨+೭೨ =೮೪; ಡಿಮೈ ೧/೧೨

ಇದು ಏಳು ಸಂಶೋಧನ ಲೇಖನಗಳ ಸಂಕಲನ: ೧.ಉತ್ತರ ಕರ್ನಾಟಕ ವ್ಯವಸಾಯದಲ್ಲಿನ ಆಚರಣೆ ಮತ್ತು ನಂಬಿಕೆಗಳು ೨.ಚಿಕ್ಕೋಳು ಹಿರಿದಿಮ್ಮವ್ವ – ಪುನರ್‌ವಿಮರ್ಶೆ (ಒಂದು ಟಿಪ್ಪಣಿ) ೩.ಚಕ್ಕೆರೆ ಚೌಡಮ್ಮ ೪.ಜೀವಂತ ಚಿಲುಮೆಯ ಜನಪದ ಪಡೆನುಡಿಗಳು ೫.ಬರಗೂರ ವೀರಮ್ಮ – ದುರಂತ ಜನಪದ ಕಥನಗೀತೆ ೬.ಜನಪದ ಸಾಹಿತ್ಯ ರೂಪಗಳು –ಪುಸ್ತಕ ಪರಿಚಯ ೭.ಜಾನಪದ ಹರಿಕಾರ – ದೇಜಗೌ. ದೇಜಗೌ ಅವರ ಮುನ್ನುಡಿ ಇದೆ. ಕೃತಜ್ಞತೆಗಳು ಎಂಬ ಲೇಖಕರ ಮಾತುಗಳಿವೆ. ಒಂದು ಪುಟದ ಶಬ್ದಾರ್ಥ ಇದೆ.

೮೭೪. ಜಾನಪದ ಚಿಂತನ

ಲೇ: ಸಿ.ಕೆ.ನಾವಲಗಿ; ಪ್ರ: ಕನಕ ಸಾಹಿತ್ಯ ಪ್ರತಿಷ್ಠಾನ (ರಿ), ಬೆಂಗಳೂರು–೫೬೦ ೦೧೦; ಮೊ.ಮು. ೨೦೦೨; ಪುಟ ೧೦+೧೭೮=೧೮೮; ಡಿಮೈ ೧/೮

ಎರಡು ಭಾಗಗಳಲ್ಲಿ ೧೭ ಲೇಖನಗಳ ಸಂಕಲನ. ಭಾಗ **ಒಂದು: ಚೇತನ:** ೧.ಬೆಟಗೇರಿ ಕೃಷ್ಣಶರ್ಮರ ಜನಪದ ಸಾಹಿತ್ಯ ಸೇವೆ ೨.ಜಾನಪದ ಅಧ್ಯಯನ –ಸಂಶೋಧನೆ– ಸಂಗೋಪನ ಸೇವೆ ೩.ನಿಂಗಯ್ಯ ಸ್ವಾಮಿ ಪೂಜಾರಿ: ಜನಪದ ರಂಗಭೂಮಿಯ ಅದ್ವಿತೀಯ ಕಲಾವಿದ ೪.ಮಾರುತಿ ಮಾಸ್ತರ ತಟ್ಟೀಮನಿ: 'ಸತ್ಯವಾನ ಸಾವಿತ್ರಿ' – ಖ್ಯಾತಿಯ ಅಪೂರ್ವ ಕಲಾವಿದ ೫.ಕಂಚಿನ ಕಂಠದ ಪಾರಿಜಾತದ ಕೃಷ್ಣ ಟಕ್ಕಳಕಿ ವಿಠ್ಠಲ ೬.ಪಾರಿಜಾತದ ಕೃಷ್ಣ ಯಲ್ಲಪ್ಪ ಪೂಜೇರ ೭.ಹೊಸ ಭರವಸೆ ಮೂಡಿಸುವ ಪಾರಿಜಾತದ ಕಲಾವಿದ: ಗೋಕಾಕದ ಬೆಟಗೇರಿ ೮.ಹಾಸ್ಯವನ್ನುಕ್ಕಿಸುವ ಪಾರಿಜಾತದ ಭಾಗವತ: ಮಹದೇವ ಹತಪಾಕಿ ೯.ಬಯಲಾಟದ ಸಂಘಟನಾ ಚತುರ ಗೋಕಾಕದ ಶ್ರೀಕಾಂತ ಅಂಬಿ ೧೦.ಡಪ್ಪುವಾದಕ ಬಸರಕೋಡದ ಭೀಮಶಿ ೧೧.ದೇಸೀ ಹಾಡಿನ ಸರದಾರ ಭೀಮಶೆಪ್ಪಶಾಸ್ತ್ರಿ. **ಭಾಗ ಎರಡು: ಚಿಂತನ:** ೧೨.ಕನ್ನಡ ಶಿಷ್ಟಪದ ಸಾಹಿತ್ಯದಲ್ಲಿ ಜನಪದ ವೈದ್ಯ ೧೩.ರೋಗ ಜಾನಪದ ೧೪.ದೆವ್ವ ಜಾನಪದ ೧೫.ಗೋಕಾಕ ಗ್ರಾಮದೇವತೆ –ದ್ಯಾಮವ್ವನ ಜಾತ್ರೆ ೧೬.ದೇಶಿ ಸಂಸ್ಕೃತಿ–ಸಂಪ್ರದಾಯದ ಯುಗಾದಿ ೧೭.ಸಾಮರಸ್ಯದ ಸಂಕೇತ ನಾಡಹಬ್ಬ. ಹಿ.ಶಿ. ರಾಮಚಂದ್ರೇಗೌಡ ಅವರ ಕ್ರಿಯಾಶೀಲತೆಯ ಜೊತೆಗೆ ಎರಡು ಮಾತು ಎಂಬ ಮುನ್ನುಡಿ.

೮೭೫. ಜಾನಪದ ಜಂಗಮ ಎಸ್.ಕೆ. ಕರೀಂಖಾನ್

ಲೇ: ಪ್ರೊ. ಡಿ. ಲಿಂಗಯ್ಯ; ಪ್ರ: ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು; ಮೊ.ಮು.: ೨೦೦೮; ಪುಟ: ೩೨; ಕ್ರೌನ್ ೧/೮

ವ್ಯಕ್ತಿ ಪರಿಚಯ ಎಂಬ ಅಡಿಬರಹ ಇದ್ದರೂ ಈ ಗ್ರಂಥವು ಕರೀಂಖಾನರ ಸಮಗ್ರ ಬದುಕನ್ನು ಚಿತ್ರಿಸಿದೆ. ತಂದೆ ಆಫ್ಘನ್, ತಾಯಿ ಅರಬ್, ಹೀಗೆ ಹುಟ್ಟಿನಿಂದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಿಮ್ಯೆಯ ಅಧ್ಯಕ್ಷರಾದವರೆಗಿನ ಅವರ ಬದುಕನ್ನು ಕುರಿತ ವಿವರಗಳಿವೆ. ಗ್ರಂಥದ ಕೊನೆಯಲ್ಲಿ ಕರೀಂಖಾನರ ಪ್ರಕಟಿತ ಮತ್ತು ಅಪ್ರಕಟಿತ ಸಾಹಿತ್ಯ ಗ್ರಂಥಗಳ ಪಟ್ಟಿ ಇದೆ. ಈ ಪಟ್ಟಿಯನ್ನು ಜನಪದ ಗೀತ ಸಂಗ್ರಹಗಳು, ಕಥಾ ಸಂಗ್ರಹಗಳು, ಕಾದಂಬರಿಗಳು, ನಾಟಕಗಳು, ಕವನ–ಭಕ್ತಿಗೀತೆ–ಚಲನಚಿತ್ರ ಗೀತೆ ಎಂಬುದಾಗಿ ಐದು ಭಾಗಗಳನ್ನಾಗಿ ವಿಂಗಡಿಸಿ ಒಟ್ಟು ೪೧ ಗ್ರಂಥಗಳನ್ನು ಗುರುತಿಸಲಾಗಿದೆ. (ಇನ್ನೊಂದು ಪ್ರವೇಶವನ್ನೂ ನೋಡಬಹುದು: ಕನ್ನಡ ಸಂತ ಎಸ್.ಕೆ. ಕರೀಂಖಾನ್–ಜೀವನಚರಿತ್ರೆ –ಡಿ. ಲಿಂಗಯ್ಯ)

೮೭೬. ಜಾನಪದ ಜಗಲಿಯಲ್ಲಿ

ಲೇ: ಎನ್.ಆರ್. ನಾಯಕ; ಪ್ರ: ಜಾನಪದ ಪ್ರಕಾಶನ, ಹೊನ್ನಾವರ (ಉ.ಕ) ಮೊ.ಮು. ೨೦೦೨, ಪುಟ.: ೧೨ +೧೨೦+೮ =೧೪೦; ಡಿಮ್ಯೆ ೧/೮

ಎರಡು ಭಾಗಗಳಲ್ಲಿ ನಿರೂಪಿಸಿರುವ ಆತ್ಮಕಥನ: ೧.ಭಯ, ಬೆರಗು, ನಲಿವಿನ ರಂಗ ೨.ನೆರಳು ಬೆಳಕಿನ ಸಂಗ. ಮೊದಲನೆಯ ಭಾಗದಲ್ಲಿ ೨೪ ಅಧ್ಯಾಯಗಳೂ, ಎರಡನೆಯ ಭಾಗದಲ್ಲಿ ೬೦ ಅಧ್ಯಾಯಗಳೂ ಇವೆ. ಈ ಎರಡೂ ಭಾಗಗಳನ್ನು ಕುರಿತು ಲೇಖಕರು ಹೀಗೆ ಹೇಳಿಕೊಂಡಿದ್ದಾರೆ: "ಜಾನಪದ ಜಗಲಿಯಲ್ಲಿ ನಾನು ಬಾಲ್ಯದಿಂದ ವೃದ್ಧನಾಗುವವರೆಗೆ ಅನುಭವಿಸಿದ ಬೆರಗು, ಭಯ, ಭಕ್ತಿ, ಪ್ರೀತಿ, ವಾತ್ಸಲ್ಯ, ನೋವು, ನಲಿವು, ಸೋಲು, ಗೆಲುವು ಎಲ್ಲದರ ಚಿತ್ತಾರವನ್ನು ನೋಡಬಹುದು. ಮೊದಲನೆಯ ಭಾಗವನ್ನು ನಾನು ಜಾನಪದ ಜಗಲಿಯಲ್ಲಿ ಕಂಡ ಭಯ, ಬೆರಗು ನಲ್ಮೆಯ ಆಟಪಾಠಗಳ ಚಿತ್ರಗಳೇ ಹೆಚ್ಚಾಗಿ ಆವರಿಸಿದರೆ, ಎರಡನೆಯ ಭಾಗವನ್ನು ನಾನು ಪ್ರಬುದ್ಧನಾದ ಮೇಲೆ ನನ್ನನ್ನು ಇಡಿಯಾಗಿ ಜಾನಪದದಲ್ಲಿ ತೊಡಗಿಸಿಕೊಂಡ ಬದುಕಿನ ಬೆಳಕು ಕತ್ತಲೆಯ ಕಣ್ಣುಮುಚ್ಚಾಲೆ ಆವರಿಸಿಕೊಂಡಿದೆ.

೮೭೭. ಜಾನಪದ ಜಯಂತಿ

ಲೇ: ನಿಂಗಣ್ಣ ಸಣ್ಣಕ್ಕಿ; ಜಾನಪದ ಮಂಟಪ, ರಾಯಭಾಗ, ಬೆಳಗಾವಿ ಜಿಲ್ಲೆ; ಮೊ.ಮು.೧೯೮೨; ಪುಟ ೧೦+೧೬೨=೧೭೨; ಡಿಮ್ಯೆ ೧/೮

ಹತ್ತು ಲೇಖನಗಳ ಸಂಕಲನ: ೧.ಗೊಂದಲಿಗರು ೨.ಬುಡುಬುಡಕಿ ಸಾಹಿತ್ಯ ೩.ವೇಷಗಾರರು ೪.ಜನಪದ ಕಥೆಗಳಲ್ಲಿ ಮೈತ್ರಿ ಮತ್ತು ದ್ರೋಹ ೫.ಕನ್ನಡ ರಂಗಭೂಮಿಗೆ ಜಾನಪದ ನಾಟಕಗಳ ಕೊಡುಗೆ ೬.ಕನ್ನಡದ ದೊಡ್ಡಾಟ ೭.ಬೆಳಗಾಂವ ಜಿಲ್ಲೆಯ ಜನಪದ ಹಾಡುಗಳು ೮.ಜಾನಪದ ಜಗಲಿ ೯.ಬೆಟಗೇರಿ ಕೃಷ್ಣಶರ್ಮರ ಜಾನಪದ ಕಾರ್ಯ ೧೦.ಜಾನಪದ ಸಾಹಿತ್ಯದ ಸಾರ್ವಕಾಲಿಕ ಮೌಲ್ಯಗಳು.

೮೭೮. ಜಾನಪದ ಜಾಗರ

ಲೇ: ಸಿ.ಪಿ.ಕೆ; ಪ್ರ: ಚಿತ್ರಭಾನು ಪ್ರಕಾಶನ, ೨೨೬೫/೧೯, ಭಾರತಿ, ೬ನೇಯ ಕ್ರಾಸ್, ೨ನೆಯ ಮುಖ್ಯ ರಸ್ತೆ, ವಿನಾಯಕ ನಗರ, ಮೈಸೂರು-೫೭೦೦೧೨; ಮೊ.ಮು. ೧೯೮೭; ಪುಟ ೪+೧೧೨=೧೧೬; ಕ್ರೌನ್೧/೮

೧೫ ಲೇಖನಗಳ ಸಂಕಲನ: ೧ ಗಾದೆ, ಒಗಟು ಮತ್ತು ಒಡಪು ೨.ವೃತ್ತಿ ಜಾನಪದ ೩.ಜನಪದ ಗೀತೆಗಳಲ್ಲಿ ಶಿವ ೪.ಜನಪದ ಶೃಂಗಾರ ೫.ಜನಪದ ಹಾಸ್ಯ ೬.ಜನಪದ ಗೀತೆಗಳಲ್ಲಿ ಸಂಸ್ಕೃತಿ ೭.ಜನಪದ ಗೀತೆಗಳಲ್ಲಿ ಮಕ್ಕಳ ಚಿತ್ರಗಳು ೮.'ಕಂದನ ಕೊಡು ಶಿವನೆ, ಬಂಧನ ಪಡಲಾರೆ' ೯.ಹೆಣ್ಣು ಸಾಕೆಂದ ಜನುಮಕೆ ೧೦.ಒಂದು ಜನಪದ ಕಥನಗೀತೆ ೧೧.ಒಂದು ಜಾನಪದ ಪಳೆಯುಳಿಕೆ ೧೨.'ಉತ್ತರದೇವಿಯ ಹಾಡು': ಒಂದು ಟಿಪ್ಪಣಿ ೧೩.ಚೆಲುವಯ್ಯ-ವರನಂದಿ ೧೪.ಮೂರು ಮುನ್ನುಡಿಗಳು: ಕ್ರೈಸ್ತ ಜನಪದ ಗೀತೆಗಳು, ಜನಪದ ಮಕ್ಕಳ ಹಾಡುಗಳು, ಗ್ರಾಮಾಂತರ ಶಿಶುಪ್ರಾಸಗಳು ೧೫.ಗೊಂಡ ಪ್ರೇಮಗೀತೆಗಳನ್ನು ಕುರಿತು.

೮೭೯. ಜಾನಪದ ಜಾಣ್ಮೆ

ಸಂ: ವೀರಣ್ಣ ರಾಜೂರ, ಬಿ.ಬಿ. ಬಿರಾದಾರ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮; ಮೊ.ಮು.೧೯೮೧; ಪುಟ ೪+೧೮೨; ಡಿಮೈ ೧/೮

ಜನಪದ ಗಣಿತವನ್ನು ಒಳಗೊಂಡ ಗ್ರಂಥವಿದು. ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಕಥಾರೂಪದ ೩೩ ಲೆಕ್ಕಗಳಿವೆ. ಎರಡನೆಯ ಭಾಗದಲ್ಲಿ ತ್ರಿಪದಿ ಚೌಪದಿ ಶ್ಲೋಕ ಇತ್ಯಾದಿ ಪದ್ಯ ರೂಪದ ೨೩ ಲೆಕ್ಕಗಳಿವೆ. ನೀವೇ ಪ್ರಯತ್ನಿಸಿರಿ ಎಂಬ ಮೂರನೇ ಭಾಗದಲ್ಲಿ ಚೌಪದಿ ರೂಪದ ೨೫ ಲೆಕ್ಕಗಳಿವೆ. ಹೀಗೆ ಒಟ್ಟು ೮೧ ಲೆಕ್ಕಗಳಿವೆ. ಗ್ರಂಥದ ಅರ್ಧಕ್ಕಿಂತ ಹೆಚ್ಚು ಪುಟಗಳನ್ನು ಉತ್ತರಗಳೇ ಆಕ್ರಮಿಸಿಕೊಂಡಿವೆ. ಕಡಿಮೆ ಮಾಡುವ ಕೀಲು, ವಿವರಣೆ, ವಿ.ಸೂ., ಸೂತ್ರ, ೧ನೇ ರೀತಿ, ೨ನೇ ರೀತಿ, ಆಧುನಿಕ ರೀತಿ, ಒಂದನೇ ಪ್ರಕಾರ, ಎರಡನೇ ಪ್ರಕಾರ ಮುಂತಾದ ವಿವರಗಳನ್ನೊಂಡ ಉತ್ತರಗಳೂ, ಲೆಕ್ಕಕ್ಕೊಂದು ಕಥೆ ಇರುವಂತೆ ಅನೇಕ ಕಡೆಗಳಲ್ಲಿ ಉತ್ತರಗಳಿಗೂ ಒಂದೊಂದು ಕಥೆ ಇವೆ.

೮೮೦. ಜಾನಪದ ಜಿಜ್ಞಾಸೆ

ಲೇ: ಬಸವರಾಜ್ ನೆಲ್ಲಿಸರ; ಪ್ರ: ಯಕ್ಷ ಪ್ರಕಾಶನ, ಸರಸ್ವತಿಪುರಂ, ಮೈಸೂರು; ಮೊ.ಮು. ೧೯೭೯; ಪುಟ ೧೨+೧೨೨=೧೩೪; ಕ್ರೌನ್ ೧/೮

ಏಳು ಸಂಶೋಧನ ಲೇಖನಗಳ ಸಂಕಲನವಿದು: ೧.ಮರಣ ಗೀತೆಗಳು ೨.ಜನಪದ ಜೀವನದಲ್ಲಿ ಸಂಕ್ರಾಂತಿ ೩.ವೀರಗಾಸೆ ಕಥಾಮೇಳ ೪.ಜಾನಪದ ವಿನೋದ ೫.ಪಂಜಿನ ಹಾಡುಗಳು ೬.ಬಯ್ಗುಳಗಳು ೭.ಜನಪದರ ಶನಿದೇವ. ಜೀ.ಶಂ. ಪರಮಶಿವಯ್ಯ ಅವರ ಹೊನ್ನುಡಿ ಇದೆ.

೮೮೧. ಜಾನಪದ ಜೀವನ

ಲೇ: ಶ್ರೀ ಕೃಷ್ಣಭಟ್ ಅರ್ತಿಕಜೆ; ಪ್ರ: ಕನ್ನಡ ಸಂಘ, ಸಂತ ಫಿಲೋಮಿನಾ ಕಾಲೇಜು, ದರ್ಬೆ–೫೭೪ ೨೦೨; ಪುತ್ತೂರು, ದಕ್ಷಿಣ ಕನ್ನಡ, ಮೊ.ಮು.: ೧೯೮೧, ಪುಟ ೧೦+೮೧+೨=೯೩, ಡಿಮ್ಮೈ ೧/೮

ಹವ್ಯಕರ ಹಾಡುಗಳ ಒಂದು ಅಧ್ಯಯನ ಎಂಬ ಅಡಿಬರಹ ಇದೆ. ಇದು ಐದು ಸಂಪ್ರಬಂಧಗಳ ಸಂಕಲನ: ೧.ದೈವಸ್ತುತಿ ೨.ಪ್ರಕೃತಿ ೩.ತಾಯಿ ೪.ಮಕ್ಕಳ ಹಾಡುಗಳು ೫.ನೀತಿ. ಜನಪದ ತ್ರಿಪದಿಗಳನ್ನು ಬಳಸಿಕೊಂಡು ರಚಿತವಾಗಿರುವ ಬರಹಗಳು. ಕೆ. ಕುಶಾಲಪ್ಪಗೌಡ ಅವರ ಮುನ್ನುಡಿ ಇದೆ. ಕೊನೆಯಲ್ಲಿ ಕೆಲವು ಶಬ್ದಗಳು ಅರ್ಥ, ಸಹಾಯಕ ಗ್ರಂಥಗಳ ಪಟ್ಟಿ ಇವೆ.

೮೮೨. ಜಾನಪದ ಜೀವಾಳ

ಲೇ: ಎಂ.ಜಿ.ಬಿರಾದಾರ; ಪ್ರ: ಪುಸ್ತಕ ಅಕಾಡೆಮಿ, ಕಲಬುರಗಿ; ಮೊ.ಮು. ೧೯೮೭; ಪುಟ ೮+೧೩೮=೧೪೬; ಡಿಮ್ಮೈ ೧/೮

ಹತ್ತು ಸಂಶೋಧನ ಲೇಖನಗಳ ಸಂಕಲನ: ೧.ಜನಪದ ಮುಯ್ ಮತ್ತು ಕಡ ೨.ಜಾನಪದ ತೂಕ ಮತ್ತು ಅಳತೆಯ ವಿಧಾನ. ೩.ಜನಪದ ಬದುಕಿನಲ್ಲಿ ಸಂಕೇತಗಳು ೪.ಸುಳಿ ಒಂದು ಜನಪದ ಅಧ್ಯಯನ ೫.ಜನಪದ ಮದುವೆ ಮೋಜು, ಜೂಜು ೬.ಗ್ರಹ–ನಕ್ಷತ್ರ ೭.ಸ್ವಾತಂತ್ರ್ಯ ಸಮರದ ಜನಪದ ಸಾಹಿತ್ಯ ೮.ಸಸ್ಯ ಜಾನಪದ ೯.ಪಕ್ಷಿಗಳು ಮತ್ತು ಜನಪದ ಮೂಢನಂಬಿಕೆಗಳು ೧೦.ಜನಪದ ಪೀಡೆಯ ಹಾಡುಗಳು. ನಾಲ್ಕನೆಯ ಲೇಖನ ಸುಳಿಯಲ್ಲಿ ರೇಖಾಚಿತ್ರದಲ್ಲಿ ಸುಳಿಗಳ ಸ್ಥಾನಗಳನ್ನು ಗುರುತಿಸಲಾಗಿದೆ.

೮೮೩. ಜಾನಪದ ಜೀವಾಳ

ಲೇ: ಎಂ.ಎನ್.ವಾಲಿ; ಪ್ರ: ಭುವನೇಶ್ವರಿ ಪ್ರಕಾಶನ, ವಿಜಾಪುರ–೫೮೬ ೧೦೩; ಮೊ.ಮು: ೧೯೯೩; ಪು: ೧೨೪; ಕ್ರೌನ್ ೧/೮

ಹನ್ನೊಂದು ಲೇಖನಗಳ ಸಂಕಲನ: ೧.ಜನಪದ ಕರಕುಶಲ ಕಲೆಗಳು ೨.ನಮ್ಮ ಜನಪದರ ಆಭರಣಗಳು ೩.ತಂತಿವಾದ್ಯಗಳು ೪.ಜನಪದ ತ್ರಿಪದಿಗಳಲ್ಲಿ ಕಾಣುವ ಜೀವನ ಮೌಲ್ಯಗಳು ೫.ಜಾನಪದ ಸಾಹಿತ್ಯಕ್ಕೆ ವಿಜಾಪುರ ಜಿಲ್ಲೆಯ ಕೊಡುಗೆ ೬.ಗುಳ್ಳವ್ವ ಒಂದು ಸಾಂಪ್ರದಾಯಿಕ ಆಚರಣೆ ೭.ಜನಪದ ಗಾದೆಗಳು ೮.ದನಗಳ ಸುಳಿ ಹಾಗೂ

ಶುಭಾಶುಭ ಲಕ್ಷಣಗಳು ೯.ದನಗಳ ರೋಗಗಳು ಹಾಗೂ ಚಿಕಿತ್ಸೆ ೧೦.ಶಿವಶರಣರು ಮತ್ತು ಜಾನಪದ ಮೌಲ್ಯಗಳು ೧೧.ಜಾನಪದ ಗಾನಗಂಧರ್ವ–ದಿ.ಬಾಳಪ್ಪ ಹುಕ್ಕೇರಿ. ಮಲ್ಲಿಕಾರ್ಜುನ ಶಿ.ಲಠ್ಠೆ ಅವರ ಮುನ್ನುಡಿ ಇದೆ.

೮೮೪. ಜಾನಪದ ಜೇನು

ಸಂ: ಎ.ಜಿ. ನೀಲಗಾರ; ಪ್ರ: ಜಾಗೃತ ಭಾರತ, ಧಾರವಾಡ; ಮೊ.ಮು: ೧೯೭೯; ಪು: ೪+೨೬೦=೨೬೪; ಕ್ರೌನ್ ೧/೮

ಸಂ: ಸೋಮಶೇಖರ ಇಮ್ರಾಪುರ; ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ; ಮೊ.ಮು. ೧೯೯೪; ಪುಟ ೧೬+೧೩೪=೧೫೦; ಡೆಮ್ಮಿ ೧/೮

ಹೊನ್ನಾವರದಲ್ಲಿ ನಡೆದ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಸ್ಮರಣ ಸಂಪುಟವು ಪುರಾಣ ಐತಿಹ್ಯ ಪವಾಡ ದಂತಕಥೆ ಎಂಬ ವಿಷಯಗಳನ್ನು ಒಳಗೊಂಡಿದ್ದು ಮೂರು ಗೋಷ್ಠಿಗಳಿಂದ ಎಂಟು ಲೇಖನಗಳಿವೆ: **ಗೋಷ್ಠಿ ಒಂದು:** ೧.ಪುರಾಣ– ಐತಿಹ್ಯ–ದಂತಕಥೆ–ಸಾಹಿತ್ಯ– ಬಿ.ಎ. ವಿವೇಕ ರೈ ೨.ವದಂತಿ–ಪವಾಡ– ದಂತ ಕಥೆ–ವೀರಣ್ಣ. **ಗೋಷ್ಠಿ ಎರಡು:** ೩.ಐತಿಹ್ಯ: ಸ್ವರೂಪ–ಲಕ್ಷಣ–ಪ್ರಕಾರಗಳು–ಪುರುಷೋತ್ತಮ ಬಿಳಿಮಲೆ ೪.ಪುರಾನ: ಸ್ವರೂಪ–ಲಕ್ಷಣ–ಪ್ರಕಾರಗಳು–ಹಿ.ಶಿ. ರಾಮಚಂದ್ರೇಗೌಡ. **ಗೋಷ್ಠಿ ಮೂರು:** ೫.ಹಿಂದೂ ಧಾರ್ಮಿಕ ಪುರಾಣಗಳು– ನಂ. ತಪಸ್ವಿಕುಮಾರ ೬.ಪುರಾಣ ಮತ್ತು

ಕ್ರೈಸ್ತ ಧರ್ಮ– ವಿಲ್ಯಂ ಮಾಡ್ತ ೭.ಪುರಾಣಗಳೂ– ಇಸ್ಲಾಂ ಧರ್ಮ– ಸೈಯದ್ ಜಮೀರುಲ್ಲಾ ಷರೀಫ್ ೮.ಪುರಾನ–ಜೈನ ಧರ್ಮ– ಎಸ್.ಪಿ. ಪಾಟೀಲ

೧೦೧೩. ಜಾನಪದ ಸಾಹಿತ್ಯ ದರ್ಶನ ಭಾಗ ೧೬: ತೊಗಲುಗೊಂಬೆಯಾಟ

ಸಂ: ಎಸ್.ಜಿ. ಇಮ್ರಾಪುರ; ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು.೧೯೯೪; ಪುಟ ೨೨+೮೫=೧೦೭; ಡಿಮ್ಮೈ ೧/೮

ಧಾರವಾಡ: ಅಖಿಲ ಕರ್ನಾಟಕ ೧೬ನೆಯ ಜಾನಪದ ಸಮ್ಮೇಳನ ಸ್ಮರಣೆ ಎಂಬ ಅಡಿಬರಹ ಇದೆ. ಮೂರು ಗೋಷ್ಠಿಗಳಿವೆ. **ಗೋಷ್ಠಿ ಒಂದು:** ೧.ತೊಗಲುಗೊಂಬೆಯಾಟದ ಪ್ರಾಚೀನತೆ ಮತ್ತು ಪರಂಪರೆ –ಬಿ.ವಿ.ಮಲ್ಲಾಪುರ ೨.ದಕ್ಷಿಣ ಭಾರತದ ತೊಗಲುಗೊಂಬೆಯಾಟಗಳು –ಹ.ಕ.ರಾಜೇಗೌಡ ೩.ಕರ್ನಾಟಕದ ತೊಗಲುಗೊಂಬೆಯಾಟದ ಪರಂಪರೆ ವೈಶಿಷ್ಟ್ಯ –ಶ್ರೀಕಂಠ ಕೂಡಿಗೆ. **ಗೋಷ್ಠಿ ಎರಡು:** ೪.ಹೈದ್ರಾಬಾದ್ ಕರ್ನಾಟಕದ ತೊಗಲುಗೊಂಬೆಯಾಟ – ಎಂ.ಎಸ್.ಲಠ್ಠೆ ೫.ಇತರ ಜನಪದ ಪ್ರದರ್ಶನ ಕಲೆಗಳು ಮತ್ತು ತೊಗಲುಗೊಂಬೆಯಾಟ – ಎಚ್.ಎಂ. ಮಹೇಶ್ವರಯ್ಯ. **ಗೋಷ್ಠಿ ಮೂರು:** ೬.ತೊಗಲುಗೊಂಬೆಯಾಟದ ಕಥಾವಸ್ತು ಸಾಹಿತ್ಯ ಸಂಭಾಷಣೆ –ಶ್ರೀರಾಮ ಇಟ್ಟಣ್ಣವರ ೭.ತೊಗಲುಗೊಂಬೆಯಾಟದ ಸಂಗೀತ –ಬಸವರಾಜ ಮಲಶೆಟ್ಟಿ ೮.ತೊಗಲುಗೊಂಬೆಯಾಟದ ರಂಗಸಜ್ಜಿಕೆ, ಗೊಂಬೆಗಳ ತಯಾರಿಕೆ, ಬಣ್ಣಗಾರಿಕೆ, ಪ್ರದರ್ಶನ ತಂತ್ರ – ಡಿ.ಕೆ. ರಾಜೇಂದ್ರ ೯.ತೊಗಲುಗೊಂಬೆಯಾಟದ ಮೇಲೆ ಆಧುನಿಕತೆಯ ಪ್ರಭಾವ –ಹಿ.ಚಿ. ಬೋರಲಿಂಗಯ್ಯ.

೧೦೧೪. ಜಾನಪದ ಸಾಹಿತ್ಯದರ್ಶನ ಭಾಗ–೧೮: ಸಸ್ಯ ಪ್ರಾಣಿ ಖನಿಜ

ಸಂ: ಎಸ್.ಜಿ. ಇಮ್ರಾಪುರ; ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು. ೧೯೯೩; ಪುಟ ೨೮+೨೨೮=೨೫೬; ಡಿಮ್ಮೈ ೧/೮

೧೮ನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ಆದಿಚುಂಚನಗಿರಿ ಎಂಬ ಅಡಿಬರಹ ಇದೆ. ಸಸ್ಯ–ಪ್ರಾಣಿ–ಖನಿಜ ಜಾನಪದವನ್ನು ಕುರಿತ ಮೂರು ಗೋಷ್ಠಿಗಳಲ್ಲಿ ಮಂಡಿತವಾದ ೧೨ ಲೇಖನಗಳಿವೆ: **ಗೋಷ್ಠಿ ಒಂದು: ಸಸ್ಯ ಜಾನಪದ:** ೧.ಸಸ್ಯ–ಪೌರಾಣಿಕ ಪರಿಕಲ್ಪನೆ –ಸಿ.ಎಸ್.ಶಿವಕುಮಾರಸ್ವಾಮಿ ೨.ಸಸ್ಯ–ಜನಪದ ಧರ್ಮ–ಕೆ.ಚಿನ್ನಪ್ಪಗೌಡ ೩.ಸಸ್ಯ ಆಹಾರ –ಬಿ.ವಿ. ಯಕ್ಕುಂಡಿಮಠ ೪.ಸಸ್ಯ–ಜನಪದ ವೈದ್ಯ –ಎ.ಸಿ. ಲಲಿತಾ. **ಗೋಷ್ಠಿ ಎರಡು: ಪ್ರಾಣಿ ಜಾನಪದ:** ೫.ಪ್ರಾಣಿ –ಪೌರಾಣಿಕ ಪರಿಕಲ್ಪನೆ –ಪದ್ಮಾಶೇಖರ ೬.ಪ್ರಾಣಿ–ಜನಪದ ಧರ್ಮ–ಅರವಿಂದ ಮಾಲಗತ್ತಿ ೭.ಪ್ರಾಣಿ–ಆಹಾರ – ಕೆ.ಆರ್. ದುರ್ಗಾದಾಸ ೮.ಪ್ರಾಣಿ–ಜನಪದ ವೈದ್ಯ – ಅಂಬಳಿಕೆ ಹಿರಿಯಣ್ಣ. **ಗೋಷ್ಠಿ ಮೂರು: ಖನಿಜ ಜಾನಪದ:** ೯.ಮಾನವ ಮತ್ತು ಕಬ್ಬಿಣ –ಎಂ. ಜಿ. ಈಶ್ವರಪ್ಪ ೧೦.ಮಾನವ ಮತ್ತು ಚಿನ್ನಬೆಳ್ಳಿ–ಜಯಲಕ್ಷ್ಮಿ ಸೀತಾಪುರ ೧೧.ಮಾನವ ಮತ್ತು ತಾಮ್ರ ಹಿತ್ತಾಳೆ ಕಂಚು –ಪಿ.ಕೆ. ಖಂಡೋಬಾ ೧೨.ಜಾನಪದದಲ್ಲಿ ನವರತ್ನಗಳು –ವಿ.ಎನ್.

ಶಿವರಾಮು. ಎಸ್.ರಾಮೇಗೌಡ ಅವರ ಉದ್ಘಾಟನಾ ಭಾಷಣ, ಕು.ಶಿ. ಹರಿದಾಸ ಭಟ್ಟ ಅವರ ಸರ್ವಾಧ್ಯಕ್ಷರ ಭಾಷಣ, ದೇ.ಜವರೇಗೌಡ ಅವರ ಅಧ್ಯಕ್ಷರ ಭಾಷಣ, ಇವೆ.

೧೦೧೫. ಜಾನಪದ ಸಾಹಿತ್ಯದರ್ಶನ

ಭಾಗ ೧೯: ವಸತಿ ಜಾನಪದ; ಸಂ: ಸೋಮಶೇಖರ ಇಮ್ರಾಪೂರ; ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು: ೧೯೯೫; ಪು: ೮+೧೯೭=೨೦೫; ಡಿಮ್ಮೈ ೧/೮

ಜಾನಪದ ಸಮ್ಮೇಳನ ಸ್ಮರಣೆ: ಹತ್ತೊಂಬತ್ತು ಎಂಬ ಅಡಿಬರಹ ಇದೆ. ನಾಲ್ಕು ಗೋಷ್ಠಿಗಳಿವೆ: **ಗೋಷ್ಠಿ ಒಂದು: ಪ್ರಾಣಿ ವಸತಿ:** ೧.ಅಧ್ಯಕ್ಷೀಯ ಭಾಷಣ –ಡಾ.ಕೆ.ಜಿ. ಗುರುಮೂರ್ತಿ ೨.ಉತ್ತರಕರ್ನಾಟಕದ ಪ್ರಾಣಿವಸತಿ –ಡಾ. ಅರವಿಂದ ಮಾಲಗಿತ್ತಿ ೩.ದಕ್ಷಿಣ ಕರ್ನಾಟಕದ ಪ್ರಾಣಿವಸತಿ –ಡಾ. ಅಂಬಳಿಕೆ ಹಿರಿಯಣ್ಣ ೪.ಕರಾವಳಿಯ ಪ್ರಾಣಿವಸತಿ –ಶ್ರೀಮತಿ ಶಾಂತಿ ನಾಯಕ. **ಗೋಷ್ಠಿ ಎರಡು: ಕೌಟುಂಬಿಕ ಮಾನವ ವಸತಿ:** ೧.ಅಧ್ಯಕ್ಷೀಯ ಭಾಷಣ –ಡಾ.ಡಿ.ಕೆ. ರಾಜೇಂದ್ರ ೨.ಉತ್ತರ ಕರ್ನಾಟಕದ ವಾಸದ ಮನೆ –ಡಾ. ಕೆ.ಆರ್. ದುರ್ಗಾದಾಸ ೩.ದಕ್ಷಿಣ ಕರ್ನಾಟಕದ ವಾಸದ ಮನೆ –ಡಾ. ಪದ್ಮಾಶೇಖರ ೪.ಕರಾವಳಿಯ ವಾಸದ ಮನೆ –ಡಾ. ವಾಮನ ನಂದಾವರ. **ಗೋಷ್ಠಿ ಮೂರು: ಸಮುದಾಯಿಕ ಮಾನವ ವಸತಿ:** ೧.ಉತ್ತರಕರ್ನಾಟಕ ಗ್ರಾಮವಿನ್ಯಾಸ –ಡಾ. ಬಸವರಾಜ ಮಲಶೆಟ್ಟಿ ೨.ದಕ್ಷಿಣ ಕರ್ನಾಟಕದ ಗ್ರಾಮವಿನ್ಯಾಲ –ಡಾ. ಟಿ. ಗೋವಿಂದರಾಜು ೩.ಕರಾವಳಿಯ ಗ್ರಾಮ ವಿನ್ಯಾಸ –ಡಾ. ಶಾಲಿನಿ ರಘುನಾಥ. **ಗೋಷ್ಠಿ ನಾಲ್ಕು: ದೈವ ವಸತಿ:** ೧.ಅಧ್ಯಕ್ಷೀಯ ಭಾಷಣ –ಡಾ. ವಿಲ್ಯಂ ಮಾಡ್ತಾ ೨.ಉತ್ತರ ಕರ್ನಾಟಕದ ದೈವ ವಸತಿ –ಡಾ. ಬಿ.ವಿ ಶಿರೂರ ೩.ದಕ್ಷಿಣ ಕರ್ನಾಟಕದ ದೈವ ವಸತಿ –ಶ್ರೀ ಬಸವರಾಜ ನೆಲ್ಲಿಸರ ೪.ಕರಾವಳಿಯ ದೈವ ವಸತಿ –ಡಾ. ಎಚ್.ಆರ್. ರಘುನಾಥ ಭಟ್. ಮಲ್ಲಿಕಾರ್ಜುನ ಲಟ್ಠೆ ಅವರ ಸರ್ವಾಧ್ಯಕ್ಷೀಯ ಭಾಷಣ ಇದೆ.

೧೦೧೬. ಜಾನಪದ ಸಾಹಿತ್ಯದರ್ಶನ

ಭಾಗ ೨೦: ಆಹಾರ ಪಾನೀಯಗಳು; ಸಂ: ಎಚ್.ಎಂ. ಮಹೇಶ್ವರಯ್ಯ; ಪ್ರ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು.೧೯೯೮; ಪುಟ ೬+೨೦೦=೨೦೬; ಡಿಮ್ಮೈ ೧/೮

ಅಖಿಲ ಕರ್ನಾಟಕ ೨೦ನೆಯ ಜಾನಪದ ಸಮ್ಮೇಳನ, ಧಾರವಾಡ ಎಂಬ ಅಡಿಬರಹ ಇದೆ. ಮೂರು ಗೋಷ್ಠಿಗಳಿವೆ: **ಗೋಷ್ಠಿ ಒಂದು: ಆಹಾರ ವೈಶಿಷ್ಟ್ಯಗಳು:** ೧.ಉತ್ತರ ಕರ್ನಾಟಕದ ಆಹಾರ ವೈಶಿಷ್ಟ್ಯಗಳು– ಬಿ.ಬಿ. ಬಿರಾದಾರ ೨.ಮಲೆನಾಡು ಕರ್ನಾಟಕದ ಆಹಾರ ವೈಶಿಷ್ಟ್ಯಗಳು– ಶ್ರೀಕಂಠ ಕೂಡಿಗೆ ೩.ಕರಾವಳಿ ಕರ್ನಾಟಕದ ಆಹಾರ ವೈಶಿಷ್ಟ್ಯಗಳು– ಸೈಯದ್ ಜಮೀರುಲ್ಲಾ ಷರೀಫ್ ೪.ದಕ್ಷಿಣ ಕರ್ನಾಟಕದ ಆಹಾರ

ವೈಶಿಷ್ಟ್ಯಗಳು– ಹಿ.ಶಿ. ರಾಮಚಂದ್ರೇಗೌಡ **ಗೋಷ್ಠಿ ಎರಡು: ಅಡುಗೆ:** ೧.ಉತ್ತರ ಕರ್ನಾಟಕದ ಅಡುಗೆ_ ಶ್ರೀಮತಿ ಎಸ್.ಎಸ್. ಸಣ್ಣೆಲ್ಲಪ್ಪನವರ ೨.ಮಲೆನಾಡು ಕರ್ನಾಟಕದ ಅಡುಗೆ– ಸಿ.ಎಸ್. ಶಿವಕುಮಾರಸ್ವಾಮಿ ೩.ಕರಾವಳಿ ಕರ್ನಾಟಕದ ಅಡುಗೆ –ತಾಳ್ತಜೆ ವಸಂತಕುಮಾರ ೪.ದಕ್ಷಿಣ ಕರ್ನಾಟಕದ ಅಡುಗೆ – ಮಳಲಿ ವಸಂತಕುಮಾರ **ಗೋಷ್ಠಿ ಮೂರು: ತಿಂಡಿ, ತಿನಿಸು, ಪಾನೀಯಗಳು:** ೧.ಉತ್ತರ ಕರ್ನಾಟಕದ ತಿಂಡಿ, ತಿನಿಸು, ಪಾನೀಯಗಳು– ಶ್ರೀಮತಿ ಮಧು ವೆಂಕಾರೆಡ್ಡಿ ೨.ಮಲೆನಾಡು ಕರ್ನಾಟಕದ ತಿಂಡಿ, ತಿನಿಸು, ಪಾನೀಯಗಳು– ಶ್ರೀಮತಿ ಎಸ್.ಬಿ. ರವಿಕಲಾ ೩.ಕರಾವಳಿ ಕರ್ನಾಟಕ ತಿಂಡಿ, ತಿನಿಸು, ಪಾನೀಯಗಳು– ಶ್ರೀಮತಿ ಗಾಯತ್ರಿ ನಾವಡ ವಿಲ್ಯಂ ಮೊಡ್ತ ಅವರ ಆಳಯಭಾಷಣ, ಬಿ.ಎ. ವಿವೇಕ ರೈ ಅವರ ಅಧ್ಯಕ್ಷ ಭಾಷಣ, ಇವೆ.

೧೦೧೭. ಜಾನಪದ ಸಾಹಿತ್ಯದರ್ಶನ

ಭಾಗ ೨೩: ಜನಪದ ನಂಬಿಕೆಗಳು; ಸಂ: ಬಿ.ಪಿ. ಪಾಟೀಲ; ಪ್ರ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು. : ೧೯೯೯; ಪು: ೧೨+೧೭೮=೧೯೦; ಡಿಮ್ಮೈ ೧/೮

ಹತ್ತು ವಿಷಯಗಳ ಬಗ್ಗೆ ಇರುವ ನಂಬಿಕೆಗಳನ್ನು ಕುರಿತ ಪ್ರತ್ಯೇಕ ಲೇಖನಗಳು ಹೀಗಿವೆ: ೧.ಭೂಮಿ–ಹರಿಲಾಲ ಸವಾರ ೨.ನೀರು–ನಾರಾಯಣಸ್ವಾಮಿ ೩.ಬೆಂಕಿ– ಮಧು ವೆಂಕಾರೆಡ್ಡಿ ೪.ಗಾಳಿ–ಸಿ.ಕೆ. ನಾವಲಗಿ ೫.ಆಕಾಶ–ಪದ್ಮಾಶೇಖರ ೬.ದೇವರು– ಎಸ್.ಎಸ್. ಹಿರೇಮಠ ೭.ದೆವ್ವ–ವೀರಣ್ಣ ದಂಡೆ ೮.ಮಾನವ–ಎಸ್.ಬಿ. ಕರಿಭರಮಗೌಡರ ೯.ಪ್ರಾಣಿ–ಶ್ರೀಕಂಠ ಕೂಡಿಗೆ ೧೦.ಸಸ್ಯ–ಬಿ.ಬಿ. ಬಿರಾದಾರ. ಎಂ.ಬಿ. ನೇಗಿನಹಾಳ ಅವರ ಪ್ರಾಸ್ತಾವಿಕ ಭಾಷಣ, ಮ.ಗು. ಬಿರಾದಾರ ಅವರ ಅಧ್ಯಕ್ಷೀಯ ಭಾಷಣ, ಹಾಗೂ ಮೂರು ಲೇಖನಗಳಿವೆ: ೧.ಜನಪದ ನಂಬಿಕೆಗಳು–ತಾತ್ವಿಕತೆ–ಎ.ವ್ಹಿ. ನಾವಡ ೨.ಜನಪದ ಸಂಪ್ರದಾಯಗಳಲ್ಲಿ 'ಪಂಚಭೂತ'ಪರಿಕಲ್ಪನೆ –ಪುರುಷೋತ್ತಮ ಬಿಳಿಮಲೆ ೩.ಶಿಷ್ಟಪದ ಸಂಪ್ರದಾಯದಲ್ಲಿ ಪಂಚಭೂತಗಳ ಪರಿಕಲ್ಪನೆ.

೧೦೧೮. ಜಾನಪದ ಸಾಹಿತ್ಯ ದರ್ಶನ

ಭಾಗ ೨೪: ಪರಿಸರ ಮತ್ತು ಜನಪದ ಸಂಸ್ಕೃತಿ; ಸಂ: ಶಾಲಿನಿ ರಘುನಾಥ; ಪ್ರ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು: ೨೦೦೧; ಪು: ೧೦+೮೧=೧೦೧; ಡಿಮ್ಮೈ ೧/೮

ಮೂರು ಗೋಷ್ಠಿಗಳಲ್ಲಿ ಒಟ್ಟು ಎಂಟು ಲೇಖನಗಳಿವೆ. **ಗೋಷ್ಠಿ ಒಂದು: ಜನಪದ ಸಂಸ್ಕೃತಿ ಸಿದ್ಧಾಂತಗಳು:** ೧.ಪರಿಸರಾಧಾರಿತ ಸಂಸ್ಕೃತಿ – ಕೃಷ್ಣಮೂರ್ತಿ ಹನೂರು ೨.ಪರಿಸರ ಮತ್ತು ಜೀವಸಂಕುಲ –ತೀ.ನಂ. ಶಂಕರನಾರಾಯಣ. ಆಶಯ ಭಾಷಣ ಪರಿಸರ ಮತ್ತು ಜನಪದ ಸಂಸ್ಕೃತಿ: ವಿಲ್ಯಂ ಮಾಡ್ತ. **ಗೋಷ್ಠಿ ಎರಡು: ಭೌತಿಕ ಪರಿಸರ ಮತ್ತು ಜನಪದ ಸಂಸ್ಕೃತಿ:** ೧.ಭೌತಿಕ ಪರಿಸರದ ನಾಶ ಮತ್ತು ಜನಪದ ಜೀವನ –

ಶ್ರೀಮತಿ ಶಾರದಾ ಗೋಪಾಲ ೨.ಜಲಾನಯನ ಅಭಿವೃದ್ಧಿ, ಸಾಮಾಜಿಕ ಅರಣ್ಯ ಹಾಗೂ ಗ್ರಾಮ ಸಾಮೂಹಿಕ ಭೂಮಿಗಳು ಮತ್ತು ಗ್ರಾಮೀಣ ಬಡಜನರು –ಸಂ.ರಾ. ಹಿರೇಮಠ ೩.ಜನಪದ ಪ್ರಜ್ಞೆಯಲ್ಲಿ ಭೌತಿಕ ಪರಿಸರದ ಗ್ರಹಿಕೆ ಮತ್ತು ಅಭಿವ್ಯಕ್ತಿ – ಪುರುಷೋತ್ತಮ ಬಿಳಿಮಲೆ. **ಗೋಷ್ಠಿ ಮೂರು: ಸಸ್ಯ–ಪ್ರಾಣಿ ಪರಿಸರ ಮತ್ತು ಜನಪದ ಸಂಸ್ಕೃತಿ:** ೪.ಸಸ್ಯ–ಪ್ರಾಣಿ ಪರಿಸರ ಮತ್ತು ಬುಡಕಟ್ಟುಗಳು –ಹಿ.ಚಿ. ಬೋರಲಿಂಗಯ್ಯ ೫.ಸಸ್ಯ–ಪ್ರಾಣಿ ಪರಿಸರ ಮತ್ತು ಜನಪದ ವೈದ್ಯ –ಎಚ್. ರಾಮಾಚಾರ್ ೬.ಜನಪದ ಪ್ರಜ್ಞೆಯಲ್ಲಿ ಸಸ್ಯ–ಪ್ರಾಣಿ ಪರಿಸರದ ಗ್ರಹಿಕೆ ಮತ್ತು ಅಭಿವ್ಯಕ್ತಿ –ಹಿ.ಶಿ. ರಾಮಚಂದ್ರೇಗೌಡ. ವಿಲ್ಯಂ ಮಾಡ್ತ ಅವರ ಪರಿಸರ ಮತ್ತು ಜನಪದ ಸಂಸ್ಕೃತಿ ಎಂಬ ಆಶಯ ಭಾಷಣ, ಡಿ.ಕೆ. ರಾಜೇಂದ್ರ ಅವರ ಸಮಾರೋಪ ಭಾಷಣ ಇವೆ.

೧೦೧೯. ಜಾನಪದ ಸಾಹಿತ್ಯ ದರ್ಶನ ೨೭

ಸಂ: ವ್ಹಿ.ಎಲ್. ಪಾಟೀಲ; ಪ್ರ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು.೨೦೦೯; ಪುಟ ೧೨+೨೧೦=೨೨೨; ಡಿಮ್ಮೈ ೧/೮

ಜನಪದ ವೈದ್ಯ ಎಂಬ ಅಡಿಬರಹ ಇದೆ. ಪ್ರಾಸ್ತಾವಿಕ ಭಾಷಣವೂ ಸೇರಿ ಒಟ್ಟು ೧೮ ಲೇಖನಗಳಿವೆ: ೧.ಆಶಯ ಭಾಷಣ –ಪಿ.ಎಸ್. ವೆಂಕಟರಾಮ ದೈತೋಟ ೨.ಸಮ್ಮೇಲನದ ಸರ್ವಾಧ್ಯಕ್ಷರ ಭಾಷಣ –ಎನ್.ಆರ್.ನಾಯಕ ೩.ಜನಪದ ವೈದ್ಯ: ಉಗಮ–ವಿಕಾಸ–ಸ್ವರೂಪ–ಲಕ್ಷಣಗಳು –ಆರ್.ವಿ.ಎಸ್. ಸುಂದರಂ ೪.ಜನಪದ ವೈದ್ಯ ಮತ್ತು ಇತರ ದೇಶೀ ವೈದ್ಯ ಪದ್ಧತಿಗಳು –ಸತ್ಯನಾರಾಯಣ ಭಟ್ ಪಿ. ೫.ಬುಡಕಟ್ಟು ವೈದ್ಯ – ಗಂಗಾಧರ ದೈವಜ್ಞ ೬.ರೋಗ ನಿಧಾನ ಮತ್ತು ಪಥ್ಯಾಹಾರ –ಜಿ.ಪಿ.ಭಟ್, ಮದ್ಗುಣಿ ೭.ಸಸ್ಯಜನ್ಯ ವೈದ್ಯ ಚಿಕಿತ್ಸೆ –ಗಣೇಶ ಆರ್. ಹೆಗಡೆ ೮.ಪಶು, ಪಕ್ಷಿ, ಕೀಟ, ಧಾತುಜನ್ಯ ಚಿಕಿತ್ಸಾ ಔಷಧಿಗಳು –ಶ್ರೀಧರ ಎನ್. ದೇಸಾಯಿ ೯.ಜನಪದ ಪಶು ವೈದ್ಯ ಪದ್ಧತಿ – ಎಸ್.ಡಿ. ನಿಂಬಾಳಕರ ೧೦.ಸಸ್ಯ ವೈದ್ಯ ಚಿಕಿತ್ಸೆ –ಎಸ್.ಡಿ. ನಾಯಕ ಹಾಗೂ ವೀ. ಸೂರ್ಯನಾರಾಯಣ ೧೧.ಯಂತ್ರ–ತಂತ್ರ–ಮಂತ್ರ ವೈದ್ಯ ಚಿಕಿತ್ಸೆ –ಪೂರ್ಣಿಮಾ ಭಟ್ಟ ಕೆ. ೧೨.ಕನ್ನಡ ಶಿಷ್ಟಪದ ಸಾಹಿತ್ಯದಲ್ಲಿ ಜನಪದ ವೈದ್ಯ –ಸಿ.ಕೆ. ನಾವಲಗಿ ೧೩.ಜನಪದ ವೈದ್ಯ ದಾಖಲಾತಿ ಮತ್ತು ಮೌಲ್ಯಮಾಪನ ೧೪.ಕಾಮಾಲೆ: ಒಂದು ಮಾರಕ ರೋಗ –ವಿ.ಜಿ. ಹೆಗಡೆ ೧೫.ಪಾರ್ಶ್ವವಾಯು ಚಿಕಿತ್ಸೆ ೧೬.ವಿಷಾಪಹಾರಿ ಚಿಕಿತ್ಸೆ –ಎಸ್.ಡಿ. ಹೆಗಡೆ ೧೭.ಸಮಾರೋಪ ಸಮಾರಂಭದ ಅಧ್ಯಕ್ಷರ ಮಾತು – ವಿ.ಎಸ್. ಸೋಂದೆ. ಪ್ರಾಸ್ತಾವಿಕ ಭಾಷಣ –ಶಾಲಿನಿ ರಘುನಾಥ

೧೦೨೦. ಜಾನಪದ ಸಾಹಿತ್ಯದಲ್ಲಿ ಮಾತೃವಾತ್ಸಲ್ಯ

ಲೇ: ಲೀಲಾವತಿ ತೋರಣಗಟ್ಟಿ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು.: ೧೯೭೬; ಪು: ೮+೭೪=೮೨; ಫೂಲ್ಸ್‌ಕ್ಯಾಪ್ ೧/೮

ಏಳು ಅಧ್ಯಾಯಗಳಿವೆ: ೧.ತ್ರಿಪದಿಗಳಲ್ಲಿ ೨.ಮಕ್ಕಳ ಹಾಡುಗಳಲ್ಲಿ ೩.ಇತರ ಹಾಡುಗಳಲ್ಲಿ: ಮದುವೆಯ ಹಾಡಿನಲ್ಲಿ, ಕೋಲಿನ ಪದದಲ್ಲಿ, ಕಥನಕವನದಲ್ಲಿ ೪.ಜೀವನ ದರ್ಶನ ೫.ಬಯಲಾಟಗಳಲ್ಲಿ ೬.ಕಥೆಗಳಲ್ಲಿ ೭.ನಾಣ್ಣುಡಿಗಳಲ್ಲಿ. ಆರ್.ಸಿ. ಹಿರೇಮಠ ಅವರ ಮುನ್ನುಡಿ ಇದೆ.

೧೦೨೧. ಜಾನಪದ ಸಾಹಿತ್ಯದಲ್ಲಿ ಶ್ರೀ ಶರಣಬಸವೇಶ್ವರ

ಸಂ: ಎಮ್.ಎಸ್. ಲಠ್ಠೆ; ಪ್ರ: ಶ್ರೀ ಶರಣಬಸವೇಶ್ವರ ಸಂಸ್ಥಾನ ಕಲಬುರಗಿ; ಮೊ.ಮು: ೧೯೭೮; ಪು: ೪೦+೧೧೨ = ೧೫೨; ಕ್ರೌನ್ ೧/೮

ಏಳು ಭಾಗಗಳಿವೆ: ೧.ಭಜನೆಯ ಹಾಡಿನಲ್ಲಿ ೨.ಹೆಣ್ಣುಮಕ್ಕಳ ಹಾಡಿನಲ್ಲಿ ೩.ಹಂತಿಯ ಹಾಡಿನಲ್ಲಿ ೪.ಲಾವಣಿ-ಗೀಗೀ ಹಾಡಿನಲ್ಲಿ ೫.ರಿವಾಯತ ಹಾಡಿನಲ್ಲಿ ೬.ಕಥೆಯಲ್ಲಿ ೭.ಮಂಗಳಾರತಿಯಲ್ಲಿ. ಪೂಜ್ಯ ಶರಣಬಸವಪ್ಪ ಅಪ್ಪ ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ಅನುಬಂಧದಲ್ಲಿ ಜಾನಪದ ಕವಿಗಳು, ಹಾಡು ಹೇಳಿದವರು, ಇವೆ.

೧೦೨೨. ಜಾನಪದ ಸಿಂಗಾರ

ಲೇ: ಎಚ್.ಟಿ. ಪೋತೆ; ಪ್ರ: ಕುಮಾರ ಪೂರ್ಣಿಮಾ ಪ್ರಕಾಶನ, ರಾಯಚೂರು; ಮೊ.ಮು. ೨೦೦೧; ಪುಟ ೮+೧೦೮=೧೧೬; ಡಿಮ್ಮೈ ೧/೮

ಹತ್ತು ಲೇಖನಗಳ ಸಂಕಲನ: ೧.ಜನಪದ ಪ್ರದರ್ಶನ ಕಲೆಗಳ ಸಾಂಸ್ಕೃತಿಕ ಹಿನ್ನೆಲೆ ೨.ರಾಯಚೂರು ಜಿಲ್ಲೆಯ ಜನಪದ ಪ್ರದರ್ಶನ ಕಲೆಗಳು ೩.ಜನಪದ ವಾದ್ಯಗಳ ಕಲ್ಪನೆ ೪.ಆಧುನಿಕ ಬದುಕಿನಲ್ಲಿ ಜನಪದ ಪ್ರದರ್ಶನ ಕಲೆಗಳು ೫.ಜನಪದ ನೃತ್ಯ ಕಲೆಗಳು ೬.ಜನಪದ ಪ್ರದರ್ಶನ ಕಲೆಗಳ ಅಳಿವು-ಉಳಿವು ೭.ಜನಪದ ಉಡುಗೆ-ತೊಡುಗೆಗಳು ೮.ಜನಪದ ಕಲೆ-ಹಚ್ಚೆ ೯.ರಂಗೋಲಿ ಕಲೆ ೧೦.ಜನಪದ ವಿದ್ಯಾಪದ್ಧತಿ.

೧೦೨೩. ಜಾನಪದ ಸಿಂಹಾವಲೋಕನ

ಲೇ: ಎನ್.ಆರ್. ನಾಯಕ; ಪ್ರ: ಜಾನಪದ ಪ್ರಕಾಶನ, ಪ್ರಭಾತನಗರ, ಹೊನ್ನಾವರ, ಉತ್ತರಕನ್ನಡ; ಮೊ.ಮು. ೧೯೮೫; ಪುಟ ೮+೧೨೨=೧೩೦; ಕ್ರೌನ್ ೧/೮

ಏಳು ಭಾಷಣಗಳ ಸಂಕಲನ: ೧.ಕನ್ನಡ ಜಾನಪದ ಅಧ್ಯಯನ ೨.ಜಾನಪದ ರಕ್ಷಣೆ ನಮ್ಮ ಹೊಣೆ ೩.ಜಾನಪದ ಅಕಾಡಿಮ್ಮೆ-ಉತ್ತರ ಕನ್ನಡ ಜಾನಪದ ೪.ಕರಾವಳಿ ಪ್ರದೇಶದ ಜನಪದ ಸಾಹಿತ್ಯ ಪ್ರಕಾರಗಳು ೫.ಉತ್ತರ ಕನ್ನಡ ಜಿಲ್ಲೆಯ ಜನಪದ ಸಾಹಿತ್ಯ ಸ್ವರೂಪ ೬.ಉತ್ತರ ಕನ್ನಡ ಜಿಲ್ಲೆಯ ಜನಪದ ಕಲೆಗಳು ೭.ಮಕ್ಕಳ ಜಾನಪದ ಆಟಗಳ ವೈವಿಧ್ಯ. ಭಾಷಣಗಳ ಸಂದರ್ಭಗಳನ್ನೂ ಜೊತೆಜೊತೆಯಲ್ಲೆ ನೀಡಲಾಗಿದೆ.

೧೦೨೪. ಜಾನಪದ ಸಿದ್ಧಾಂತಗಳು

ಸಂ: ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ; ಪ್ರ: ಕರ್ನಾಟಕ ಜಾನಪದ

ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ, ಸಿ.ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು.೨೦೦೩; ಪುಟ ೨೦+೨೧೪=೨೩೪; ಡಿಮ್ಮೈ ೧/೮

ಬೇರೆ ಬೇರೆ ಲೇಖಕರ ಹದಿಮೂರು ಲೇಖನಗಳ ಸಂಕಲನ: ೧.ಪ್ರಕಾರ ಸಿದ್ಧಾಂತ (Genre Theory)-ತೀ.ನಂ. ಶಂಕರನಾರಾಯಣ ೨.ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು –ಬಿ.ಎನ್.ಸುಮಿತ್ರಾಬಾಯಿ ೩.ಆಶಯ ಪರಿಕಲ್ಪನೆ–ರಾಮೇಗೌಡ ೪.ಜನಪದ ಕಥೆಗಳ ಸಿದ್ಧಾಂತಗಳು –ಹಿ.ಶಿ.ರಾಮಚಂದ್ರೇಗೌಡ ೫.ಮೌಖಿಕ ಸೂತ್ರಾತ್ಮಕ ಸಿದ್ಧಾಂತ–ಎ.ವಿ.ನಾವಡ ೬.ಪ್ರದರ್ಶನ ಸಿದ್ಧಾಂತ–ವಾಮನ ನಂದಾವರ ೭.ಸೌರ ಪುರಾಣ ಮೂಲ ವಾದ–ಬಿ.ಬಿ.ಹೆಂಡಿ ೮.ರಾಚನಿಕ ಸಿದ್ಧಾಂತಗಳು–ಅಂಬಳಿಕೆ ಹಿರಿಯಣ್ಣ ೯.ಕ್ರಿಯಾತ್ಮಕ ಸಿದ್ಧಾಂತ –ಎ.ವಿ.ನಾವಡ ೧೦.ವಿಕಾಸವಾದ ಮತ್ತು ಅಪವಿಕಾಸವಾದ–ಬಿ.ಶಿವರಾಮ ಶೆಟ್ಟಿ ೧೧.ಸಾಂದರ್ಭಿಕ ಸಿದ್ಧಾಂತ–ಟಿ.ಗೋವಿಂದರಾಜು ೧೨.ಸಂದರ್ಭ ಸಿದ್ಧಾಂತ, ಮೌಖಿಕ ಸಾಹಿತ್ಯ ವಿಮರ್ಶೆ ಮತ್ತು ಜಾನಪದದ ಅರ್ಥ–ಬಿ.ಎ.ವಿವೇಕ ರೈ ೧೩.ದೇಶೀವಾದ–ಆರ್ವೀಯಸ್ ಸುಂದರಂ. ಪ್ರಾರಂಭದಲ್ಲಿ ಹಿ.ಶಿ.ರಾಮಚಂದ್ರೇಗೌಡ ಅವರ ಬರಹ ಇದೆ.

೧೦೨೫. ಜಾನಪದ ಸಿದ್ಧಾಂತಗಳು ಮತ್ತು ವಿಧಾನಗಳು

ಲೇ: ಅಂಬಳಿಕೆ ಹಿರಿಯಣ್ಣ; ಪ್ರ: ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ೯, ರಮ್ಯ, ಗೋಕುಲಂ ಮೂರನೇ ಹಂತ, ಮೈಸೂರು; ಮೊ.ಮು.೧೯೯೬, ಎ.ಮು. ೨೦೦೮; ಪುಟ ೯೬; ಡಿಮ್ಮೈ ೧/೧೨

ನಾಲ್ಕು ಲೇಖನಗಳ ಸಂಕಲನ: ೧.ಜಾನಪದ ಎಂದರೇನು? ೨.ಜಾನಪದ ಪ್ರಕಾರಗಳು ೩.ಜಾನಪದ ಸಿದ್ಧಾಂತಗಳು ಮತ್ತು ವಿಧಾನಗಳು ೪.ಜಾನಪದ ಕ್ಷೇತ್ರಕಾರ್ಯ.

೧೦೨೬. ಜಾನಪದ ಸಿದ್ಧಾಂತಗಳು–೨

ಸಂ: ಜಿ.ಆರ್. ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು.೨೦೦೩; ಪುಟ ೨೦+೨೧೪=೨೩೪; ಡಿಮ್ಮೈ ೧/೮

ಬೇರೆ ಬೇರೆ ಲೇಖಕರ ಹದಿನಾರು ಲೇಖನಗಳಿವೆ: ೧.ದೇಶೀ ಎಂಬ ಅರಿವು–ಹಿ.ಶಿ.ರಾಮಚಂದ್ರೇಗೌಡ ೨.ಕನ್ನಡ ಜನಪದ ಪುರಾಣಗಳ ಅಧ್ಯಯನ: ಕೆಲವು ಚಿಂತನೆಗಳು–ಎಂ.ಎನ್.ವಿ.ಪಂಡಿತಾರಾಧ್ಯ ೩.ಜಲಸಂಸ್ಕೃತಿಯ ಪರಿಕಲ್ಪನೆ–ಕೆ.ವೈ.ನಾರಾಯಣಸ್ವಾಮಿ ೪.ಕನ್ನಡ ಜಾನಪದ ವರ್ಗೀಕರಣ–ಒಂದು ಸಲಹೆ–ಟಿ.ಎಸ್.ಸತ್ಯನಾಥ್ ೫.ಹೊಸ ಜಗತ್ತಿನ ಜಾನಪದ–ಮೊಗಳ್ಳಿ ಗಣೇಶ್ ೬.ಜಾನಪದ ಸಾಹಿತ್ಯ: ಐತಿಹಾಸಿಕ ಮೂಲ ಸಾಮಗ್ರಿಯಾಗಿ –ಜಿ.ಆರ್. ತಿಪ್ಪೇಸ್ವಾಮಿ ೭.ಜನಪದ ಸಾಹಿತ್ಯದಲ್ಲಿ ಅಧ್ಯಯನ ಮತ್ತು ಭಾಷಾಶಾಸ್ತ್ರ–ಕೆ.ವಿ.ನಾರಾಯಣ ೮.ಮಾದರಿ(Type)

ಪರಿಕಲ್ಪನೆ ಮತ್ತು ರಚನೆ: ಪಾಶ್ಚಾತ್ಯ ಪರಿಕಲ್ಪನೆಗೊಂದು ಸೈದ್ಧಾಂತಿಕ ಚೌಕಟ್ಟು–ವೀರಣ್ಣ ದಂಡೆ ೯.ರಾಜಕೀಯ ಭಾಷಣಗಳು ಜನಪದದ ಒಂದು ಪ್ರಕಾರವೆ? –ತೀ.ನಂ. ಶಂಕರನಾರಾಯಣ ೧೦.ವರ್ಣ–ಜಾತಿ ಮತ್ತು ಲೋಕದೃಷ್ಟಿ (ಒಂದು ಜಾನಪದೀಯ ಚಿಂತನೆ)–ರಾಜೇಗೌಡ ಹೊಸಹಳ್ಳಿ ೧೧.ನಿತ್ಯಮಂಗಳಕರ ತತ್ತ್ವ–ಕಾಳೇಗೌಡ ನಾಗವಾರ ೧೨.ಜಾನಪದ ಕ್ಷೇತ್ರಕಾರ್ಯ–ಆಧುನಿಕ ವಿಧಾನಗಳು–ಪುರುಷೋತ್ತಮ ಬಿಳಿಮಲೆ ೧೩.ಕಾಡಿನ ಸಂಸ್ಕೃತಿಯೂ ಕಾಂಕ್ರೀಟ್ ಸಂಸ್ಕೃತಿಯೂ–ಹಿ.ಚಿ.ಬೋರಲಿಂಗಯ್ಯ ೧೪.ಕಾಡು ಮತ್ತು ತೋಪು: ಮಾರ್ಗ–ದೇಸಿ ಸಂಸ್ಕೃತಿಗಳ ಮುಖಾಮುಖಿ–ವಿ.ಚಂದ್ರಶೇಖರ ನಂಗಲಿ ೧೫.ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ–ಲಕ್ಷ್ಮಣ ತೆಲಗಾವಿ ೧೬.ಜನಪದ ಸಂಶೋಧನೆ: ನಾಳಿನ ಮಾರ್ಗಗಳು–ಚಕ್ಕೆರೆ ಶಿವಶಂಕರ್. ಪ್ರಾರಂಭದಲ್ಲಿ ಹಿ.ಶಿ.ರಾಮಚಂದ್ರೇಗೌಡ ಅವರ ಬರಹ ಇದೆ.

೧೦೨೭. ಜಾನಪದ ಸಿರಿ

ಸಂ: ಗೋಪಾಲಗೌಡ ಕಲ್ವಮಂಜಲಿ; ಪ್ರ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಿಕ್ಕಬಳ್ಳಾಪುರ ಜಿಲ್ಲೆ; ಮೊ.ಮು: ೨೦೧೧; ಪು: ೬+೭೮=೮೪; ಡಿಮ್ಮೆ ೧/೮

ಎರಡು ಭಾಗಗಳಿವೆ.ಭಾಗ ಒಂದರಲ್ಲಿ ಎರಡು ಕಥೆಗಳೂ: ೧.ಸಾಧ್ವಿವೀರ ತಿಮ್ಮಮ್ಮ–ಗೋಪಾಲಗೌಡ ಕಲ್ವಮಂಜಲಿ ೨.ತಾರಾತಿಗಡಿ–ಚಿಕ್ಕರಾಮಯ್ಯ ಚಿಕ್ಕಬಳ್ಳಾಪುರ; ಭಾಗ ಎರಡರಲ್ಲಿ ಹತ್ತು ಲೇಖನಗಳೂ: ೧ ಕರಪಾಲಮೇಳ: ರಂಗಸಾಧ್ಯತೆಗಳು–ಜಿ.ಆರ್.ತಿಪ್ಪೇಸ್ವಾಮಿ ೨.ಜಾನಪದ ಕವಿ ಮನದಲ್ಲಿ ಅರಳಿದ ಸೀತೆ ದೇವಕಿಯರು–.ಸ.ರಘುನಾಥ ೩.ರಕ್ಷಕ ತಾಯಿ ದೇವಕಿ ೪.ಜಾನಪದ ಕಲೆ: ಆರಾಧನೆ–ಮನರಂಜನೆ–ಎನ್.ಜಗನ್ನಾಥ ಪ್ರಕಾಶ್ ೫.ನಮ್ಮ ಜಾನಪದ–ತತ್ತೂರು ಲೋಕೇಶಪ್ಪ ೬.ಜಾನಪದ ಸಾಹಿತ್ಯದ ಮುದ–ರಾಧಾ ಪ್ರಕಾಶ್ ೭.ಮುಖವೀಣೆ ಅಂಜಿನಪ್ಪ –ಗೋಪಾಲಗೌಡ ಕಲ್ವಮಂಜಲಿ ೮.ವಿಶಿಷ್ಟ ಸಾಧನೆಯ ತಮಟೆಯ ಕಲಾವಿದ ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ ೯.ಗಾರುಡಿ ಗೊಂಬೆ ಕುಣಿಸುವ ಕೆ.ಎನ್.ನಾರಾಯಣಸ್ವಾಮಿ ೧೦.ಜನಪದ ಸಾಹಿತ್ಯ ಮತ್ತು ಪ್ರಕಾರಗಳು –ಎನ್.ಮುನಿಕೃಷ್ಣಪ್ಪ ಚಿಂತಾಮಣಿ; ಇವೆ.

೧೦೨೮. ಜಾನಪದ ಸಿರಿ

ಲೇ: ಎಂ. ನಂಜಯ್ಯ ಹೊಂಗನೂರು; ಪ್ರ: ಪ್ರಸನ್ನ ಪ್ರಕಾಶನ, ಹೊಂಗನೂರು, ಚಾಮರಾಜನಗರ ತಾಲ್ಲೂಕು, ಚಾಮರಾಜನಗರ ಜಿಲ್ಲೆ –೫೭೧ ೧೧೭; ಮೊ.ಮು. ೨೦೦೨; ಪುಟ ೧೪+೧೩೮=೧೫೨; ಕ್ರೌನ್ ೧/೮

ಎಂಟು ಲೇಖನಗಳ ಸಂಕಲನ: ೧.ಜನಪದ ದಾಸ ಸಂಪ್ರದಾಯ ೨.ಜನಪದ ನೀಲಗಾರ ಸಂಪ್ರದಾಯ ೩.ಜಾನಪದದಲ್ಲಿ ಕನಸುಗಳು ೪.ಜನಪದ ಕಥನಗೀತೆಗಳಲ್ಲಿ ಸ್ತ್ರೀ ೫.ಜನಪದ ವೈದ್ಯ ೬.ಹೊಂಗನೂರಿನ ಶಿಶುಪ್ರಾಸಗಳು ೭.ಗುಂಡ್ಲುಪೇಟೆ ಪರಿಸರದ ಸ್ಥಳನಾಮಗಳು

೮.ಟಿ. ನರಸೀಪುರ ತಾಲ್ಲೂಕಿನ ಸ್ಥಳನಾಮಗಳು. ಹಿ.ಶಿ. ರಾಮಚಂದ್ರೇಗೌಡರ ಮುನ್ನುಡಿ, ರಾಗೌ ಅವರ ಬೆನ್ನುಡಿ, ಇವೆ.

೧೦೨೯. ಜಾನಪದ ಸುಗಂಧ

ಲೇ: ನಾಗನಾಯ್ಕ ರಾಮೇನಹಳ್ಳಿ, ೩೬೦, ಲಿಖಿತ ನಿಲಯ, ೫ನೇ ಮೇನ್, ೪ನೇ ಹಂತ, ಟಿ.ಕೆ.ಲೇಔಟ್, ಮೈಸೂರು; ಮೊ.ಮು. ೨೦೦೯; ಪುಟ ೧೦+೧೨೬=೧೩೬; ಡಿಮ್ಮೈ ೧/೮

ಎಂಟು ಲೇಖನಗಳ ಸಂಕಲನ: ೧.ಯಲಮತ್ತೂರು ಮಾನೆಬಸಪ್ಪ ದೇವಸ್ಥಾನ ಮತ್ತು ಆಚರಣೆ, ನಂಬಿಕೆಗಳು ೨.ಹಕ್ಕಿಪಿಕ್ಕಿಗಳ ಸಾಮಾಜಿಕ ಸಂಪ್ರದಾಯಗಳು ೩.ವಾಗ್ರಿ ಭಾಷೆಯ ಅಳಿವು-ಉಳಿವು ೪.ಜಾನಪದ ಮತ್ತು ರಂಗಭೂಮಿ ಸಾಧಕ ೫.ಕಂಸಾಳೆ ಕಲಾವಿದ ಕುಮಾರಸ್ವಾಮಿ ೬.ರಂಗಕರ್ಮಿ ಎಚ್.ನಾಗರಾಜು ೭.ಪದ ಹಾಡುಗಾತಿ ಪುಟ್ಟಮಾದಮ್ಮ ೮.ಸಮಾನ ಸಮಾಜ ಕಟ್ಟಿ ಶ್ರಮಿಸಿದ ಬಸವಣ್ಣ. ನಂಜಯ್ಯ ಹೊಂಗನೂರು ಅವರ ಮುನ್ನುಡಿ ಇದೆ.

೧೦೩೦. ಜಾನಪದ ಸುಗ್ಗಿ

ಸಂ.ಎಂ.ಚಿಳ್ಳಾರಪ್ಪ, ನರಸಿಂಹೇಗೌಡ ನಾರಣಾಪುರ; ಪ್ರ: ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೋಲಾರ; ಮೊ.ಮು: ೨೦೧೧; ಪು: ೮+೧೩೪; ಡಿಮ್ಮೈ ೧/೮

ವಿವಿಧ ಲೇಖಕರು ಬರೆದ ಹದಿಮೂರು ಲೇಖನಗಳ ಸಂಕಲನ: ೧.ಜಾನಪದಕ್ಕೆ ಎದೆಹಾಲು ಕೊಡದಿದ್ದರೂ ವಿಷ ಉಣಿಸುವುದು ಬೇಡ -ಸ.ರಘುನಾಥ ೨.ಜಿಲ್ಲೆಯ ಜಾನಪದ ಸಂಸ್ಕೃತಿ-ನರಸಿಂಹೇಗೌಡ ನಾರಣಾಪುರ ೩.ಅಚ್ಚರಿಯ ಗೊಂಬೆಗಳ ಮಾಂತ್ರಿಕ ಸಂಜೀವರೆಡ್ಡಿ-ಟಿ.ಗೋವಿಂದರಾಜು ೪.ನೀರು ಮತ್ತು ಜಾನಪದ ಪರಂಪರೆ-.ಕೆ.ವೈ.ನಾರಾಯಣ ಸ್ವಾಮಿ ೫.ಜಿಲ್ಲೆಯ ಗ್ರಾಮದೇವತಗಳು -ಶ್ರೀವಾಣಿ ಪ್ರಹ್ಲಾದರಾವ್ ೬.ಜಾನಪದ ಕಲೆಗಳು -ಕೆ.ಎಸ್.ರಾಮಮೂರ್ತಿ, ಸಿ.ಹನುಮಂತರಾಯಪ್ಪ ೭.ಗುಂಡು ಕಲ್ಲಿನ ತಾಯಿ ಲಕ್ಷ್ಮಕ್ಕ (ಜಾನಪದ ಗೀತಗಾಥೆ)-ಕೈಪು ಲಕ್ಷ್ಮೀನರಸಿಂಹಶಾಸ್ತ್ರಿ ೮ ಜಾನಪದ ಕಲಾಸಂಪದ-ಅರವಿಂದ ಕಟ್ಟಿ ೯.ಜಾನಪದ ನೃತ್ಯಗಳು-ರಂಗಾರೆಡ್ಡಿ ಕೋಡಿರಾಂಪುರ ೧೦.ಜಾನಪದ ಅಡುಗೆಗಳು-ವಾಣಿಶ್ರೀ ೧೧.ಕಾಲಾಟಗಾರರ ಕುಣಿತ-ಕೋಲಾರ ಶ್ರೀನಿವಾಸ ೧೨.ಬಾರಪ್ಪೋ ಮಳೆರಾಯ-ವೈ.ಎಲ್.ಹನುಮಂತರಾವ್ ೧೩.ಹೆಣ್ಣುಮಕ್ಕಳ ಜನಪದ ಕ್ರೀಡೆಗಳು-ಬಿ.ಕೆ.ಮಂಜುಳ. ಅಲ್ಲಲ್ಲಿ ರೇಖಾಚಿತ್ರಗಳಿವೆ.

೧೦೩೧. ಜಾನಪದ ಸೃಷ್ಟಿ-ದೃಷ್ಟಿ

ಲೇ: ಹಸನಬಿ ಬೀಳಗಿ; ಪ್ರ: ಸಾಯಿ ಪ್ರಕಾಶನ, ಜಯನಗರ ಕ್ರಾಸ್ ಹತ್ತಿರ, ಸಪ್ತಾಪುರ, ಧಾರವಾಡ; ಮೊ.ಮು: ೨೦೦೦; ಪು: ೬+೧೨೨=೧೨೮; ಡೇಮಿ ೧/೮

ಹನ್ನೆರಡು ಲೇಖನಗಳ ಸಂಕಲನ: ೧.ಜನಪದ ಕಲೆಗಳು ಮತ್ತು ಮಹಿಳೆ ೨.ಜನಪದ ಚಿತ್ರಕಲೆ; ಮದರಂಗಿ ೩.ಗರತಿ ಕಂಡುಕೊಂಡ ಜೀವನ ಸಿದ್ಧಾಂತ ೪.ಜನಪದ ಕಾವ್ಯ ಹಾಗೂ ಮಹಿಳಾ ಪ್ರತಿಭಟನೆ ೫.ಮುಸ್ಲಿಂ ಹಬ್ಬ, ಜಾತ್ರೆ, ಉತ್ಸವಗಳು ೬.ರಿವಾಯತಗಳು– ಸ್ವರೂಪ, ವಸ್ತುವೈವಿಧ್ಯ ಹಾಗೂ ಸಂದೇಶ ೭.ಶಿಶುನಾಳ ಶರೀಫರ ರಿವಾಯತಗಳು ೮.ಶರಣರು ಮತ್ತು ರಿವಾಯತಗಳು–ಒಂದು ಮುಖಾಮುಖಿ ೯.ಜನಪದ ಪರಿಕಲ್ಪನೆಯಲ್ಲಿ ಆರೋಗಣೆ ೧೦.ಜಾನಪದ ಸೃಷ್ಟಿ –'ಗಿರಿಜಾ ಕಲ್ಯಾಣ' ೧೧.ಜನಪದ ಕವಿಕಲ್ಪನೆಯ ಕಿರಾತಲೀಲೆ ೧೨.ಜನಪದದಲ್ಲಿ ನರಗುಂದ ದರ್ಶನ. ಗುರುಲಿಂಗ ಕಾಪಸೆ ಅವರ ಮುನ್ನುಡಿ ಇದೆ.

೧೦೩೨. ಜಾನಪದ ಸೆಲೆ

ಸಂ: ಸ.ಚಿ.ರಮೇಶ; ಪ್ರ: ಸ್ವಾಗತ ಸಮಿತಿ, ಅಖಿಲ ಭಾರತ ಜಾನಪದ ಸಮ್ಮೇಳನ, ಕರ್ನಾಟಕ ಸಂಘದ ಕಟ್ಟಡ, ಅಂಬೇಡ್ಕರ್ ವೃತ್ತ, ಬೀದರ; ಮೊ.ಮು.೨೦೧೧; ಪುಟ ೧೬+೧೦೮=೧೨೪; ಡಿಮ್ಮೈ ೧/೮

ವಿವಿಧ ಲೇಖಕರು ಬರೆದ ಹದಿಮೂರು ಲೇಖನಗಳು ಇಲ್ಲಿವೆ ೧.ಜಾನಪದ ಪರಿಕಲ್ಪನೆ ಮತ್ತು ರಾಜಕಾರಣ – ತೀ.ನಂ. ಶಂಕರನಾರಾಯಣ ೨.ಕರ್ನಾಟಕ ಜಾನಪದ ಸಂಶೋಧನೆ: ಮುಂದೇಣು? – ಅಂಬಳಿಕೆ ಹಿರಿಯಣ್ಣ ೩.ಜಾನಪದ ರಂಗಭೂಮಿಯ ಶಿಲ್ಪ– ಚಂದ್ರಶೇಖರ ಕಂಬಾರ ೪.ಕಾಡಿನ ಸಂಸ್ಕೃತಿಯೂ ಕಾಂಕ್ರೀಟ್ ಸಂಸ್ಕೃತಿಯೂ– ಹಿ.ಚಿ. ಬೋರಲಿಂಗಯ್ಯ ೫.ಮಲೆನಾಡು ಕರ್ನಾಟಕದ ಆಹಾರ ವೈಶಿಷ್ಟ್ಯಗಳು– ಶ್ರೀಕಂಠ ಕೂಡಿಗೆ ೬.ಜೇಡ: ಫಲ ಸಮೃದ್ಧಿಯ ದೈವ– ಸ.ಚಿ.ರಮೇಶ ೭.ಜನಪದ ಆಚರಣೆಗಳು ಮತ್ತು ಕೃಷಿ ತಂತ್ರಜ್ಞಾನ – ಟಿ.ಎಸ್. ಚನ್ನೇಶ್ ೮.ಜನಪದರಲ್ಲಿ ವೃಕ್ಷಾರಾಧನೆ– ಎಸ್. ಮೋಹನ್ ೯.ಸಸ್ಯ ಮತ್ತು ಜನಪದ ಧರ್ಮ: ಸಂಬಂಧ ಮತ್ತು ತಾತ್ತ್ವಿಕತೆ– ಕೆ. ಚಿನ್ನಪ್ಪ ಗೌಡ ೧೦.ತುಳುನಾಡಿನ ಧಾರ್ಮಿಕ ಆಚರಣೆಗಳು: ವಿಶ್ಲೇಷಣಾತ್ಮಕ ಅಧ್ಯಯನ– ಕೆ. ಮೋಹನ್‌ಕೃಷ್ಣ ರೈ. ೧೧.ವಸಾಹತುಶಾಹಿ ಮತ್ತು ಜನಪದ ಸಾಹಿತ್ಯ– ಹೆಬ್ಬಾಲೆ ಕೆ. ನಾಗೇಶ್ ೧೨.ಅಲೆಮಾರಿಗಳು ಭಾಷೆ– ಡಿ. ಪಾಂಡುರಂಗಬಾಬು ೧೩.ಕಲ್ಯಾಣ ಕರ್ನಾಟಕದ ಪ್ರದರ್ಶನ ಕಲೆ–ಜಾತ್ರೆಗಳು– ಜಗನ್ನಾಥ ಹೆಬ್ಬಾಳೆ

೧೦೩೩. ಜಾನಪದ ಸೈದ್ಧಾಂತಿಕ ಪ್ರಜ್ಞೆ ಮತ್ತು ದೇಶೀವಾದ

ಸಂ: ಅರವಿಂದ ಮಾಲಗತ್ತಿ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಿಮ್ಮೆ, ಬೆಂಗಳೂರು; ಮೊ.ಮು: ೧೯೯೮; ಪು: ೮+೧೪೯; ಡಿಮ್ಮೈ ೧/೮

ವಿಚಾರ ಸಂಕಿರಣವೊಂದರಲ್ಲಿ ಮಂಡಿಸಲ್ಪಟ್ಟ ಪ್ರಬಂಧಗಳ ಸಂಕಲನ: ೧.ಜಾನಪದ ಮತ್ತು ಸೈದ್ಧಾಂತಿಕ ಪ್ರಜ್ಞೆ ಪ್ರಾಸ್ತಾವಿಕ ಮಾತು–ಅರವಿಂದ ಮಾಲಗತ್ತಿ ೨.ಪ್ರೇರಣೆ ಗೊತ್ತಾದರೆ ಗ್ರಹಿಸಬೇಕಾದ ದಿಕ್ಕು ಗೊತ್ತಾಗುತ್ತದೆ (ಉದ್ಘಾಟನಾ ಭಾಷಣ)–ಎಂ.ಐ.

ಸವದತ್ತಿ ೩.ಅಸಂಭವವಾದುದನ್ನು ಸಂಭವನೀಯಗೊಳಿಸುವ ಪ್ರಯತ್ನ –ಸೋಮಶೇಖರ ಇಮ್ರಾಪುರ ೪.ಸೈದ್ಧಾಂತಿಕ ವಿಚಾರ ಸಂಕಿರಣ (ಅಧ್ಯಕ್ಷರ ಭಾಷಣ)– ಜೀ.ಶಂ.ಪರಮಶಿವಯ್ಯ ೫.ಪಾಶ್ಚಾತ್ಯ ಜಾನಪದ ಸಿದ್ಧಾಂತಗಳು ಮತ್ತು ದೇಶಿಯವಾದ– ಅಂಬಳಿಕೆ ಹಿರಿಯಣ್ಣ ೬.ಸ್ಟಿಥ್ ಥಾಮ್ಸನ್ನರ ಆಶಯ ಹಾಗೂ ಮಾದರಿ ಸೂಚಿ ಮತ್ತು ಜನಪದ ಕಥಾ ಘಟಕಗಳು–ವೀರಣ್ಣ ದಂಡೆ ೭.ಜಾನಪದದಲ್ಲಿ ರೂಪ, ಅರ್ಥ ಮತ್ತು ಸಂದರ್ಭ ೮.ದೇಶೀವಾದ ಮತ್ತು ಕರ್ನಾಟಕ ಜಾನಪದ–ಹಿ.ಶಿ.ರಾಮಚಂದ್ರೇಗೌಡ ೯.ಕರ್ನಾಟಕ ಜಾನಪದ ಮತ್ತು ದೇಶೀಯವಾದ–ತೀ.ನಂ.ಶಂಕರನಾರಾಯಣ ೧೦.ಜಾನಪದ ಮತ್ತು ದೇಶೀಯವಾದದ ನೆಲೆಗಳು–ಅರವಿಂದ ಮಾಲಗತ್ತಿ ೧೧.ಹೊಸತು ಕಟ್ಟುವಾಗ ಎದುರಾಗುವ ಲೇವಡಿಗಳನ್ನು ಮೀರಬೇಕು–ಎಂ.ಎಂ.ಕಲಬುರ್ಗಿ. ಕೊನೆಯಲ್ಲಿ ಮೂರು ಭಾಗಗಳಲ್ಲಿ ಗೋಷ್ಠಿಯ ಸಂವಾದಗಳು, ವಿಶೇಷ ಆಹ್ವಾನಿತರ ಅನಿಸಿಕೆಗಳು, ಇವೆ.

೧೦೩೪. ಜಾನಪದ ಸೊಗಡು

ಲೇ: ಜೀನಹಳ್ಳಿ ಸಿದ್ಧಲಿಂಗಪ್ಪ; ಪ್ರ: ಪ್ರೇಮ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ಹೊನ್ನಾಳಿ ತಾಲೂಕು, ದಾವಣಗೆರೆ ಜಿಲ್ಲೆ –೫೭೭೨೨೩; ಮೊ.ಮು.: ೨೦೦೭, ಪುಟ ೮+೧೭೬=೧೮೪, ಡಿಮ್ಮೈ ೧/೮.

೧೯ ಲೇಖನಗಳ ಸಂಕಲನ: ೧.ಶಿಶು ಜಾನಪದ ೨.ಜನಪದ ಭಾಷಾ ಚಮತ್ಕಾರಗಳು ೩.ಹೇಳಿದವರಿಗೆ ಬಂಗಾರದ ಕಟ್ಟು ಹೇಳದವರಿಗೆ ಹೆಡಮುರಿಗೆ ಕಟ್ಟು ೪.ಜೀನಹಳ್ಳಿ ಹಗಲು ದೀವಟಿಗೆ ೫.ಮಾಹೇಶ್ವರನ ಹಬ್ಬ ೬.ಹಳ್ಳಿಗರ ಲೆಕ್ಕಾಚಾರ ೭.ಅಕ್ಕಡಿ ಒಂದು ಪರಿಚಯ ೮.ಕಿವಿ ಚುಚ್ಚುವುದು ೯.ಕೆರಕಲು ಹಬ್ಬ ೧೦.ಗೋಮಾಳ ೧೧.ಜಾಣಪದ ೧೨.ಮಾರ್ನುಡಿಗಳು ೧೩.ಬೈಗುಳಗಳು ೧೪.ಮೊದಲ ಬೇಸಾಯ ೧೫.ಮುಯ್ಯಿ ೧೬.ಬೆದರುಗೊಂಬೆ–ಒಂದು ಅವಲೋಕನ ೧೭.ಜನಪದ ಬೆಡಗು ಚಮತ್ಕಾರ ೧೮.ಜನಪದ ಸಾಹಿತ್ಯ –ಭಾಷಿಕ ಪ್ರಕಾರಗಳಲ್ಲಿ ಜಾಣತನದ ಅಭಿವ್ಯಕ್ತಿ ೧೯.ಕ್ಷೇತ್ರಕಾರ್ಯ: ಕೆಲವು ಅನುಭವಗಳು. ಸಿ.ಪಿ.ಕೆ. ಅವರ ಮುನ್ನುಡಿ ಇದೆ. ಕೊನೆಯಲ್ಲಿ 'ಜಾನಪದ' ಲೇಖನಗಳನ್ನು ಬರೆದ ಸಂದರ್ಭಗಳು ಇವೆ.

೧೦೩೫. ಜಾನಪದ ಸೋಪಾನ

ಲೇ: ನಗುವನಹಳ್ಳಿ ಪಿ. ರತ್ನ; ಪ್ರ: ಪ್ರಶಾಂತಿ ಪ್ರಕಾಶನ, ಯಾದವಗಿರಿ, ಮೈಸೂರು – ೫೭೦ ೦೦೨; ಮೊ.ಮು: ೧೯೮೭; ಪು: ೧೬+೧೦೮=೧೨೪; ಕ್ರೌನ್ ೧/೮.

ಹದಿನೈದು ಲೇಖನಗಳ ಸಂಕಲನ: ೧.ಜನಪದ ಸಾಹಿತ್ಯದಲ್ಲಿ ಮಹಿಳೆ ೨.ಜನಪದರ ಗೌರಿ–ಗಣೇಶನ ಹಬ್ಬ ೩.ಹಳ್ಳಿಗರ ನಂಬಿಕೆಯ ಹಲವು ಶಾಸ್ತ್ರಗಳು ೪.ಜನಪದ ನಂಬಿಕೆಗಳು ೫.ಬೊಮ್ಮೂರಮ್ಮನ ಹಬ್ಬ ೬.ಲಾಲಿಯ ಪದಗಳು ೭.ಹಬ್ಬ: ಒಂದು ಸ್ಥೂಲ ವಿವೇಚನೆ ೮.ಕಮ್ಮಾರ ಜನಾಂಗ: ಒಂದು ಅಧ್ಯಯನ ೯.ಹೊಸೂರು ಜಾತ್ರೆ;

ಒಂದು ಚಿತ್ರಣ ೧೦.ಜಾನಪದ ಗೀತಾಂಜಲಿ: ಒಂದು ಸಮೀಕ್ಷೆ ೧೧.ಜಾನಪದ ಸಂಗೀತ ೧೨.ಜನಪದ ಕಥೆ ೧೩.ಜನಪದ ಕಾವ್ಯದಲ್ಲಿ ಶೃಂಗಾರ ೧೪.ನಗುವನಹಳ್ಳಿಯ ಸಂಕ್ರಾಂತಿ ಹಬ್ಬ ೧೫.ಆರತಿ ಉಕ್ಕಡ: ಒಂದು ಪರಿಚಯ. ಹಾ. ಮಾ. ನಾಯಕ ಅವರ ಹರಕೆ, ಡಿ. ಕೆ. ರಾಜೇಂದ್ರ ಅವರ ಮುನ್ನುಡಿ, ಪಾ. ಶ. ಶ್ರೀನಿವಾಸ ಹಾಗೂ ವಿ. ಶಿವಾನಮದ ಅವರುಗಳ 'ಜಾನಪದ ಸೋಪಾನ ಕುರಿತು' ಮಾತುಗಳು, ಇವೆ.

೧೦೩೬. ಜಾನಪದ ಸೌಂದರ್ಯ

ಲೇ: ದೇಜಗೌ; ಪ್ರ: ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು–೫೭೦೦೧೨; ಮೊ.ಮು.೧೯೭೭; ಪುಟ ೬+೧೭೪=೧೮೦; ಕ್ರೌನ್೧/೮

ಹತ್ತು ಲೇಖನಗಳು ಹಾಗೂ ಮೂರು ಮುನ್ನುಡಿಗಳ ಸಂಕಲನ. ಲೇಖನಗಳು: ೧.ಜನಪದ ಗೀತೆಗಳಲ್ಲಿ ಶಿಶು ೨.ಕಾವ್ಯಗಳಲ್ಲಿ ಜಾನಪದ ೩.ಜಾನಪದ ಸಾಹಿತ್ಯದಲ್ಲಿ ಉತ್ತರ ದೇವಿಯ ಪ್ರಸಂಗ ೪.ಯಕ್ಷಗಾನ ವಿಚಾರ ೫.ಯಕ್ಷಗಾನ ಭವಿಷ್ಯ ೬.ವ್ಯಕ್ತಿ ನಾಮಗಳು ೭.ಜಾನಪದ ಸಾಹಿತ್ಯದಲ್ಲಿ ಸಮಾಜದರ್ಶನ ೮.ಜಾನಪದ ಸಾಹಿತ್ಯ – ಸ್ಥೂಲ ಪರಿಚಯ ೯.ಗರತಿಯ ಹಾಡುಗಳು ೧೦.ಚಕ್ಕೆರೆ ಪಟಲದಮ್ಮ–ಒಂದು ನೋಟ. ಮುನ್ನುಡಿಗಳು: ೧.ಮಂಡ್ಯ ಜಿಲ್ಲೆಯ ಜನಪದ ಕಥೆಗಳು ೨.ಕಥಕಳಿ ೩.ಪಡುಕೋಗಿಲೆ

೧೦೩೭. ಜಾನಪದ ಸೌರಭ

ಲೇ: ಬಸವರಾಜ ಪೋಲಿಸ ಪಾಟೀಲ; ಪ್ರ: ಅಮರ ಪ್ರಕಾಶನ, ಗುಲಬರ್ಗಾ; ಮೊ.ಮು: ೧೯೯೪; ಪು: ೫+೧೦೩=೧೦೮ ೧/೮

ಐದು ಲೇಖನಗಳ ಸಂಕಲನ: ೧.ಜನಪದ ಜೀವನ ವಿಧಾನ ೨.ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ–ಒಂದು ಸಮೀಕ್ಷೆ ೩.ಜನಪದ ನಾಲ್ಕು ಚಿಂತನಗಳು ೪ ಬಯಲಾಟದ ವೇಷ ಭೂಷಣಗಳ ರಚನೆ ಒಂದು ವಿಶ್ಲೇಷಣೆ ೫.ಜನಪದ ಅಂಶಗಳು–ಒಂದು ಟಿಪ್ಪಣಿ

೧೦೩೮. ಜಾನಪದ ಸ್ಪಂದನ

ಲೇ: ಸಿ.ಕೆ.ನಾವಲಗಿ; ಪ್ರ: ಭಾರತ ಪ್ರಕಾಶನ, ಗೋಕಾಕ; ಮೊ.ಮು: ೧೯೮೯; ಪು: ೧೩ +೧೪೦=೧೫೩; ಡಿಮ್ಮೈ ೧/೮

ಎಂಟು ಲೇಖನಗಳ ಸಂಕಲನ: ೧.ಗಾಳಿ–ಒಂದು ಜನಪದೀಯ ಅಧ್ಯಯನ ೨.ಕೊಣ್ಣುರು–ಒಂದು ಜೈನ ಐತಿಹ್ಯ ೩.ಚೆನ್ನವೀರ ಕಣವಿಯವರ ಕಾವ್ಯದಲ್ಲಿ ಜನಪದ ಸತ್ವ ೪.ಜಾನಪದ ದೇವತೆಗಳು ಮತ್ತು ಬಸವಣ್ಣನವರು ೫.ಒಂದು ಜನಪದ ತ್ರಿಪದಿ ೬.ಎರಡು ಜಾನಪದ ತ್ರಿಪದಿಗಳು ೭.ಹಳ್ಳಿಗಾಡಿನ ಕುಲಕಸಬುಗಳು ೮.ಜನಪದ ಪ್ರೇಮಗೀತೆಗಳು. ಎಸ್.ಎಂ.ವೃಷಭೇಂದ್ರಸ್ವಾಮಿ ಅವರ ಮುನ್ನುಡಿ ಇದೆ.

೧೦೪೯. ಜಾನಪದ ಸ್ಪಂದನ

ಸಂ: ಪಾಲ್ತಾಡಿ ರಾಮಕೃಷ್ಣ ಆಚಾರ್; ಪ್ರ: ಸುಪ್ರಿಯ ಪ್ರಕಾಶನ, ಮಾಡಾವು-೫೭೪ ೩೧೮, ದ.ಕ; ಮೊ.ಮು. ೧೯೯೦; ಪುಟ ೧೦+೧೫೬; ಡಿಮ್ಮೈ ೧/೮

ಏಳು ಲೇಖನಗಳ ಸಂಕಲನ: ೧.ವಿಷಯನಿಷ್ಠ ಅಧ್ಯಯನ: ಕಾಗೆ ಮತ್ತು ಕಾಸರಕನಮರ ೨.ಸಾಂಸ್ಕೃತಿಕ ಅಧ್ಯಯನ: ಕೆಲವು ಜನಪದ ಕುಣಿತಗಳು ೩.ರಾಚನಿಕ ಅಧ್ಯಯನ: ನಂಬಿಕೆಗಳು ೪.ಜನಾಂಗೀಯ ಅಧ್ಯಯನ: ತುಳುನಾಡಿನ ನಲ್ಕೆಯವರು ೫.ಸಾಮಾಜಿಕ ಅಧ್ಯಯನ: ತುಳು ಜನಪದ ಸಾಹಿತ್ಯದಲ್ಲಿ ಹೆಣ್ಣು ೬.ವೈಜ್ಞಾನಿಕ ಅಧ್ಯಯನ: ಮಾಂತ್ರಿಕ-ಧಾರ್ಮಿಕ ಜನಪದ ವೈದ್ಯ ೭.ಜಾನಪದೀಯ ಅಧ್ಯಯನ: ಕುಲೆಯ ಆರಾಧನೆ. ಕೆ. ಚಿನ್ನಪ್ಪಗೌಡ ಅವರ ಮುನ್ನುಡಿ ಇದೆ.

೧೦೫೦. ಜಾನಪದ ಸ್ವರೂಪ

ಲೇ: ಹಾ.ಮಾ.ನಾಯಕ; ಪ್ರ: ತ.ವೆಂ. ಸ್ಮಾರಕ ಗ್ರಂಥಮಾಲೆ, ಗೋಕುಲಂ ಮೂರನೆಯ ಹಂತ, ಮೈಸೂರು-೫೭೦ ೦೦೨; ಮು.ಗಳು: ೧೯೭೧, ೧೯೭೫, ೧೯೭೮, ೧೯೮೨, ೧೯೮೮, ೧೯೯೦, ೧೯೯೩, ೧೯೯೬, ೧೯೯೮, ೧೯೯೯, ೨೦೦೧, ೨೦೦೩; ಪುಟ ೮೦; ಡಿಮ್ಮೈ ೧/೧೨

ನಾಲ್ಕು ಲೇಖನಗಳ ಸಂಕಲನ: ೧.ವಿಲಿಯಂ ಥಾಂಸ್ ಮತ್ತು ಜಾನಪದ ೨.ಜನಪದ ಸಾಹಿತ್ಯ, ಅದರ ಸ್ವರೂಪ ೩.ಜಾನಪದ ಅಧ್ಯಯನ-ವೈಜ್ಞಾನಿಕ ದೃಷ್ಟಿ ೪.ಜನಪದ ಕಲೆ – ಒಂದು ನೋಟ.

೧೦೫೧. ಜಾನಪದ ಹಟ್ಟಿ

ಲೇ: ಜಯಲಕ್ಷ್ಮೀ ಸೀತಾಪುರ; ಪ್ರ: ತಳಗವಾದಿ ಪ್ರಕಾಶನ, ಮೈಸೂರು; ಮೊ.ಮು: ೧೯೯೮, ಪುಟ: ೧೦+ ೧೭೨= ೧೮೨, ಕ್ರೌನ್ ೧/೮

ಇದು ಹನ್ನೆರಡು ಸಂಶೋಧನ ಲೇಖನಗಳ ಸಂಕಲನ: ೧.ಜನಪದ ಸಾಹಿತ್ಯದಲ್ಲಿ ಹಾಸ್ಯ ೨.ಜನಪದ ಗೀತ ಮಾಧ್ಯಮದಲ್ಲಿ ಜನಸಂಖ್ಯಾ ನಿಯಂತ್ರಣ ೩.ವ್ಯವಸಾಯ ಉಪಕರಣಗಳು (ಸಾಧನ ಸಲಕರಣಗಳು) ೪.ಮಂಡ್ಯ ಜಿಲ್ಲೆಯ ಕೆಲವು ವಿಶಿಷ್ಟ ಜನಪದ ಕಲೆಗಳು ೫.ಜನಪದ ಆಹಾರ ಪಾನೀಯಗಳು ಹಾಗೂ ನಂಬಿಕೆ, ಆಚರಣೆ, ಸಂಪ್ರದಾಯ ೬.ಒಗಟು-ಬದುಕು ೭.ಗ್ರಾಮದೇವತೆ ಹಬ್ಬ ಮತ್ತು ಆಚರಣೆ ೮.ಕುರುದ್ವೀಪದ ಹವ್ಯಕ ಬ್ರಾಹ್ಮಣರು ೯.ಗೊರೂರರ ಹಳ್ಳಿಯ ಹಾಡುಗಳು ೧೦.ಜಗತ್ತಿನ ಜನಪದ ಕತೆಗಳು: ಅವುಗಳ ಸೂತ್ರ ಮತ್ತು ಆಶಯ ೧೧.ಜನಪದ ಸಾಹಿತ್ಯದಲ್ಲಿ ಶೃಂಗಾರ ೧೨.ಮಾನವ ಮತ್ತು ಚಿನ್ನ ಬೆಳ್ಳಿ.

೧೦೪೨. ಜಾನಪದ ಹಬ್ಬಗಳು ಮತ್ತು ಉತ್ಸವಗಳು

ಲೇ: ಹನುಮಂತರಾವ್ ಬಿ.ದೊಡ್ಡಮನಿ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೫೬೦೦೧೮ ಮೊ.ಮು: ೨೦೦೪; ಪು: ೬+೬೪=೭೦; ಡೆಮ್ಮೈ ೧/೮

೭ ಹಬ್ಬಗಳು ಮತ್ತು ೭ ಉತ್ಸವಗಳನ್ನು ಕುರಿತ ಲೇಖಗಳಿವೆ. ಹಬ್ಬಗಳು: ಯುಗಾದಿ, ಕಾರಹುಣ್ಣಿಮೆ, ನಾಗರ ಪಂಚಮಿ, ವಿಜಯದಶಮಿ, ದೀಪಾವಳಿ, ಸಂಕ್ರಾಂತಿ, ರಮ್‌ಜಾನ್, **ಉತ್ಸವಗಳು:** ಶಿವಯೋಗಿ ಸಿದ್ದರಾಮೇಶ್ವರ ಜಾತ್ರೋತ್ಸವ ಮುಲ್ಲಾಬಾದ, ಶ್ರೀಮಲ್ಲಿಕಾರ್ಜುನ ಜಾತ್ರೋತ್ಸವ ಆನೂರ, ಶ್ರೀ ಕಾಳಿಂಗೇಶ್ವರ ಉತ್ಸವ ಇಂಗಳಿಗಿ (ಟಿ), ಜೈ ಹನುಮಾನ ಉತ್ಸವ ಮಾತೋಳಿ, ಶ್ರೀ ಚಂದ್ರಗಿರಿ ಉತ್ಸವ ಮಲ್ಲಾಬಾದ, ಶ್ರೀ ಲಿಂಗರಾಯ ಪಲ್ಲಕ್ಕಿ ಉತ್ಸವ ಮುಲ್ಲಾಬಾದ.

೧೦೪೩. ಜಾನಪದ–ಜೀವನ–ಸಂವಾದ

ಲೇ: ಮಹಾಲಿಂಗ ಮಂಗಿ; ಪ್ರ: ಶ್ರೀಭುವನೇಶ್ವರಿ ಪ್ರಕಾಶನಗ, ಘಟಪ್ರಭಾ, ಗೋಕಾಕ ತಾಲ್ಲೂಕು; ಮಪಮು: ೧೯೯೫; ಪು: ೧೨+೭೬=೮೮; ಕ್ರೌನ್ ೧/೮

ಆಯ್ದ ಪ್ರಬಂಧಗಳು ಎಂಬ ಅಡಿಬರಹ ಇದೆ. ಎಂಟು ಲೇಖನಗಳಿವೆ. ೧.ಕರ್ನಾಟಕ ರುದ್ರವಾದ್ಯ–ಕರಡಿ ಮದಾಲಸಿಗಳು ೨.ಕರುನಾಡ ಕುರುಬರ ಅಪೂರ್ವ ಕುಣಿತ ಕಲೆ–"ದಟ್ಟೀ ಆಟ" ೩.ಹಿಂದುಗಳು ಆಚರಿಸುವ ಮುಸ್ಲಿಂ ಹಬ್ಬ "ಮೊಹರಂ" ೪.ಉತ್ತರ ಕರ್ನಾಟಕದ ವೀರಗಾಸೆ ಕುಣಿತ ಕಲೆ–ಕರ್ಬಲ ೫.ಗೋಕಾಕದ ಜೀವಂತ ಕಲೆ–ಜಿನಗಾರಿಕೆ ೬.ಪುರಾತನ ಪರಂಪರೆಯ ಅಪರೂಪದ ಬಹುರೂಪಿ–ಬಯಲು ಕಲಾವಿದರು ೭.ಬಯಲಾಟಗಳು: ಅಂದು–ಇಂದು ೮.ಹಿಂದು–ಮುಸಲಿಂ ಧರ್ಮ ಸಮನ್ವಯದ ಪ್ರತೀಕ–ಸಾವಳಗಿಯ ಜಗದ್ಗುರು ಶ್ರೀ ಶಿವಲಿಂಗೇಶ್ವರ ಸಿದ್ಧ ಸಂಸ್ಥಾನಮಠ! ಸಿದ್ದಣ್ಣ ಜಕಬಾಳ ಅವರ ಮುನ್ನುಡಿ ಇದೆ.

೧೦೪೪. ಜಾನಪದ–ದೇಶಿ: ಸಿದ್ಧಾಂತ ಮತ್ತು ಪ್ರಯೋಗ (ಸಂಪುಟ ೧)

ಲೇ: ಹಿ.ಶಿ. ರಾಮಚಂದ್ರೇಗೌಡ; ಪ್ರ: ವಿಜಯಲಕ್ಷ್ಮಿ ಪ್ರಕಾಶನ, ೬೫೭, ಕೂಗುಬಂಡೆರಸ್ತೆ, ಇ ಮತ್ತು ಎಫ್ ಬ್ಲಾಕ್, ಕುವೆಂಪುನಗರ, ಮೈಸೂರು–೨೩; ಮೊ.ಮು. ೨೦೦೮; ಪುಟ ೧೦+೪೪೪=೪೫೪; ಡೆಮ್ಮೈ ೧/೮

ಎರಡು ಭಾಗಗಳಲ್ಲಿರುವ ೩೨ ಅಧ್ಯಾಯಗಳು: **ಭಾಗ ಒಂದು: ಅರಿವು:** ೧.೧.ದೇಶಿ ಎಂಬ ನೆಲೆ ೧.೨.ದೇಶಿ ಎಂಬ ಅರಿವು ೧.೩.ದೇಶಿ ಎಂಬ ವಾದ ದೇಶಿವಾದ ಮತ್ತು ಕರ್ನಾಟಕ ಜಾನಪದ ೧.೪.ದೇಶಿ ಎಂಬ ಪ್ರಯೋಗ ೧.೫.ದೇಶಿ ಎಂಬ ಸ್ಥಿರತೆ–ಚಲನೆ. **ಭಾಗ ಎರಡು: ಪ್ರಯೋಗ:** ೧.ಬಾಂಬು, ಹೆಣ್ಣು, ಜಾನಪದ ೨.ಕುವೆಂಪು:

ಜಾನಪದ ದೃಷ್ಟಿ-ಸೃಷ್ಟಿ ೩.ಗಮಕ ಮತ್ತು ಬಯಲಾಟದ ಹಾಡುಗಾರಿಕೆ ೪.ಬಯಲಾಟದ ಸಾಹಿತ್ಯ ನಿರ್ಮಾಣ ೫.ಜನಪದ ಇತಿಹಾಸ ಕುರಿತು ೬.ಜನಪದ ನಂಬಿಕೆಗಳು ಮತ್ತು ಆಚರಣೆಗಳು: ಸಾಹಿತ್ಯದ ಸಂದರ್ಭದಲ್ಲಿ ೭.ಕಾರಂತರು ಮತ್ತು ಜಾನಪದ ೮.ಕಂಬಾರರು ಮತ್ತು ಜಾನಪದ ೯.ಜಾನಪದ ಉಡುಗೆ-ತೊಡುಗೆಗಳು ೧೦.ಕೇರಳ ಜನಪದ ರಂಗಭೂಮಿ ೧೧.ಯಕ್ಷಗಾನವೂ ಪರಂಪರೆಯೂ ೧೨.ಮೂಡಲಪಾಯ ಯಕ್ಷಗಾನ ಚಿಂತನೆ ೧೩.ಕನ್ನಡ ಜನಪದ ನೃತ್ಯನಾಟಕಗಳ ಸಾಹಿತ್ಯ ೧೪.ಬಯಲಾಟಕ್ಕೆ ಸಾಂಸ್ಕೃತಿಕ ಬಂಧನ ೧೫.ಒಂದು ಅಭಿನಯ ಕಲೆ ಮತ್ತು ಅದರ ಅರ್ಥ ೧೬.'ಶ್ರೀ' ಯವರ ಜಾನಪದೀಯತೆ ೧೭.ಜನಪದ ಕುಣಿತಗಳು ಮತ್ತು ಜನರಂಜನೆ ೧೮.ಬಯಲಾಟದ ಅಲಂಕರಣ ೧೯.ಮಲೆಯ ಮಾದೇಶ್ವರ: ಸಾಂಸ್ಕೃತಿಕ ಪುಂಡ ೨೦.ಕಥನ ಗೀತೆಯ ಕಥೆ ೨೧.ಹನುಮನಾಯಕ ಯಾರಿವನು? ೨೨.ಕಥೆಯದೇ ಅರ್ಥ ೨೩.ಪುರಾಣದ ಅಂತರಂಗ ೨೪.ಕುಮಾರವ್ಯಾಸನೊಳಗೆ ಜಾನಪದ ಪರಂಪರೆ ೨೫.ಬಯಲಾಟದ ಪ್ರಾರ್ಥನಾ ನೃತ್ಯಗಳು ೨೬.ಜನಪದ ಸಂಸ್ಕೃತಿಯಲ್ಲಿ ಹೆಣ್ಣು ೨೭.ಕನ್ನಡ ಜನಪದ ಕಥೆ: ವಿಶಿಷ್ಟ ಮತ್ತು ಪ್ರಾದೇಶಿಕ ವರ್ಗ.

೧೦೪೫. ಜಾನಪದ-ದೇಶಿ: ಸಿದ್ಧಾಂತ ಮತ್ತು ಪ್ರಯೋಗ (ಸಂಪುಟ೨)

ಲೇ: ಹಿ.ಶಿ. ರಾಮಚಂದ್ರೇಗೌಡ; ಪ್ರ: ವಿಜಯಲಕ್ಷ್ಮಿ ಪ್ರಕಾಶನ, ೬೫೭, ಕೂಗುಬಂಡೆ ರಸ್ತೆ, ಇ. ಮತ್ತು ಎಫ್ ಬ್ಲಾಕ್, ಕುವೆಂಪು ನಗರ, ಮೈಸೂರು-೨೩; ಮೊ.ಮು: ೨೦೦೮; ಪು: ೧೦+೪೭೩=೪೮೩; ಡಿಮ್ಮೈ ೧/೮

೪೨ಲೇಖನಗಳ ಸಂಕಲನ: ೧.ಜಾನಪದದಲ್ಲಿ ನಿಸರ್ಗದ ಪ್ರಶ್ನೆ ೨.ಸಮಾಜವಾದಿ ದೃಷ್ಟಿಯಲ್ಲಿ ಜಾನಪದ ೩.ಜನಪದ ಮಹಾಕಾವ್ಯದ ಆಶಯವಾಗಿ ಯುದ್ಧ ೪.ದಕ್ಷಿಣ ಕರ್ನಾಟಕ ಜನಪದ ಕಲೆಗಳ ಹಿನ್ನೆಲೆ ಮತ್ತು ಒಳನೋಟ ೫.ಮೌಖಿಕ ಇತಿಹಾಸ ಮತ್ತು ಜಾನಪದ ೬.ಕರ್ನಾಟಕ ಜಾನಪದದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಪರಿಕಲ್ಪನೆ ೭.ಸತ್ತಂತಿಹರನು ಬಡಿದೆಚ್ಚರಿಸು ೮.ಯಕ್ಷಗಾನ: ನಮ್ಮ ಮುಂದಿನ ದೃಷ್ಟಿ ೯.ಕನ್ನಡ ಜನಪದ ಕಥಾವರ್ಗಗಳ ಪ್ರಸ್ತುತತೆ ೧೦.ಕತೆ ಮತ್ತು ವಕ್ತೃವಿನ ಮಾಪಿತೃ ಚಿಂತನೆ ೧೧.ವಡಕ್ಕಾನ್ ಪಾಟ್ಟು ೧೨.ನಮ್ಮ ಹಣತೆಗಳೇಕೆ ಉರಿಯುತ್ತಿಲ್ಲ ೧೩.ತಾವಿನಿಂದ ೧೪.ಪುರದಪುಣ್ಯ ೧೫.ಬಹುಸಂಸ್ಕೃತಿಯ ಚಿಂತನ ನೆಲೆಗಳು ೧೬.ಅಲೆಮಾರಿಗಳ ಇರವು ಮತ್ತು ಅರಿವು ೧೭.ಜನಪದ ನಾಯಕತ್ವ ೧೮.ಜನರಿಗಾಗಿ ಪಾನೀಯ ೧೯.ನಮ್ಮ ಮನೆಯೊಳಗೆ ಜ್ಞಾನದ ಸದ್ದು ಕೇಳುತ್ತಿದೆ ೨೦.ನೋವು ಆದಾಗ 'ಅಮ್ಮಾ' ೨೧.ಒಂದೆ ಚಿತ್ತದಿಂದ ನೆನೆದು ೨೨.ಜಾನಪದ, ನಮ್ಮೊಳಗೇ ಇದೆ ೨೩.ನೀವೇನ ಹೇಳುವಿರಿ ೨೪.ದೇವರೆ....!!! ನಮಗೊಂದು ಒಳ್ಳೆಯ ಮನಸ್ಸು ಕೊಡು ೨೫.ಆದಿ ದಿನೋತ್ಸವ ೨೬.ಜನಪದ ಸಾಹಿತ್ಯ, ಜನಪರ ಆಶಯ ೨೭.ಪರಿಸರ ಜಾನಪದ ೨೮.ಸ್ಥಳೀಯ ಸಂಸ್ಕೃತ ಪರಿಕಲ್ಪನೆ ಮತ್ತು ಸ್ವರೂಪ ೨೯.ಬುಡಕಟ್ಟು ಚಿಂತನೆ; ತಿರುವಿನಲ್ಲಿ ೩೦.ಶಿಷ್ಟ

ಕರ್ನಾಟಕದಿಂದ ಜನಪದ ಕರ್ನಾಟಕದ ಕಡೆಗೆ ೩೧.ದೆವ್ವ, ನಮ್ಮದೆ ಒಂದು ವ್ಯಕ್ತಿತ್ವ ೩೨.ಒಲೆ ಮೊಸಳಿ–ಪುನರ್ ಚಿಂತನೆ ೩೩.ಕಲೆಯ ನೆಲೆಯಲ್ಲಿ ೩೪.ಜಾನಪದ ೧೯೯೯ ೩೫.ಸಸ್ಯದೊಳಗೆ ನಾನು ೩೬.ಕರ್ನಾಟಕವೆಂಬ ಆಕಾಶ ೨೭.ಜನಪರ ಚಳವಳಿಗಳು ಸಾಹಿತ್ಯ ೩೮.ನಮ್ಮನೆ ನೆನೆಕೊ ೩೯.ಕರ್ನಾಟಕದ ಬಯಲಾಟಗಳು; ಪ್ರಾದೇಶಿಕ ವೈಶಿಷ್ಟ್ಯ ೪೦.ದಕ್ಷಿಣ ಕರ್ನಾಟಕದ ಜಾನಪದ ಆಹಾರ ೪೧.ಬಡಗರು ೪೨.ನಮ್ಮ ಜನಪದ ಕತೆಗಳು

೧೦೪೬. ಜಾನಪದ–ವ್ಯಕ್ತಿ ಮತ್ತು ವಿಚಾರ

ಲೇ: ಹಿ.ಶಿ.ರಾಮಚಂದ್ರೇಗೌಡ; ಪ್ರ: ಮಾನವಿ ಪ್ರಕಾಶನ, ಟಿ.೮, ಮಾನಸಗಂಗೋತ್ರಿ, ಮೈಸೂರು–೬; ಮೊ.ಮು.೧೯೮೨; ಪುಟ ೯+೨೪೯=೨೫೮; ಕ್ರೌನ್ ೧/೮

ಮೂರು ಭಾಗಗಳಲ್ಲಿ ೧೭ ಲೇಖನಗಳಿವೆ. **ಭಾಗ ಒಂದು:** ೧.ಕುವೆಂಪು ಮತ್ತು ಜಾನಪದ ೨.ಕಾರಂತರು ಮತ್ತು ಜಾನಪದ ೩.ಕಂಬಾರರು ಮತ್ತು ಜಾನಪದ ೪.ಮೈಸೂರು ವಿ.ವಿ. ಮತ್ತು ಜಾನಪದ. **ಭಾಗ ಎರಡು:** ೫.ಜನಪದ ಉಡುಗೆ–ತೊಡುಗೆಗಳು ೬.ಜಾನಪದ ಕ್ರಿಯಾಶೀಲವಾದುದೆ? ೭.'ಒಲೆಮೊಸಳಿ'–ಒಂದು ಅಧ್ಯಯನ ೮.ಕಣ್ಮರೆಯಾಗುತ್ತಿರುವ ಜನಪದ ಕಥೆಗಳು ೯.ಜಾನಪದದಲ್ಲಿ ಪ್ರತಿನಾಯಕ ಕಲ್ಪನೆ ೧೦.ಜನಪದರು ಅನಾಗರೀಕರೆ? ೧೧.ಕನ್ನಡ ಜನಪದ ಕಥೆಗಳ ವರ್ಗ ಕಲ್ಪನೆ ೧೨.ಜನಪದ–ಕಥೆ–ನಾಯಕ ೧೩.ಬಲ್ಲಂಥ ಜಾಣ ಬಿಡಿಸ್ಹೇಳೊ! **ಭಾಗ ಮೂರು:** ೧೪.ಕೇರಳದ ಜಾನಪದ ರಂಗಭೂಮಿ ೧೫.ಯಕ್ಷಗಾನವೂ ಪರಂಪರೆಯೂ ೧೬.ಮೂಡಲಪಾಯ 'ಯಕ್ಷಗಾನ' ಚಿಂತನೆ ೧೭.ಕನ್ನಡ ಜನಪದ ನೃತ್ಯನಾಟಕಗಳ ಸಾಹಿತ್ಯ.

೧೦೪೭. ಜಾನಪದ–ಶಿಷ್ಟಪದ

ಲೇ: ಡಿ.ಕೆ. ರಾಜೇಂದ್ರ; ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು; ಮೊ.ಮು. ೨೦೦೩; ಪುಟ ೯+೩೫೦=೩೫೯; ಡಿಮೈ ೧/೮

೨೩ ಲೇಖನಗಳನ್ನು ಒಳಗೊಂಡ ಈ ಗ್ರಂಥದಲ್ಲಿ ಜಾನಪದಕ್ಕೆ ಸಂಬಂಧಿಸಿದ ೧೪ ಲೇಖನಗಳಿವೆ: ೧.ಜನಪದ ಕಥೆಗಳು: ಒಂದು ವಿಶ್ಲೇಷಣೆ ೨.ಕರಪಾಲ ಮೇಳ ೩.ದಕ್ಷಿಣ ಕರ್ನಾಟಕದ ಬುಡಕಟ್ಟುಗಳು ೪.ದಕ್ಷಿಣ ಕರ್ನಾಟಕದ ಜನಪದ ಚಿತ್ರಕಲೆಯ ವೈಶಿಷ್ಟ್ಯ ೫.ಪದವವೆ ನಮ್ಮ ಎದೆಯಲ್ಲಿ –ಹಾಡ್ಗತೆಗಳು ೬.ಪಾರ್ತಿಸುಬ್ಬನ ಯಕ್ಷಗಾನ: ವಸ್ತು–ವಿನ್ಯಾಸ ೭.ಕರ್ನಾಟಕ ವೃತ್ತಿಗಾಯಕ ಸಂಶೋಧನೆ ಹಾಗೂ ಜೀಶಂಪ ೮.ಕರ್ನಾಟಕದಲ್ಲಿ ಜಾನಪದ ಪತ್ರಿಕೆಗಳು ೯.ಮಾಟ–ಮಂತ್ರ–ಮೋಡಿ ೧೦.ಗ್ರಾಮೀಣ ಜಾನಪದ ೧೧.ಚಾಮಾಯಿ ೧೨.ಜಾನಪದ ಸೋಪಾನ ೧೩.ಮಲೆನಾಡು ಶೈವ ಒಕ್ಕಲಿಗರು ೧೪.ಶ್ರೀರಾಮಾಯಣ ದರ್ಶನಂ ಮತ್ತು ಜಾನಪದ ರಾಮಾಯಣಗಳು. ಮಲ್ಲೇಪುರಂ ಜಿ. ವೆಂಕಟೇಶ್ ಅವರ ಅಕ್ಷರ ಸೂರ್ಯನಿಗೆ ನಮನ ಎಂಬ ಮುನ್ನುಡಿ ಇದೆ.

೧೦೪೮. ಜಾನಪದ: ಕೆಲವು ಅಧ್ಯಯನಗಳು

ಲೇ: ಅಂಬಳಿಕೆ ಹಿರಿಯಣ್ಣ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ನೃಪತುಂಗರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು. ೧೯೯೪; ಪುಟ ೧೨+೧೪೮=೧೬೦; ಡಿಮ್ಮೈ ೧/೮

ಏಳು ಲೇಖನಗಳ ಸಂಕಲನ: ೧.ದಕ್ಷಿಣ ಕರ್ನಾಟಕದ ಪ್ರಾಣಿ ವಸತಿ ೨.ಪ್ರಾಣಿವೈದ್ಯ ೩.ಜನಪದ ಆಟಗಳು: ಪ್ರಾಚೀನತೆ ಮತ್ತು ಪರಂಪರೆ ೪.ಜನಪದ ಸಾಹಿತ್ಯದಲ್ಲಿ ನಿಸರ್ಗ ಗ್ರಹಿಕೆಯ ವಿಧಾನ ೫.ಬುಡಕಟ್ಟು ಜನರ ಬದಲಾಗುತ್ತಿರುವ ಆರ್ಥಿಕ ಜೀವನ ೬.ಜಾನಪದ ಮತ್ತು ಚಲನಶೀಲತೆ ೭.ಪಾಶ್ಚಾತ್ಯ ಜಾನಪದ ಸಿದ್ಧಾಂತಗಳು ಮತ್ತು ದೇಶೀಯವಾದ. ಜೀ.ಶಂ. ಪರಮಶಿವಯ್ಯ ಅವರ ಪ್ರಧಾನ ಸಂಪಾದಕರ ಮಾತು ಇದೆ.

೧೦೪೯. ಜಾನಪದ: ಕೆಲವು ಗ್ರಹಿಕೆಗಳು

ಲೇ: ಡಿ.ಕೆ .ರಾಜೇಂದ್ರ; ಪ್ರ: ಚೇತನ ಬುಕ್ ಹೌಸ್, ಮೈಸೂರು; ಮೊ.ಮು. ೧೯೯೬; ಪುಟ ೪+೧೯೨=೧೯೬; ಕ್ರೌನ್ ೧/೮

ಹನ್ನೊಂದು ಲೇಖನಗಳ ಸಂಕಲನ: ೧.ಬಯಲಾಟದ ಪ್ರಾಚೀನತೆ: ಮರು ಚಿಂತನೆ ೨.ಜಾನಪದ ಮುನ್ನೋಟ ೩.ಜನಪದ ಕಥೆ: ಸಾಮಾಜಿಕ ನೋಟ ೪.ಪ್ರಾಚೀನ ಗದ್ಯ ಗ್ರಂಥಗಳಲ್ಲಿ ಜಾನಪದ ಅಂಶಗಳು ೫.ಜನಪದ ಸಾಹಿತ್ಯದಲ್ಲಿ ನವರಾತ್ರಿ ೬.ಪಾರ್ತಿಸುಬ್ಬನ ಯಕ್ಷಗಾನ: ವಸ್ತು-ವಿನ್ಯಾಸ ೭.ಕರ್ನಾಟಕ ವೃತ್ತಿಗಾಯಕ ಸಂಶೋಧನೆ ಹಾಗೂ ಜೀಶಂಪ ೮.ಪ್ರದರ್ಶನಾತ್ಮಕ ಜನಪದ ಕಲೆಗಳ ಸಾಂಸ್ಕೃತಿಕ ಮತ್ತು ವೈಚಾರಿಕ ಹಿನ್ನೆಲೆ ೯.ಕರ್ನಾಟಕದಲ್ಲಿ ಜಾನಪದ ಪತ್ರಿಕೆಗಳು ೧೦.ಮಕ್ಕಳ ಜನಪದ ಸಾಹಿತ್ಯ -ಸ್ವರೂಪ, ಲಕ್ಷಣ -ವೈಶಿಷ್ಟ್ಯ ೧೧.ಕನ್ನಡ ಜನಪದ ಗೀತೆಗಳು.

೧೦೫೦. ಜಾನಪದ: ಕೆಲವು ಮುಖಗಳು (ಜನಪದ ಬರಹ ಸಂಪುಟ-೨)

ಲೇ: ಜೀ.ಶಂ. ಪರಮಶಿವಯ್ಯ; ಪ್ರ: ಸಾಗರ್ ಪ್ರಕಾಶನ, ೬೯೫, ೧೦ನೇ ಮುಖ್ಯರಸ್ತೆ, ೮೦ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦ ೦೭೨; ಸಮಗ್ರ ಮೊ.ಮು: ೨೦೧೨; ಪು: ೫೮೪; ಡಿಮ್ಮೈ ೧/೮

ಇದು ಮೂರು ಗರಂಥಗಳ ಗುಚ್ಛ: **ಗ್ರಂಥ ಒಂದು: ಜಾನಪದ: ಕೆಲವು ಮುಖಗಳು:** ಇದರಲ್ಲಿ ಮೂರು ಭಾಗಗಳಿವೆ: **ಭಾಗ ಒಂದು: ವಿವೇಚನೆ:** ೧.ಜಾನಪದ ಮತ್ತು ಪೂರಕ ವಿಜ್ಞಾನಗಳು ೨.ಜಾನಪದ ಅಧ್ಯಯನದ ನೆಲೆ-ಬೆಲೆ ೩.ಜನಪದ ಕಥೆ. **ಭಾಗ ಎರಡು: ಪರಿವೀಕ್ಷಣೆ:** ೪.ಕರ್ನಾಟಕದ ಜನಪದ ನೃತ್ಯಗಳು ೫.ಕರ್ನಾಟಕ ತೊಗಲು ಬೊಂಬೆಯಾಟ ೬.ಮೈಸೂರು ನಗರದ ಜಾನಪದ ಸಂಪ್ರದಾಯಗಳು ೭.ಕಡಲ ತಡಿಯ ಜನಪದ ಕಲೆ ೮.ಮಂಡ್ಯ ಜಿಲ್ಲೆಯ ಜನಪದ ಸಾಹಿತ್ಯ ೯.ಜಾನಪದ ವಸ್ತು

ಸಂಗ್ರಹಾಲಯ ೧೦.ಕಾರಂತರು: ಯಕ್ಷಗಾನ ಬಯಲಾಟ ೧೧.ತಮಿಳುನಾಡಿನ ಜನಪದ ಕಲೆ. **ಭಾಗ ಮೂರು: ಸಮೀಕ್ಷೆ: ನಮ್ಮ ಜಾನಪದ ಅಧ್ಯಯನ:** ೧.ಸ್ವಾತಂತ್ರ್ಯಪೂರ್ವ ೨.ಸ್ವಾತಂತ್ರ್ಯೋತ್ತರ ೩.ಹೊಸ ತಿರುವು. **ಗ್ರಂಥ ಎರಡು: ಜನಪದ ಕಲಾವಿಹಾರ:** ಇದರಲ್ಲಿ ಹದಿನಾರು ಲೇಖನಗಳಿವೆ: ೧.ಕರ್ನಾಟಕ ಜಾನಪದ ಮತ್ತು ಸಾಂಪ್ರದಾಯಿಕ ಕಲೆಗಳು ೨.ಜನಪದ ಕಲಾತ್ಮಕ ರೂಪಗಳು ೩.ಜನಪದ ಕಲೆ–ಶಿಲ್ಪಕಲೆ ೪.ಮನೆಬಳಕೆಯ ವಸ್ತುಗಳಲ್ಲಿ ಕಲಾತ್ಮಕತೆ ೫.ಗ್ರಾಮೀಣ ದೇಗುಲಗಳ ಭಿತ್ತಿ ಮೂರ್ತಿಗಳು ೬.ಕಣ್ಮರೆಯಾದ ಕೀಲುಗೊಂಬೆಯಾಟ ೭.ಮೂಡಲಪಾಯ–ಕೆಲವು ವಿಚಾರಗಳು ೮.ಘಟ್ಟದ ಕೋರೆ–ಒಂದು ವಿಶಿಷ್ಟ ಯಕ್ಷಗಾನ ಕಲೆ ೯.ಕಾವ್ಯಕಲೆಯ ಚಾರಣರು ೧೦.ಜನಪದ ಕಲೆಗಳು–ಒಂದು ಆನ್ವಯಿಕ ದೃಷ್ಟಿ ೧೧.ಕರ್ನಾಟಕದ ಜನಪದ ವಾದ್ಯಗಳು ೧೨.ಗಾದೆಗಳು ೧೩.ಹನುಮ ೧೪.ಗೊರೂರರು ೧೫.ಗೋಲ್ಡನ್ ಬೋ ಮತ್ತು ಕಲೇವಾಲ ೧೬.ಆದಿವಾಸಿ ಜಾನಪದ. ಮಿಂಚಿನ ಬಳ್ಳಿ ಪ್ರಕಾಶನದ ಎಂ.ಎಂ. ಜೋಷಿ, ಅನಂತ ತಡಸ, ಸುರೇಂದ್ರ ಬಾನಿ, ಅವರುಗಳ ಮತ್ತೆ ಕುಡಿಯೊಡೆಯಿತು ಎಂಬ ಮುನ್ನುಡಿ, ಲೇಖಕರ ಪ್ರಸ್ತಾವನೆ, ಇವೆ. **ಗ್ರಂಥ ಮೂರು: ತಮಿಳು ನಾಡಿನ ಜನಪದ:** ಇದು ಎಂಟು ಲೇಖನಗಳ ಸಂಕಲನ: ೧.ಪ್ರದೇಶ ಹಾಗೂ ಜನತೆ ೨.ಐತಿಹ್ಯಗಳು ಮತ್ತು ಪುರಾಣಗಳು ೩.ಧರ್ಮ ಮತ್ತು ಮಂತ್ರವಿದ್ಯೆ ೪.ಸಂಪ್ರದಾಯಗಳು ಮತ್ತು ಸಾಹಿತ್ಯ ೭.ಜಾನಪದ ಸಂಗೀತ ಮತ್ತು ನೃತ್ಯ ೮.ಜಾನಪದ ನಾಟಕಗಳು ಮತ್ತು ಜಾನಪದ ಮನರಂಜನೆಗಳು. ಅನುಬಂಧದಲ್ಲಿ, ಮೌಖಿಕ ಸಾಹಿತ್ಯದಿಂದ ಆಯ್ದ ಭಾಗಗಳು, ಅರ್ಥಕೋಶ, ಇವೆ. ಮೌನದೊಳಗಿನ ಮಹತ್ವ ಎಂಬ ಚಕ್ಕೆರೆ ಶಿವಶಂಕರ್ ಅವರ ಪ್ರಧಾನ ಸಂಪಾದಕರ ಮಾತು ಇದೆ.

೧೦೫೧. ಜಾನಪದ: ಕೆಲವು ಮುಖಗಳು

ಲೇ: ಜೀ.ಶಂ. ಪರಮಶಿವಯ್ಯ; ಪ್ರ: ಚೇತನ ಬುಕ್ ಹೌಸ್, ಮೈಸೂರು; ಮೊ.ಮು. ನಮೂದು ಇಲ್ಲ; ೧೯೯೬; ಪುಟ ೮+೨೪೪=೨೫೨; ಕ್ರೌನ್ ೧/೮

ಮೂರು ಭಾಗಗಳಾಗಿ ವಿಂಗಡಿಸಲ್ಪಟ್ಟಿರುವ ೧೪ ಲೇಖನಗಳಿವೆ: **ಭಾಗ ಒಂದು: ವಿವೇಚನೆ:** ೧.ಜಾನಪದ ಮತ್ತು ಪೂರಕ ವಿಜ್ಞಾನಗಳು ೨.ಜಾನಪದ ಅಧ್ಯಯನ ನೆಲೆ–ಬೆಲೆ ೩.ಜನಪದ ಕಥೆ. **ಭಾಗ ಎರಡು: ಪರಿವೀಕ್ಷಣೆ:** ೪.ಕರ್ನಾಟಕದ ಜನಪದ ನೃತ್ಯಗಳು ೫.ಕರ್ನಾಟಕ ತೊಗಲು ಬೊಂಬೆಯಾಟ ೬.ಮೈಸೂರು ನಗರದ ಜಾನಪದ ಸಂಪ್ರದಾಯಗಳು ೭.ಕಡಲ ತಡಿಯ ಜನಪದ ಕಲೆ ೮.ಮಂಡ್ಯ ಜಿಲ್ಲೆಯ ಜನಪದ ಸಾಹಿತ್ಯ ೯.ಜಾನಪದ ವಸ್ತುಸಂಗ್ರಹಾಲಯ ೧೦.ಕಾರಂತರು: ಯಕ್ಷಗಾನ ಬಯಲಾಟ ೧೧.ತಮಿಳು ನಾಡಿನ ಜನಪದ ಕಲೆ. **ಭಾಗ ಮೂರು: ಸಮೀಕ್ಷೆ: ನಮ್ಮ ಜಾನಪದ ಅಧ್ಯಯನ:** ೧೨.ಸ್ವಾತಂತ್ರ್ಯಪೂರ್ವ ೧೩.ಸ್ವಾತಂತ್ರ್ಯೋತ್ತರ ೧೪.ಹೊಸ ತಿರುವು.

೧೦೫೨. ಜಾನಪದ: ತತ್ತ್ವ ಮತ್ತು ಸತ್ತ್ವ

ಲೇ: ಸಿ.ಪಿ.ಕೆ, : ಪ್ರ: ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೂರನೆಯ ಹಂತ, ಮೈಸೂರು-೨; ಮೊ. ಮು: ೨೦೦೪; ಪು: ೮+೩೦೦=೩೦೮; ಡಿಮ್ಮೈ ೧/೮

೩೮ ಲೇಖನಗಳ ಸಂಕಲನ: ೧.ಜನಪದ ಸಾಹಿತ್ಯ ಸ್ವರೂಪ ೨.ಜನಪದ ಸಾಹಿತ್ಯ: ಕೆಲವು ವಿಚಾರಗಳು ೩.ಗಾದೆ, ಒಗಟು ಮತ್ತು ಒಡಪು ೪.ಜನಪದ ಗೀತೆ ೫.ಜನಪದ ಮಹಾಕಾವ್ಯ ೬.ವೃತ್ತಿ ಜಾನಪದ ೭.ಜಾನಪದ ಮತ್ತು 'ಜಲಪದ' ೮.ಜಾನಪದ ಪ್ರತಿಭೆ: ಒಂದು ಟಿಪ್ಪಣಿ ೯.ಜನಪದ ಕಾವ್ಯದಲ್ಲಿ ಧ್ವನಿ ೧೦.ಕೆಲವು ಹಾಡುಗಳನ್ನು ಕುರಿತು ೧೧.ಕೆಲವು ತ್ರಿಪದಿಗಳ ಸ್ವಾರಸ್ಯ ೧೨.ಜನಪದ ಕವಿತೆಯ ಸೊಗಸು ೧೩.ಒಂದು ಭಾವಗೀತೆ: 'ಮಳೆಯ ಹಾಡು" ೧೪.ಭಾವ ನಾದಿನಿಯರ ಎರಡು ಪ್ರಸಂಗಗಳು ೧೫.ಒಂದು ಕಥನಗೀತೆ: 'ಗರತಿ ಗಂಗವ್ವ' ೧೬.ಚೆಲುವಯ್ಯ-ವರನಂದಿ ೧೭.ಜನಪದ ಕವಿಗಳಲ್ಲಿ ಶಿವಪ್ರಜ್ಞೆ ೧೮.ಜನಪದ ಗೀತೆಗಳಲ್ಲಿ ಶಿವ ೧೯.ಒಂದು ಜನಪದ ಪ್ರಾರ್ಥನೆ ೨೦.ಜಾನಪದ ಸರಸ್ವತಿ ೨೧.ಜನಪದ ಸಾಹಿತ್ಯದ ಒಂದು ಗಡಿಕಲ್ಲು ೨೨.ಜನಪದ ಶೃಂಗಾರ ೨೩.ಜನಪದ ಹಾಸ್ಯ ೨೪.ಜನಪದ ಗೀತೆಗಳಲ್ಲಿ ಸಂಸ್ಕೃತಿ ೨೫.ಜನಪದ ಗೀತೆಗಳಲ್ಲಿ ಮಕ್ಕಳ ಚಿತ್ರಗಳು ೨೬."ಕಂದನ ಕೊಡು ಶಿವನೆ ಬಂಧನ ಪಡಲಾರೆ" ೨೭.ಹೆಣ್ಣು ಸಾಕೆಂದ ಜನುಮಕೆ ೨೮.'ಚಿಕ್ಕೋಳು ಹಿರಿದಿಮ್ಮವ್ವ: ಒಂದು ಕಥನಗೀತೆ ೨೯.ಒಂದು ಪಳೆಯುಳಿಕೆ ೩೦.ಉತ್ತರದೇವಿಯ ಹಾಡು: ಒಂದು ಟಿಪ್ಪಣಿ ೩೧.ಜನಪದ ಕವಿಗಳಲ್ಲಿ ಮೃತ್ಯು ಮತ್ತು ಪ್ರಣಯ ೩೨.ಕೆಲವು ಗೀತ ಸಂಕಲನಗಳು ೩೩.ಗೊಂಡ ಪ್ರೇಮಗೀತೆಗಳ ಬಗೆಗೆ ೩೪.ಗೊಂಡರ ಕಾವ್ಯ ೩೫.ಭಾರತದ ಜನಪದ ಕಥೆಗಳು ೩೬.ಪ್ರಸ್ತಾವನೆ, ಮುನ್ನುಡಿಗಳು ೩೭.ಸ್ವಾತಂತ್ರ್ಯೋತ್ತರ ಜನಪದ ಸಾಹಿತ್ಯ ಸಂಗ್ರಹ ೩೮.ಕನ್ನಡ ಜಾನಪದ ಗ್ರಂಥ ಸೂಚಿ. ಜಿ.ಆರ್. ತಿಪ್ಪೇಸ್ವಾಮಿ ಅವರ ಹಿನ್ನುಡಿ ಇದೆ.

೧೦೫೩. ಜಾನಪದ: ಪ್ರತಿಕ್ರಿಯೆ-ಆನ್ವಯಿಕತೆ-ಅನುಸಂಧಾನ: ಸಂಪುಟ ೩

ಲೇ: ಹಿ.ಶಿ. ರಾಮಚಂದ್ರೇಗೌಡ; ಪ್ರ: ವಿಜಯಲಕ್ಷ್ಮಿ ಪ್ರಕಾಶನ, ೬೫೭, ಕೂಗುಬಂಡೆ ರಸ್ತೆ, ಇ ಮತ್ತು ಎಫ್ ಬ್ಲಾಕ್, ಕುವೆಂಪುನಗರ, ಮೈಸೂರು-೨೩; ಮೊ.ಮು. ೨೦೦೮; ಪುಟ ೧೦+೩೪೪; ಡಿಮ್ಮೈ ೧/೮

೪೬ ಲೇಖನಗಳ ಸಂಕಲನ: ೧.ಜಾನಪದ ಕ್ರಿಯಾಶೀಲವಾದುದೆ? ೨.ಕಣ್ಮರೆಯಾಗುತ್ತಿರುವ ಜಾನಪದ ಕಲೆಗಳು! ೩.ಜಾನಪದದಲ್ಲಿ ಪ್ರತಿನಾಯಕನ ಕಲ್ಪನೆ ೪.ಜನಪದರು ಅನಾಗರಿಕರೇ? ೫.ಕನ್ನಡ ಜನಪದ ಕಥೆಗಳ ವರ್ಗ ಕಲ್ಪನೆ ೬.ಜನಪದ -ಕಥೆ-ನಾಯಕ ೭.ಬಲ್ಲಂಥ ಜಾಣ ಬಿಡಿಸ್ಹೇಳೋ ೮.ಜಾನಪದ ಪರಿಭಾಷೆ ೯.ಜನಪದರು / ಜಾನಪದರು ೧೦.ಜಾನಪದಕ್ಕೆ ಹೊಸಮಾರ್ಗಗಳು? ೧೧.ಒಂದು ವಿನೂತನ ಯೋಜನೆ ಈ ಜಾನಪದ ಲೋಕ ೧೨.ಜಾನಪದ ತಡಕಾಟಕ್ಕೆ ಕೊನೆ ಇದೆಯೆ? ೧೩.ಮೌಖಿಕ ಪರಂಪರೆ / ಜಾನಪದ ಸಂಗ್ರಹ ೧೪.ಜನಪದ ಕಲೆಗಳ ಬಳಕೆ ಎಷ್ಟು ವಾಸ್ತವ?

೧೫.ಆಧುನಿಕ ಜಾನಪದ ೧೬.ಜಾನಪದ ಅಧ್ಯಯನದ ಹೊಸ ಆಯಾಮಗಳು ೧೭.ರಾಜಕೀಯ ಪಕ್ಷ 'ಒಂದು ರಾಷ್ಟ್ರೀಯ ಜನಪದವಾಗಿ' ಮತ್ತು ರಾಷ್ಟ್ರದ ಐಕ್ಯತೆಯ ಪ್ರಶ್ನೆ ೧೮.ಆನ್ವಯಿಕ ಜಾನಪದ ೧೯.ಜಾನಪದದ ಬೆನ್ನುಹತ್ತಿದ ಗ್ಯಾಟ್ ೨೦.ಸಾಕ್ಷರತೆಯಲ್ಲಿ ಜನಪದ ಮತ್ತು ಜನಪದ ಮಾಧ್ಯಮಗಳ ಬಳಕೆ ೨೧.ಜಾನಪದ ಮುಂದಾಲೋಚನೆ ೨೨.ಈ ಜಾನಪದ ಸಮಾವೇಶ ಏಕೆ? ೨೩.ಆಧುನಿಕ ತಂತ್ರಜ್ಞಾನದ ಸಂದರ್ಭದಲ್ಲಿ ಭಾರತದ ಜಾನಪದ ೨೪.ಜಾನಪದ ಮತ್ತು ಚಲನಶೀಲತೆ ೨೫.ಜಾನಪದ ಉತ್ಸವ: ಇವತ್ತಿನ ಅಗತ್ಯತೆ ಏನು? ೨೬.ಶತಶತಮಾನಕ್ಕೂ ಜಾನಪದ ೨೭.ಜಾನಪದವನ್ನು ಉದೇಶಿಸಿ ೨೮.ಆಧುನಿಕ ಸಂದರ್ಭದಲ್ಲಿ ಜನಪದ ದೇವತೆಗಳ ಅನಿವಾರ್ಯತೆ ೨೯.ಮಾನಸಿಕ ಸ್ವಾಸ್ಥ್ಯ ಮತ್ತು ಜನಪದ ಸಂಗೀತ ೩೦.ನಮ್ಮೂರು ೩೧.ಜನಪದ ಕಾವ್ಯ ಮೀಮಾಂಸೆ ೩೨.ಸಿನಿಮಾ ಮತ್ತು ಜಾನಪದ ಪರಿಕಲ್ಪನೆ ೩೩.ನಕಲಿ ಜನಪದ ಗೀತೆಗಳ ಕ್ಯಾಸೆಟ್: ಸಂವಾದ ೩೪.ಜಾನಪದವೆಂಬುದು ಮೆರವಣಿಗೆಯೇ? ೩೫.ಬಹುಮುಖಿ ಸಂಸ್ಕೃತಿ ಉತ್ಸವ: ಏಕೆ–ಹೇಗೆ? ೩೬.ಜಾನಪದ ಜ್ಞಾನ–ವಿಜ್ಞಾನ ಪ್ರಶಸ್ತಿಗಳನ್ನು ಕುರಿತು ೩೭.ಹಚ್ಚೆ: ಕಲೆ ಮತ್ತು ಉದ್ಯೋಗ ಕಮ್ಮಟ ೩೮.ಜಾನಪದ ಸೌಹಾರ್ದ: ಕಾರ್ಯ–ಯೋಜನೆ ೩೯.ಮಹಾಮಾದರಿಗಳ ಸಂದರ್ಭದಲ್ಲಿ ಸ್ವೋಪಜ್ಞತೆಯ ಹುಡುಕಾಟ ೪೦.ಯಾಂತ್ರೀಕರಣ: ಪರಂಪರಾಗತ ವೃತ್ತಿ ಕೌಶಲದ ಪತನ ೪೧.ಗ್ರಿಮ್ ಸಹೋದರರು ೪೨.ಜಾನಪದ ಜಾಗತೀಕರಣ ೪೩.ಕುವೆಂಪು ಜಾಗತೀಕರಣ ೪೪.ಕನಕದಾಸರ ದಾಟು ೪೫.ಜಾಗತೀಕರಣ ಸಂದರ್ಭದಲ್ಲಿ 'ಸಹೃದಯತೆ' ೪೬.ಜನಪದ ಕಲೆಗಳ ಸಂರಕ್ಷಣೆಯ ಅರ್ಥ–ಅನರ್ಥ.

೧೦೫೪. ಜಾನಪದ: ಸಂಶೋಧನಾತ್ಮಕ ಪ್ರಬಂಧಗಳು

ಲೇ: ಮಲ್ಲಿಕಾರ್ಜುನ ಶಿ. ಲಠ್ಠೆ; ಪ್ರ: ಎಸ್.ಬಿ. ಪಾಟೀಲ ದಾಲ ಮಿಲ್, ನೆಹರು ಗಂಜ, ಕಲಬುರಗಿ; ಮೊ.ಮು: ೧೯೮೦; ಪು: ೨+೧೨+೧೨೯=೧೪೩; ಕ್ರೌನ್ ೧/೮

ಎಂಟು ಲೇಖನಗಳ ಸಂಕಲನ: ೧.ಕರ್ನಾಟಕದ ಜನಪದ ಕಲೆಗಳು ೨.ಬೆಳಗಾಂವ ಜಿಲ್ಲೆಯ ಜನಪದ ಕವಿಗಳು ೩.ಬಯಲಾಟದ ವೇಷಭೂಷಣಗಳು ೪.ಜಾನಪದ ನಂಬಿಕೆಗಳು ೫.ಜಾನಪದ ಲೋಕದಲ್ಲಿ ಸಾರಥಿ ೬.ಕವಲೆತ್ತಿನವರು ೭.ಜಾನಪದದಲ್ಲಿ ದೀಪಾವಳಿ ೮.ಜನಪದ ಸಾಹಿತ್ಯದಲ್ಲಿ ಮಕ್ಕಳ ಪೋಷಣೆ

೧೦೫೫. ಜಾನಪದ: ಸಮೀಕ್ಷೆ–ವಿಶ್ಲೇಷಣೆ

ಲೇ: ತೀ.ನಂ.ಶಂಕರನಾರಾಯಣ; ಪ್ರ: ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು–೪೦; ಮೊ.ಮು.೧೯೯೯; ಪು: ೮+೪೭೮=೪೮೬; ಡಿಮ್ಮೆ ೧/೮

೨೭ ಲೇಖನಗಳ ಸಂಕಲನ: ಎರಡು ಭಾಗಗಳಿವೆ: **ಭಾಗ ಒಂದು: ಸಮೀಕ್ಷೆ:** ೧.ಕನ್ನಡ ಜನಪದ ಸಾಹಿತ್ಯಕ್ಕೆ ಬಿ.ಎಂ.ಶ್ರೀ. ಕೊಡುಗೆ ೨.ಕನ್ನಡ ಜನಪದ ಸಾಹಿತ್ಯಕ್ಕೆ ತೀ.ನಂ.ಶ್ರೀ. ಕೊಡುಗೆ ೩.ಮತಿಘಟ್ಟ ಕೃಷ್ಣಮೂರ್ತಿ: ಜೀವನ –ಸಾಧನೆ ೪.ಕನ್ನಡ ಜಾನಪದಕ್ಕೆ

ದೇಜಗೌ ಕೊಡುಗೆ ೫.ಜಾನಪದ ಅಧ್ಯಯನಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕೊಡುಗೆ ೬.ಎಂ.ಚಿದಾನಂದಮೂರ್ತಿ ಅವರ ಸಮಾಜೋ-ಸಾಂಸ್ಕೃತಿಕ ಅಧ್ಯಯನಗಳು ೭.ಜೀ.ಶಂ.ಪ ಅವರೊಡನೆ ಸಂದರ್ಶನ ೮.ಪ್ರೊ.ಎ.ಕೆ.ರಾಮಾನುಜನ್ ಅವರೊಡನೆ ಸಂದರ್ಶನ ೯.ತುಳು ಜಾನಪದಕ್ಕೆ ಪ್ರೊ.ಪೀಟರ್ ಜೆ.ಕ್ಲಾಸ್ ಅವರ ಕೊಡಗೆ ೧೦.ಜಾನಪದ ವಿದ್ವಾಂಸರಾಗಿ ಆಲನ್ ಡಂಡೆಸ್ ಮತ್ತು ಪೀಟರ್ ಕ್ಲಾಸ್ ೧೧.ಕನ್ನಡ ಜಾನಪದಕ್ಕೆ ಚಿತ್ರದುರ್ಗ ಜಿಲ್ಲೆಯ ಕೊಡುಗೆ ೧೨.ಕನ್ನಡ ಜಾನಪದಕ್ಕೆ ತುಮಕೂರು ಜಿಲ್ಲೆಯ ಕೊಡುಗೆ ೧೩.ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ ೧೪.ಎಲ್ವಿನ್ನರ ಗಿರಿಜನ ಪ್ರಪಂಚ ೧೫.ಜನಪದ ವಾದ್ಯಗಳು ೧೬.ನಗರ ಜಾನಪದ-ಆನ್ವಯಿಕ ಜಾನಪದ ೧೭.ಜಾನಪದ ಮುನ್ನೋಟ ೧೮.ಕಂಚೀಪುರದ ಕಂಚೀದೇವರು ೧೯.ಜುಂಜಪ್ಪ ೨೦.ಪರಿಸರ ಮತ್ತು ಜೀವಸಂಕುಲ ೨೧.ಜನಪದ ಸಾಹಿತ್ಯ ಸಂಗ್ರಹಕಾರ್ಯ, ಸಂರಕ್ಷಣೆ ೨೨.ಜನಪದ ಸಂಗ್ರಹಕಾರನ ಸಮಸ್ಯೆಗಳು ೨೩.ಕಾಡುಗೊಲ್ಲರ ನಡುವೆ ೨೪.ಜಾನಪದ ಸಂಪಾದನೆಯ ತೊಡುಕುಗಳು ೨೫.ಮಲೆಯಾಳಂ ಜನಪದ ಸಾಹಿತ್ಯ ೨೬.ಕಾಶ್ಮೀರಿ ಜನಪದ ಸಾಹಿತ್ಯ. **ಭಾಗ ಎರಡು: ವಿಶ್ಲೇಷಣೆ:** ೨೭ ಕೆಟ್ಟ ಕಣ್ಣು (Evil Eye)

೧೦೫೬. ಜಾನಪದ: ಸಾಂಸ್ಕೃತಿಕ ಆಯಾಮಗಳು

ಲೇ: ಹಿ.ಶಿ. ರಾಮಚಂದ್ರೇಗೌಡ; ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮; ಮೊ.ಮು. ೧೯೯೮; ಪುಟ ೧೨+೩೨೦; ಕ್ರೌನ್ ೧/೮

ಹದಿನೈದು ಲೇಖನಗಳ ಸಂಕಲನ: ೧.ಆಧುನಿಕ ಜಾನಪದ ೨.ಕಥನಗೀತೆಯ ಕಥೆ ೩.ಹನುಮನಾಯಕ: ಯಾರಿವನು? ೪.ಜಾನಪದ ಅಧ್ಯಯನದ ಹೊಸ ಆಯಾಮಗಳು ೫.ಕಥೆಯದೇ ಅರ್ಥ ೬.ಪುರಾಣದ ಅಂತರಂಗ ೭.ಕುಮಾರ ವ್ಯಾಸನೊಳಗೆ ಜಾನಪದ ಪರಂಪರೆ ೮.ರಾಜಕೀಯ ಪಕ್ಷ ಒಂದು ರಾಷ್ಟ್ರೀಯ ಜನಪದವಾಗಿ ಮತ್ತು ರಾಷ್ಟ್ರದ ಐಕ್ಯತೆಯ ಪ್ರಶ್ನೆ ೯.ಬಯಲಾಟದ ಪ್ರಾರ್ಥನಾ ನೃತ್ಯಗಳು ೧೦.ಜನಪದ ಸಂಸ್ಕೃತಿಯಲ್ಲಿ ಹೆಣ್ಣು ೧೧.ಕನ್ನಡ ಜನಪದ ಕಥೆ: ವೈಶಿಷ್ಟ್ಯ ಮತ್ತು ಪ್ರಾದೇಶಿಕ ವರ್ಗ ೧೨.ಕರ್ನಾಟಕದ ಬಯಲಾಟಗಳು: ಪ್ರಾದೇಶಿಕ ವೈಶಿಷ್ಟ್ಯ ೧೩.ಆನ್ವಯಿಕ ಜಾನಪದ ೧೪.ದಕ್ಷಿಣ ಕರ್ನಾಟಕದ ಜನಪದ ಆಹಾರ ೧೫.ಬಡಗರು. ನೆಲಮನೆ ಕೆ. ದೇವೇಗೌಡ ಅವರ ಮುನ್ನುಡಿ ಇದೆ.

೧೦೫೭. ಜಾನಪದ: ಸ್ವರೂಪ ಮತ್ತು ಸಾಹಿತ್ಯ

ಲೇ: ಡಿ.ಲಿಂಗಯ್ಯ, ಕೆ.ಆರ್. ಸಂಧ್ಯಾರೆಡ್ಡಿ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮; ಮೊ.ಮು. ೨೦೦೬; ಪುಟ ೮+೨೯೬=೩೦೪; ಡೆಮ್ಮೆ ೧/೮

೧೨ ಅಧ್ಯಾಯಗಳಿವೆ: ೧.ಜಾನಪದ ಸ್ವರೂಪ ೨.ಜಾನಪದ ಪ್ರಕಾರಗಳು ೩.ಐತಿಹ್ಯ ಮತ್ತು ಪುರಾಣ ೪.ಜಾನಪದ ಮತ್ತು ಇತರ ಶಾಸ್ತ್ರಗಳು ೫.ಜನಪದ ಸಾಹಿತ್ಯ ಪ್ರಕಾರಗಳು

೬.ಜನಪದ ರಂಗಭೂಮಿ ೭.ಜನಪದ ಕಲೆ ೮.ಆಧುನಿಕ ಜಾನಪದ ೯.ಜಾನಪದ ವಸ್ತುಸಂಗ್ರಹಾಲಯ ಮತ್ತು ಸಂಘ ಸಂಸ್ಥೆಗಳು ೧೦.ಕನ್ನಡ ಜಾನಪದ ಅಧ್ಯಯನ ನಡೆದು ಬಂದ ದಾರಿ ೧೧.ಕನ್ನಡ ಜಾನಪದ ಅಧ್ಯಯನದ ಮುಂದಿನ ಗೊತ್ತುಗುರಿಗಳು ೧೨.ಕನ್ನಡ ಜನಪದ ಸಾಹಿತ್ಯ. ಅನುಬಂಧದಲ್ಲಿ, ಟಿಪ್ಪಣಿಗಳು, ಸಹಾಯಕ ಸಾಹಿತ್ಯ, ಮಾದರಿ ಪ್ರಶ್ನೆಗಳು, ಮಾದರಿ ಪ್ರಶ್ನೆಪತ್ರಿಕೆ, ಇವೆ.

೧೦೫೮. ಜಾನಪದದ (Folklore) ೨೧ ಸೂತ್ರ, ವ್ಯಾಖ್ಯಾನಗಳು

ಲೇ: ನಂ. ತಪಸ್ವೀಕುಮಾರ್; ಪ್ರ: ಚೇತನ ಬುಕ್ ಹೌಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು-೫೭೦ ೦೨೪; ಮೊ.ಮು. ೨೦೦೩; ಪುಟ ೧೬೮; ಡಿಮ್ಮೈ ೧/೮

ಆರು ಅನುವಾದಿತ ಲೇಖನಗಳ ಸಂಕಲನ: ೧.೨೧ ಜಾನಪದೀಯ ಸೂತ್ರಗಳು: ಇದರಲ್ಲಿ ೨೧ ವಿದೇಶೀ ವಿದ್ವಾಂಸರ ಸೂತ್ರ ಪ್ರಾಯವಾದ ಅಭಿಪ್ರಾಯಗಳಿವೆ. ೨.ಫ್ರಾನ್ಸಿಸ್ ಲೀ ಅಟ್ಲಿ ಲೇಖನ ೩.ಜಾನಪದ ಶಾಸ್ತ್ರ ಹಾಗೂ ಜನಪದ ಜೀವನ – ಎಂ.ಆರ್. ಡೋರ್ಸನ್ ಲೇಖನ ೪.ಜಾನಪದ ಕ್ಷೇತ್ರಾಧ್ಯಯನ – ಅಲೆನ್ ಡಂಡೆಸ್ ಲೇಖನ ೫.ಜಾನಪದ ಶಾಸ್ತ್ರ – ಡೋರ್ಸನ್ ಲೇಖನ ೬.ಜಾನಪದ ವಿಜ್ಞಾನ ಮತ್ತು ಪುರಾಣಶಾಸ್ತ್ರ – ಅಲೆಕ್ಸಾಂಡರ್ ಎಚ್.ಕ್ರಾಫ್ ಲೇಖನ.

೧೦೫೯. ಜಾನಪದದ ತುಂಬುಹೊಳೆ

ಸಂ: ಕಾಳೇಗೌಡ ನಾಗವಾರ, ಜಿ.ವಿ. ಆನಂದಮೂರ್ತಿ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು. ೨೦೦೦; ಪುಟ ೧೮+೧೭೪=೧೯೨; ಡಿಮ್ಮೈ ೧/೮

ಒಟ್ಟು ೭೯ ಶೀರ್ಷಿಕೆಗಳಿವೆ. ಅವುಗಳಲ್ಲಿ ವಿವಿಧ ವಿದ್ವಾಂಸರು ಬರೆದಿದ್ದ ೩೮ ಬರಹಗಳಿವೆ, ೧೬ ಹಾಡುಗಳಿವೆ, ಗಾದೆಗಳು, ಒಗಟುಗಳು, ಶಿಶುಪ್ರಾಸಗಳು, ಗೋವಿನ ಹಾಡು ಮತ್ತು ಕೆರೆಗೆ ಹಾರ ಎಂಬ ಕಥನಗೀತೆಗಳು, ಪುರಂದರದಾಸ, ಕನಕದಾಸ, ಶಿಶುನಾಳ ಷರೀಫ, ಕುವೆಂಪು, ಪಿ. ಲಂಕೇಶ್, ಕೆ.ಎಸ್. ನರಸಿಂಹಸ್ವಾಮಿ ಅವರುಗಳ ಕವಿತೆಗಳು, ಹೂವಾದ ಹುಡುಗಿ ಎಂಬ ಜನಪದ ಕಥೆ, ಕ್ಷೇತ್ರಕಾರ್ಯದ ಅನುಭವ: ಕೆಲವು ನೆನಪುಗಳು ಎಂಬ ಕಾಳೇಗೌಡ ನಾಗವಾರ ಅವರ ಲೇಖನ, ದಾನಮ್ಮ –ಫಕೀರವ್ವ ಗುಡಿಸಾಗರ –ಹಿರಿಯಡ್ಕ ಗೋಪಾಲರಾವ್–ಪಿ. ಕಾಳಿಂಗರಾವ್–ಬಾಳಪ್ಪ ಹುಕ್ಕೇರಿ–ಬಣ್ಣದ ಮಾಲಿಂಗ–ಕೆರೆಮನೆ ಶಿವರಾಮ ಹೆಗಡೆ –ಸಯ್ಯದ್ ಹುಸೇನ್ – ಕಾಡುಗೊಲ್ಲರ ದಾಸಪ್ಪ – ಗೋಡೆ ನಾರಾಯಣ ಹೆಗಡೆ –ಜುಂಜಪ್ಪನ ಪದಗಳ ಗಿಡ್ಡಜ್ಜ – ಈ ಕಲಾವಿದರ ಬಗ್ಗೆ ಲೇಖನಗಳು, ಇವಿಷ್ಟೂ ಈ ಗ್ರಂಥದಲ್ಲಿವೆ.

೧೦೬೦. ಜಾನಪದದದ ವಿವಿಧ ಮುಖಗಳು

ಸಂ: ಶ್ರೀಕಂಠ ಕೂಡಿಗೆ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಿಮ್ಯೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು: ೨೦೦೧; ಪು: ೨೪+೨೭೨=೨೯೬; ಡಿಮ್ಯೆ ೧/೮

೨೫ ಲೇಖನಗಳ ಸಂಕಲನ: ೧.ಸಮಗ್ರ ಬೆಳವಣಿಗೆ: ನಿರಂತರ ಅಧ್ಯಯನ-ತೀ.ನಂ. ಶಂಕರನಾರಾಯಣ ೨.ಸಿರಿ ಮಹಾಕಾವ್ಯ-ಅನುಭವಗಳ ಸಿರಿ ಸಂಚಯ-ಕೆ. ಚಿನ್ನಪ್ಪ ಗೌಡ ೩.ಚಿತ್ರದುರ್ಗ ಜಿಲ್ಲೆಯ ಬುಡಕಟ್ಟುಗಳು: ಒಂದು ಸಾಂಸ್ಕೃತಿಕ ಸಮೀಕ್ಷೆ-ಮೀರಾಸಾಬಿಹಳ್ಳಿ ಶಿವಣ್ಣ ೪.ಭೂತೇರ ಸಂಪ್ರದಾಯ: ಒಂದು ವಿವೇಚನೆ-ಶಿವಾಜಿ ಜೆ. ಕಾಂಬಳೆ ೫.ಆಧುನಿಕ ತಂತ್ರಜ್ಞಾನದ ಸಂದರ್ಭದಲ್ಲಿ ಭಾರತದ ಜಾನಪದ-ಹಿ.ಶಿ. ರಾಮಚಂದ್ರೇಗೌಡ ೬.ಸುಳಿ: ಒಂದು ಜಾನಪದ ಅಧ್ಯಯನ-ಎಸ್.ಎಂ. ಸಾವಿತ್ರಿ ೭.ಉಭಯಲಿಂಗಿ ದೈವಗಳು-ವ.ನಂ. ಶಿವರಾಮು ೮.ಜಾನಪದ ಅಧ್ಯಯನ-ಸಮಕಾಲೀನ-ಎ.ವಿ. ನಾವಡ ೯.ಯಕ್ಷಗಾನ: ಇತ್ತೀಚಿನ ಒಲವುಗಳು-ಮೋಹನ್ ಕುಂಟಾರ್ ೧೦.ಚಿಕ್ಕಮಗಳೂರು ಜಿಲ್ಲೆಯ ಜನಪದ ಕಲೆಗಳು-ಅಂಬಳಿಕೆ ಹಿರಿಯಣ್ಣ ೧೧.ವನಚಿನ್ನಪ್ಪರ ಬೇಡುದಲೆ-ಎಫ್.ಎಂ. ನಂದಗಾವ್ ೧೨.ಗ್ರೀಕ್ ಮತ್ತು ರೋಮನ್ ಜನಪದ ದೈವಗಳು-ಜಿ.ಆರ್. ತಿಪ್ಪೇಸ್ವಾಮಿ ೧೩.ದೀಪಾವಳಿ ಹಬ್ಬದ ಬಾಗಿನ: ಅಂಟಿಕೆ-ಪಂಟಿಕೆ-ಸ.ಚಿ. ರಮೇಶ್ ೧೪.ಗಣಪತಿ ಶ್ರಮಸಂಸ್ಕೃತಿಕಗಳ ಸಂಕೇತವೇ? – ಎಂ.ಎಲ್. ನರಸಿಂಹಮೂರ್ತಿ ೧೫.ಮೊಂತಿಹಬ್ಬ: ಪ್ರಕೃತಿ ಆರಾಧನೆಯ ಸಡಗರ-ವಾಮನ ನಂದಾವರ ೧೬.ವರ್ಣ, ಜಾತಿ ಮತ್ತು ಲೋಕದೃಷ್ಟಿ-ರಾಜೇಗೌಡ ಹೊಸಹಳ್ಳಿ ೧೭.ಕುಲೆಯ ಆರಾಧನೆ ಅಥವಾ ಪಿತೃಪೂಜೆ-ಪಾಲ್ತಾಡಿ ರಾಮಕೃಷ್ಣ ಆಚಾರ್, ಮಾಡಾವು ೧೮.ದೇಶೀ ಸಂಸ್ಕೃತಿಯಲ್ಲಿ ವೀಳ್ಯದೆಲೆ: ಒಂದು ವಿವೇಚನೆ-ಸಿ.ಕೆ. ನಾವಲಗಿ ೧೯.ದೆವ್ವ ಜಾನಪದ-ವೈ.ಸಿ. ಭಾನುಮತಿ ೨೦.ದೆವ್ವ ಸಂಬಂಧಿ ನಂಬುಗೆಗಳು-ವೀರಣ್ಣ ದಂಡೆ ೨೧.ಮುಸ್ಲಿಂ ಜನಾಂಗದಲ್ಲಿ ದೆವ್ವ (ಸೈತಾನ)ದ ಕಲ್ಪನೆ – ದಸ್ತಗೀರ ಅಲ್ಲೀಬಾಯಿ ೨೨.ದೆವ್ವ: ಒಂದು ಜನಪದ ನಂಬಿಕೆ -ಸಿ.ಆರ್. ಚಂದ್ರಶೇಖರ್ ೨೩.ಹುತ್ತಕ್ಕೆ ಹಾಲೆರೆವ ಹಸು: ಕರ್ನಾಟಕದ ಒಂದು ಬಹುರೂಪಿ ಐತಿಹ್ಯ-ಪುರುಷೋತ್ತಮ ಬಿಳಿಮಲೆ ೨೪.ಜನಪದರು ಕಂಡಂತೆ ಟೀಪು-ಲಿಂಗದೇವರು ಹಳೆಮನೆ ೨೫.ಬಲೀಂದ್ರ: ರಾಜ್ಯದಿಂದ ಗಡಿಪಾರಿನವರೆಗೆ-ರಾಜಾರಾಂ ಹೆಗಡೆ. ಕಾಳೇಗೌಡ ನಾಗವಾರ ಅವರ ನಿತ್ಯಮಂಗಳಕರತತ್ತ್ವ ಎಂಬ ಮುನ್ನುಡಿ ಇದೆ.

೧೦೬೧. ಜಾನಪದದಲ್ಲಿ ಅಂಕಲಗಿಯ ಅಡವೀಶ

ಸಂ: ನಿಂಗಣ್ಣ ಸಣ್ಣಕ್ಕಿ, ಶಿವಲಿಂಗಪ್ಪ ಭಾವಿಕಟ್ಟಿ; ಪ್ರ: ಶ್ರೀಗಿರಿ ಪ್ರಕಾಶನ, ಅಕ್ಕತಂಗೇರಹಾಳ, ತಾಲೂಕು ಗೋಕಾಕ, ಜಿಲ್ಲೆ ಬೆಳಗಾಂವ; ಮೊ.ಮು. ೧೯೭೨; ಪುಟ ೨೦+೪೪+೮=೭೨; ಕ್ರೌನ್ ೧/೮

ಹತ್ತು ಶೀರ್ಷಿಕೆಗಳಿವೆ: ೧.ಕೋಲಿನ ಪದಗಳಲ್ಲಿ ಅಡವೀ ಮಹಾಸ್ವಾಮಿಗಳ ಮಹಿಮೆಯ ಹೊನಲು ೨.ದ್ವಿಪದಿಯಲ್ಲಿ ಶ್ರೀಗಳವರು ೩.ಗರತಿಯ ಹಾಡುಗಳಲ್ಲಿ ಮಹಾ ಪ್ರವಾದಿಯ ಮಹಿಮೆ ೪.ಹೆಣ್ಣುಮಕ್ಕಳ ಹಾಡಿನಲ್ಲಿ ೫.ಬೀಸುವ ಕಲ್ಲಿನ ಹಾಡುಗಳಲ್ಲಿ ೬.ಹಂತಿಯ ಪದಗಳಲ್ಲಿ ಶ್ರೀ ಅಡವೀಶ ೭.ಡೊಳ್ಳಿನ ಪದಗಳಲ್ಲಿ ಅಂಕಲಗಿ ಅಡವೀಸ್ವಾಮಿ ೮.ಹೋಳಿ ಪದಗಳಲ್ಲಿ ಅಡವೀಶ ೯.ಜೀ–ಪದದಲ್ಲಿ ಶ್ರೀ ಅಡವೀ ಮಹಾಸ್ವಾಮಿಗಳ ಮಹಿಮೆ ೧೦.ಲಾವಣಿಯಲ್ಲಿ ಶ್ರೀ ಸಿದ್ಧರಾಮ ಶಿವಯೋಗಿ. ಬೆಟಗೇರಿ ಕೃಷ್ಣಶರ್ಮ ಅವರ ಮುನ್ನುಡಿ, ಬಸವರಾಜ ಕಟ್ಟೀಮನಿ ಅವರ ಬೆನ್ನುಡಿ, ಶಿವಲಿಂಗಪ್ಪ ಭಾವಿಕಟ್ಟಿ ಅವರ ನನ್ನದೊಂದು ನುಡಿ, ಕೊನೆಯಲ್ಲಿ, ಸಿದ್ಧಯ್ಯ ಪುರಾಣಿಕ ಅವರ ಅಭಿಪ್ರಾಯ, ಕೃಷ್ಣಮೂರ್ತಿ ಪುರಾಣಿಕ ಅವರ ಹಿನ್ನುಡಿ, ಇವೆ.

೧೦೬೨. ಜಾನಪದದಲ್ಲಿ ಅವ್ವ

ಲೇ: ನೀಲಗಂಗಾ; ಪ್ರ: ಅಮೃತ ಪ್ರಕಾಶನ, ಸದಾಶಿವನಗರ, ಬೆಳಗಾವಿ–೫೯೦ ೦೦೧; ಮೊ.ಮು.೨೦೧೦; ಪುಟ ೭೬; ಡಿಮ್ಮೈ ೧/೮

ಐದು ಲೇಖನಗಳ ಸಂಕಲನ: ೧.ಜಾನಪದದಲ್ಲಿ ಅವ್ವ ೨.ಬಾಲಕರಿಲ್ಲದ ಬಾಲಿದ್ಯಾತರ ಜನ್ಮ ೩.ಅವ್ವ–ಮಗ ೪.ಅವ್ವ–ಮಗಳು ೫.ಮಗಳು–ಅವ್ವ, ಕೊನೆಯಲ್ಲಿ ಎರಡು ಹಾಡುಗಳಿವೆ. ಅವುಗಳಲ್ಲಿ ಹೆತ್ತವ್ವ ಎಂಬುದನ್ನು ವಾಸಂತಿ ಮೇಳೇದ ಅವರು ಬರೆದಿದ್ದಾರೆ. ಅವ್ವ ಎಂಬ ಇನ್ನೊಂದು ಹಾಡು ಇದೆ.

೧೦೬೩. ಜಾನಪದದಲ್ಲಿ ಕಿತ್ತೂರು

ಸಂ: ನಿಂಗಣ್ಣ ಸಣ್ಣಕ್ಕಿ, ಶಿವಲಿಂಗಪ್ಪ ಭಾವಿಕಟ್ಟಿ; ಪ್ರ: ಶ್ರೀಗಿರಿ ಪ್ರಕಾಶನ, ಅಕ್ಕತಂಗೇರಹಾಳ, ಬೆಳಗಾವಿ ಜಿಲ್ಲೆ; ಮೊ.ಮು. ೧೯೭೭; ಪುಟ ೧೦+೧೦೨=೧೧೨; ಕ್ರೌನ್ ೧/೮

ಎರಡು ಭಾಗಗಳನ್ನಾಗಿ ಇಲ್ಲಿನ ಹಾಡುಗಳನ್ನು ವಿಂಗಡಿಸಲಾಗಿದೆ. **ಭಾಗ ಒಂದು: ಲಾವಣಿಗಳು:** ೧.ಕಿತ್ತೂರು ಚನ್ನಮ್ಮ ೨.ಕಿತ್ತೂರು ಕೋಟೆ ೩.ಕಿತ್ತೂರು ಚನ್ನಮ್ಮರಾಣಿ ೪.ಚನ್ನಮ್ಮನ ವೀರವೃತ್ತಿ ೫.ಕಿತ್ತೂರು ಚನ್ನವ್ವನ ಸೊಸೆ ೬.ಕಿತ್ತೂರು ವೀರರಾಣಿ ಚನ್ನವ್ವ ೭.ಸಂಗೊಳ್ಳಿ ರಾಯನಾಯ್ಕ ೮.ಚನ್ನವ್ವನ ಪದ. **ಭಾಗ ಎರಡು: ಇತರ ಪದಗಳು:** ೧.ಚೌಪದಿಗಳು ೨.ತ್ರಿಪದಿಗಳು ೩.ಕೋಲು ಪದಗಳು ೪.ಹೋಳಿ ಹಾಡುಗಳು ೫.ಕರ್ಬಲ ಪದಗಳು. ಬೆಟಗೇರಿ ಕೃಷ್ಣಶರ್ಮ ಅವರ ಮೊದಲಿಗೆ ಮೊದಲು ಎಂಬ ಮುನ್ನುಡಿ, ಪಿ.ವಿಜಯಕುಮಾರ ಅವರ ಸ್ನೇಹದ ನುಡಿ, ಕೊನೆಯಲ್ಲಿ ಸಂಗ್ರಹ ವಿವರ, ಕಿತ್ತೂರ ಕ್ರಾಂತಿಯ ೧೫೦ನೆಯ ವಾರ್ಷಿಕೋತ್ಸವ ಎಂಬ ನಿಂಗಣ್ಣ ಸಣ್ಣಕ್ಕಿ ಅವರ ಬರಹ, ಜ್ಯೋತಿ ಹೊಸೂರ ಅವರ ಹಿನ್ನುಡಿ, ಇವೆ.

೧೦೬೪. ಜಾನಪದದಲ್ಲಿ ಮಕ್ಕಳ ಸಾಹಿತ್ಯ

ಲೇ: ಸಂಗಮೇಶ ಎಂ. ಬಿರಾದಾರ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು. ೧೯೭೬; ಪುಟ ೮+೬೨=೭೦; ಫೂಲ್ಸ್‌ಕ್ಯಾಪ್ ೧/೮

ಐದು ಅಧ್ಯಾಯಗಳಿವೆ: ೧.ಮೊದಲ ಮಾತು ೨.ಆಟಗಳು: ಗಂಡುಮಕ್ಕಳ ಆಟಗಳು, ಹೆಣ್ಣುಮಕ್ಕಳ ಆಟಗಳು ೩.ಹಬ್ಬಗಳು: ಗಂಡುಮಕ್ಕಳ ಹಬ್ಬಗಳು, ಹೆಣ್ಣುಮಕ್ಕಳ ಹಬ್ಬಗಳು ೪.ಮಕ್ಕಳನ್ನು ಆಡಿಸುವುದು ೫.ಕೊನೆಯ ಮಾತು. ಆರ್.ಸಿ. ಹಿರೇಮಠ ಅವರ ಮುನ್ನುಡಿ ಇದೆ.

೧೦೬೫. ಜಾನಪದದಲ್ಲಿ ಹಾರಕೂಡ ಶ್ರೀ ಚೆನ್ನಬಸವ ಶಿವಯೋಗಿ

ಸಂ: ಮಲ್ಲಿಕಾರ್ಜುನ ಶಿ. ಲಠ್ಠೆ; ಪ್ರ: ಸದ್ಭಕ್ತ ಮಂಡಳಿ, ಹಾರಕೂಡ, ಗದ್ಲೆಗಾಂವ ಸಿರಗಾಪುರ, ಬೀದರ ಜಿಲ್ಲೆ; ಮೊ.ಮು: ೧೯೮೦; ಪು: ೩೨+೮೪ = ೧೧೬; ಕ್ರೌನ್

ಇಲ್ಲಿನ ಹಾಡುಗಳನ್ನು ಏಳು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ೧.ಭಜನೆ ಹಾಡುಗಳು ೨.ಜೋಗುಳ ಹಾಡುಗಳು ೩.ಸೋಬಾನ ಪದ ೪.ಗೀಗೀ ಹಾಡುಗಳು ೫.ನಾಮಾವಳಿ ೬.ಸ್ತೋತ್ರಮಂಜರಿ ೭.ಸುಪ್ರಭಾತ. ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ ಶಬ್ದಾರ್ಥ, ಇವೆ.

೧೦೬೬. ಜಾನಪದವನ್ನು ಕುರಿತು

ಲೇ: ಜಿ.ವಿ.ಡಿ. ಪ್ರ: ಚೇತನ ಬುಕ್ ಹೌಸ್ ಮೈಸೂರು; ಮೊ.ಮು: ೧೯೯೬; ಪು: ೮+೧೩೬; ಕ್ರೌನ್

ಹತ್ತು ಲೇಖನಗಳ ಸಂಕಲನ: ೧.ಐತಿಹ್ಯಗಳು ೨.ಭಾಗವಂತಿಕೆ ಮೇಳ–ಒಂದು ಸಮೀಕ್ಷೆ ೩.ಜನಪದ ನಂಬಿಕೆಗಳು ೪.ಜನಪದ ಸಾಹಿತ್ಯದಲ್ಲಿ ಹಾಸ್ಯ ೫.ಕರುಣಿ ಕಣ್ಣು ತೆರೆಯೆ–ಒಂದು ಸಮೀಕ್ಷೆ ೬.ಜನಪದ ಒಡವೆಗಳು ೭.ಜಾನಪದದಲ್ಲಿ ಆಧ್ಯಾತ್ಮಿಕ ವಿಚಾರಗಳು ೮.ಎಂ.ಎಲ್. ಶ್ರೀಕಂಠೇಶಗೌಡರ ಕೃತಿಗಳಲ್ಲಿ ಜಾನಪದ ಸಂಕೀರ್ಣ ಬಗೆಗಳು ೯.ಜನಪದರಲ್ಲಿ ಶಿವನ ಕಲ್ಪನೆ ೧೦.ಜನಪದ ಶಿಶುಸಾಹಿತ್ಯ.

೧೦೬೭. ಜಾನಪದಶಾಸ್ತ್ರ ಸಿದ್ಧಾಂತಗಳು

ಸಂ: ವೀರಣ್ಣ ದಂಡೆ; ಪ್ರ: ನೆಲಮನೆ ಪ್ರಕಾಶನ, ರಂಗನಾಥ ನಗರ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ, ಮೊ.ಮು: ೧೯೯೯; ಪು: ೧೮+೨೮೬=೩೦೪; ಡಿಮ್ಮೈ ೧/೮

ಎರಡು ಭಾಗಗಳಲ್ಲಿ ೨೪ ಲೇಖನಗಳಿವೆ. **ಭಾಗ ಒಂದು : ಪಾಶ್ಚಾತ್ಯ ಜಾನಪದ ಶಾಸ್ತ್ರ ಸಿದ್ಧಾಂತಗಳು, ವಾದಗಳು ಮತ್ತು ಪರಿಕಲ್ಪನೆಗಳು:** ೧.ರಮ್ಯರಾಷ್ಟ್ರೀಯವಾದ–ತೀ.ನಂ. ಶಂಕರನಾರಾಯಣ ೨.ಪುರಾಣಮೂಲ ವಾದ –ಬಿ.ಬಿ. ಹೆಂಡಿ ೩.ಸೌರಪುರಾಣ

ಮೂಲ ವಾದ -ಬಿ.ಬಿ. ಹೆಂಡಿ ೪.ಭಾರತೀಯ ಮೂಲ ವಾದ-ಕೆ.ಆರ್. ಸಂಧ್ಯಾರೆಡ್ಡಿ ೫.ಮನಶ್ಶಾಸ್ತ್ರೀಯವಾದ-ಅಭಯ ಕುಮಾರ ೬.ಮಾನವಶಾಸ್ತ್ರೀಯವಾದ-ಕೆ.ಆರ್. ಸಂಧ್ಯಾರೆಡ್ಡಿ ೭.ಚಾರಿತ್ರಿಕ ಭೌಗೋಳಿಕ ಅಧ್ಯಯನ ವಿಧಾನ-ಬಿ.ಬಿ. ಹೆಂಡಿ ೮.ರಾಚನಿಕ ಸಿದ್ಧಾಂತಗಳು-ಅಂಬಳಿಕೆ ಹಿರಿಯಣ್ಣ ೯.ಮೌಖಿಕ ಸೂತ್ರಾತ್ಮಕ ಸಿದ್ಧಾಂತ-ಎ.ವಿ. ನಾವಡ ೧೦.ಸಾಂದರ್ಭಿಕ ಸಿದ್ಧಾಂತ-ಟಿ. ಗೋವಿಂದರಾಜು ೧೧.ಪ್ರದರ್ಶನ ಸಿದ್ಧಾಂತ-ವಾಮನ ನಂದಾವರ ೧೨.ಕ್ರಿಯಾತ್ಮಕ ಸಿದ್ಧಾಂತ-ಎ.ವಿ. ನಾವಡ ೧೩.ವಿಕಾಸವಾದ ಮತ್ತು ಅಪವಿಕಾಸವಾದ-ಬಿ.ಶಿವರಾಮ ಶೆಟ್ಟಿ ೧೪.ಸಮೂಹ ಸಾಂಸ್ಕೃತಿಕ ಸಿದ್ಧಾಂತ-ಅಂಬಳಿಕೆ ಹಿರಿಯಣ್ಣ ೧೫.ಪ್ರಕಾರ ಸಿದ್ಧಾಂತ-ತೀನಂ. ಶಂಕರನಾರಾಯಣ ೧೬.ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು-ಬಿ.ಎನ್. ಸುಮಿತ್ರಾಬಾಯಿ ೧೭.ಆಶಯ ಪರಿಕಲ್ಪನೆ-ರಾಮೇಗೌಡ ೧೮.ಆಕ್ಸೆಲ್ ಓಲ್ರಿಕ್ ಅವರ ಎಪಿಕ್‌ಲಾಸ್. **ಭಾಗ ಎರಡು: ದೇಶೀ ಜಾನಪದ ಶಾಸ್ತ್ರ ಸಿದ್ಧಾಂತಗಳು:** ೧.ಜನಪದ ಕಾವ್ಯ ಮೀಮಾಂಸೆ-ವೀರಣ್ಣದಂಡೆ ೨.ಪ್ರಥಮ ವಿಮರ್ಶೆ ಸತ್ವ ಮತ್ತು ಸ್ವರೂಪ -ವೀರಣ್ಣ ದಂಡೆ ೩.ಮೌಲ್ಯಗಳ ಸಂಘರ್ಷ: ಜನಪದ ಸಾಮಾಜಿಕ ಕಥನ ಸಾಹಿತ್ಯದಲ್ಲಿ -ವೀರಣ್ಣ ದಂಡೆ ೪.ಜನಪದ ಮಾಹಾಕಾವ್ಯಗಳ ರಾಚನಿಕ ಮತ್ತು ಸಂವಹನ ಸ್ವರೂಪ-ವೀರಣ್ಣ ದಂಡೆ ೫.ಜನಪದ ಕಥಾ ಘಟಕಗಳು: ಸಂಕೀರ್ಣ ಜನಪದ ಕಥೆಗಳ ರಾಚನಿಕ ಸಿದ್ಧಾಂತ-ವೀರಣ್ಣ ದಂಡೆ ೬.ಮಾದರಿ(Type) ಪರಿಕಲ್ಪನೆ ಮತ್ತು ರಚನೆ-ಪಾಶ್ಚಾತ್ಯ ಪರಿಕಲ್ಪನೆಗೊಂದು ಸೈದ್ಧಾಂತಿಕ ಚೌಕಟ್ಟು-ವೀರಣ್ಣ ದಂಡೆ. ಪ್ರಾರಂಭದಲ್ಲಿ, ಸಂಪಾದಕರ ಮಾತು ಎಂಬ ವೀರಣ್ಣ ದಂಡೆ ಅವರ ಪ್ರಸ್ತಾವನೆ, ಪೀಟರ್ ಜೆ. ಕ್ಲಾಸ್ ಅವರ ದೇಶೀ ಸಿದ್ಧಾಂತಗಳ ಕುರಿತು ಎಂಬ ಬರಹ, ಇವೆ.

೧೦೬೮. ಜಾನಪದಶ್ರೀ

ಲೇ: ಜನಪ್ರಿಯ; ಪ್ರ: ನವಿತಾ ಪ್ರಕಾಶನ, ೨, ೨ನೇ ಅಡ್ಡರಸ್ತೆ, ಮುನೇಶ್ವರ ಬ್ಲಾಕ್, ರಾಜಮಹಲ್ ಗುಟ್ಟಹಳ್ಳಿ, ಬೆಂಗಳೂರು-೫೬೦ ೦೦೩; ಮೊ.ಮು. ೨೦೦೯; ಪುಟ ೮+೭೪೮= ೭೫೬; ಡಿಮ್ಮೈ ೧/೮

೧೬ ಭಾಗಗಳಲ್ಲಿ ವಿಂಗಡಿಸಲ್ಪಟ್ಟಿರುವ ೫೧ ಲೇಖನಗಳಿವೆ: **ಭಾಗ ಒಂದು: ಜನಪದ ಸಾಹಿತ್ಯ:** ೧.ಜನಪದ ಸಾಹಿತ್ಯ: ಒಂದು ವಿಶ್ಲೇಷಣೆ ೨.ಉತ್ತರ ಕರ್ನಾಟಕ ಸಾಹಿತ್ಯ ಪ್ರಕಾರಗಳು ೩.ಗಾದೆ ೪.ಒಡಪುಗಳು ೫.ಒಗಟುಗಳು ೬.ಜನಪದ ಸಾಹಿತ್ಯದಲ್ಲಿ ಬೈಗಳುಗಳು. **ಭಾಗ ಎರಡು: ಕಥೆಗಳು:** ೭.(ಅ) ಜನಪದ ಕಥೆಗಳು – ಒಂದು ವಿಶ್ಲೇಷಣೆ (ಆ) ಮೂರು ಜನಪದ ಕಥೆಗಳು ೮.ಶ್ರೀರಾಮಕೃಷ್ಣ ಪರಮಹಂಸರ ದೃಷ್ಟಾಂತ ಕಥೆಗಳು. **ಭಾಗ ಮೂರು: ಜಾನಪದ ಕಾವ್ಯ:** ೯.ಲಾವಣಿ ೧೦.ಜನಪದ ಸಾಹಿತ್ಯದಲ್ಲಿ ದೇವರ ಹಾಡುಗಳು ೧೧.ಜನಪದ ಹಬ್ಬದ ಹಾಡುಗಳು ೧೨.ತತ್ತ್ವಪದಗಳು -ಭಜನೆ ಪದಗಳು ೧೩.ಶಿಶುಪ್ರಾಸಗಳು ೧೪.ಮಹಿಳೆಯರ ಹಾಡುಗಳು ೧೫.ಬೇಸಾಯದ ಹಾಡುಗಳು ೧೬.ರಂಗಗೀತೆಗಳು-ಜಾನಪದೀಯ ಅಂಶಗಳು ೧೭.ಜನಪದ ಗೀತೆಗಳು ೧೮.ಹರಿಕಥೆ-ಬುರ್ರಕಥೆ-ಕರಪಾಲಮೇಳ-ಸಾಮ್ಯ, ವೈಷಮ್ಯಗಳು ೧೯.ಮೈಸೂರು

ಹಾಗೂ ಚಾಮರಾಜನಗರ ಜಿಲ್ಲೆಯ ಜನಪದ ಕಾವ್ಯಗಳು ೨೦.ಜಾನಪದೀಯ "ಕಾವ್ಯಧಾರೆ" – ಒಂದು ವಿಶ್ಲೇಷಣೆ ೨೧.ಅಳಿವಿನ ಹಾದಿಯಲ್ಲಿರುವ ಜನಪದ ಗೀತೆಗಳು. **ಭಾಗ ನಾಲ್ಕು: ಜಾನಪದ ಮಹಾಕಾವ್ಯಗಳು:** ೨೨.ಜಾನಪದ ಮಾದೇಶ್ವರನ ಬಗ್ಗೆ ಲೇಖನಗಳು ೨೩.ಮಂಟೇಸ್ವಾಮಿ ಕಾವ್ಯ – ಒಂದು ವಿವೇಚನೆ ೨೪.ಪಾಶ್ಚಾತ್ಯ ಜನಪದ ಮಹಾಕಾವ್ಯ ಗಿಲ್ಗಮಿಷ್. **ಭಾಗ ಐದು: ಜಾನಪದ ಕಲೆಗಳು:** ೨೫.ಜಾನಪದ ಶಿಲ್ಪ ೨೬.ಜನಪದ ಕಲೆಗಳು ೨೭.ಜನಪದ ಚಿತ್ರಕಲೆ ೨೮.ಜನಪದ ತಾಳ–ಮೇಳಗಳು ೨೯.ಬಯಲಾಟದ ವೇಷಭೂಷಣಗಳು ೩೦.ಉತ್ತರ ಕರ್ನಾಟಕದ ಜನಪದ ರೂಪಕಗಳು. **ಭಾಗ ಆರು:** ೩೧.ಜನಪದ ವೈದ್ಯ. **ಭಾಗ ಏಳು: ಜಾನಪದ ಸಂಗೀತ: ಜನಪದ ಸಂಗೀತ:** ೩೨.ಜನಪದ ಸಂಗೀತ–ವಾದ್ಯ ಪರಿಕರಗಳು ೩೩.ಕನ್ನಡ ಚಲನಚಿತ್ರಗಳಲ್ಲಿ ಜಾನಪದ ಸಾಹಿತ್ಯ–ಸಂಗೀತ ೩೪.ಜಾನಪದ ಹಾಡುಗಳಲ್ಲಿ ಶಾಸ್ತ್ರೀಯ ರಾಗ–ತಾಳಗಳು. **ಭಾಗ ಎಂಟು: ಸಂಸ್ಕೃತಿ:** ೩೫.ಕರ್ನಾಟಕದ ಆದಿವಾಸಿಗಳ ಸಂಸ್ಕೃತಿ ೩೬.ಅಲೆಮಾರಿ ಜನಾಂಗಗಳು ೩೭.ಜನಪದ ವೃತ್ತಿಗಾಯಕರು ೩೮.ವೃತ್ತಿ ಕಲಾವಿದರು. **ಭಾಗ ಒಂಬತ್ತು:** ೩೯.ಜನಪದ ಹಬ್ಬಗಳು. **ಭಾಗ ಹತ್ತು:** ೪೦.ಕರ್ನಾಟಕದ ಪ್ರಮುಖ ಜಾತ್ರೆಗಳು. **ಭಾಗ ಹನ್ನೊಂದು:** ೪೧.ಆರಾಧನೆಗಳು. **ಭಾಗ ಹನ್ನೆರಡು:** ೪೨.ಜನಪದರ ನಂಬಿಕೆಗಳು. **ಭಾಗ ಹದಿಮೂರು:** ೪೩.ಜನಪದ ಅಡುಗೆಗಳು. **ಭಾಗ ಹದಿನಾಲ್ಕು:** ೪೪.ಜನಪದ ಕ್ರೀಡೆಗಳು. **ಭಾಗ ಹದಿನೈದು:** ೪೫.ಜನಪದ ಮಹಾಭಾರತ – ಒಂದು ಸಮೀಕ್ಷೆ. **ಭಾಗ ಹದಿನಾರು: ಸಂಕೀರ್ಣ:** ೪೬.ಜನಪದ ಕ್ಷೇತ್ರಕಾರ್ಯ ೪೭.ಜಾನಪದ ವಸ್ತುಸಂಗ್ರಹಾಲಯಗಳು ೪೮.ಪುರಾಣ ಮತ್ತು ಐತಿಹ್ಯ ೪೯.ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಿಮೈ – ಒಂದು ಪರಿಚಯ ೫೦.ಜಾನಪದ ದುಡಿತ – ತಜ್ಞರ ಮಿಡಿತ ೫೧.ಜಾನಪದ ಕೃತಿ.

೧೦೪೯. ಜಾನಪದೀಯ

ಲೇ: ದೇವೇಂದ್ರಕುಮಾರ ಹಕಾರಿ; ಪ್ರ: ವಾಗ್ದೇವಿ ಪುಸ್ತಕಗಳು, ೬೭ಬಿ, ದೇವರಾಜ ಅರಸ್ ರಸ್ತೆ, ಮೈಸೂರು; ಮೊ.ಮು. ೧೯೮೨; ಪುಟ ೪+೧೫೪=೧೫೮; ಕ್ರೌನ್ ೧/೮

ಎಂಟು ಲೇಖನಗಳ ಸಂಕಲನ: ೧.ಮಾನವಿಕ ಶಾಸ್ತ್ರದ ದೃಷ್ಟಿಯಿಂದ: ಒಂದು ಜನಪದ ಪುರಾಣ ಕಥೆ ೨.ಜನಪದ, ತ್ರಿಪದಿ–ಸಾಹಿತ್ಯದಲ್ಲಿ ಮಕ್ಕಳು ೩.ತಂಬೂರಿ, ಏಕತಾರಿ ಹಾಡುಗಳು ೪.ಜನಪದ ಹಾಡುಗಳ ಛಂದಸ್ಸು–ಲಯ ೫.ಜನಪದ ಕಥೆ: ಪ್ರಾಶಯ–ಆಶಯ–ಉಪಾಶಯ ೬.ಗಾಣಿಗರು ೭.ಡೊಂಬರು ೮.ಕುಂಬಾರ.

೧೦೭೦. ಜಾಲಾಟ

ಲೇ: ಕೆ. ಚಿನ್ನಪ್ಪಗೌಡ; ಪ್ರ: ಚಿಂತನ ಪ್ರಕಾಶನ; ಮೊ.ಮು. ೧೯೮೫; ಪುಟ ೧೨೪; ಡಿಮೈ ೧/೮

ನಾಲ್ಕು ಲೇಖನಗಳ ಸಂಕಲನ: ೧.ಭೂತಾರಾಧನೆಯ ಪ್ರಭೇದ –ಜಾಲಾಟ ೨.ತುಳುನಾಡಿನ ಜಾತ್ರೆಗಳು–ಪ್ರಾದೇಶಿಕ ಅಧ್ಯಯನ ೩.ದೃಷ್ಟಿ ಕಥೆಗಳು–ಒಂದು ವಿಶ್ಲೇಷಣೆ ೪.ಭೂತಾರಾಧನೆಯಲ್ಲಿ ವರ್ಣಸಾಂಗತ್ಯ. ಅಮೃತ ಸೋಮೇಸ್ವರ ಅವರ ಮುನ್ನುಡಿ, ಕೊನೆಯಲ್ಲಿ, ಸಾಂಸ್ಕೃತಿಕ ಪದಕೋಶ, ಇವೆ.

೧೦೭೧. ಜೀ.ಶಂ. ಪರಮಶಿವಯ್ಯ

ಲೇ: ಮೈಲಹಳ್ಳಿ ರೇವಣ್ಣ; ಪ್ರ: ಚೇತನ ಪ್ರಿಂಟರ್ಸ್ ಅಂಡ್ ಪಬ್ಲೀಷರ್ಸ್, ೨೩೫೯, ಬಸವೇಶ್ವರ ರಸ್ತೆ, ೧೨ನೇ ಕ್ರಾಸ್, ಕೆ.ಆರ್. ಮೊಹಲ್ಲಾ, ಮೈಸೂರು–೫೭೦ ೦೨೪; ಮೊ.ಮು. ೨೦೦೭; ಪುಟ ೮೮; ಕ್ರೌನ್ ೧/೮

ಜೀಶಂಪ ಅವರ ಜೀವನ ಮತ್ತು ಸಾಧನೆಯನ್ನು ಕುರಿತ ಗ್ರಂಥ.

೧೦೭೨. ಜೀ.ಶಂ. ಪರಮಶಿವಯ್ಯ

ಲೇ: ಚೆಲುವರಾಜು; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು: ೧೯೯೬; ಪು: ೮+೩೫=೪೩; ಡೆಮ್ಮಿ ೧/೮

ಐದು ಅಧ್ಯಾಯಗಳಿವೆ: ೧.ಜೀವನ ಮತ್ತು ಸಾಧನೆ ೨.ಸಾಹಿತ್ಯ ಕ್ಷೇತ್ರದಲ್ಲಿ ೩.ಜಾನಪದ ಕ್ಷೇತ್ರದಲ್ಲಿ ೪.ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು ೫.ಜೀಶಂಪ ಅವರ ಸಾಹಿತ್ಯ ಹಾಗೂ ಜನಪದ ಕೃತಿಗಳು (ಪಟ್ಟಿ). ಚಂದ್ರಶೇಖರ ಕಂಬಾರ ಅವರ 'ನಿಮ್ಮೊಡನೆ' ಎಂಬ ಮುನ್ನುಡಿ ಇದೆ.

೧೦೭೩. ಜೀವ ಉಳಿಸುವ ಕಳೆಗಳು

ಲೇ: ಶಾಂತಿ ನಾಯಕ; ಪ್ರ: ಕರ್ನಾಟಕ ಜಾನಪದ ಪರಿಷತ್ತು, ೧, ಜಲದರ್ಶಿನಿ ಬಡಾವಣೆ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪; ಮೊ.ಮು.೨೦೦೮; ಪುಟ ೪೮; ಕ್ರೌನ್ ೧/೮

ಸಸ್ಯ ಜಾನಪದ ಎಂಬ ಅಡಿಬರಹ ಇದೆ. ಜಿ. ನಾರಾಯಣ ಅವರ ಅಧ್ಯಕ್ಷರ ಮಾತು ಎಂಬ ಮುನ್ನುಡಿ ಇದೆ.

೧೦೭೪. ಜೀವಂತ ಜಾನಪದ

ಲೇ: ಪ್ರೊ. ದೊಡ್ಡರಂಗೇಗೌಡ; ಪ್ರ: ಅಳಿಲು ಸೇವಾ ಸಂಸ್ಥೆ, ಬೆಂಗಳೂರು, ಮೊ.ಮು: ೨೦೦೦, ಪುಟ: ೬ + ೪೬ = ೫೨, ಕ್ರೌನ್ ೧/೮

ಹದಿಮೂರು ಪುಟ್ಟ ಪುಟ್ಟ ಲೇಖನಗಳ ಸಂಕಲನವಿದು: ೧.ನಾವು–ನಮ್ಮ ಜಾನಪದ ೨.ಮಣ್ಣಿನ ಮಾತುಗಳು ಮುದ ನೀಡುವ ಮಕರಂದ ೩.ಹಳ್ಳಿ ಹಾಡುಗಳಲ್ಲಿ ಹಳ್ಳಿಗರ ಬದುಕು ೪.ಜೀವನ ಪ್ರೀತಿಯನ್ನು ಸಾರುವ ಜಾನಪದ ೫.ಜನಪದ ಸಾಹಿತ್ಯದಲ್ಲಿ

ಹೆಣ್ಣು ೬.ಜಾನಪದ ಈ ಹೊತ್ತು ಜೀವಂತವಾಗಿಲ್ಲವೇನು? ೭.ಗ್ರಾಮೀಣ ಗೀತೆಗಳಲ್ಲಿ ಧರ್ಮ, ದೇವರು............. ೮.ನಾವು, ನಮ್ಮ ಜಾನಪದೀಯ ನಂಬಿಕೆಗಳು ೯.ನೆಲದ ಪದಗಳಲ್ಲಿ ನ್ಯಾಯ, ನೀತಿ, ಧರ್ಮ ೧೦.ಮೆರೆಯುವ ಜೀವಂತ ಜಾನಪದ ೧೧.ಜನಪದ ಗೀತೆಗಳಲ್ಲಿ ವಚನಕಾರರ ಪ್ರಸ್ತಾಪ ೧೨.ಅಳಿವಿಲ್ಲದ ಹಳ್ಳಿ ಪದಗಳು ೧೩.ಜನಪದ ಕವಿಗಳು ಮತ್ತು ಸೃಜನಶೀಲತೆ. ಆಗಾಗ ವಿವಿಧ ಪತ್ರಿಕೆಗಳಿಗೆ ಬರೆದ ಲೇಖನಗಳಿವು ಎಂಬುದಾಗಿ ಲೇಖಕರು ತಮ್ಮ ಮಾತಿನಲ್ಲಿ ಹೇಳಿದ್ದಾರೆ.

೧೦೭೫. ಜೀವದಾಯಿ ನೀರು ಹಾಗೂ ಮಳೆ

ಸಂ/ಪ್ರ: ಟಿ.ವಿ. ವೆಂಕಟರಮಣಯ್ಯ; ಇಡಬ್ಲ್ಯೂಎಸ್ ೨೧೮, ಕೆ.ಎಚ್.ಬಿ. ಕಾಲೋನಿ ೨ನೇ ಹಂತ, ೫ನೇ ಕ್ರಾಸ್, ಬಸವೇಶ್ವರನಗರ, ಬೆಂಗಳೂರು–೫೬೦ ೦೭೯; ಮೊ.ಮು.೨೦೦೩; ಪುಟ ೪+೬೪=೬೮; ಕ್ರೌನ್ ೧/೮

ಸೂಕ್ತಿ, ಗಾದೆ, ಲೇಖನ ಸಂಗ್ರಹ ಎಂಬ ಅಡಿಬರಹ ಇದೆ. ಪತ್ರಿಕೆಗಳು ಹಾಗೂ ಇತರರ ಗ್ರಂಥಗಳಿಂದ ಸಂಗ್ರಹಿಸಲ್ಪಟ್ಟ ನೀರಿಗೆ ಸಂಬಂಧಿಸಿದ ಮಾಹಿತಿಗಳನ್ನುಳ್ಳ ಗ್ರಂಥ.

೧೦೭೬. ಜೀವನ ಜೋಕಾಲಿ: ಜೋಗತಿ ಹಾಡು

ಸಂ: ಎಂ.ಎಸ್. ಸುಂಕಾಪುರ; ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ; ಮೊ.ಮು: ೧೯೭೭; ಪು: ೬+೨೨+೧೧೮ = ೧೪೬; ಡಿಮ್ಮೈ

ಐದು ಭಾಗಗಳಲ್ಲಿ ೮೨ ಹಾಡುಗಳಿವೆ. ೧.ಸ್ತುತಿ ೨.ದೇವಿಯ ಚರಿತೆ ೩.ದೇವಿಯ ವರ್ಣನೆ ೪.ದೇವಿಯ ಮಹಿಮೆ ೫.ಮಂಗಳಾರತಿ. ಸಂಪಾದಕರ ೨೦ ಪುಟಗಳ ಪ್ರಸ್ತಾವನೆ ಇದೆ.

೧೦೭೭. ಜೀವನ ಜೋಕಾಲಿ

ಭಾಗ ೧: ಚೌಪದನಗಳು; ಸಂ.ಎಂ.ಎಸ್.ಸುಂಕಾಪುರ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ; ಮೊ.ಮು: ೧೯೭೧; ಪು: ೧೮+೧೫೩=೧೭೧; ಡಿಮ್ಮೈ; ೧/೮

ಹನ್ನೊಂದು ಚೌಪದನಗಳ ಸಂಕಲನ: ೧.ಗಣೇಶ ಚೌಪದನ ೨.ವೀರಭದ್ರ ಚೌಪದನ ೩.ಗಂಗೀಗೌರಿ ಚೌಪದನ ೪.ಗುರುಭಕ್ತಾಂಡಾರಿ ಚೌಪದನ ೫.ಚಿತ್ರಶೇಖರ ಚೌಪದನ ೬.ಸೋಮಶೇಖರ ಚೌಪದನ ೭.ವೀರಸಂಗಯ್ಯ ಚೌಪದನ ೮.ಅದ್ವೈತ ತತ್ವ ಚೌಪದನ ೯.ಕಂಸವಧ ಚೌಪದನ ೧೦.ಮಾನೋಮಿ ಚೌಪದನ ೧೧.ಬೆಡಗಿನ ಚೌಪದನ. ಆರ್.ಸಿ.ಹಿರೇಮಠ ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ, ಶಬ್ದಾರ್ಥಕೋಶ, ಇವೆ.

೧೦೭೮. ಜೀವನ ಜೋಕಾಲಿ

ಭಾಗ ೨: ಸರಸ–ವಿರಸ; ಸಂ: ಎಂ.ಎಸ್. ಸುಂಕಾಪುರ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು. ೧೯೭೧; ಪುಟ ೨+೨೦+೧೫೧=೧೭೩; ಡಿಮ್ಮೈ ೧/೮

೧೦೯.ಮುದುವನ್ನರು ೧೧೦.ವಣ್ಣಾನರು ೧೧೧.ವೇಟ್ಟುವರ್ ೧೧೨.ವೇಲರು
೧೧೩.ಸಾಂಬವರ್ **ವಸ್ತು ಸಂಸ್ಕೃತಿ:** ೧೧೪.ಅರಿಯುಂಡ ೧೧೫.ಉಂಡರಿಯಪ್ಪ
೧೧೬.ಓಲಕುಡ ೧೧೭.ಕಳಮೆಳುತ್ತ್ ೧೧೮.ಕಾಲವಂಡ ೧೧೯.ಕುಪ್ಪಾಯಂ
೧೨೦.ಕುಳಿತಾಳಂ ೧೨೧.ಕೇರಳದ ಚೌಕಟ್ಟಿನ ಮನೆ ೧೨೨.ಕೇರಳದ ಮನೆ
೧೨೩.ಕೇರಳದ ಮುಖವಾಡಗಳು ೧೨೪.ಚಕ್ಕರಚೋರ್ ೧೨೫.ಚೆಂಡೆ ೧೨೬.ತಪ್ಪ್
೧೨೭.ತಾಲಿ ೧೨೮.ತೋರ್ತ್ ೧೨೯.ನಂದುಣಿ ೧೩೦.ನೆಲ್ಲಿಪುಡಿ ೧೩೧.ಪತ್ತಿರಿ
೧೩೨.ಪರಯರ ಕರಕೌಶಲ ೧೩೩.ಪಾಣಿ ೧೩೪.ಪುಕ್ಕನ್ ೧೩೫.ಪುಟ್ಟ್ ೧೩೬.ಪುಡವ
೧೩೭.ಪುಳ್ಳುವಕೊಡ ೧೩೮.ಪೂಕ್ಕಳಂ ೧೩೯.ಮಾಡ ೧೪೦.ಮುಂಡ್ ೧೪೧.ರಾಕ್
೧೪೨.ಸದ್ಯ ೧೪೩.ಅನ್ಜಕ್ಕಳಿ ೧೪೪.ಅರಬನ ಮುಟ್ಟ್ ೧೪೫.ಅಲಾಮಿಕಳಿ
೧೪೬.ಅರ್ಯಮ್ಮಾಲ ನಾಟಕಂ ೧೪೭.ಎರುದುಕಳಿ ೧೪೮.ಐವರ್‌ಕಳಿ ೧೪೯.ಒಪ್ಪನ
೧೫೦.ಕಂಬಳನೃತ್ಯ ೧೫೧.ಕಣಿಯಾನ್ ಕೊತ್ತು ೧೫೨.ಕಣ್ಯಾರ್ ಕಳಿ
೧೫೩.ಕಳರಿಯುಳಿಚ್ಚಿಲ್ ೧೫೪.ಕಾಕಾರಿಶ್ಶಿನಾಟಕ ೧೫೫.ಕುಮ್ಮಾಟ್ಟಿ
೧೫೬.ಗೊಡ್ಡೆರಾಮಾಯಣ್ ೧೫೭.ಚರಡ್ ತಿನ್ನಿಕ್ಕಳಿ ೧೫೮.ಚವಿಟ್ಟ್‌ಕ್ಕಳಿ
೧೫೯.ಚವಿಟ್ಟುನಾಟಕಂ ೧೬೦.ಚಾಟ್ಟ್ ೧೬೧.ಚಿಮ್ಮಾನಕ್ಕಳಿ ೧೬೨.ಜೋಳಿಕಳಿ

೧೬೩.ತಿಡಂಬುನೃತ್ಯ ೧೬೪.ತಿರಯಾಟಂ ೧೬೫.ತಿರುವಾದಿರ ಕಳಿ ೧೬೬.ತೀಯಾಟ್ಟ್ ೧೬೭.ತೋಲ್‌ಪಾವ್ವೆಕೊತ್ತು ೧೬೮.ದಫ್‌ಮುಟ್ ೧೬೯.ದೇವಕೂತ್ತ್ ೧೭೦.ಪಡಯಣಿ ೧೭೧.ಪತ್ತಾಯಪ್ಪುರ ೧೭೨.ಪರಿಚಮುಟ್ಟು ಕಳಿ ೧೭೩.ಪಾಕ್ಕನಾರ್ ತುಳ್ಳಲ್ ೧೭೪.ಪಾನ ೧೭೫.ಪುಲಿಕ್ಕಳಿ ೧೭೬.ಪೂತನುಂ ತಿರಯುಂ ೧೭೭.ಪೂರಕಳಿ ೧೭೮.ಪೋರಾಟ್‌ನಾಟಕಂ ೧೭೯.ಭಗವತಿ ಪಾಟ್ಟು ಮತ್ತು ಪಂಜಿನ ಕುಣಿತ ೧೮೦.ಭಗವತಿಯಾಟ್ ೧೮೧.ಮಂಗಳಂ ಕಳಿ ೧೮೨.ಮಣ್ಣಾಪ್ಪೇಡಿ ೧೮೩.ಮನ್ನಾನ್‌ಕೂತ್ ೧೮೪.ಮಲಕೂತ್ ೧೮೫.ಮಲವಾಯಿಯಾಟ್ಟಂ ೧೮೬.ಮಾರ್ಗಂಕಳಿ ೧೮೭.ಮುಟ್ಟುಂವಿಳಿ ೧೮೮.ಮುಡಿಯೆಡುಪ್ಪ್ ೧೮೯.ಮುಡಿಯೇಟ್ ೧೯೦.ವಳ್ಳಂಕಳಿ ೧೯೧.ಸಂಘಕಳಿ ಶಬ್ದಪಾರ ಮಾರ್ಗಮಶಕ್ಯಂ ಎಂಬ ಎ. ಮುರಿಗೆಪ್ಪ ಅವರ ಮುನ್ನುಡಿ, ಒಳಗೆ ಪುಟದಳತೆಯ ಫೋಟೋಗಳು, ಕೊನೆಯಲ್ಲಿ ಲೇಖಕರು, ಪರಸ್ಪರ ಅನುವಾದಕರು, ಲೇಖನಗಳ ಅಕಾರಾದಿ ಪಟ್ಟಿ ಇವೆ.

೧೨೦೬. ದಲಿತ ಸ್ತ್ರೀ ದೈವಗಳು

ಲೇ: ಹೆಬ್ಬಾಲೆ ಕೆ. ನಾಗೇಶ್; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು: ೨೦೧೧ ; ಪು: ೪+೩೬+೪೦: ಡಿಮ್ಮೈ ೧/೮

ಸ್ತ್ರೀ ದೈವದ ಪೂರ್ವ ಹಿನ್ನೋಟ, ಅಸ್ಪೃಶ್ಯತೆಯ ನೆಲೆಯಲ್ಲಿ ದಲಿತ ಸ್ತ್ರೀ ದೈವಗಳು, ದಲಿತ ಸ್ತ್ರೀ ದೈವಗಳು, ದಲಿತ ಸ್ತ್ರೀ ದೈವಗಳು ಮತ್ತು ಪೂಜಾರರ ಪೂರ್ವ ವಿವೇಚನೆ, ದಲಿತ ಸ್ತ್ರೀ ದೇವತೆಗಳ ಪೂಜೆಯ ಅವಲೋಕನ, ದಲಿತ ಸ್ತ್ರೀ ದೈವಗಳು ಮತ್ತು ಆಧುನಿಕತೆ – ಇವು ಈ ಕೃತಿಯ ಒಳಪುಟಗಳಲ್ಲಿರುವ ಶೀರ್ಷಿಕೆಗಳು.

೧೨೦೭. ದಶಾವತಾರ ಸಂವಾದ ಹಾಡು

ಸಂ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು. ೧೯೩೯; ಪುಟ ೬; ಕ್ರೌನ್ ೧/೧೬

೨೦ ಪದ್ಯಗಳಿವೆ.

೧೨೦೮. ದಾವಣಗೆರೆ ಜಿಲ್ಲೆಯ ಜನಪದ ಕಲಾವಿದರು

ಲೇ: ಚಿಕ್ಕಣ್ಣ ಯಣ್ಣೆಕಟ್ಟೆ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು–೦೨; ಮೊ.ಮು೨೦೦೮; ಪು: ೧೨+೧೧೫=೧೨೭; ಡಿಮ್ಮೈ ೧/೮

ದಾವಣಗೆರೆ ಜಿಲ್ಲೆಯ ೫೬ ಕಲಾವಿದರನ್ನು ಪರಿಚಯಿಸಿಕೊಡುವ ಗ್ರಂಥ: ೧.ದೊಡ್ಡಾಟದ ರೇವಣಸಿದ್ದಪ್ಪ ೨.ಅಜ್ಜಣ್ಣ ಬಡಿಗೇರ ೩.ಚೌಡಿಕೆ ರಾಮಣ್ಣ ೪.ಎಸ್.ಕೆ. ಗೋವಿಂದಪ್ಪ ೫.ಸಾರಂಗಿ ರಾಮನಾಯಕ ೬.ಸರಸ್ವತಮ್ಮ ೭.ಯುಗಧರ್ಮ ರಾಮಣ್ಣ ೮.ರಂಗಮ್ಮ ಸೂರಗೊಂಡನಹಳ್ಳಿ ೯.ಗೌಡರ ನಾಗಜ್ಜಿ ೧೦.ಮಾಳಗಿ ಬಸಪ್ಪ ೧೧.ಕಡಬಗೇರಿ ಉಚ್ಚಂಗಪ್ಪ ೧೨.ಹಲುವಾಗಲು ದೇವೇಂದ್ರಪ್ಪ ೧೩.ಬೇಗಾರರ ಎಲಿಸವ್ವ ೧೪.ಪಲವನಹಳ್ಳಿ

ಹನುಮಂತಪ್ಪ ೧೫.ಗೊಂಡೇರ ಗೋವಿಂದಪ್ಪ ೧೬.ಕುಂ.ಬಾ. ಸದಾಶಿವಪ್ಪ ೧೭.ಮಾಳ್ಗಿ ಚನ್ನಬಸಪ್ಪ ೧೮.ಜಿ. ಮಹಾಂತೇಶ ೧೯.ಗೂಡಾಳ ಜಯಪ್ಪ ೨೦.ಕೆ.ಬಿ. ಷಣ್ಮುಖಪ್ಪ ೨೧.ಟಿ. ಹಾಲಪ್ಪ ೨೨.ಗೊಂದಳಿ ದುರುಗಪ್ಪ ೨೩.ಬಿ.ಎಸ್. ಸ್ವಾಮಿನಾಥನ್ ೨೪.ಟಿ. ಗಂಗಾಧರಪ್ಪ ೨೫.ಶಿವನಾಗಪ್ಪ ೨೬.ಪರಶುರಾಮಪ್ಪ ೨೭.ಡಿ. ಕೊಳ್ಳಪ್ಪ ೨೮.ಬಿಳಿಚೋಡು ಕರಿಯಪ್ಪ ೨೯.ಫಕೀರಪ್ಪ ೩೦.ಪಿರೀಬಾಯಿ ೩೧.ಸೋಬಾನೆ ರತ್ನಮ್ಮ ೩೨.ಬಸವರಾಜು ಎಚ್.ಬಿ. ೩೩.ಎಚ್. ಬಸಪ್ಪ ೩೪.ತಂಬೂರು ಉಮಾನಾಯಕ ೩೫.ಡೊಳ್ಳಿನ ರಾಮಪ್ಪ ೩೬.ವೀರಗಾಸೆ ಮಲ್ಲಪ್ಪ ೩೭.ಖಡ್ಗದ ಸಿದ್ಧಪ್ಪ ೩೮.ಬಸಪ್ಪ ೩೯.ಪಿ.ಆರ್. ಹನುಮಂತಪ್ಪ ೪೦.ಕೋಲುಕಾರ ಭೀಮಪ್ಪ ೪೧.ಚೌಡಿಕೆ ಬಸಪ್ಪ ೪೨.ಗೊರಪ್ಪರ ಲಕ್ಕಮ್ಮ ೪೩.ದೊಡ್ಡಮಲ್ಲಪ್ಪ ೪೪.ಗಂಗಾಧರಯ್ಯ ೪೫.ಶಾರದಮ್ಮ ೪೬.ಲಾವಣಿ ಬುಡನ್ ಸಾಬ್ ೪೭.ಚಿಕ್ಕಸಿದ್ದಪ್ಪ ೪೮.ಲಕ್ಷ್ಮಪ್ಪ ೪೯.ಮಹೇಶ್ವರಪ್ಪ ೫೦.ಎಂ.ಎಸ್. ವೀರಪ್ಪ ೫೧.ಜಿ.ಆರ್. ವೀರಣ್ಣ ೫೨.ನರಸಿಂಹಮೂರ್ತಿ ೫೩.ಪಾಪಮ್ಮ ೫೪.ದೇವಿಕೆರೆ ಭೀಮಕ್ಕ ೫೫.ಸಿ. ಮಲ್ಲಿಕಾರ್ಜುನ ೫೬.ಮಲಪ್ಪ ಅಸಗೋಡು

೧೨೦೯. ದಾಸಸಾಹಿತ್ಯ ಮತ್ತು ಜಾನಪದ

ಲೇ: ಜಿ.ಆರ್. ತಿಪ್ಪೇಸ್ವಾಮಿ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು–೫೬೦ ೦೦೨; ಮೊ.ಮು.೧೯೯೭; ಪುಟ ೧೪+೬೫=೭೯; ಕ್ರೌನ್ ೧/೮

ಒಂಬತ್ತು ಅಧ್ಯಾಯಗಳಿವೆ: ೧.ದಾಸ ಸಾಹಿತ್ಯ ಮತ್ತು ಜಾನಪದ ೨.ಭಕ್ತಿ ಪಂಥದ ಮುಖ್ಯ ಪ್ರೇರಣೆಗಳು ೩.ದಾಸಸಾಹಿತ್ಯ: ಒಂದು ವಿಹಂಗಮ ನೋಟ ೪.ಕೀರ್ತನೆಗಳಲ್ಲಿ ಜಾನಪದ ೫.ಕಾವ್ಯ ಮತ್ತು ಜಾನಪದ ೬.ಜನಪದ ವಾದ್ಯಗಳು ೭.ಆಭರಣಗಳು / ವೈದ್ಯ / ನಡವಳಿಕೆಗಳು ೮.ದೇಸಿಯತೆ ೯.ಸಮಾರೋಪ.

೧೨೧೦. ದಾಸ ಸಾಹಿತ್ಯದಲ್ಲಿ ಜಾನಪದ ಅಂಶಗಳು: ಒಂದು ಅಧ್ಯಯನ

ಲೇ: ಆರ್. ಸುನಂದಮ್ಮ; ಪ್ರ: ಈ ಪುಸ್ತಕ ತಿರುಪತಿ ತಿರುಮಲ ದೇವಸ್ಥಾನದವರ ಧನಸಹಾಯದಿಂದ ಪ್ರಕಟವಾಗಿದೆ; ಮೊ.ಮು. ೧೯೯೪; ಪುಟ ೮+೩೧೨=೩೨೦; ಡಿಮ್ಮೈ ೧/೮

ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ ಈ ಗ್ರಂಥದಲ್ಲಿ ಏಳು ಅಧ್ಯಾಯಗಳಿವೆ: **೧.ಶಿಷ್ಟಪದ–ಜಾನಪದ:** ಅ. ಜನಪದ: ಶಿಷ್ಟಪದ, ಪರಸ್ಪರ ವ್ಯತ್ಯಾಸ ಮತ್ತು ಸಂಬಂಧ ಆ. ಶಿಷ್ಟಕವಿ–ಜನಪದ ಕವಿ ಇ. ಶಿಷ್ಟಪದದಲ್ಲಿ ಜಾನಪದ ಅಂಶಗಳು ಬಳಕೆಯಾಗುವ ರೀತಿ ಮತ್ತು ಅದನ್ನು ಗುರುತಿಸುವ ಬಗೆ. ಈ. ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಕೀರ್ತನಕಾರರ ಪ್ರಾತಿನಿಧ್ಯ. **೨.ದಾಸಸಾಹಿತ್ಯದ ಸ್ವರೂಪ:** ಅ. ಹಿನ್ನೆಲೆ ಆ. ಪ್ರೇರಣೆ ಇ. ಪ್ರಭಾವ ಈ. ಸ್ವರೂಪ ಮತ್ತು ವ್ಯಾಪ್ತಿ ಉ. ದಾಸ ಸಾಹಿತ್ಯದ ಪ್ರಮುಖ ದಾಸರು. **೩.ದಾಸ ಸಾಹಿತ್ಯದಲ್ಲಿ ಬಳಕೆಗೊಂಡಿರುವ ಜನಪದ ಸಾಹಿತ್ಯ ಪ್ರಕಾರಗಳು:** ಅ. ಗೀತೆ ಆ. ಗಾದೆ ಇ. ಕತೆ ಈ. ಒಗಟು. **೪.ದಾಸ ಸಾಹಿತ್ಯದಲ್ಲಿ ಬಳಕೆಯಾಗಿರುವ ನಂಬಿಕೆ ಮತ್ತು ಸಂಪ್ರದಾಯಗಳು:**

ಅ. ಶಕುನ, ದೈವ, ದೆವ್ವ ಮುಂತಾದ ವಿಚಾರಗಳ ಬಗ್ಗೆ ಇರುವ ನಂಬಿಕೆ, ಸಂಪ್ರದಾಯಗಳು ಆ. ಹಬ್ಬಗಳು ಇ. ಜೀವನ ಚಕ್ರದ ಪ್ರಮುಖ ಘಟ್ಟಗಳಲ್ಲಿ ಕಂಡುಬರುವ ನಂಬಿಕೆ, ಸಂಪ್ರದಾಯಗಳು. **೫.ದಾಸರ ಕೀರ್ತನೆಗಳಲ್ಲಿ ಕಲೆಗಳು:** ಅ. ಪ್ರದರ್ಶನ ಕಲೆಗಳು ಆ. ಜನಪದ ವಾದ್ಯಗಳು ಇ.ಕ್ರೀಡೆಗಳು ಈ. ಹರಿಕಥೆ. **೬.ದಾಸಸಾಹಿತ್ಯದ ಭಾಷಾ ಸ್ವರೂಪ:** ಅ.ದಾಸಸಾಹಿತ್ಯದ ರಚನೆ ಆ.ದಾಸಸಾಹಿತ್ಯದ ಪ್ರಮುಖ ರೂಪಗಳು ಇ.ಭಾಷಾ ವೈವಿಧ್ಯತೆ ಈ.ನುಡಿಗಟ್ಟು ಉ.ಜನಪದ ಶಬ್ದರೂಪಗಳು. **೭.ದಾಸಸಾಹಿತ್ಯದಲ್ಲಿ ಬಳಕೆಗೊಂಡಿರುವ ಇತರ ಜಾನಪದ ಪ್ರಕಾರಗಳು:** ಅ.ಧರ್ಮ ಆ.ನಡಾವಳಿಗಳು ಇ. ಅಡುಗೆ ಈ. ಉಡುಗೆ-ತೊಡುಗೆ. ಪ್ರಾರಂಭದಲ್ಲಿ ಪೀಠಿಕೆ, ಕೊನೆಯಲ್ಲಿ, ಉಪಸಂಹಾರ, ಅನುಬಂಧ, ಮುಖ್ಯ ಆಕರ ಗ್ರಂಥಗಳು, ಉಪಯುಕ್ತ ಗ್ರಂಥಸೂಚಿ, ಶಬ್ದಸೂಚಿ ಇವೆ. ಅನುಬಂಧದಲ್ಲಿ ದಾಸರ ಕೃತಿಗಳಲ್ಲಿ ಬಳಕೆಯಾಗಿರುವ ೨೨೨ ಗಾದೆಗಳನ್ನು ಪಟ್ಟಿ ಮಾಡಲಾಗಿದೆ.

೧೨೧೧. ದಾಸಪ್ಪ-ಜೋಗಪ್ಪ

ಸಂ. ಹಿ.ಚಿ. ಬೋರಲಿಂಗಯ್ಯ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮; ಮೊ.ಮು. ೧೯೮೧, ಪುಟ ೮ + ೨೦೩= ೨೧೧, ಡಿಮ್ಮೈ ೧/೮

ಎರಡು ಸಂಪ್ರದಾಯಗಳ ಅಭ್ಯಾಸ ಎಂಬ ಅಡಿಬರಹ ಇದೆ. ಏಳು ಅಧ್ಯಾಯಗಳಿವೆ. ೧.ದಾಸಪ್ಪ ೨.ದಾಸಯ್ಯಗಳ ತಿರುಪತಿ ಯಾತ್ರೆ ೩.ದಾಸಪ್ಪನ ಪದಗಳು ೪.ದಾಸಪ್ಪನ ಸಂದರ್ಶನ ೫.ಜೋಗಪ್ಪ ೬.ಜೋಗಪ್ಪನ ಪದಗಳು ೭.ಜೋಗಪ್ಪನ ಸಂದರ್ಶನ. ಪ್ರಾರಂಭದಲ್ಲಿ ೧೪ ಪುಟಗಳ ಪ್ರಸ್ತಾವನೆ, ಅನುಬಂಧದಲ್ಲಿ, ನಿರೂಪಕರ ಪರಿಚಯ, ಅರ್ಥಕೋಶ ಇವೆ.

೧೨೧೨. ದಾಳಿಂಬೆ ರಾಣಿ

ಸಂ: ಟಿ.ಎಸ್. ರಾಜಪ್ಪ; ಪ್ರ: ಸಾಗರ್ ಪ್ರಕಾಶನ, ೬೯೫, ೧೧ನೇ ಮುಖ್ಯರಸ್ತೆ, ೮೦ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು-೫೬೦ ೦೭೨; ಮು.ಗಳು: ೧೯೭೧, ೨೦೧೨; ಪುಟ ೮೦; ಡಿಮ್ಮೈ ೧/೮

ಒಂಬತ್ತು ಕಥೆಗಳ ಸಂಕಲನ: ೧.ಬೆಟ್ಟ ಬ್ಯಾಗೆಗೆ ಬಿದ್ದವಳು ೨.ಶೀಲವತಿ ೩.ಜಾಣರಾಯನ ಕತೆ ೪.ನಂದಿನಿ ಕತೆ ೫.ಪಾಪಪುಣ್ಯ ೬.ಎಸಳಿಗೆ ಮುಳ್ಳು ೭.ದಾಳಿಂಬೆರಾಣಿ ೮.ಹಂಸವತಿ ೯.ಗಮ್ಮಚ್ಚಕ್ಕಿ ಪೀಠಿಕೆಯಲ್ಲಿ ಕಥೆಗಳೊಂದಿಗೆ ಕಥೆಗಾರ್ತಿಯರ ಹೆಸರುಗಳನ್ನೂ ನೀಡಲಾಗಿದೆ. ಕೊನೆಯಲ್ಲಿರುವ ಈ ಕತೆಗಳನ್ನು ಕುರಿತು ಎಂಬ ಬರಹದಲ್ಲಿ 'ಈ ಕಥಾ ಸಂಕಲನದಲ್ಲಿರುವ ಕತೆಗಳನ್ನು ಹೇಳಿದವರೆಲ್ಲರೂ ವೀರಶೈವ ಹೆಂಗಸರು' ಎಂಬ ಮಾಹಿತಿ ಇದೆ. ಅದಾದ ಮೇಲೆ ಅರ್ಥಕೋಶ ಇದೆ.

೧೨೧೩. ದೀಪದ ಕೆಳಗೆ ಕತ್ತಲೆ

ಸಂ: ಮೈಲಹಳ್ಳಿ ರೇವಣ್ಣ; ಪ್ರ: ರಾಜ್ ಪ್ರಕಾಶನ, ೮೩, ಕೆ.ಎಸ್.ಆರ್.ಟಿ.ಸಿ. "ಸಿ" ಬಡಾವಣೆ,

ಹನುಮಂತನಗರ, ಬನ್ನಿಮಂಟಪ, ಮೈಸೂರು–೫೭೦ ೦೧೫; ಮೊ.ಮು. ೨೦೦೩; ಪುಟ ೩೪+೧೪೨=೧೭೬; ಡಿಮೈ ೧/೮

ಗಾದೆಗಳ ಸಂಕಲನ ಎಂಬ ಅಡಿಟಿಪ್ಪಣಿ ಇದೆ. ೧೪೧೨ ಗಾದೆಗಳಿವೆ. ಇವುಗಳಲ್ಲಿ ಕಥೆಯನ್ನೊಳಗೊಂಡ ಏಳು ಗಾದೆಗಳನ್ನು ಗುರುತಿಸಿ ಆ ಕಥೆಗಳನ್ನು ವಿವಿಧ ವಕ್ತೃಗಳಿಂದ ಸಂಗ್ರಹಿಸಿಕೊಟ್ಟಿದ್ದಾರೆ. ಅಂಬಳಿಕೆ ಹಿರಿಯಣ್ಣ ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ಅರ್ಥಕೋಶ, ವಕ್ತೃಗಳಸೂಚಿ ಇವೆ.

೧೨೧೪. ದುಂಡಮಲ್ಲಿಗಿ ಹೂವ ಬುಟ್ಟಿಲಿ ಬಂದಾವ

ಸಂ: ಎಚ್.ಎಲ್. ನಾಗೇಗೌಡ; ಸಹ ಸಂ: ಎಂ.ಎನ್. ವಾಲಿ; ಪ್ರ: ಕರ್ನಾಟಕ ಜಾನಪದ ಪರಿಷತ್ತು, ೭, ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ ರಸ್ತೆ, ೫ನೇ ಕ್ರಾಸ್, ೪ನೇ ಬ್ಲಾಕ್, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–೫೬೦ ೦೨೦; ಮೊ.ಮು.೧೯೫; ಪುಟ ೨೨+೨೬೮=೨೯೦; ಕ್ರೌನ್ ೧/೮

ಉತ್ತರ ಕರ್ನಾಟಕದ ಜನಪದರ ಗೀತೆಗಳು ಎಂಬ ಅಡಿಬರಹವು ಮುಖಪುಟದಲ್ಲಿದೆ. ಹತ್ತೊಂಬತ್ತು ದಂಡೆಗಳಿವೆ: ೧.ಜೋಗುಳ ಪದಗಳು ೨.ಮದುವೆಯ ಕಾಲಕ್ಕೆ ಬೀಗರ ಹಾಡುಗಳು ೩.ಬೀಸುವ–ಕುಟ್ಟುವ ಹಾಡುಗಳು ೪.ಪ್ರೇಮಗೀತೆಗಳು ೫.ಭಕ್ತಿಗೀತೆಗಳು ೬.ಸೋಬಾನ ಹಾಡುಗಳು ೭.ಸಂವಾದ ಗೀತೆಗಳು ೮.ಹಂತಿಯ ಹಾಡುಗಳು ೯.ಹಬ್ಬದ ಹಾಡುಗಳು ೧೦.ಕೋಲು ಪದಗಳು ೧೧.ಭಜನಾ ಹಾಡುಗಳು ೧೨.ಅನುಭಾವ ಪದಗಳು ೧೩.ಕಥನಗೀತಗಳು: ಕೆರೆಗೆ ಹಾರ, ಕಡ್ಲಿಮಟ್ಟಿ ಕಾಶಿಬಾಯಿ, ತಾಯಿ ತಂದಿ ಹೊಟ್ಟಿಲೆ ಮಗಾ ಒಬ್ಬಿದ್ದನೇಳ್ರೀ ಒಟ್ಟನ, ಕ್ವಾಟಿಯ ಏರ‍್ಯಾಳ ಕೊಲ್ಲಂತ ಕೂಗ್ಯಾಳ. ಬರದ ಹಾಡು ೧೪.ಚೌಡಕಿ ಹಾಡುಗಳು ೧೫.ಗೀಗೀ ಹಾಡುಗಳು ೧೬.ರಿವಾಯತ ಹಾಡುಗಳು ೧೭.ಮೈಲಾರಲಿಂಗನ ಹಾಡುಗಳು ೧೮.ವೀರಭದ್ರದೇವರ ಒಡಪು–ಹಾಡು ೧೯.ಸಂಕೀರ್ಣ. ಎಚ್.ಎಲ್. ನಾಗೇಗೌಡ ಅವರ ಮುನ್ನುಡಿ, ಎಂ.ಎನ್. ವಾಲಿ ಅವರ ಪ್ರಸ್ತಾವನೆ ಇವೆ. ಕೊನೆಯಲ್ಲಿ, ಟೀಕೆ ಟಿಪ್ಪಣಿಗಳು ಎಂಬ ಭಾಗ ಇದ್ದು ಶಬ್ದಾರ್ಥಗಳನ್ನು ಒಳಗೊಂಡಿದೆ. ಹಾಡಿದವರ ಹೆಸರುಗಳನ್ನು ಆಯಾ ಹಾಡಿನ ಪ್ರಾರಂಭದಲ್ಲೆ ನೀಡಲಾಗಿದೆ.

೧೨೧೫. ದುಡಿದವನ ದುಡ್ಡಿನ ಬೆಲೆ

ಲೇ: ಪಿ.ಕೆ. ರಾಜಶೇಖರ; ಪ್ರ: ಸಂವಹನ, ೧೨/೧ಎ, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ; ಮೈಸೂರು–೫೭೦ ೦೦೧; ಮೊ.ಮು.೨೦೦೬; ಪುಟ ೮; ಕ್ರೌನ್ ೧/೪

ಸರಳ ಭಾಷೆಯಲ್ಲಿ ನಿರೂಪಿತವಾಗಿರುವ ಒಂದು ಜನಪದ ಕಥೆ. ಹಲವು ರೇಖಾಚಿತ್ರಗಳಿವೆ.

೧೨೧೬. ದುರುಗ ಜಾನಪದ

ಲೇ: ಮೀರಾಸಾಬಿಹಳ್ಳಿ ಶಿವಣ್ಣ; ಪ್ರ: ಅಕ್ಷಯ ಪ್ರಕಾಶನ, ಚಿತ್ರದುರ್ಗ; ಮೊ.ಮು. ೧೯೯೯, ಎ,ಮು. ೨೦೧೦; ಪುಟ ೧೪+೧೬೨=೧೭೬; ಡಿಮ್ಮೈ ೧/೮

೨೧ ಲೇಖನಗಳ ಸಂಕಲನ: ೧.ಚಿತ್ರದುರ್ಗ ಜಿಲ್ಲೆಯ ಜಾನಪದ ೨.ಜಿಲ್ಲೆಯ ಬುಡಕಟ್ಟುಗಳು – ಸಾಂಸ್ಕೃತಿಕ ಸಮೀಕ್ಷೆ ೩.ಜಿಲ್ಲೆಯ ಬುಡಕಟ್ಟುಗಳು ಹಾಗೂ ಅವುಗಳ ಜನಪದ ಸಾಹಿತ್ಯ ೪.ಜಾನಪದ ಸಾಹಿತ್ಯದಲ್ಲಿ 'ಮದಕರಿ' ಪಾಳೆಯಗಾರರು ೫.ದುರುಗ ಚರಿತ್ರೆಯ ದುರಂತ ಪುಟ – ದೊಡ್ಡ ಮದಕರಿ ನಾಯಕ ೬.ನಾಯಕನಹಟ್ಟಿ ಪಾಳೆಯಗಾರರು – ಒಂದು ಮುನ್ನೋಟ ೭.ಗಣೆಯವರು ೮.ಎತ್ತಪ್ಪ ಜುಂಜಪ್ಪ: ಕಾಡುಗೊಲ್ಲರ ಸಾಂಸ್ಕೃತಿಕ ವೀರರು ೯.ಜಿಲ್ಲೆಯ ಪರಿಶಿಷ್ಟರು ಹಾಗೂ ಜನಪದ ಕಲೆಗಳು ೧೦.ಜಿಲ್ಲೆಯ ಜಾನಪದ ನೆಲೆಗಳು – ಪ್ರವಾಸೋದ್ಯಮ ಸಾಧ್ಯತೆಗಳು ೧೧.ಜಿಲ್ಲೆಯ ಜನಪದ ಕಲೆಗಳು ೧೨.ಜನಪದ ಸಾಹಿತ್ಯಕ್ಕೆ ಜಿಲ್ಲೆಯ ಕೊಡುಗೆ ೧೩.ದೊಡ್ಡ ಉಳ್ಳಾರತಿ ಗೌರಮ್ಮ – ಒಂದು ಅವಲೋಕನ ೧೪.ಡಿಕ್ಕಿ ಹಬ್ಬ ೧೫.ಮೊಳಕಾಲ್ಮೂರು ತಾಲ್ಲೂಕಿನ ಜಾನಪದ ನೆಲೆಗಳು ೧೬.ಚಳ್ಳಕೆರೆ ತಾಲ್ಲೂಕಿನ ಜಾನಪದ ೧೭.ಹಿರಿಯೂರು ತಾಲ್ಲೂಕಿನ ಜಾನಪದ ನೆಲೆಗಳು ೧೮.ಹೊಸ ಗುಡ್ಡದತ್ತ ಹತ್ತು ಹೆಜ್ಜೆ ೧೯.ಆಲು ರಾಮೇಶ್ವರ ೨೦.ಗಡಿನಾಡಿನ ಸಾಂಸ್ಕೃತಿಕ ಬಾಂಧವ್ಯ ೨೧.ಜಿಲ್ಲೆಯಲ್ಲಿ ಜಾನಪದ ಸಂಶೋಧನೆಯ ಸಾಧ್ಯತೆಗಳು.

೧೨೧೭. ದುರಗಮುರಗಿಯವರ ಸಂಸ್ಕೃತಿ

ಲೇ: ಗೀತಾ ನಾಗಭೂಷಣ; ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು– ೫೬೦೦೦೨; ಮೊ.ಮು: ೧೯೯೩; ಪು: ೪೮+೧೨೮=೧೭೬; ಕ್ರೌನ್ ೧/೮

ಏಳು ಅಧ್ಯಾಯಗಳಿವೆ: ೧.ಹಿನ್ನೆಲೆ ೨.ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ ೩.ಭಾಷೆ ಸಾಹಿತ್ಯ ೪.ಆಚರಣೆ ಮತ್ತು ಕಲೆ ೫.ಪ್ರದರ್ಶನಾತ್ಮಕ ಕಲೆಗಳು ೬.ಸಾಮಾಜಿಕ ಪರಿವರ್ತನೆಯ ಹಿನ್ನೆಲೆಯಲ್ಲಿ ೭.ಸಮಾರೋಪ ಅನುಬಂಧದಲ್ಲಿ ಆರು ಭಾಗಗಳಿವೆ: ೧.ದುರಗಮುರಗಿಯರ ಸಾಹಿತ್ಯ–ಸೋಬಾನದ ಹಾಡುಗಳು ೨.ಮದುವೆಯ ಹಾಡುಗಳು ೩.ಕಥನಗೀತೆಗಳು: ಹೊಳೆ ದಾಟುವ ಹಾಡು ,ನಗೆ ಚಾಟಿಯರ ಹಾಡು ೪.ಒಗಟು ಒಡೆಯುವ ಹಾಡು ೫.ಕತೆಗಳು (ನಾಲ್ಕು) ೬.ಗಾದೆಗಳು (೬೫) ಬರಗೂರು ರಾಮಚಂದ್ರಪ್ಪ ಅವರ ಸಂಸ್ಕೃತಿ ಉಪಸಂಸ್ಕೃತಿ ಎಂಬ ೪೩ ಪುಟಗಳಷ್ಟು ಸುದೀರ್ಘ ಪ್ರಸ್ತಾವನೆ ಇದೆ.

೧೨೧೮. ದೃಷ್ಟಿ (ತಾರ್ಕಣಿ ಆದ್ದಂಗೆ)

ಲೇ: ಇಂದಿರಾ ಹಾಲಂಬಿ (ಗಿರಿವಾಸಿನಿ); ಪ್ರ: ಸಂದೀಪ ಸಾಹಿತ್ಯ, ಆತ್ರಾದಿ, ಉಡುಪಿ– ೫೭೬ ೧೨೩; ಮೊ.ಮು. ೧೯೮೮; ಎ.ಮು.೧೯೯೮; ಪುಟ ೪+೧೯=೨೩; ಕ್ರೌನ್ ೧/೮

ಜಾನಪದ ರೂಪಕ ಎಂಬ ಅಡಿಬರಹ ಇದೆ. ಕರ್ನಾಟಕ ಜಾನಪದ ಟ್ರಸ್ಟ್ ಬೆಂಗಳೂರು ಇವರು ೧೯೮೩ ರಲ್ಲಿ ಏರ್ಪಡಿಸಿದ್ದ ರೂಪಕ ರಚನಾ ಸ್ಪರ್ಧೆಯಲ್ಲಿ ಬಹುಮಾನಿತ ಕೃತಿ ಎಂಬ ವಾಕ್ಯವು ರೂಪಕದ ಪ್ರಾರಂಭಕ್ಕೆ ಮುಂಚೆಯೇ ಕಾಣಿಸುತ್ತದೆ.

೧೨೧೯. ದೇವ-ದೇವಿ

ಲೇ: ವೆಂಕಟೇಶ ಇಂದ್ವಾಡಿ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಕಲಯ, ಹಂಪಿ; ಮೊ.ಮು: ೨೦೦೨; ಪು: ೧೪+೯೪=೧೦೮; ಡಿಮ್ಮೈ ೧/೮

ಅಲೆವ ಜನರ ಕೆಲವು ಆಚರಣೆಗಳ ಮುಖೇನ ಎಂಬ ಅಡಿಬರಹ ಇದೆ. ಹನ್ನೊಂದು ಅಧ್ಯಾಯಗಳಿವೆ: ೧.೧೪ ಗ್ರಾಮದ ೨೫ ಮನೆ ತೆಲುಗುಶೆಟ್ಟರ ಮೂಲ ೨.ಕರ್ನಾಟಕದ ಅಲ್ಪಸಂಖ್ಯಾತ ಆಯೋಗಗಳು ೩.ವಲಸೆಯ ವಿವಿಧ ಹಂತಗಳು ಪಂಗಡಗಳಾದದ್ದು ೪.ಕುಲಕಥನಗಳ ಸಮೀಕ್ಷೆ ೫.ಮದುವೆ: ಕಳ್ಳಿಗೆ ಕಂಕಣ ಅಥವಾ ಹುಸಿಹೆಣ್ಣು ೬.ದೇವ-ದೇವಿ ೭.ಪೂರ್ವಿಕರ ಹಬ್ಬಗಳು ೮.ಕುಲಕಸುಬು ೯.ಭಾಷೆ ೧೦.ಸಾವಿನ ಆಚರಣೆ ೧೧.ಸಮಾರೋಪ. ಅನುಬಂಧದಲ್ಲಿ, ಮೂರು ಕುಲಕಥನಗಳ ಕಥಾನಕಗಳು, ೨೪ ಕುಲಗಳ ಪಟ್ಟಿ, ಪದಕೋಶ, ಇವೆ. ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ ಎಂಬ ಎಚ್.ಜೆ. ಲಕ್ಕಪ್ಪಗೌಡ ಅವರ ಮುನ್ನುಡಿ ಇದೆ.

೧೨೨೦. ದೇವದಾಸಿಯರ ಹಾಡುಗಳು

ಸಂ: ಕನರಾಡಿ ವಾದಿರಾಜ ಭಟ್ಟ; ಪ್ರ: ಶ್ರೀ ಮಹತೋಭಾರ ಮಹಾಲಿಂಗೇಶ್ವರ ದೇವಸ್ಥಾನ, ಬಸ್ರೂರು, ದ.ಕ; ಮೊ.ಮು: ೧೯೮೭; ಪು: ೧೦೦; ಕ್ರೌನ್ ೧/೮

೨೮ ಹಾಡುಗಳಿವೆ ಅನುಬಂಧದಲ್ಲಿ ೧೪ ಹಾಡುಗಳಿವೆ. ಅನುಬಂಧ ೨ ರಲ್ಲಿ ಮತ್ತೆ ಮೂರು ಹಾಡುಗಳು ಹಾಗೂ ಹಾಡಿದವರ ವಿವರಗಳಿವೆ. ಅನುಬಂಧ ೩ ರಲ್ಲಿ: ಹುಟ್ಟು-ಬೆಳವಣಿಗೆ, ಇತಿಹಾಸ, ತುಳುನಾಡಿನಲ್ಲಿ ದೇವದಾಸಿ ಪದ್ಧತಿ, ಗೆಜ್ಜೆಪೂಜೆ, ಪ್ರಸ್ತ, ದೇವಸ್ಥಾನದಲ್ಲಿ ಮೇಳ, ಕಲಾವೈವಿಧ್ಯ, ಹಾಡುಗಳು, ಹಾಡು-ಸಂಗೀತ, ಹಾಡು-ಕುಣಿತ, ಎಂಬ ಶೀರ್ಷಿಕೆಗಳನ್ನುಳ್ಳ ಲೇಖನ ಇದೆ. ಕೊನೆಯಲ್ಲಿ ಟಿಪ್ಪಣಿಗಳು ಇವೆ. ಶಿವರಾಮ ಕಾರಂತ ಅವರ ಮುನ್ನುಡಿ ಇದೆ.

೧೨೨೧. ದೇವ್ರು ಬಂದಾವ್ ಬನ್ನಿರೇ

ಸಂ: ಶಿವಾನಂದ ಗುಬ್ಬಣ್ಣವರ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು. ೧೯೭೯; ಪುಟ ೪೦+೨೦೮=೨೪೮; ಡಿಮ್ಮೈ ೧/೮

ಹದಿನೆಂಟು ಕಥನಗೀತೆಗಳ ಸಂಕಲನ: ೧.ಡೊಳ್ಳಿನ ಹಾಡು ೨.ಜೊಳ್ಳಾಸುರನ ವಧೆ ೩.ವೀರ ಗೊಲ್ಲಾಳ ೪.ಏಳು ಕೊಳ್ಳದ ಎಲ್ಲಮ್ಮ ೫.ಶಿವಶರಣೆ ನಿಂಬೆಕ್ಕ ೬.ಕೋಳೂರ ಕೊಡಗೂಸು ೭.ಭಕ್ತ ಪ್ರಹ್ಲಾದ ೮.ಸ್ವಾಮಿನಿಷ್ಠ ಶಂಕಿತೊಂಡಿ ೯.ಗುರುಭಕ್ತ

೧೦.ತಿರುನೀಲಕಂಠ ೧೧.ಪತಿಪರಾಯಿಣಿ ಪದ್ಮಾದೇವಿ ೧೨.ಪತಿಭಕ್ತೆ ಅನಲಾದೇವಿ ೧೩.ಪಾರ್ವತಿಯ ಬಯಕೆ ೧೪.ಭೃಂಗಿ ೧೫.ಪಾರ್ವತಿಯ ಗರ್ವಭಂಗ ೧೬.ಭೀಮಾರ್ಜುನರ ಗರ್ವಭಂಗ ೧೭.ಜಗಜ್ಜನನಿ ೧೮.ಮಾಯೆ. ಎಂ.ಎಸ್. ಸುಂಕಾಪುರ ಅವರ ಮುನ್ನುಡಿ, ಪ್ರಸ್ತಾವನೆ, ಕೊನೆಯಲ್ಲಿ ಶಬ್ದಕೋಶ, ಇವೆ.

೧೨೨೨. ದೇವರಗುಡ್ಡ

ಲೇ: ಎಸ್.ಎಸ್. ಭದ್ರಾಪುರ; ಪ್ರ: ಕರ್ನಾಟಕ ಜಾನಪದ ಯಕ್ಷಗಾನ ಅಕಾಡಿಮ್ಯೆ, ೧೪/೩, ನೃಪತುಂಗರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು.೧೯೯೫; ಪುಟ ೧೨+೭೯=೯೧; ಡಿಮ್ಯೆ ೧/೮

ಹದಿಮೂರು ಅಧ್ಯಾಯಗಳಿವೆ: ೧.ದೇವರಗುಡ್ಡದ ಐತಿಹಾಸಿಕ ಪರಿಚಯ ೨.ದೇವರಗುಡ್ಡ ಕ್ಷೇತ್ರದ ಸಾಮಾಜಿಕ ಹಿನ್ನೆಲೆ ೩.ದೇವರಗುಡ್ಡದ ಕ್ಷೇತ್ರದಲ್ಲಿ ಹಬ್ಬ ಹರಿದಿನಗಳ ಪ್ರಸಂಗ ೪.ದೇವರಗುಡ್ಡದ ಅರ್ಚಕರು-ಪೂಜಾರಿಗಳು ೫.ಪೂಜೆ ಪುರಸ್ಕಾರ ೬.ವೇಷಭೂಷಣಗಳು ೭.ಪ್ರಸಾದ ೮.ನಂಬಿಕೆಗಳು ಹಾಗೂ ಸಂಪ್ರದಾಯ ೯.ಪುರಾಣಕತೆಗಳಲ್ಲಿ ದೇವರಗುಡ್ಡ ೧೦.ಪವಾಡಗಳು ೧೧.ಗೊರವ ಗೊರವಿಯರು ೧೨.ದೇವರಗುಡ್ಡ ಕ್ಷೇತ್ರದ ಸಂಬಂಧಗಳ ಪರಿಚಯ ೧೩.ದೇವರಗುಡ್ಡಕ್ಕೆ ಸಂಬಂಧಿಸಿದ ಹಾಡುಗಳ ಸಂಗ್ರಹ.

೧೨೨೩. ದೇವರಿಗೇ ಶರಣೆನ್ನುವೆನೇ

ಸಂ: ಕಮಲ ಹೆಮ್ಮಿಗೆ; ಪ್ರ: ಪ್ರಭಾ ಪಬ್ಲಿಷರ್ಸ್, ಧಾರವಾಡ; ಮೊ.ಮು.೧೯೯೪, ಪುಟ ೨೨ + ೯೪+೪= ೧೨೦, ಕ್ರೌನ್ ೧/೮

ಡೊಳ್ಳಿನ ಪದಗಳು ಎಂಬ ಅಡಿಬರಹ ಇದೆ. ೩೬ ಪದಗಳಿವೆ. ಸಂಪಾದಕರ ಪ್ರಸ್ತಾವನೆ, ಡಾ. ಚೆನ್ನಣ್ಣ ವಾಲೀಕಾರ ಅವರ ಕೃತಿ ವಿವೇಚನೆ ಇವೆ. ಕೊನೆಯಲ್ಲಿ ನಾಲ್ಕು ಪುಟಗಳ ಶಬ್ದಾರ್ಥ ಇದೆ.

೧೨೨೪. ದೇವಾಂಗ ಸಂಸ್ಕೃತಿ

ಲೇ: ಕೆ.ಜಿ. ನಾಗರಾಜಪ್ಪ; ಪ್ರ: ಡಾ॥ ಜಿ.ಸರೋಜಮ್ಮ ಜಿ,ಆರ್. ಶ್ರೀನಿವಾಸ ಸೇವಾ ಪ್ರತಿಷ್ಠಾನ, ೯೪, ೩ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ, ೩ನೇ ಹಂತ, ವಿನಾಯಕ ಲೇಔಟ್, ವಿಜಯನಗರ, ಬೆಂಗಳೂರು-೫೬೦ ೦೪೦; ಮೊ.ಮು.೨೦೦೩; ಪುಟ ೯+೧೬೭=೧೭೬; ಡಿಮ್ಯೆ ೧/೮

ಒಂಬತ್ತು ಅಧ್ಯಾಯಗಳಿವೆ: ೧.ದೇವಾಂಗ ಮೂಲ ಗ್ರಂಥಗಳು –ಒಂದು ಸಮೀಕ್ಷೆ ೨.ದೇವಾಂಗ ಸಂಸ್ಕೃತಿ–ಒಂದು ಅಧ್ಯಯನ ೩.ಬೆಡಗುಗಳು ಮತ್ತು ಗೋತ್ರಗಳು ೪.ದೇವರ ದಾಸಿಮಯ್ಯ –ಮರು ಚಿಂತನೆ ೫.ಸಂತ ಕವಿ ರುದ್ರಮುನಿ ಸ್ವಾಮಿ ೬.ಸಾಸಲು

ಬನಶಂಕರಿ ಜಾತ್ರೆ –ಒಂದು ವಿಶ್ಲೇಷಣೆ ೭.ದೇವಾಂಗ ಜನಾಂಗ–ಚಿಂತನ ಮಂಥನ ೮.ದೇವಾಂಗ ಜನಾಂಗ ಶಾಕ್ತರು ೯.ಗೋತ್ರ, ಸೂತ್ರ, ಪ್ರವರಗಳು ಅನುಕರಣವೆ?

೧೨೨೫. ದೇವಿ ಹೇಳಿದ ಕಿನ್ನರ ಕಥೆಗಳು

ಸಂ: ಎನ್.ಆರ್. ನಾಯಕ; ಪ್ರ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು. ೨೦೦೯; ಪುಟ ೨೮+೧೧೩=೧೪೧; ಡಿಮ್ಮೈ ೧/೮

ಶೀರ್ಷಿಕೆಯ ಪುಟದಲ್ಲೆ ನಿರೂಪಕರ ಹೆಸರನ್ನು ನಮೂದಿಸಲಾಗಿದೆ: ದೇವಿ ನಾಗಪ್ಪ ಆಗೇರ. ಒಂಭತ್ತು ಕಥೆಗಳಿವೆ: ೧.ಹುಳ್ವಾದ ಚಿಲ್ಲೆಯವರ ೨.ಗೌಡ್ನ ಮಗ ೩.ಮೀನಕುಮಾರ ೪.ಮುತ್ತು ಕಾರುವವ ೫.ಏಳು ಜನ ಅಣ್ಣ–ತಮ್ಮಂದಿರು ೬.ಕೋಮಣ್ಣ ೭.ಕಲ್ಲೆಸ್ದೆ ೮.ಮಂಗಜ್ಜಿ ೯.ಅಕ್ಕ ತಮ್ಮ. ಸಂಪಾದಕರ ಪೀಠಿಕೆ, ಎಸ್.ಕೆ.ಸೈದಾಪುರ ಅವರ ಮುನ್ನುಡಿ ಇವೆ.

೧೨೨೬. ದೇವುಗಾನಿಕೆ: ಜನಪದ ಅಧ್ಯಯನ

ಲೇ: ಪು: ಮು: ಗಂಗಾಧರಯ್ಯ ಪ್ರ: ಇರುವಂತೆ ಪ್ರಕಾಶನ, ಭಾಗ್ಯನಗರ, ಬೆಳಗುಂಬ ರಸ್ತೆ,ತುಮಕೂರು–೫೭೨೧೦೪; ಮೊ.ಮು: ೨೦೦೦; ಪು: ೧೩+೬೩=೭೬; ಡಿಮ್ಮೈ ೧/೮

ಆರು ಅಧ್ಯಾಯಗಳಿವೆ.೧.ದೇವರ ಕಲ್ಪನೆ ಮತ್ತು ಪರಂಪರೆ ೨.ಗುಪ್ಪಟ್ನದ ಐತಿಹಾಸಿಕ ಹಿನ್ನೆಲೆ ೩.ದೇವುಗಾನಿಕೆ ದೊಡಮ್ಮನ ಗುಡಿಯ ಸ್ವರೂಪ ೪.ದೇವುಗಾನಿಕೆ ದೊಡಮ್ಮನ ಹುಟ್ಟು ಮತ್ತು ಬೆಳವಣಿಗೆ ೫.ದೇವುಗಾನಿಕೆ ದೊಡಮ್ಮನ ಬಗೆಗಿನ ನಂಬಿಕೆ ಮತ್ತು ಆಚರಣೆಗಳು ೬.ದೊಡಮ್ಮನ ಬಗ್ಗೆ ಬೆಳೆದು ಬಂದ ಜನಪದ ಸಾಹಿತ್ಯ. ನಲ್ಲೂರು ಪ್ರಸಾದ್ ಅವರ ಪ್ರೀತಿಯ ಮಾತು ಎಂಬ ಮುನ್ನುಡಿ ಇದೆ.

೧೨೨೭. ದೇವುಡು (ದೇವುಡು ನರಸಿಂಹ ಶಾಸ್ತ್ರಿ)

ಲೇ: ಕುಮಾರ ಚಲ್ಯ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು–೫೬೦ ೦೦೧; ಮೊ.ಮು. ೧೯೯೭; ಪುಟ ೬+೬೧=೬೭; ಡಿಮ್ಮೈ ೧/೮

ಸಂಕ್ಷಿಪ್ತ ಜೀವನ ಚಿತ್ರವನ್ನುಳ್ಳ ಕೃತಿ. ಈ ಕೃತಿಯಲ್ಲಿ ಎರಡು ಭಾಗಗಳಿವೆ. ದೇವುಡು ಅವರ ಜಾನಪದ ಸಂಬಂಧವನ್ನು ಪ್ರಸ್ತಾಪಿಸಲಾಗಿದೆ. ಎಚ್.ಜೆ. ಲಕ್ಕಪ್ಪಗೌಡ ಅವರ ಪ್ರಧಾನ ಸಂಪಾದಕರ ಮಾತು ಇದೆ.

೧೨೨೮. ದೇಸಿ ಸಂಸ್ಕೃತಿ

ಲೇ: ಡಿ.ಬಿ. ನಾಯಕ; ಪ್ರ: ಬಂಜಾರ ಪ್ರಕಾಶನ, ಗುಲಬರ್ಗಾ–೫೮೫ ೧೦೨; ಮೊ.ಮು.೨೦೦೨; ಪುಟ ೮+೨೦೪=೨೧೦; ಡಿಮ್ಮೈ ೧/೮

ಸಂಶೋಧನಾತ್ಮಕ ಲೇಖನಗಳ ಸಂಗ್ರಹ ಎಂಬ ಅಡಿಬರಹ ಇದೆ. ಬುಲಾಯಿ ಹಾಡುಗಳು: ಸಮಾಜೋ ಸಾಂಸ್ಕೃತಿಕ ಕಾಳಜಿಗಳು, ಉತ್ತರ ಕರ್ನಾಟಕದ ಪ್ರಾಣಿಕೇಂದ್ರಿತ ಜನಪದ ಉಗ್ರ ಆಚರಣೆಗಳು, ಮಾಟ–ಮಂತ್ರ–ಮೋಡಿ: ಜನಪದ ಸಾಹಿತ್ಯ, ಬುಡಕಟ್ಟು ಜನರ ಆಭರಣಗಳ ವಿನ್ಯಾಸ, ಮೈಲಾರಲಿಂಗ–ಖಂಡೋಬಾ: ಆಚರಣೆಗಳ ವೈಶಿಷ್ಟ್ಯ, ಜನಪದ ಸಾಹಿತ್ಯದಲ್ಲಿ ಪ್ರತಿಭಟನೆಯ ಧ್ವನಿ, ವೃತ್ತಿ ಗಾಯಕ: ಧಾಡಿ, ಸೋಲಿಗರ ಸಂಸ್ಕೃತಿಯ ವೈಶಿಷ್ಟ್ಯಗಳು, ಜಾನಪದರು ಹಾಗೂ ಕೋಮು ಸೌಹಾರ್ದತೆ, ಬುಡಕಟ್ಟಿನ ಜನರಲ್ಲಿ ದೀಪಾವಳಿ ಆಚರಣೆ, ಬೀದರ ಜಿಲ್ಲೆಯ ಜನಪದ ಕಲೆಗಳು, ಗೋರಬೋಲಿ: ಲಂಬಾಣಿ ಭಾಷೆ, ಕರ್ನಾಟಕದ ಬುಡಕಟ್ಟಿನ ಪ್ರಸಾದನ ಕಲೆ, ಪಾರಧಿಯರು: ಕಸುಬು, ನಂಬಿಕೆ ಹಾಗೂ ಒಳಾಡಳಿತ ಪದ್ಧತಿ.

೧೨೨೯. ದೇಸಿ ಸಂಸ್ಕೃತಿ ಸಂಕಥನ

ಲೇ: ಹಿ.ಚಿ. ಬೋರಲಿಂಗಯ್ಯ; ಪ್ರ: ಸಪ್ನ ಬುಕ್ ಹೌಸ್, ೩ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು–೫೬೦ ೦೦೯; ಮೊ.ಮು.೨೦೦೮; ಪುಟ ೮+೨೧೯=೨೨೭; ಡಿಮ್ಮೈ ೧/೮

ಹನ್ನೆರಡು ಸಂಶೋಧನ ಲೇಖನಗಳ ಸಂಕಲನ: ೧.ಗ್ರಾಮದೇವತೆ: ಸಾಂಸ್ಕೃತಿಕ ಇತಿಹಾಸ, ೨.ದೈವ: ಒಂದು ಪೀಠಿಕೆ, ೩.ಮಾತೃ ಮೂಲ ಪರಂಪರೆ ಮತ್ತು ಮಾತೃದೇವತೆಯರು, ೪.ಗಿರಿಜನ ಕಾವ್ಯ: ಹಲವು ತೊರೆಗಳ ತಪ್ತ ಪ್ರವಾಹ, ೫.ಅಭಿವೃದ್ಧಿಯ ಬಹುಮುಖತೆ, ೬.ಜಾನಪದದಲ್ಲಿ ಮೂಲಮಾತೃಕೆ ಮತ್ತು ಪ್ರಾದೇಶಿಕ ಉಪಮಾದರಿ ಪರಿಕಲ್ಪನೆಗಳು: ಒಂದು ಟಿಪ್ಪಣಿ, ೭.ಜನಪದ ಪಠ್ಯಗಳು: ಬಸವಣ್ಣನ ಕುರಿತ ಗ್ರಹಿಕೆಗಳು, ೮.ವಿಸ್ಮೃತಿ ತತ್ವ ಮತ್ತು ದೇಶಿ ಪರಿಜ್ಞಾನ, ೯.ಸಂಸ್ಕೃತಿಯ ಭ್ರಮಾತ್ಮೀಕರಣ ಮತ್ತು ಸ್ಥಳೀಯ ಅನನ್ಯತೆ, ೧೦.ಉಪಸಂಸ್ಕೃತಿ ಪರಿಕಲ್ಪನೆ ಹಾಗೂ ಕೀಳರಿಮೆ, ೧೧.ಲೋಕದೃಷ್ಟಿ ಮತ್ತು ಸಮಷ್ಟಿ ಪ್ರಜ್ಞೆ, ೧೨.ಮಾರಿಯ ಆರಾಧನೆ.

೧೨೩೦. ದೇಶವಿದೇಶದ ಜನಪದ ಕಥೆಗಳು

ಸಂ: ಗೌರಮ್ಮ ಕೆ. ಬಸವಯ್ಯ; ಪ್ರ: ಜನಪದ ಸಾಹಿತ್ಯ ಅಕಾಡೆಮಿ, ಜಯನಗರ ಮೈಸೂರು–೫; ಮೊ.ಮು: ೧೯೬೫; ಪು: ೧೨+೧೫೯ = ೧೭೧; ಡಿಮ್ಮೈ.

ಹಲವು ಭಾಷೆಗಳಿಂದ ಭಾಷಾಂತರಿಸಿದ ಹದಿನೇಳು ಕಥೆಗಳಿವೆ: ೧.ಕಾಡುಹಂಸಗಳು ೨.ನವದ್ವೀಪದ ರಾಜಪುತ್ರ ೩.ಮೂರು ವಾಯಸಗಳು ೪.ರಾಜನ ದ್ರಾಕ್ಷಿ ಬಳ್ಳಿ ೫.ಮಂಡೂಕ ಕನ್ಯೆ ೬.ರಣ ಭೈರವ ೭.ರಾಜಪುತ್ರ ಮತ್ತು ಹಂಸಬಾಲೆ ೮.ಕಳೆದುಹೋದ ಹಸುಗಳು ೯.ಚತುರ ಬಾಲಕ ರಾಜ ೧೦.ಅದ್ಭುತ ಶಕ್ತಿಯ ಶ್ಯಾಮ ೧೧.ಸರ್ಪ ಮುಕುಟ ೧೨.ಕಾಗೆ ಮತ್ತು ಭರದ್ವಾಜ ೧೩.ಮೊಲದ ಮೂಗು ಏಕೆ ಸೆಳೆಯುತ್ತದೆ ೧೪.ಸುವರ್ಣ ಹುಲಿ ಸುವರ್ಣ ಮೊಲ ೧೫.ಮಾಯಾ ಉಂಗುರ ೧೬.ರಾಜಕುವರ ದುರ್ಮತಿ ೧೭.ಕರಡಿ ರಾಜಪುತ್ರ. ಎಚ್.ಎಲ್. ನಾಗೇಗೌಡ ಅವರ ಮುನ್ನುಡಿ ಇದೆ.

೧೨೩೧. ದೇಶಿ–ದೇಶೀಯತೆ–ದೇಶೀವಾದ

ಲೇ: ಆರ್ವಿಯಸ್ ಸುಂದರಂ; ಪ್ರ: ರಜತೋತ್ಸವ ದತ್ತಿ ಸಮಿತಿ, ಅರಕಲಗೂಡು ವರದರಾಜುಲು ಕಾಂತಮ್ಮ ಮಹಿಳಾ ಕಾಲೇಜು, ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ (ನೋಂ), ಹಾಸನ; ಮೊ.ಮು: ೨೦೦೩, ಪುಟ ೬+೧೦೦= ೧೦೬, ಡಿಮ್ಮೈ ೧/೮

ಐದು ಅಧ್ಯಯನಾತ್ಮಕ ಸಂಪ್ರಬಂಧಗಳು: ೧.ಮಾರ್ಗ ಮತ್ತು ದೇಶಿ. ೨.ದೇಶಿಯ ಸ್ವರೂಪ ೩.ಸಾಹಿತ್ಯದಲ್ಲಿ ದೇಶಿ ೪.ದೇಶೀಯತೆ ೫.ದೇಶೀವಾದ. ಪ್ರಾರಂಭದಲ್ಲಿ ಹಾರನಹಳ್ಳಿ ರಾಮಸ್ವಾಮಿ ಅವರ ಮುನ್ನುಡಿ, ಲೇಖಕರ ಅರಿಕೆ, ಕೊನೆಯಲ್ಲಿ ಗ್ರಂಥಸೂಚಿ, ಇವೆ. ಇದರಲ್ಲಿ ೧೨ ಕನ್ನಡ, ೬ ತೆಲುಗು ಹಾಗೂ ೩೨ ಇಂಗ್ಲಿಷ್ ಗ್ರಂಥಗಳನ್ನು ಪಟ್ಟಿ ಮಾಡಲಾಗಿದೆ.

೧೨೩೨. ದೇಶಿ

ಲೇ: ಮೊಗಳ್ಳಿ ಗಣೇಶ, ಪ್ರ: ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ ಕಮಲಾಪುರ; ಮೊ.ಮು. ೧೯೯೭; ಪುಟ ೧೨+೯೦=೧೦೨; ಡಿಮ್ಮೈ ೧/೮

ಆರು ಭಾಗಗಳಿವೆ: ೧.ಪಠ್ಯದ ನೆಲೆಗಳು ೨.ಮಹಿಳಾ ಸೊಲ್ಲು. ೩.ಪಠ್ಯದ ಮರು ರೂಪಗಳು ೪.ಜಾನಪದದಲ್ಲಿ ವಿದೇಶಿ ಕೈವಾಡ ೫.ಪಠ್ಯದ ವಸ್ತು ಮತ್ತು ಬಂಧ ೬.ದೇಶೀಯತೆ ಮತ್ತು ಮತಾಂತರ. ಚಂದ್ರಶೇಖರ ಕಂಬಾರ ಅವರ 'ನಿಮ್ಮೊಡನೆ' ಎಂಬ ಮುನ್ನುಡಿ ಇದೆ. ಕೊನೆಯಲ್ಲಿ ಎರಡು ಅನುಬಂಧಗಳಿವೆ: ೧.ನಾವು ಓದಬಹುದಾದ ಕೆಲವು ಪುಸ್ತಕಗಳು ೨.ಜಾನಪದಕ್ಕೆ ಸಂಬಂಧಿಸಿದ ಕೆಲವು ಪತ್ರಿಕೆಗಳು.

೧೨೩೩. ದೇಶೀಯ ಚಿಂತನ

ಲೇ: ಚಂದ್ರಶೇಖರ ಕಂಬಾರ; ಪ್ರ: ಅಂಕಿತ ಪುಸ್ತಕ, ೫೩, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯ ರಸ್ತೆ, ಬಸವನ ಗುಡಿ, ಬೆಂಗಳೂರು–೫೬೦ ೦೦೪; ಮೊ.ಮು: ೨೦೦೪,ಎ.ಮು: ೨೦೧೧; ಪು: ೪೧೨; ಡಿಮ್ಮೈ ೧/೮

ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟಿರುವ ೬೫ ಲೇಖನಗಳ ಸಂಕಲನ **ಭಾಗ ಒಂದು: ಸಾಹಿತ್ಯ–ಸಂಸ್ಕೃತಿ ಕಲೆ:** ಈ ಭಾಗದಲ್ಲಿ ಜಾನಪದಕ್ಕೆ ಸಂಬಂಧಿಸಿದ ಮೂರು ಲೇಖನಗಳಿವೆ: ೧.ಶಿವಾಪುರದ ದೇವ–ದೇವಿಯರು ೨.ಜಾನಪದ ಪರಂಪರೆ: ಸಾಹಿತ್ಯ ಮತ್ತು ನಿರಂತರತೆಯ ಅಂಶ ೩.ಮೌಖಿಕ ಪರಂಪರೆ ಮತ್ತು ಭಾರತೀಯ ಸಾಹಿತ್ಯ. **ಭಾಗ ಎರಡು: ರಂಗಭೂಮಿ:** ಜಾನಪದಕ್ಕೆ ಸಂಬಂಧಿಸಿದವು ಎನ್ನಿಸುವಂಥವು ಇವು: ೧.ಸಾಂಪ್ರದಾಯಿಕ ರಂಗಭೂಮಿಯಿಂದ ಪೂರ್ಣ ರಂಗಭೂಮಿಗೆ ೨.ಜಾನಪದ ರಂಗಭೂಮಿ ಮತ್ತು ನಾಟಕಕಾರ. **ಭಾಗ ಮೂರು: ಜಾನಪದ:** ೧.ಜಾನಪದ ಸಾಹಿತ್ಯ ೨.ಲಕ್ಷಾಪತಿ ರಾಜನ ಕಥೆ ೩.ಒಂದೆರಡು ಜಾನಪದ ಕಥೆಗಳು ೪.ಒಂದು ಜಾನಪದ ಪ್ರಣಯ ಕಥೆ ೫.ಆಚರಣೆಯ ಕುಣಿತ ಮತ್ತು ಬಯಲಾಟ ೬.ಬಯಲಾಟಗಳಲ್ಲಿ

ಸಂಗೀತ ೭.ಅಲೌಕಿಕದ ಅನುಕರಣ ೮.ಜಾನಪದ ರಂಗಭೂಮಿಯ ಶಿಲ್ಪ ೯.ಬಯಲಾಟದ ಪ್ರಕಾರಗಳು ೧೦.ಪ್ರಯೋಗ ೧೧.ಅಸಲು ಪಾತ್ರಗಳು ಮತ್ತು ನಟನಟಿಯರು. **ಭಾಗ ನಾಲ್ಕು: ಕನ್ನಡ–ಕನ್ನಡ ವಿಶ್ವವಿದ್ಯಾಲಯ:** ಈ ಭಾಗದಲ್ಲಿ ಜಾನಪದಕ್ಕೆ ಸಂಬಂಧಿಸುವ ಮೂರು(?) ಲೇಖನಗಳಿವೆ: ೧.ದೇಶೀಯ ಸಂಸ್ಕೃತಿಯ ಬಿತ್ತರ ೨.ಜನಪದ ಮಹಾಕಾವ್ಯಗಳು.

೧೨೩೪. ದೇಸಿ ಸಂಸ್ಕೃತಿ

ಲೇ: ಡಿ.ಬಿ.ನಾಯಕ; ಪ್ರ: ಬಂಜಾರ ಪ್ರಕಾಶನ, ಗುಲಬರ್ಗಾ–೫೮೫ ೧೦೨; ಮೊ.ಮು: ೨೦೦೨; ಪು: ೮+೨೦೪=೨೧೨, ಡಿಮ್ಮೈ೧/೮

ಸಂಶೋಧನಾತ್ಮಕ ಲೇಖನಗಳ ಸಂಗ್ರಹ ಎಂಬ ಅಡಿಬರಹ ಇದೆ. ಹದಿನಾಲ್ಕು ಲೇಖನಗಳಿವೆ: ೧.ಬುಲಾಯಿ ಹಾಡುಗಳು: ಸಮಾಜೋ ಸಾಂಸ್ಕೃತಿಕ ಕಾಳಜಿಗಳು ೨.ಉತ್ತರ ಕರ್ನಾಟಕದ ಪ್ರಾಣಿಕೇಂದ್ರಿತ ಜನಪದ ಉಗ್ರ ಆಚರಣೆಗಳು ೩.ಮಾಟ–ಮಂತ್ರ–ಮೋಡಿ: ಜನಪದ ಸಾಹಿತ್ಯ ೪.ಬುಡಕಟ್ಟು ಜನರ ಆಭರಣಗಳ ವಿನ್ಯಾಸ ೫.ಮೈಲಾರಲಿಂಗ–ಖಂಡೋಬಾ: ಆಚರಣೆಗಳ ವೈಶಿಷ್ಟ್ಯ ೬.ಜನಪದ ಸಾಹಿತ್ಯದಲ್ಲಿ ಪ್ರತಿಭಟನೆಯ ಧ್ವನಿ ೭.ವೃತ್ತಿಗಾಯಕ: ಥಾಡಿ ೮.ಸೋಲಿಗರ ಸಂಸ್ಕೃತಿಯ ವೈಶಿಷ್ಟ್ಯಗಳು ೯.ಜಾನಪದರು ಹಾಗೂ ಕೋಮು ಸೌಹಾರ್ದತೆ ೧೦.ಬುಡಕಟ್ಟಿನ ಜನರಲ್ಲಿ ದೀಪಾವಳಿ ಆಚರಣೆ ೧೧.ಬೀದರ ಜಿಲ್ಲೆಯ ಜನಪದ ಕಲೆಗಳು ೧೨.ಗೋರಬೋಲಿ: ಲಂಬಾಣಿ ಭಾಷೆ ೧೩.ಕರ್ನಾಟಕದ ಬುಡಕಟ್ಟಿನ ಪ್ರಸಾಧನ ಕಲೆ ೧೪.ಪಾರಧಿಯರು: ಕಸುಬು, ನಂಬಿಕೆ ಹಾಗೂ ಒಳಾಡಳಿತ ಪದ್ಧತಿ. ಹಿ.ಚಿ.ಬೋರಲಿಂಗಯ್ಯ ಅವರ ಮುನ್ನುಡಿ ಇದೆ.

೧೨೩೫. ದೇಸಿ (ಸಂಪುಟ ಒಂದು)

ಲೇ: ವೀರಣ್ಣ ದಂಡೆ; ಪ್ರ: ಭಾಗ್ಯಶ್ರೀ ಎಂಟರ್‌ಪ್ರೈಸಸ್, ೫೫೯, ೯ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು; ಮೊ.ಮು: ೨೦೦೩; ಪು: ೮+೫೮೩=೫೯೧; ಡಿಮ್ಮೈ ೧/೮

ಆರು ಭಾಗಗಳಲ್ಲಿ ವಿಂಗಡಿಸಲ್ಪಟ್ಟಿರುವ ೪೬ ಲೇಖನಗಳು ಈ ಗ್ರಂಥದಲ್ಲಿವೆ: **ಭಾಗ ಒಂದು: ತಾತ್ವಿಕ ಚಿಂತನೆ:** ೧.ದೇಸೀ ದೃಷ್ಟಿಯೂ ಸೈದ್ಧಾಂತಿಕ ಆಲೋಚನೆಯೂ ೨.ಜನಪದ ಭಾಷೆ–ಒಂದು ಟಿಪ್ಪಣಿ ೩.ಜನಪದ ಕಾವ್ಯ–ಸಮಸ್ಯೆ ಸವಧಾನಗಳು. **ಭಾಗ ಎರಡು: ಜಾನಪದ ದೇಸೀ ಸಿದ್ಧಾಂತಗಳು:** ೪.ಜನಪದ ಕಾವ್ಯಮೀಮಾಂಸೆ ೫.ಪ್ರಥಮ ವಿಮರ್ಶೆ: ಸತ್ವ ಮತ್ತು ಸ್ವರೂಪ ೬.ಜನಪದ ಕಥನ ಸಾಹಿತ್ಯದಲ್ಲಿ ಮೌಲ್ಯಗಳ ಸಂಘರ್ಷ ೭.ಜನಪದ ಮಹಾಕಾವ್ಯಗಳ ರಾಚನಿಕ ಮತ್ತು ಸಂವಹನ ಸ್ವರೂಪ ೮.ಜನಪದ ಕಥಾಘಟಗಳು: ಸಂಕೀರ್ಣ ಜನಪದ ಕಥೆಗಳ ರಾಚನಿಕ ಸಿದ್ಧಾಂತ ೯.ಮಾದರಿ (type) ಪರಿಕಲ್ಪನೆ ಮತ್ತು ರಚನೆ: ಪಾಶ್ಚಾತ್ಯ ಪರಿಕಲ್ಪನೆಗೊಂದು ಸೈದ್ಧಾಂತಿಕ ಚೌಕಟ್ಟು. **ಭಾಗ**

ಮೂರು: ಸಾಂಸ್ಕೃತಿಕ ಚಿಂತನೆ: ೧೦.ಜಾನಪದ ಸಮಸ್ಯೆಗಳು ಮತ್ತು ಯುವ ಪೀಳಿಗೆ ೧೧.ಜನಪದ ಕಲೆಗಳು– ಒಂದು ಚಿಂತನೆ ೧೨.ಜನಪದ ಮಹಾಕಾವ್ಯಗಳ ಪುನರವಲೋಕನದ ಆವಶ್ಯಕತೆ ೧೩.ಜನಪದ ಸಾಹಿತ್ಯ ಸಾಂಸ್ಕೃತಿಕ ದೃಷ್ಟಿ ೧೪.ಕನ್ನಡ ಜಾನಪದ ಕಥೆಗಳ ಸಾಂಸ್ಕೃತಿಕ ಮೌಲ್ಯ ೧೫.ಜನಪದ ಸಾಹಿತ್ಯ: ಪ್ರಭುತ್ವ ಮತ್ತು ಸಾಮಾನ್ಯ ಮನುಷ್ಯ. **ಭಾಗ ನಾಲ್ಕು: ದೇಸೀ ದೃಷ್ಟಿಯ ಫಲ:** ೧೬.ಕನ್ನಡ ಸಾಹಿತ್ಯದ ನವೋದಯ ಮತ್ತು ಹಲಸಂಗಿ ಗೆಳೆಯರ ಜಾನಪದ ಕೊಡುಗೆಗಳು ೧೭.ಡಾ. ಬಿ.ಬಿ. ಹೆಂಡಿ: Folklore – ಜಾನಪದಶಾಸ್ತ್ರ ೧೮.ಡಾ.ಎಂ.ಎಂ. ಕಲಬುರ್ಗಿ ಅವರ ಜಾನಪದ ಸಂಶೋಧನೆ ೧೯.ಡಾ.ಎಂ.ಎಂ. ಕಲಬುರ್ಗಿ ಅವರ ಸಂಶೋಧನೆಗಳು–ಮೌಖಿಕ ಆಧಾರಗಳು ೨೦.ತಿಂಥಿಣಿ ಮೌನೇಶ್ವರನ ಗುಡಿಕಟ್ಟಿಸಿದವರು ಯಾರು? ೨೧.ಹೈದ್ರಾಬಾದ ಕರ್ನಾಟಕದ ಜನಪದ ಕಥೆಗಳು–ಒಂದು ಚಿಂತನೆ ೨೨.ಕನ್ನಡ ದೊಡ್ಡಾಟಗಳ ಭಾಷೆ ೨೩.ಕನ್ನಡ ಲಾವಣಿ ಮತ್ತು ಇಂಗ್ಲೀಷ ಬ್ಯಾಲೆಡ್ ೨೪.ಒಕ್ಕಲಿಗನ ಎರಡು ಸಂಕೇತ ಶಕ್ತಿಗಳು ೨೫.ಗ್ರಾಮ ದೇವತೆ ಹನುಮಂತ ೨೬.ದೆವ್ವ ಸಂಬಂಧಿ ನಂಬುಗೆಗಳು ೨೭.ಹಾಲುಮತ ಪುರಾಣದ ಬೀರಪ್ಪ ೨೮.ಹಾಲುಮತದ ಪೌರಾಣಿಕ ನೆಲೆಗಳು. **ಭಾಗ ಐದು: ಕನ್ನಡ ಜನಪದ ಸಾಹಿತ್ಯ ಚರಿತ್ರೆ:** ೨೯.ಕನ್ನಡ ಜಾನಪದ ಶಾಸ್ತ್ರೀಯ ಅಧ್ಯಾಯ ೧೯೬೦ ರಿಂದ: ಜನಪದ ಗದ್ಯ ಸಾಹಿತ್ಯ ೩೦.ಹೈದ್ರಾಬಾದ ಕರ್ನಾಟಕದ ಜನಪದ ಸಾಹಿತ್ಯ: ಡಾ. ಬಿ.ಬಿ.ಹೆಂಡಿ ಹಾಗೂ ಅವರ ಪರಂಪರೆ ೩೧.ಕನ್ನಡ ಜನಪದ ಕಥೆಗಳ ಅಧ್ಯಯನ. **ಭಾಗ ಆರು: ವಚನಗಳ ದೇಸೀ ಗುಣ:** ೩೨.ವಚನ ಮತ್ತು ದೇಸೀ ಚಿಂತನೆಗಳ ಮುಖಾಮುಖಿ ೩೩.ಶರಣರು ಸ್ವೀಕರಿಸಿದ ದೇಸೀ ತಾತ್ವಿಕ ಪ್ರಮಾಣಗಳು ೩೪.ವಚನಗಳಲ್ಲಿ ದೇಸೀ ಮತ್ತು ವೈದಿಕ ಜಾನಪದಗಳ ಮುಖಾಮುಖಿ ೩೫.ವಚನ ಮತ್ತು ದೇಸೀ ದೃಷ್ಟಿಯಲ್ಲಿ ದೇವರ ಕಲ್ಪನೆ ೩೬.ಬಸವಣ್ಣನವರ ದೇಸೀ ಪ್ರಜ್ಞೆ ೩೭.ದಲಿತರಿಗೆ ದನಿಯಾದ ಬಸವಣ್ಣ ೩೮.ವಚನ ಮತ್ತು ದೇಸೀ ದೃಷ್ಟಿಯಲ್ಲಿ ಕಾಯಕ–ದಾಸೋಹ ೩೯.ವಚನ ಮತ್ತು ದೇಸೀ ದೃಷ್ಟಿಯಲ್ಲಿ ಭಕ್ತಿ ೪೦.ಅನುಭವಮಂಟಪ ಮತ್ತು ಜಾನಪದ ಸಂಬಂಧ ೪೧.ಅಕ್ಕನಾಗಮ್ಮ ಬಸವಣ್ಣನ ತಂಗಿ ೪೨.ಅಕ್ಕನಾಗಮ್ಮನ ಒಂದು ವಚನದ ಅರ್ಥ ೪೩.ಅಕ್ಕನಾಗಮ್ಮನ ವಚನದ ಮೇಲೆ ಇನ್ನಷ್ಟು ಬೆಳಕು ೪೪.ಅಕ್ಕಮಹಾದೇವಿ ವ್ಯಕ್ತಿತ್ವ ೪೫.ದೇಸೀ ಸಂಸ್ಕೃತಿ ಹಿನ್ನೆಲೆಯಲ್ಲಿ ಮಹಾದೇವಿಯಕ್ಕನ ಜೀವಿತದ ಕೆಲ ಸಂಗತಿಗಳು ೪೬.ಘಟ್ಟವಾಳಯ್ಯ.

೧೨೩೬. ದೇಸಿ (ಸಂಪುಟ ಎರಡು)

ಲೇ: ವೀರಣ್ಣ ದಂಡೆ; ಪ್ರ: ಭಾಗ್ಯಶ್ರೀ ಎಂಟರ್‌ಪ್ರೈಸಸ್, ೫೫೯, ೯ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು; ಮೊ.ಮು: ೨೦೦೩; ಪು: ೭+೫೮೫=೫೯೨; ಡಿಮ್ಮೈ ೧/೮

ಈ ಗ್ರಂಥದಲ್ಲಿ ನಾಲ್ಕು ಭಾಗಗಳಿದ್ದು ಒಟ್ಟು ೩೫ ಲೇಖನಗಳಿವೆ. ಅವುಗಳಲ್ಲಿ ಜಾನಪದಕ್ಕೆ ಸಂಬಂಧಿಸಿದವು ಇವು: **ಭಾಗ ಒಂದು: ಕನ್ನಡ ಜನಪದ ಸಾಹಿತ್ಯ ರೂಪಗಳ ಸ್ವರೂಪ:**

೧.ಕನ್ನಡ ಬೀದಿಬಯಲಾಟಗಳು ೨.ಮೌಖಿಕ ಸ್ವರವಚನಗಳ ಸ್ವರೂಪ ೩.ಹಂತಿ: ಸಂಪ್ರದಾಯ ಮತ್ತು ಸಾಹಿತ್ಯ –ಅಂತರ್ ಸಂಬಂಧ ೪.ಎಲ್ಲಮ್ಮನ ಹಾಡು ವಾದ್ಯ ಕುಣಿತ ೫.ಕನ್ನಡ ಗಾದೆಗಳು ೬.ಕನ್ನಡ ಒಗಟುಗಳು ೭.ಕನ್ನಡ ಐತಿಹ್ಯಗಳು–ಒಂದು ಟಿಪ್ಪಣಿ ೮.ಕನ್ನಡ ಜನಪದ ಪುರಾಣ ಕತೆಗಳು. **ಭಾಗ ಎರಡು: ಪಠ್ಯ ವಿಶ್ಲೇಷಣೆ:** ೯.ಕೆರೆಗೆ ಹಾರದ ಭಾಗೀರಥಿಯ ಸಾವಿನ ಸುತ್ತಮುತ್ತ ೧೦.ಕಾಶೀಬಾಯಿ ಕಥಾನಕ–ಒಂದು ಒಳನೋಟ ೧೧.ಗೋವಿನ ಹಾಡು –ಆಕಳ ಹಾಡು ಕಥಾನಕಗಳಲ್ಲಿ ಮೌಲ್ಯ ಸಂಘರ್ಷ ೧೨.ಸೋಮ್ರಾಯ–ಭೀಮ್ರಾಯ ಕಥಾನಕದಲ್ಲಿ ಮೌಲ್ಯಗಳ ಸಂಘರ್ಷ ೧೩.ಕಲಿಯುಗದ ಬಾಲೆ ಕಥಾನಕ–ಒಂದು ವಿಶ್ಲೇಷಣೆ ೧೪.ಅಸಗರಲಿ ಕಥಾನಕ–ಪ್ರಥಮ ವಿಮರ್ಶೆ ೧೫.ಸೌಂಸೌತೇರು ಕಥಾನಕ – ಪ್ರಥಮ ವಿಮರ್ಶೆ ೧೬.ಒಂದು ಜನಪದ ಕಥೆಯ ವಸ್ತು ಮತ್ತು ತಂತ್ರ–ಒಕ್ಕಲಿಗ ಮತ್ತು ಹಕ್ಕಿ ೧೭.ಜನಪದ ಕಾವ್ಯ: ಮೂರು ಚಿತ್ರಗಳು. **ಭಾಗ ಮೂರು: ಕೃತಿ ವಿಶ್ಲೇಷಣೆ:** ೧೮.ಸಂಗ್ಯಾ–ಬಾಳ್ಯಾ ಸಣ್ಣಾಟ–ಗಂಗಿಯ ದುರಂತ ಕಥೆ ೧೯.ವಡ್ಡಾರಾಧನೆಯ ಕಥೆಗಳು–ಶಿಷ್ಟದೃಷ್ಟಿಯ ಫಲ ೨೦.ಜಾನಪದ ಪಠ್ಯವಾಗಿ–ರಾಜಾವಳಿ ಕಥಾಸಾರ ೨೧.ಹಲಸಂಗಿ ಗೆಳೆಯರ–ಜೀವನ ಸಂಗೀತ ೨೨.ಡಾ.ಎಂ.ಎಸ್. ಲಠ್ಠೆ ಅವರ ಚಿಕ್ಕೋಳ ಪದಗಳು ೨೩.ಮುದೇನೂರ ಸಂಗಣ್ಣನವರು ಸಂಪಾದಿಸಿದ ಜನಪದ ಪ್ರದರ್ಶನ ಪಠ್ಯಗಳು ೨೪.ಡಾ. ಜೀಶಂಪ ಅವರ ಜನಪದ ಕಥೆಗಳ ಸಂಗ್ರಹಗಳು ೨೫.ಜನಪದ ಹಾಲುಮತ ಮಹಾಕಾವ್ಯ–ಒಂದು ನೋಟ ೨೬.ಜನಪದ ಹಾಲುಮತ ಮಹಾಕಾವ್ಯ–ಕಥಾಸಾರ. **ಭಾಗ ನಾಲ್ಕು: ಸಂಕೀರ್ಣ:** ೨೭.ಬಾಳಪ್ಪ ಹುಕ್ಕೇರಿ ೨೮.ರಾವಬಹಾದ್ದೂರ .

೧೨೩೭. ದೇಸಿ (ಸಂಪುಟ ಮೂರು)

ಲೇ: ವೀರಣ್ಣ ದಂಡೆ; ಪ್ರ: ಭಾಗ್ಯಶ್ರೀ ಎಂಟರ್‌ಪ್ರೈಸಸ್, ೫೫೯, ೯ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು; ಮೊ.ಮು: ೨೦೦೩; ಪು: ೨೦+೪೩೦=೪೫೦; ಡಿಮೈ ೧/೮

'ಪ್ರಜಾವಾಣಿ'ದಿನಪತ್ರಿಕೆಯಲ್ಲಿ ೧೯೯೫ ಜನೇವರಿಯಿಂದ ೧೯೯೯ರ ಜನೇವರಿ ವರೆಗೆ 'ಕಲಬುರ್ಗಿ ಕಲರವ' ಎಂಬ ಹೆಸರಿನಲ್ಲಿ ಬರೆದ ೨೧೯ ಅಂಕಣಬರಹಗಳ ಸಂಗ್ರಹ–ಎಂಬ ವಿವರಣೆ ಇದೆ. ಜಾನಪದಕ್ಕೆ ಸಂಬಂಧಿಸಿದ ೩೯ ಬರಹಗಳು ಇದರಲ್ಲಿ ಸೇರಿವೆ: ೧.ಬಿ.ಬಿ. ಹೆಂಡಿ–ಸಾಧನೆ, ಸ್ಮರಣೆ ೨.ಹೆಣ್ಣುಮಕ್ಕಳ ಜಾನಪದ ಹಾಡುಗಳು ೩.ಕಲಬುರ್ಗಿಯಲ್ಲಿ ಕುಲಪತಿ ಡಾ. ಕಂಬಾರ ೪.ಜೀಶಂಪ ನೆನಪು ೫.ಮಾಯಾ ಕೋಲಾಹಲ: ಯಕ್ಷಗಾನಕ್ಕೆ ಹೊಸ ತಿರುವು ೬.ಜನಪದ ಸಂಪ್ರದಾಯ ಸಾಹಿತ್ಯ ಕುರಿತು ಚಿಂತನ ೭.ಡಾ. ಎಂ.ಎಂ. ಕಲಬುರ್ಗಿ ೮.ಮುಂಬಯಿ ಜಾನಪದ ಸಂಜೆ೯.ನೂರಂದಪ್ಪ ಸಾರಥಿ ಪಾತ್ರದ ಜನಪದ ಕಲಾವಿದ ೧೦.ಅದ್ಭುತ ಲೋಕ ತೆರೆದಿಟ್ಟ ಜನಪದ ಚಿತ್ರಕಲಾ ಶಿಬಿರ ೧೧.ಮೋಹರಂ–ಸಾಮಾಜಿಕ ಮಹತ್ವ ಹಾಡುಗಳ ವೈಶಿಷ್ಟ್ಯ ೧೨.ಜನಪದ ಮಹಾಕಾವ್ಯ ಹಾಡುಗಾರ ಸಿದ್ದಪ್ಪ ಮೇಟಿ ೧೩.ಮುಸ್ಲಿಂ

ಜಾನಪದ ಕುರಿತು ಚಿಂತನೆ ೧೪.ಜನಪದ ಹಾಡುಗಾರಿಕೆಯ ಗಮ್ಮತ್ತು ೧೫.ಜನಪದ–ರಂಗಗೀತೆ ಗಾಯನ ೧೬.ಮುಸ್ಲಿಂ ತತ್ವಪದಕಾರರ ಕುರಿತ ಚರ್ಚೆ ೧೭.ಹೈ.ಕ. ದಲ್ಲಿ ಹೆಜ್ಜೆ ಮೂಡಿಸಿದ ಜಾನಪದ ಅಕಾಡಿಮ್ಯೆ ೧೮.ಡಾ. ಸಿಂಪಿ ಜಯಂತಿ ೧೯.ಬೀದರ ಸಂಸ್ಕೃತಿಯ ದ್ವೀಪ–ಮುಚಳಂಬಿ ೨೦.ಮಡಿವಾಳಪ್ಪ–ಶರೀಫರ ಸ್ಮರಣೆ ೨೧.ಜನಪದ ಸಂಗೀತಗಾರ್ತಿ ಮರತೂರ ಲಕ್ಷ್ಮೀಬಾಯಿ ೨೨.ಕಣ್ಮರೆಯಾದ ಜಾನಪದ ಕಲಾವಿದೆ ಮರತೂರ ಲಕ್ಷ್ಮೀಬಾಯಿ ೨೩.ದೊಡ್ಡಾಟ ಪರಂಪರೆಯ ದೊಡ್ಡಕಲಾವಿದ ಗದಿಗಯ್ಯಾ ಸ್ವಾಮಿ ೨೪.ಗ್ರಾಮಾಂತರ ಕಲಾವಿದ ಎದುರಿಸುವ ಆತಂಕಗಳು ೨೫.ಹೈ.ಕ. ಜಾನಪದ ಶಿಬಿರದ ಹಾರೈಕೆಗಳು ೨೬.ಡಾ. ಬಿ.ಬಿ. ಹೆಂಡಿ ಬದುಕು ಬರಹದ ಚಿಂತನೆ ೨೭.ಅಕಾಡಿಮ್ಯೆ ಪ್ರಶಸ್ತಿ ಪಡೆದ ಈ ಮೂವರು ೨೮.ದಲಿತ ಜನಪದ ಕಲಾವಿದರ ಚಿಂತನೆ ೨೯.ಯಾತಕ್ಕೆ ಮಳೆ ಹೋದವ್ವೋ ಶಿವಶಿವ ಲೋಕ ತಲ್ಲಣಿಸುತಾವ ೩೦.ಹೋಳಿ ಹುಣ್ಣಿವಿ ಸುತ್ತ ತನುಗಾಳಿ ಬೀಸ್ಯಾವ ೩೧.ದಲಿತ ತತ್ವಪದಕಾರರ ಜೀವನ ಕೃತಿಗಳ ಚಿಂತನೆ ೩೨.ಹೋಗ ಹೋಗ ಬಿಸಿಲ, ನೀ ಬಾರ ಬೆಳದಿಂಗಳ ೩೩.ಕಲಬುರ್ಗಿಗೆ ಹೊಸ ಕಲೆಯ ಸಂಸ್ಕೃತಿ ತಂದ ಪ್ರತಿಭಾವಂತ ೩೪.ಜಾನಪದ ವಾಸ್ತುಶಿಲ್ಪ ಪರಂಪರೆ ೩೫.ಜನಪದ ವೈದ್ಯ ಮರೆಪ್ಪ ಮೇತ್ರಿ ೩೬.ಇಬ್ಬರು ಹಿರಿಯರಿಗೆ ಸಂದ ಗೌರವ ೩೭.ಬದುಕಿನ ಸಂಕೀರ್ಣತೆಗಳಿಗೆ ಸಮಾಧಾನ ಗುರುತಿಸಿಕೊಳ್ಳುವ ಕಾಲ ೩೮.ಕನ್ನಡ ಅಧ್ಯಯನ ಸಂಸ್ಥೆಗಳು ಮತ್ತು ಜಾನಪದ ೩೯.ಅಕಾಡಿಮ್ಯೆಯ ಪ್ರಶಸ್ತಿಯ ಸಂಭ್ರಮದಲ್ಲಿ ಡಾ. ವಾಲೀಕಾರ.

೧೨೩೮. ದೈವದ ಎರಡು ಲಾವಣಿಗಳು

ಸಂ: ನಿಂಗಣ್ಣ ಸಣ್ಣಕ್ಕಿ; ಪ್ರ: ಕಾಲಗತಿ ಪ್ರಕಾಶನ, ರಾಯಭಾಗ, ಬೆಳಗಾವಿ; ಜಿಲ್ಲೆ, ಮೊ.ಮು. ೧೯೮೦, ಪುಟ ೬೦, ಡಿಮ್ಯೆ ೧/೮

ಎರಡು ಲಾವಣಿಗಳ ಸಂಕಲನ: ೧.ಬ್ರಹ್ಮ ಬರಹದ ಲಾವಣಿ ೨.ಸೆಟವಿ ಬರಹದ ಲಾವಣಿ. ಶಂಬಾ ಜೋಶಿ ಅವರ ೨೨ ಪುಟಗಳ ಪ್ರಸ್ತಾಪ ಇದೆ. ಕಠಿಣ ಪದಗಳ ಅರ್ಥ, ಸ್ತೋತ್ರ ಇವೆ. ಕೊನೆಯಲ್ಲಿ, ದೈವದ ಲಾವಣಿಗಳನ್ನು ಕುರಿತು ಎಂಬ ಬಿ.ಸಿ. ದೇಸಾಯಿ ಅವರ ಬರಹ ಇದೆ.

೧೨೩೯. ದೊಂಬರ ಮದಾಲ್ಸಿ ಪದಗಳು

ಸಂ: ಎಚ್.ಎಂ. ಮಹೇಶ್ವರಯ್ಯ, ಎ.ಮುರಿಗೆಪ್ಪ; ಪ್ರ; ಸಹಿತಾ ಪ್ರಕಾಶನ ಧಾರವಾಡ; ಮೊ.ಮು: ೧೯೮೧; ಪು: ೧೨+೭೬=೮೮; ಕ್ರೌನ್ ೧/೮

"ದೊಂಬರ ಹಬ್ಬದ ಸಮಯದಲ್ಲಿ ದೊಂಬರಿಂದ ಗ್ರಾಮದೇವರ ಪಹರೆಯಲ್ಲಿ ಆ ದೇವರ ಮುಂದೆ ಹಾಡಿ, ಸ್ತುತಿಸಿ, ಹೊಗಳುವ ಪದಗಳೇ ಮದಾಲ್ಸಿ ಪದಗಳು" ಎಂಬ ವಾಕ್ಯವು 'ಪದಗಳಿಗೆ ಮುನ್ನ' ಎಂಬ ಬರಹದಲ್ಲಿದೆ. ಅಂಥ ೬೨ ಪದಗಳು ಇಲ್ಲಿವೆ. ಅನುಬಂಧದಲ್ಲಿ, ದೇವರ ನಾಮಗಳು ಹಾಗೂ ವ್ಯಕ್ತಿ ನಾಮಗಳು, ನದಿಯ ಹೆಸರುಗಳು, ಜಾತಿ ನಾಮಗಳು, ವೃತ್ತಿನಾಮಗಳು, ಸ್ಥಳನಾಮಗಳು, ಇವೆ.

೧೨೪೦. ದೊಂಬರ ಸಂಸ್ಕೃತಿ

ಲೇ: ದೇವೇಂದ್ರಕುಮಾರ ಹಕಾರಿ; ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು-೫೬೦೦೦೨; ಮೊ.ಮು: ೧೯೯೩; ಪು: ೪೮+೧೫೬=೨೦೪, ಕ್ರೌನ್ ೧/೮

ಎಂಟು ಅಧ್ಯಾಯಗಳಿವೆ: ೧.ಹಿನ್ನೆಲೆ ೨.ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ ೩.ಭಾಷೆ ಸಾಹಿತ್ಯ ೪.ಆಚರಣೆ ಮತ್ತು ಕಲೆ ೫.ಪ್ರದರ್ಶನಾತ್ಮಕ ಕಲೆಗಳು ೬.ಕ್ರೀಡೆಗಳು: ವೀರ ಕಲೆ, ಶೌರ್ಯ ಸಾಹಸ ೭.ಸಾಮಾಜಿಕ ಪರಿವರ್ತನೆಯ ಹಿನ್ನೆಲೆಯಲ್ಲಿ ೮.ಸಮಾರೋಪ. ಅನುಬಂಧದಲ್ಲಿ, ದೊಂಬರಾಟಕ್ಕೆ ಪರ್ಯಾಯ ಪದಗಳು, ಗಾದೆ, ಜನಪದಗೀತೆ ಹಾಗೂ ಕೆಲವು ಫೋಟೋಗಳಿವೆ. ಬರಗೂರ ರಾಂಚಂದ್ರಪ್ಪ ಅವರ ಸಂಸ್ಕೃತಿ ಉಪಸಂಸ್ಕೃತಿ ಎಂಬ ಸುದೀರ್ಘ ಪ್ರಸ್ತಾವನೆ ಇದೆ.

೧೨೪೧. ದೊಂಬಿದಾಸರು

ಲೇ: ಜೀ.ಶಂ. ಪರಮಶಿವಯ್ಯ; ಪ್ರ: ಐಬಿಎಚ್ ಪ್ರಕಾಶನ, ಬೆಂಗಳೂರು; ಮೊ.ಮು.೧೯೮೦, ಪುಟ ೫೬, ಕ್ರೌನ್ ೧/೮

ಈ ಗ್ರಂಥದಲ್ಲಿ ಆರು ಭಾಗಗಳಿವೆ. ೧.ಸಂಚಾರಿ ಗಾಯಕರು ೨.ದೊಂಬಿದಾಸರ ಪರಂಪರೆ ೩.ದೊಂಬಿದಾಸರ ಕಲೆ ೪.ದೊಂಬಿದಾಸರ ಕಾವ್ಯಗಳು ೫.ದೊಂಬಿದಾಸರ ಲಾವಣಿಗಳು ೬.ದೊಡ್ಡ ಕಾವ್ಯಗಳು. ಕಲಾವಿದನೊಬ್ಬನ ಭಾವಚಿತ್ರವೂ, ಒಂಬತ್ತು ರೇಖಾಚಿತ್ರಗಳೂ, ಇವೆ.

೧೨೪೨. ದೊಂಬಿದಾಸರ ಲಾವಣಿಗಳು

ಸಂ: ಜೀ.ಶಂ. ಪರಮಶಿವಯ್ಯ; ಪ್ರ: ಸಾಹಿತ್ಯ ಸದನ, ಮೈಸೂರು-೬; ಮೊ.ಮು. ೧೯೭೪; ಪುಟ ೨೫೪; ಕ್ರೌನ್ ೧/೮

ಹದಿನಾರು ಲಾವಣಿಗಳ ಸಂಕಲನ: ೧.ಪ್ರೇಮ ಸತ್ಯಭೋಜ ೨.ಶ್ರೀಗೌರಿಯ ಮದುವೆ ೩.ಗಂಗೆಯ ತರುವುದು ದಿಟವು ಕಾಣ್ಹೆಣ್ಣೆ ೪.ಗಂಗೇಗು ಗೌರಿಗೂ ಹತ್ತಿತು ಜಗಳ ೫.ಗಂಗೇಗೌರಿ ವಾದ ೬.ಗಂಗೇ ಗೌರಿ ಸವಾಲು ೭.ಕೃಷ್ಣ ಕೊರವಂಜಿ ೮.ತಟವಾಣಿ ಹೆಣ್ಣು ೯.ಅತ್ತೆ ಸೊಸೆ ೧೦.ಘಾತುಕ ಅಣ್ಣಯ್ಯ ೧೧.ಪಾಪಿಗೇಡಿ ಅಣ್ಣಯ್ಯ ೧೨.ಬಾಲ ನಾಗಮ್ಮ ೧೩.ಬಂಜೆ ಹೊನ್ನಮ್ಮ ೧೪.ಲೋಹಿತ ಕುಮಾರ ಬಸವಕುಮಾರ ೧೫.ಮಾರೇಗೌಡ ೧೬.ಕೆಂಪೇಗೌಡ. ಹಾಡಿದವರು, ಪ್ರಸ್ತಾವನೆ, ಕೊನೆಯಲ್ಲಿ, ಶಬ್ದಸೂಚಿ, ಸ್ವರಪ್ರಸ್ತಾರ ಇವೆ.

೧೨೪೩. ದೊಕ್ಕಲುಮಕ್ಕಳು: ಒಂದು ಅಧ್ಯಯನ

ಲೇ: ಎಲ್ಲಪ್ಪ ಕೆಕೆಪುರ; ಪ್ರ: ಶ್ರೀದುರ್ಗಾ ಪ್ರಕಾಶನ, ಕೆಕೆಪುರ, ರಾಂಪುರ(ಅಂಚೆ), ಮೊಳಕಾಲ್ಮುರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ -೫೭೭೫೪೦; ಮೊ.ಮು: ೧೯೯೭; ಪು: ೧೩+೩೧೫=೩೨೮; ಡಿಮ್ಮೈ ೧/೮

ಪಿ.ಹೆಚ್.ಡಿ ಮಹಾಪ್ರಬಂಧ. ಹನ್ನೆರಡು ಅಧ್ಯಾಯಗಳಿವೆ: ೧.ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ೨.ದೊಕ್ಕಲು ಮಕ್ಕಳನ್ನು ಕುರಿತ ಇದುವರೆಗಿನ ಅಧ್ಯಯನ ೩.ದೊಕ್ಕಲುಮಕ್ಕಳ ಮೂಲ ೪.ದೊಕ್ಕಲು ಮಕ್ಕಳ ಮೂಲ ನೆಲೆಗಳು-ದೊಕ್ಕಲು ಮಕ್ಕಳ ವಾಸಸ್ಥಾನ ಅಥವಾ ಮನೆ ೫.ದೊಕ್ಕಲುಮಕ್ಕಳ ಗೋತ್ರಗಳು ೬.ದೊಕ್ಕಲು ಮಕ್ಕಳ ಸಂಸ್ಕಾರಗಳು: ಜನನ, ವಿವಾಹ, ಮರಣವಿಧಿಗಳು, ಕೆಲವು ಪದ್ಧತಿ-ನಿಷೇಧ ಹಾಗೂ ದಂಡನೆಗಳು, ದಂಡನೆಯ ವಿವರಗಳು ೭.ದೊಕ್ಕಲು ಮಕ್ಕಳ ಹಬ್ಬಹರಿದಿನಗಳು ೮.ದೊಕ್ಕಲುಮಕ್ಕಳ ನಂಬಿಕೆ ಶಕುನಗಳು ೯.ದೊಕ್ಕಲು ಮಕ್ಕಳ ಕಲೆ ರಂಜನೆ ೧೦.ದೊಕ್ಕಲು ಮಕ್ಕಳ ಭಾಷೆ ೧೧.ದೊಕ್ಕಲು ಮಕ್ಕಳ ಸಾಹಿತ್ಯ: ಗಾದೆಗಳು, ವಡಪುಗಳು, ಒಗಟುಗಳು, ಪದಗಳು, ಕಥೆಗಳು ೧೨.ಉಪಸಂಹಾರ. ಅನುಬಂಧದಲ್ಲಿ ಕೆಲವು ಫೋಟೋಗಳಿವೆ.

೧೨೪೪. ದೊಡ್ಡವರ ಮಾತಿಗೆ ದುಡ್ಡು ಯಾವ ಲೆಕ್ಕ?

ಲೇ: ಪಿ.ಕೆ. ರಾಜಶೇಖರ; ಪ್ರ: ಸಂವಹನ, ೧೨/೧ಎ, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ; ಮೈಸೂರು-೫೭೦ ೦೦೧; ಮೊ.ಮು.೨೦೦೬; ಪುಟ ೧೨; ಕ್ರೌನ್ ೧/೪

ಸರಳ ಭಾಷೆಯಲ್ಲಿ ನಿರೂಪಿತವಾಗಿರುವ ಒಂದು ಜನಪದ ಕಥೆ. ಹಲವು ರೇಖಾಚಿತ್ರಗಳಿವೆ.

೧೨೪೫. ದೊಡ್ಡಾಟ ಪರಂಪರೆ ಮತ್ತು ಪ್ರಯೋಗಗಳು

ಲೇ: ಶ್ರೀಶೈಲ ವ್ಹಿ. ಹುದ್ದಾರ; ಪ್ರ: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ೧೭೬, ೧೨ನೇ ಕ್ರಾಸ್, ಮಾಗಡಿ ಮುಖ್ಯರಸ್ತೆ, ಅಗ್ರಹಾರ ದಾಸರಹಳ್ಳಿ, ಬೆಂಗಳೂರು-೭೯; ಮೊ.ಮು: ೨೦೧೨; ಪು: ೧೦+೫೪೯=೫೫೯; ಡಿಮ್ಮೈ ೧/೮

ಪಿಎಚ್.ಡಿ. ಮಹಾಪ್ರಬಂಧ. ಹನ್ನೆರಡು ಅಧ್ಯಾಯಗಳೂ ಐದು ಅನುಬಂಧಗಳೂ ಇವೆ. **ಅಧ್ಯಾಯಗಳು:** ೧.ಅಧ್ಯಯನದ ಉದ್ದೇಶ ಮತ್ತು ಸ್ವರೂಪದ ವ್ಯಾಪ್ತಿ ೨.ಜನಪದ ರಂಗಭೂಮಿ ಪರಂಪರೆ ಉಗಮ ವಿಕಾಸ ೩.ಕರ್ನಾಟಕ ಬಯಲಾಟಗಳು ಮತ್ತು ಪ್ರಕಾರಗಳು ೪.ದೊಡ್ಡಾಟದ ಪರಂಪರೆಯ ಕಥಾವಸ್ತು ವಿಶ್ಲೇಷಣೆ ೫.ದೊಡ್ಡಾಟ ಪ್ರದರ್ಶನ ಸಿದ್ಧಾಂತ ಹಾಗೂ ಪ್ರಯೋಗಗಳು ೬.ದೊಡ್ಡಾಟದ ಪ್ರಯೋಗದ ಸ್ವರೂಪ ಮತ್ತು ವ್ಯಾಪ್ತಿ ೭.ದೊಡ್ಡಾಟ ರಂಗಸಜ್ಜಿಕೆ ಪರಂಪರೆ ಮತ್ತು ಪ್ರಯೋಗ ೮.ದೊಡ್ಡಾಟ ವೇಷಭೂಷಣ ಪರಂಪರೆ ಮತ್ತು ಪ್ರಯೋಗ ೯.ದೊಡ್ಡಾಟ ಸಂಗೀತ ಪರಂಪರೆ ಮತ್ತು ಪ್ರಯೋಗ ೧೦.ದೊಡ್ಡಾಟದ ಕುಣಿತ, ಅಭಿನಯ ಪರಂಪರೆ ಮತ್ತು ಪ್ರಯೋಗ ೧೧.ದೊಡ್ಡಾಟ

ಪಾತ್ರ ಪರಿಕಲ್ಪನೆ ೧೨.ದೊಡ್ಡಾಟದ ಬಹುಮುಖಿ ಅಧ್ಯಯನದ ಅಗತ್ಯತೆ. **ಅನುಬಂಧಗಳು:** ೧.ಪ್ರಯೋಗ ದೊಡ್ಡಾಟಗಳ ವಿವರ ೨.ಅಭ್ಯಾಸ ಗ್ರಂಥಗಳು ೩.ಹಸ್ತಪ್ರತಿಗಳು ೪.ಮುದ್ರಿತ ಬಯಲಾಟಗಳು ೫.ಪ್ರಯೋಗ ದೊಡ್ಡಾಟಗಳು. ಶಿವಾನಂದ ಕೆಳಗಿನಮನಿ ಅವರ ಮುನ್ನುಡಿ ಇದೆ.

೧೨೪೬. ದೊಡ್ಡೇರಿ ಕದನ

ಲೇ: ಲಕ್ಷ್ಮಣ್ ತೆಲಗಾವಿ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು.೨೦೧೦; ಪುಟ ೬+೨೮=೩೪; ಡಿಮ್ಮೈ ೧/೮

ಚರಿತ್ರೆ ಮತ್ತು ಜಾನಪದಗಳ ನೆಲೆಯಲ್ಲಿ ಎಂಬ ಅಡಿಬರಹ ಇದೆ. ಮೂರು ಘಟ್ಟಗಳಲ್ಲಿ ಈ ಕೃತಿ ರೂಪುಗೊಂಡಿದೆ: ೧.ದೊಡ್ಡೇರಿ ಕದನ: ಚಿತ್ರದುರ್ಗ ಚರಿತ್ರೆಯ ರೋಚಕ ಅಧ್ಯಾಯ ೨.ದೊಡ್ಡೇರಿ ಕಾಳಗದ ಲಾವಣಿ: ಪುನರ್ವಿಮರ್ಶೆ ೩.ದೊಡ್ಡೇರಿ ಕಾಳಗದ ಲಾವಣಿ. ಎ.ಮುರಿಗೆಪ್ಪ ಅವರ ಶಬ್ದಪಾರಮಾರ್ಗಮಶಕ್ಯಂ ಎಂಬ ಮುನ್ನುಡಿ ಇದೆ.

೧೨೪೭. ದೊರೆ ಮಲ್ಲಸರ್ಜನ ದುಂದುಮಿ

ಸಂ: ದೊಡ್ಡಭಾವೆಪ್ಪನವರು ಮೂಗಿ; ಪ್ರ: ತಲ್ಲೂರ ರಾಯನಗೌಡರು, ಕಿತ್ತೂರ ಚೆನ್ನಮ್ಮರಾಣಿ ಇತಿಹಾಸ ಮಂಡಳ, ಬೈಲಹೊಂಗಲ, ಬಾಂಬೆ, ಇಂಡಿಯಾ; ಮೊ.ಮು. ೧೯೫೧; ಪುಟ ೨೦ +೮೮=೧೦೮; ಕ್ರೌನ್ ೧/೮

ಮಲ್ಲಸರ್ಜನ ದುಂದುಮೆ ಹಾಗೂ ವೀರರಾಣಿ ಈರವ್ವನ ಲಾವಣಿ ಎಂಬ ಹಾಡುಗಳು ಇಲ್ಲಿವೆ. ಮಧುರಚೆನ್ನ ಅವರ ಮುನ್ನುಡಿ, ದೊಡ್ಡಭಾವೆಪ್ಪ ಚನ್ನಬಸಪ್ಪ ಮೂಗಿ ಅವರ ಪ್ರಸ್ತಾವನೆ, ಇವೆ.

೧೨೪೮. ದ್ರಾವಿಡ ಜಾನಪದ

ಸಂ: ತೀ.ನಂ.ಶಂಕರನಾರಾಯಣ; ಪ್ರ: ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಬಿ.ಆರ್.ಪ್ರಾಜೆಕ್ಟ್, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು: ೧೯೮೫; ಪು: ೧೨+೩೩೬=೩೪೮; ಡಿಮ್ಮೈ ೧/೮

ವಿಚಾರ ಸಂಕಿರಣದ ಪ್ರಬಂಧಗಳು ಎಂಬ ಅಡಿಬರಹ ಇದೆ. ಆರು ಭಾಷೆಗಳ ಬಗ್ಗೆ ನಡೆದ ಗೋಷ್ಠಿಗಳಲ್ಲಿ ಸಾದರಪಡಿಸಿದ ಒಟ್ಟು ಹದಿಮೂರು ಪ್ರಬಂಧಗಳಿವೆ: **ಕನ್ನಡ ಜಾನಪದ:** ೧.ಭಾಷಿಕ ಮತ್ತು ಸಾಹಿತ್ಯಿಕ ಬಗೆಗಳು–ಸೋಮಶೇಖರ ಇಮ್ರಾಪುರ ೨.ಕ್ರಿಯಾತ್ಮಕ ಬಗೆಗಳು–ಕೆ.ಮರುಳಸಿದ್ಧಪ್ಪ ೩.ಕರ್ನಾಟಕದಲ್ಲಿ ಜಾನಪದ ವೈಜ್ಞಾನಿಕ ಬಗೆಗಳು–ಜೀ.ಶಂ.ಪರಮಶಿವಯ್ಯ. **ಮಲೆಯಾಳಂ ಜಾನಪದ:** ೧.ಭಾಷಿಕ ಮತ್ತು ಸಾಹಿತ್ಯಿಕ ಬಗೆಗಳು–ಎಂ.ರಾಮ ೨.ಕ್ರಿಯಾತ್ಮಕ ಬಗೆಗಳು–ಎಂ.ಆರ್.ರಾಘವನ್ ವಾರಿಯಾರ್, ಅನು: ಎಚ್.ಗಣೇಶ್ ಐತಾಳ್ ೩.ವಿಮರ್ಶಾತ್ಮಕ ಸರ್ವೇಕ್ಷಣೆ–ರಾಘವನ್ ಪಯ್ಯನಾಡ್, ಅನು: ಎನ್.ಎಸ್.ಶಾರದಾಪ್ರಸಾದ್. **ತಮಿಳು ಜಾನಪದ:** ೧.ಭಾಷಿಕ ಮತ್ತು ಸಾಹಿತ್ಯಿಕ

ಬಗೆಗಳು–ಕೆ.ಕುಶಾಲಪ್ಪಗೌಡ ೨.ಕ್ರಿಯಾತ್ಮಕ ಬಗೆಗಳು–ಎಸ್.ಷಣ್ಮುಗ ಸುಂದರಮ್, ಅನು: ಡಿ.ಎಸ್.ಜಯಪ್ಪಗೌಡ. **ತೆಲುಗು ಜಾನಪದ:** ೧.ಸಾಹಿತ್ಯಿಕ ಮತ್ತು ಭಾಷಿಕ ಬಗೆಗಳು–ಬಿ.ರಾಮರಾಜು, ಅನು: ಎಂ.ಜಯಂತಿಬಾಯಿ ೨.ವೈಜ್ಞಾನಿಕ ಬಗೆ–ಆರ್ವಿಯಸ್ ಸುಂದರಂ. **ತುಳು ಜಾನಪದ:** ಅಮೃತಸೋಮೇಶ್ವರ. **ಕೊಡವ ಜಾನಪದ:** ಎಂ.ಬಿ.ಗಾಂಧಿ. ಇತರ ದ್ರಾವಿಡ ಭಾಷೆಗಳಲ್ಲಿ ಜನಪದ ಸಾಹಿತ್ಯ–ಬಿ.ಬಿ.ರಾಜಪುರೋಹಿತ್. ಅನುಬಂಧಗಳು: ೧.ವಿಚಾರ ಸಂಕಿರಣದ ಉದ್ಘಾಟನ ಭಾಷಣ–ಎಂ.ಚಿದಾನಂದ ಮೂರ್ತಿ ೨.ಕಲಾ ಮೇಳದ ಉದ್ಘಾಟನಾ ಭಾಷಣ–ಏರ್ಯ ಲಕ್ಷ್ಮೀನಾರಾಯಣ ಆಳ್ವ ೩.ಗೋಷ್ಠಿ ೧: ಅಧ್ಯಕ್ಷ ಭಾಷಣ–ಎಂ.ರಾಮ ೫.ಸಮಾರೋಪ ಸಮಾರಂಭದ ಅಧ್ಯಕ್ಷ ಭಾಷಣ–ಎಚ್.ತಿಪ್ಪೇರುದ್ರಸ್ವಾಮಿ **೭.ಸಮೀಕ್ಷೆ** ೧: 'ದ್ರಾವಿಡ ಜಾನಪದ' ವಿಚಾರ ಸಂಕಿರಣ–ಸಿ.ಎಸ್.ಶಿವಕುಮಾರಸ್ವಾಮಿ **೮.ಸಮೀಕ್ಷೆ** ೨: ಕಲಾಮೇಳ ಬಸವರಾಜ ನೆಲ್ಲಿಸರ. ತೆಲುಗು ಕ್ರಿಯಾತ್ಮಕ ಜಾನಪದ–ತಂಗಿರಾಲ ವೆಂಕಟಸುಬ್ಬರಾವ್.

೧೨೪೯. ದ್ರಾವಿಡ ನಿಘಂಟು

ಸಂ: ಎ.ಸುಬ್ಬಣ್ಣರೈ, ಎ. ಮೋಹನ ಕುಂಟಾರ್, ಮಾಧವ ಪೆರಾಜೆ, ಸಿ. ವೆಂಕಟೇಶ್; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯಲ, ಹಂಪಿ; ಮೊ.ಮು: ೨೦೦೧; ಪು: ೧೪+೧೪೮=೧೬೨; ಡಿಮ್ಮೈ ೧/೮

ಕನ್ನಡ ಶಬ್ದಗಳಿಗೆ, ಇಂಗ್ಲಿಷ್ ಅರ್ಥವನ್ನೂ, ತಮಿಳು, ತೆಲುಗು, ತುಳು, ಮಲೆಯಾಳಂ ಭಾಷೆಗಳಲ್ಲಿನ ಸಮಾನಾರ್ಥಕ ಶಬ್ದಗಳನ್ನೂ ನೀಡಲಾಗಿದೆ. ಎಚ್.ಜೆ. ಲಕ್ಕಪ್ಪ ಗೌಡ ಅವರ ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ ಎಂಬ ಮುನ್ನುಡಿ, ಪ್ರಸ್ತಾವನೆ, ಇವೆ.

೧೨೫೦. ದ್ರೌಪದೀವಸ್ತ್ರಾಪಹಾರ ಹಾಡು

ಸಂ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ನಾ.ಮು. ೧೯೪೯; ಪುಟ ೧೬; ಕ್ರೌನ್ ೧/೧೬

ಮೂರು ಭಾಗಗಳಲ್ಲಿದೆ.

ಧ

೧೨೫೧. ಧರಿನಾಡಿನ ಬಿಂಬ–ಪ್ರತಿಬಿಂಬ

ಲೇ: ಜಗನ್ನಾಥ ಹೆಬ್ಬಾಳೆ; ಪ್ರ: ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘ (ರಿ.), 'ಶಿವರತ್ನ' ಶರಣನಗರ, ಕೆ.ಇ.ಬಿ. ರಸ್ತೆ, ನ್ಯಾಷನಲ್ ಪಿ.ಯು. ಕಾಲೇಜ ಹತ್ತಿರ, ಬೀದರ–೫೮೫ ೪೦೧; ಮೊ.ಮು: ೨೦೧೩; ಪು: ೪+೮೨=೮೬; ಡಿಮ್ಮೈ ೧/೮

ಈ ಗ್ರಂಥದಲ್ಲಿ ಅನುಬಂಧವೂ ಸೇರಿ ಒಟ್ಟು ೧೭ ಲೇಖನಗಳು ಇವೆ. ಅವುಗಳಲ್ಲಿ ಜಾನಪದ ವಿದ್ವಾಂಸರಾದ ಎಂ.ಎಸ್. ಲಠ್ಠೆ ಹಾಗೂ ಸೂಗಯ್ಯ ಹಿರೇಮಠ ಅವರುಗಳ ಪರಿಚಯ ಲೇಖನಗಳಿವೆ. ಉಳಿದವುಗಳಲ್ಲಿ ಮೂರು ಲೇಖನಗಳು ಜಾನಪದಕ್ಕೆ ಸಂಬಂಧಿಸಿವೆ. ೧.ಬುಲಾಯಿ ನೆಲೆ–ಹಿನ್ನೆಲೆ ೨.ಜನಪದ ಕಲೆಗಳು ಒಂದು ವಿವೇಚನೆ ೩.ಜಾತ್ರೆ ಕುರಿತ ಗಾದೆಗಳು.

೧೨೫೨. ಧರಿನಾಡಿನ ಜನಪದ ಹಾಡುಗಳು

ಸಂ: ಜಗನ್ನಾಥ ಹೆಬ್ಬಾಳೆ; ಪ್ರ: ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘ (ರಿ.), 'ಶಿವರತ್ನ' ಶರಣನಗರ, ಕೆ.ಇ.ಬಿ. ರಸ್ತೆ, ನ್ಯಾಷನಲ್ ಪಿ.ಯು. ಕಾಲೇಜ ಹತ್ತಿರ, ಬೀದರ–೫೮೫ ೪೦೧; ಮೊ.ಮು: ೨೦೧೩; ಪು: ೪೨+೧೬೦=೨೦೨; ಡಿಮೈ ೧/೮

ಇಲ್ಲಿನ ಹಾಡುಗಳನ್ನು ಹದಿನಾಲ್ಕು ಬಗೆಯಾಗಿ ವಿಂಗಡಿಸಲಾಗಿದೆ. ೧.ಭಜನೆ ಹಾಡುಗಳು ೨.ಸುರಗಿ ಸುತ್ತುವ ಹಾಡು ೩.ದೇವರ ಕರಿಯ (ಗುಗ್ಗಳ) ಹಾಡುಗಳು ೪.ಜೋಗುಳ ಹಾಡುಗಳು ೫.ಕುಟ್ಟುವ ಹಾಡುಗಳು ೬.ಬೀಸುವ ಹಾಡುಗಳು ೭.ಪಂಚಾಚಾರ್ಯರ ಆರತಿ ಹಾಡು ೮.ಭೂತೇರ ಹಾಡುಗಳು ೯.ಗೊಂದಲಿಗರ ಹಾಡುಗಳು ೧೦.ಬುಲಾಯಿ ಹಾಡುಗಳು ೧೧.ಸೀಗೀ ಹಾಡುಗಳು ೧೨.ದನ ಬೆಳಗುವ ಹಾಡುಗಳು ೧೩.ಹಂತಿಯ ಹಾಡುಗಳು ೧೪.ಸತ್ತವರ ಹಾಡುಗಳು. ಈ ಹಾಡುಗಳ ನಡುವೆ ಒಡಪುಗಳು ಹಾಗೂ ಒಗಟುಗಳು ಎಂಬ ವಿಭಾಗಗಳೂ ಇವೆ. ಕೊನೆಯಲ್ಲಿ ನಲವತ್ತು ಪುಟಗಳ ಸುದೀರ್ಘ ಪ್ರಸ್ತಾವನೆ ಇದೆ.

೧೨೫೩. ಧರೆಗೆ ದೊಡ್ಡವರ ಕಾವ್ಯ

ಸಂ: ತಮಂಪ ಮೂರ್ತಿ; ಪ್ರ: ಕಲಾಮಯೂರಿ, ೨೮೯, ಗುರುಪ್ರಸಾದ, ೪ನೇ ಬ್ಲಾಕು, ರಾಜಾಜಿನಗರ, ಬೆಂಗಳೂರು–೫೬೦ ೦೧೦; ಮೊ.ಮು.೧೯೮೦; ಪುಟ ೩೨+೧೫೮=೧೯೦; ಕ್ರೌನ್ ೧/೮

ಜನಪದ ಕಾವ್ಯ ಎಂಬ ಅಡಿಬರಹ ಇದೆ. ಸಾ.ಶಿ. ಮರುಳಯ್ಯ ಅವರ ಮುನ್ನುಡಿ, ಧರೆಗೆ ದೊಡ್ಡವರ ಕಾವ್ಯದ ಬಗ್ಗೆ ಎಂಬ ಬಿ.ಜಿ.ಸತ್ಯಮೂರ್ತಿ ಅವರ ಬರಹ, ಕೊನೆಯಲ್ಲಿ, ಅರ್ಥಕೋಶ, ಕಲಾವಿದರ ಪರಿಚಯ, ಇವೆ.

೧೨೫೪. ಧರೆಗೆ ದೊಡ್ಡವರು

ಲೇ: ಎಂ.ಎಸ್. ಮಂಜುಳಾದೇವಿ, ಎಂ.ಎಸ್. ರೂಪರಾಜ್; ಪ್ರ: ರೂಪರಾಜ್ ವೇದ ವಿಜ್ಞಾನ ಸಂಶೋಧನಾ ಪ್ರತಿಷ್ಠಾನ, ೧೭೨, ರಮಾವಿಲಾಸ ರಸ್ತೆ, ಮೈಸೂರು–೫೭೦ ೦೨೪; ಮೊ.ಮು. ೧೯೬೩, ಈ.ಮು. ೧೯೯೭; ಪುಟ ೮೦; ಕ್ರೌನ್ ೧/೮

ಶ್ರೀ ಮಂಟೇಸ್ವಾಮಿ, ರಾಚಪ್ಪಾಜಿ, ಸಿದ್ಧಪ್ಪಾಜಿ ಇವರ ಲೀಲಾ ಪವಾಡಗಳು ಎಂಬ ಅಡಿಬರಹ ಇದೆ.

೧೨೫೫. ಧರಗೆ ದೊಡ್ಡವರು

ಲೇ: ಪರಮಶಿವ ನಡುಬೆಟ್ಟ, ಪ್ರ: ರಾಜ್ಯ ಸಂಪನ್ಮೂಲ ಕೇಂದ್ರ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಮೈಸೂರು; ಮೊ.ಮು ೧೯೮೯, ಪು: ೩೬; ಫೂಲ್ಸ್‌ಕ್ಯಾಪ್ ೧/೪

ಮಂಟೇಸ್ವಾಮಿಯವರ ಕಥೆಯನ್ನುಳ್ಳ ಕೃತಿ. ಅಲ್ಲಲ್ಲಿ ರೇಖಾಚಿತ್ರಗಳಿವೆ. ಲಿಂಗದೇವರು ಹಳೆಮನೆ ಅವರ ಮುನ್ನುಡಿ ಇದೆ.

೧೨೫೬. ಧರ್ಮದೇವತೆ

ಸಂ: ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು–೧೮; ಮೊ.ಮು: ೧೯೮೧; ಪು: ೮+೮೭ = ೯೫; ಡಿಮ್ಮೈ ೧/೮

ಇದು ಒಂದು ಸಣ್ಣಾಟ. ಹಂಪ ನಾಗರಾಜಯ್ಯ ಅವರ ಮುನ್ನುಡಿ, ಕೊನೆಯಲ್ಲಿ ಶಬ್ದಗಳ ಅಕಾರಾದಿ ಎಂಬ ಅರ್ಥಕೋಶ, ಪದಗಳ ಅಕಾರಾದಿ, ಇವೆ.

೧೨೫೭. ಧರ್ಮಸ್ಥಳ ಮೇಳ

ಲೇ: ಬಾ. ಸಾಮಗ ಮಲ್ಪೆ; ಪ್ರ: ತುಳುನಾಡ್ ಪ್ರಗತಿ ಪ್ರಕಾಶನಾಲಯ, ಮಲ್ಪೆ–೫೭೬ ೧೧೮ (ದ.ಕ); ಮೊ.ಮು. ೧೯೮೦; ಪುಟ ೮+೧೨+೮=೨೮; ಡಿಮ್ಮೈ ೧/೮

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಲಿ ಎಂಬ ಅಡಿಬರಹ ಇದೆ. ಮೇಳದ ಸಂಕ್ಷಿಪ್ತ ಸಮಗ್ರ ಪರಿಚಯ ಉಳ್ಳ ಗ್ರಂಥ.

೧೨೫೮. ಧರ್ಮಪುರಿಯಿಂದ ತಿರುನಲ್ವೇಲಿವರೆಗೆ

ಲೇ: ಎಂ. ಭೈರೇಗೌಡ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು; ಮೊ.ಮು.: ೧೯೯೭; ಪು: ೮+೧೧೪ = ೧೨೨; ಡಿಮ್ಮೈ.

ತಮಿಳುನಾಡು ಜಾನಪದ ಪ್ರವಾಸ ಕಥನ ಎಂಬ ಅಡಿಬರಹ ಇದೆ. ಈ ಗ್ರಂಥದಲ್ಲಿ ಐದು ಅಧ್ಯಾಯಗಳಿವೆ: ೧.ಪೀಠಿಕೆ ೨.ಪ್ರವಾಸಾನುಭವ ಕಥನ ೩.ತಮಿಳು ಜಾನಪದದ ಕೆಲ ಪ್ರಕಾರಗಳು ೪.ಕೆಲವು ತಮಿಳು ಜಾನಪದ ವಿದ್ವಾಂಸರುಗಳು ಹಾಗೂ ತಮಿಳು ನಾಡಿನಲ್ಲಿ ಕನ್ನಡ ವಿದ್ವಾಂಸರುಗಳೂ ೫.ತಮಿಳು ಜಾನಪದದ ಕೆಲವು ಪ್ರದರ್ಶಕ ಕಲೆಗಳು. ಎಚ್.ಜೆ. ಲಕ್ಕಪ್ಪಗೌಡ ಅವರ ಅಧ್ಯಕ್ಷರ ಮಾತು ಎಂಬ ಮುನ್ನುಡಿ ಇದೆ.

೧೨೫೯. ಧಾರವಾಡ ಜಿಲ್ಲೆಯ ಜನಪದ ಕಥೆಗಳು

ಸಂ: ಟಿ.ಎಸ್. ರಾಜಪ್ಪ; ಪ್ರ: ಸಾಗರ್ ಪ್ರಕಾಶನ, ೬೯೫, ೧೦ನೇ ಮುಖ್ಯರಸ್ತೆ, ೮೦ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು–೫೬೦ ೦೭೨; ಮೊ.ಮು.೧೯೭೫, ಎ.ಮು.೨೦೧೨; ಪುಟ ೧೬೦; ಡಿಮ್ಮೈ ೧/೮

೨೮ ಕಥೆಗಳ ಸಂಗ್ರಹ. ಹಾ.ಮಾ.ನಾಯಕ ಅವರ ಮುನ್ನುಡಿ, ಜೀ.ಶಂ.ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಸಂಪಾದಕರ ಪ್ರಸ್ತಾವನೆ, ಇವೆ. ಪ್ರಸ್ತಾವನೆಯಲ್ಲಿ ಕಥೆಗಳನ್ನು ವರ್ಗೀಕರಿಸಲಾಗಿದೆ: ಅತಿಮಾನುಷ ಕಥೆಗಳು, ಅದ್ಭುತ ಕಥೆಗಳು, ರಮ್ಯ ಕಥೆಗಳು, ಬುದ್ಧಿವಂತಿಕೆ ಕಥೆಗಳು, ಪ್ರಾಣಿ ಕಥೆಗಳು, ನೀತಿ ಕಥೆಗಳು, ವಾಸ್ತಾವಿಕ ಕಥೆಗಳು, ಒಗಟಿನ ಕಥೆಗಳು. ಮತ್ತು ಈ ಕಥೆಗಳನ್ನು ವಿವರಿಸಲಾಗಿದೆ. ಪ್ರಸ್ತಾವನೆಯ ಭಾಗದಲ್ಲಿ ಕೆಲವು ಕಥೆಗಳನ್ನು ಇತರ ಸಂಕಲನದ ಕೆಲವು ಕಥೆಗಳೊಡನೆ ತೌಲನಿಕವಾಗಿ ವಿಶ್ಲೇಷಿಸಲಾಗಿದೆ. ಕೊನೆಯಲ್ಲಿ ಅರ್ಥಕೋಶ, ಕಥೆಗಳನ್ನು ಹೇಳಿದವರು, ಇವೆ.

೧೨೬೦. ಧಾರವಾಡ ಜಿಲ್ಲೆಯ ಜನಪದ ಕಲಾವಿದರು

ಲೇ: ಶಾಲಿನಿ ರಘುನಾಥ; ಪ್ರ: ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು; ಮೊ.ಮು: ೨೦೧೨ ಪು: ೧೮+೧೭೮=೧೯೬ ; ಡಿಮ್ಮೈ ೧/೮

ಇಲ್ಲಿನ ಕಲಾವಿದರನ್ನು ಏಳು ಭಾಗಗಳಾಗಿ ವಿಂಗಡಿಸಲಾಗಿದೆ: **ಭಾಗ ಒಂದು: ಸಂಪ್ರದಾಯ ಪದಗಳ ಹಾಡುಗಾರರು** (ಆಚರಣೆ, ಕಲೆಗೆ ಸಂಬಂಧಿಸಿದ ಹಾಡುಗಳು): ೧.ಗಂಗವ್ವ ಮರೆಪ್ಪ ಮಾದರ ೨.ಶಾಂತವ್ವ ನಿಂಗಪ್ಪ ಹರಿಜನ ೩.ಗುರುಬಸವ್ವ ಬಶೆಟ್ಟಪ್ಪ ಟೊಂಗಳಿ ೪.ಪಾರ್ವತಿ ಸಿದ್ದಪ್ಪ ಹೊಂಗಲ ೫.ದಿ. ಕಾಳಮ್ಮ ರುದ್ರಪ್ಪ ಹೊಂಗಲ ೬.ಚೆನ್ನಬಸವ್ವ ತಿರಕಪ್ಪ ನರಗುಂದ ೭.ನೀಲವ್ವ ಹೊಸಮನಿ ೮.ದ್ಯಾಮವ್ವ ಫಕ್ಕೀರಪ್ಪ ದೊಡ್ಡಮನಿ ೯.ಗದಿಗೆವ್ವ ನಾಗಣ್ಣನವರ ೧೦.ಕಲ್ಲಮ್ಮ ಬಸಪ್ಪ ರಾಯಾಪೂರ ೧೧.ಸಿದ್ದವ್ವ ಗಾಂಜಪ್ಪ ಸಣ್ಣಮನಿ ೧೨.ಕಾಶಮ್ಮ ರೇವಣಪ್ಪ ಮಲ್ಲಿಗವಾಡ ೧೩.ಲಕ್ಷ್ಮವ್ವ ದೊಡ್ಡಯಲ್ಲಪ್ಪ ಹೊಸಮನಿ ೧೪.ಗೌರವ್ವ ಶಿಲಿಂಗಪ್ಪ ಸಣ್ಣಮನಿ ೧೫.ಗಂಗವ್ವ ಶಿವಲಿಂಗಪ್ಪ ಭಾವಿಕಟ್ಟೆ ೧೬.ಶೀಮಂತವ್ವ ನಿಂಗನಗೌಡ ಮುಂಡರಗಿ ೧೭.ಮಲ್ಲವ್ವ ನೀಲಪ್ಪ ದೇವಟಗಿ ೧೮.ಶಾಂತವ್ವ ಬಿ. ಗೌಡರ ೧೯.ಕಲ್ಲವ್ವ ಕಲ್ಲಪ್ಪ ದ್ಯಾವಪ್ಪನವರ ೨೦.ಜೈನಬಿ ತಹಶೀಲ್ದಾರ ೨೧.ನೀಲಮ್ಮ ಫಕ್ಕೀರಪ್ಪ ಕೊಂಗವಾಡ ೨೨.ಚಿನ್ನಮ್ಮ ಗದಗಯ್ಯ ಶಿವಬಸಯ್ಯನವರ ೨೩.ಯಲ್ಲವ್ವ ಮರಿಯಪ್ಪ ಹರಿಜನ ೨೪.ಕರೆವ್ವ ನೇಕಾರ ೨೫.ನಿಂಗವ್ವ ಬೇಗೂರ ೨೬.ಮಲ್ಲವ್ವ ಸಿದ್ದಪ್ಪ ರೇಶ್ಮಿ ೨೭.ಕೆರಿಯಮ್ಮ ಬಸವಣ್ಣೆಪ್ಪ ಹಂಚಿನಮನಿ (ಜೋಗಿ) ೨೮.ಹನೀಫಾ ಮುಕ್ತುಂಸಾಬ ಮುಲ್ಲಾ ೨೯.ನೀಲವ್ವ ಬಸಪ್ಪ ಹುಬ್ಬಳ್ಳಿ ೩೦.ಜಾನಕಮ್ಮ ಫಕ್ಕೀರಪ್ಪ ಭಜಂತ್ರಿ ೩೧.ಹುಸೇನಾಬಿ ಮನ್ನುಸಾಬ ಪೆಂಡಾರಿ ೩೨.ವಿಮಲವ್ವ ಸಿದ್ಧರಾಮಪ್ಪ ತುಳಜಮ್ಮನವರ ೩೩.ಶಿವಾಜಿ ಭಿಮಪ್ಪ ತುಳಜಮ್ಮನವರ ೩೪.ಅಡಿವೆಪ್ಪ ಮಲ್ಲಪ್ಪ ಬ್ಯಾಹಟ್ಟಿ. **ಭಾಗ ಎರಡು: ಇನ್ನಿತರ ಜನಪದ ಹಾಡುಗಾರರು**(ಗೀಗೀ, ಲಾವಣಿ, ಹಂತಿ, ಏಕತಾರಿ, ಭಜನೆ, ಡೊಳ್ಳಿನ ಪದ, ಹೋಳಿಪದ ಇತ್ಯಾದಿ ಪದಗಳ ಹಾಡುಗಾರರು): ೩೫.ದಿ. ನಿಂಗನಗೌಡ ಬಸನಗೌಡ ಮುಂಡರಗಿ ೩೬.ಹನುಮಂತಪ್ಪ ಹನಮಂತಪ್ಪ ಮಾದರ (ಹಾಡಕಾರ) ೩೭.ಬಸಪ್ಪಾ ಬಸಪ್ಪಾ ಮಾಯಣ್ಣವರ ೩೮.ಭರಮಪ್ಪಾ ರಾಮಪ್ಪಾ ಕೋಡಿ ೩೯.ಅಡಿವೆಪ್ಪ ಫಕ್ಕೀರೆಪ್ಪ ಬಂಡವಾಡ ೪೦.ಶಂಕರಪ್ಪ ಬಸಪ್ಪ ಮೇಟಿ ೪೧.ತೋಟಪ್ಪ ಗುರುಬಸಪ್ಪ ಕಲ್ಲೂರ ೪೨.ಚನ್ನಪ್ಪ ಯಲ್ಲಪ್ಪ ಮಾದರ (ಕೆಳಗಿನಮನಿ) ೪೩.ಉಡಚಪ್ಪ

ಸೋಮಪ್ಪ ಸಣ್ಣಿಂಗನವರ ೪೪.ದಾವಲಸಾಬ ಮಹಮ್ಮದಸಾಬ ಟೈಲರ್ ೪೫.ಮಡಿವಾಳಪ್ಪ ಬಸವಣ್ಣೆಪ್ಪ ಎತ್ತಿನಗುಡ್ಡ ೪೬.ಫಕ್ಕೀರಪ್ಪ ಬಸವಣ್ಣೆಪ್ಪ ಕಮ್ಮಾರ ೪೭.ತಮ್ಮಣ್ಣ ಶಂಕ್ರೆಪ್ಪ ಸೋನಾರ ೪೮.ಶಿವಪ್ಪ ಗುರುಸಿದ್ದಪ್ಪ ಅಳಗೋಡಿ ೪೯.ದಿ. ಫಕ್ಕೀರವ್ವ ಗುಡಿಸಾಗರ. **ಭಾಗ ಮೂರು: ಜನಪದ ವಾದನಕಾರರು** (ಕಣಿ, ಜಗ್ಗಲಿಗೆ, ದಿಮ್ಮು, ಕರಡಿಮಜಲು, ಚೌಗಡಿಮಜಲು, ಹಲಗೆ, ಡೋಲು, ಶಹನಾಯಿ ಕಲಾವಿದರು): ೫೦.ದಿ. ಬಸಪ್ಪ ಫಕ್ಕೀರಪ್ಪ ಕೋರಿ ೫೧.ನಾಗಪ್ಪ ಫಕ್ಕೀರಪ್ಪ ಕುಂಬಾರ ೫೨.ಅಡಿವೆಪ್ಪ ಫಕ್ಕೀರೆಪ್ಪ ಹಿರೇಮನಿ ೫೩.ದಿ. ಮಲ್ಲಪ್ಪ ಗಂಗಪ್ಪ ಹೆಗಡೆ ೫೪.ದಿ. ಶಿದ್ರಾಮಪ್ಪ ಬೂದಪ್ಪ ಹೂಗಾರ ೫೫.ಬಸಪ್ಪ ನಿಂಗಪ್ಪ ಹಾದಿಮನಿ ೫೬.ದಿ. ಮಡಿವಾಳಪ್ಪ ದ್ಯಾಮಪ್ಪ ಕುಂಬಾರ ೫೭.ವೆಂಕಪ್ಪ ಪುಲಿ ೫೮.ಬಸವರಾಜ ರಾಜಪ್ಪ ಮಾಳಗಿಮನಿ ೫೯.ದಿ. ರಾಜಪ್ಪ ಭೀಮಪ್ಪ ಮಾಳಗಿಮನಿ ೬೦.ಫಕ್ಕೀರಪ್ಪ ರಂಗಪ್ಪ ಭಜಂತ್ರಿ ೬೧.ಬಸಪ್ಪ ಕರೆಪ್ಪ ಭಜಂತ್ರಿ ೬೨.ದುರಗಪ್ಪ ಬರಮಪ್ಪ ಭಜಂತ್ರಿ ೬೩.ಸಣ್ಣ ಫಕ್ಕಿರಪ್ಪ ಹನುಮಂತಪ್ಪ ಭಜಂತ್ರಿ ೬೪.ಫಕೀರಪ್ಪ ಫರಸಪ್ಪ ಭಜಂತ್ರಿ ೬೫.ದಿ. ಶ್ರೀ ಗವಾಯಿ ವೆಂಕಪ್ಪ ಪುಲಿ ೬೬.ಬಸಪ್ಪ ನಿಂಗಪ್ಪ ಹಾದಿಮನಿ ೬೭.ಬಸಪ್ಪ ಹನುಮಂತಪ್ಪ ಬಾಣಿ ೬೮.ಹನುಮಂತಗೌಡ ವೀರನಗೌಡ ಮೇಲಿನಮನಿ ೬೯.ಫಕ್ಕೀರಪ್ಪ ನಿಂಗಪ್ಪ ಬಾಣಿ ೭೦.ಭೀಮಪ್ಪ ಹೊಳೆಪ್ಪ ಮಾಳಗಿ ೭೧.ಸಂಗಪ್ಪ ಗದಿಗೆಪ್ಪ ಮಳಲಿ ೭೨.ವಸಂತ ನಾರಾಯಣ ರಣ್ಣವರ. **ಭಾಗ ನಾಲ್ಕು: ಜನಪದ ರಂಗಭೂಮಿ ಕಲಾವಿದರು** (ದೊಡ್ಡಾಟ, ಸಣ್ಣಾಟ, ಕೃಷ್ಣಪಾರಿಜಾತ, ಸಂಗ್ಯಾಬಾಳ್ಯ ಕಲಾವಿದರು): ೭೩.ಬಾಳಪ್ಪ ಹನುಮಂತಪ್ಪ ಗಾಳನಾಯ್ಕರ ೭೪.ಹುಸೇನಸಾಬ ಹಸನಸಾಬ ಮಾತೋರ್ಜಿ ೭೫.ಗುರುಸಿದ್ದಪ್ಪ ಚೆನ್ನಪ್ಪ ಅಂಗಡಿ ೭೬.ಗದಿಗೆಪ್ಪ ಫಕ್ಕೀರಪ್ಪ ನಾಯ್ಕರ. **ಭಾಗ ಐದು: ಜನಪದ ಕುಣಿತದ ಕಲಾವಿದರು:** ೭೭.ಈರನಗೌಡ ದುಂಡನಗೌಡ ಕುಲಕರ್ಣಿ ೭೮.ಫಕ್ಕೀರಪ್ಪ ವಿರೂಪಾಕ್ಷಪ್ಪ ಹಡಪದ ೭೯.ತಿರಕಪ್ಪ ನಿಂಗಪ್ಪ ಹಾರಿಕೊಪ್ಪ ೮೦.ಕೇರಪ್ಪ ಶಂಕರಪ್ಪ ಟೆಂಗಲ್ ೮೧.ನಿಂಗಪ್ಪ ದ್ಯಾಮಪ್ಪ ದ್ಯಾವಣ್ಣನವರ ೮೨.ಕಾಸಿಂಸಾಬ ಹಸನಸಾಬ ಪಾಗಜಾದೆ ೮೩.ಸಿದ್ದಪ್ಪ ಮುದಕಪ್ಪ ದ್ಯಾವಣ್ಣವರ ೮೪.ಪ್ರಭು ಸಿದ್ದಪ್ಪ ದ್ಯಾವಣ್ಣವರ ೮೫.ಗಂಗಪ್ಪ ಕರೆಪ್ಪ ಬಸಪ್ಪನವರ ೮೬.ಕಲ್ಲಪ್ಪ ರಾಮಪ್ಪ ದಾಳಿ ೮೭.ಶಿವಾನಂದ ಭೀಮಪ್ಪ ಕಂಬಳಿ ೮೮.ಶಿವರುದ್ರಪ್ಪ ಫಕೀರಪ್ಪ ನೇಕಾರ. **ಭಾಗ ಆರು: ಲಂಬಾಣಿ ಗೀತ ಮತ್ತು ನೃತ್ಯಗಳ ಕಲಾವಿದರು:** ೮೯.ವಾಲ್ಕಿಬಾಯಿ ಭೊಜಪ್ಪ ಲಮಾಣಿ ೯೦.ಅಕ್ಕವ್ವ ಲಾಲಪ್ಪ ಲಮಾಣಿ ೯೧.ಭೀಮವ್ವ ತಿಪ್ಪಣ್ಣ ಲಮಾಣಿ ೯೨.ಶಕ್ರವ್ವ ಲಚ್ಚಪ್ಪ ಲಮಾಣಿ ೯೩.ಗ್ಯಾನವ್ವ ಹೋಕಪ್ಪ ಲಮಾಣಿ ೯೪.ಶಶಿಬಾಯಿ ಪುನ್ನಪ್ಪ ಲಮಾಣಿ ೯೫.ಲಾಲವ್ವ ಪುನ್ನಪ್ಪ ಲಮಾಣಿ. **ಭಾಗ ಏಳು: ಜನಪದ ಶಿಲ್ಪ ಕಲಾವಿದರು:** ೯೬.ಈರಪ್ಪ ಈಶ್ವರಪ್ಪ ಬಡಿಗೇರ

೧೨೬೧. ಧಾರವಾಡ ಜಿಲ್ಲೆಯ ಲಾವಣಿಗಳು

ಸಂ. ಟಿ.ಎಸ್. ರಾಜಪ್ಪ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು. ೧೯೭೮, ಪುಟ ೩೨ + ೧೩೮=೧೭೦, ಡಿಮ್ಮೈ ೧/೮

೩೮ ಲಾವಣಿಗಳಿವೆ: ಇಲ್ಲಿನ ಲಾವಣಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ: ೧.ಹರದೇಶಿ ಸಂಪ್ರದಾಯದ ಲಾವಣಿಗಳು ೨.ನಾಗೇಶಿ ಸಂಪ್ರದಾಯದ ಲಾವಣಿಗಳು ೩.ಸಂಕೀರ್ಣ ಲಾವಣಿಗಳು. ಪ್ರಾರಂಭದಲ್ಲಿ ಹಾ.ಮಾ.ನಾಯಕ ಅವರ ಮುನ್ನುಡಿ, ಜೀ.ಶಂ. ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಸಂಪಾದಕರ ಅರಿಕೆ, ಪ್ರಸ್ತಾವನೆ, ಇವೆ. ಕೊನೆಯಲ್ಲಿ ಅರ್ಥಕೋಶ, ಸಂಗ್ರಹ ವಿವರ, ಇವೆ.

೧೨೬೨. ಧೀರ ಟಿಪ್ಪುವಿನ ಲಾವಣಿಗಳು

ಸಂ: ಲಿಂಗದೇವರು ಹಳೆಮನೆ; ಪ್ರ.: ವಿಸ್ಮಯ ಪ್ರಕಾಶನ, ಮೈಸೂರು; ಮೊ.ಮು. ೨೦೦೩, ಎ.ಮು. ೨೦೦೯, ಪುಟ ೬೪, ಡಿಮ್ಮೈ ೧/೮

ನಾಲ್ಕು ಲಾವಣಿಗಳ ಸಂಕಲನ: ೧.ಮೈಸೂರು ಹುಲಿ ಟಿಪ್ಪು ಸುಲ್ತಾನನ ಲಾವಣಿ ೨.ಟಿಪ್ಪು ಸುಲ್ತಾನ್ ಲಾವಣಿ ೩.ಟಿಪ್ಪು ಸುಲ್ತಾನನ ಬೀಳಿನ ಹಾಡು ೪.ಟಿಪ್ಪು ಸುಲ್ತಾನ. ಪ್ರಾರಂಭದಲ್ಲಿ ೨೨ ಪುಟಗಳ ಪ್ರಸ್ತಾವನೆ ಇದೆ. ಕೊನೆಯಲ್ಲಿ, ಜೀ.ಶಂ. ಪರಮಶಿವಯ್ಯ ಅವರ ಕೃತಿಯಿಂದ ಎತ್ತಿಕೊಂಡ 'ಏನು ಮೋಸವಾಯಿತು?' ಎಂಬ ಹಾಡು, ಮತಿಘಟ್ಟ ಕೃಷ್ಣಮೂರ್ತಿ ಅವರ ಕೃತಿಯಿಂದ ಎತ್ತಿಕೊಂಡ 'ಏನು ಮೋಸವಾಯಿತೋ?' ಎಂಬ ಹಾಡೂ, ಇವೆ.

೧೨೬೩. ಧ್ರುವ ಚರಿತ್ರೆ ಹಾಡು

ಸಂ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ನಾ.ಮು. ೧೯೫೨; ಪುಟ ೨೪; ಕ್ರೌನ್ ೧/೧೬

ರಾಗ ತಾಳ ಸಹಿತದ ಎರಡು ಅಧ್ಯಾಯಗಳ ಹಾಡು.

ನ

೧೨೬೪. ನಂಬಿಕೆಯ ಮೋಸ

ಸಂ: ಜೀನಹಳ್ಳಿ ಸಿದ್ಧಲಿಂಗಪ್ಪ; ಪ್ರ: ಶ್ರುತಿ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ದಾವಣಗೆರೆ ಜಿಲ್ಲೆ–೫೭೭ ೨೨೩; ಮೊ.ಮು. ೨೦೦೨; ಪುಟ ೧೨; ಕ್ರೌನ್ ೧/೪

ದಪ್ಪ ಅಕ್ಷರದಲ್ಲಿ ಅಚ್ಚಾಗಿರುವ ಒಂದು ಜನಪದ ಕಥೆ. ಪ್ರತಿ ಪುಟದಲ್ಲೂ ರೇಖಾಚಿತ್ರಗಳಿವೆ.

೧೨೬೫. ನಂಬಿದ ಸತ್ಯಗಳು

ಲೇ: ಕೆ. ಸಾವಿತ್ರಿ; ಪ್ರ: ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರ ದೊಡ್ಡಿ; ಮೊ.ಮು.೨೦೦೬; ಪುಟ ೩೩೬; ಡಿಮ್ಮೈ ೧/೮

ಸ್ತ್ರೀಭೂತಗಳ ಚಾರಿತ್ರಿಕ ಅಧ್ಯಯನ ಎಂಬ ಅಡಿಬರಹ ಇದೆ. ಪಿಎಚ್.ಡಿ. ಮಹಾಪ್ರಬಂಧ. ಒಂಬತ್ತು ಅಧ್ಯಾಯಗಳಿವೆ: ೧.ವಿಷಯ ಪ್ರವೇಶ ೨.ತುಳುವರ ಆರಾಧನಾ ಇತಿಹಾಸ ೩.ಗಮನಾರ್ಹ ಸ್ತ್ರೀ ಭೂತಗಳು ೪.ತಳುನಾಡಿನ ದೇವಾಲಯ ಪರಂಪರೆ: ಸ್ತ್ರೀಭೂತಗಳ ಪ್ರಾಚೀನತೆ ೫.ಭೂತಸ್ಥಾನಗಳು: ಸ್ತ್ರೀ ಭೂತಗಳ ಪ್ರಾಚೀನತೆ ೬.ಸ್ತ್ರೀ ಭೂತಗಳ ಮೌಖಿಕ ಪರಂಪರೆ ೭.ಸ್ತ್ರೀ ಭೂತಗಳ ಸಾಮಾಜಿಕ ಸಂಬಂಧ ೮.ಸ್ತ್ರೀ ಭೂತಗಳ ಆರಾಧನಾ ಪ್ರಾಮುಖ್ಯತೆ ೯.ಆಧುನಿಕ ಸಂದರ್ಭದಲ್ಲಿ ಸ್ತ್ರೀ ಭೂತಾರಾಧನೆ. ಅನುಬಂಧದಲ್ಲಿ, ನಿರೂಪಕರ ಮಾಹಿತಿ, ಸಾಂಸ್ಕೃತಿಕ ಪದಕೋಶ, ತಃಖ್ತೆಗಳು ಹಾಗೂ ಕೆಲವು ಫೋಟೋಗಳು, ಇವೆ. ಪುರುಷೋತ್ತಮ ಬಿಳಿಮಲೆ ಅವರ ಮುನ್ನುಡಿ, ಎಸ್.ಜಿ. ಸಿದ್ಧರಾಮಯ್ಯ ಅವರ ನಲ್ನುಡಿ, ಇವೆ.

೧೨೬೬. ನಗರ ಜಾನಪದ

ಲೇ: ಚಂದ್ರು ಕಾಳೇನಹಳ್ಳಿ; ಪ್ರ: ಭಾರತೀ ಪ್ರಕಾಶನ, ಸರಸ್ವತೀಪುರಂ, ಮೈಸೂರು-೫೭೦ ೦೦೯; ಮೊ.ಮು. ೧೯೭೮; ಪುಟ ೬+೯೪=೧೦೦; ಕ್ರೌನ್ ೧/೮

ಎಂಟು ಅಧ್ಯಾಯಗಳಿರುವ ಗ್ರಂಥ: ೧.ಪ್ರವೇಶ ೨.ಪಾಶ್ಚಾತ್ಯರಲ್ಲಿ ನಗರ ಜಾನಪದ ಅಧ್ಯಯನಾಸಕ್ತಿ ೩.ಜನಪದ ಮತ್ತು ನಗರ ಜಾನಪದ ೪.ನಗರದಲ್ಲಿ ಗದ್ಯಕಥನಗಳು ೫.ಶೌಚಾಗಾರದ ಗೋಡೆ ಬರಹಗಳು ೬.ನಗರ ಸಾಮಾಜಿಕ ಜನಪದ ಆಚರಣೆಗಳು ೭.ನಗರ ಜನಪದ ಕಲೆಗಳು ೮.ಉಪಸಂಹಾರ.

೧೨೬೭. ನಟುವರ ಸಂಸ್ಕೃತಿ

ಲೇ: ಹೊಸೂರು ಮುನಿಶಾಮಪ್ಪ; ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ ಬೆಂಗಳೂರು-೫೬೦೦೦೨; ಮೊ.ಮು: ೧೯೯೩,ಪು: ೪೮+೧೬೪=೨೧೨; ಕ್ರೌನ್ ೧/೮

ಎಂಟು ಅಧ್ಯಾಯಗಳಿವೆ.೧.ಅಧ್ಯಯನದ ವ್ಯಾಪ್ತಿ ೨.ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ ೩.ಭಾಷೆ ಮತ್ತು ಸಾಹಿತ್ಯ ೪.ಆಚರಣೆ ಮತ್ತು ಕಲೆ ೫.ಪ್ರದರ್ಶನ ಕಲೆಗಳು ೬.ಕ್ರೀಡೆಗಳು ೭.ಸಾಮಾಜಿಕ ಪರಿವರ್ತನೆಯ ಹಿನ್ನೆಲೆಯಲ್ಲಿ ೮.ಸಮಾರೋಪ. ಅನುಬಂಧದಲ್ಲಿ ಕೆಲವು ಹಾಡುಗಳು, ಕಥೆಗಳು: ಮಳೆರಾಯನ ಮದುವೆ, ರಾಜಕುಮಾರನ ಮದುವೆ,ಇವೆ. ಬರಗೂರು ರಾಮಚಂದ್ರಪ್ಪ ಅವರ ಸಂಸ್ಕೃತಿ ಉಪಸಂಸ್ಕೃತಿ ಎಂಬ ಸುದೀರ್ಘ ಪ್ರಸ್ತಾವನೆ ಇದೆ.

೧೨೬೮. ನಡುನೀರ ತಂಪು

ಸಂ: ಕ್ಯಾತನಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ; ಪ್ರ: ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು; ಮೊ.ಮು: ೨೦೧೦; ಡೆಮ್ಮೈ೧/೮

ಹಲವು ಪ್ರಕಟಿತ ಸಂಕಲನಗಳಿಂದ ಆಯ್ದು ಸಂಕಲಿಸಿರುವ ಜನಪದ ಕಾವ್ಯಗಳ ಗುಚ್ಛ.

೧೨೬೯. ನಡಿಯಪ್ಪ ನಮ್ಮ ನಾಡೀಗೆ

ಸಂ: ಕೆ. ವಿರೂಪಾಕ್ಷಗೌಡ, ಮೇಟಿಕೊಟ್ರಪ್ಪ; ಪ್ರ: ಯುವಕರ ಸಂಘ, ರಾಮನಗರ, ಹಗರಿಬೊಮ್ಮನಹಳ್ಳಿ ೫೮೩೨೧೨, ಬಳ್ಳಾರಿ ಜಿಲ್ಲೆ; ಮೊ.ಮು. ೧೯೮೧; ಪುಟ ೧೬+೬೦=೭೬; ಕ್ರೌನ್ ೧/೮

ಡೊಳ್ಳಿನ ಪದಗಳು ಎಂಬ ಅಡಿಬರಹ ಇದೆ. ೪೮ ಹಾಡುಗಳಿವೆ. ಗೊ.ರು. ಚನ್ನಬಸಪ್ಪ ಅವರ ಮುನ್ನುಡಿ, ಗುರುಮೂರ್ತಿ ಪೆಂಡಕೂರು ಅವರ 'ಯುವಕರ ಸಂಘದ ಪರವಾಗಿ', ಕೆ. ವಿರೂಪಾಕ್ಷಗೌಡ ಅವರ 'ನಮ್ಮ ನುಡಿ', ಹಾಡಿದವರು ಎಂಬ ವಕ್ತೃವಿವರ, ಶಬ್ದಾರ್ಥ, ಎಲ್ಲವೂ ಪ್ರಾರಂಭದಲ್ಲೇ ಇವೆ.

೧೨೭೦. ನನ್ನೂರು

ಲೇ: ಎಚ್.ಎಲ್. ನಾಗೇಗೌಡ; ಪ್ರ: ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು; ಮೊ.ಮು: ಎ.ಮು: ನಮೂದು ಇಲ್ಲ, ಮೂ.ಮು: ೧೯೭೪; ಪು: ೧೯+೩೫೨=೩೬೮; ಕ್ರೌನ್ ೧/೮.

ಹದಿಮೂರು ಅಧ್ಯಾಯಗಳಲ್ಲಿ ವ್ಯಕ್ತಿ ಚಿತ್ರಣಗಳೂ ಒಳಗೊಂಡಂತೆ ಒಂದು ಹಳ್ಳಿಯ ಸಾಂಸ್ಕೃತಿಕ ಚಿತ್ರಣವನ್ನುಳ್ಳ ಗ್ರಂಥ. **ಅಧ್ಯಾಯಗಳು:** ೧.ನನ್ನೂರು ೨.ಘನತೆಯ ಗೌಡರು ೩.ಗೊಬ್ಬರದ ಗುಲಾಬಿ ೪.ಶಾನುಭೋಗ ಸಿಂಗಪ್ಪಯ್ಯ ೫.ಆಯಿತೇ ಆಚಾರ್ರು ೬.ಅರ್ಜಿ ಕೊಂಬಲ್ಲ ೭.ಉದಕ ಮಾವಯ್ಯ ೮.ನೆನೆಯಬಾರದ ರಂಗಣ್ಣ ೯.ದಸರೆಯ ದಾಸಪ್ಪ ೧೦.ಸನ್ಯಾಸಿ ಷೇಡ್ ೧೧.ಚಾರ್ಲಿ ಚಾಪ್ಲಿನ್ ೧೨.ಕಿವುಡು ಕೆಂಚಣ್ಣ ೧೩.ಈಗಿನ ನನ್ನೂರು. ಕುವೆಂಪು ಅವರ ಮುನ್ನುಡಿಯಲ್ಲದ ಹೊನ್ನುಡಿ, ಡಿ. ಕರಿಯಪ್ಪಗೌಡ ಅವರ 'ನನ್ನೂರು' ಕುರಿತು ನಾಲ್ಕು ನಲ್ವಾತುಗಳು, ಲೇಖಕರ ಪೀಠಿಕೆ, ಕೊನೆಯಲ್ಲಿ, ೩೭ ಪುಟಗಳ ಸುದೀರ್ಘ ಟಿಪ್ಪಣಿಗಳು, ಗಾದೆಗಳು ಮತ್ತು ನುಡಿಮುತ್ತುಗಳು, ಇವೆ.

೧೨೭೧. ನಮ್ಮ ಒಡಪುಗಳು

ಲೇ: ಮೈಲಹಳ್ಳಿ ರೇವಣ್ಣ; ಪ್ರ: ರಾಜ್ಯ ಸಂಪನ್ಮೂಲ ಕೇಂದ್ರ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಕುವೆಂಪು ನಗರ, ಮೈಸೂರು– ೫೭೦ ೦೨೩; ಮೊ.ಮು: ೧೯೮೯; ಪು: ೪೦; ಫೂಲ್‌ಸ್ಕ್ಯಾಪ್ ೧/೪

ಕೃತಿಯ ಮೊದಲ ಅರ್ಧಭಾಗ ಒಡಪುಗಳ ಬಗ್ಗೆ ಪೀಠಿಕೆಯಂತಿದೆ. ಸಂದರ್ಭಗಳನ್ನು ಆಚರಣೆಗಳನ್ನು ವಿವರಿಸುತ್ತ ಸಾಗುವ ಈ ಭಾಗದಲ್ಲಿ, ಹೆಣ್ಣುಮಕ್ಕಳ ಒಡಪುಗಳು, ಗಂಡುಮಕ್ಕಳ ಒಡಪುಗಳು, ಮದುಮಕ್ಕಳ ಒಡಪುಗಳು, ತೊಟ್ಟಿಲು ಕಾರ್ಯದಲ್ಲಿ ಒಡಪುಗಳು, ಎಂಬ ಒಳಶೀರ್ಷಿಕೆಗಳಿವೆ. ಇದರ ಮುಂದುವರಿದ ಭಾಗದಲ್ಲಿ ಇರುವ ಒಡಪುಗಳನ್ನು, ಹೆಣ್ಣುಮಕ್ಕಳ ಒಡಪುಗಳು, ಗಂಡುಮಕ್ಕಳ ಒಡಪುಗಳು, ಎಂದು ವಿಭಾಗಿಸಲಾಗಿದೆ., ನಡುನಡುವೆ ರೇಖಾ ಚಿತ್ರಗಳಿವೆ. ಲಿಂಗದೇವರು ಹಳೆಮನೆ ಅವರ ಮುನ್ನುಡಿ ಇದೆ.

೧೨೭೨. ನಮ್ಮ ಒಗಟುಗಳು

ಸಂ: ರಾಗೌ; ಪ್ರ: ಡಿ.ವಿ.ಕೆ. ಮೂರ್ತಿ, ಮೈಸೂರು-೪; ಮೊ.ಮು.೧೯೭೦; ಏಳನೆಯ ಮು: ೨೦೦೭; ಪು.೧೪೦; ಕ್ರೌನ್ ೧/೮

೫೧೦ ಒಗಟುಗಳ ಸಂಕಲನ. ೩೮ ಪುಟಗಳ ಪ್ರಸ್ತಾವನೆ. ಅನುಬಂಧ: ಕೆಲವು ಪ್ರಶ್ನೋತ್ತರ ಒಗಟುಗಳು, ಉತ್ತರಗಳು, ಅರ್ಥಕೋಶ ಇವೆ.

೧೨೭೩. ನಮ್ಮ ಕನ್ನಡ ಪ್ರೇಮದ ಜ್ಯೋತಿ

ಸಂ.ರೇಣುಕಾ ಕೋಡಗುಂಟಿ; ಪ್ರ: ಬಂಡಾರ ಪ್ರಕಾಶನ, ಮಸ್ಕಿ, ಮೊ.ಮು: ೨೦೦೮; ಪು: ೨೪+೩೫೮=೩೮೨; ಡೆಮ್ಮಿ ೧/೮

ಅಂಪವ್ವ ಪೂಜಾರಿ ಕಸಬಾ ಲಿಂಗಸೂಗೂರು ಇವರು ಹಾಡಿರುವ ಪದಗಳ ಕಟ್ಟು ಎಂಬ ಅಡಿಬರಹ ಇದೆ. ಈ ಹಾಡುಗಳನ್ನು ೧೫ ಭಾಗಗಳಾಗಿ ವಿಂಗಡಿಸಲಾಗಿದೆ.: ೧.ಕುಪ್ಪೆರಾಯನ ಪದಗಳು ೨.ಇತಿಹಾಸ ೩.ಇತಿಹಾಸ/ಧರ್ಮ ೪.ಧರ್ಮ ೫.ಪುರಾಣ ೬.ಗಂಗಿಗೌರಿ ಪದ/ಶಿವನಪದ ೭.ಸಾಮಾಜಿಕ ೮.ಬೀಗರ ಪದಗಳು ೯.ಉವ್ವ ಮುಡಸ ಪದಗಳು ೧೦.ಬೀಸಾ ಪದಗಳು ೧೧.ಆರತಿ ಪದಗಳು ೧೨.ಒಕ್ಕಲುತನದ ಪದಗಳು ೧೩.ಬಯಕಿ ಪದಗಳು ೧೪.ತೊಟ್ಲ ಪದಗಳು ೧೫.ಸಂಕೀರ್ಣ. ಐದು ಅನುಬಂಧಗಳಿವೆ: ೧.ವಿಶಿಷ್ಟ ಪದಗಳು ೨.ಪದಗಳಲ್ಲಿ ಬರುವ ಆಭರಣಗಳು ೩.ಪದಗಳಲ್ಲಿ ಬರುವ ಸ್ಥಳನಾಮಗಳು ೪.ಪದಗಳಲ್ಲಿ ಬರುವ ಸೀರೆಗಳು ೫.ಚಿತ್ರಗಳು (ಕೆಲವು ಫೋಟೋಗಳಿವೆ). ಅಂಬಳಿಕೆ ಹಿರಿಯಣ್ಣ ಅವರ ಮುನ್ನುಡಿ ಇದೆ.

೧೨೭೪. ನಮ್ಮ ಗಾದೆಗಳು

ಸಂ: ರಾಗೌ; ಪ್ರ: ಗೀತಾ ಬುಕ್ ಹೌಸ್, ಮೈಸೂರು; ಮು.ಗಳು: ೧೯೬೮, ೧೯೭೫, ೧೯೮೬; ಪ್ರ: ೨೦೬; ಕ್ರೌನ್ ೧/೮.

೨೨೦೦ ಗಾದೆಗಳ ಸಂಕಲನ. ೪೭ ಪುಟಗಳಷ್ಟು ವಿಸ್ತಾರವಾದ ಅಧ್ಯಯನಾತ್ಮಕ ಪ್ರಸ್ತಾವನೆ, ಅರ್ಥಕೋಶ, ಇವೆ.

೧೨೭೫. ನಮ್ಮ ಜನಪದ ಕತೆಗಳು

ಲೇ: ಹಿ.ಶಿ. ರಾಮಚಂದ್ರೇಗೌಡ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು. ೧೯೯೪; ಪುಟ ೨+೪೫=೪೭; ಕ್ರೌನ್ ೧/೮

ಜನಪದ ಕತೆಗಳಲ್ಲಿ ಕಂಡುಬರುವ ಆಶಯಗಳು ಪಾತ್ರಗಳು, ಸ್ವೈವತ್ವ, ಸಂಬಂಧ, ಕಾಮಪ್ರೇಮ, ಆಸ್ತಿ ಮತ್ತು ಹೆಣ್ಣು, ಸಂಖ್ಯೆಗಳು, ಇತಿಹಾಸ ಹೀಗೆ ಹಲವು ಅಂಶಗಳನ್ನು ಆಲೋಚಿಸುವ ಕೃತಿ.

೧೨೭೬. ನಮ್ಮ ಜನಪದ ಕಥೆಗಳು

ಸಂ: ಎಲ್.ಆರ್.ಹೆಗ್ಗಡೆ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು.೧೯೭೬; ಪುಟ ೧೦+೨೯೪=೩೦೪; ಡಿಮ್ಮೈ ೧/೮

೪೦ ಕಥೆಗಳ ಸಂಕಲನ: ೧.ಹೆಂಡತಿಯ ಪಣ ೨.ಹಿತ್ತಾಳಿ ತಲೆಯ ಮನುಷ್ಯ ೩.ದೇವಲೋಕದ ಕುದುರೆ ೪.ಹೆಂಡತಿಯನ್ನು ಪಳಗಿಸುವ ವಿದ್ಯೆ ೫.ಕೋಳಿ ಹುಂಜ ಮತ್ತು ರಾಣಿ ೬.ಆನೆ ತಂದ ಜಾಣೆ ೭.ಅವಳಮ್ಮ ೮.ಯಮಲೋಕದ ರಾಜಕುಮಾರಿ ೯.ಯಲಾವಳಿ–ನಾಗಯ್ಯ ೧೦.ಪಾಪ–ಪುಣ್ಯ ೧೧.ಕೊಂದರೂ ಸಾಯದ ದುರ್ವಾ ೧೨.ಮುದುಕಿಯ ಮದುವೆ ೧೩.ಎಪ್ಪತ್ತಕ್ಕೆ ಬರಲೋ? ಇಪ್ಪತ್ತಕ್ಕೆ ಬರಲೋ? ೧೪.ತಿಂಗಳ ಬೆಳಕು ಹಾಲಾಗಿದ್ದರೆ ೧೫.ಸಾವುಕಾರನ ಜಾಣತನ ೧೬.ಪರ್ವತದ ಕರೆ ೧೭.ಇದೇ ಹೌದು ಚದುರಂಗಿ ಹೂವು ೧೮.ಸುಮಾಲಿನಿ ಎಂಬ ಹೂವು ೧೯.ಯಾರ ಮಕ್ಕಳು ೨೦.ಕಳ್ಳನ ಹಿಕಮತ್ತು ೨೧.ಹೆಣ್ಣಿನ ಸಾಹಸ೨೨.ಮೃತಪಟ್ಟ ಮೂರು ಲೋಕದರಸು ೨೩.ಸೋಮವತಿ ೨೪.ನಂಬಿಕೆಟ್ಟವರು ೨೫.ಭಾರತ ಯುದ್ಧದ ಕಹಳೆ ೨೬.ಉಪಕಾರಕ್ಕೆ ಅಪಕಾರ ೨೭.ಸಮಾರಾಧನೆಯ ದಕ್ಷಿಣೆ ೨೮.ಕೋಗತಿ ಕಟ್ಟೆಯ ಐತಿಹ್ಯ ೨೯.ಮದುವೆಯಲ್ಲಿ ರಣಾಂಗಣ ೩೦.ಲಗ್ನದಲ್ಲಿ ವಿಘ್ನ ೩೧.ತಮ್ಮನ ಅದೃಷ್ಟ ೩೨.ದೀಪದ ಮಲ್ಲಿ ೩೩.ಸರದಾರನ ಸೇಡು ೩೪.ಮುತ್ತು ಕೊಟ್ಟು ಕೊಂಡ ಕುದುರೆ ೩೫.ಪಂಡಿತನ ಪರಾಜಯ ೩೬.ಕ್ಯೊಟ್‌ಮಣಿ ೩೭.ಯಾರು ಹೆಚ್ಚಿನವರು? ೩೮.ಮೂವರು ಹೆಡ್ಡರು ೩೯.ಠಕ್ಕ–ಠಿಕ್ಕ–ಜಗಠಕ್ಕ ೪೦.ರಂಗಾಣಿಯ ಗಂಡ. ಹಾ.ಮಾ.ನಾಯಕ ಅವರ ಮುನ್ನುಡಿ, ಜೀ.ಶಂ.ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು,ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ, ಅರ್ಥಕೋಶ, ಕತೆಗಳನ್ನು ಹೇಳಿದವರು, ಗ್ರಂಥಸೂಚಿ ಇವೆ.

೧೨೭೭. ನಮ್ಮ ಪ್ರದರ್ಶಕ ಜನಪದ ಕಲೆಗಳು

ಲೇ: ಬಸವರಾಜ ನೆಲ್ಲಿಸರ; ಪ್ರ: ಶಕ್ತಿ ಪ್ರಕಾಶನ, ಗೋಕುಲಂ ಮೂರನೇ ಹಂತ, ಮೈಸೂರು–೫೭೦ ೦೦೨; ಮೊ.ಮು. ೧೯೯೦; ಪುಟ ೨೮; ಡಿಮ್ಮೈ ೧/೧೨

ಒಂದು ಸ್ಥೂಲ ಅಭ್ಯಾಸ. ಕೆಲವು ಫೋಟೋಗಳಿವೆ.

೧೨೭೮. ನಮ್ಮ ಜನಪದ ಕಲೆಗಳು

ಲೇ: ಜೀ.ಶಂ. ಪರಮಶಿವಯ್ಯ; ಪ್ರ: ಸಾಹಿತ್ಯ ಸದನ, ೧೩೪, ಅರವತ್ತು ಅಡಿ ರಸ್ತೆ, ತೊಣಚಿಕೊಪ್ಪಲು, ಕುವೆಂಪು ನಗರ, ಮೈಸೂರು-೫೭೦ ೦೨೩; ಮೊ.ಮು: ೧೯೮೪, ಎ.ಮು: ೧೯೮೯; ಪು: ೨+೪೨=೪೪

ಕಥನ ಕಲೆಯ ರೂಪದಲ್ಲಿ ಇತರ ಕಲೆಗಳನ್ನು-ಮೂಡಲಪಾಯ ಯಕ್ಷಗಾನ, ಪಟಾಕುಣಿತ, ನಂದಿ ಕುಣಿತ, ಸೋಮನ ಕುಣಿತ, ಗಾರುಡಿ ಗೊಂಬೆಗಳು, ಪೂಜಾ ಕುಣಿತ, ಕರಗ ಕುಣಿತ, ಚೌಡಿಕೆ ಕುಣಿತ, ಡೊಳ್ಳಿನ ಕುಣಿತ, ಕೋಲಾಟ, ಕಂಸಾಳೆ, ಗೊರವರ ಕುಣಿತ, ಕರಪಾಲ, ವೀರಗಾಸೆ, ಕಿನ್ನರಿ ಜೋಗಿಗಳ ಕುಣಿತ- ಸಂಭಾಷಣೆಗಳ ಮೂಲಕವೇ ಸಂಕ್ಷಿಪ್ತವಾಗಿ ಪರಿಚಯಿಸಿಕೊಡುವ ಕೃತಿ. ಅಲ್ಲಲ್ಲಿ ಸಾಂದರ್ಭಿಕ ರೇಖಾಚಿತ್ರಗಳಿವೆ.

೧೨೭೯. ನಮ್ಮ ಜನಪದ ನಂಬಿಕೆಗಳು

ಸಂ: ಜಿ.ವಿ. ದಾಸೇಗೌಡ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು: ೧೯೭೩; ಪು: ೧೨+೭೬=೮೮; ಡಿಮ್ಮೈ ೧/೮

ಇಲ್ಲಿನ ನಂಬಿಕೆಗಳನ್ನು ಆರು ಬಗೆಯಾಗಿ ವಿಂಗಡಿಸಲಾಗಿದೆ: ೧.ಅತಿಮಾನುಷ ೨.ಮಾನುಷ ೩.ಪ್ರಾಣಿ ೪.ಪ್ರಕೃತಿ ೫.ಕೌಟುಂಬಿಕ ೬.ಸಂಕೀರ್ಣ. ಇವುಗಳಲ್ಲಿ ಉಪವಿಭಾಗಗಳೂ ಇವೆ: **೧.ಅತಿಮಾನುಷ ನಂಬಿಕೆಗಳು:** ದೇವರು, ಪೂಜೆ, ಯಾತ್ರೆ-ತೀರ್ಥಕ್ಷೇತ್ರ, ದೆವ್ವಗಳು **೨.ಮಾನುಷ ನಂಬಿಕೆಗಳು:** ಹಬ್ಬಗಳು, ನಿದ್ರೆ-ಕನಸು, ಕಾಲ, ವಾರಗಳು, ಹುಟ್ಟು-ಒಡಹುಟ್ಟು, ವಿವಾಹ, ಸಾವು, ಮಾನವ, ಪುರಷರು, ಸ್ತ್ರೀ, ಬಸುರಿ, ಬಾಣಂತಿ, ಮಕ್ಕಳು, ಪ್ರಯಾಣ. **೩.ಪ್ರಾಣಿ ನಂಬಿಕೆಗಳು:** ಪ್ರಾಣಿ, ಕೀಟ-ಪಕ್ಷಿ. **೪.ಪ್ರಕೃತಿ ನಂಬಿಕೆಗಳು:** ಮರ-ಗಿಡ-ಫಲ-ಹೂ, ನೀರು **೫.ಕೌಟುಂಬಿಕ ನಂಬಿಕೆಗಳು:** ಅಡಿಗೆ-ಊಟ, ನಳಕೆಯ ವಸ್ತುಗಳು. ಒಟ್ಟು-೬೯೩ ನಂಬಿಕೆಗಳಿವೆ. ಹಾ.ಮಾ. ನಾಯಕ ಅವರ ಮುನ್ನುಡಿ, ಜೀ.ಶಂ.ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಸಂಪಾದಕರ ಪ್ರಸ್ತಾವನೆ, ಅನುಬಂಧದಲ್ಲಿ ಇನ್ನೂ ಹತ್ತು ನಂಬಿಕೆಗಳನ್ನು ವಿವರಣೆಸಹಿತ ನೀಡಲಾಗಿದೆ. ಅದಾದ ಮೇಲೆ, ಟಿಪ್ಪಣಿಗಳು, ಅರ್ಥಕೋಶ, ಇವೆ.

೧೨೮೦. ನಮ್ಮ ಜನಪದ ವಾದ್ಯಗಳು

ಲೇ: ಪಿ.ಕೆ.ರಾಜಶೇಖರ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು; ಮೊ.ಮು.೧೯೮೦; ಪುಟ ೪೮; ಕ್ರೌನ್ ೧/೮

ಪೀಠಿಕಾ ಭಾಗ ಆದಮೇಲೆ ಚರ್ಮವಾದ್ಯಗಳು, ತಂತೀವಾದ್ಯಗಳು, ಊದಿ ನುಡಿಸುವ (ಸುಷಿರ)ವಾದ್ಯಗಳು, ಘನವಾದ್ಯಗಳು ಎಂಬ ವಿಭಾಗಗಳಿವೆ. ಹಲವು ರೇಖಾಚಿತ್ರಗಳಿವೆ.

೧೨೮೧. ನಮ್ಮ ಜನಪದ ಸಾಹಿತ್ಯ

ಲೇ: ಜೀ.ಶಂ.ಪರಮಶಿವಯ್ಯ; ಪ್ರ: ಸಾಹಿತ್ಯ ಸದನ, ಸರಸ್ವತೀಪುರಂ, ಮೈಸೂರು-೫; ಮೊ.ಮು: ೧೯೬೭; ಪು: ೮+೬೬=೭೪, ಕ್ರೌನ್ ೧/೮

ಏಳು ಲೇಖನಗಳ ಸಂಕಲನ: ೧.ಈ ಕಥೆಗಳನ್ನು ಕೇಳಿ ೨.ಕೂಡಿ ಹಾಡುತ್ತೇವೆ ೩.ಗರತಿ ಗಂಗವ್ವ ೪.ಬೀಸಣಿಗೆ ಗಾಳಿ ಸುಳಿದಾವು ೫.ಇನ್ನೇಕೆ ಮಗಳೆ ತವರಾಸೆ ೬.ಮಾತಿನ ಸೊಗಸು ೭.ಸಕಲ ಸಂಪದ ಹೆಚ್ಚಲಿ. ಎಚ್.ಎಲ್. ನಾಗೇಗೌಡರ ಹಿನ್ನುಡಿ ಇದೆ.

೧೨೮೨. ನಮ್ಮ ಜನಪದ

ಸಂ: ಸಂಪಾದಕ ಮಂಡಳಿ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬಳ್ಳಾರಿ ಜಿಲ್ಲಾ ಘಟಕ; ಮೊ.ಮು: ನಮೂದು ಇಲ್ಲ; ಪುಟ ೧೨೫; ಕ್ರೌನ್ ೧/೪

ಈ ಗ್ರಂಥದಲ್ಲಿ ೧೮೪೩ ಗಾದೆಗಳಿವೆ. ಅನುಬಂಧ ೧ ರಲ್ಲಿ ಹೆಚ್ಚಿಗೆ ದೊರೆತ ಗಾದೆಗಳ ಸಂಖ್ಯೆ ೧೩೦, ಇವಲ್ಲದೆ ಅನುಬಂಧ ೨ ರಲ್ಲಿ ಗ್ರಂಥಸ್ಥ ಬೆತ್ತಲೆ ಗಾದೆಗಳು ಎಂಬ ವಿಭಾಗದಲ್ಲಿ ೧೭೦ ಗಾದೆಗಳಿವೆ. ಯಾವ ಗ್ರಂಥಗಳಿಂದ ಈ ಗಾದೆಗಳನ್ನು ಸಂಗ್ರಹಿಸಲಾಗಿದೆ ಎಂಬ ಪಟ್ಟಿ ಇದೆ. ಡಾ. ಎಂ. ಎಂ. ಕಲಬುರ್ಗಿ ಅವರ ಮುನ್ನುಡಿಯಿದೆ. ಪ್ರಸ್ತಾವನೆಯಲ್ಲಿ ಈ ಸಂಗ್ರಹದ ಗಾದೆಗಳನ್ನು ೧.ಅಶ್ಲೀಲ ಶಬ್ದವಿರುವ ಗಾದೆಗಳು ೨.ಅಶ್ಲೀಲ ಅರ್ಥ ಕೊಡುವ ಗಾದೆಗಳು ೩.ಅಶ್ಲೀಲ ಅರ್ಥಕ್ಕೆ ತಿರುಗಿದ ಗಾದೆಗಳು ೪.ವಿರೂಪಗೊಂಡು ಅಶ್ಲೀಲವಾಗಿ ಬಳಕೆಯಾಗುವ ಗಾದೆಗಳು ೫.ಶೃಂಗಾರ ಶಬ್ದ ಮತ್ತು ಅರ್ಥ ಹೊತ್ತ ಗಾದೆಗಳು ೬.ಬೈಗಳಿಂದ ಕೂಡಿದ ಗಾದೆಗಳು ಎಂದು ವಿಭಾಗ ಮಾಡಿಕೊಂಡು ಪ್ರತಿಯೊಂದು ವಿಭಾಗಕ್ಕೂ ಕೆಲವು ಗಾದೆಗಳನ್ನು ಉದಾಹರಣೆಯಾಗಿ ಕೊಡಲಾಗಿದೆ. ಕೊನೆಯಲ್ಲಿ ಪದಕೋಶ ಇದೆ.

೧೫೦೬. ಬೆತ್ತಲೆ ಪೂಜೆ ಯಾಕೆ ಕೂಡದು?

ಲೇ: ಯು.ಆರ್. ಅನಂತಮೂರ್ತಿ; ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ), ಕರ್ನಾಟಕ; ಮೊ.ಮು: ೧೯೯೬; ಪುಟ ೬+೨೪೪=೨೫೦; ಡಿಮ್ಮೈ ೧/೮

ಇದು ೧೭ ಲೇಖನಗಳ ಸಂಕಲನ. ಆದರೆ ಜಾನಪದಕ್ಕೆ ಸಂಬಂಧಿಸಿದ ಒಂದೇ ಒಂದು ಲೇಖನವಿದೆ (ಅದರ ಶೀರ್ಷಿಕೆಯನ್ನೇ ಇಡೀ ಗ್ರಂಥಕ್ಕೆ ಇಡಲಾಗಿದೆ): ಬೆತ್ತಲೆ ಪೂಜೆ ಯಾಕೆ ಕೂಡದು?.

೧೫೦೭. ಬೆತ್ತಲೆ ಹೋಳೀ ಹಾಡುಗಳು

ಸಂ: ಬಿ.ಬಿ. ಬಿರಾದಾರ; ಪ್ರ: ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ-೧; ಮೊ.ಮು: ೧೯೮೩; ಪುಟ ೨೬+೧೬೮=೧೯೪; ಕ್ರೌನ್ ೧/೮

ಇಲ್ಲಿನ ಹಾಡುಗಳನ್ನು ಆರು ಭಾಗಗಳಾಗಿ ವಿಂಗಡಿಸಲಾಗಿದೆ: ಪದ್ಯ, ಪದ, ಲಾವಣಿ, ದುಂದುಮೆ, ಸಂವಾದ, ಚುಟುಕು. ಎಂ. ಚಿದಾನಂದಮೂರ್ತಿ ಅವರ ಮುನ್ನುಡಿ ಇದೆ. ಕೊನೆಯಲ್ಲಿ ಪದಕೋಶ, ಹಾಡಿನಲ್ಲಿ ಬರುವ ಊರುಗಳು, ಹಾಡಿದವರು, ಮುಂತಾದವು ಇವೆ.

೧೫೦೮. ಬೆದರುಗೊಂಬೆ ಮತ್ತು ಇತರ ಜಾನಪದ ಕಥೆಗಳು

ಸಂ: ಡಿ.ಕೆ. ರಾಜೇಂದ್ರ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಿಮ್ಮೈ, ೧೪/ ೩, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು: ೧೯೯೩; ಪು: ೪೪+೨೧೨=೨೫೬; ಡಿಮ್ಮೈ ೧/೮

೫೯ ಕಥೆಗಳ ಸಂಕಲನ: ೧.ಬೆದರುಗೊಂಬೆ ೨.ಗೀವುರಾಜ ಹುಲಿರಾಜ ೩.ನೂರೊಂದು ಮಕ್ಕಳನ್ನು ಹಡೆದ ಕಥೆ ೪.ಆರು ಜನ ಅಣ್ಣ ತಮ್ಮಂದಿರು ೫.ಮಾಟಗಾರ್ತಿ ಮುದುಕಿ ೬.ಇಂದ್ರನ ಮಗಳು ೭.ಹಿರಿಹೆಂಡತಿ ಮಗ ೮.ಬಿದ್ರೆ ಒಳಗಿನ ಚದ್ರೆ ೯.ಗುರು ಶಿಷ್ಯ ೧೦.ವಿಧಿಯಮ್ಮ ೧೧.ಮಗನನ್ನೆ ಕೊಂದ ಮಾಯಾಂಗನೆ ೧೨.ನೋಣ್ ಮುತ್ತ ೧೩.ಒಂದು ಕೂದಲಿನ ರಾಣಿ ೧೪.ಆರು ಗಂಡು ಒಂದು ಹೆಣ್ಣು ೧೫.ಬಡವ ಮತ್ತು ಕಳ್ರು ೧೬.ಬಡವರ ಹುಡುಗಿ ೧೭.ಬಡಬ್ರಾಹ್ಮಣ ೧೮.ದೇವಕನ್ನೇರು ೧೯.ದಾಸಯ್ಯ ೨೦.ರಾಜನಮಗ ೨೧.ರಾಜನಮಗ ಮಂತ್ರಿ ಮಗ ೨೨.ತೋಳ್ಮೇಲೆ ಮಿಂಡ ತೊಡೆಯ ಮೇಲೆ ಗಂಡ ೨೩.ಜಿರ್ಲೆ ಹುಳಿನ ಕತೆ ೨೪.ನಾಯಿ ೨೫.ದಾಳಿಂಬೆ ರಾಣಿ ೨೬.ದಡ್ಡನ ಕತೆ ೨೭.ಕುಂಟ ೨೮.ಕಾಗಕ್ಕ ಗೊಬಕ್ಕನ ಕತೆ ೨೯.ಹೆಣ್ಣಿನ ಸಾಹಸ ೩೦.ನೀಲಾವತಿ ೩೧.ಗಂಡ ಹೆಂಡಿರ ಜಗಳ ೩೨.ದೊಡ್ಡೈದ ಚಿಕ್ಕೈದ ೩೩.ಕಿರಿಯನ ಆಸೆ ೩೪.ಅಮರಾವತಿಯ ಅಮರ ಶೇಖರ ರಾಜನ ಕತೆ ೩೫.ರಾಜಕುಮಾರಿಯರು ೩೬.ಮಲತಾಯಿ ೩೭.ಏಳು ಜನ ರಾಜಕುಮಾರರು ೩೮.ರಾಕ್ಷಸ್ನ ಕತೆ ೩೯.ಇರುಬೆ

ಕತೆ ೪೦.ಅತ್ತೆ – ಸೊಸೆ ೪೧.ಇಕ್ ಮಕ್ ದೊಣ್ಣೆ ೪೨.ಮೆಣಸಿನಕಾಯಿ ೪೩.ಐನಾತಿ ಕಳ್ಳ ೪೪.ಕಡೇ ಕನ್ನಕ್ಕಿ ೪೫.ಉಗ್ರು ಸುತ್ತಿನ ಕತೆ ೪೬.ಕುಂಟನ ಸಾಹಸ ೪೭.ಅಕ್ಕ ತಂಗಿ ೪೮.ಬಡ್ವ–ಸಾವ್ಕಾರ ೪೯.ಕಿಲಾಡಿ ಅಣ್ಣ ೫೦.ಏಳು ಜನ ಹೆಂಡತಿಯರು ೫೧.ಬ್ರಹ್ಮಗಂಟು ೫೨.ಅಣ್ಣ ತಮ್ಮ ೫೩.ಹೆಣ್ಣು ಹೆಣ್ಣಾದ ಕತೆ ೫೪.ಹಾವಿನ ಕತೆ ೫೫.ಮೀನರಾಜನ ಕತೆ ೫೬.ಕಷ್ಟಪಟ್ಟರೆ ಸುಖವುಂಟು ೫೭.ಸೊಸೆಯ ಜಾಣತನ ೫೮.ಕೆಂಚನ ಬುದ್ಧಿವಂತಿಕೆ ೫೯.ಬಿಳಿಯಾನೆ ತಂದ ಭಾಗ್ಯ. ಸಂಪಾದಕರ ೩೨ ಪುಟಗಳ ಸುದೀರ್ಘ ಪ್ರಸ್ತಾವನೆ, ಅನುಬಂಧದಲ್ಲಿ, ಕಥೆ ಹೇಳಿದವರ ವಿವರ ಇವೆ.

೧೫೦೯. ಬೆಲ್ಲದಾರತಿಯ ಬೆಳಗೇನು

ಸಂಗ್ರಹ: ಎಸ್.ಕೆ. ಕರೀಂಖಾನ್; ಸಂ: ಬಿ.ಎಸ್. ತಲ್ವಾಡಿ; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು; ಮೊ.ಮು: ೨೦೦೮; ಪುಟ ೨೨+೨೬೬=೨೮೮; ಡಿಮ್ಮೈ ೧/೮

ಎಸ್.ಕೆ. ಕರೀಂಖಾನರ ಸಮಗ್ರ ಸಂಗ್ರಹವನ್ನು ಬಿ.ಎಸ್.ತಲ್ವಾಡಿ ಅವರು ಸಂಪಾದಿಸಿರುವ ಈ ಗ್ರಂಥದಲ್ಲಿ ಎಂಟು ಭಾಗಗಳಿವೆ: ೧.......... ತಲ್ವಾಡಿ ಅವರ ಜಾನಪದ ಜಾದೂಗಾರ ಡಾ.ಎಸ್.ಕೆ. ಕರೀಂಖಾನ್ ಎಂಬ ಲೇಖನ ಇದೆ **ಭಾಗ ಒಂದು: ಸ್ತುತಿ ಗೀತೆಗಳು:** ೧.ಮುಂಜಾನೆಯ ಪ್ರಾರ್ಥನೆ ೨.ಶರಣೆಂದು ಕಲ್ಲ ಹಿಡಿದೇನು ೩.ಶಿವ ೪.ಗಣನಾಯ್ಕ ೫.ಬೆನವಣ್ಣ ೬.ಬೆನವಣ್ಣ ೭.ಬೀರೆ ದೇವರು ೮.ಜುಂಜಪ್ಪ ೯.ಮಲ್ಲಯ್ಯ ೧೦.ನಂಜುಂಡ ೧೧.ನಿರ್ವಾಣ ಸ್ವಾಮಿ ೧೨.ಸೀಬಿಯ ರಂಗಯ್ಯ ೧೩.ನಾಮದಯ್ಯ ೧೪.ರಂಗ ದಯಾವಾಗೊ ೧೫.ಬೇಲೂರ ಚನ್ನಯ್ಯ ೧೬.ಸುಬ್ಬಯ್ಯ ೧೭.ಕೆಂಗಪ್ಪ ೧೮.ಕಾಳಪ್ಪ ೧೯.ಸರಸ್ವತಿ ೨೦.ಶಾರದೆ ೨೧.ವಾರಮ್ಮ ೨೨.ದ್ಯಾವಮ್ಮ ೨೩.ಕೆಂಚವ್ವ ೨೪.ಕೆಂಚವ್ವನುಯ್ಯಾಲೆ ೨೫.ಕರಿಯವ್ವ ೨೬.ಕಾಳವ್ವನ ಉಯ್ಯಾಲೆ ೨೭.ಚೆಲ್ಲಿದರೋಕುಳಿಯ ೨೮.ಶರಣು ೨೯.ತೇರು **ಭಾಗ ಎರಡು: ಸಾಂಸಾರಿಕ ಗೀತೆಗಳು:** ೧.ಮಗಳಿಗೆ ತಾಯಿಯ ಬುದ್ಧಿವಾದ ೨.ಮಗಳು ಗಂಡನ ಮನೆಗೆ ೩.ಅತ್ತೆಯ ಮನೆಯಲ್ಲಿ ೪.ತಂಗೀ ನೀ ಬರಬೇಕು ೫.ವಿಯೋಗ ದು: ಳ ೬.ಬಡವಿಯ ಗೋಳು ೭.ಒಪ್ಪಂದ ೮.ಜೋಗುಳ ೯.ಸೋಬಾನೆ ೧೦.ಬಳೆಗಾರ ೧೧.ಕಾವಲಿಯ ಹಾಡು ೧೨.ತೌರಿನ ಘನತೆ ೧೩.ಕಪ್ಪಾದ ಹೆಣ್ಣು ೧೪.ತೌರು **ಭಾಗ ಮೂರು ಪ್ರೇಮ ಗೀತೆಗಳು:** ೧.ಗೆಣೆಯ ಗಣತಿ ೨.ಚೆಳ್ಳೂರ ಬಣಜಿಗ ೩.ಮಾತಾಡು ಮಲ್ಲಿಗೆ ೪.ಕೆಂಚಿತಾರೆ ೫.ಮುತ್ತಿನ ಶೆಟ್ಟಿ ೬.ಸೋದ್ರತೆ ಮಗಳು ೭.ಚೆಲುವಯ್ಯ ಚೆಲುವೊ ೮.ನಮ್ಮ ಕೇರಿಗ್ಯಾಕೆ ಬರವಲ್ಲೋ ೯.ಜಾಣ –ಜಾಣೆ **ಭಾಗ ನಾಲ್ಕು ನೀತಿ ಗೀತೆಗಳು:** ೧.ನೀತಿ ೨.ಹರಕೆ ೩.ವಿಧವೆ **ಭಾಗ ಐದು: ಪೌರಾಣಿಕ ಗೀತಗಳು:** ೧.ಗೌರಿ ಹಬ್ಬಕ್ಕೆ ಹೋದದು ೨.ಗೌರಿದೇವಿ ತವರಿಗೆ ಹೋದದ್ದು ೩.ದ್ರೌಪದಿ ವಸ್ತ್ರಾಪಹರಣ ೪.ಮಾವ ಕಂಸನ ಕೊಂದನೆ ೪.ಸೀತಾರಾಮ ಕಲ್ಯಾಣ ೫.ಪಾಂಡವರ ಬದುಕು ೬.ಹನುಮ ೭.ಹನುಮ ೯.ಹನುಮಪ್ಪ ೧೦ ಬಸವಣ್ಣ ೧೧.ಬಸವಣ್ಣ **ಭಾಗ ಆರು: ಚಾರಿತ್ರಿಕ ಗೀತೆಗಳು:** ೧.ಜುಂಜಪ್ಪನ ನಾಯಕನ ಕೆರೆ ೨.ಜುಂಜಪ್ಪನ ಸಾಹಸ

೩.ಕಸ್ತೂರ್ ನಾಯ್ಕ ೪.ಕಾಮನ ದುರುಗ ೫.ಮೋಜಿಂ ದುರ್ಗ ೬.ಸುಟ್ಟಾರು ಶ್ರೀರಂಗಪಟ್ಟಣ **ಭಾಗ ಏಳು: ಕಥನ ಗೀತೆಗಳು:** ೧.ಉತ್ತರದೇವಿ ೨.ಕೊಣವೇಗೌಡ ೩.ದೊಂಬರಚೆನ್ನಿ ೪.ರಾಜಕ್ಕಿ ರಾಜಣ್ಣ ೫.ಕತ್ತಲೆ ರಾಯನ ಪದ **ಭಾಗ ಎಂಟು: ಸಂಕೀರ್ಣ ಗಿತೆಗಳು:** ೧.ಮೊದಲಕೋಲು ೨.ಬೊಂಬೇಗೆ ಬಣ್ಣದ ಕೋಲು ೩.ಹಗರಣ ೪.ಕೆರೆಗೋಡಿ ೫.ವಲ್ಲೇ ನಾವಿವನ ೬.ಮದ್ದು ೭.ನಿರೀಕ್ಷಣೆ ೮.ನಿನ್ನ ಮರುಕದ ಮೇಲೆ ೯.ಕೈ ನಿಲ್ಲೊಲ್ಲು ೧೦.ರಾಗೀಯ ಸಂಗತಿ ೧೧.ಕೋಣೆ ದೇವ್ರು ಬಲ್ಲದ್ದು ೧೨.ಜಕ್ಕಣಕ್ಕಜಕ್ಕ ೧೩.ಬೆಳದಿಂಗಳು ೧೪.ಗರುಡಾಳ ೧೫.ಜವರಾಯ ೧೬.ಕೋಲು ೧೭.ಹೊಗಳಿಕೆ ೧೮.ಕೊರವಂಜಿ ೧೯.ಕೋಗಿಲೆ ೨೦.ಕೋಗಿಲೆ ೨೧.ಕೊಳ್ಳೀಯ ಬೆಳಕಿನಾಗೆ ೨೨.ಲೇಸು ನಿನ್ನ ಮೇಲೆ ೨೩.ಕಣಿ ೨೪.ಬಿರುಗಾಳಿ ೨೫.ಕೊರವಂಜಿ ಆಟ ೨೬.ಕೊನೆಯ ಕೋಲು

೧೫೧೦. ಬೆಳಗಾಂ ಜಿಲ್ಲೆಯ ಜನಪದ ಕಥೆಗಳು

ಸಂ: ಟಿ.ಎಸ್.ರಾಜಪ್ಪ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು: ೧೯೭೩; ಪುಟ೧೬+೧೪೪=೧೬೦; ಡಿಮ್ಮೈ ೧/೮

೩೫ ಕಥೆಗಳಿವೆ: ೧.ಅಣ್ಣತಮ್ಮ ೨.ಬುದ್ಧಿವಂತ ಮಗ ೩.ಬುದ್ಧಿವಂತ ಅಣ್ಣ ೪.ಏಳು ಆಕಳುಗಳು ೫.ಪಂಥ ಗೆದ್ದವಳು ೬.ದಡ್ಡ ಮಗ ೭.ನೂರೊಂದು ಮಕ್ಕಳು ೮.ಆಯ್ಕಂಡು ತಿಂದ ರಾಜಕುಮಾರ ೯.ಗಾಂಜಾ ರಾಜಕುಮಾರ ೧೦.ಧೀರಕುಮಾರ ೧೧.ಜಾಣ ತಮ್ಮ ೧೨.ತುಡುಗು ಬುದ್ಧಿವಂತ ೧೩.ನಾ ಹೆಚ್ಚೊ ನೀ ಹೆಚ್ಚೊ ೧೪.ದೊಡ್ಡಬೀರ-ಸಣ್ಣಬೀರ ೧೫.ದೋಸ್ತ್ ೧೬.ಮೂರು ಮಾತು ೧೭.ಅಕ್ಕತಂಗಿಯರು ೧೮.ಸಿಂಹನ ಮಡದಿ ೧೯.ತಬ್ಬಲಿ ಮಗಳು ೨೦.ಅದ್ಭುತ ಉಂಗುರ ೨೧.ತನ್ನ ಮಗಳ ತಾನೇ ತಿಂದ ೨೨.ಡೊಳ್ಳು ಹೊಟ್ಟೆ ಭೈರ್‍ಯಾ ೨೩.ಉಗುರತ್ತಿ ಗಿಡ ೨೪.ನೂರು ರೊಟ್ಟಿ ನಿಂಗಪ್ಪ ೨೫.ನಿಜವಾದ ಕನಸು ೨೬.ನೊಣಮುಕರಯ್ಯ ೨೭.ಜೀನ ಮನುಷ್ಯ ೨೮.ಮಂಗನ ಸೇಡು ೨೯.ಗಿಡ್ಡ ಗಿಡ್ಡಿ ೩೦.ಕಮಲಾಕ್ಷಿಯ ಕಥೆ ೩೧.ಗಡ್ಡೇದ ಬಸವಣ್ಣ ೩೨.ಠಕ್ಕ ಸೇನ ೩೩.ವಿಘ್ನಾವತಿ ೩೪.ಮಂಜಘೋಷ ಕಥೆ ೩೫.ಸೂರ್ಯಬಾನು ಉದಯಬಾನು. ಹಾ.ಮಾ.ನಾಯಕ ಅವರ ಮುನ್ನುಡಿ, ಸಂಪಾದಕರ ಪ್ರಸ್ತಾವನೆ, ಕೊನೆಯಲ್ಲಿ ಅರ್ಥಕೋಶ, ಕಥೆಗಳನ್ನು ಹೇಳಿದವರು, ಇವೆ.

೧೫೧೮. ಬೆಳಗಾಂ ಜಿಲ್ಲೆಯ ಲಾವಣಿಗಳು

ಸಂ: ಟಿ.ಎಸ್.ರಾಜಪ್ಪ; ಪ್ರ: ಕನ್ನಡ ಅಧ್ಯಯನಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು: ೧೯೭೩; ಪುಟ ೨೮+೯೮=೧೨೬; ಡಿಮ್ಮೈ೧/೮

೨೧ ಲಾವಣಿಗಳ ಸಂಕಲನ: ೧.ಶೂರ ಸಂಗೊಳ್ಳಿ ರಾಯಣ್ಣ ೨.ಚಿತ್ರಮುಖದ ಹೆಣ್ಣೇ ೩.ಹುಟ್ಟಿ ಬಂದಿರತಾರ ಒಂದ ಉದರದಿಂದಾ ೪.ಕನ್ಯಾದಾನ ೫.ಸ್ಥಿರವಲ್ಲ ಹೆಂಗಸರ ಪ್ರೀತಿ ೬.ಒಬ್ಬನೇ ದೇವರು ೭.ಕಲಿಯುಗದ ಮಾತು ೮.ಮನಸ್ಸಿನಂತೆ ಮಾತು ೯.ಮುಪ್ಪಿನ ಕಾಲಕ್ಕೆ ಹಣಿಗಿ ಬಡಿತು ಕಲ್ಲಾ ೧೦.ಶಿವನ ಮನಿ ಮೋಜು ೧೨.ದಶಾವತಾರ

೧೨.ನೀಲಾವತಿ ಬಾಲೆ ೧೩.ಆಕಾರ ಎಲ್ಲೈತಿ ೧೪.ಆದಿಶಕ್ತಿ ೧೫.ಸತ್ರಾಜಿತ ಅರಸ ೧೬.ಸರಸದಿಂದ ಹೇಳುವೆ ಸ್ತ್ರೀ ನೆರದ ಫಲವಾ ೧೭.ಗುರು ಮಾರ್ಗದ ಹಾದಿ ೧೮.ತನ್ನನ್ನು ತಾನು ತಿಳಿ ೧೯.ಕೈಕೆಸರಾದರೆ ಬಾಯಿ ಮೊಸರು ೨೦.ಬೆಲ್ಲ ತನ್ನ ಸವಿ ಹೇಳೂದಿಲ್ಲಾ ೨೧.ಬಸುರ ಆದಾಂಗ ಹಾಕಿದಾಳ ಸೋಗ. ಹಾ.ಮಾ.ನಾಯಕ ಅವರ ಮುನ್ನುಡಿ, ಜೀ.ಶಂ.ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಸಂಪಾದಕರ ಪ್ರಸ್ತಾವನೆ, ಸಂಗ್ರಹ ವಿವರ, ಇವೆ.

೧೫೧೧. ಬೆಳಗಾವಿ ಜಿಲ್ಲೆಯ ಜನಪದ ಕಲಾವಿದರು

ಲೇ: ಸಿ.ಕೆ.ನಾವಲಗಿ; ಪ್ರ: ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು; ಮೊ.ಮು: ನಮೂದು ಇಲ್ಲ; ಪುಟ: ೧೨+೧೯೬=೨೦೮; ಡಿಮ್ಮೈ ೧/೮

ಬೆಳಗಾವಿ ಜಿಲ್ಲೆಯ ೫೫ ಕಲಾವಿದರನ್ನು ಪರಿಚಯಿಸಿಕೊಡುವ ಗ್ರಂಥ ಏಳು ಬಗೆಗಳಲ್ಲಿ ವಿಂಗಡಿಸಲಾಗಿದೆ: **ಒಂದು ಜನಪದ ಗಾಯನ ಕಲಾವಿದರು:** ೧.ಲಾವಣಿ–ಗೀಗೀ ಕವಿ ಮತ್ತು ಹಾಡುಗಾರ ಭೀಮಕವಿ ೨.ಗೀಗೀ ಗಾಯಕ ಚೆನ್ನಪ್ಪ ಚಿಂಚಲಿ೩.ಲಾವಣಿ–ಗೀಗೀ ಗಾಯಕ ಮತ್ತು ಕಂದಭೀಮಕವಿ ೪.ಗೀಗೀ ಪದ ಹಾಡುಗಾರ –ಕವಿ ಮತ್ತು ಕುಸ್ತಿಪೈಲ್ವಾನ ಮರಿಕಲ್ಲಪ್ಪ ಮಲಶೆಟ್ಟಿ ೫.ಜನಪದ ಕವಿ–ಕಲಾವಿದ ಹೊಸೂರುಸೋಮಲಿಂಗಪ್ಪ ೬.ಜನಪದ ಕವಿ–ಕಲಾವಿದ ಮಲ್ಲನಗೌಡ ಪಾಟೀಲ ೭.ಜನಪದ ಸಂಪ್ರದಾಯದ ಹಾಡುಗಳ ಕೋಗಿಲೆ ಭೀಮವ್ವ ಹರಿಜನ ೮.ಸೋಬಾನೆ ಪದದ ಸಾವಿತ್ರವ್ವ ಗಡದೆ ೯.ಜನಪದ ಹಾಡುಗಾರ ಭೀಮಪ್ಪ ತೋಟಗಿ ೧೦.ದೇಸಿ ಹಾಡಿನ ಸರದಾರ ಭೀಮಶೆಪ್ಪಸಾಸ್ತ್ರೀ ೧೧.ಜನಪದ ಹಾಡುಗಾರ ಕಲಾವಿದ ಹೂವಪ್ಪ ಜಕಬಾಳ ೧೨.ರಿವಾಯತ್ ಹಾಡುಗಾರ ಭೀಮಪ್ಪ ಮಾಯಣ್ಣವರ್ **ಎರಡು: ಭಜನೆ ಕಲಾವಿದರು:** ೧೩.ಕಾದ್ರೊಳ್ಳಿ ಭಜನಾ ಪರಂಪರೆಯ ಕಲಾವಿದ ಭೀಮಪ್ಪ ತಳವಾರ ೧೪.ಭಜನೆ ಕಲಾವಿದ ಲಖಮಗೌಡ ಪಾಟೀಲ ೧೫.ರಾಮಚಂದ್ರಪ್ಪ ಮುಕ್ಕಣ್ಣವರ: ಕೈವಲ್ಯ ಭಜನೆಯ ಹರಿಕಾರ ೧೬.ಭಜನೆ ಕಲಾವಿದ ಇರಪ್ಪ ಸಿಂಗಮ್ಮನವರ **ಮೂರು ಚೌಡಿಕೆ ಕಲಾವಿದರು:** ೧೭.ಚೌಡಿಕೆ ಕಲಾವಿದೆ ಹೌಸಾಬಾಯಿ ಸಿಂಧೆ ೧೮.ಚೌಡಿಕೆ ಮೇಳದ ಹರಿಜನ ಹನುಮವ್ವ **ನಾಲ್ಕು ಡೊಳ್ಳು ಕಲಾವಿದರು:** ೧೯.ಡೊಳ್ಳು ಕಲಾವಿದ ಸಣ್ಣಿಂಗಪ್ಪ ಮುಶೆಣ್ಣಗೋಳ ೨೦.ಡೊಳ್ಳು ಕಲಾವಿದ ಗೈಬಣ್ಣ ಉದ್ದವ್ವಗೋಳ ೨೧.ಡೊಳ್ಳು ಪದ ಹಾಡುಗಾರ ಶಿವಪ್ಪ ಮೋಟೆ **ಐದು: ಜನಪದ ವಾದ್ಯ ವಾದನ ಕಲಾವಿದರು:** ೨೨.'ಡಪ್ಪು'ವಾದಕ ಬಸರಕೋಡದ ಭೀಮಶಿ ೨೩.ಡಪ್ಪು ವಾದನ ಕಲಾವಿದ ಶಿವಲಿಂಗಪ್ಪ ಕರವಿಮಕೊಪ್ಪ ೨೪.ಸನಾದಿವಾದಕ ಮಾರುತಿ ತಮ್ಮಣ್ಣ ಭಜಂತ್ರಿ ೨೫.ವಿವಿಧ ವಾದ್ಯವಾದಕ ನಾಗಪ್ಪ ಮಾಡಮಗೇರಿ **ಆರು: ಶ್ರೀ ಕೃಷ್ಣ ಪಾರಿಜಾತ ರಂಗ ಕಲಾವಿದರರು** ೨೬.ಶ್ರೀಕೃಷ್ಣ ಪಾರಿಜಾತದ ನಟ –ನಿರ್ದೇಶಕ ಅಣ್ಣಪ್ಪ ಜಂಬಗಿ ೨೭.ಪಾರಿಜಾತದ ಸ್ತ್ರೀ ಪಾತಾಧಾರಿ ಬಸವಣ್ಣೆಯ್ಯ ಮಠಪತಿ ೨೮.ಪಾರಿಜಾತದ ಭಾಗವಾತ ಶಿವಪುತ್ರಪ್ಪ ಬೆಟಗೇರಿ ೨೯.ಪಾರಿಜಾತದ ಕೃಷ್ಣ ಯಲ್ಲಪ್ಪ ಪೂಜೇರ ೩೦.ಪಾರಿಜಾತದ ಕೃಷ್ಣ–ಕೊರವಂಜಿ

ಮಲ್ಲವ್ವ ಮ್ಯಾಗೇರಿ ೩೧.ಪಾರಿಜಾತದ ಪ್ರಸಿದ್ಧ ಕಲಾವಿಧೆ ಹಿಡಕಲ್ ಮಾಲಾ ೩೨.ಪಾರಿಜಾತದ ಕಲಾವಿದ ಕೃಷ್ಣಜೀ ಕಂಬಾರ ೩೩.ಪಾರಿಜಾತದ ಭಾಗವತ ಗೂಡುಸಾಬ್ ನದಾಪ್ ೩೪.ಹಾಸ್ಯವನ್ನುಕ್ಕಿಸುವ ಪಾರಿಜಾತದ ಭಾಗವಾತ ಮಹಾದೇವ ಹತಪಾಕಿ ೩೫.ಅನನ್ಯ ಪ್ರತಿಬೇಯ ಜನಪದ ಕಲಾವಿದ ಮಲ್ಲೇಶಪ್ಪ ಬಡಿಗೇರ ೩೬.ಪಾರಿಜಾತದ ಕೃಷ್ಣ-ಕೊರವಂಜಿ ನಾಗೇಂದ್ರ ಕಂಬಾರ **ಏಳು: ಡಪ್ಪಿನಾಟ/ಸಣ್ಣಾಟದ ಕಲಾವಿದರು:** ೩೭.ಅಪೂರ್ವ ಕಲಾವಿದೆ ಅಲತಗಿ ಯಮನವ್ವ ೩೮.ಸ್ತ್ರೀಪುರುಷ ಪಾತ್ರಗಳ ಚತುರ ಕಲಾವಿದೆ ಸಕ್ರೆವ್ವ ಪಾತ್ರೋಟ ೩೯.ರಾಧಾನಾಟದ ಭಾಗವತ ಅಶೋಕ ಪಾಟೀಲ ೪೦.ರಾಧಾನಾಟದ ಮಾಸ್ತರ ಬೀರಪ್ಪ ಗೋಟೂರ ೪೧.ರಾಧಾನಾಟದ 'ತಾತ್ಯಾ' ನಾರಾಯಣ ಗೋರಖನಾಥ ೪೨.ಸಂಗ್ಯಾ ಬಾಳ್ಯಾ ಆಟದ ಪ್ರತಿಬಾಂತ ಮಾಸ್ತರ ಶ್ರೀಕಾಂತ ಹರಿಜನ ೪೩ ಸಂಗ್ಯಾ ಬಳ್ಯ ಆಟದ ಪ್ರಚಾರಕ ಬಸವಣೆಪ್ಪ ಕಬಾಡಗಿ ೪೪.ಸ್ತ್ರೀಪಾತ್ರಕ್ಕೆ ಜೀವ ತುಂಬಿದ ಮೇರುನಾಟ ನಿಂಗಯ್ಯ ಸ್ವಾಮಿ ಪೂಜಾರಿ ೪೫.ಸಣ್ಣಾಟದ ಕಲಾವಿದ ಚನ್ನಬಸಯ್ಯ ಪೂಜೇರಿ ೪೬.ಪ್ರಮೀಳಾ ಪಾತ್ರದಾರಿ ರಾಮಪ್ಪ ಇಮ್ಮಡಿ ೪೭.ಶಿವಶಕ್ತಿ ಸಣ್ಣಾಟದ ಶಿವ ಪಾರಿಶಪ್ಪಖೆಮಲಾಪೂರೆ ೪೮.ಜನಪದ ಕಲಾವಿದ ಬಸವಣೆಪ್ಪ ಕಳ್ಳಿಗುದ್ದಿ ೪೯.'ಗೋರಖನಾಥ 'ಆಟದ ಮಾಸ್ತರ ಗುರುಸಿದ್ದಪ್ಪ ಮಾನಗಾಂವಿ ೫೦.'ಸತ್ಯವಾನ ಸಾವಿತ್ರ' ಖ್ಯಾತಿಯ ಮಾರುತಿ ಮಾಸ್ತರ ತಟ್ಟೀಮನಿ ೫೧.ಸತ್ಯವಾನ ಸಾವಿತ್ರಿ ಖ್ಯಾತಿಯ ಭಗಪ್ಪ ಕದಮ್ ೫೨.ಜನಪದ ರಂಗಕಲಾವಿದ ಅಪ್ಪಣ್ಣ ಬೆಟಗೇರಿ ೫೩ ಜನೊದ ಕಲಾವಿದ ಬಸವಣ್ಣೆಪ್ಪ ಬನ್ನಿಶೆಟ್ಟಿ ೫೪.ಬಯಲಾಟದ ಸಂಘಟಿಕ ಶ್ರೀಕಾಂತ ಅಂಬಿ ೫೫.ಅಣಕ ಕಲಾವಿದ ಸಿದ್ಧಪ್ಪ ಖಿಲಾರಿ

೧೫೧೨. ಬೆಳವಲ ಬೆಳಕು

ಸಂ: ಜಿ.ಬಿ. ಖಾಡೆ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮; ಮೊ.ಮು: ೧೯೮೧; ಪುಟ ೮+೧೫೧=೧೫೯; ಡಿಮ್ಮೈ ೧/೮

೨೩ ಜನಪದ ಕಥೆಗಳ ಸಂಕಲನವಿದು. ಹಂಪ ನಾಗರಾಜಯ್ಯ ಅವರ ಮುನ್ನುಡಿ, ಕತೆ ಹೇಳಿದವರು, ಕೊನೆಯಲ್ಲಿ ಅರ್ಥಕೋಶ, ಇವೆ.

೧೫೧೩. ಬೆಳ್ಳಿ ಬೆಳಸು

ಲೇ: ಚಕ್ಕೆರೆ ಶಿವಶಂಕರ್; ಪ್ರ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೫೬೦ ೦೦೨; ಮೊ.ಮು. ೨೦೦೮; ಪುಟ ೮+೮೬+೨೪=೧೧೮; ಡಿಮ್ಮೈ ೧/೮

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಿಮ್ಮೆ ನಡೆದ ಬಂದ ಹಾದಿ ಎಂಬ ಅಡಿಬರಹ ಇದೆ. ಹನ್ನೆರಡು ಅಧ್ಯಾಯಗಳಿವೆ: ೧.ಜಾನಪದ ಮುಂಜಾವು ೨.ಪರಿವೀಕ್ಷಣಾ ಘಟ್ಟ ೩.ದಾಖಲಾತಿ ಘಟ್ಟ ೪.ಅಧ್ಯಯನ ಘಟ್ಟ ೫.ಪ್ರಕಟಣೆಯ ಘಟ್ಟ ೬.ಪ್ರೋತ್ಸಾಹದ ಘಟ್ಟ ೭.ಪರ್ಯಾಯ ಚಿಂತನೆಯ ಘಟ್ಟ ೮.ಪ್ರದರ್ಶನದ ಘಟ್ಟ ೯.ಜಾನಪದ ಅಕಾಡಿಮ್ಮೆ

ರೂಪಿಸಿದ ಸಾಂಸ್ಕೃತಿಕ ನೀತಿ ೧೦.ಸದಸ್ಯರ ಪಟ್ಟಿ ೧೧.ಅಕಾಡಿಮ್ಯೆಯ ಪ್ರಕಟಣೆಗಳು ೧೨.ಅಕಾಡಿಮ್ಯೆಯ ಕಾರ್ಯಕ್ರಮಗಳ ಛಾಯಾಚಿತ್ರಗಳು.

೧೫೧೪. ಬೆಳ್ಳಿಯ ಭಾಗ್ಯ

ಸಂ: ಸಿ.ಎಚ್. ಕೃಷ್ಣಪ್ಪ, ತಲಕಾಡು ಎಂ. ನಾಗರಾಜಮೂರ್ತಿ, ಕೋಗಿಲವಾಡಿ ಬಿ. ರಾಜು; ಪ್ರ: ಹೊನ್ನಾರು ಜನಪದ ಗಾಯಕರು, ಎಲ್ ೨೪, ೯ನೇ ಕ್ರಾಸ್, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬; ಮೊ.ಮು.೧೯೯೭; ಪುಟ ೪೮; ಡಿಮ್ಯೆ ೧/೮

ಹೊನ್ನಾರು ಜನಪದ ಗಾಯನ ವೃಂದದ ಬೆಳ್ಳಿ ಹಬ್ಬದ ನೆನಪಿನ ಸಂಚಿಕೆ ಎಂಬ ಅಡಿಬರಹ ಇದೆ. ಎಂಟು ವ್ಯಕ್ತಿಗಳ ಬಗ್ಗೆ ಪ್ರತ್ಯೇಕ ಲೇಖನಗಳಿವೆ. ಅವುಗಳಲ್ಲಿ, ಜಾನಪದ ಕ್ಷೇತ್ರದಲ್ಲಿಯೂ ಕೆಲಸ ಮಾಡಿರುವ ಸಿ.ಪಿ.ಕೆ., ಹರಿಕಥಾ ವಿದ್ವಾನ್ ಚಿಕ್ಕಣ್ಣದಾಸ್, ಕ್ಯಾತಮಾರನಹಳ್ಳಿ ಕಂಸಾಳೆ ಮಹದೇವಯ್ಯ, ಅವರುಗಳ ಬಗ್ಗೆಯೂ ಲೇಖನಗಳಿವೆ.

೧೫೧೫. ಬೆಳ್ಳಿಯಮ್ಮನ ಹಾಡುಗಳು

ಸಂ: ಎಲ್.ಆರ್. ಹೆಗಡೆ; ಪ್ರ: ಸಮಾಜ ಪುಸ್ತಕಾಲಯ, ಧಾರವಾಡ–೧; ಮೊ.ಮು: ೧೯೭೨; ಪುಟ ೪+೫೦+೧೦೦=೧೫೪; ಕ್ರೌನ್ ೧/೮

ಜಾನಪದ ಗೀತೆಗಳು ಎಂಬ ಅಡಿಬರಹ ಇದೆ. ಹತ್ತು ಹಾಡುಗಳಿವೆ: ೧.ಚಿಕಣೇಳು ರಾಜ್ಯಕ್ಕೆ ಹೋದ ರಾಜ ೨.ಸಿಂಗಾರ ಗೌರಿ ೩.ಕನಕಾಂಗಿ ೪.ಸಣ್ಣಗಂಗಿ ೫.ಕೀಚಕ ವಧೆ ೬.ಕಾಸರಕೋಡ ತಿಮ್ಮಣ್ಣ ೭.ಅಣ್ಣ ಬೊಮ್ಮಿಗ–ತಮ್ಮ ವಿಕ್ರಮ ೮.ಮದುವೆಯ ಹಾಡು ೯.ಬಾಗಿಲನ್ನು ತಡೆವ ಹಾಡು ೧೦.ಇವ್ಯೆಂತಾ ಟಕ್ಕುಗಾರನೇ! ಐವತ್ತು ಪುಟಗಳಷ್ಟು ದೀರ್ಘವಾದ ಸಂಪಾದಕರ ಪೀಠಿಕೆ ಇದೆ.

೧೫೧೬. ಬೆಳೆ–೧: ದೇಸಿ ಸಂಸ್ಕೃತಿಯ ಆಯಾಮಗಳು

ಲೇ: ಎಂ.ಜಿ. ಬಿರಾದಾರ; ಪ್ರ: ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಸರಸ್ವತಿ ಗೋದಾಮ, ಕಲಬುರ್ಗಿ–೫೮೫ ೧೦೧; ಮೊ.ಮು: ೨೦೦೮; ಪುಟ ೧೨+೪೦೨=೪೧೪; ಡಿಮ್ಯೆ ೧/೮

ಮೂರು ಭಾಗಗಳಲ್ಲಿ ಹದಿನೇಳು ಲೇಖನಗಳಿವೆ. **ಭಾಗ ಒಂದು: ಸಾಹಿತ್ಯ:** ೧.ಸಂಸ್ಕೃತಿ ಸಮರ ೨.ರೂಪಾಂತರ ಹೊಂದಿದ ಕೆಲವು ಗಾದೆಗಳು ೩.ಉತ್ತರ ಕರ್ನಾಟಕದ ಜನಪದ ಸಾಹಿತ್ಯ ಪ್ರಕಾರಗಳು ೪.ಲಾವಣಿ: ಒಂದು ವಿವೇಚನೆ ೫.ಸ್ವಾತಂತ್ರ್ಯ ಸಮರದ ಜನಪದ ಸಾಹಿತ್ಯ ೬.ಮಡಿಕೆಯ ಮಾಡುವರೆ ಮಣ್ಣೇ ಮೊದಲು ೭.ಜನಪದ ಜೀವನಾಡಿ (ಶ್ರೀ ಸನದಿ ಕಾವ್ಯ) ೮.ಜನಪದ ಪೀಡೆಯ ಹಾಡುಗಳು ೯.ಜನಪದ ರಾಸಿ ಆರಂಭಿಸಿದವರು ೧೦.ಜಾನಪದ ಒಡಗತೆಗಳು. **ಭಾಗ ಎರಡು: ವೈಜ್ಞಾನಿಕ:** ೧೧.ಜಾನಪದ ತೂಕ ಮತ್ತು ಅಳತೆಯ ವಿಧಾನಗಳು ೧೨.ಒಕ್ಕಲಿಗರ ಹಾಡುಗಳು ೧೩.ವಿಜ್ಞಾನ

ಮತ್ತು ದೇಸೀ ತಂತ್ರಜ್ಞಾನ ೧೪.ಆಹಾರ ಧಾನ್ಯ ಕಾಯ್ದಿಡುವ ಜನಪದ ವಿಧಾನಗಳು ೧೫.ಸುಳಿ– ಒಂದು ಜನಪದ ವಿಜ್ಞಾನ. **ಭಾಗ ಮೂರು: ಜೀವನ ಮೌಲ್ಯ:** ೧೬.ಜಾನಪದ ಸಾಮಾಜಿಕ ಮೌಲ್ಯಗಳು ೧೭.ಜಾನಪದದಲ್ಲಿ ಮುಯ್ ಮತ್ತ ಕಡ.

೧೫೧೭. ಬೆಳೆಯೋ ಬೆಳೆಯೋ ವಾಲೆ ಮರವೆ

ಸಂ: ಪುನರ್ವಸು; ಪ್ರ: ಕಾದಂಬರಿ ಲೋಕ, ಸರಸ್ವತೀಪುರಂ, ಮೈಸೂರು–೯; ಮೊ.ಮು: ೧೯೭೯; ಪುಟ ೮+೯೮=೧೦೬; ಕ್ರೌನ್ ೧/೮

ಜಾನಪದ ಕಥಾ ಸಂಕಲನ ಎಂಬ ಅಡಿಬರಹ ಇದೆ. ೨೪ ಕಥೆಗಳಿವೆ: ೧.ಬೆಳೆಯೋ ಬೆಳೆಯೋ ವಾಲೆ ಮರವೆ ೨.ನಾಯಿ ಮಕ್ಕಳು ೩.ಆನೆ ನಿಲ್ಲಿಸಿದ ಕೊಂಟ ೪.ಕುಂಟ ಮತ್ತು ರಾಕ್ಷಸ ೫.ಪಲ್ಲೀ ಕುಡ್ಡೋನು ೬.ಮಾಯದ ಉಂಗುರ ೭.ಐದು ಗಿಳಿಗಳ ತಂಗಿ ೮.ಬುಟ್ರೆ ಸಿಕ್ಕ ೯.ನಳ್ಳಿ ಮದ್ವೆ ೧೦.ತಾಯಿ ಕಳ್ಳು ೧೧.ಬಗನೀ ಗೂಟಕ್ಕೊಂದ್ಲಾವ್ರ ೧೨.ಅಕ್ಕ ಭಾವನ್ಕಥೆ ೧೩.ಜನ ಮರ್ಲೋ, ಜಾತ್ರೆ ಮರ್ಲೋ ೧೪.ಕಾಗೆ, ಗೂಬೆ ಕಥೆ ೧೫.ಜಾಣ ಹೆಂಡತಿ ೧೬.ಗುಳಕಾಯಿ ಕಥೆ ೧೭.ಕುಲ್ಕಿ, ಕುಲ್ಕಿ ಮೂರ್ಸರ್ತಿ ೧೮.ಅತ್ಗೆ ಪ್ರೀತಿ ೧೯.ನರಿಯ ಪರ ೨೦.ಮಾಯದ ಗಿಣಿ ೨೧.ಇಲಿಗಳ ಕಥೆ ೨೨.ಮಿಡಿಚಂಭಟ್ಟ ೨೩.ಮಾಯದ ಕೊಳಲು ೨೪.ಹರಿಗೋವಿಂದ. ಪರಿವಿಡಿಯಲ್ಲಿ ಕಥಾವರ್ಗವನ್ನು ಸೂಚಿಸಲಾಗಿದೆ. ಕಿನ್ನರ, ನೀತಿ, ಅತಿಮಾನುಷ, ವಿನೋದ ಈ ನಾಲ್ಕು ವರ್ಗಗಳ ಕಥೆಗಳು ಈ ಸಂಕಲನದಲ್ಲಿವೆ. ಕೊನೆಯ ಪುಟದಲ್ಲಿ ಅರ್ಥಕೋಶ ಇದೆ.

೧೫೧೮. ಬೆಳ್ದಿಂಗ್ಳಪ್ಪನ ಪೂಜೆ

ಲೇ: ಅಗ್ರಹಾರ ಕೃಷ್ಣಮೂರ್ತಿ; ಪ್ರ: ಮುಂಗಾರು ಪ್ರಕಾಶನ, ೭೦, ಕೆಂಗೇರಿ ಉಪನಗರ, ಬೆಂಗಳೂರು ದಕ್ಷಿಣ; ಮೊ.ಮು: ೧೯೭೬; ಪುಟ ೭೮; ಕ್ರೌನ್ ೧/೮

ಇಲ್ಲಿನ ಬರಹವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಲಾಗಿದೆ: ೧.ಪೂಜೆಗೆ ಮೊದಲು ೨.ಬೆಳದಿಂಗಳ ಪೂಜೆ ೩.ಪೂಜೆ ಪದಗಳು. ಮೊದಲನೆಯ ಭಾಗದಲ್ಲಿ ಚಂದ್ರನ ಬಗ್ಗೆ ಹಾಗೂ ಚಂದ್ರನನ್ನು ಕುರಿತ ಆಕರಗಳ ಬಗ್ಗೆ ವಿಚಾರವಿದೆ. ಎರಡನೆಯದರಲ್ಲಿ ಆಚರಣೆಯ ವಿವರಗಳಿವೆ. ಆ ಸಂದರ್ಭದಲ್ಲಿ ಬಳಕೆಯಾಗುವ ಹಾಡುಗಳನ್ನು ಮೂರನೆಯ ಭಾಗವಾಗಿ ಅನುಬಂಧದಲ್ಲಿ ಸೇರಿಸಲಾಗಿದೆ. ಈ ಹಾಡುಗಳಲ್ಲಿ ಬಳಕೆಯಾಗುವ ತೆಲುಗು ಶಬ್ದಗಳಲ್ಲಿ ಕೆಲವನ್ನು ಅರ್ಥಕೋಶದಲ್ಲಿ ಗುರುತಿಸಲಾಗಿದೆ.

೧೫೧೯. ಬೆಳ್ವೊಲ

ಸಂ: ಎಂ.ಎಸ್. ಸುಂಕಾಪುರ, ಎಂ.ಎಂ. ಕಲಬುರ್ಗಿ; ಪ್ರ: ಕಾರ್ಯಾಧ್ಯಕ್ಷರು, ಡಾ.ಆರ್.ಸಿ. ಹಿರೇಮಠ ಸನ್ಮಾನ ಸಮಿತಿ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೊ.ಮು: ೧೯೮೧; ಪುಟ ೧೬+೫೦೩=೫೧೯; ಡಿಮ್ಮೈ ೧/೮

ಡಾ. ಆರ್. ಸಿ. ಹಿರೇಮಠ ಅವರ ಅಭಿನಂದನ ಗ್ರಂಥ ಎಂಬ ಅಡಿಬರಹ ಇದೆ. ನಾಲ್ಕು ತೆನೆ (ಭಾಗ)ಗಳಿವೆ. ನಾಲ್ಕನೆಯ ತೆನೆಯಾದ ಇತಿಹಾಸ-ಜಾನಪದ ಎಂಬ ತೆನೆಯಲ್ಲಿರುವ ಹತ್ತು ಲೇಖನಗಳಲ್ಲಿ ಐದು ಲೇಖನಗಳು ಜಾನಪದಕ್ಕೆ ಸಂಬಂಧಿಸಿವೆ: ೧.ಹಗರಣ-ಎಲ್.ಆರ್.ಹೆಗಡೆ ೨.ಕರ್ಣಾಟಕಾಂಧ್ರ ಯಕ್ಷಗಾನ ಸಮೀಕ್ಷೆ-ಬಿ. ರಾಮಚಂದ್ರರಾವ್ ೩.ಹಚ್ಚೆ: ಒಂದು ಜಾನಪದ ಕಲೆ –ಎಚ್.ಎಂ. ಮಹೇಶ್ವರಯ್ಯ ೪.ಪವಾಡಗಳು-ಕೆ.ಜಿ. ಗುರುಮೂರ್ತಿ ೫.ಡಾ.ಆರ್. ಸಿ. ಹಿರೇಮಠರೊಂದಿಗೆ ಸಂದರ್ಶನ- ದೇವೇಂದ್ರಕುಮಾರ ಹಕಾರಿ.

೧೫೨೦. ಬೆಳ್ಳಕ್ಕಿ ಹಿಂಡು ಬೆದರ್ಯಾವೋ (ಶಕುನದ ಹಕ್ಕಿ)

ಲೇ: ಗೊ.ರು.ಚನ್ನಬಸಪ್ಪ; ಪ್ರ: ಕರ್ನಾಟಕ ಜಾನಪದ ಪ್ರಸಾರ ನಿಧಿ, ಬೆಂಗಳೂರು; ಮೊ.ಮು: ೧೯೯೧; ಪುಟ ೮+೫೬=೬೪; ಕ್ರೌನ್ ೧/೮

ಜಾನಪದ ರೂಪಕ/ಜಾನಪದ ನಾಟಕ ಎಂಬ ಅಡಿಬರಹ ಇದೆ. ಜಾನಪದ ಹೂರಣವನ್ನು ಒಳಗೊಂಡ ಗೀತರೂಪಕ ಎಂದೇ ಹೇಳಬಹುದಾದಷ್ಟು ಹಾಡುಗಳು ಇದರಲ್ಲಿ ಬಳಕೆಯಾಗಿವೆ. ಇದೇ ಬಗೆಯ ಇನ್ನೊಂದು ರೂಪಕ ಸಾಕ್ಷಿಕಲ್ಲು. ಆದ್ದರಿಂದ ಲೇಖಕರು "ಸಾಕ್ಷಿಕಲ್ಲಿನಂತೆಯೇ ಇಲ್ಲೂ ನಮ್ಮ ಜನಪದರ ಜೀವನ ಪ್ರಾಮಾಣಿಕತೆಯೇ ಪ್ರಧಾನವಸ್ತು, ನಮ್ಮ ಜನ ನ್ಯಾಯ ನಿಷ್ಠುರತೆ ಮತ್ತು ನೀತಿಪಾಲನೆಯ ಮಾನವೀಯ ಮೌಲ್ಯಗಳಿಗೆ ಕೊಡುವ ಬೆಲೆ ಎಷ್ಟು, ಎಂತಹುದು ಎಂಬುದನ್ನು ನಾಟಕ ಹೇಳುತ್ತದೆ" ಎಂಬುದಾಗಿ ಹೇಳಿಕೊಂಡಿದ್ದಾರೆ.

೧೫೨೧. ಬೆಳ್ಳಕ್ಕಿ ಹಿಂಡು

ಸಂ: ಶೋಭಾದೇವಿ ಚೆಕ್ಕಿ; ಪ್ರ: ಸಂಸ್ಕೃತಿ ಪ್ರಕಾಶನ, ಸೇಡಂ-೫೮೫ ೨೨೨, ಗುಲ್ಬರ್ಗಾ ಜಿಲ್ಲೆ; ಮೊ.ಮು: ೨೦೦೪; ಪುಟ ೩೨+೧೧೬=೧೪೮; ಡಿಮ್ಮೈ ೧/೮

ಸಂಪ್ರದಾಯ ಹಾಡುಗಳು ಎಂಬ ಅಡಿಬರಹ ಇದೆ. ೭೧ ಹಾಡುಗಳಿವೆ. ರಮಜಾನ ದರ್ಗಾ ಅವರ ಹಾಡುಗಳಲ್ಲಿ ಅರಳುವುದು ಜಾನಪದ ಬದುಕು ಎಂಬ ಮುನ್ನುಡಿ, ಸಂಪಾದರ ಪ್ರಸ್ತಾವನೆ, ಇವೆ.

೧೫೨೧. ಬೇಕಾದ ಸಂಗಾತಿ

ಸಂ: ಕಾಳೇಗೌಡ ನಾಗವಾರ; ಪ್ರ: ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು; ಮೊ.ಮು: ೧೯೮೦; ಪು: ೪೪+೪೫೦=೪೯೪; ಡಿಮ್ಮೈ ೧/೮

ಜನಪದ ಗೀತೆಗಳ ಸಂಕಲನ. ಐದು ಭಾಗಗಳಾಗಿ ವಿಂಗಡಿಸಲಾಗಿದೆ: ೧.ಒಡಹುಟ್ಟು-ತವರು-ಸಂಗಾತಿ-ದೇವರು ೨.ಮದುವೆಯ ಪದಗಳು ೩.ಗುಣಸಾಗರಿ(ಜನಪದ ಕಾವ್ಯ) ೪.ಲಾವಣಿಗಳು: ಬಾಲನಾಗಮ್ಮ, ಕಲಿಯುಗದ ಬಾಲೆ, ಅಣ್ಣತಂಗಿ, ಮಾಗಡಿ ಕೆಂಪೇಗೌಡ,

ಸೀರ್ಯದ ರಂಗಣ್ಣ ೫.ಕೋಲಾಟದ ಬಿಂಗಿ ಪದಗಳು. ಜಿ.ಎಸ್.ಶಿವರುದ್ರಪ್ಪ ಅವರ ಮುನ್ನುಡಿ, ಪ್ರಸ್ತಾವನೆ, ಹಾಡುಗಳು ಮತ್ತು ಹಾಡಿದವರು, ಲಕ್ಕಮ್ಮಜ್ಜಿಯೊಡನೆ ಸಂದರ್ಶನ, ಕ್ಷೇತ್ರಕಾರ್ಯದ ಅನುಭವ: ಕೆಲವು ನೆನಪುಗಳು, ಅರ್ಥಕೋಶ, ಇವೆ.

೧೫೨೨. ಬೇಟೆ

ಸಂ: ಸ.ಚಿ. ರಮೇಶ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು: ೨೦೦೧; ಪು: ೪ ೨೪+೧೬೮=೧೯೨; ಡಿಮ್ಮೈ ೧/೮

ಸಾಂಸ್ಕೃತಿಕ ಪದಕೋಶ ಎಂಬ ಅಡಿಬರಹ ಇದೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸುತ್ತಲಿನ ಗ್ರಾಮಗಳಾದ ಕುಪ್ಪಳಿ ಹಾರೋಗದ್ದೆ ಹಾರೋಗೊಳಿಗೆ ಅಂಬಳಿಕೆ ಕಡಿದಾಳು ಆಗುಂಬೆ ಅರಗ ಸರಳ ಹಾಗೂ ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ ಚಿಕ್ಕಮಗಳೂರು, ಪ್ರದೇಶಗಳಲ್ಲಿ ಕ್ಷೇತ್ರಕಾರ್ಯದ ಮೂಲಕ; ಮತ್ತು ಬೇಟೆಗೆ ಸಂಬಂಧಿಸಿದಂತೆ ಇದುವರೆಗೆ ಪ್ರಕಟವಾಗಿರುವ ಗ್ರಂಥಗಳಿಂದ, ವಿದ್ವಾಂಸರಿಂದ– ಹೀಗೆ ಹಲವು ಮೂಲಗಳಿಂದ ಸಂಗ್ರಹಿಸಿ ಪ್ರಕಟಗೊಂಡಿರುವ ಪದಕೋಶ ಇದು. ಬೇಟೆಯ ಬಗೆಗಿನ ವಿಧಿ ನಿಷೇಧಗಳು ನಂಬಿಕೆಗಳು ಆಚರಣೆಗಳು ಐತಿಹಾಸಿಕ ಅಂಶಗಳು ಹೀಗೆ ಹಲವು ನಿಟ್ಟಿನಲ್ಲಿ ಚರ್ಚಿಸುವ ವಿಚಾರ ವೈವಿಧ್ಯವು ಈ ಗ್ರಂಥದ ಪ್ರಸ್ತಾವನೆಯ ಭಾಗದಲ್ಲಿದೆ. ಗ್ರಂಥದ ಉದ್ದಕ್ಕೂ ಪ್ರಾಣಿಗಳ ಪಕ್ಷಿಗಳ ಆಯುಧಗಳ ವಿಶಿಷ್ಟ ಭೂಭಾಗಗಳ ರೇಖಾಚಿತ್ರಗಳಿವೆ ಕೊನೆಯಲ್ಲಿ ಪಕ್ಷಿಗಳ ಪ್ರಾದೇಶಿಕ ಹೆಸರುಗಳ ಪಟ್ಟಿ ಇದೆ.

೧೫೨೩. ಬೇಟೆ ಮತ್ತು ಬೇಡರು

ಲೇ: ವಿರೂಪಾಕ್ಷ ಪೂಜಾರಹಳ್ಳಿ; ಪ್ರ: ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ; ಮೊ.ಮು.೨೦೦೭; ಪುಟ ೧೬+೩೫೬+೨೪=೩೯೬; ಡಿಮ್ಮೈ ೧/೮

ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು: ಚಾರಿತ್ರಿಕ ಅಧ್ಯಯನ – ಎಂಬ ಅಡಿಬರಹ ಇದೆ. ಎಂಟು ಅಧ್ಯಾಯಗಳಿವೆ: ಒಂದು: ಪ್ರಸ್ತಾವನೆ ಎರಡು: ಬೇಟೆಯ ಚಾರಿತ್ರಿಕ ಪರಿಕಲ್ಪನೆ ಮತ್ತು ಪ್ರಕ್ರಿಯೆ: ೧.ಭಾರತದಲ್ಲಿ ಬೇಟೆಗಾರಿಕೆ ಮತ್ತು ಬೇಟೆ ಸಂಬಂಧಿ ಬುಡಕಟ್ಟುಗಳು ೨.ಭಾರತೀಯ ಸಂಸ್ಕೃತಿ ನೆಲೆಯಲ್ಲಿ ಬೇಟೆಯ ಸ್ಥಾನಮಾನ ೩.ಬೇಟೆಯ ಬಗೆಗಿನ ಸಾಹತ್ಯಾವಲೋಕನ ೪.ವೃತ್ತಿ ಮತ್ತು ಜಾತಿ ವರ್ಗಗಳ ವರ್ಗೀಕರಣ–ಕಾವ್ಯಗಳ ಹಿನ್ನೆಲೆಯಲ್ಲಿ. ಮೂರು: ಬೇಡ ಬುಡಕಟ್ಟಿನ ಚಾರಿತ್ರಿಕ ಹಿನ್ನೆಲೆ. ನಾಲ್ಕು: ಕನ್ನಡ ಕಾವ್ಯಗಳು ನಿರೂಪಿಸುವ ಬೇಟೆ ಮತ್ತು ಬೇಡರ ಕಥಾ ಪ್ರಸಂಗಗಳು: ೧.ಕಾವ್ಯಗಳು ೨.ಮೌಖಿಕ ಸಾಹಿತ್ಯ. ಐದು: ಕಾವ್ಯಗಳ ಹಿನ್ನೆಲೆಯಲ್ಲಿ ಬೇಟೆ ಮತ್ತು ಬೇಡ ಸಂಸ್ಕೃತಿ: ೧.ಉಡುಗೆ–ತೊಡುಗೆ ೨.ನಂಬಿಕೆ, ಆಚರಣೆ ೩.ಆಯುಧೋಪಕರಣ ೪.ಬೇಟೆಯ ಸ್ವರೂಪ ಹಾಗೂ ವಿಧಾನ. ಆರು: ಆಧುನಿಕ ಪರಿಕಲ್ಪನೆಗಳು ನೆಲೆಯಲ್ಲಿ ಬೇಟೆ: ೧.ಬೇಟೆ–ವಿಧಿ ಮತ್ತು ನಿಷೇಧ ೨.ಬೇಟೆ ಬಗೆಗಿನ ನೀತಿ–ನಿರ್ಬಂಧಗಳು ೩.ಪರಂಪರೆ

ಪರಿವರ್ತನೆ (ಸಾಮಾಜಿಕ ಸ್ಥಿತ್ಯಂತರ) ೪.ವಲಸೆ. ಏಳು: ಪ್ರಚಲಿತ ಬೇಟೆ ಮತ್ತು ಬೇಟೆ ಸಂಬಂಧಿ ನಂಬಿಕೆ, ಆಚರಣೆ ಸಂಪ್ರದಾಯಗಳ ನೆಲೆಯಲ್ಲಿ ಬೇಡ ಬುಡಕಟ್ಟಿನ ಸ್ಥಿತಿಗತಿ. ಎಂಟು: ಸಮಾರೋಪ. ಅನುಬಂಧದಲ್ಲಿ, ಹಂದಿ ಬೇಟೆ ಕುರಿತ ಜನಪದ ಗೀತೆ, ಸ್ಥಳನಾಮಸೂಚಿ, ಬೇಡ ಸಮುದಾಯದ ಬೆಡಗುಗಳು, ಸಾಂಸ್ಕೃತಿಕ ಪದಕೋಶ, ಛಾಯಾಚಿತ್ರಗಳು ಮತ್ತು ರೇಖಾ ಚಿತ್ರಗಳು ಇವೆ. ಸದ್ಗುರು ಯತಿರಾಜ ಪರಮಹಂಸರ ಅನುಭವದ ನುಡಿ, ಕೃಷ್ಣಮೂರ್ತಿ ಹನೂರು ಅವರ ಮುನ್ನುಡಿ, ಲಕ್ಷ್ಮಣ್ ತೆಲಗಾವಿ ಅವರ ಮೆಚ್ಚುಗೆಯ ಮಾತು ಇವೆ.

೧೫೨೪. ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ

ಸಂ: ವಿರೂಪಾಕ್ಷಿ ಪೂಜಾರಹಳ್ಳಿ; ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು: ೨೦೦೮; ಪು: ೧೦+೨೨೪=೨೩೪; ಡಿಮ್ಮೈ ೧/೮

ವಿಚಾರ ಸಂಕಿರಣದಲ್ಲಿ ಮಂಡಿಸಲ್ಪಟ್ಟ ಒಟ್ಟು ೧೫ ಲೇಖನಗಳು ಈ ಗ್ರಂಥದಲ್ಲಿವೆ: ೧.ಪ್ರಸ್ತಾವನೆ –ವಿರೂಪಾಕ್ಷಿ ಪೂಜಾರಹಳ್ಳಿ ೨.ವಿಜಯನಗರ ಪೂರ್ವಕಾಲೀನ ಬೇಡರು –ಹನುಮನಾಯಕ ೩.ವಿಜಯನಗರ ಕಾಲದ ಬೇಡರು –ವಿರೂಪಾಕ್ಷಿ ಪೂಜಾರಹಳ್ಳಿ ೪.ವಿಜಯನಗರೋತ್ತರ ಕಾಲದ ಬೇಡರು –ಎಂ.ಕೆ. ದುರುಗಪ್ಪ ೫.ಈಶಾನ್ಯ ಕರ್ನಾಟಕ ಬೇಡ ಪಾಳೆಯಗಾರರು –ಅಮರೇಶ ಯತಗಲ್ ೬.ಸ್ವಾತಂತ್ರ್ಯ ಹೋರಾಟದಲ್ಲಿ ಬೇಡರು –ಓ. ದೇವರಾಜ ೭.ತರೀಕೆರೆ ಸರ್ಜಪ್ಪನಾಯಕ ಮತ್ತು ಬ್ರಿಟಿಷರು –ವಿರೂಪಾಕ್ಷಿ ಪೂಜಾರಹಳ್ಳಿ ೮.ಬ್ರಿಟಿಷರ ವಿರುದ್ಧ ಹಲಗಲಿ ಬೇಡರ ಪ್ರತಿಭಟನೆ –ಡಿ.ಬಿ. ಕರಡೋಣಿ ೯.ಸುರಪುರದ ವೆಂಕಟಪ್ಪನಾಯಕ ಮತ್ತು ಬ್ರಿಟಿಷರು –ಜಗದೀಶ ಕುಮಾರ ೧೦.ಸಿಂಧೂರ ಲಕ್ಷ್ಮಣ ಮತ್ತು ಬ್ರಿಟಿಷರ ಆಳ್ವಿಕೆ –ಎಫ್.ವೈ. ಸೈದಾಪುರ ೧೧.ಬುಡಕಟ್ಟು ನೆಲೆಯಲ್ಲಿ ಬೇಡರು –ಎಸ್.ಎಂ. ಮುತ್ತಯ್ಯ ೧೨.ಬೇಡ ಬುಡಕಟ್ಟಿನ ವೈಶಿಷ್ಟ್ಯಗಳು –ಜಿ. ಹೊಲೆಪ್ಪ ಸಂಡೂರು ೧೩.ಬೇಡರ ಸಾಂಸ್ಕೃತಿಕ ನಾಯಕರು –ಅರುಣ್ ಜೋಳದ ಕೂಡ್ಲಿಗಿ ೧೪.ಬೇಡ ಬುಡಕಟ್ಟಿನ ಮಹಿಳೆ –ಕೊತ್ತಲಮ್ಮ ೧೫.ರಾಜಕೀಯ ಕ್ಷೇತ್ರದಲ್ಲಿ ಬೇಡರು –ರಮೇಶ್‌ಕುಮಾರ ೧೬.ಬೇಡರ ಸಾಮಾಜಿಕ ಪರಿಸ್ಥಿತಿ –ಪಿ. ಕೊಟ್ರೇಶ್ ೧೭.ಬೇಡರ ಶೈಕ್ಷಣಿಕ ಸ್ಥಿತಿ–ಗತಿ –ಕರಿಯಪ್ಪ ಜಿ. ಮಾಳಿಗಿ ೧೯.ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲಿ ಬೇಡರು –ಜಿ. ಪ್ರಶಾಂತ ನಾಯಕ ೨೦.ಬೇಡ ಸಮುದಾಯದ ಸಮಸ್ಯೆ ಮತ್ತು ಸವಾಲುಗಳು –ಡಿ.ಓಬಯ್ಯ ದೇವರಹಟ್ಟಿ ೨೧.ಬೇಡ ಬುಡಕಟ್ಟಿನ ಮುಂದಿನ ಸವಾಲುಗಳು –ಎಸ್. ಮಾರುತಿ ೨೨.ನಾಯಕರ ಅಭಿವೃದ್ಧಿ ಹೇಗೆ ಸಾಧ್ಯ? –ಆರ್.ಬಿ. ಕಿತ್ತೂರ ೨೩.ಬೇಡಸಮುದಾಯದ ಮುಂದಿರುವ ಸಮಸ್ಯೆಗಳು, ಸವಾಲುಗಳು –ದೇವೇಂದ್ರ ಮಾಧವನವರ ೨೪.ಮ್ಯಾಸಬೇಡರ ಭಾಷೆ –ಆಂಜನೇಯ ಉತ್ತಾರ್ಳ್ ೨೫.ನಾಯಕರ ಉದ್ಧಾರ ಅಥವಾ ಪರರ ಪಾದಸೇವೆ –ದೇವೆಂದ್ರ ಮಾಧವನವರ. ಶಬ್ದಪಾರಮಾರ್ಗಮಶಕ್ಯಂ ಎಂಬ ಎ. ಮುರಿಗೆಪ್ಪ ಅವರ ಮುನ್ನುಡಿ ಇದೆ.

೧೫೨೫. ಬೇರು ತೋರಿದ ಹಾದಿ

ಲೇ: ಕುಮಾರ ಚಲ್ಯ; ಪ್ರ: ಅಭಿರುಚಿ ಪ್ರಕಾಶನ, ೪, ಎರಡನೆಯ ಮಹಡಿ, ನಗರ ರಸ್ತೆ ಸಾರಿಗೆ ಸಂಸ್ಥೆ, ಮೈಸೂರು–೧; ಮೊ.ಮು: ೨೦೦೩; ಪು: ೧೪೪; ಡಿಮ್ಮೈ ೧/೮

ಎರಡು ಭಾಗಗಳಲ್ಲಿ ಎಂಟು ಲೇಖನಗಳಿವೆ: **ಭಾಗ–೧: ಸಾಹಿತ್ಯಕ ಜಾನಪದ:** ೧.ಪರಂಪರೆ ಮತ್ತು ಜಾನಪದ (ಹಳಗನ್ನಡ, ನಡುಗನ್ನಡ), ೨.ಮಲ್ಲಿಗೆದಂಡೆ: ಹದಿಮೂರು ಗೀತೆಗಳ ವಿಶ್ಲೇಷಣೆ, ೩.ಮೂರು ಜಾನಪದೀಯ ಟಿಪ್ಪಣಿಗಳು: 'ನಲ್ವಾಡುಗಳು', 'ಹಯವದನ', 'ಕಾಡು' ಭಾಗ–೨: ಸಾಹಿತ್ಯೇತರ ಜಾನಪದ: ೧.ಗೊರೂರರು ಗುರುತಿಸಿದ ಜನಪದ ಸಂಪ್ರದಾಯಗಳು, ೨.ಸಸ್ಯ ಪೌರಾಣಿಕ ಪರಿಕಲ್ಪನೆ, ೩.ಸಸ್ಯ ಜಾನಪದ ಮತ್ತು ಪ್ರಾಣಿ ಜಾನಪದ, ೪.ಮಲೆನಾಡು ಕರ್ನಾಟಕದ ಅಡುಗೆ. ಅನುಬಂಧದಲ್ಲಿ ಪ್ಲಾಂಟ್ ಅಂಡ್ ಅನಿಮಲ್ ಲೋರ್‌ಬಗ್ಗೆ ಮಾಹಿತಿ ಇದೆ.

೧೫೨೬. ಬೊಬ್ಬಿ ಹಾಡುಗಳು

ಸಂ.ರಾಜೇಂದ್ರ ಯರನಾಳೆ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ ಬೆಂಗಳೂರು–೫೬೦೦೧೮; ಮೊ.ಮು: ೨೦೦೪; ಪು: ೬+೬೪=೭೦

ಅನುಬಂಧದ ಸಂಗ್ರಹವೂ ಸೇರಿ ಒಟ್ಟು ೧೧೧ ಪುಟ್ಟಪುಟ್ಟ ಹಾಡುಗಳಿವೆ. ಪ್ರಸ್ತಾವನೆಯಲ್ಲಿ ಈ ಶೀರ್ಷಿಕೆಗಳು ಚರ್ಚಿತವಾಗಿವೆ: ಮುಚ್ಚುಮರೆ, ಹೋಳಿ ಹಿನ್ನಲೆ ಕಥೆಗಳು, ಆಚರಣೆಯ ವೈವಿಧ್ಯತೆ, ಬೊಬ್ಬಿ ಅಬ್ಬರ, ನಂಬಿಕೆಗಳು, ಹೋಳಿ ಸಾಹಿತ್ಯ, ಬೊಬ್ಬಿ ಹಾಡುಗಳು. ಅನುಬಂಧದಲ್ಲಿರುವ ೧೭ ಹಾಡುಗಳು ಮರಾಠಿ ಹಿಂದಿ ಹಾಗೂ ಉರ್ದು ಬೊಬ್ಬಿ ಹಾಡುಗಳು.

೧೫೨೭. ಬೊಮ್ಮನಾಯಕನಹಳ್ಳಿ –ಒಂದು ಸಾಂಸ್ಕೃತಿಕ ಅಧ್ಯಯನ

ಲೇ: ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ; ಪ್ರ: ರಂಗಮ್ಮ ಪ್ರಕಾಶನ, ಬೇವೂರು ಮಂಡ್ಯ ಅಂಚೆ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ; ಮೊ.ಮು: ೨೦೦೮; ಪುಟ ೧೦೪; ಡಿಮ್ಮೈ ೧/೮

ಹನ್ನೆರಡು ಅಧ್ಯಾಯಗಳಿವೆ: ೧.ರಾಮನಗರ ಜಿಲ್ಲೆಯಲ್ಲಿ ಒಕ್ಕಲುತನದ ಆರಂಭ. ೨.ಬೊಮ್ಮನಾಯಕನಹಳ್ಳಿಯ ಐತಿಹಾಸಿಕ ಪರಂಪರೆ ೩..... ಕೆಲವು ಕೈಯಾಡ್ ಜಾತಿಗಳು ೪...ಹೊರಗಿನಿಂದ ವಲಸೆ ಬಂದವರು ೫.....ದೇವರುಗಳು ೬.....ಕೆಲವು ಹಬ್ಬ–ಜಾತ್ರೆಗಳು ೭........ಹೊಲಗಳ ಹೆಸರುಗಳು ೮.ಮದುವೆಗಳು ೯.....ಅಂದು ಇಂದು ೧೦.....ಜನರ ಮೇಲೆ ಆಗುತ್ತಿರುವ ಆಧುನಿಕತೆಯ ಪ್ರಭಾವ ೧೧.......ಈಶ್ವರ ದೇವಸ್ಥಾನದ ಪ್ರತಿಷ್ಠಾಪನೆ ೧೨.ಉಪಸಂಹಾರ.

೧೫೨೮. ಬೋರೆ ದೇವರು–ಒಂದು ಅಭ್ಯಾಸ

ಲೇ: ಡಿ. ಲಿಂಗಯ್ಯ; ಪ್ರ: ದಿನಕರ ಪ್ರಕಾಶನ; ಮೊ.ಮು: ೧೯೭೬; ಪುಟ ೮೪; ಕ್ರೌನ್ ೧/೮

ಒಂದು ಅಭ್ಯಾಸ ಎಂಬ ಅಡಿಬರಹ ಇದೆ. ಬೋರೆದೇವರ ಬಗೆಗಿನ ಭಾಗವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ಭಾಗದಲ್ಲೂ ಉಪಶೀರ್ಷಿಕೆಗಳಿವೆ. ಉಪಶೀರ್ಷಿಕೆಗಳು ೧.ಹಿನ್ನೆಲೆ ಉಗ್ರದೇವತೆ, ಬೋರೆದೇವರು, ಬೋರೆ ದೇವರ ಒಕ್ಕಲು, ಯಜಮಾನ, ಅರ್ಚಕ, ತೋಟ, ಕೊಡುಗೆಯ ಶಾಸನ, ಬೋರೆ ದೇವರ ಗುಡ್ಡ, ಹಬ್ಬ ಮಾಡುವ ಸಮಯ, ಹಬ್ಬಕ್ಕೆ ನೆರವಾಗುವವರು, ಹಬ್ಬದ ಕ್ರಮ ೨.ಕೊಂಡಕ್ಕೆ ಕೊಂಟು ಹಾಕುವುದು, ಮನೆ ಕೈಯಾಡಿಸುವುದು, ಹೊಸ ಮಡಕೆ ತೆಗೆದುಕೊಳ್ಳುವುದು, ಹಬ್ಬಕ್ಕೆ ಹೇಳುವುದು, ಕೊಂಡ ತೆಗೆಯುವುದು, ಗುಡಿಯ ಶೃಂಗಾರ, ಬೋರೆ ದೇವರ ಬಸವ, ಹಬ್ಬದ ದಿನದ ಊರಿನ ಸಂಭ್ರಮ ಹೋಮ ಮಾಡಿಸುವುದು, ಕೊಂಡೆ ಬಂಡಿ ಮೆರವಣಿಗೆ ಪತ್ತಿನ ಸೇವೆ, ಮನೆಗೊಂದು ಕೊಂಟು ಹಾಕುವುದು, ಹಬ್ಬದ ರಾತ್ರಿ, ಮೀಸಲು ನೀರು ತರುವುದು, ಈರರ ಕುಣಿತ, ಬೋರೆ ದೇವರ ವಿಗ್ರಹದ ಅಲಂಕಾರ, ಬೋರೆ ದೇವರ ಪೂಜೆ, ಗುಡ್ಡನನ್ನು ಕರೆಯುವುದು, ಗುಡ್ಡನ ವಿಶೇಷ ಉಡುಪು, ಲಿಂಗದಿರಯ್ಯ, ಬಾಯಿ ಬೀಗ, ಪೂಜೆ ಎತ್ತುವುದು, ಕೊಂಡದ ಸಿದ್ಧತೆ, ಕೊಂಡದ ಪ್ರದಕ್ಷಿಣೆ, ಎಡೆಯಿಡುವುದು, ಕೊಂಡ ಹಾಯುವುದು, ದೇವರು ಕೊಂಡ ಆಯ್ದ ಮೇಲೆ, ಧೂಪ ಹಾಕಿಸುವುದು, ಪೂಜೆ ಬಿಚ್ಚುವುದು, ಕೊಂಡ ಮುಚ್ಚುವುದು. ೩.ಯುಗಾದಿಯಂದು ಹೋಳಿಗೆ, ಪರ–ಪೂಜೆ, ಬೋರೆ ದೇವರ ಪದಗಳು, ಸಂಸಾರಿ ಬೋರೆ ದೇವರು, ಉಪ ಸಂಹಾರ, ಈ ಅಭ್ಯಾಸದ ಕೊನೆಯಲ್ಲಿ ೫೩ ಅಡಿಟಿಪ್ಪಣಿಗಳಲ್ಲಿ ಹಲವು ಬಗೆಯ ವಿವರಗಳನ್ನು ನೀಡಲಾಗಿದೆ. ಅನುಬಂಧದಲ್ಲಿ ಬೋರೆ ದೇವರ ಪದಗಳು ಎಂಬ ೯೨ ತ್ರಿಪದಿಗಳಿವೆ. ಅರ್ಥಕೋಶ ಇದೆ. ಪದಗಳನ್ನು ಹೇಳಿದವರ ವಿವರಗಳಿವೆ.

೧೫೨೯. ಬ್ರಹ್ಮಗಿರಿ

ಸಂ: ಎಸ್.ವೈ. ಸೋಮಶೇಖರ್, ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಮೊ.ಮು: ೨೦೧೦; ಪು: ೧೪+೧೪೭+೮=೧೬೯; ಡಿಮ್ಮೈ ೧/೮

ಈ ಗ್ರಂಥದಲ್ಲಿ ಹನ್ನೊಂದು ಅಧ್ಯಾಯಗಳಿದ್ದು ಅವುಗಳಲ್ಲಿ ಎರಡು ಜಾನಪದಕ್ಕೆ ಸಂಬಂಧಿಸಿವೆ: ೧.ವೀರಗಲ್ಲು–ಮಾಸ್ತಿಕಲ್ಲುಗಳು– ಟಿ. ತಿಪ್ಪೇಸ್ವಾಮಿ ಮರಿಕುಂಟೆ ೨.ಜನಪದ ಸಾಹಿತ್ಯ– ಡಿ.ಎಸ್. ತಿಪ್ಪೇಸ್ವಾಮಿ.

೧೫೩೦. ಬ್ರಹ್ಮದೇಶದ ಜಾನಪದ ಕಥೆಗಳು

ಲೇ: ಪಿ. ವಿಜಯ ಕುಮಾರ; ಪ್ರ: ಪ್ರತಿಭಾ ಗ್ರಂಥಮಾಲೆ, ಧಾರವಾಡ; ಮೊ.ಮು: ನಮೂದು ಇಲ್ಲ. ಪುನರ್ ಮುದ್ರಣ: ೧೯೮೪; ಪು: ೨೪; ಕ್ರೌನ್ ೧/೮

ಆರು ಕತೆಗಳಿವೆ: ೧.ಬಂಗಾರದ ಕಾಗೆ ೨.ಅಸೂಯೆ ೩.ನಾಲ್ವರು ಕಿವುಡರು ೪.ಪ್ರೊಫೆಸರ್ ಬೆಕ್ಕುರಾಯ ೫.ಮರಿ ಪುಟ್ಟಣ್ಣನ ಸಾಹಸ ೬.ಪಣ ಸಾಧನೆ

೧೫೩೧. ಬ್ರಹ್ಮೋತ್ತರ ಕಾಂಡದೊಳಗಣ ಯಕ್ಷಗಾನ ಭದ್ರಾಯು ಚರಿತ್ರೆ

ಲೇ: ನಮೂದು ಇಲ್ಲ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು: ೧೯೩೨; ಪುಟ ೨+೬೪=೬೬; ಕ್ರೌನ್ ೧/೮

ರಾಗ ತಾಳ ಛಂದೋ ಸಹಿತದ ಕಾವ್ಯ.

ಭ

೧೫೩೨. ಭಕ್ತ ಮಾರ್ಕಂಡೇಯ

ಸಂ: ಎಂ.ಟಿ. ಧೂಪದ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು; ಮೊ.ಮು: ೧೯೮೩; ಪುಟ ೮+೧೧೨=೧೨೦; ಡೆಮ್ಮಿ ೧/೮

ಮೂಡಲಪಾಯದ ದೊಡ್ಡಾಟ ಎಂಬ ಅಡಿಬರಹ ಇದೆ. ಹಂಪ ನಾಗರಾಜಯ್ಯ ಅವರ ಮುನ್ನುಡಿ ಇದೆ.

೧೫೩೩. ಭಗವತೀ ಆರಾಧನೆ–ಒಂದು ಅಧ್ಯಯನ

ಲೇ: ಅಮೃತ ಸೋಮೇಶ್ವರ; ಪ್ರ: ಪ್ರಕೃತಿ ಪ್ರಕಾಶನ, ಕೋಟೆಕಾರು, ದ.ಕ.; ಮೊ.ಮು: ೧೯೯೮; ಪು: ೩೧೪; ಡೆಮ್ಮಿ ೧/೮

ಆರು ಅಧ್ಯಾಯಗಳಿವೆ: ೧.ಭಗವತೀ ಪುರಾಣ ಸಂಹಿತೆ ೨.ಭಗವತಿಗಳೊಂದಿಗಿನ ಚಾಮುಂಡಿಯರು ೩.ಪುರುಷ ದೈವಗಳು ೪.ಹನ್ನೊಂದು ಸ್ಥಾನ ಘಟಕಗಳು ೫.ವಾರ್ಷಿಕ ಆಚರಣಾತ್ಮಕ ಆವರ್ತನ ೬.ಇತರ ಅನುಷ್ಠಾನ ವಿಧಿಗಳು. ಪ್ರಾರಂಭದಲ್ಲಿ ಭಗವತೀ ಆರಾಧನೆ ಎಂಬ ಪ್ರಸ್ತಾವನೆ ಇದೆ. ಕೊನೆಯಲ್ಲಿ, ಭಗವತೀ ಸೂತ್ರಗಳು, ಮುನ್ನೋಟ ಇವೆ. ನಡುವೆ ಚಿತ್ರಗಳು ಎಂಬ ಭಾಗದಲ್ಲಿ ಬಣ್ಣದ ಹಾಗೂ ಕಪ್ಪು ಬಿಳುಪಿನ ಹಲವು ಫೋಟೋಗಳಿವೆ. ಅನುಬಂಧದಲ್ಲಿ ಅಡ್ಕ ಭಗವತೀ ಕ್ಷೇತ್ರದ ವರ್ಷಾವಧಿ ಜಾತ್ರೆ ಕಾರ್ಯನಿರೂಪಣೆ: ಇದಕ್ಕೆ ಆವರಣದಲ್ಲಿನ ವಿವರಣೆ: ಇದು ಗ್ರಾಂಥಿಕ

ಮಲೆಯಾಳದಲ್ಲಿರದೆ, ಸ್ಥಳೀಯ ಭಾಷಾ ಸ್ವರೂಪದಲ್ಲಿದೆ. ಆದರೆ ಶೈಲಿ ವಿಶಿಷ್ಟ್ಯವಾಗಿದೆ, ಪ್ರಮಾಣ ವ್ಯವಸ್ಥೆ: ೧೮೯೩ರ ಒಂದು ದಾಖಲೆ ಪತ್ರ: ಯಥಾನಕಲು ಇವೆ.

೧೫೩೪. ಭಜನೆ ಹಾಡುಗಳು

ಸಂ: ಜಯಲಕ್ಷ್ಮೀ ಸೀತಾಪುರ; ಪ್ರ: ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–೫೬೦೦೦೨; ಮೊ.ಮು: ೨೦೦೯ ಪು: ೪೬+೪೫೨=೪೯೮; ಡಿಮ್ಮೈ ೧/೮

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆಯ ೨೬ನೆಯ ಸಂಪುಟ. ಈ ಸಂಕಲನದಲ್ಲಿ ೨೨೬ ಹಾಡುಗಳಿವೆ: ೧.ಸತ್ಯವೆಂಬುದೆ ಹುಟ್ಟು ೨.ವಿಧದಿ ಬಳಲಿಪುದು ತರವೆ? ೩.ಎತ್ತಬಾರದು ಜನ್ಮವ ೪.ನಾನಿತ್ತೆಳೆದರೆ ತಾನೆತ್ತಲೆಳೆವುದು ೫.ಶಿವ ತಂದಿಕ್ಕಿದ ಬೇಗೆ ೬.ಸಾಧು ಸಜ್ಜನರ ಸಂಘ ಬೇಕು ೭.ಲೇಸು ಸುಖವ ಕಾಣೇ...೮.ಪಾಪದಿಂದ ಸತ್ಯಜ್ಞಾನ ಮಾಯ ೯.ರಕ್ಷೆ ಇಲ್ಲದ ಪಕ್ಷಿ ಹಾರುವುದೆ? ೧೦.ಭಾಗ್ಯ ಉಂಟೆಂದು ಹಿಗ್ಗಿ ಕೆಡಬೇಡ ೧೧.ಸೂತ್ರವು ಹರಿಯಿತು ಆಟವು ನಿಂತಿತು ೧೨.ಹುಡುಕಾಡಿದಲ್ಲೊ ತಮ್ಮ ೧೩.ಕೇಳಲೇನದು ಫಲವಿಲ್ಲ ೧೪.ನೂರೆಂಟು ನಾಯಿಗಳು ಬೊಗಳಿದರೇನು ೧೫.ಅರೆಬರೆ ಮೋಹಕ್ಕಾಗಿ ಹರಿಭಜನೆ ಮಾಡೋದ ಬಿಡಿ ೧೬.ಲಿಂಗನ ಗುಡಿಯೊಳು ಕೆಂಡ ಬೆಳಗುತಿದೆ ೧೭.ಚಂದಕೆ ತಂದೆನಾ ನೀರಿಗೆ ಬಂದೆನಾ ೧೮.ಗಡಿಬಿಡಿ ಸಂಸಾರ ದೂಡೋಣ ೧೯.ಎನ್ ಕೊಡ ಎನ್ ಕೊಡವ ೨೦.ಹೊನ್ನು ಕೊಟ್ಟರು ತೀರದು ೨೧.ಮನೆ ಮನೆ ತಿರುಗಬೇಡಮ್ಮ ಜ್ಞಾನವಂತರ ಸೇವೆ ಮಾಡು ೨೨.ನಾಯಿ ಎಂದರೆ ನಾಯಿಯಲ್ಲ –ಜ್ಞಾನವಿಲ್ಲದ ಹೇಸನಾಯಿ ೨೩.ಕುಪಿತ ಬುದ್ಧಿಯ ತ್ಯಜಿಸೊ ೨೪.ಗುರುವೆಂಬ ನಾಮವ ಧರಿಸಿ ೨೫.ನರರಿಗೇತಕ್ಕೆ ಪಾಶ ೨೬.ಕುರುಹಿಲ್ಲದು ಶೂನ್ಯವೆಲಾ! ೨೭.ಇಕ್ಕಲಾರದ ಕೈ ಎಂಜಲು ೨೮.ಸೂರ್ಯ ಚಂದ್ರರ ಸಾಕ್ಷಿಗಿಟ್ಟವರೆ ೨೯.ಗುರು ಬಂದ ಹರ ಬಂದ ಶಿವ ಬಂದ ೩೦.ಎಲ್ಲಿ ನೋಡಿದರಲ್ಲಿ ಶಿವನ ಸೊಲ್ಲು ೩೧.ಮಾತು ಮಾತಿಗೆ ಶಂಕರ ೩೨.ನರನೆಂದು ತನ್ನ ಪೇಳುವನೊ ಕುರಿಯಂತೆ ತಾ ಸಾಯುವನೊ ೩೩.ಕೇಳ್ ಹಡೆದವ್ವ ೩೪.ಘಾಸಿಪಡಿಸಿ ಹೋದ ಎನ್ನ ಪ್ರಾಣಕಾಂತ ೩೫.ಕುಂತೆ ಬೊಂತೆಗೆ ಚಿಂತೆ ೩೬.ಲಕ್ಷಕೆ ಸಿಲುಕದು ನಮ್ಮೂರು ೩೭.ಭಂಗವೇಕೆ ಪಡುವೆ ನಿಸ್ಸಂಗಿಯೊಗೋಮನವೇ ೩೮.ಎಲ್ಲೆಲ್ಲಿಯೂ ಎಡೆಯಿಲ್ಲದ ಮೂರ್ತಿಗೆ ಕಲ್ಲಿನ ಮನೆಯಿಂದೇನು ೩೯.ಅರಿವೆಂಬ ಸಾಮಗ್ರಿಗೂಡಿ ೪೦.ಬಿಡು ಬಿಡಿನ್ಯಾತ ಜ್ಞಾನ ೪೧.ತನು ಮನ ಧನವು ನಿನ್ನ ದಯ್ಯ ೪೨.ಧನವು ಧಾನ್ಯ ನಿನ್ನದಲ್ಲ! ೪೩.ಯಾಕೆ ಹೊಡೆದಾಡ್ತಿ ತಮ್ಮ ೪೪.ಬಯಲಿಗೆ ಬಯಲಾಯ್ತು ನಮ್ಮ ಮನೆ ೪೫.ನಾಳೆ ನೋಡು ಎನ್ನಬೇಡಣ್ಣ ೪೬.ಗುರಿ ಕಂಡು ನೀ ಬಾಳೋ ಕುರಿಯೋ ೪೭.ಇಲ್ಲದಂಗಡಿಯೊಳು ಯಾತರ ವ್ಯಾಪಾರ ೪೮.ನಿನಗ್ಯಾರು ಹೇಳಿದರು ಜಾಣ ೪೯.ಎಲ್ಲಾ ಶಿವನಿಂದೆ ೫೦.ಬೇರಿಲ್ಲ ಕಾಣಿರೋ ೫೧.ಗುರು ಧ್ಯಾನ್ಯವಿಲ್ಲದ ನರಜನ್ಮ ವ್ಯರ್ಥ ೫೨.ಎಷ್ಟು ಪುಣ್ಯವ ಮಾಡಿತೊ ೫೩.ಮಂಗಳಾಂಗಿ ೫೪.ಎನಗೆ ಮೋಕ್ಷವೀಯು ೫೫.ಎಲ್ಲರಂತಲ್ಲ ನನಗುರುವು

೫೬.ಭಜನಾ ಲಾವಣಿ(ಗುರುವಿನ ಮೇಲೆ) ೫೭.ಅವ ದೇವಗುರು ೫೮.ಗುರುಸ್ಮರಣೆ ನಿಜ ಪದವಿಯೆಂದಾ! ೫೯.ಓಂ ಗುರು ರೇಣುಕಾಚಾರ್ಯ ೬೦.ಅಷ್ಟಾವರ್ಣ ಆಚಾರ ೬೧.ನೀನಿಲ್ಲದೆ ಗತಿ ಒಬ್ಬರಿಲ್ಲ ೬೨.ನೆನೆಮನವೆ ೬೩.ಭಾವವಕೂಡಿ ತ್ವರಿತದಂದಲಿ ೬೪.ಎಂದಾದರೊಂದು ದಿನ ೬೫.ಧೀನ ರಕ್ಷಕ ಗುರುವೆ ೬೬.ಎತ್ತ ಹೋಗುತೀಯ ತಂಗಿ ೬೭.ಬಾಗಿಲು ತೆರೆದಿದೆ ನೋಡಣ್ಣ ೬೮.ಗುರು ಮಾರ್ಗವನು ಸಾರಿ ೬೯.ನಿಷ್ಕಾಮದಿಂರು ಮನವೆ ೭೦.ಆಚಾರಲಿಂಗ ೭೧.ಮದನನುರಿಹಿದಾತ ನೀತ ೭೨.ಮುಕ್ತಿಯ ಬೀಜಕೆ ಪರಶುವಿದು ೭೩.ಕೃಷ್ಣನಾಮ ಸ್ಮರಣ ೭೪.ಸತ್ಯಸಾಯಿ ಭಜನೆ ೭೫.ಸದಾನೆನೆ ಸತ್ಯಸಾಯಿಯು ೭೬.ಶಿವನೆಲ್ಲವನೊ ೭೭.ನಾನೆಂಬುದ ಬಿಡಿರಿ ೭೮.ದೇವಾಮೃತ ಪಾನವ ಮಾಡಿಸಿದೆ ೭೯.ಪೂಜೆ ಮಾಡುವ ಮನಕೂಡೊ ಶಂಬೋ ೮೦.ಕುಲಚಲದಭಿಮಾನ ಕೋಪದಲಿ ಮುಳುಗುತ ೮೧.ಜನನ ಮರಣ ದುಃಖವ ಹರಿಸಿದೆ ೮೨.ಮಮತೆಯೆಂಬ ಮುಸುರೆಯನ್ನು ವರಿಸು ಬಿಡಮ್ಮ ೮೩.ಒಳಗೊರಗೆನ್ನದೆ ಹೊಳೆಯುವ ಜ್ಯೋತಿ ೮೪.ಆತ್ಮದೊಳಿಹ ಕಾಂತಿ ೮೫.ಅಂಗವ ಲಿಂಗದೊಳ್ ಬೆರಸೋ ೮೬.ಅಂಗವ ಲಿಂಗದೋಳ್ ಬೆರಸೋ ೮೭.ವಾದಬೇದ ದೂರನಾದ ಗುರುವೇ ೮೮.ಜಪವನೆ ಮಾಡಿಸಿದೆ ಮನವನ ಮಾಡಿಸಿದೆ ೮೯.ಅಮೃತವ ನೀಡುವೆ ೯೦.ಪಂಚನಾದದೊಳಗೆ ಬೆರತು ೯೧.ಅಂತರದೊಳಿರ್ಪುದು ಸಂತೆ ೯೨.ಒಂದೇ ಭಾವ ಒಂದೇ ಮನಸು ಪ್ರಭೆಯೊಳು ಸೇರಿತಮ್ಮ ೯೩.ಮನದಾಣೆಗೆ ಆಗೋಚರನೆ ೯೪.ಮಾತಾಡ್ ಮಾತಾಡ್ ಲಿಂಗವೇ ೯೫.ಹಿಂದೆ ಸುಕೃತವ ಮಾಡಿದೆ ೯೬.ಬಿಟ್ಟಕಡೆಗೆ ಒಡುವುದುಂಟೆ? ೯೭.ಈಶನ ನೆನೆಯಂದನೊ ೯೮.ಬೆರಳೊಳು ಜಪಮಣಿ ಎಣಿಸಿದರಿಲ್ಲ ೯೯.ಹಮ್ಮಿನ ತನಗುಣ ನೆಲ್ಲುವ ಬಿಡಿಸಿದ ಚಿನ್ಮಯರೂಪನು ೧೦೦.ನೀವು ಕಾಣಿರಮ್ಮ ಪಾದಪೂಜೆ ೧೦೧.ವಿಚಾರ ಮಾಡೆ ತಂಗ್ಯಮ್ಮ ೧೦೨.ಸ್ತುತಿ ೧೦೩.ಸದ್ಗುರುವರನ ಪ್ರಾರ್ಥನೆ ೧೦೪.ಕರೆಕರೆ ಸಂಸಾರ ತರವಲ್ಲ ೧೦೫.ಶಿವ ತತ್ವವಾಗಿಹುದು ೧೦೬.ಮೂರು ಬಿಟ್ಟು ಹೋದ ಮೇಲೆ ೧೦೭.ತನುವಿನೊಳಗೆ ತನುವಿಟ್ಟಿರಬೇಕು ೧೦೮.ಬಂಟ ಹುಡಗನು ಒಬ್ಬ ಗಂಟುಬಿದ್ದನು ೧೦೯.ಏನು ಹೇಳಲಿ ನಿನ್ನ ಕೌತುಕವ ೧೧೦.ಚಿಕ್ಕ ಪ್ರಾಯದೆಣ್ಣು ನಾನು ೧೧೧.ಶಿಶುನಾಳದೀಶನ ಮೋಕ್ಷವೆಂಬ ಸೇಳು ೧೧೨.ಮಂಗಳ ೧೧೩.ಎಂಥಾ ಮಾನವ ಜನ್ಮ ೧೧೪.ಶರೀರವೆಂತೆಂಬುವ ೧೧೫.ಹುವ್ವ ತರುವರ ಮನೆಗೆ ೧೧೬.ನಂಬ ಬೇಡವೊ ೧೧೭.ಮರೆಯಬೇಡ ಮನವೆ ೧೧೮.ಎಲ್ಲರನು ಸಲಹುವನು ೧೧೯.ವೈರಾಗ್ಯ ತತ್ವ ೧೨೦.ನೀ ಎನ್ನ ಕೈ ಬಿಡುವರೆ ಕೃಷ್ಣ ೧೨೧.ಎಲ್ಲಾ ರೂಪವು ೧೨೨.ಮಾನವ ಜನ್ಮ ದೊಡ್ಡದು ೧೨೩.ಎಲ್ಲಾ ಬಲ್ಲೆವೆಂಬುವಿರಲ್ಲ ೧೨೪.ಕರುಣಾಸಾಗರ ೧೨೫.ಕಂಡೆನವು ನಾನೊಂದ ಮುತ್ತು ೧೨೬.ಅಂಬಾರದೊಳಗೊಂದು ೧೨೭.ಮರ್ಮವಾತಿಳುಹಿಸು ೧೨೮.ಬಾದೆಪಡಬೇಡ ೧೨೯.ಗುರವಿಗೆ ನೆಲೆಯಿಲ್ಲ ಗುಡ್ಡಕ್ಕೆ ನೆರಳಿಲ್ಲ ೧೩೦.ಮರ್ತ್ಯದೊಳಗೆ ನಮಗೇನು ಭಯವಣ್ಣ ೧೩೧.ತನ್ನಂತೆ ಮಾಡಿದಾ ೧೩೨.ನಾಮುತಿಯೊಳು ಮಾಡುವೆ ೧೩೪.ಕೃಪೆಯಿಡು ಬೇಗ ಹರಿಯೇ ೧೩೫.ಅಂಬಾರದೊಳಗೊಂದು ೧೩೬.ಕಲಹೆ ಬೇಡೆಂದ ೧೩೭.ನೆನೆ ಅನುದಿನ

೧೩೮.ಸಾಧನೆಗೈಯ್ಯ ಬೇಕಯ್ಯ ೧೩೯.ನಾನೇನು ಬಲ್ಲೆನು ೧೪೦.ಯಾವ ಜನ್ಮದ ಪಾಪ ೧೪೧.ನೋಡ ಘನಗುರು ಪಾದವ ೧೪೨.ನಾಯಿಗೆ ನರಕವು ತಪ್ಪೀತೆ? ೧೪೩.ಕೋಟಿ ಜನ್ಮ ಸುಕೃತ ೧೪೪.ಕೃಪೆಗೆ ದೂರನಾಗಿ ೧೪೫.ಬಿಡಿ ಬಿಡು ರಾಜನ ಪೂಜೆಯು ೧೪೬.ಫಲವೇನದರಿಂದ ೧೪೭.ದೇಹದೊಳಗತಿ ಘೋರ ೧೪೮.ಎರಡೆಂಬುವನಿಗೆ ಕಡೆಯಿಲ್ಲ ೧೪೯.ಜ್ಞಾನವೊಂದೇ ಸಾಕು ೧೫೦.ರಾಜರಾಜೇಶ್ವರ ಸ್ತೋತ್ರ ೧೫೧.ನೇಮದಿಂದ ಪ್ರಾಣಾಯಮ ಚಕ್ರವಾತ ೧೫೨.ದತ್ತಾತ್ರೇಯ ಆತ್ರೇಯ ಪುತ್ರ ೧೫೩.ಗೋಪಿಗೆ ಒಲಿದ ಗೋಪಾಲ ವಸುದೇವ ಸುತದೇವ ೧೫೪.ನರನಾರಾಯಣ ದೇವನೆ ೧೫೫.ನೀಲಮೇಘಶ್ಯಾಮ ಕೃಷ್ಣ ೧೫೬.ಯಶೋದ ನಂದನ ಶೋಧನೆ ತಾಳಲಾರೆ ೧೫೭.ಶ್ರೀ ಹರೇ ಕೃಷ್ಣ ರಾಧಾ ಕೃಷ್ಣ ೧೫೮.ಜಗನ್ನಾಥ ಜಗದೀಶ ೧೫೯.ಅನಂತ ಶಯನ ಆಪದ್ಬಾಂಧವ ೧೬೦.ನನಗೆ ನೀನೇ ಗತಿ ಸ್ವಾಮಿ ೧೬೧.ದ್ವಾರಕಾಧೀಶನ ನೋಡುವ ಮುರಹರ ಮುಕುಂದ ಮಾಧವಾ ೧೬೨.ಭಕುತರ ವಶನೆ ೧೬೩.ಜಗಮೋಹನ ಜಗದೀಶನ ೧೬೪.ಮಾಧವಾಮಧುಸೂದನ ೧೬೫.ಶ್ಯಾಮಸುಂದರ ಮದನಗೋಪ ೧೬೬.ಕಾವೇತಿ ತಟವಾಸಿ ೧೬೭.ಸನಕ ಸನಂದರ ಶಾಪವ ೧೬೮.ಮಾಧವಾ! ಮತ್ಸ್ಯವತಾರಾ! ೧೬೯.ಕೃಷ್ಣ ಕೃಷ್ಣ ಅನ್ನಬೇಕು ೧೭೦.ಶ್ರೀಕೃಷ್ಣ ಜೈ ಕೃಷ್ಣ ೧೭೧.ಶ್ರೀ ಯದುವಂಶನೇ ೧೭೨.ಶ್ರೀಕೃಷ್ಣ ಗೋಪಾಲ ಮುಕುಂದನ ೧೭೩.ಶ್ರೀಮಾತಾ ಮಾನಿನಿ ಮಹೇಶ್ವರ ೧೭೪.ನನ್ನದೇನು ಇಲ್ಲ ಕೃಷ್ಣ ೧೭೫.ನೇಮದಿಂದ ಪ್ರಾಣಾಯಾಮ ೧೭೬.ಬಾಲಗೋಪಾಲನನ್ನು ಭಜಿಸಿ ೧೭೭.ಮನಕೆ ಮೈಗೆ ಬಂಧವಿಲ್ಲ ೧೭೮.ಅರ್ಜುನಗೆ ಗುರುವಾದ ೧೭೯.ಗತಿ ನೀನೆ ನನ್ನ ಮತಿ ನೀನೆ ೧೮೦.ಚಿತ್ರ ಚಿತ್ರ ಅವತಾರ ಚಿತ್ತದಲ್ಲಿ ನೀನೇ ಸ್ವಾಮೀ ೧೮೧.ಕಾಲಿಗೆ ಗೆಜ್ಜೆ ಕಟ್ಟಿ ೧೮೨.ಓಡಬೇಡ ಮುದ್ದುಕೃಷ್ಣ ೧೮೩.ಕದ್ದ ಬೆಣ್ಣೆ ಮೈಗೆ ಒಳಿತಲ್ಲ ೧೮೪.ಮುದ್ದುಕೃಷ್ಣ ನಿದ್ದೆಮಾಡು ೧೮೫.ಚಾಡಿನ ಮಾತಿನ ಚಡಿಯ ಏಟನು ೧೮೬.ಕೊಳಲನೂದಬೇಡ ಕೃಷ್ಣ ೧೮೭.ಕಸ್ತೂರಿ ತಿಲಕ ತಿದ್ದುವೆ ಕಾಲಿಗೆ ಗೆಜ್ಜೆ ಕಟ್ಟುವೆ ೧೮೮.ದೃಷ್ಟಿ ತೆಗಿಯಿರಮ್ಮಾ ೧೮೯.ಮೈನವಿರೇಳುವ ಕೃಷ್ಣನ ಕಥೆಯನು ೧೯೦.ಗೋಪ ಗೋಪಿಯರೇ ಓಡುತ ಬನ್ನಿ ೧೯೧.ಕಣ್ಣಾ ಮುಚ್ಚೇ ಕಾಡೇ ಗೂಡೇ ೧೯೨.ಪೂರ್ಣಾವತಾರ ಕೃಷ್ಣಾವತಾರ ೧೯೩.ಧರ್ಮ ಸಂಸ್ಥಾಪಕ ಕೃಷ್ಣಾ ಕೃಷ್ಣಾ ೧೯೪.ಮನೆ ಮನೆಗೆ ಹೋಗುವೆ ಮನಬಿಚ್ಚಿ ಕೂಗುವೆ ೧೯೫.ಗೋವಿಂದ ಬಾರೋ ಗೋಪಾಲ ಬಾರೋ ೧೯೬.ಅಂಬೆಗಾಲ ಕೃಷ್ಣನನ್ನು ಎತ್ತಿ ಮುದ್ದಾಡುವಾ ೧೯೭.ನನ್ನ ಹೃದಯ ಬಡಿತ ಶಬ್ದಕತೆ ೧೯೮.ಪಾದ ನಾ ನಂಬಿದೆ ಕೃಷ್ಣನ ಪಾದ ೧೯೯.ಕೃಷ್ಣನಾ ನೋಡಲೆಂದು ಶಿವದೇವನೋಡಿ ಬಂದ ೨೦೦.ಹರಿಯೇ ನಿನ್ನ ಮಾಯೆ ೨೦೧.ವಿಶ್ವರೂಪ ಧರಿಸಿದ ಕೃಷ್ಣಾ ಕೃಷ್ಣಾ ೨೦೨.ನಂದ ಗೋಕುಲ ಬಾಲ ಬೃಂದಾವನಕೆ ೨೦೩.ಕೃಷ್ಣ ದೇವನೇ ನನ್ನ ಕಾವನೇ ೨೦೪.ಗೋವಿಂದ ಜೈಜೈ ಗೋಪಾಲ ಜೈ ೨೦೫.ಮಧುರಾ ನಗರವು ಭೂ ವೈಕುಂಠವು ೨೦೬.ಬ್ರಹ್ಮಕುಂಡದಲ್ಲಿ ಕಂಡೆ ಸಚ್ಚಿದಾನಂದನ ೨೦೭.ಕಥೆಯ ಕೇಳಿರಮ್ಮ ೨೦೮.ಮಾನವ ಜೀವವು ಗಾಳಿಲಿ ನಿಂತಿದೆ ೨೦೯.ಸುಂಟರಗಾಳಿಗೆ ಸಿಲುಕಿದ ಮನಸೇ ೨೧೦.ವಿಧವಿಧ

ಬೊಂಬೆಯ ೨೧೧.ವಿನಾಶ ದೆಡೆಗೆ ಪಯಣ ಬೇಡ ಮಾನವ! ೨೧೨.ಓಂಕಾರ ಮಂತ್ರವು ಸುತ್ತಲೂ ಸುತ್ತುತ್ತಿದೆ ೨೧೩.ಆರತಿ ಬೆಳಗಿರಿ ದಾರಿ ದೀಪನಿಗೆ ೨೧೪.ಶ್ರೀ ಜಯಲಕ್ಷ್ಮೀ ಮಾತೃ ಪೂಜಾವಿಧಿಃ ೨೧೫.ಶ್ರೀ ಜಯಲಕ್ಷ್ಮೀ ಅಷ್ಟೋತ್ತರ ಶತನಾಮಾವಳಿ ೨೧೬.ಶ್ರೀ ಗಣಪತಿ ಸಚ್ಚಿದಾನಂದ ವಿರಚಿತ ಶ್ರೀ ಜಯಲಕ್ಷ್ಮೀ ಮಾತೃ ಸುಪ್ರಭಾತಮ್ ೨೧೭.ಪ್ರಾರ್ಥನೆ ೨೧೮.ಮೇಲು ಮಂಟಪದ ಪದ ೨೧೯.ಕೊಂಡ್ಯಾರ್ಯ ಗುರುವಿನ ಆತ್ಮ ಚರಿತ್ರೆ ೨೨೦.ಮುತ್ತಿನಾರಿದು ೨೨೧.ಓಂ ಯೋಗಿ ವರ್ಯ ೨೨೨.ತೆರೆದ ಬಾಗಿಲ ಸುಂಕ ೨೨೩.ಕಂದ-೧ ೨೨೪.ತತ್ವ ೨೨೫.ಭಾಗ-೨ ಕ್ರೈಸ್ತರ ಭಜನಾ ಗೀತೆಗಳು ಕ್ರೈಸ್ತ ಧರ್ಮಸಾರ ೨೨೬.ಪ್ರಾರ್ಥನಾ ಗೀತೆಗಳು.

೧೫೩೫. ಭದ್ರೇರು ಹಸೆಯ್ಯ ಬರೆದಾರ್ರೆ

ಸಂ: ಸಾಹಿತ್ಯಾನಂದ (ಅ.ಕೊಟ್ರಪ್ಪ); ಪ್ರ: ನಿವೇದಿತ ಪ್ರಕಾಶನ, ಸುಬ್ರಹ್ಮಣ್ಯನಗರ, ಬೆಂಗಳೂರು-೧೦; ಮೊ.ಮು: ೧೯೮೩; ಪುಟ ೭೨; ಕ್ರೌನ್ ೧/೮

ಸೋಬಾನೆ ಪದಗಳ ಸಂಗ್ರಹ ಎಂಬ ಅಡಿಬರಹ ಇದೆ. ೨೭ ಹಾಡುಗಳಿವೆ. ಅನುಬಂಧದಲ್ಲಿ ಹೊ.ಮ. ಸೋಮಕ್ಕ ಎಂಬುವವರು ಸಂಗ್ರಹಿಸಿರುವ ಇನ್ನೂ ಐದು ಹಾಡುಗಳಿವೆ. ಅದಾದ ಮೇಲೆ, ಸೋಬಾನೆ ಪದಗಳನ್ನು ಹಾಡಿದವರ ಬಗ್ಗೆ ಕಿರು ಮಾಹಿತಿ, ಈ ಸಂಗ್ರಹದ ಪದಗಳಲ್ಲಿ ಬಂದಿರುವ ಆಭರಣಗಳು ಮತ್ತು ಊರುಗಳು, ಶಬ್ದಕೋಶ, ಇವೆ. ಪ್ರಾರಂಭದಲ್ಲಿ ಪ್ರಸ್ತಾವನೆ ಇದೆ.

೧೫೩೬. ಭಾಗವಂತಿಕೆ ಪದಗಳು

ಸಂ: ಹಿರಿಯಣ್ಣ ಮೇಟಿಕೆರೆ; ಪ್ರ.: ಜಾನಪದ ಪ್ರಕಾಶನ, ಮೇಟಿಕೆರೆ, ಚನ್ನರಾಯಪಟ್ಟಣ ತಾಲೂಕು; ಪುಟ ೮+೩೨+೧೨೦=೧೬೦, ಡಿಮ್ಮೈ ೧/೮

ಮೂರು ಭಾಗಗಳನ್ನಾಗಿ ಈ ಹಾಡುಗಳನ್ನು ವಿಂಗಡಿಸಲಾಗಿದೆ. ೧.ರಾಮಾಯಣ ೨.ರಾಮಾಯಣದ ಬಿಡಿಭಾಗಗಳು ೩.ಇತರ ಬಿಡಿಪದಗಳು. ವಕ್ತೃಗಳು ಹಾಗೂ ಮಾಹಿತಿ ನೀಡಿದವರ ಪಟ್ಟಿ ಇದೆ. 'ಪರಿಚಯ' ಎಂಬ ಜೀ.ಶಂ. ಪರಮಶಿವಯ್ಯ ಅವರ ಮುನ್ನುಡಿ ಇದೆ. ೨೩ ಪುಟಗಳಷ್ಟು ವಿಸ್ತಾರವಾದ ಸಂಪಾದಕರ ಪ್ರಸ್ತಾವನೆ ಇದೆ.

೧೫೩೭. ಭಾಗವಂತಿಕೆ ಮೇಳ

ಸಂ: ಜೀ.ಶಂ. ಪರಮಶಿವಯ್ಯ; ಪ್ರ: ಸಾಹಿತ್ಯ ಸದನ, ೨೫, ಅಧ್ಯಾಪಕರ ನಿವಾಸ, ಮಾನಸಗಂಗೋತ್ರಿ, ಮೈಸೂರು-೬; ಮೊ.ಮು: ೧೯೭೪; ಪುಟ ೧೨೮; ಕ್ರೌನ್ ೧/೮

ಭಾಗವಂತಿಕೆ ಮೇಳದಲ್ಲಿ ಬಳಸಲ್ಪಡುತ್ತಿದ್ದ ಹಾಡುಗಳ ಸಂಕಲನ: ಇಲ್ಲಿನ ಹಾಡುಗಳನ್ನು ಮೂರು ದಳಗಳನ್ನಾಗಿ ವಿಂಗಡಿಸಲಾಗಿದೆ: **ದಳ ಒಂದು:** ರಾಮಾಯಣ, ಸೀತಾಪತಿಯ

ಪದ, ದೊಡ್ಡ ಸೇರ್ವೆ ಪದ, ಪ್ರಹ್ಲಾದ ಚರಿತ್ರೆ, ಪ್ರಹ್ಲಾದ ಚರಿತ್ರೆಯ ಮುದ್ರಿಕೆ, **ದಳ ಎರಡು: ಬಿಡಿ ಹಾಡುಗಳು:** ಪಯಣಗತಿ, ನೀತಿ ಪದ, ಕೃಷ್ಣನ ಪದ, ಗೊಲ್ಲರ ಹಟ್ಟಿಯಲ್ಲಿ ಹೇಳುವ ಪದ, ಈಶ್ವರನ ಪದ. **ದಳ ಮೂರು: ಗುಡಿದುಂಬಿಸುವ ಪದಗಳು:** ಗುಡಿ ಸುತ್ತ ಹೇಳುವ ಪದ, ಸರಳು, ದೊಡ್ಡ ಮಂಗಳಾರತಿ, ಮುದ್ರಿಕೆ, ತೀರ್ಥವನೊಪ್ಪಿಸುವ ಮಂಗಳಾರತಿ. ಪ್ರಾರಂಭದಲ್ಲಿ ಹತ್ತು ಪುಟಗಳಲ್ಲಿ ಮೇಳದ ಪರಿಚಯ ಲೇಖನ ಇದೆ. ಕೊನೆಯಲ್ಲಿ ಟಿಪ್ಪಣಿಗಳು, ಶಬ್ದಸೂಚಿ, ಅನುಬಂಧ, ಇವೆ.

೧೫೩೮. ಭಾಗವತ ಚಿಕ್ಕೇಗೌಡರ ಮೂಡಲಪಾಯ ಯಕ್ಷಗಾನ ಪ್ರಸಂಗಗಳು

ಸಂ: ಚಕ್ಕೆರೆ ಶಿವಶಂಕರ್; ಪ್ರ: ಸಾಗರ್ ಪ್ರಕಾಶನ, ೬೯೫, ೧೦ನೇ ಮುಖ್ಯರಸ್ತೆ, ೮೦ ಅಡಿ ರಸ್ತೆ, ವಿನಾಯಕ ಬಡಾವಣೆ, ನಾಗರಬಾವಿ ೨ನೇ ಹಂತ, ಬೆಂಗಳೂರು–೫೬೦ ೦೭೨; ಮೊ.ಮು.೨೦೧೨; ಪುಟ ೩೬೮; ಡಿಮ್ಮೈ ೧/೮

ಈ ಗ್ರಂಥದಲ್ಲಿ ಐದು ಯಕ್ಷಗಾನ ಪ್ರಸಂಗಗಳಿವೆ: ೧.ಗಯ ಚರಿತ್ರೆ ಅಥವಾ ಕೃಷ್ಣಾರ್ಜುನ ಕಾಳಗ ೨.ಸೇತು ಬಂಧನ ೩.ಕುಶ ಲವರ ಕಾಳಗ ೪.ಧ್ರುವ ಚರಿತ್ರೆ ೫.ಶ್ರೀ ವೆಂಕಟೇಶ್ವರಸ್ವಾಮಿ ಮಹಾತ್ಮೆ. ಕವಿ ಕಾವ್ಯ ವಿಚಾರವೂ ಒಳಗೊಂಡಂತೆ ಚಕ್ಕೆರೆ ಶಿವಶಂಕರ್ ಅವರ ೩೪ ಪುಟಗಳ ಪ್ರಸ್ತಾವನೆ ಇದೆ.

೧೫೩೯. ಭಾಗವತದೊಳಗಣ ಯಕ್ಷಗಾನ ಬಾಣಾಸುರನ ಕಾಳಗ

ಲೇ: ನಮೂದು ಇಲ್ಲ; ಪ್ರ; ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಎ.ಮು.೧೯೫೩; ಪುಟ ೨+೪೧=೪೩; ಕ್ರೌನ್ ೧/೮

ರಾಗ ತಾಳ ಛಂದೋ ಸಹಿತದ ಕಾವ್ಯ.

೧೫೪೦. ಭಾಗಾಯ್ತು

ಲೇ: ಸಂತೆಕಸಲಗೆರೆ ಪ್ರಕಾಶ್; ಪ್ರ: ಆದರ್ಶ ಪ್ರಕಾಶನ, ಪಂಡಿತ ತಾತಯ್ಯನವರ ಮನೆ, ಸಂತೆಕಸಲಗೆರೆ, ಮಂಡ್ಯ–೫೭೧ ೪೦೩; ಮೊ.ಮು: ೨೦೦೧; ಪುಟ ೮೨; ಡಿಮ್ಮೈ ೧/೮

ಒಂದು ಜಾನಪದೀಯ ಅಧ್ಯಯನ ಕೃತಿ ಎಂಬ ಅಡಿಬರಹ ಇದೆ. ಮೂವತ್ತು ಲೇಖನಗಳಿವೆ: ೧.ಬೇಸಾಯದ ಪ್ರಾಚೀನತೆ ೨.ಬೇಸಾಯದ ಕಲ್ಪನೆ ೩.ತೆಂಗು ೪.ಮಾವಿನ ಹಣ್ಣು ೫.ಬಾಳೆ ೬.ಹಲಸಿನ ಹಣ್ಣು ೭.ಪರಂಗಿ ಹಣ್ಣು ೮.ಕೀರೆ ಸೊಪ್ಪು ೯.ಮೆಣಸಿನ ಕಾಯಿ ೧೦.ಕುಂಬಳಕಾಯಿ ೧೧.ಸೋರೆ ಕಾಯಿ ೧೨.ಬೂದಗುಂಬಳ ೧೩.ಮೂಲಂಗಿ ೧೪.ಅವರೆಕಾಯಿ ೧೫.ಬದನೇಕಾಯಿ ೧೬.ಕಾಫಿ ೧೭.ಮೆಣಸು ೧೮.ಅಡಿಕೆ ೧೯.ವಿಳ್ಯೆದೆಲೆ ೨೦.ಅರಿಶಿಣ ೨೧.ದಾಳಿಂಬೆ ೨೨.ತೊಂಡೆಕಾಯಿ ೨೩.ನೇರಳೆ ೨೪.ಗೆಣಸು ೨೫.ಸೀಬೆಕಾಯಿ ೨೬.ಸಪೋಟ ೨೭.ಅಂಜೂರ ೨೮.ಸೀತಾಫಲ ಮತ್ತು ರಾಮಫಲ ೨೯.ಸೌತೆಕಾಯಿ ೩೦.ರೇಷ್ಮೆ.

೧೫೪೧. ಭಾನುಮತಿ ಕಲ್ಯಾಣ ಅಥವಾ ನಿಕುಂಭಾಸುರ ವಧೆ

ಲೇ: ಬವಲಾಡಿ ಹಿರಿಯಣ್ಣ ಹೆಬ್ಬಾರ್; ಪ್ರ: ಕಾವ್ಯಾಲಯ ಪ್ರಕಾಶಕರು ಮೈಸೂರು; ಮೊ.ಮು: ೧೯೫೮; ಪು: ೧೦೫; ಕ್ರೌನ್ ೧/೮

ರಾಗ ತಾಳ ಸಹಿತದ ಯಕ್ಷಗಾನ ಕಾವ್ಯ. ಬಿ.ಎಚ್. ಶ್ರೀಧರ ಅವರು ಪೀಠಿಕೆ ಬರೆದಿದ್ದು ಅದರಲ್ಲಿ ಕವಿ ಪರಿಚಯ ಕಥಾಸಾರ ನೀಡಿದ್ದಾರೆ.

೧೫೪೨. ಭಾರತದ ಜಾನಪದ ಕತೆಗಳು

ಮೂಲ: ಬೇಲಾ ತಿಸ್ಲೆಂರೋವ, ಕನ್ನಡ ರೂಪಾಂತರ: ದೇಜಗೌ; ಪ್ರ: ಐ.ಬಿ.ಎಚ್.ಪ್ರಕಾಶನ, ಗಾಂಧಿನಗರ, ಬೆಂಗಳೂರು–೯; ಮೊ.ಮು: ೧೯೭೧; ಪು: ೪+೧೦೪=೧೦೮ (ಪ್ರಾರಂಭದ ಒಂದೆರಡು ಹಾಳೆಗಳು ಹರಿದ ಲಕ್ಷಣಗಳಿವೆ); ಕ್ರೌನ್ ೧/೮

ಹದಿನಾಲ್ಕು ಕತೆಗಳಿವೆ: ೧.ಫಲಿಸಿದ ಸ್ವರ್ಗಯಾತ್ರೆ ೨.ಸಾಧು ದಂಡಕ ವಿವೇಕಿಯಾದದ್ದು ೩.ಸಲಹೆಗಾರ ವಿವೇಕಿಯೇ?೪.ಕೆಂಪು ಆಮೆಯ ಕಥೆ ೫.ಶಿಕ್ಷೆಗೆ ಗುರಿಯಾದ ಜಿಪುಣ ೬.ನಳ್ಳಿಯ ಮಾಂಸ ರುಚಿಹತ್ತಿದ ನೀರುಕೊಂಚೆ ೭.ಮೂವರು ಬುದ್ಧಿವಂತರು ೮.ಜಂಬದ ಕಪ್ಪೆ ಹಾಗೂ ಋಷಿ ಮರಿಯಾನೆ ೯.ಕುಯುಕ್ತಿಯ ಫಕೀರ ೧೦.ದೊರೆಯ ಮಗ ಮತ್ತು ನರಿ ೧೧.ಪರ್ವತ ರಾಜ್ಯದ ರಾಜಕುಮಾರಿ ೧೨.ನಾಲ್ವರು ಗೆಳೆಯರು ೧೩.ಕೆಚ್ಚೆದೆಯ ಸಹೋದರರು ೧೪.ನಿರಾಸೆ ಹೊಂದಿದ ಹೋರಿ. ಪ್ರತಿಯೊಂದು ಕತೆಯಲ್ಲೂ ಒಂದೊಂದು ರೇಖಾ ಚಿತ್ರ ಇದೆ.

೧೫೪೩. ಭಾರತದ ಜಾನಪದ ಕಲೆ

ಲೇ: ಎನ್. ಮರಿಶಾಮಾಚಾರ್; ಪ್ರ: ಸಿ.ಎಂ.ಎನ್. ಪ್ರಕಾಶನ, ೩೩, ೧ನೇ ಕ್ರಾಸ್, ಸಂಪಂಗಿರಾಮ ನಗರ, ಬೆಂಗಳೂರು–೫೬೦ ೦೨೭; ಮೊ.ಮು: ೧೯೯೧; ಪು: ೪+೮೫=೮೯; ಚಚ್ಚೌಕಾಕಾರ (ಕ್ರೌನ್ ಉದ್ದ x ಕ್ರೌನ್ ಅಗಲ)

ಜನಪದ ಚಿತ್ರಕಲೆ ಶಿಲ್ಪಕಲೆ ವಸ್ತುಗಳು ತೊಗಲುಗೊಂಬೆ ಇತ್ಯಾದಿಗಳನ್ನೊಳಗೊಂಡ ಈ ಗ್ರಂಥದ ಒಳಪುಟಗಳಲ್ಲಿ ಈ ಶೀರ್ಷಿಕೆಗಳಿವೆ: ಪ್ರಾಚೀನಕಲೆ, ರಂಗೋಲಿ, ವಾರ್ಲಿ ಚಿತ್ರಗಳು, ಮಹಾರಾಷ್ಟ್ರದ ಚಿತ್ರಕಲೆ ಚಿತ್ರಗಳು, ಮಧುಬನಿ ಕಲೆ, ಕಾಳಘಾಟ್ ಚಿತ್ರಗಳು, ಒರಿಸ್ಸಾದ ಪಟಾ ಚಿತ್ರಗಳು, ದಕ್ಷಿಣದಲ್ಲಿ, ಕಲಂಕಾರಿ, ಕರ್ನಾಟಕದಲ್ಲಿ, ಗೊಂಬೆಗಳು, ಗಂಜೀಫ ಕಲೆ, ದೀವಿಗೆಗಳು, ನಿತ್ಯಪೂಜೆ, ಅಡಿಕೆ ಕತ್ತರಿ, ಬಾಚಣಿಗೆಗಳು, ರಥಗಳು, ಕುಂಭಕಲೆ, ಕಸೂತಿ ಕಲೆ, ಇತರೆ ಜಾನಪದ ವಸ್ತುಗಳು. ಒರಿಸ್ಸಾ, ಮಹಾರಾಷ್ಟ್ರ, ರಾಜಸ್ಥಾನ, ಆಂಧ್ರಪ್ರದೇಶ, ಬಂಗಾಳ, ಗುಜರಾತ್, ಕರ್ನಾಟಕ, ಮಧ್ಯಪ್ರದೇಶ, ರಾಜ್ಯಗಳಲ್ಲಿನ ಕೆಲವು ಚಿತ್ರಗಳಿವೆ.

೧೫೪೪. ಭಾರತದ ಹಬ್ಬ-ಹರಿದಿನಗಳು

ಲೇ: ಡಿ.ಟಿ.ರಂಗಸ್ವಾಮಿ; ಪ್ರ: ಸಮಾಜ ಪುಸ್ತಕಾಲಯ, ಧಾರವಾಡ; ಮೊ.ಮು: ೧೯೭೧; ಪುಟ ೮+೧೩೪=೧೪೨; ಕ್ರೌನ್ ೧/೮

ಈ ಗ್ರಂಥವು ಜಾನಪದ ಮೂಲದ ಹಬ್ಬಗಳನ್ನು ಪರಿಗಣಿಸಿಲ್ಲ.

೧೫೪೫. ಭಾರತದೊಳಗಣ ಯಕ್ಷಗಾನ ಕೃಷ್ಣಸಂಧಾನ (ಅರ್ಥ ಸಹಿತ)

ಅರ್ಥ ಲೇಖಕರು: ಅರ್ಕುಳ ಸುಬ್ರಾಯಾಚಾರಿ; ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ; ಮೊ.ಮು. ೧೯೫೩; ಪುಟ ೨+೧೮೫=೧೮೭; ಕ್ರೌನ್ ೧/೮

ಪದ್ಯಗಳಿಗೆ ಜೊತೆಜೊತೆಯಲ್ಲೆ ಸಂಭಾಷಣಾ ರೂಪದ ಅರ್ಥಗಳನ್ನು ನೀಡಲಾಗಿದೆ.

೧೫೪೬. ಭಾರತೀಯ ಜನಪದ ಕತೆಗಳು

ಸಂಗ್ರಹ ಮತ್ತು ಸಂಪಾದನೆ: ಎ.ಕೆ.ರಾಮಾನುಜನ್, ಅನುವಾದ: ಮಹಾಬಲೇಶ್ವರರಾವ್; ಪ್ರ: ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ; ಮೊ.ಮು.೨೦೦೦; ಪುಟ ೪೨+೩೯೦=೪೩೨; ಡೆಮ್ಮೈ ೧/೮

ಇಪ್ಪತ್ತೆರಡು ಭಾಷೆಗಳಿಂದ ಆಯ್ದ ಬಾಯ್ಮಾತಿನ ಕತೆಗಳು ಎಂಬ ಅಡಿಬರಹ ಇದೆ. ೧೧೬ ಕತೆಗಳಿವೆ. ತಮಿಳು, ಗೊಂಡಿ, ಬಂಗಾಳಿ, ಪಂಜಾಬಿ, ಹಿಂದಿ/ಮಾಲ್ವಿ, ಹಿಂದಿ/ಕುಮಾನ್ನಿ, ರಾಜಸ್ಥಾನಿ, ಒರಿಯ, ಕನ್ನಡ, ತೆಲುಗು, ಕಾಶ್ಮೀರಿ, ಸಂತಾಲಿ, ಉರ್ದು, ಅಸ್ಸಾಮಿ, ಗುಜರಾತಿ, ತುಳು, ದಿದಾಯಿ, ಕೊಂಕಣಿ, ಮಲೆಯಾಳಂ, ಮರಾಠಿ, ಕೋಟ, ಅಂಗಾಮಿನಾಗ, ಸಿಂಧಿ-ಈ ಭಾಷೆಗಳ ಕತೆಗಳ ಸಂಗ್ರಹ. ಪ್ರಸ್ತಾವನೆ, ಟಿಪ್ಪಣಿಗಳು ಇವೆ.

೧೫೪೭. ಭಾರತೀಯ ಜಾನಪದ ನೃತ್ಯಗಳು

ಮೂಲ: ಕಪಿಲಾ ವಾತ್ಸ್ಯಾಯನ್, ಸಚ್ಚಿದಾನಂದ ವಾತ್ಸ್ಯಾಯನ್, ಅನು: ಎಂ.ರಾಮನ್; ಪ್ರ: ಅರುಣೋದಯ ಪ್ರಕಾಶನ, ಯಶವಂತಪುರ, ಬೆಂಗಳೂರು-೩; ಮೊ.ಮು: ೧೯೫೯; ಪುಟ ೧೩೭; ಕ್ರೌನ್ ೧/೮

ಆರು ಅಧ್ಯಾಯಗಳಿವೆ: ೧.ಪೀಠಿಕೆ ೨.ಹಿಮಾಲಯ ಪ್ರದೇಶಗಳು ೩.ಪೂರ್ವಮಂಡಲ ೪.ಮಧ್ಯಮಂಡಲ ೫.ಪಶ್ಚಿಮ ಮಂಡಲ೬.ದಕ್ಷಿಣ ಮಂಡಲ. ಕೊನೆಯಲ್ಲಿ ಕೊನೆಯ ಮಾತು ಎಂಬ ಬರಹ ಇದೆ. ಆಯಾ ಪ್ರದೇಶಕ್ಕೆ ಸಂಬಂಧಪಟ್ಟಂತೆ ಅಲ್ಲಲ್ಲಿ ಫೋಟೋಗಳಿವೆ.

೧೫೪೮. ಭಾರತೀಯ ಜಾನಪದ ಸಮೀಕ್ಷೆ

ಮೂಲ: ದುರ್ಗಾಭಾಗವತ್, ಅನು: ಕೆ. ಮರುಳಸಿದ್ದಪ್ಪ; ಪ್ರ: ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು; ಮೊ.ಮು.: ೧೯೭೪; ಪು: ೮+೮೦=೮೮; ಡಿಮ್ಮೈ ೧/೮

ಹದಿಮೂರು ಅಧ್ಯಾಯಗಳಿವೆ: ೧.ಪಾಶ್ಚಿಮಾತ್ಯ ಜಗತ್ತಿನಲ್ಲಿ ಜಾನಪದ ಅಧ್ಯಯನ ೨.ಭಾರತೀಯ ಪರಂಪರೆಗೊಂದು ಪ್ರವೇಶಿಕೆ ೩.ಜನಪ್ರಿಯ ಸಾಹಿತ್ಯದ ರಕ್ಷಕರು ೪.ದೈವಕಥಾ ೫.ಅದ್ಭುತ ಕಥೆ ೬.ಐತಿಹ್ಯ ೭.ನೀತಿ ಕಥೆ ೮.ಒಗಟು ೯.ಗಾದೆಗಳು ಮತ್ತು ನುಡಿಗಟ್ಟುಗಳು ೧೦.ಜಾನಪದ-ಶಬ್ದರಚನೆ ೧೧.ಜಾನಪದ ಮತ್ತು ಹಾಸ್ಯ ೧೨.ಜಾನಪದದಲ್ಲಿ ಕಂಡುಬರುವ ಉತ್ತಮ ಸಾಹಿತ್ಯ ಗುಣಗಳು ೧೩.ಒಂಟು ನಿಷೇಧಾರ್ಥಕ ಸಂಪ್ರದಾಯ. ಈ.ಎಸ್. ಶಿವರುದ್ರಪ್ಪ ಅವರ ನಾಲ್ಕು ಮಾತು, ಎಚ್. ನರಸಿಂಹಯ್ಯ ಅವರ ಮುನ್ನುಡಿ, ಪೀಠಿಕೆ ಇವೆ.

೧೫೪೯. ಭಾಷೆ ಮತ್ತು ಜಾನಪದ

ಲೇ: ಕಾ.ವೆಂ. ಶ್ರೀನಿವಾಸಮೂರ್ತಿ; ಪ್ರ: ಬರಹ ಪಬ್ಲಿಷಿಂಗ್ ಹೌಸ್, ೧೧೯, ೩ನೇ ತಿರುವು, ೮ನೇ ಮುಖ್ಯರಸ್ತೆ, ಹಂಪಿನಗರ, ಬೆಂಗಳೂರು; ಮೊ.ಮು: ೨೦೧೧; ಪುಟ ೮+೮೮=೯೬; ಡಿಮ್ಮೈ ೧/೮

ಎರಡು ಭಾಗಗಳಲ್ಲಿ ಒಟ್ಟು ಹನ್ನೊಂದು ಲೇಖನಗಳಿವೆ. ಎರಡನೆಯ ಭಾಗದಲ್ಲಿ ಜಾನಪದಕ್ಕೆ ಸಂಬಂಧಿಸಿದ ಐದು ಲೇಖನಗಳಿವೆ: ೧.ಜನಪದ ಮಹಾಭಾರತದಲ್ಲಿ ಶಾಪ ಮತ್ತು ವರ ೨.ಗಾದೆಗಳಲ್ಲಿ ಸ್ತ್ರೀ ಶೋಷಣೆಯ ಸ್ವರೂಪ ೩.ಹಂತಿ ಹಾಡುಗಳು ೪.ಬೀಸುವ ಪದಗಳು ೫.ಮತಿಘಟ್ಟ ಕೃಷ್ಣಮೂರ್ತಿ: ಕೃತಿ ಕುರಿತ ಮಾತು.

೧೫೫೦. ಭಾಷೆ ಸಾಹಿತ್ಯ ಸಂಸ್ಕೃತಿಗೆ ಪ್ರೊ.ದೇಜಗೌ ಅವರ ಕೊಡುಗೆ

ಲೇ: ಟಿ.ಕೆ.ಕೆಂಪೇಗೌಡ; ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು-೫೬೦೦೧೮; ಮೊ.ಮು: ೨೦೦೮; ಪು: ೬+೨೫೦=೨೫೬ ಡಿಮ್ಮೈ ೧/೮

ಮೈಸೂರು ವಿಶ್ವವಿದ್ಯಾಲಯಕ್ಕೆ ಪಿ.ಹೆಚ್.ಡಿ.ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ ಎಂಬ ಅಡಿಬರಹ ಇದೆ. ಆರು ಅಧ್ಯಾಯಗಳಿವೆ. ಅವುಗಳಲ್ಲಿ ಒಂದು ಅಧ್ಯಾಯ ಮಾತ್ರ ಜಾನಪದಕ್ಕೆ ಸಂಬಂಧಿಸಿವೆ: ೧.ದೇಜಗೌ ಮತ್ತು ಜಾನಪದ.

೧೫೫೧. ಭೀಮ ವಿಲಾಸ

ಸಂ: ಕ್ಯಾತನಹಳ್ಳಿ ರಾಮಣ್ಣ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು..೧೯೭೮; ಪುಟ ೧೮+೧೨೮=೧೪೬; ಡಿಮ್ಮೈ ೧/೮

ಗುಲ್ಬರ್ಗ ಜಿಲ್ಲೆಯಲ್ಲಿ ಸಂಗ್ರಹಿತವಾದ ದೊಡ್ಡಾಟ ಹಾ.ಮಾ.ನಾಯಕ ಅವರ ಮುನ್ನುಡಿ, ಜೀ.ಶಂ. ಪರಮಶಿವಯ್ಯ ಅವರ ವಿಭಾಗ ಸಂಪಾದಕರ ಮಾತು, ಸಂಪಾದಕರ ಪ್ರಸ್ತಾವನೆ, ಕವಿ ಪರಿಚಯ ಇವೆ.

೧೫೫೨. ಭೂತಾರಾಧನೆಯ ಕತೆಗಳು

ಸಂ: ಸೇವ ನಮಿರಾಜ ಮಲ್ಲ; ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ; ಮೊ.ಮು: ೧೯೭೦; ಪುಟ: ೧೨+೭೭=೮೯; ಡಿಮ್ಮೈ ೧/೮

ಹದಿನೈದು ಕತೆಗಳಿವೆ: ಪಿಚಾವಂಡಿ, ಕೊಡಮಣ್ ತಾಯ, ಪಂಜುರ್ಲಿ ಭೂತ, ಕಲ್ಲುರ್ಟಿ-ಕಲ್ಕುಡ, ಮುಂಡತ್ತಾಯ, ದೈಯೊಂಗುಳು, ಜುಮಾದಿ ಭೂತ, ಬೊಬ್ಬರ್ಯ, ತೊಡಕಿನಾರ್, ಸಾರಾಲ ಜುಮಾದಿ, ಕನಪಾಡಿತಾಯ, ಜಾರಂತಾಯ, ಮಗ್ರಂದಾಯ ಭೂತ, ಕೋಟಿ-ಚೆನ್ನಯ: ದೇಯಿ ಬೈದ್ಯೆತಿ, ಮಾರಾವಾಂಡಿ ಭೂತ. ಹಾ.ಮಾ. ನಾಯಕ ಅವರ ಮುನ್ನುಡಿ, ಭುತಾರಾಧನೆಯ ವೈಶಿಷ್ಟ್ಯಗಳು ಎಂಬ ಲೇಖನ ಇವೆ.

೧೫೫೩. ಭೂತಾರಾಧನೆಯ ಬಣ್ಣಗಾರಿಕೆ

ಸಂ: ಬಿ.ಎ. ವಿವೇಕ ರೈ, ಯದುಪತಿಗೌಡ, ರಾಜಶ್ರೀ; ಪ್ರ: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳುಪೀಠ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ-೫೭೪ ೧೯೯; ಮೊ.ಮು: ೨೦೦೧; ಪುಟ ೧೯೨; ಡಿಮ್ಮೈ ೧/೮

ಭೂತಾರಾಧನೆಯ ಬಣ್ಣಗಾರಿಕೆ ಕಮ್ಮಟವೊಂದರಲ್ಲಿ ಘಟಿಸಿದ ಕಲಾವಿದರ ಸಂದರ್ಶನಗಳು ಹಾಗೂ ಭಾಷಣಗಳಿವೆ. ಒಂಬತ್ತು ಮಂದಿ ಕಲಾವಿದರು ೨೨ ಪಾತ್ರಗಳಿಗೆ ಬಣ್ಣಗಾರಿಕೆ ನಿರ್ವಹಿಸಿದ ವಿವರಗಳು, ವರ್ಣಚಿತ್ರಗಳು, ಸಂದರ್ಶನ ಇವೆ. ಕಮ್ಮಟದ ಸಂಯೋಜಕರಾದ ಬಿ.ಎ. ವಿವೇಕ ರೈ ಅವರ ಪ್ರಸ್ತಾವನೆ, ಕಮ್ಮಟದ ನಿರ್ದೇಶಕರಲ್ಲೊಬ್ಬರಾದ ಅಮೃತ ಸೋಮೇಶ್ವರ ಅವರ ಕಮ್ಮಟದ ಸ್ವರೂಪವನ್ನು ಕುರಿತ ಬರಹ, ಎಂ.ಐ. ಸವದತ್ತಿ ಅವರ ಉದ್ಘಾಟನಾ ಭಾಷಣ, ಏರ್ಯ ಲಕ್ಷ್ಮೀನಾರಾಯಣ ಅವರ ತುಳು ಭಾಷಣದ ಕನ್ನಡಾನುವಾದ, ಕು.ಶಿ. ಹರಿದಾಸ ಭಟ್ ಅವರ ಅಧ್ಯಕ್ಷ ಭಾಷಣ, ಇವೆ.

೧೫೫೪. ಭೂತಾರಾಧನೆ: ಜಾನಪದೀಯ ಅಧ್ಯಯನ

ಲೇ: ಕೆ.ಚಿನ್ನಪ್ಪಗೌಡ; ಪ್ರ: ಮದಿಪು ಪ್ರಕಾಶನ, ಮಂಗಳಗಂಗೋತ್ರಿ; ಮೊ.ಮು: ೧೯೯೦; ಪುಟ ೨೬+೩೧೩=೩೩೯;

ಪಿಎಚ್.ಡಿ. ಮಹಾಪ್ರಬಂಧ. ಒಂಬತ್ತು ಅಧ್ಯಾಯಗಳಿವೆ: ೧.ಭೂತಗಳ ಪರಿಕಲ್ಪನೆ ಮತ್ತು ಭೂತಾರಾಧನೆಯ ವಿವೇಚನೆ ೨.ಭೂತಗಳ ಸಂಖ್ಯೆ ಮತ್ತು ವರ್ಗೀಕರಣ ೩.ಭೂತಾರಾಧನೆಯ ಸಾಂಸ್ಕೃತಿಕ ಸ್ವರೂಪ ೪.ಭೂತಾರಾಧನೆ ಮತ್ತು ಕಲೆಗಳು ೫.ಭೂತಾರಾಧನೆ ಮತ್ತು ಪಾಡ್ದನಗಳು: ಸಾಂಸ್ಕೃತಿಕ ಸಂಬಂಧ ೬.ಭೂತಾರಾಧನೆ

ಮತ್ತು ಸಮಾಜ ೭.ಭೂತಾರಾಧನೆ ಮತ್ತು ಯಕ್ಷಗಾನ: ತೌಲನಿಕ ವಿವೇಚನೆ ೮.ಭೂತಾರಾಧನೆಯ ಇಂದಿನ ಸ್ವರೂಪ ಮಾರ್ಪಾಡುಗಳು ಹಾಗೂ ಕಾರಣಗಳು ೯.ಉಪಸಂಹಾರ ಬಿ.ಎ. ವಿವೇಕ ರೈ, ಹಾ.ಮಾ.ನಾಯಕ, ಎಂ.ಜಿ. ಬಿರಾದಾರ, ಅವರುಗಳ 'ಮದಿಪು'ಗಳಿವೆ. ಅನುಬಂಧಗಳು: ಭೂತದ ನುಡಿಕಟ್ಟಿನ ಒಂದು ಪಠ್ಯ, ಸಾಂಸ್ಕೃತಿಕ ಪದಕೋಶ, ಪ್ರಶ್ನಾವಳಿಗಳು...

೧೫೫೫. ಭೂತಾರಾಧನೆ

ಲೇ: ಅರವಿಂದ ಮಾಲಗತ್ತಿ; ಪ್ರ: ಶೈಲ ಪ್ರಕಾಶನ, ಅಂಬೇಡ್ಕರ್‌ರಸ್ತೆ, ಮುದ್ದೇಬಿಹಾಳ-೫೮೬ ೨೧೨; ಮೊ.ಮು: ೧೯೯೧; ಪುಟ ४+೫೦=೫४; ಕ್ರೌನ್ ೧/೮

ಸಾಂಸ್ಕೃತಿಕ ಮತ್ತು ಸಾಮಾಜಿಕ ಚಿಂತನೆ ಎಂಬ ಅಡಿಬರಹ ಇದೆ. ಹತ್ತು ಅಧ್ಯಾಯಗಳಿವೆ: ೧.ಸಂಸ್ಕೃತಿ: ಕೆಲವು ಮಾತುಗಳು ೨.ಭೂತ-ಭೂತಾರಾಧನೆ ಎಂದರೇನು? ೩.ಭೂತಾರಾಧನೆ ಮತ್ತು ಜನಾಂಗಿಕ ಅಧಃಪತನ ೪.ಜಾತಿ ವ್ಯವಸ್ಥೆ ಬೇಕು ಎನ್ನುವ ಭೂತಾರಾಧನೆ ೫.ಭೂತಗಳಲ್ಲಿಯೇ ಇರುವ ಜಾತಿವಾದ ೬.ಭೂತದಿಂದ ಜಾತಿಪದ್ಧತಿಯ ನಿವಾರಣೆ ಸಾಧ್ಯವೇ? ೭.ಭೂತಾರಾಧನೆ: ಇದೊಂದು ಹಗಲು ದರೋಡೆ ೮.ಭೂತಾರಾಧನೆಯ ನಂಬಿಕೆಗಳು ಮತ್ತು ಕೆಲವು ಕುಹಕ ತಂತ್ರಗಳು ೯.ಭೂತಾರಾಧನೆ ಮತ್ತು ಭೂತಗಾನ ೧೦.ಜನಪದ ಕಲೆಗಳು –ಕೆಲವು ವಿಚಾರ.

೧೫೫೬. ಭೂತಾರಾಧನೆ

ಲೇ: ಕೆ.ಶಿವರಾಮಕಾರಂತ; ಐ.ಬಿ.ಎಚ್.ಪ್ರಕಾಶನ, ಗಾಂಧಿನಗರ, ಬೆಂಗಳೂರು-೫೬೦೦೦೯; ಮೊ.ಮು: ೧೯೭೬; ಪು: ४೮; ಕ್ರೌನ್ ೧/೮

ಭೂತ ಶಬ್ದದಿಂದ ಪ್ರಾರಂಭಿಸಿ ಆ ಆರಾಧನೆಯ ಹಿನ್ನೆಲೆಯಲ್ಲಿರುವ ನಂಬಿಕೆಗಳು, ಕಥೆಗಳು, ಐತಿಹ್ಯಗಳು, ವಿವಿಧ ಭೂತಗಳು, ಹೀಗೆ ಹಲವು ನಿಟ್ಟಿನಲ್ಲಿ ವಿಚಾರ ಮಾಡುವ ಕೃತಿ ಇದು. ಕೆಲವು ಫೋಟೋಗಳಿವೆ.

೧೫೫೭. ಭೂಮಿ ಹುಣ್ಣಿಮೆ

ಲೇ: ಶ್ರೀಕಂಠಕೂಡಿಗೆ; ಪ್ರ: ದಖನ್ ಪಬ್ಲೀಷರ್ಸ್ ಡಿಸ್ಟ್ರೀಬ್ಯೂಟರ್ಸ್, ೧೭४, ಜೆ.ಸಿ.ರಸ್ತೆ, ಬೆಂಗಳೂರು-೫೬೦ ೦೦೨; ಮೊ.ಮು: ೧೯೮೨; ಪುಟ ೬+೧೧೬=೧೨೨; ಕ್ರೌನ್ ೧/೮

ಜಾನಪದ ಲೇಖನಗಳು ಎಂಬ ಅಡಿಬರಹ ಇದೆ. ಹನ್ನೆರಡು ಲೇಖನಗಳಿವೆ: ೧.ಭೂಮಿ ಹುಣ್ಣಿಮೆ ೨.ಹಳ್ಳಿಗರ ಲೆಕ್ಕಾಚಾರ: ಒಂದು ವಿಶಿಷ್ಟ ಪ್ರಪಂಚ ೩.ಲಾವಣಿಗಳು ಮತ್ತು ಸಾಹಿತ್ಯಿಕ ಕಥನ ಕವನಗಳು ४.ಮುಯ್: ಒಂದು ಟಿಪ್ಪಣಿ ೫.ಕೆರಕ, ಕುರುತಾಪಣೆ, ಹುಲಿಸು, ಹರ್ಷೇವು – ನಾಲ್ಕು ಜನಪದ ಶಬ್ದಗಳ ರೂಢಿ ಮತ್ತು ಬಳಕೆ ೬.ಮಲೆನಾಡಿನಲ್ಲಿ

ಮೀನುಬೇಟೆ ೭.ಅಂಟಿಗೆ–ಪಂಟಿಗೆ ಮತ್ತು ಆಣಿಪೀಣಿ–ಕೆಲವು ವಿಚಾರಗಳು ೮.ಹವ್ವಳ್ಳಿಯ ಸುಗ್ಗಿ ಹಬ್ಬ ೯.ಸಾಮಾಜಿಕ ನಿಷಿದ್ಧಗಳು ೧೦.ದಕ್ಷಿಣ ಭಾರತದ ನೃತ್ಯಗಳು ೧೧.ದೇಸೀ ಪರಂಪರೆ ಮತ್ತು ಜನಪದ ಸಾಹಿತ್ಯ ೧೨.ಜನಪದ ಶಿಶುಪ್ರಾಸಗಳು.

೧೫೫೮. ಭೂ ವಿಜ್ಞಾನ ಒಗಟುಗಳು

ಲೇ: ಆರ್. ಪುರುಷೋತ್ತಮ ರೆಡ್ಡಿ; ಪ್ರ: ಕೌಸ್ತುಭ ಪ್ರಕಾಶನ, ನಂದಿಹಳ್ಳಿ–೫೮೩ ೧೧೯(ತಾ. ಸಂಡೂರು, ಜಿ.ಬಳ್ಳಾರಿ); ಮೊ.ಮು: ೨೦೦೩; ಪುಟ ೬+೭೧=೭೭; ಡಿಮ್ಮೈ ೧/೮

“ಜನಸಾಮಾನ್ಯರಿಗೆ ಒಗಟಿನ ಮೂಲಕ ಭೂ ವಿಜ್ಞಾನವನ್ನು ಪರಿಚಯಿಸಿಕೊಡುವ ಪ್ರಯತ್ನದ ಫಲವೇ ಭೂ ವಿಜ್ಞಾನ ಒಗಟುಗಳು ಎಂಬ ಶೀರ್ಷಿಕೆ ಹೊತ್ತ ಈ ಪುಸ್ತಕ” ಎಂಬುದಾಗಿ ಲೇಖಕರು ಹೇಳಿಕೊಂಡಿದ್ದಾರೆ. ೨೦೦ ಒಗಟುಗಳಿವೆ. ಟಿ.ಆರ್. ಅನಂತರಾಮು ಅವರ ಎರಡು ಮಾತು ಎಂಬ ಮುನ್ನುಡಿ ಇದೆ.

೧೫೫೯. ಭೈರರ ಸಂಸ್ಕೃತಿ

ಲೇ.ಡ.ಆರ್.ಪಾಂಡುರಂಗ (ದೇವನೂರು ಪಾಂಡುರಂಗ); ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು–೫೬೦೦೦೨; ಮೊ.ಮು: ೪೮+೩೫೨=೪೦೦; ಕ್ರೌನ್ ೧/೮

ಏಳು ಅಧ್ಯಾಯಗಳಿವೆ: ೧.ಹಿನ್ನಲೆ ೨.ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ ೩.ಭಾಷೆ –ಸಾಹಿತ್ಯ ೪.ಆಚರಣೆ ಮತ್ತು ಕಲೆ ೫.ಜನಪದ ಆಟಗಳು ೬.ಇಂದಿನ ಸ್ಥಿತಿ ಗತಿ ಮತ್ತು ಸಾಮಾಜಿಕ ಪರಿವರ್ತನೆ ೭.ಸಮಾರೋಪ ಅನುಬಂಧದಲ್ಲಿ, ಭೈರರ ಕೆಲವು ಜಾನಪದ ಕತೆಗಳನ್ನು ಸಂಗ್ರಹಿಸಿಕೊಡಲಾಗಿದೆ: ೧.ನರಿ,'ನರಿ'ಕತೆಯನ್ನು ಕುರಿತು ೨.ಪುತ್ರ್ನಿಲ್ಲದ ಅರಸು (ವಕ್ತೃ: ಗಂಗೆ ಒಳಕುಂಜ ೪೫ ವರ್ಷ) ಪುತ್ರ್ ನಿಲ್ಲದ ಅರಸು–ಕತೆ ಕುರಿತು ೩.ಶ್ವೇತ ಕುಮಾರ (ವಕ್ತೃ: ಲಕ್ಷ್ಮೀ ೪೦ ವರ್ಷ) ೪.ಸೂರ್ಯನಾರಾಣ ಚಂದ್ರನಾರಾಣ (ಮಾಂತ್ರಿಕ ಕಥೆ ಹೇಳಿದವರು –ಗಂಗೆ–ಒಳಕುಂಜ ೪೫ ವರ್ಷ) ಸೂರ್ಯನಾರಾಣ–ಚಂದ್ರನಾರಾಣ'ಕಥೆಗಕುರಿತು ೫.ದೀಪ (ಕೃಷ್ಣ ಕುಂಟೂರು, ಏತಡ್ಕ) ದೀಪ ಕಥೆ ಕುರಿತು ೬.ಸಂನ್ಯಾಸಿ,'ಸಂನ್ಯಾಸಿ ಕಥೆಕುರಿತು ೭.ಅರಸುನ ಕಥೆ,'ಅರಸುನ ಕಥೆ'ಕುರಿತು ೮.ಅದುನೇಶ್ವರ ಅರಸು –ಮದನೇಶ್ವರ ಅರಸು 'ಅದುನೇಶ್ವರ ಅರಸು ಮದನೇಶ್ವರ ಅರಸು'ಕಥೆ ಕುರಿತು ೯.ಕುಂಡಚ್ಚ'ಕುಂಡಚ್ಚ' ಕಥೆ ಕುರಿತು ೧೦.ಒಂದು ಮೈದುನ, ಅತ್ತಿಗೆ,ಒಂದು ಮೈದನನ, ಅತ್ತಿಗೆ ಕಥೆ ಕುರಿತು.



ಜಾನಪದ ಕಲಾವಿದರು

ಕನ್ನಡ ಜಾನಪದವು ಜಾಗತಿಕ ಮಟ್ಟಕ್ಕೆ ಏರಿ ನಿಂತಿರುವ ಈ ಹೊತ್ತಿನಲ್ಲಿ ನಮ್ಮ ಜಾನಪದ ಗ್ರಂಥಗಳ ಪಯಣವನ್ನು, ಮಾರ್ಗವನ್ನು, ಗುರುತಿಸಿಕೊಳ್ಳಬೇಕಾದುದು ನಮ್ಮ ಕರ್ತವ್ಯವೂ ಹೌದು. ಇದಕ್ಕೆ ೧೯೭೪ರಲ್ಲಿಯೇ ನಮಗೆ ಮಾರ್ಗ ಹಾಕಿಕೊಟ್ಟವರು ಡಾ. ಹಾ. ಮಾ. ನಾಯಕ ಅವರು. ಅವರ ಮಾರ್ಗದರ್ಶನದಂತೆ ಕನ್ನಡದಲ್ಲಿ ಇದುವರೆಗೆ ಪ್ರಕಟವಾಗಿರುವ ಜಾನಪದವನ್ನು ಕುರಿತ ಗ್ರಂಥಗಳು ಎಷ್ಟು, ಅವುಗಳ ಬೆಳವಣಿಗೆ ಹೇಗೆ, ವಿಷಯ ವೈವಿಧ್ಯ ಹೇಗೆ ಮುಂತಾದ ನಿಟ್ಟಿನಲ್ಲಿ ಗ್ರಂಥಸೂಚಿಯೊಂದರ ಮರುಹುಟ್ಟಿನ ಅಗತ್ಯ ಕಂಡು ಬಂದದ್ದರ ಫಲವೇ ಈ ವಿಸ್ತೃತ ಜಾನಪದ ಗ್ರಂಥಸೂಚಿ. ಡಾ. ಹಾ. ಮಾ. ನಾಯಕ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಈಗಾಗಲೇ ಒಬ್ಬಿಬ್ಬರು ನಡೆದದ್ದಿದೆ. ಆದರೆ, ಹೆಚ್ಚು ವಿಸ್ತಾರವಾಗಿ, ಪ್ರಕಟಣೆಯನ್ನು ಕುರಿತ ಇತಿಹಾಸವನ್ನು ಒಳಗೊಂಡು, ಇದುವರೆಗೆ ಎಲ್ಲಿಯೂ ಕಾಣಸಿಗದಷ್ಟು ಹೇರಳ ಮಾಹಿತಿಗಳನ್ನು ಹೊತ್ತು ಈ ಗ್ರಂಥಸೂಚಿ ರೂಪುಗೊಂಡಿದೆ. ಅಲ್ಲಲ್ಲಿ ಸಣ್ಣಪುಟ್ಟ ಕೊರತೆಗಳು ಕಂಡು ಬಂದರೂ ತುಂಬಾ ಉಪಯುಕ್ತ ಗ್ರಂಥವಾಗಿ ಬೃಹತ್ ರೂಪದಲ್ಲಿ ಹೊರಬಂದಿದೆ.

ಇಂಥ ಒಂದು ಗ್ರಂಥಸೂಚಿಯನ್ನು ಸಿದ್ಧಪಡಿಸಿರುವವರು, ಕನ್ನಡ ಜಾನಪದ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿ ಪ್ರಸಿದ್ಧರಾಗಿರುವ ಶ್ರೀ ಕ್ಯಾತನಹಳ್ಳಿ ರಾಮಣ್ಣ ಅವರು. ರಾಮಣ್ಣ ಕ್ಷೇತ್ರಕಾರ್ಯದಲ್ಲಿ ಪಳಗಿದವರು. ನಲವತ್ತೈದು ವರ್ಷಗಳಿಗೂ ಹೆಚ್ಚು ಕಾಲವನ್ನು ಅವರು ಕ್ಷೇತ್ರಕಾರ್ಯಕ್ಕಾಗಿ ಬಳಸಿಕೊಂಡಿದ್ದಾರೆ. ಅವರ ಆ ಅನುಭವ ಹಾಗೂ ಡಾ. ಹಾ. ಮಾ. ನಾಯಕ ಅವರ ಮೇಲ್ಪಂಕ್ತಿ ಇವುಗಳಿಂದ ಈ ಗ್ರಂಥಸೂಚಿಯು ಸಾಕಷ್ಟು ಸಶಕ್ತವಾಗಿಯೇ ರೂಪುಗೊಂಡಿದೆ. ಅನುಬಂಧವನ್ನು ಸಿದ್ಧಪಡಿಸುವಲ್ಲಿ ಶ್ರೀ ಟಿ.ಎಸ್. ರಾಜಪ್ಪ ಅವರು ಸಹಕರಿಸಿದ್ದಾರೆ. ಈ ಈರ್ವರಿಗೂ ಜಾನಪದ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ISBN 978-93-83149-27-8
9 789383 149278

ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ